ಆಧುನಿಕ ಭಾರತದ ನಿರ್ಮಾಪಕರು

ಲೋಕಮಾನ್ಯ ಬಾಲ ಗಂಗಾಧರ ತಿಲಕ್

ಎನ್. ಜಿ. ಜೋಗ್

ಪ್ರಕಾಶನ ವಿಭಾಗ



ಆಧುನಿಕ ಭಾರತದ ನಿರ್ಮಾಪಕರು

ಲೋಕಮಾನ್ಯ ಬಾಲ ಗಂಗಾಧರ ತಿಲಕ್

ಇಂಗ್ಲಿಷ್ ಮೂಲ: ಎನ್. ಜಿ. ಜೋಗ್
ಕನ್ನಡಕ್ಕೆ: ಗುರುಮೂರ್ತಿ

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ
ಭಾರತ ಸರ್ಕಾರ

ಆಗಸ್ಟ್ 1983 (August)
ಶ್ರಾವಣ - ಭಾದ್ರ 1905 (Sravan - Bhadra 1905)

Lokmanya Bal Gangadhar Tilak (Kannada)

Price: Rs. 13 . 00

ಪ್ರಕಟಣೆ : ಪ್ರಕಾಶನ ವಿಭಾಗದ ನಿರ್ದೇಶಕರು
ಸಮಾಚಾರ ಮತ್ತು ಪ್ರಸಾರ ಮಂತ್ರಿ ಶಾಖೆ
ಭಾರತ ಸರ್ಕಾರ, ಪಾಟಿಯಾಲ ಹೌಸ್, ನ್ಯೂಡೆಲ್ಲಿ – 110 001

ಮಾರಾಟ ಎಂಪೋರಿಯ ● ಪ್ರಕಾಶನ ವಿಭಾಗ

ಸೂಪರ್ ಬಜಾರ್ (2ನೆಯ ಅಂತಸ್ತು) ಕನಾಟ್ ಸರ್ಕಸ್, ನ್ಯೂಡೆಲ್ಲಿ – 110 001
8, ಎಸ್ಪ್ಲನೇಡ್ ಈಸ್ಟ್, ಕಲ್ಕತ್ತ – 700 001
ಕಾಮರ್ಸ್ ಹೌಸ್, ಕರೀಂಭಾಯ್ ರೋಡ್, ಬಲ್ಲಾರ್ಡ್ ಸ್ಕೈರ್, ಬಾಂಬೆ – 400 038
ಶಾಸ್ತ್ರಿ ಭವನ್, 35, ಹ್ಯಾಡೋಸ್ ರೋಡ್, ಮದ್ರಾಸ್ – 600 006
ಬಿಹಾರ್ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್, ಅಶೋಕ್ ರಾಜಪಥ್ ಪಾಟ್ನ – 800 004
ಪ್ರೆಸ್ ರೋಡ್, ತ್ರಿವಾಂಡ್ರಂ.

ಮುದ್ರಣ : ಮಣಿಪಾಲ ಪವರ್ ಪ್ರೆಸ್, ದಕ್ಷಿಣ ಭಾರತ

ಸರಣಿಯ ಬಗ್ಗೆ

ನಮ್ಮ ರಾಷ್ಟ್ರೀಯ ಪುನರುತ್ಥಾನ ಮತ್ತು ಸ್ವಾತಂತ್ರ್ಯ ಗಳಿಕೆಗೆ ಮುಖ್ಯವಾಗಿ ದುಡಿದ ಭಾರತದ ಶ್ರೇಷ್ಠ ಪುತ್ರರ, ಪುತ್ರಿಯರ ಹೋರಾಟಗಳನ್ನೂ, ಸಾಧನೆಗಳನ್ನೂ, ಈಗಿನ ಮತ್ತು ಮುಂದಿನ ಪೀಳಿಗೆಗಳಿಗಾಗಿ ದಾಖಲೆ ಮಾಡುವುದು ಈ ಸರಣಿಯ ಉದ್ದೇಶ. ಕೆಲವೇ ಕೆಲವು ವ್ಯಕ್ತಿಗಳ ಹೊರತಾಗಿ, ಅಂತಹ ಜೀವನಚರಿತ್ರೆಗಳು ಲಭ್ಯವಿಲ್ಲ.

ಈ ಜೀವನಚರಿತ್ರೆಗಳನ್ನು, ಶ್ರೇಷ್ಠ ನಾಯಕರ ಜೀವನ ಮತ್ತು ಚಟುವಟಿಕೆಗಳ ಹಾಗೂ ಅವರ ಕಾಲದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವ ಪುಸ್ತಕಗಳ ರೂಪದಲ್ಲಿ, ತಜ್ಞರಿಂದ ಬರೆಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇವು ಸಮಗ್ರ ವಿಷಯಗಳನ್ನೊಳಗೊಂಡ ಜೀವನ ಚರಿತ್ರೆಗಳಲ್ಲ ಹಾಗೂ ಆಳವಾದ ಅಧ್ಯಯನಕ್ಕಾಗಿ ಬಳಸುವಂತಹ ಪುಸ್ತಕಗಳಲ್ಲ.

ಈ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಬರೆಯುವ ಕಾರ್ಯವನ್ನು ಬೇರೆ ಬೇರೆ ಜನರಿಗೆ ವಹಿಸಬೇಕಾಯಿತು. ಆದ್ದರಿಂದ ಜೀವನಚರಿತ್ರೆಗಳನ್ನು ಅವರ ಜೀವಿತದ ಕಾಲಾನುಕ್ರಮದಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಆದರೂ, ಸ್ವಲ್ಪ ಕಾಲದಲ್ಲಿಯೇ ನಾಡಿನ ಎಲ್ಲ ಖ್ಯಾತ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಈ ಸರಣಿಯಲ್ಲಿ ಹೊರತರುವ ಆಶಯವನ್ನು ಹೊಂದಲಾಗಿದೆ.

ಶ್ರೀ ಆರ್. ಆರ್. ದಿವಾಕರ್ ಈ ಸರಣಿಯ ಮಹಾಸಂಪಾದಕರು.

ವಿಷಯಸೂಚಿ

ಅಧ್ಯಾಯ 1

ಪ್ರಸ್ತಾವನೆ

ನ್ಯಾಯ ಕುರುಡು ಎಂದು ಹೇಳುತ್ತಾರೆ. ಅದಕ್ಕೆ ಹಗಲು, ರಾತ್ರಿಗಳ ನಡುವೆ ವ್ಯತ್ಯಾಸವೇನೂ ಕಾಣುವುದಿಲ್ಲ. ಆದರೆ ಮುಂಬೈ ಶ್ರೇಷ್ಠ ನ್ಯಾಯಾಲಯದ ಬೃಹತ್ ಗಾಥಿಕ್ ಶೈಲಿಯ ಕಟ್ಟಡದ ಒಳಗಡೆ ಜುಲೈ ೨೨, ೧೯೦೮ರಂದು ರಾತ್ರಿ ಕಂಡುಬಂದ ದೃಶ್ಯ ನ್ಯಾಯಕ್ಕೆ ಕೇಡುಂಟುಮಾಡುವ ಸೂಚನೆ ಹೊಂದಿದಂತೆ ಕಾಣುತಿತ್ತು. ಭಾರತೀಯ ನ್ಯಾಯಾಲಯಗಳು ಸಾಮಾನ್ಯವಾಗಿ ರಾತ್ರಿ ಕೆಲಸ ಮಾಡುವುದಿಲ್ಲ. ಮೂರು ಅಂಶಗಳ ಮೇಲೆ ರಾಜದ್ರೋಹದ ಆಪಾದನೆಗೆ ಗುರಿಯಾದ ಆಪಾದಿತನ ವಿರುದ್ಧ ಇರುವ ಪ್ರಕರಣವನ್ನು ಮುಕ್ತಾಯಗೊಳಿಸಲು, ಎಷ್ಟು ತಡವಾದರೂ ತಾವು ನ್ಯಾಯಾಲಯದಲ್ಲಿ ಇರುವುದಾಗಿ, ಅಂದು ಮಧ್ಯಾಹ್ನ ನ್ಯಾಯಾಧೀಶರು ಅಡ್ವೊಕೇಟ್–ಜನರಲ್ ಅವರಿಗೆ ಹೇಳಿದಾಗ ಪ್ರಕರಣ ಹೇಗೆ ಮುಗಿಯುತ್ತದೆಂಬುದನ್ನು ಅವರು ಸೂಚಿಸಿದಂತೆಯೇ ಆಗಿತ್ತು. ನ್ಯಾಯದರ್ಶಿಗಳ ಮಂಡಳಿಗೆ (ಜ್ಯೂರಿ) ತಮ್ಮ ಅಭಿಪ್ರಾಯಗಳ ಸಂಗ್ರಹವನ್ನು ಹೇಳುವುದನ್ನು ನ್ಯಾಯಾಧೀಶರು ಮುಗಿಸುತ್ತಿದ್ದಂತೆ, ನಿರಾಶೆಯ ಮುನ್ಸೂಚನೆ ವಾತಾವರಣದಲ್ಲಿ ಮೂಡಿತ್ತು. ಸಂಶಯದ ಲಾಭ–ಅದು ಇದ್ದಲ್ಲಿ–ಆಪಾದಿತನಿಗೆ ಕೊಡಬೇಕೆಂದು ಸಾಮಾನ್ಯವಾಗಿ ನೀಡುವ ಸೂಚನೆಯನ್ನು ನ್ಯಾಯಾಧೀಶರು ಕೊಟ್ಟಿದ್ದರೂ, ಅವರ ಅಭಿಪ್ರಾಯ ಆಪಾದಿತನ ವಿರುದ್ಧ ಇದ್ದದ್ದು ಸ್ಪಷ್ಟವಾಗಿತ್ತು. ಏಳು ಮಂದಿ ಯುರೋಪಿಯನ್ನರು ಮತ್ತು ಇಬ್ಬರು ಭಾರತೀಯರಿದ್ದ ನ್ಯಾಯದರ್ಶಿಗಳ ಮಂಡಳಿ ಎಂಭತ್ತು ನಿಮಿಷಗಳ ಕಾಲ ಚರ್ಚಿಸಿ ರಾತ್ರಿ ೯–೨೦ಕ್ಕೆ ಹಿಂತಿರುಗಿತು. ನಿಶ್ಯಬ್ದವಾಗಿದ್ದ ನ್ಯಾಯಾಲಯದಲ್ಲಿ ನ್ಯಾಯದರ್ಶಿಗಳ ಮಂಡಳಿಯ ಅಧ್ಯಕ್ಷರು ಆಪಾದಿತ ತಪ್ಪಿತಸ್ಥನೆಂಬ ೭–೨ ಬಹುಮತದ ತೀರ್ಪನ್ನು ಪ್ರಕಟಿಸಿದರು. ನ್ಯಾಯಾಧೀಶರು ತೀರ್ಪನ್ನು ತಕ್ಷಣ ಒಪ್ಪಿಕೊಂಡು, ಶಿಕ್ಷೆಯನ್ನು ನೀಡುವ ಮೊದಲು, ಏನಾದರೂ ಹೇಳುವುದಿದೆಯೇ ಎಂದು ಆಪಾದಿತನನ್ನು ಕೇಳಿದರು.

ತಿಂಗಳ ಕಾಲದ ವಿಚಾರಣೆಯ ಶ್ರಮದಿಂದ ಬಳಲಿದ್ದರೂ, ಸಮಾಧಾನ, ಶಾಂತಿಯಿಂದ ಕಾಣುತ್ತಿದ್ದ ಆಪಾದಿತ ಕಟಕಟೆಯಲ್ಲಿ ಎದ್ದು ನಿಂತು ಒಂದು ಕ್ಷಣವೂ ಹಿಂದೆ ಮುಂದೆ ನೋಡದೆ ದೃಢವಾದ ಧ್ವನಿಯಲ್ಲಿ ಹೇಳಿದರು:

"ನ್ಯಾಯದರ್ಶಿಗಳ ಮಂಡಳಿಯ ತೀರ್ಮಾನ ಏನೇ ಇದ್ದರೂ, ನಾನು ನಿರಪರಾಧಿಯೇ ಆಗಿದ್ದೇನೆ ಎಂಬುದನ್ನು ತಿಳಿಸಲು ಮಾತ್ರ ನಾನು ಇಚ್ಛಿಸುತ್ತೇನೆ. ಮನುಷ್ಯರು ಮತ್ತು ದೇಶಗಳ ವಿಧಿಯನ್ನು ಆಳುವ ದೊಡ್ಡ ಶಕ್ತಿಗಳಿವೆ. ನಾನು ಸ್ವತಂತ್ರನಾಗಿ ಉಳಿಯುವುದಕ್ಕಿಂತಲೂ ಹೆಚ್ಚಾಗಿ ನಾನು ನೋವು, ಕಷ್ಟಗಳಿಗೆ ಈಡಾಗುವುದರಿಂದ ನಾನು ಪ್ರತಿನಿಧಿಸುವ ಧ್ಯೇಯಕ್ಕೆ ಹೆಚ್ಚು ಶ್ರೇಯಸ್ಸು ಸಿಗಬಹುದು ಎಂಬುದು ದೈವೇಚ್ಛೆ ಆಗಿದ್ದರೂ ಆಗಿರಬಹುದು."

ಆ ಕ್ಷಣದಲ್ಲಿ ಹೊಳೆದು ಹೇಳಿದ ಈ ಮಾತುಗಳಲ್ಲಿ ಸಹಜವಾದ ಗೌರವ, ಘನತೆಗಳಿದ್ದವು. ಸ್ವಾತಂತ್ರ್ಯಕ್ಕೆ ಅವರು ಹೊಂದಿದ್ದ ಸಮರ್ಪಣಾಭಾವ ಹಾಗೂ ಬ್ರಿಟಿಷ್ ಆಡಳಿತದ ಶಕ್ತಿಯ ವಿರುದ್ಧ ಸೆಟೆದು ನಿಲ್ಲುವ ಅವರ ಕೆಚ್ಚು ಈ ಮಾತುಗಳಲ್ಲಿ ತುಂಬಿವೆ. ಭಾರತದ ಸಮಕಾಲೀನ ಇತಿಹಾಸದಲ್ಲಿ ಈ ಮಾತುಗಳನ್ನು ಒಬ್ಬರೇ ಒಬ್ಬರು ಆಡಬಲ್ಲರಾಗಿದ್ದರು. ಅವರೇ ಬಾಲಗಂಗಾಧರ ತಿಲಕ್.

ಲೋಕಮಾನ್ಯ ತಿಲಕರು ಮುಂಬೈ ಶ್ರೇಷ್ಠ ನ್ಯಾಯಾಲಯದ ಕಟಕಟೆಯ ಮುಂದೆ ನಿಂತಿರುವುದನ್ನಲ್ಲದೆ ಇತಿಹಾಸದ ಕಟಕಟೆಯ ಮುಂದೆ ನಿಂತಿರುವುದನ್ನು ಯೋಚಿಸಿದಾಗ, ಈ ಸಮರ್ಪಣಾಭಾವ, ಈ ಗೌರವ, ಈ ಕೆಚ್ಚು ಮನಸ್ಸಿಗೆ ಬರುತ್ತದೆ. ಅವರ ಜೀವನದ ಹಿಂದಿನ ವರ್ಷಗಳೆಲ್ಲ ಈ ಐತಿಹಾಸಿಕ ಗಳಿಗೆಗೆ ದಾರಿಯಾಗಿದ್ದವೇನೋ ಎನಿಸುತ್ತದೆ. ಅಲ್ಲಿಂದೀಚೆಗೆ ಸಂದ ದಶಕಗಳು ತಿಲಕರು ತಮ್ಮ ಜೀವನದಾದ್ಯಂತ ಯಾವ ಧ್ಯೇಯಕ್ಕಾಗಿ ಹೋರಾಡಿದರೋ, ಕಷ್ಟನಷ್ಟಗಳನ್ನನುಭವಿಸಿದರೋ ಆ ಧ್ಯೇಯದ–ಸ್ವರಾಜ್ಯದ, ಸ್ವಾತಂತ್ರ್ಯದ ಧ್ಯೇಯದ–ನ್ಯಾಯವನ್ನು ಸಮರ್ಥಿಸಿವೆ.

ತಿಲಕರಿಗೆ ಆರು ವರ್ಷಗಳ ಗಡೀಪಾರು ಶಿಕ್ಷೆಯನ್ನು ವಿಧಿಸಲಾಯಿತು. ಅವರನ್ನು ಹಿಂದೊಮ್ಮೆ ಇದೇ ಆಪಾದನೆಯ ಮೇಲೆ ಶಿಕ್ಷಿಸಲಾಗಿದ್ದರಿಂದ ಈ ಶಿಕ್ಷೆ ಹಗುರವಾಗಿದೆಯೆಂದು ನ್ಯಾಯಾಧೀಶರು ಹೇಳಿದರು. ಆದರೆ ತಿಲಕರ ದೇಶವಾಸಿಗಳ ದೃಷ್ಟಿಯಲ್ಲಿ ಅವರಿಗೆ ಭಯಾನಕ ಶಿಕ್ಷೆಯನ್ನು ವಿಧಿಸಲಾಗಿತ್ತು: ಏಕೆಂದರೆ, "ಅವರು ತಮ್ಮ ದೇಶವನ್ನು ತಮ್ಮ ಪ್ರಾಣ ಅಥವಾ ಸ್ವಾತಂತ್ರ್ಯಕ್ಕಿಂತ ಹೆಚ್ಚು ಪ್ರೀತಿಸಿದರು." ತಿಲಕರ ಅವಿಸ್ಮರಣೀಯ ಮಾತುಗಳನ್ನು ಕೆತ್ತಿರುವ ಫಲಕವೊಂದನ್ನು ಅದೇ ನ್ಯಾಯಾಲಯದಲ್ಲಿ ೪೮ ವರ್ಷಗಳನಂತರ ಅನಾವರಣ ಮಾಡುತ್ತಾ, ಮುಖ್ಯ ನ್ಯಾಯಾಧೀಶ ಎಂ. ಸಿ. ಚಾಗ್ಲ ಅವರು ಅದು "ಇತಿಹಾಸದ ಅನಿವಾರ್ಯ ತೀರ್ಪಾಗಿತ್ತು" ಎಂದು ಹೇಳಿದರು.

ಲೋಕಮಾನ್ಯ ತಿಲಕರ ಜನ್ಮಶತಾಬ್ದಿಯಂದು ಅವರ ನೆನಪಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ ಶ್ರೀ ಚಾಗ್ಲ ಹೀಗೆ ನುಡಿದರು: "ಇದೇ ಕೋಣೆಯಲ್ಲಿ ೧೨ ವರ್ಷಗಳ ಅವಧಿಯಲ್ಲಿ ತಿಲಕರು ಎರಡು ಬಾರಿ ಆಪಾದಿತರಾಗಿ ಕುಳಿತಿದ್ದರು ಹಾಗೂ ಎರಡೂ ಸಂದರ್ಭಗಳಲ್ಲಿ ಅವರನ್ನು ತಪ್ಪಿತಸ್ಥರನ್ನಾಗಿ ತೀರ್ಮಾನಿಸಿ, ಜೈಲುವಾಸದ ಶಿಕ್ಷೆ ವಿಧಿಸಲಾಯಿತು. ಅವರು ತಮ್ಮ ಪ್ರಾಣ ಅಥವಾ ಸ್ವಾತಂತ್ರ್ಯಕ್ಕಿಂತಲೂ ಹೆಚ್ಚಾಗಿ ತಮ್ಮ ದೇಶವನ್ನು ಪ್ರೀತಿಸಿದ ಕಾರಣದಿಂದ ಅವರಿಗೆ ಶಿಕ್ಷೆಯಾಯಿತು. ನಮ್ಮ ಸಮಕಾಲೀನರು ನಮ್ಮ ಬಗ್ಗೆ ತೋರುವ ತೀರ್ಪು ಹಾಗೂ ನಮ್ಮ ಕಾಲ ನಮ್ಮ ಮೇಲೆ ಮಾಡುವ ತೀರ್ಪು ಅಷ್ಟು ಗುರುತರವಾದುದಲ್ಲ. ನಾವು ಯಾವಾಗಲೂ ಇತಿಹಾಸದ ಅನಿವಾರ್ಯ ತೀರ್ಪಿಗಾಗಿ ಕಾಯಬೇಕು ಹಾಗೂ ಸ್ವಾತಂತ್ರ್ಯ ಮತ್ತು ದೇಶಪ್ರೇಮದ ಧ್ವನಿಯನ್ನು ತುಳಿಯುವ ಉದ್ದೇಶ ಹೊಂದಿದ್ದುವೆಂದು ಈ ಎರಡು ಶಿಕ್ಷೆಗಳನ್ನು ಖಂಡಿಸಲಾಗಿದೆ ಎಂಬುದೇ ಈ ತೀರ್ಪಾಗಿದೆ. ತನ್ನ ದೇಶಕ್ಕಾಗಿ ಹೋರಾಡುವ ಹಕ್ಕನ್ನು ಪ್ರತಿಯೊಬ್ಬ ವ್ಯಕ್ತಿ ಹೊಂದಿದ್ದಾನೆ ಎಂಬ ಕಾರಣದಿಂದ ತಿಲಕರ ನಡೆವಳಿಕೆಯನ್ನು ಸಮರ್ಥಿಸಲಾಗಿದೆ. ಆ ಎರಡು ಶಿಕ್ಷೆಗಳು ಯಾವುದೋ ಹೇಳ ಹೆಸರಿಲ್ಲದ ಮೂಲೆಯಲ್ಲಿ ಮರೆಯಾಗಿವೆ–ಎಲ್ಲ ಅಯೋಗ್ಯ ಕಾರ್ಯಗಳಿಗೆಂದು ಇತಿಹಾಸ ಮೀಸಲಿಟ್ಟ ಮೂಲೆಯಲ್ಲಿ ಮರೆಯಾಗಿವೆ."

ಈ ಶಿಕ್ಷೆಗಳು ಮರೆಯಾಗಿರಬಹುದು. ಆದರೆ ಈ ಶಿಕ್ಷೆಗಳು ಖಿನ್ನ ಚೌಕಟ್ಟಿನಲ್ಲಿ ಕಾಣುವ ಲೋಕಮಾನ್ಯರ ಮೂರ್ತಿ ರಾಷ್ಟ್ರೀಯ ಪ್ರಜ್ಞೆಯಲ್ಲಿ ಅಚ್ಚಳಿಯದಂತೆ ಉಳಿದಿದೆ. ಆ ಮೂರ್ತಿ, ಯಾವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ಅವರು ಪ್ರತಿಪಾದಿಸಿದರೋ, ಆ ಸ್ವರಾಜ್ಯದ ಚಿತ್ರದೊಡನೆ ಸಂಬಂಧ ಹೊಂದಿದೆ. ಆಜನ್ಮಸಿದ್ಧ ಹಕ್ಕನ್ನು ಅನುಭವಿಸುತ್ತಿರುವ ಅವರ ನಂತರದ ಪೀಳಿಗೆಗಳು ತಿಲಕರನ್ನು ಗೌರವ, ಕೃತಜ್ಞತೆಗಳಿಂದ ನೆನೆಯದಿರಲು ಸಾಧ್ಯವಿಲ್ಲ.

ಅಧ್ಯಾಯ 2

ಪ್ರಾರಂಭದ ಜೀವನ

ಬಾಲಗಂಗಾಧರ ತಿಲಕ್ ಜುಲೈ ೨೩. ೧೮೫೬ರಂದು ಭಾರತದ ಪಶ್ಚಿಮ ಕರಾವಳಿಯ ರತ್ನಾಗಿರಿಯಲ್ಲಿ ಜನಿಸಿದರು. ರತ್ನಾಗಿರಿಯೂ ಇತರ ಅನೇಕಸ್ಥಳಗಳ ಹೆಸರುಗಳಂತೆ ಅನ್ವರ್ಥ ನಾಮವಾಗಿರಲಿಲ್ಲ. ಕೊಂಕಣಕ್ಕೆ ಸೇರಿದ್ದ ರತ್ನಾಗಿರಿ ಹಾಗೂ ಕೊಂಕಣ ಪ್ರಾಂತ್ಯ ಇಡೀ ದೇಶದಲ್ಲಿ ಅತ್ಯಂತ ಬಡ. ಹಿಂದುಳಿದ ಪ್ರದೇಶವಾಗಿತ್ತು. ಆದರೆ ಕಳೆದ ೩೦೦ ವರ್ಷ ಗಳಲ್ಲಿ ರತ್ನಾಗಿರಿ ಅನೇಕ ಶ್ರೇಷ್ಠ ಪುತ್ರರಿಗೆ ಜನ್ಮಕೊಟ್ಟು ಈ ಅಭಿದಾನದ ನ್ಯೂನತೆಯನ್ನು ಹೋಗಲಾಡಿಸಿಕೊಂಡಿದೆ. ಈ ಪೈಕಿ. ಆಧುನಿಕ ಕಾಲದಲ್ಲಿ ತಿಲಕರನ್ನು ಮೀರಿದವರಿಲ್ಲ. ಅವರು ಎಲ್ಲರಿಗಿಂತ ಹೆಚ್ಚಿನ ಅಮೂಲ್ಯ ರತ್ನವಾಗಿದ್ದರು. ಅವರು ಹುಟ್ಟಿದ ಪರಿಸ್ಥಿತಿ ಗಳಲ್ಲಿ ಯಾವುದೂ ಅವರ ಮುಂದಿನ ಹಿರಿಮೆಯನ್ನು ಸೂಚಿಸುವುದಿಲ್ಲ. ಅವರು ಹುಟ್ಟಿದ ಸಾಧಾರಣ ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ರಕ್ಷಿಸಲಾಗಿದೆ. ಅವರ ಕುಟುಂಬ ಚಿಖಲಗಾಂವ್ ಹಳ್ಳಿಯ ಪರಂಪರಾನುಗತವಾದ ಖೋಟ್ ಅಧಿಕಾರ ಸ್ಥಾನವನ್ನು ಹೊಂದಿತ್ತು. ಈ ಸ್ಥಾನ ಕುಟುಂಬಕ್ಕೆ ಸ್ವಲ್ಪ ಮರ್ಯಾದೆ ಹಾಗೂ ಕಿಂಚಿತ್ ವರಮಾನ ಕೊಟ್ಟಿತ್ತು. ತಿಲಕರ ತಂದೆ ಶಾಲಾ ಮಾಸ್ತರರಾಗಿದ್ದರು ಮತ್ತು ಅವರು ಪ್ರಾಥಮಿಕ ಶಾಲೆಗಳ ಇನ್ಸ್‌ಪೆಕ್ಟರರ ಸ್ಥಾನವನ್ನೂ ಗಳಿಸಿದರು. ತಿಲಕರ ಸಂಸ್ಕೃತ ಮತ್ತು ಗಣಿತದ ಪ್ರೀತಿಗೆ ಅವರ ತಂದೆ ಕಾರಣರಾಗಿದ್ದರು. ಅವರಿಗೆ ೧೬ ವರ್ಷವಾಗಿದ್ದಾಗ ತಂದೆ ತೀರಿ ಕೊಂಡರು. ಅದಕ್ಕೂ ೬ ವರ್ಷಗಳ ಹಿಂದೆ ತಾಯಿ ತೀರಿಕೊಂಡಿದ್ದರು. ಆ ಕಾಲದ ಪದ್ಧತಿ ಯಂತೆ ತಿಲಕರು ತಮ್ಮ ೧೬ನೆಯ ವಯಸ್ಸಿನಲ್ಲಿ ತಂದೆ ತೀರಿಕೊಳ್ಳುವುದಕ್ಕೆ ಕೆಲವೂ ತಿಂಗಳ ಹಿಂದೆ ಪಕ್ಕದ ಹಳ್ಳಿಯ ಬಾಳ್-ಕುಟುಂಬದ ತಪಿ ಎಂಬ ಹುಡುಗಿಯನ್ನು ಮದುವೆಯಾದರು.

ಆಚಾರ. ವ್ರತ. ಪರಂಪರಾನುಗತವಾದ ನೇಮನಡವಳಿಕೆಗಳಲ್ಲಿ ನಿಷ್ಠೆಯನ್ನೂ. ವಿಧಿಯಲ್ಲಿ ಶ್ರದ್ಧೆಯನ್ನೂ. ಕಟ್ಟುನಿಟ್ಟಾಗಿ ಹೊಂದಿದ ಸಾಂಪ್ರದಾಯಸ್ಥ ಕುಟುಂಬದಲ್ಲಿ ಅವರು ಬೆಳೆದರು. ತಿಲಕರಿಗೆ ೧೦ ವರ್ಷವಾಗಿದ್ದಾಗ. ಅವರ ತಂದೆಗೆ ಪೂನಾಗೆ ವರ್ಗ ವಾಯಿತು. ಇದರಿಂದ. ಅವರಿಗೆ ಅತ್ಯುತ್ತಮವಾದ ಉಪಾಧ್ಯಾಯರಲ್ಲಿ ಕಲಿಯುವ ಭಾಗ್ಯ ದೊರಕಿತು. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ತಿಲಕರು ಮ್ಯಾಟ್ರಿಕ್ ಪಾಸಾ ದರು. ಹಾಗೂ ಅಲ್ಲೇ ವಾಸಿಸುವ ವಿದ್ಯಾರ್ಥಿಯಾಗಿ ಡೆಕ್ಕನ್ ಕಾಲೇಜಿಗೆ ಸೇರಿದರು. ಅಲ್ಲಿ ಅವರು ಕಳೆದ ಐದು ವರ್ಷಗಳು ಅತ್ಯಂತ ಸುಖದಿಂದ. ಅತ್ಯಂತ ಸ್ವಚ್ಛಂದದಿಂದ ಕಳೆದ ವರ್ಷಗಳಾಗಿದ್ದವು. ಡೆಕ್ಕನ್ ಕಾಲೇಜಿನಲ್ಲಿ ಆಗ ವರ್ಡ್ಸ್‌ವರ್ತ್, ಶೂಟ್ ಮತ್ತು ಛತ್ರೆಯವರಂತಹ ಖ್ಯಾತ ಪ್ರೊಫೆಸರುಗಳಿದ್ದರು. ಆದರೆ ತಮ್ಮ ಶಿಕ್ಷಣಕ್ಕೆ ಅವರ ಉಪ ನ್ಯಾಸಗಳು ಮತ್ತು ಟಿಪ್ಪಣಿಗಳಿಗಿಂತಲೂ ಹೆಚ್ಚಾಗಿ ತಮ್ಮ ಸ್ವತಂತ್ರ ಹಾಗೂ ವ್ಯಾಪಕ ಓದನ್ನು ತಿಲಕರು ನೆಚ್ಚಿಕೊಂಡಿದ್ದರು. ಅವರ ಸಹಪಾಠಿಗಳ ಪೈಕಿ ಮುಂದೆ ಖ್ಯಾತಿಗಳಿಸಿದ

ಎಂ. ಬಿ. ಚೌಬಳ್, ಎನ್. ಜಿ. ಚಂದಾವರ್ಕರ್, ಜಿ. ಎಸ್. ಖಾಪರ್ಡೆ, ಆರ್. ಎನ್. ಮುಧೋಳ್ಕರ್ ಮತ್ತು ಡಿ. ಎ. ಖರೆ ಮುಂತಾದವರಿದ್ದರು. ತಿಲಕ್ ಮತ್ತು ಜಿ. ಜಿ. ಆಗರ್ಕರ್ ಅವರ ನಡುವೆ ಗಾಢ ಮೈತ್ರಿಯುಂಟಾಯಿತು. ಆದರೆ ಮುಂದೆ ಇದೇ ಮೈತ್ರಿ ಸಾರ್ವಜನಿಕ ಜೀವನದಲ್ಲಿ ತೀವ್ರ ವೈರವಾಗಿ ಪರಿಣಮಿಸಿತು. ತಿಲಕರನ್ನು ಆದರ್ಶ ವಿದ್ಯಾರ್ಥಿ ಎಂದು ಕರೆಯಲು ಸಾಧ್ಯವಾಗಲಿಕ್ಕಿಲ್ಲ. ತಮ್ಮ ಪಾಂಡಿತ್ಯ ಗಳಿಕೆಯಲ್ಲಿ ಅವರು ಅನೇಕ ವಿಷಯಗಳಿಗೆ ಗಮನ ಕೊಟ್ಟಿದ್ದರು. ಹಾಗೂ ನಿರ್ದಿಷ್ಟಪಡಿಸಿದ ಪಠ್ಯ ವಿಷಯ ಗಳಿಗೆ ಯಾವಾಗಲೂ ಅಂಟಿಕೊಂಡಿರಲಿಲ್ಲ. ಹಾಗೆ ನೋಡಿದರೆ, ಅವರು ಕಾಲೇಜು ಜೀವ ನದ ಮೊದಲ ವರ್ಷವನ್ನು ದೈಹಿಕ ಬೆಳವಣಿಗೆಗೆ ಮೀಸಲಿಟ್ಟರು. ಇದರಿಂದ ಅವರು ವಾರ್ಷಿಕ ಪರೀಕ್ಷೆಯಲ್ಲಿ ನಪಾಸಾದರು. ಆದರೆ ಅದೇ ಕಾಲಕ್ಕೆ ಕಾಲೇಜಿಗೆ ಸೇರಿದಾಗ ಕೃಶ ನಾಗಿದ್ದ ಅವರು ಕಟ್ಟುಮಸ್ತಾದ ಬಲಶಾಲಿ ತರುಣರಾಗಿ ಬದಲಾಯಿಸಿದ್ದರು. ಎಲ್ಲ ಉತ್ಸಾಹಿ ಯುವಕರಂತೆ ಅವರಿಗೂ ಚೇಷ್ಟೆ ಮಾಡುವುದೆಂದರೆ ಬಹಳ ಇಷ್ಟವಾಗಿತ್ತು. ಅವರು ತಮ್ಮ ಚೇಷ್ಟೆಯಿಂದ ಸ್ನೇಹಿತರನ್ನು ಪೇಚಿಗೆ ಸಿಕ್ಕಿಸಿದ ಅನೇಕ ಕತೆಗಳಿವೆ. ವಿವಾದಗ ಳೆಂದರೆ ಅವರಿಗೆ ಪ್ರೀತಿ. ವಾದಿಸುವ ನೈಪುಣ್ಯತೆಯನ್ನೂ ಅವರು ಗಳಿಸಿದ್ದು, ಇದರ ರಿಂದಾಗಿ ಅವರಿಗೆ 'ಮಿಸ್ಟರ್ ಬ್ಲಂಟ್'(ಖಂಡ ತುಂಡಾಗಿ ಮಾತನಾಡುವವ) ಎಂಬ ಅಡ್ಡ ಹೆಸರು ದೊರಕಿತು ಹಾಗೂ ಈ ಸಾಮರ್ಥ್ಯ ಅವರಿಗೆ ಮುಂದಿನ ಜೀವನದಲ್ಲಿ ಬಹಳ ಉಪಯೋಗಕ್ಕೆ ಬಂದಿತು. ಅಂದಿನ ಸ್ವಚ್ಛಂದ ದಿನಗಳಲ್ಲೂ, ತಮ್ಮ ದೇಶದ ರಾಜಕೀಯ ದಾಸ್ಯ ಮತ್ತು ಆರ್ಥಿಕ ಹೀನಸ್ಥಿತಿ ಈ ತರುಣರನ್ನು ಕಾಡುತ್ತಿತ್ತು. ಪದವಿ ಗಳಿಸಿದ ಮೇಲೆ ತಾನೇನು ಮಾಡುತ್ತೇನೆ ಎಂಬ ಬಗ್ಗೆ ಒಟ್ಟಿಗೆ ವಾದ ಮಾಡುತ್ತಾ ತಿಲಕ್ ಮತ್ತು ಆಗರ್ಕರ್ ಅನೇಕ ರಾತ್ರಿಗಳನ್ನು ಕಳೆದರು. ಈ ವಾದಗಳಿಂದ ಕ್ಷಿಪ್ರವಾಗಿ ಧಾರಾಳ ಫಲ ದೊರೆಯಿತು.

ತಿಲಕರು ೧೮೭೭ರಲ್ಲಿ ಗಣಿತದಲ್ಲಿ ಪ್ರಥಮ ದರ್ಜೆಯನ್ನು ಗಳಿಸುವುದರೊಂದಿಗೆ ಬಿ. ಎ. ಪದವೀಧರರಾದರು. ಎರಡು ವರ್ಷಗಳ ನಂತರ ಕಾನೂನು ಪದವಿಯನ್ನು ಗಳಿ ಸಿದರು. ಎರಡು ಸಲ ಪ್ರಯತ್ನಿಸಿದರೂ ಎಂ. ಎ. ಪದವಿಯನ್ನು ಗಳಿಸುವಲ್ಲಿ ಅವರು ವಿಫಲರಾದರು. ತಮ್ಮ ಕಾಲೇಜನ್ನು ಬಿಡುವುದಕ್ಕೂ ಮೊದಲೇ ಅವರು ತಮ್ಮ ಜೀವ ನದ ಹಾದಿಯನ್ನು ಗುರುತು ಮಾಡಿದ್ದರು.

"ಜುಲೈ ಅಥವಾ ಆಗಸ್ಟ್ ೧೮೭೯ರಲ್ಲಿ ನಾನು ಎಲ್‌ಎಲ್‌ಬಿ ಪರೀಕ್ಷೆಗೆ ಓದುತ್ತಾ. ಡೆಕ್ಕನ್ ಕಾಲೇಜಿನಲ್ಲಿ ವಾಸಿಸುತ್ತಿದ್ದಾಗ. ಕ್ರೈಸ್ತ ಧಾರ್ಮಿಕ ಸಂಸ್ಥೆಗಳ ಮಾದರಿಯಲ್ಲಿ ಖಾಸಗಿ ಶಾಲೆಗಳನ್ನು ಸ್ಥಾಪಿಸುವ ಪ್ರಾಮುಖ್ಯತೆ ಮತ್ತು ಕಾರ್ಯಸಾಧ್ಯತೆಯ ಬಗ್ಗೆ ಶ್ರೀ ಆಗರ್ಕರ್ ಮತ್ತು ನಾನು ಮೊದಲು ಚರ್ಚಿಸಿದೆವು. ಶಿಕ್ಷಣದಲ್ಲಿ ಸ್ವದೇಶಿ ಕಾರ್ಯ ತತ್ಪರತೆಯ ಅಗತ್ಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ. ಆದರೆ ಅದನ್ನು ಹೇಗೆ ಯಶಸ್ವಿಯಾಗಿಸುವುದು ಎಂಬುದೇ ಪ್ರಶ್ನೆಯಾಗಿತ್ತು. ನಾನಿದ್ದ ಪರಿಸ್ಥಿತಿಗಳಲ್ಲಿ ಸ್ವಯಂತ್ಯಾಗ ಮಾತ್ರವೇ ಇದಕ್ಕೆ ದಾರಿಯಾಗಿತ್ತು. ಅನೇಕ ದೀರ್ಘ ಚರ್ಚೆಗಳ ನಂತರ, ಯಾವುದೇ ತ್ಯಾಗ ಮಾಡಿದರೂ ನಮ್ಮ ವಿಚಾರವನ್ನು ಕಾರ್ಯರೂಪಕ್ಕಿಳಿಸಬೇಕೆಂಬ

ನಿರ್ಧಾರದೊಡನೆ ಈ ಕಾರ್ಯಕ್ಕೆ ನಾವು ತೊಡಗಿದರೆ ಇದು ಅಸಾಧ್ಯವೇನಲ್ಲ ಎಂಬ ತೀರ್ಮಾನಕ್ಕೆ ಬಂದೆವು".

ಪ್ರಥಮ ದರ್ಜೆಯಲ್ಲಿ ಪದವಿ ಗಳಿಸಿದ ತರುಣನೊಬ್ಬ ಸಾರ್ವಜನಿಕ ಸೇವೆಗಾಗಿ ತ್ಯಾಗ ಮತ್ತು ಅರ್ಪಣೆಯ ಶಪಥ ಮಾಡುವ ಮಾತನ್ನು ೧೮೭೯ರಲ್ಲಿ ಯಾರೂ ಕೇಳಿರಲಿಲ್ಲ. ತಿಲಕರ ನಿರ್ಧಾರಕ್ಕೆ ಅಸಮ್ಮತಿ ಸೂಚಿಸಿ, ಅನೇಕ ಹಿರಿಯರ ತಲೆಗಳು ಅಲುಗಾಡಿರಬೇಕು. ತಡಮಾಡದೆ ಕೈತುಂಬ ಸಂಬಳ ಬರುವ ನೌಕರಿಗಳನ್ನು ಪಡೆದ, ತಿಲಕರೊಂದಿಗೆ ಪದವಿಗಳಿಸಿದ, ಸಹಪಾಠಿಗಳೂ ತಿಲಕರ ಅವ್ಯವಹಾರಿಕ ದೃಷ್ಟಿಯ ಬಗ್ಗೆ ಮರುಕ ಪಟ್ಟಿರಬೇಕು. ಕಲಿತವರಿಗೆ, ಸರ್ಕಾರಿ ಸೇವೆಯೆಂದರೆ ಆಗ ಸರ್ವಸ್ವಾ ಸಿದ್ಧಿಯಾದಂತೆ. ಮಹದೇವ ಗೋವಿಂದ ರಾನಡೆಯಂತೆ ಸಾರ್ವಜನಿಕ ಸೇವೆಯ ಉತ್ಕಟ ಭಾವನೆಯಿಂದ ಸ್ಫೂರ್ತಿಗೊಂಡವರು ಸಹ ಅದನ್ನು ಎರಡನೆಯ ಉದ್ಯೋಗವನ್ನಾಗಿ ಮಾಡಿಕೊಂಡರು. ಸ್ವತಂತ್ರರಾಗಿರಲು ಇಚ್ಛಿಸಿದವನಿಗೆ ನ್ಯಾಯಾಲಯಗಳು ಕಾದಿದ್ದವು ಹಾಗೂ ಆಗ ಅದನ್ನು ಭಾಗ್ಯಗಳಿಸಲು ರಾಜಮಾರ್ಗ ಎಂದು ಭಾವಿಸಲಾಗಿತ್ತು. ಫಿರೋಜ್ ಶಾ ಮೆಹ್ತಾ ಮತ್ತು ವಿಶ್ವನಾಥ ನಾರಾಯಣ ಮಾಂಡಲಿಕ್‌ರಂತಹ ನ್ಯಾಯಶಾಸ್ತ್ರ ಪಾರಂಗತರು ೬೦ರ ಆ ದಶಕದಲ್ಲಿ ಅನೇಕ ತರುಣರಿಗೆ ದಾರಿದೀಪಗಳಾಗಿದ್ದರು.

ನಿಸ್ವಾರ್ಥ, ದೇಶಪ್ರೇಮಗಳಿಂದ ಪ್ರೇರಿತವಾದ ಹೊಸ ಮಾರ್ಗವನ್ನು ಕಂಡುಕೊಳ್ಳಲು ತಿಲಕರ ಮೇಲುಂಟಾದ ಪ್ರಭಾವಗಳು ಯಾವುದಾಗಿದ್ದವು? ೧೮೭೯ರಲ್ಲಿ ದೇಶ ೧೮೫೭ರ ಬಂಡಾಯದ ಆಘಾತದಿಂದ ಚೇತರಿಸಿಕೊಂಡಿತ್ತು. ೧೮೭೯ರಲ್ಲಿ ವಾಸುದೇವ ಬಳವಂತ ಫಡ್ಕೆ ಮಹಾರಾಷ್ಟ್ರದಲ್ಲಿ ಮತ್ತೊಂದು ಸಶಸ್ತ್ರ ಬಂಡಾಯದ ಧ್ವಜ ಹಾರಿಸಿದ್ದರು. ಹಿಂದೆಂದಿಗಿಂತಲೂ ಭೀಕರವಾದ ಕ್ಷಾಮದಿಂದ ದೇಶ ತತ್ತರಿಸಿತ್ತು. ಅಪಾರ ಜೀವಹಾನಿ ಉಂಟಾಗಿತ್ತು. ಬ್ರಿಟಿಷ್ ಆಳ್ವಿಕೆಯ ಮೊದಲಿನ ಮೋಹ ಮರೆಯಾಗಲು ಪ್ರಾರಂಭವಾಗಿತ್ತು. ೧೮೭೬ರಲ್ಲಿ ಈಸ್ಟ್ ಇಂಡಿಯಾ ಅಸೋಸಿಯೇಶನ್‌ನ ಮುಂಬಯಿ ಶಾಖೆಯ ಆಶ್ರಯದಲ್ಲಿ ದಾದಾಭಾಯಿ ನವರೋಜಿ ಅವರು ಭಾರತದ ಸಂಪತ್ತು ಕ್ಷೀಣಿಸುತ್ತಿರುವುದರ ಬಗ್ಗೆ ಲೇಖನವೊಂದನ್ನು ಓದಿದರು. ಇದೇ ಲೇಖನ ಮುಂದೆ "ದಾರಿದ್ರ್ಯ ಮತ್ತು ಭಾರತದಲ್ಲಿ ಬ್ರಿಟಿಷ್-ಅಲ್ಲದ ಆಳ್ವಿಕೆ" ಎಂಬ ಶೀರ್ಷಿಕೆಯ ಉತ್ಕೃಷ್ಟ ಪುಸ್ತಕವಾಗಿ ಪ್ರಕಟವಾಯಿತು.

೧೮೭೦ರಲ್ಲಿ ಪೂನಾದಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಸಭಾ, ರಾನಡೆಯವರ ನೇತೃತ್ವದಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಕ್ರಮಬದ್ಧವಾಗಿ, ರಚನಾತ್ಮಕವಾಗಿ ಬಹಿರಂಗಗೊಳಿಸುತ್ತಿತ್ತು ಹಾಗೂ ಸಾರ್ವಜನಿಕ ಜೀವನದಲ್ಲಿ ಹೊಸ ಚೇತನವನ್ನು ತುಂಬುತ್ತಿತ್ತು. ಕೃಷಿಯ ಪರಿಸ್ಥಿತಿಗಳನ್ನು ತನಿಖೆ ಮಾಡುವುದು, ಸ್ವದೇಶೀ ವಸ್ತುಗಳ ಬಳಕೆಯನ್ನು ಪ್ರೋತ್ಸಾಹಿಸುವುದು ಈ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಅದು ಮಾರ್ಗದರ್ಶಕ ಕಾರ್ಯ ಮಾಡಿತು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ೧೮೭೪ರಲ್ಲಿ ಅದು ಆ ಪಾರ್ಲಿಮೆಂಟಿಗೆ ಮನವಿ ಪತ್ರವೊಂದನ್ನು ಕಳಿಸಿತು. ಮರುವರ್ಷ, ಬ್ರಿಟಿಷ್ ರೆಸಿಡೆಂಟರಿಗೆ ವಿಷ ಹಾಕಿದ ಅಪಾದನೆ ಹೊರಿಸಿ, ಬರೋಡದ ದೊರೆ ಮಲ್ಹಾರ್ ರಾವ್ ಗಾಯಕ್‌ವಾಡರನ್ನು ಪದಚ್ಯುತಗೊಳಿಸಲಾಗ. ಸಾರ್ವ

ಜನಿಕ ಸಭಾ ಗಾಯಕವಾಡರ ಪರವಾಗಿ ಬಲವಾಗಿ ವಾದಿಸಿತು. ದೊರೆಯ ಪದಚ್ಯುತಿಯ ಘಟನೆ ಮಹಾರಾಷ್ಟ್ರದಲ್ಲಿ ಅತ್ಯಂತ ಕಳವಳವನ್ನುಂಟುಮಾಡಿತ್ತು.

ತಮ್ಮ ಜೀವನದ ಹೊಸ್ತಿಲಲ್ಲಿದ್ದ ತರುಣರಲ್ಲಿ ಈ ಎಲ್ಲ ಬೆಳವಣಿಗೆಗಳು ತೀವ್ರ ಪ್ರಭಾವವನ್ನುಂಟುಮಾಡಿರಬೇಕು. ತೀಕ್ಷ್ಣವಾದ ಶೈಲಿಯಿಂದ ಹಾಗೂ ವಿವಾದಗಳನ್ನೆಬ್ಬಿಸುವ ಹುರುಪಿನಿಂದ ಪುನರುಜ್ಜೀವನದ ತತ್ವಜ್ಞಾನವನ್ನು ಬೋಧಿಸುತ್ತಿದ್ದ ವಿಷ್ಣುಶಾಸ್ತ್ರಿ ಚಿಪ್ಳೂಣಕರ್ ಅವರ 'ನಿಬಂಧಮಾಲಾ'ದ ಪ್ರಭಾವಕ್ಕೂ ಅವರು ಒಳಗಾಗಿರಬೇಕು. ವಿಷ್ಣುಶಾಸ್ತ್ರಿ ಇಂಗ್ಲಿಷ್ ಶಿಕ್ಷಣವನ್ನು ಬಹಳ ಮೆಚ್ಚಿಕೊಂಡಿದ್ದರು. ಹಾಗೂ ಅದನ್ನು "ಹೆಣ್ಣು ಹುಲಿಯ ಹಾಲು" ಎಂದು ವರ್ಣಿಸುತ್ತಿದ್ದರು. ಆದರೆ ಕ್ರೈಸ್ತ ಧರ್ಮಪ್ರಚಾರಕರ ದಾಳಿಗೆ ಉತ್ತರವಾಗಿ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳನ್ನು ಸಮರ್ಥಿಸುವುದನ್ನಾಗಲಿ, ನಮ್ಮ ಒಳಿತಿಗಾಗಿ ಮಾತ್ರ ಇಲ್ಲಿಗೆ ಬಂದಿರುವುದಾಗಿ ಬ್ರಿಟಿಷರು ಹೇಳಿಕೊಳ್ಳುತ್ತಿದ್ದುದನ್ನು. ಅಪಹಾಸ್ಯ ಮಾಡುವುದನ್ನಾಗಲಿ ಅವರು ಬಿಡಲಿಲ್ಲ.

ವಿಷ್ಣುಶಾಸ್ತ್ರಿ ಚಿಪ್ಳೂಣಕರ್ ಅವರು ನ್ಯೂ ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸುವುದರಲ್ಲಿ ತಿಲಕ್ ಮತ್ತು ಆಗರ್ಕರ್‌ರ ನೆರವನ್ನು ಪಡೆಯುವುದಕ್ಕೆ ಅವರಿಬ್ಬರ ಮೇಲೆ ಚಿಪ್ಳೂಣಕರ್ ಅವರು ಬೀರಿದ ಪ್ರಭಾವವೇ ಮುಖ್ಯವಾಗಿ ಕಾರಣವಾಗಿತ್ತೆಂಬ ಭಾವನೆ ಇದೆ. ಆದರೆ ಸಮಕಾಲೀನ ದಾಖಲೆಗಳಲ್ಲಿ ಇದಕ್ಕೆ ಸಮರ್ಥನೆ ದೊರಕಿಲ್ಲ. ಈ ವಿಚಾರ ಅವರಿಬ್ಬರ ಮನಸ್ಸಿನಲ್ಲೇ ಮೂಲತಃ ಹೊಳೆಯಿತೆಂದು ಕಾಣುತ್ತದೆಯಾದರೂ, ವಿಚಾರವನ್ನು ಕಾರ್ಯರೂಪಕ್ಕಿಳಿಸುವಲ್ಲಿ ವಿಷ್ಣುಶಾಸ್ತ್ರಿ ಚಿಪ್ಳೂಣಕರ್ ಅವರಂತಹ. ಸಮಾಜದಲ್ಲಿ ಒಂದು ಸ್ಥಾನವನ್ನು ಗಳಿಸಿದ್ದ. ಹಿರಿಯ ವ್ಯಕ್ತಿಯ ನೆರವು ಅಮೂಲ್ಯವಾಗಿ ಪರಿಣಮಿಸಿತು. ತಮ್ಮ ತಾರುಣ್ಯದ ಆ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ, ತಿಲಕರು ಹೀಗೆ ನುಡಿದರು– "ನಮ್ಮ ದೇಶದ ಹೀನಾಯ ಸ್ಥಿತಿಯ ಬಗ್ಗೆ ಯೋಚನೆಗಳಿಂದ ತುಂಬಿ ನಮ್ಮ ತಲೆಗಳು ಬಿಸಿಯಾಗಿದ್ದವು ಹಾಗೂ ದೀರ್ಘ ಚಿಂತನೆಯ ನಂತರ ನಮ್ಮ ಮಾತೃಭೂಮಿಯ ಉದ್ಧಾರ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬ ಅಭಿಪ್ರಾಯಕ್ಕೆ ನಾವು ಬಂದಿದ್ದೆವು."

ಜನವರಿ ೧, ೧೮೮೦ರಂದು ಈ ಮಾರ್ಗದರ್ಶಕ ತ್ರಿಮೂರ್ತಿಗಳು ನ್ಯೂ ಇಂಗ್ಲಿಷ್ ಶಾಲೆಯನ್ನು ಉದ್ಘಾಟಿಸಿದರು. ಶಾಲೆ ಮೂರನೆಯ ದಿನ ಕಾರ್ಯಾರಂಭ ಮಾಡಿದರೂ ಆ ದಿನ ರಾಷ್ಟ್ರೀಯ ಶಿಕ್ಷಣದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ದಿನವಾಗಿತ್ತು. ಆಗರ್ಕರ್ ಎಂ. ಎ. ಪದವಿಗಳಿಸಲು ಒಂದು ವರ್ಷದ ರಜೆ ತೆಗೆದುಕೊಂಡರು. ಚಿಪ್ಳೂಣಕರ್ ಮತ್ತು ತಿಲಕರ ಜೊತೆಗೆ ಮಹದೇವ್ ಬಲ್ಲಾಳ ನಾಮ್‌ಜೋಶಿ ಹಾಗೂ ನಂತರ ವಾಮನ ಶಿವರಾಮ್ ಆಪ್ಟೆ ಶಾಲೆಗೆ ಉಪಾಧ್ಯಾಯರಾಗಿ ಸೇರಿದರು. ಆಪ್ಟೆ ಅವರ ಉನ್ನತ ಪಾಂಡಿತ್ಯದಿಂದ ಮತ್ತು ಶಿಸ್ತಿನ ವ್ಯಕ್ತಿ ಎಂದು ಅವರು ಗಳಿಸಿದ್ದ ಖ್ಯಾತಿಯಿಂದ ಶಾಲೆಗೆ ಮಹತ್ವ ದೊರೆಯಿತು. ಮೂರು ತಿಂಗಳಲ್ಲೇ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ೫೦೦ಕ್ಕೆ ಏರಿತು. ಪ್ರಥಮ ವರ್ಷದ ಕೊನೆಯಲ್ಲಿ ಚಿಪ್ಳೂಣಕರ್ ಅವರು ಹೆಮ್ಮೆಯಿಂದ ಹೀಗೆ ಹೇಳಿಕೊಂಡಿದ್ದು ಸಹಜವಾಗಿಯೇ ಇದೆ:

"ನ್ಯೂ ಇಂಗ್ಲಿಷ್ ಶಾಲೆ ಸಂಪೂರ್ಣವಾಗಿ ಸಾಧಿಸಲ್ಪಟ್ಟ ಸಂಗತಿಯಾಗಿದೆ. ಸಾವಿರ

ತೊಂದರೆಗಳ ಮಧ್ಯೆ, ಜನತೆಯ ಔದಾಸೀನ್ಯದ ಮಧ್ಯೆ, ನಿರಾಶೆಯ ಅಭಿಪ್ರಾಯವನ್ನು ತೀವ್ರವಾಗಿ ಕಡೆಗಣಿಸಿ, ಇದನ್ನು ಸಾಧಿಸಲಾಗಿದೆ. ಚರ್ವಿತಚರ್ವಣವಾದ ಪದ್ಧತಿಯನ್ನು ಕೆದಕುವ ಧೈರ್ಯ ತೋರುವ ಪ್ರತಿಯೊಬ್ಬರಿಗೂ ಅನಿವಾರ್ಯವಾಗಿ ದೊರಕುವ ಹುಚ್ಚು, ನಿಷ್ಪ್ರಯೋಜಕ, ಭ್ರಾಂತಿ ಮತ್ತು ಅಸಾಧ್ಯ ಆದರ್ಶ ಮುಂತಾದ ಗುಣವಾಚಕಗಳನ್ನು ತಿರಸ್ಕಾರದಿಂದ ಅಲಕ್ಷಿಸಿ ಇದನ್ನು ಸಾಧಿಸಲಾಗಿದೆ".

ಶಾಲೆ ಎಷ್ಟರ ಮಟ್ಟಿಗೆ ಯಶಸ್ವಿಯಾಯಿತೆಂದರೆ, ನಾಲ್ಕೇ ವರ್ಷಗಳಲ್ಲಿ ಅದರ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕು ಅಂಕಿಯ ಸಂಖ್ಯೆಯನ್ನು ಮೀರಿತು ಹಾಗೂ ಸರ್ಕಾರ ನಡೆಸುತ್ತಿದ್ದ ಪೂನಾ ಪ್ರೌಢ ಶಾಲೆಗೂ ಪ್ರಬಲ ಪ್ರತಿಸ್ಪರ್ಧಿಯಾದ ಶಾಲೆಯಾಯಿತು.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಶಾಲೆ ಶೇಕಡಾವಾರು ಉತ್ತೀರ್ಣಗಳಲ್ಲಿ ಹಾಗೂ ಗಳಿಸಿದ ವಿದ್ಯಾರ್ಥಿವೇತನಗಳ ಸಂಖ್ಯೆಯಲ್ಲಿ ಪರಿಣಾಮಕಾರಿ ದಾಖಲೆಯನ್ನು ಸ್ಥಾಪಿಸಿತು. ಆರಂಭದಲ್ಲಿ, ಸರ್ಕಾರದಿಂದ ಸಹಾಯಧನವನ್ನು ಕೋರಲು ವ್ಯವಸ್ಥಾಪಕರಿಗೆ ಇಷ್ಟವಿಲ್ಲದೆ ಬಹಳ ತೊಂದರೆಗೊಳಗಾದರು. ಶಾಲೆಯ ಮೊದಲ ವರ್ಷದಲ್ಲಿ ತಿಲಕರಾಗಲಿ, ಚಿಪ್ಳೂಣಕರ್ ಅವರಾಗಲಿ ಒಂದು ರೂಪಾಯಿಯ ವೇತನವನ್ನು ಪಡೆಯುವುದೂ ಸಾಧ್ಯವಾಗಲಿಲ್ಲ. ಮಾರ್ಚ್ ೧೭, ೧೮೮೨ರಂದು ಚಿಪ್ಳೂಣಕರರು ಅಕಾಲ ಮರಣಕ್ಕೆ ತುತ್ತಾಗಿ ಶಾಲೆ ಅವರ ಮಾರ್ಗದರ್ಶನದಿಂದ ವಂಚಿತವಾಯಿತು. ಆ ವೇಳೆಗಾಗಲೇ ಈ ಶಿಕ್ಷಣ ಸಂಸ್ಥೆ ಎಷ್ಟು ಯಶಸ್ವಿಯಾಗಿತ್ತೆಂಬುದನ್ನು ಶಿಕ್ಷಣ ಆಯೋಗದ ಅಧ್ಯಕ್ಷ ಡಾ. ಡಬ್ಲ್ಯೂ. ಹಂಟರ್ ಸೆಪ್ಟೆಂಬರ್ ೧೮೮೨ರಲ್ಲಿ ಶಾಲೆಗೆ ಭೇಟಿ ಕೊಟ್ಟಾಗ ವ್ಯಕ್ತಪಡಿಸಿದ ಈ ಪ್ರಶಂಸೆಯ ಮಾತುಗಳಿಂದ ತಿಳಿಯಬಹುದು:

"ಕೆಲವು ಉತ್ಸಾಹಿ, ಶಕ್ತ ಹಾಗೂ ಬುದ್ಧಿವಂತ, ವಿದ್ಯಾವಂತ ತರುಣರು ಸ್ವ-ಸಹಾಯ ಮತ್ತು ಸ್ವಾವಲಂಬತನದ ವಿಚಾರಗಳಿಂದ ಪ್ರಚೋದಿಸಲ್ಪಟ್ಟು ನಿರ್ಮಿಸಿದ ಈ ಸಂಸ್ಥೆ ಸರ್ಕಾರದಿಂದ ಯಾವುದೇ ಸಹಾಯವನ್ನು ಪಡೆಯದೇ ಇದ್ದರೂ, ಈ ದೇಶದ ಸರ್ಕಾರಿ ಪ್ರೌಢ ಶಾಲೆಗಳನ್ನು ಮೀರಿಸಿ ಅವುಗಳೊಂದಿಗೆ ಸ್ಪರ್ಧಿಸಬಲ್ಲುದೇ ಅಲ್ಲದೆ, ಸಂಸ್ಥೆಯನ್ನು ಇತರ ದೇಶಗಳ ಶಾಲೆಗಳೊಂದಿಗೂ ಸಹ ಮೆಚ್ಚಿಕೆಯಿಂದ ಹೋಲಿಸಬಹುದು."

ಶಾಲೆ ತನ್ನ ಸಂಸ್ಥಾಪಕರ ಪುಟಿದೇಳುವ ಚೈತನ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲಿಲ್ಲ ಹಾಗೂ ಶಾಲೆ ಪ್ರಾರಂಭವಾದ ಕೆಲವೇ ತಿಂಗಳಲ್ಲಿ ಅವರು ಸಾರ್ವಜನಿಕ ಸೇವೆಯ ಹೊಸ ಕ್ಷೇತ್ರಗಳನ್ನು ಹೊಸ ನೆಲೆಗಳನ್ನು, ಹುಡುಕುತ್ತಿದ್ದರು. ರಾಷ್ಟ್ರೀಯ ಪುನರುಜ್ಜೀವನಕ್ಕೆ ವೃತ್ತಪತ್ರಿಕೆಗಳಿಗಿಂತ ಹೆಚ್ಚು ಪ್ರಬಲವಾದ ಸಾಧನ ಇರಲು ಸಾಧ್ಯವಿಲ್ಲ ಎಂದು ಕಂಡುಕೊಳ್ಳಲು ಅವರಿಗೆ ಬಹಳ ಸಮಯ ಹಿಡಿಯಲಿಲ್ಲ. ದೇಶದ ಪತ್ರಿಕಾ ರಂಗದಲ್ಲಿ ಆಗ ಆಂಗ್ಲೋ-ಇಂಡಿಯನ್ ನಿಯತಕಾಲಿಕೆಗಳು ಪ್ರಾಬಲ್ಯ ಹೊಂದಿದ್ದವು. ಇವುಗಳನ್ನು ಬ್ರಿಟಿಷ್ ಸಾಮ್ರಾಜ್ಯವಾದದ ಗುಳ್ಳೆನರಿಗಳೆಂದು ವರ್ಣಿಸಿದರೆ ಅತ್ಯುಕ್ತಿಯವಾಗಿ ವರ್ಣಿಸಿದಂತೆ. ರಾಷ್ಟ್ರೀಯ ವೃತ್ತಪತ್ರಿಕೆಗಳು ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದವು ಹಾಗೂ ೧೮೭೮ರ ದೇಶೀಯ ಭಾಷೆಗಳ ಪತ್ರಿಕಾ ಕಾಯಿದೆಯಿಂದ ಕಿರುಕುಳಕ್ಕೆ ಒಳಗಾಗಿದ್ದವು. ಪೂನಾದಲ್ಲಿ ಸಾರ್ವಜನಿಕ ಅವರು ನಡೆಸುತ್ತಿದ್ದ ಇಂಗ್ಲಿಷ್ ವಾರಪತ್ರಿಕೆಯೂ

ಸೇರಿ ಅರ್ಧ ಡಜನ್ ನಿಯತಕಾಲಿಕೆಗಳಿದ್ದವು. ಆದರೆ ಈ ಪೈಕಿ ಒಂದಾದರೂ ಸತ್ತ್ವದ ದೃಷ್ಟಿಯಿಂದಾಗಲೀ ವಿಷಯದ ದೃಷ್ಟಿಯಿಂದಾಗಲೀ ವಿಶಿಷ್ಟವಾಗಿರಲಿಲ್ಲ.

ಮರುವರ್ಷದ (೧೮೮೧) ಪ್ರಾರಂಭದಿಂದ, ಇಂಗ್ಲಿಷ್‌ನಲ್ಲಿ 'ಮರಾಠ' ಮತ್ತು ಮರಾಠಿಯಲ್ಲಿ 'ಕೇಸರಿ' ಎಂಬ ಎರಡು ವಾರಪತ್ರಿಕೆಗಳನ್ನು ಒಟ್ಟಿಗೆ ಪ್ರಾರಂಭಿಸುವ ನಿರ್ಧಾರವನ್ನು ಕೈಗೊಳ್ಳಲು ಈ ತರುಣ ಯೋಧರಿಗೆ ಬಹಳ ಸಮಯ ಹಿಡಿಯಲಿಲ್ಲ. ದ್ವಿಭಾಷಿಕ ನಿಯತಕಾಲಿಕೆಗಳನ್ನು ಪ್ರಕಟಿಸುವ ಆಗಿನ ರೂಢಿ ಇದರಿಂದ ಮುರಿಯಿತು. 'ಮರಾಠ' "ಸಮಾಜದ ಮುಂದುವರೆದ ಅಂಗವನ್ನು" ಗಮನದಲ್ಲಿಟ್ಟುಕೊಂಡಿತ್ತು. 'ಕೇಸರಿ' ಸಾಮಾನ್ಯ ಜನರ ಪತ್ರಿಕೆಯಾಗಬೇಕೆಂಬ ಉದ್ದೇಶ ಹೊಂದಲಾಗಿತ್ತು. 'ಕೇಸರಿ'ಯ ಪರಿಚಯ ಪತ್ರಿಕೆಗಳಲ್ಲಿ ಹೀಗೆ ಬರೆಯಲಾಗಿತ್ತು: "ಪ್ರತಿಯೊಂದು ವಿಷಯವನ್ನೂ ನಿಷ್ಪಕ್ಷಪಾತವಾಗಿ ಮತ್ತು ನಾವು ಯಾವುದು ನಿಜ ಎಂದು ಭಾವಿಸುತ್ತೇವೋ ಅದರ ಬೆಳಕಿನಲ್ಲಿ ಚರ್ಚಿಸಲು ನಾವು ನಿರ್ಧರಿಸಿದ್ದೇವೆ. ಬ್ರಿಟಿಷ್ ಆಳ್ವಿಕೆಯಲ್ಲಿ ಮುಖಸ್ತುತಿ ಮಾಡುವ ಪ್ರವೃತ್ತಿ ನಿಸ್ಸಂಶಯವಾಗಿ ಹೆಚ್ಚಾಗುತ್ತಿದೆ. ಈ ಪ್ರವೃತ್ತಿ ಅನಪೇಕ್ಷಣೀಯವಾಗಿದೆ. ಹಾಗೂ ಜನತೆಯ ಹಿತಾಸಕ್ತಿಗಳಿಗೆ ಹಾನಿಕರವಾಗಿದೆ. ಹೊರಡಿಸಲು ಉದ್ದೇಶಿಸಿರುವ ಪತ್ರಿಕೆಯ ಲೇಖನಗಳು ಪತ್ರಿಕೆಗೆ ಕೊಟ್ಟಿರುವ ಹೆಸರಿಗೆ ತಕ್ಕಂತೆ ಇರುತ್ತವೆ."

'ಕೇಸರಿ' ಎಂಬ ಶೀರ್ಷಿಕೆಯನ್ನು ತಿಲಕರೇ ಸಲಹೆ ಮಾಡಿದ್ದರೂ. ಅಲ್ಲಿಂದೀಚೆಗೆ ಮರಾಠಿ ಭಾಷೆಯಲ್ಲಿ ಈ ಎರಡೂ ಹೆಸರುಗಳು ಪರ್ಯಾಯ ಶಬ್ದಗಳಾಗಿವೆ. ಆಗರ್ಕರ್ ಅವರು ಈ ಪತ್ರಿಕೆಯ ಮೇಲ್ವಿಚಾರಣೆಯನ್ನು ವಹಿಸಿದರು ಹಾಗೂ 'ಮರಾಠ' ಪತ್ರಿಕೆಯ ನಿರ್ವಹಣೆಯನ್ನು ತಿಲಕರು ವಹಿಸಿಕೊಂಡರು. ಸಂಪಾದಕರ ಹೆಸರನ್ನು ಮುದ್ರಿಸಬೇಕಾದ ಕಾನೂನಿನ ನಿರ್ಬಂಧ ಆಗಿರಲಿಲ್ಲ. ಹೀಗಾಗಿ ಎರಡೂ ನಿಯತಕಾಲಿಕೆಗಳು ಅವುಗಳ ಸಂಸ್ಥಾಪಕರ ಸಂಯುಕ್ತ ಜವಾಬ್ದಾರಿಯಾಗಿತ್ತು ಮತ್ತು ೧೮೮೫ರಲ್ಲಿ ಡೆಕ್ಕನ್ ಎಜುಕೇಶನ್ ಸೊಸೈಟಿಯ ಸ್ಥಾಪನೆಯೊಂದಿಗೆ ಈ ಜವಾಬ್ದಾರಿ ಅದರ ಸದಸ್ಯರ ವೈಯುಕ್ತಿಕ ಜವಾಬ್ದಾರಿಗೊಳಪಟ್ಟಿತು. ತಮಗೊಪ್ಪಿಸಿದ ಕಾನೂನು ಮತ್ತು ಧರ್ಮದ ವಿಷಯಗಳ ಬಗ್ಗೆ ಬರೆಯುವುದರ ಹೊರತಾಗಿ ತಿಲಕರು 'ಕೇಸರಿ'ಯ ನಿರ್ವಹಣೆಯಲ್ಲಿ ಯಾವ ಪಾತ್ರವನ್ನೂ ವಹಿಸಲಿಲ್ಲ.

ನ್ಯೂ ಇಂಗ್ಲಿಷ್ ಶಾಲೆಯಂತೆ ಈ ಎರಡು ನಿಯತಕಾಲಿಕೆಗಳು ತಕ್ಷಣ ಯಶಸ್ವಿಯಾದವು. ಎರಡೇ ವರ್ಷಗಳಲ್ಲಿ 'ಕೇಸರಿ' ಭಾರತೀಯ ಭಾಷಾ ಪತ್ರಿಕೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರಸಾರ ಹೊಂದಿದ ಪತ್ರಿಕೆಯಾಯಿತು. 'ಮರಾಠ' ಪತ್ರಿಕೆ ಪಶ್ಚಿಮ ಭಾರತದಲ್ಲಿ ವಿದ್ಯಾವಂತ ಅಭಿಪ್ರಾಯವನ್ನು ಪ್ರತಿನಿಧಿಸುವ ಪತ್ರಿಕೆಯಾಗಿ ಖ್ಯಾತಿ ಗಳಿಸಿತು. ಸತ್ತ್ವಪೂರ್ಣವಾದ ಮತ್ತು ತೀಕ್ಷ್ಣ ಶೈಲಿಯಲ್ಲಿ ಪ್ರಕಟಗೊಳ್ಳುತ್ತಿದ್ದ ಈ ಪತ್ರಿಕೆಗಳಿಗೆ ಪ್ರತಿಯೊಂದು ಸಾರ್ವಜನಿಕ ವಿವಾದವೂ ವಸ್ತುವಾಯಿತು. ಪ್ರೊಫೆಸರ್ ಪಿ. ಎಂ. ಲಿಮಯೆ ಈ ಪತ್ರಿಕೆಗಳ ಬಗ್ಗೆ ಹೀಗೆ ಹೇಳಿದರು:- "ಎಷ್ಟೇ ಮಾನ್ಯವಾಗಿದ್ದ ದುರುಪಯೋಗವನ್ನಾಗಲೀ. ಎಷ್ಟೇ ಆಳವಾಗಿ ಬೇರೂರಿದ್ದ ಅನ್ಯಾಯವನ್ನಾಗಲೀ ಖಂಡಿಸಲು ಅವು ಸದಾ ಸಿದ್ಧವಾಗಿದ್ದವು. ಆಗರ್ಕರ್ ಮತ್ತು ತಿಲಕರು ಎಚ್ಚರಿಕೆಗಿಂತಲೂ ಹೆಚ್ಚಾಗಿ ಉತ್ಸಾಹದಿಂದ ತಮ ಧ್ಯೇಯಾದರ್ಶಗಳನ್ನು ಎತ್ತಿ ಹಿಡಿಯುವ ಮಾರ್ಗ ಅನುಸರಿಸಿದ್ದ

ರಿಂದಲೇ ಅವರು ತಮ್ಮ ಮೊದಲ ಗಂಡಾಂತರವನ್ನು ಅನುಭವಿಸಬೇಕಾಗಿ ಬಂದಿತು."

ಅಪ್ರಾಪ್ತ ವಯಸ್ಕನಾದ ಕೊಲ್ಹಾಪುರದ ಮಹಾರಾಜನ ಸ್ಥಿತಿಯ ಬಗ್ಗೆಯೂ ಮಹಾರಾಷ್ಟ್ರದಲ್ಲಿ ಉದ್ರೇಕ ಉಂಟಾಗಿತ್ತು. ಮಹಾರಾಜನನ್ನು ದತ್ತು ತೆಗೆದುಕೊಂಡಿದ್ದ ರಾಣಿ ಆತ ಮತಿಗೆಟ್ಟವನೆಂಬ ಕಾರಣದಿಂದ ಅವನಿಗೆ ಸಿಂಹಾಸನವನ್ನು ನಿರಾಕರಿಸಲು ಪಿತೂರಿ ನಡೆಸುತ್ತಿದ್ದಾಳೆಂಬ ಆಪಾದನೆ ಇತ್ತು. ರಾಜ್ಯದ ದಿವಾನ್ ಎಂ. ವಿ. ಬರ್ವೆ ಆಕೆಗೂ, ಮಹಾರಾಜನ ಬ್ರಿಟಿಷ್ ಪಾಲಕರಿಗೂ ಈ ಪಿತೂರಿಯಲ್ಲಿ ನೆರವು, ಒತ್ತಾಸೆ ಕೊಟ್ಟಿದ್ದಾನೆಂದು ಹೇಳಲಾಗಿತ್ತು. 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳು ಈ ಆರೋಪಿತ ಪಿತೂರಿಯನ್ನು ಬಹಿರಂಗಪಡಿಸಲು ಪ್ರಮುಖ ಲೇಖನಗಳನ್ನು ಬರೆದಿದ್ದೇ ಅಲ್ಲದೆ, ಬರ್ವೆ ಬರೆದರೆಂದು ಹೇಳಲಾದ ಪತ್ರಗಳನ್ನೂ ಪ್ರಕಟಿಸಿತು ಈ ಪತ್ರಗಳು ಬರ್ವೆ ನೀಚ ಸಂಚಿನಲ್ಲಿ ಭಾಗಿಯಾಗಿರುವುದನ್ನು ಸೂಚಿಸಿದ್ದವು. 'ಧ್ಯಾನ್‌ಪ್ರಕಾಶ್'ನಂತಹ ಇತರ ಪತ್ರಿಕೆಗಳೂ ಈ ಪತ್ರಗಳನ್ನು ಪ್ರಕಟಿಸಿದವು ಹಾಗೂ ಪ್ರಭಾವೀ ವ್ಯಕ್ತಿಗಳು ಈ ಪ್ರಸಂಗವನ್ನು ಕುರಿತು ಮುಚ್ಚುಮರೆಯಿಲ್ಲದೆ ವೇದಿಕೆಗಳಿಂದ ಗುಲ್ಲೆಬ್ಬಿಸಿದರು.

ನೈತಿಕವಾಗಿ ಉಚಿತವಾದ ಅಂಶ ಕಾನೂನಿನ ರೀತ್ಯಾ ಕ್ರಮಬದ್ಧವಾಗಿರುತ್ತದೆಂದು ಹೇಳಲಾಗುವುದಿಲ್ಲ. ಬರ್ವೆ ಅನೇಕ ಪತ್ರಿಕೆಗಳು ಮತ್ತು ವ್ಯಕ್ತಿಗಳ ವಿರುದ್ಧ ಹೂಡಿದ ಮಾನನಷ್ಟ ಮೊಕದ್ದಮೆಯಲ್ಲಿ ಪತ್ರಗಳು ಖೋಟಾ ಎಂದು ತೀರ್ಮಾನವಾಯಿತು. ಪ್ರತಿವಾದಿಗಳಲ್ಲಿ ಕೆಲವರು ಕ್ಷಮೆಕೋರಿ ಶಿಕ್ಷೆಯಿಂದ ತಪ್ಪಿಸಿಕೊಂಡರಾದರೂ, ಆಗರ್ಕರ್ ಮತ್ತು ತಿಲಕರು ಅದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಜುಲೈ ೧೭, ೧೮೮೨ರಂದು ಅವರಿಬ್ಬರಿಗೆ ನಾಲ್ಕು ತಿಂಗಳ ಜೈಲುವಾಸದ ಶಿಕ್ಷೆಯನ್ನು ವಿಧಿಸಲಾಯಿತು. ಕೆಚ್ಚಿನ ತರುಣ ಸಂಪಾದಕರು "ಬ್ರಿಟಿಷ್ ಮಹಾರಾಣಿಯವರ ಅತಿಥಿಗೃಹ"ದಲ್ಲಿ ಪ್ರಥಮ ಬಾರಿಗೆ ಹೆಜ್ಜೆ ಇಟ್ಟರು. ಅಲ್ಲಿಗೆ ತಿಲಕರು ಇನ್ನೂ ದೀರ್ಘಕಾಲದ ವಾಸಕ್ಕೆ ಒಂದಕ್ಕಿಂತ ಹೆಚ್ಚು ಸಲ ಹೋಗಬೇಕಾಯಿತು. ತಿಲಕರು ತಮ್ಮ ಪ್ರಥಮ ಜೈಲುವಾಸದ ಅವಧಿಯಲ್ಲಿ ೨೪ ಪೌಂಡ್ ತೂಕ ಕಳೆದುಕೊಂಡರಾದರೂ ಅಸಹಾಯ ಮಹಾರಾಜನ ಪರವಾಗಿ ಅವರು ಹುರುಪಿನಿಂದ. ನಿಃಸ್ವಾರ್ಥದಿಂದ ವಾದಿಸಿದ್ದಕ್ಕಾಗಿ ಜನರ ಗೌರವವನ್ನೂ ಗಳಿಸಿದರು. ಮಹಾರಾಜ ನಂತರ ಸಂಶಯಾಸ್ಪದ ಪರಿಸ್ಥಿತಿಗಳಲ್ಲಿ ತೀರಿಕೊಂಡ. ತಿಲಕರು ಮತ್ತು ಆಗರ್ಕರ್ ಬಿಡುಗಡೆಯಾದಾಗ ಜೈಲಿನ ಬಾಗಿಲುಗಳಲ್ಲಿ ನೂರಾರು ಜನರು ಸೇರಿದ್ದರು. ತಮ್ಮ ಜೈಲು ಜೀವನದ ಬಗ್ಗೆ ಆಗರ್ಕರರು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಜೈಲು ಅವರಿಗೆ ಆಶ್ರಮವಾಗಿರದಿದ್ದರೂ, ಆಗಾಗಲೇ ಅವರು ಗುರುತಿಸಿದ್ದ ರೀತಿಗಳಲ್ಲಿ ದೇಶಸೇವೆ ಮಾಡುವ ಅವರ ನಿಷ್ಠೆಯು ಈ ಜೈಲುವಾಸದಿಂದ ದೃಢವಾಯಿತು.

ಅಧ್ಯಾಯ 3

ಶಿಕ್ಷಣ ತಜ್ಞ

ವಿಷ್ಣುಶಾಸ್ತ್ರಿ ಚಿಪ್ಳೂಣಕರ್‌ರ ಸಾವಿನಿಂದಾಗಲಿ, ತಿಲಕ್ ಮತ್ತು ಆಗರ್ಕರರ ಜೈಲು ವಾಸದಿಂದಾಗಲಿ ನ್ಯೂ ಇಂಗ್ಲಿಷ್ ಶಾಲೆಗೆ ತೊಂದರೆಯಾಗಲಿಲ್ಲ. ಅಕ್ಟೋಬರ್ ೧೨, ೧೮೮೨ರಂದು ಅವರಿಬ್ಬರೂ ತಮ್ಮ ಕಾರ್ಯವನ್ನು ಪುನಃ ಪ್ರಾರಂಭಿಸಿದಾಗ, ಶಾಲೆಯ ಜನಪ್ರಿಯತೆ ಕಡಿಮೆಯಾಗುವುದಂತಿರಲಿ, ಸಾರ್ವಜನಿಕ ಒಳಿತಿಗೋಸ್ಕರ ಅವರು ಅನುಭವಿಸಿದ ನೋವು, ಕಷ್ಟಗಳಿಂದ ಅದು ಮತ್ತಷ್ಟು ಹೆಚ್ಚಾಗಿರುವುದನ್ನು ಕಂಡು ಬಹಳ ಸಮಾಧಾನಪಟ್ಟರು. 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳೂ ಚೆನ್ನಾಗಿಯೇ ನಡೆದಿದ್ದವು. ಈ ಇಬ್ಬರು ತರುಣರು ನವೋತ್ಸಾಹದಿಂದ ಕಾರ್ಯಪ್ರವೃತ್ತರಾದರು. ಅವರ ದೃಷ್ಟಿಗಳು ವಿಶಾಲಗೊಂಡಿದ್ದವು. ಸಾಮಾಜಿಕ ಸುಧಾರಣೆಯ ಬಗ್ಗೆ ಅವರ ಭಿನ್ನಾಭಿಪ್ರಾಯಗಳು ಅವರ ಪತ್ರಿಕೆಗಳಲ್ಲಿ ಆಗಾಗ ಹೊರಹೊಮ್ಮಿದರೂ ಅವರ ಸ್ನೇಹದ ಬಂಧಗಳು ದೃಢವಾಗಿಯೇ ಉಳಿದವು.

ಶಾಲೆಗೆ ಒಂದು ಗಟ್ಟಿಯಾದ ಆಧಾರವನ್ನು ಒದಗಿಸುವುದಕ್ಕೆ ಹಾಗೂ ಮುಂದಿನ ಹೆಜ್ಜೆಯಾಗಿ ಒಂದು ಆರ್ಟ್ಸ್ ಕಾಲೇಜನ್ನು ಸ್ಥಾಪಿಸುವುದಕ್ಕೆ ಅವರು ತಕ್ಷಣ ಗಮನ ಕೊಡಬೇಕಾಗಿತ್ತು. ಆ ಉದ್ದೇಶಕ್ಕೆ ಕ್ರೈಸ್ತ ಧಾರ್ಮಿಕ ಸಂಸ್ಥೆಗಳ ಮಾದರಿಯಲ್ಲಿ ಶಿಕ್ಷಣ ಸಂಘವೊಂದನ್ನು ಸ್ಥಾಪಿಸುವ ವಿಚಾರ ಅವರಲ್ಲಿ ಮೊದಲಿನಿಂದಲೂ ಇತ್ತು. ಆದರೆ ಈ ವಿಚಾರ ಮೊದಲ ಬಾರಿಗೆ ಶಾಲೆಯ ೧೮೮೩ರ ವಾರ್ಷಿಕ ವರದಿಯಲ್ಲಿ ಸಾರ್ವಜನಿಕವಾಗಿ ವ್ಯಕ್ತಪಟ್ಟಿತು. ವರದಿಯಲ್ಲಿ ಹೀಗೆ ಹೇಳಲಾಗಿತ್ತು: "ಮಾನವ ನಾಗರಿಕತೆಯ ಎಲ್ಲ ಸಾಧನಗಳಲ್ಲಿ ವಿದ್ಯಾಭ್ಯಾಸ ಮಾತ್ರವೇ ಅಧೋಗತಿಗಿಳಿದ ದೇಶಗಳ ಸಾಂಪತ್ತಿಕ, ನೈತಿಕ ಮತ್ತು ಧಾರ್ಮಿಕ ಪುನರುತ್ಥಾನವನ್ನು ಮಾಡುತ್ತದೆ ಹಾಗೂ ನಿಧಾನವಾದ ಮತ್ತು ಶಾಂತಿಯುತವಾದ ಕ್ರಾಂತಿಯಿಂದ ಅವುಗಳನ್ನು ಅತ್ಯಂತ ಮುಂದುವರೆದ ದೇಶಗಳ ಮಟ್ಟಕ್ಕೆ ಏರಿಸುತ್ತದೆ ಎಂಬ ಅತ್ಯಂತ ದೃಢವಾದ ನಿಶ್ಚಯ ಮತ್ತು ನಂಬಿಕೆಯಿಂದ ಜನಾದರಣೀಯವಾದ ಈ ಶಿಕ್ಷಣ ಕಾರ್ಯವನ್ನು ನಾವು ಕೈಗೊಂಡಿದ್ದೇವೆ."

ಒಂದು ಸಂಘವನ್ನು ಸ್ಥಾಪಿಸಲೂ, ಟ್ರಸ್ಟಿಗಳ ಮಂಡಳಿಯನ್ನು ಚುನಾಯಿಸಲೂ ಅಕ್ಟೋಬರ್ ೨೪, ೧೮೮೪ರಂದು ಈ ವಿಚಾರದ ಬಗ್ಗೆ ಒಲವಿದ್ದವರು ನಡೆಸಿದ ಸಭೆ, ಈ ದಿಸೆಯಲ್ಲಿ ಕೈಗೊಂಡ ವಾಸ್ತವಿಕ ಕ್ರಮವಾಗಿತ್ತು. ಸಭೆಯಲ್ಲಿ ಭಾಗವಹಿಸಿದವರಲ್ಲಿ, ಮಹದೇವ ಗೋವಿಂದ ರಾನಡೆ, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸಂಸ್ಥಾಪಕರಲ್ಲೊಬ್ಬರಾದ ಸರ್ ವಿಲಿಯಂ ವೆಡ್ಡೆರ್‌ಬರ್ನ್. ಡಾ। ಆರ್. ಜಿ. ಭಂಡಾರ್ಕರ್, ಪ್ರೊಫೆಸರ್ ವರ್ಡ್ಸ್‌ವರ್ತ್ ಮತ್ತು ಕೆ. ಟಿ. ತೆಲಂಗ್ ಇದ್ದರು. ತರುಣರ ಸಾಮರ್ಥ್ಯ ಮತ್ತು ಉತ್ಸಾಹ ಸಾರ್ವಜನಿಕ ಪ್ರಶಂಸೆಯನ್ನಷ್ಟೇ ಅಲ್ಲದೆ. ಸರ್ಕಾರದ ಸಕ್ರಿಯ ಸಹಾನುಭೂತಿಯನ್ನೂ ಗಳಿಸಿತು.

ಹೀಗೆ ಡೆಕ್ಕನ್ ಎಜುಕೇಶನ್ ಸೊಸೈಟಿ ಅತ್ಯಂತ ಶುಭಾಕಾಂಕ್ಷೆಯ ಗಳಿಗೆಯಲ್ಲಿ ಜನ್ಮತಾಳಿತು. ಈ ಸಂಸ್ಥೆಯ ಪೋಷಕರಲ್ಲಿ ವೈಸ್‌ರಾಯ್. ಮಾರ್ಕ್ವೀಸ್ ಆಫ್ ರಿಪನ್ ಮತ್ತು ಮುಂಬೈನ ಗವರ್ನರಾ ಸರ್ ಜೇಮ್ಸ್ ಫರ್ಗ್ಯೂಸನ್ ಅವರಿದ್ದರು. ಇವರ ಮೇಲ್ಪಂಕ್ತಿಯನ್ನು ಅನೇಕ ಅರಸರು ಅನುಸರಿಸಿದರು. ಕಾಲೇಜ್‌ನ ಕಟ್ಟಡ ನಿಧಿಗೆ ೭೫,೦೦೦ ರೂ.ಗಳ ಮೌಲ್ಯದ ದೇಣಿಗೆಗಳನ್ನು ಕೊಡುವುದಾಗಿ ಆ ವರ್ಷ ಮುಗಿಯುವುದಕ್ಕೆ ಮೊದಲೇ ಭರವಸೆಗಳನ್ನು ನೀಡಲಾಯಿತು. ಕಾಲೇಜ್‌ಗೆ ಸರ್ ಜೇಮ್ಸ್ ಫರ್ಗುಸನ್ ಅವರ ಹೆಸರನ್ನಿಡಲಾಯಿತು. ಪೂನಾದ ಗದ್ರೆವಾಡಾದಲ್ಲಿ ಕಾಲೇಜ್ ಜನವರಿ ೨, ೧೮೮೫ರಂದು ಪ್ರಾರಂಭವಾಯಿತು.

ಒಂದು ದೊಡ್ಡ ಆರಳಿ ಮರದಂತೆ ಡೆಕ್ಕನ್ ಎಜುಕೇಶನ್ ಸೊಸೈಟಿ ತನ್ನ ಶಾಖೆ ಗಳನ್ನು ಮಹಾರಾಷ್ಟ್ರದಾದ್ಯಂತ ಹರಡಿದೆ. ಅನೇಕ ಶಾಲೆ ಮತ್ತು ಕಾಲೇಜ್‌ಗಳನ್ನು ನಡೆಸುತ್ತಿರುವ ಇಂತಹ ಸಂಸ್ಥೆಗಳ ಪೈಕಿ ಇದೇ ಪ್ರಧಾನ ಸಂಸ್ಥೆಯಾಗಿ ಉಳಿದಿದೆ ಹಾಗೂ ಇದು ಹಾಕಿಕೊಟ್ಟ ಉದಾಹರಣೆಯನ್ನು ಎಲ್ಲೆಲ್ಲೂ ಅನುಕರಿಸಲಾಗಿದೆ. ಲಾಲಾ ಲಜಪತ್‌ರಾಯ್ ಅವರ ಹೇಳಿಕೆಯಂತೆ ಆರ್ಯ ಸಮಾಜವೂ ಸಹ ಡೆಕ್ಕನ್ ಎಜುಕೇಶನ್ ಸೊಸೈಟಿಯಿಂದ ಸ್ಫೂರ್ತಿ ಪಡೆಯಿತು.

ಫರ್ಗುಸನ್ ಕಾಲೇಜ್‌ಗೆ ಮುಂಬೈ ವಿಶ್ವವಿದ್ಯಾನಿಲಯ ಪ್ರಾರಂಭದಲ್ಲಿ ನೀಡಿದ ಮಾನ್ಯತೆ ಅದರ ಮೊದಲನೆಯ ಪಠ್ಯ ವರ್ಷಕ್ಕೆ ಮಾತ್ರ ಸೀಮಿತವಾಗಿದ್ದರೂ. ಕಾಲೇಜ್‌ನ ಯಶಸ್ಸು ಖಾತ್ರಿಯಾಗಿತ್ತು. ಕಾಲೇಜ್‌ನ ಮೂಲ ಆಜೀವ ಸದಸ್ಯರು ಪ್ರತಿಭಾವಂತ ಪ್ರೊಫೆಸರುಗಳಾಗಿದ್ದರು. ಮೊದಲನೆಯ ಪ್ರಿನ್ಸಿಪಾಲ್ ಆಗಿದ್ದ ಆಪ್ಟೆ ಸಂಸ್ಕೃತವನ್ನೂ. ತಿಲಕರು ಗಣಿತ ಶಾಸ್ತ್ರವನ್ನೂ. ಆಗರ್ಕರ್ ಇತಿಹಾಸ ಮತ್ತು ತರ್ಕಶಾಸ್ತ್ರವನ್ನೂ. ಕೇಲ್ಕರ್ ಇಂಗ್ಲಿಷನ್ನೂ ಮತ್ತು ಗೋಖಲೆ ಭೌತವಿಜ್ಞಾನವನ್ನೂ ಬೋಧಿಸಿದರು. ರಾಷ್ಟ್ರಪ್ರೇಮ. ತ್ಯಾಗಭಾವನೆಯಿಂದ ಪ್ರೇರಿತಗೊಂಡ ಇತರ ತರುಣರೂ ಇವರನ್ನು ಕೂಡಿಕೊಳ್ಳುವುದರಲ್ಲಿ ತಡಮಾಡಲಿಲ್ಲ. ಈ ಪೈಕಿ ಅತ್ಯಂತ ಪ್ರಮುಖರಾದವರೆಂದರೆ ಗೋಪಾಲಕೃಷ್ಣ ಗೋಖಲೆ.

ಸಾಮಾನ್ಯ ವಿದ್ಯಾರ್ಥಿಗೆ ತಿಲಕರ ಪ್ರವಚನಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿ ಕಂಡುಬಂದರೂ. ಫರ್ಗುಸನ್ ಕಾಲೇಜಿನ ಪ್ರಥಮ ತಂಡಕ್ಕೆ ಸೇರಿದ ಖ್ಯಾತ ಇತಿಹಾಸಕಾರ ಜಿ. ಎಸ್. ಸರ್ದೇಸಾಯಿ ಉಪಾಧ್ಯಾಯ ತಿಲಕರ ಬಗ್ಗೆ ಗೌರವದಿಂದ ಹೀಗೆ ಹೇಳಿದ್ದಾರೆ:

"ಪರಿವರ್ತನ ಮತ್ತು ಸಂಯೋಜನವನ್ನು ಕಲಿಸುವಾಗ ತಿಲಕರು ದೈನಂದಿನ ಜೀವನದಿಂದ ದೃಷ್ಟಾಂತಗಳನ್ನು ನೀಡಿ ಪಠ್ಯ ವಿಷಯದಲ್ಲಿ ಬಹಳ ಆಸಕ್ತಿ ಮೂಡಿಸು ತ್ತಿದ್ದರು. ಸೂಕ್ಷ್ಮ ವಿಷಯಗಳನ್ನು ಅವರು ಗಮನಿಸುತ್ತಿದ್ದ ರೀತಿಯಿಂದ ನಮ್ಮ ಮೇಲೆ ಬಹಳ ಪ್ರಭಾವ ಉಂಟಾಯಿತು. ವಿದ್ಯಾರ್ಥಿಗಳ ತೊಂದರೆಗಳನ್ನು ಬಗೆಹರಿಸಲು ಅವರೆಂದೂ ಹಿಂದೆಮುಂದೆ ನೋಡುತ್ತಿರಲಿಲ್ಲ. ಕಾಲೇಜ್ ಮುಗಿದನಂತರ ಮನೆಗೆ ಹೋಗುವಾಗ ಅವರು ವಿದ್ಯಾರ್ಥಿಗಳ ಸಂಗಡ ನಡೆದುಹೋಗುತ್ತಿದ್ದರು. ಆಗ ಅನೇಕ ವಿಷಯಗಳ ಬಗ್ಗೆ ಅವರೊಂದಿಗೆ ಚರ್ಚಿಸುತ್ತಿದ್ದರು. ಯಾವುದೇ ವಿಷಯದ ಮೇಲೆ

ಮಾತನಾಡುವಾಗಲೂ ಅವರು ಸಭಿಕರೊಂದಿಗೆ ಸುಲಭವಾಗಿ ತಾದಾತ್ಮ್ಯಹೊಂದು ತ್ತಿದ್ದರು. ಅವರು ಸಮಾಧಾನವನ್ನು ಕಳೆದುಕೊಂಡಿದ್ದನ್ನು ನಾವೆಂದೂ ನೋಡಲಿಲ್ಲ. ಅವರ ತರಗತಿಯಲ್ಲಿ ಎಂದೂ ಹುಡುಗಾಟಿಕೆ ನಡೆದದ್ದಿಲ್ಲ."

ಫರ್ಗ್ಯುಸನ್ ಕಾಲೇಜ್ ಎಷ್ಟು ಚೆನ್ನಾಗಿ ಪ್ರಗತಿ ಹೊಂದಿತ್ತೆಂದರೆ ಹಾಗೂ ಸಾರ್ವಜನಿಕರು ಮತ್ತು ಸರ್ಕಾರದ ಮೇಲೆ ಡೆಕ್ಕನ್ ಎಜುಕೇಶನ್ ಸೊಸೈಟಿ ಎಂತಹ ಸತ್ಪ್ರಭಾವ ಬೀರಿತ್ತೆಂದರೆ, ಸರ್ಕಾರ ನಡೆಸುತ್ತಿದ್ದ ಡೆಕ್ಕನ್ ಕಾಲೇಜ್‌ನ ಆಡಳಿತವನ್ನು ಸೊಸೈಟಿ ವಹಿಸಿಕೊಳ್ಳಬೇಕೆಂದೂ, ಅದನ್ನು ಫರ್ಗ್ಯುಸನ್ ಕಾಲೇಜ್‌ನೊಂದಿಗೆ ವಿಲೀನ ಗೊಳಿಸಬೇಕೆಂದೂ ಸರ್ಕಾರ ೧೮೮೭ರಲ್ಲಿ ಸಲಹೆ ಮಾಡಿತು. ಇದರಿಂದ ಸೊಸೈಟಿಯ ಆಜೀವ ಸದಸ್ಯರಿಗೆ ನಿಸ್ಸಂಶಯವಾಗಿ ಹೆಮ್ಮೆ ಆಗಿರಬೇಕು. ಈ ಸಲಹೆಯೊಂದಿಗೆ ವಿಚಿತ್ರ ಷರತ್ತುಗಳನ್ನು ಹಾಕದಿದ್ದಲ್ಲಿ ಸಲಹೆಯನ್ನು ಅಂಗೀಕರಿಸುವ ಬಗ್ಗೆ ಅವರ ಮನಸ್ಸು ಓಲಬಹುದಿತ್ತು. ಇಬ್ಬರು ಐರೋಪ್ಯ ಪ್ರೊಫೆಸರುಗಳನ್ನು ಅವರು ಪಡೆಯು ತ್ತಿದ್ದ ವೇತನಗಳೊಂದಿಗೆ ಸಿಬ್ಬಂದಿಯಲ್ಲಿ ಉಳಿಸಿಕೊಳ್ಳಬೇಕೆಂಬುದು ಷರತ್ತುಗಳಲ್ಲಿ ಸೇರಿತ್ತು. ಈ ಸಲಹೆಯನ್ನು ತಿರಸ್ಕರಿಸಿದ್ದರ ಪರಿಣಾಮವಾಗಿ ಮುಂಬೈ ಸರ್ಕಾರ ಕೆರಳಿ ನೀಡುತ್ತಿದ್ದ ವರ್ಷಕ್ಕೆ ೩,೦೦೦ ರೂಪಾಯಿಗಳ ಸಹಾಯಧನವನ್ನು ನಿಲ್ಲಿಸಿತು. "ಪೂನಾ ದಲ್ಲಿ ಹಣವನ್ನು ಹಾಳು ಮಾಡಲಾಗುತ್ತಿದೆ. ಈ ಹಣ ಪ್ರಾಂತ್ಯದಾದ್ಯಂತ ಪ್ರಾಥಮಿಕ, ಪ್ರೌಢ ಮತ್ತು ತಾಂತ್ರಿಕ ಶಾಲೆಗಳಿಗೆ ತುರ್ತಾಗಿ ಬೇಕಾಗಿದೆ" ಎಂಬ ಕಾರಣದಿಂದ ಈ ಕ್ರಮವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಲಾಯಿತು.

ಕಾಲೇಜ್ ಮತ್ತು ಸೊಸೈಟಿ ಪ್ರಶಂಸಾರ್ಹ ಪ್ರಗತಿಯನ್ನು ಗಳಿಸುತ್ತಿದ್ದಾಗ, ಆಜೀವ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ವಾತಾವರಣದಲ್ಲಿ ಮೋಡ ಕವಿಯಲು ಪ್ರಾರಂಭವಾಯಿತು. ಸಾಮಾಜಿಕ ಸುಧಾರಣೆಯ ವಿಷಯದಲ್ಲಿ ತಿಲಕ್ ಮತ್ತು ಆಗರ್ಕರರ ಅಭಿಪ್ರಾಯಗಳು ಬೇರೆ ಬೇರೆಯಾಗಿದ್ದುದನ್ನು ಈಗಾಗಲೇ ಹಿಂದೆ ಹೇಳಿದೆ. ತಿಲಕರಿಗೆ ನಿಜವಾಗಿ ಹೆಚ್ಚಿನ ಬೇಸರವನ್ನುಂಟುಮಾಡಿದ ವಿಷಯವೆಂದರೆ, ಇತರ ಮೂಲಗಳಿಂದ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಸಹೋದ್ಯೋಗಿಗಳ ಪ್ರವೃತ್ತಿ. ಈ ಪ್ರವೃತ್ತಿಯಿಂದ ತಮ್ಮ ಧಾರ್ಮಿಕ ಪ್ರತಿಜ್ಞೆಯ ಉಲ್ಲಂಘನೆಯಾಗಿದೆ ಯೆಂದೂ, ಸಂಸ್ಥೆಯ ಹಿತಾಸಕ್ತಿಗಳಿಗೆ ಧಕ್ಕೆಯಾಗಿದೆಯೆಂದೂ ಅವರ ಅಭಿಪ್ರಾಯ ವಾಗಿತ್ತು. ಸ್ವಯಂ ತ್ಯಾಗದ ಶಪಥವನ್ನು ತಮ್ಮ ಸಹೋದ್ಯೋಗಿಗಳು ಮುರಿದಿದ್ದಾರೆಂಬ ತಿಲಕರ ಪ್ರತಿಭಟನೆಯ ಧ್ವನಿ ಏರುತ್ತಿದ್ದಂತೆ, ಆಜೀವ ಸದಸ್ಯರ ನಡುವೆ ಉಂಟಾಗಿದ್ದ ವೈಮನಸ್ಯ ಹೆಚ್ಚಾಗಲು ಪ್ರಾರಂಭವಾಯಿತು. ಕಾಲೇಜ್‌ನ ಹೊರಗಡೆ ಕೆಲಸ ಮಾಡು ತ್ತಿದ್ದ ಆಜೀವ ಸದಸ್ಯರ ಸಂಖ್ಯೆ ಅಲ್ಪವಾಗಿರಲಿಲ್ಲ ಎಂಬುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಈಗಿನಂತೆ ಆಗಲೂ ಅನೇಕ ಪ್ರೊಫೆಸರುಗಳು ಪಠ್ಯಪುಸ್ತಕಗಳನ್ನು ಬರೆಯುವ ದೌರ್ಬಲ್ಯವನ್ನು ಹೊಂದಿದ್ದರು. ಮೊದಲು ನಿಗದಿ ಮಾಡಿದ್ದ ೭೫ ರೂಪಾಯಿಗಳ ತಿಂಗಳ ಸಂಬಳವನ್ನು ಹೆಚ್ಚು ಮಾಡಬೇಕೆಂದೂ ೩,೦೦೦ ರೂಪಾಯಿಗಳ ವಿಮಾ ಪಾಲಿಸಿ ಕೊಡ ಬೇಕೆಂದೂ ಬಲವಾದ ಬೇಡಿಕೆಯ ಕೂಗು ಎದ್ದಿತ್ತು. ತಿಲಕರು ಈ ಪ್ರವೃತ್ತಿಯನ್ನು ಅಪಹಾಸ್ಯ ಮಾಡಿ ಹೀಗಳೆದರು:

"ಪರಿಸ್ಥಿತಿ ನಿರಾತಂಕವಾದ ಕೂಡಲೇ ೧೮೮೧–೮೨ರ ರಾಷ್ಟ್ರಪ್ರೇಮಿ ನಿಲುವಿನ ಬಗ್ಗೆ ತಿರಸ್ಕಾರದಿಂದ ಮಾತನಾಡಲಾಯಿತು...... ವಿಮಾ ಪಾಲಿಸಿಯ ಬಗ್ಗೆ ಅಪನಂಬಿಗೆಯು ಅಥವಾ ಕುಟುಂಬದ ಬೆಳೆಯುತ್ತಿರುವ ಬೇಡಿಕೆಗಳ ಕಾರಣ ನೀಡಿ. ನಮ್ಮನ್ನು ನಾವೇ ಸಮರ್ಥಿಸಿಕೊಳ್ಳುತ್ತಾ. ಇನ್ನೂ ಹೆಚ್ಚು ಬೇಕೆಂದು ನಾವು ಹಾತೊರೆದೆವು. ಈ ಕೂಗು ಪ್ರಿಯವಾಗತೊಡಗಿತು. ಅದು ಹಾಗಾಗಬೇಕಾದದ್ದೇ. ಆದರಲ್ಲೂ ಅನಂತರ ಬಂದ ಆಜೀವ ಸದಸ್ಯರ ಪ್ರಕರಣದಲ್ಲಿ ಅದು ಇನ್ನಷ್ಟು ಪ್ರಿಯವಾಯಿತು. ನಾವು ತ್ಯಾಗದ ತತ್ತ್ವವನ್ನೂ ಏಕೆ ಮತ್ತು ಹೇಗೆ ಅಂಗೀಕರಿಸಿದೆವು ಎಂಬುದನ್ನು ಈ ಹೊಸ ಸದಸ್ಯರು ಅಸ್ಪಷ್ಟವಾಗಿ ಗ್ರಹಿಸಿದ್ದಾರೆ. ಈ ವಾಸ್ತವಾಂಶಗಳನ್ನು ಮುಂದಿಟ್ಟುಕೊಂಡು ಜೆಸ್ಯೂಟರು ಎಂದು ಕರೆಸಿಕೊಳ್ಳಲು ನಾವಿನ್ನೂ ಹೇಗೆ ಇಷ್ಟಪಡುತ್ತೇವೆ ಎಂಬುದು ಮಾತ್ರ ನನಗೆ ಆಶ್ಚರ್ಯವಾಗುತ್ತದೆ. ಜೆಸ್ಯೂಟ್ ತತ್ತ್ವದ ಬಲವನ್ನು ಅಳೆಯಲು ನಾನು ಪ್ರಯತ್ನಿಸಿದ್ದೇನೆ ಹಾಗೂ ಅದನ್ನು ಅಲ್ಪಸಂಖ್ಯಾತರಲ್ಲಿ ನಾನು ಕಂಡಿದ್ದೇನೆ ಎಂದು ಹೇಳಲು ನನಗೆ ವಿಷಾದವಾಗುತ್ತಿದೆ."

ಅಲ್ಪಸಂಖ್ಯಾತರು ಒಬ್ಬರೇ ಒಬ್ಬರಾಗಿದ್ದರು–ಋಜುತೆಯ ಬಗ್ಗೆ ತಿಲಕರು ಹೊಂದಿದ್ದ ಹಠ ಬೇರೆ ಯಾವ ಸದಸ್ಯರಲ್ಲೂ ಇರಲಿಲ್ಲ. ಅವರ ಶತ್ರುಗಳು ಆಗ ಹೇಳಿದಂತೆ, ತಮ್ಮ ಸಹೋದ್ಯೋಗಿಗಳು ದೋಷಿಗಳೆಂದು ತೋರಿಸಲು ತಿಲಕರು ಪ್ರಾಮಾಣಿಕತೆಯ ಪೀಠದ ಮೇಲೆ ಕೂಡಲು ಪ್ರಯತ್ನಿಸಿದ್ದಿರಲೂ ಬಹುದು. ೧೮೮೮ರಲ್ಲಿ ಹೋಳ್ಕರ್ ಸಹಾಯಧನವನ್ನು ಹಂಚಿಕೊಳ್ಳುವ ಬಗ್ಗೆ ತಿಲಕರೊಂದಿಗೆ ತೀವ್ರ ವಾದ ಮಾಡಿದ್ದ ಆಗರ್ಕರರಂತೂ ಜೆಸ್ಯೂಟ್ ತತ್ತ್ವಗಳು ಮತ್ತು ಆಚರಣೆಗಳ ಬಗ್ಗೆ ತಿಲಕರು ಪದೇ ಪದೇ ಪ್ರಸ್ತಾಪಿಸುತ್ತಿದ್ದುದರಿಂದ ಬೇಸರಗೊಂಡಿದ್ದರು. ಹಾಗೂ ಅವುಗಳನ್ನು ಬಹಿರಂಗವಾಗಿ ಜರೆದರು:

"ಜೆಸ್ಯೂಟ್ ಸಂಸ್ಥೆ ನಾಗರಿಕತೆ ಹಾಗೂ ವಿಶ್ವಕ್ಕೇ ಕೆಡುಕಿಗಿಂತಲೂ ಹೆಚ್ಚು ಒಳಿತನ್ನು ಮಾಡಿದೆ ಎಂಬುದು ಹೆಚ್ಚು ಸಂಶಯಾಸ್ಪದವಾಗಿಯೇ ಆಗಿದೆ. ಆದ್ದರಿಂದ ಅದರ ಶಿಸ್ತಿನಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡದೆ ಅದನ್ನು ಯಾರೂ ಅನುಕರಿಸಲಾಗದು. ಏಕೆಂದರೆ ಯಾವ ಜೆಸ್ಯೂಟನೂ ವಿವಾಹಿತನಲ್ಲ: ಯಾವ ಜೆಸ್ಯೂಟನೂ ಖಾಸಗಿ ಆಸ್ತಿಹೊಂದಿಲ್ಲ: ಖಾಸಗಿ ಆಸ್ತಿ ಹೊಂದುವುದಕ್ಕೆ ಅವನಿಗೆ ಅನುಮತಿಯೂ ಇಲ್ಲ: ಜೆಸ್ಯೂಟರಿಗೆ ಸಾಮಾನ್ಯ ಗುರಿ ಇದೆ ಹಾಗೂ ಅವರು ಒಂದೇ ಮನೆಯಲ್ಲಿರುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಅವರು ಧಾರ್ಮಿಕ ಸಂಸ್ಥೆಯೊಂದಕ್ಕೆ ಸೇರಿದವರು ಹಾಗೂ ಅಲ್ಲಿ ಸ್ವತಂತ್ರ ವಿಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ."

ಹೀಗಾಗಿ ೧೮೮೭ರಿಂದ ೧೮೯೦ರ ಸೊಸೈಟಿಯ ದಾಖಲೆಗಳು. "ಈ ಇಬ್ಬರು ಸಹಯೋಧರ ನಡುವೆ ಆದ ಹೊಡೆದಾಟಗಳು. ಕಾದಾಟಗಳು. ಪಟ್ಟು ಹಿಡಿದ ಹೋರಾಟಗಳಿಂದ" ತುಂಬಿರುವುದರಲ್ಲಿ ಆಶ್ಚರ್ಯವಿಲ್ಲ. ತಮ್ಮ ಸಹೋದ್ಯೋಗಿಗಳು ಬೇರೆಡೆ ಹಣಗಳಿಸುವ ಔಚಿತ್ಯದ ಬಗ್ಗೆ ತಿಲಕರು ಹೊಂದಿದ್ದ ಶಂಕೆಯ ಸಮರ್ಥನೆ ಏನೇ ಇರಲಿ. ಗೌರವಾರ್ಥ ಸಾರ್ವಜನಿಕ ಸೇವೆಯನ್ನು ಅವರು ಮಾಡುವುದಕ್ಕೂ ತಿಲಕರು ಆಕ್ಷೇಪಿಸಿದ್ದು ನಿಸ್ಸಂಶಯವಾಗಿ ಅತಿಯಾಯಿತು. ಪ್ರತಿ ದಿನ ಎರಡು. ಮೂರು ಗಂಟೆಗಳ

ಕೆಲಸವಿದ್ದ ಸಾರ್ವಜನಿಕ ಸಭಾದ ಕಾರ್ಯದರ್ಶಿ ಸ್ಥಾನವನ್ನು ಒಪ್ಪಿಕೊಳ್ಳುವ ತಮ್ಮ ಇಚ್ಛೆಯನ್ನು ಗೋಖಲೆಯವರು ತಿಳಿಸಿದಾಗ ವಿಷಯ ಬಿಕ್ಕಟ್ಟಿಗೆ ಬಂದಿತು. "ಶಕ್ತಿ ಹೀಗೆ ಬೇರೆ ದಿಕ್ಕಿನಲ್ಲಿ ಹರಿಯುವುದಕ್ಕೆ" ತಿಲಕರು ನಿಷ್ಠುರವಾಗಿ ಆಕ್ಷೇಪಿಸಿದರು. ಹಾಗೂ ಈ ಹಿಂದೆ ಕಾರ್ಯದರ್ಶಿ ಸ್ಥಾನವನ್ನು ತಾನೇ ನಿರಾಕರಿಸಿದ್ದನ್ನು ಒತ್ತಿ ಹೇಳಿದರು. ತನ್ನ ನೌಕರರು ಬೇರೆ ಕೆಲಸ ಮಾಡುವುದನ್ನು ನಿಷೇಧಿಸುವ ಸರ್ಕಾರದ ರೀತಿಯನ್ನು ಅವರು ಉದಾಹರಿಸಿದರು.

ತರ್ಕ ತಮ್ಮ ಕಡೆಗಿದ್ದ ಈ ವಾದದಿಂದ ತೃಪ್ತರಾಗದೆ, ಗೌರವಾರ್ಥ ಸಾರ್ವಜನಿಕ ಸೇವೆಯ ಮಟ್ಟಿಗೆ ತಿಲಕರ ಸ್ವಂತ ನಡೆವಳಿಕೆ ಕೆಲವೊಮ್ಮೆ ತಮ್ಮ ವೃತ್ತಿಯಿಂದ ಬೇರೆಯಾಗಿದ್ದರೂ. ಗೋಖಲೆಯವರ ಮನಸ್ಸನ್ನು ಅನಾವಶ್ಯಕವಾಗಿ ನೋಯಿಸಿದರು:

"ಫರ್ಗುಸನ್ ಕಾಲೇಜ್‌ನಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೊಫೆಸರರ ಕರ್ತವ್ಯಗಳಲ್ಲಿ ಶ್ರೀ ಗೋಖಲೆಯವರ ಶಕ್ತಿಯ ವಿನಿಯೋಗಕ್ಕೆ ಇನ್ನೂ ಸಾಕಷ್ಟು ಅವಕಾಶವಿತ್ತು. ಇತರ ಕಾಲೇಜ್‌ಗಳೊಂದಿಗೆ ಸ್ಪರ್ಧಿಸಲು ನಾವು ಇಚ್ಛಿಸಿದ್ದೇ ಆದರೆ, ನಾವು ಮೊದಲಿನಂತೆ ಓದಿನಲ್ಲಿ, ಕೆಲಸದಲ್ಲಿ ಹಿಂದೆ ಬಿದ್ದಿಲ್ಲ ಎಂಬುದನ್ನಾದರೂ ನಾವು ತೋರಿಸಬೇಕು."

ಸಾರ್ವಜನಿಕ ಸಭಾದ ಕಾರ್ಯದರ್ಶಿ ಸ್ಥಾನವನ್ನು ಗೋಖಲೆಯವರು ಒಪ್ಪಿಕೊಂಡಾಗ ಬಿಕ್ಕಟ್ಟು ವಿಷಮಿಸಿತು. ಈ ಪ್ರಶ್ನೆಯನ್ನು ಪುನಃ ಎತ್ತಲು ತಿಲಕರು ಮಾಡಿದ ಪ್ರಯತ್ನಗಳಿಂದ ಆದ ಪರಿಣಾಮವೇನೆಂದರೆ. ಸೊಸೈಟಿಯ ಮಂಡಳಿ ಅವರ ವಿರುದ್ಧ ಖಂಡನೆಯ ಮತ ನೀಡಿತು. ತಿಲಕರು ತಮ್ಮ ರಾಜೀನಾಮೆಯನ್ನು ಅಕ್ಟೋಬರ್ ೧೪, ೧೮೯೦ರಂದು ಕಳಿಸಿದರು. ರಾಜೀನಾಮೆ ಐದು ತಿಂಗಳ ನಂತರ ಜಾರಿಗೆ ಬಂದಿತು. "ಆಡಳಿತ ಸಮಿತಿಯ ಸದಸ್ಯರ ಮೇಲೆ ತಿಲಕರು ಅಪ್ರಾಮಾಣಿಕತೆಯನ್ನು ಹೊರಿಸಿದ್ದನ್ನು ಕಡೆಗಣಿಸಲಾಗಲಿಲ್ಲ", ಎಂದು ಡಾ। ಆರ್. ಜಿ. ಭಂಡಾರ್ಕರ್ ಸಾರಿದರು. ಫೆಬ್ರವರಿ ೨, ೧೮೯೧ರಂದು ಮಂಡಳಿ ತಿಲಕರ ಆಪಾದನೆಗಳನ್ನು ಆಧಾರರಹಿತ ಎಂದು ತಳ್ಳಿ ಹಾಕಿತು ಹಾಗೂ ಈ ವಿಷಾದಕರ ಘಟನೆ ಆಗ ಕೊನೆಗೊಂಡಿತು.

ಅಗಲಿಕೆಯ ಗಳಿಗೆ ಬಂದಾಗ ತಿಲಕರಿಗೆ ಕೋಪಕ್ಕಿಂತಲೂ ಹೆಚ್ಚಾಗಿ ದುಃಖ ತಡೆಯುವುದಾಗಲಿಲ್ಲ. ೧೫,೦೦೦ ಪದಗಳ ರಾಜೀನಾಮೆಯ ಪತ್ರದ ಕೊನೆಯ ವಾಕ್ಯಗಳು ಹೃದಯದ್ರಾವಕವಾಗಿವೆ:

"ಹೊರಗಡೆಯ ಕೆಲಸ ಮತ್ತು ಸಂಬಳದ ವಿಷಯಗಳ ಬಗ್ಗೆ ಇತ್ಯರ್ಥ ಆಗಬೇಕೆಂದು ಒಂದೇ ಸಮನೆ ಒತ್ತಾಯಿಸಿ. ಬಹುತೇಕ ಎಲ್ಲರ ಸಹಾನುಭೂತಿಯನ್ನು ನಾನು ಎಷ್ಟರ ಮಟ್ಟಿಗೆ ಕಳೆದುಕೊಂಡಿದ್ದೇನೆಂದರೆ, ಎಷ್ಟರ ಮಟ್ಟಿಗೆ ನಾನು ತೀವ್ರವಾಗಿ ಅಪ್ರಿಯನಾಗಿದ್ದೇನೆಂದರೆ. ಇತರರ ದಾರಿಯಲ್ಲಿ ನಾನೀಗ ಹೆಚ್ಚುಕಡಿಮೆ ಒಂದು ಅಡಚಣೆಯಾಗಿ ಪರಿಗಣಿಸಲ್ಪಟ್ಟಿದ್ದೇನೆ ಹಾಗೂ ನನ್ನ ಪ್ರತಿಯೊಂದು ತಪ್ಪನ್ನೂ. ಅದು ಎಷ್ಟೇ ಕ್ಷುಲ್ಲಕವಾಗಿರಲಿ, ತಕ್ಷಣ ಹಿಡಿದೆತ್ತಿ ನಂಬಲಾಗದ ಮಟ್ಟಿಗೆ ದೊಡ್ಡದು ಮಾಡಲಾಗಿದೆ.

ನನ್ನ ಜೀವನದ ಆದರ್ಶವನ್ನು ನಾನು ಕೈಬಿಡುತ್ತಿದ್ದೇನೆ. ಆದರೆ ಅದರೊಂದಿಗೆ ಪ್ರತ್ಯೇಕಗೊಳ್ಳುವುದರಿಂದ ಅದರ ಸೇವೆಯನ್ನು ನಾನು ಉತ್ತಮವಾಗಿ ಮಾಡುವೆ

ಎಂಬ ವಿಚಾರದಿಂದ ನನಗೆ ಸಮಾಧಾನ. ನಾನು ನಿಮ್ಮೊಂದಿಗಿದ್ದಾಗ, ಸಂಸ್ಥೆಯ ಹಿತ ಸಾಧಿಸಲು ನಾನು ಶ್ರಮದಲ್ಲಿ ಸ್ವಲ್ಪವೂ ಕಡಿಮೆಮಾಡಲಿಲ್ಲ. ಹಾಗೂ ನಿಮ್ಮೊಂದಿಗೆ ಇನ್ನೂ ಇದ್ದು ಸಂಸ್ಥೆಯ ಅಸ್ತಿತ್ವಕ್ಕೆ ಅಪಾಯ ಉಂಟುಮಾಡುವುದಿಲ್ಲ...... ನನ್ನ ಪ್ರಿಯ ಸಹೋದ್ಯೋಗಿಗಳೇ, ದುಃಖದಿಂದ ಭಾರವಾದ ಹೃದಯದಿಂದ, ಆದರೆ ನಿಮ್ಮೊಂದಿಗಿನ ನನ್ನ ಸಂಬಂಧವನ್ನು ಕಡಿದುಕೊಳ್ಳುವುದರಿಂದ ನಮ್ಮ ಸಂಸ್ಥೆಯ ಒಳಿತಿಗೆ ಅತ್ಯಗತ್ಯವಾದ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಲು ನಾನು ನೆರವಾಗಬಹುದು ಎಂಬ ಆಶಯದಿಂದ ನಾನು ನಿಮಗೆ ವಿದಾಯ ಹೇಳುತ್ತೇನೆ. ಆ ಸೌಹಾರ್ದತೆಗಾಗಿ ನಾನು ಈ ತ್ಯಾಗ ಮಾಡುತ್ತಿದ್ದೇನೆ."

ಇತರರ ಸಂಗಡ ಸಮಾನ ಸ್ಥಾನಮಾನಗಳ ಆಧಾರಗಳ ಮೇಲೆ ಕೆಲಸ ಮಾಡುವುದು ಸ್ವಭಾವತಃ ತಿಲಕರಿಗೆ ಅಸಾಧ್ಯವಾಗಿತ್ತೆಂದು ಕಠಿಣ ವಿಮರ್ಶಕರು ಸಲಹೆ ಮಾಡಿದ್ದಾರೆ. ಆದರೆ ತಮ್ಮ ತಾರುಣ್ಯದ ಹತ್ತು ಉತ್ತಮ ವರ್ಷಗಳನ್ನು ನ್ಯೂ ಇಂಗ್ಲಿಷ್ ಶಾಲೆ ಮತ್ತು ಡೆಕ್ಕನ್ ಎಜುಕೇಶನ್ ಸೊಸೈಟಿಯ ಸೇವೆಯಲ್ಲಿ ತಿಲಕರು ಕಳೆದಿದ್ದನ್ನು ಪರಿಗಣಿಸಿದಾಗ, ಅಂತಹ ಟೀಕೆ ಕೀಳಾಗಿ ಕಾಣುತ್ತದೆ. ಹೊಂದಿಕೊಳ್ಳುವ ಮನೋಭಾವ, ಇತರರೊಂದಿಗೆ ಸ್ನೇಹದಿಂದಿರುವ ಸಾಮರ್ಥ್ಯ ಇಲ್ಲದೆ ಈ ಸೇವೆ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಅದೇ ಸಮಯಕ್ಕೆ, ತಿಲಕರು ತಮ್ಮ ಸಹೋದ್ಯೋಗಿಗಳಿಗೆ ತೀವ್ರವಾಗಿ ಅಪ್ರಿಯರಾದರು ಹಾಗೂ ಅವರ ಕುಂದುಕೊರತೆಗಳ ಬಗ್ಗೆ ಹೀಯಾಳಿಸಿ ಮಾತನಾಡಿ ಅದರಲ್ಲಿ ಅನೇಕರ ಮನನೋಯಿಸಿದರು. ತಿಲಕರು ಬಿಟ್ಟು ಹೋಗಿದ್ದು ಒಳ್ಳೆಯದೇ ಆಯಿತು ಎಂದು ಭಾವಿಸಲಾಯಿತು. ಹಾಗೂ ಅದರಿಂದ ಸೊಸೈಟಿಯ ಕಾರ್ಯ ಸುಗಮವಾಗಿ ಪುನಃ ನಡೆಯುವುದಕ್ಕೆ ಸಹಾಯಕವಾಯಿತು.

೧೮೯೦ರಲ್ಲಿ ಡೆಕ್ಕನ್ ಎಜುಕೇಶನ್ ಸೊಸೈಟಿಯಲ್ಲಿ ಮುಂದುವರೆಯುವುದು ತಿಲಕರಿಗೆ ಅಸಾಧ್ಯವಾಯಿತು. ಅಥವಾ ತಾನೇ ಅಸಾಧ್ಯವಾಗಿ ಮಾಡಿಕೊಂಡರು. ಇಪ್ಪತ್ತೈದು ವರ್ಷಗಳ ನಂತರ, ಮಹಾತ್ಮಾ ಗಾಂಧಿಯವರಿಗೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾಗುವುದು ಅಸಾಧ್ಯವಾಗಿ ಪರಿಣಮಿಸಿತು. ಈ ಸೊಸೈಟಿಯ ಸಂಸ್ಥಾಪಕರೂ ಅದರ ಪ್ರಥಮ ಸದಸ್ಯರೂ ಆಗಿದ್ದ ಗೋಖಲೆಯವರಿಗೆ ಗಾಂಧೀಜಿಯವರ ಬಗ್ಗೆ ಅತ್ಯುತ್ತಮ ಅಭಿಪ್ರಾಯವಿತ್ತು ಹಾಗೂ ಅವರು ತಮ್ಮ ಉತ್ತರಾಧಿಕಾರಿಯಾಗಬಹುದೆಂದು ಬಹುಶಃ ಎಣಿಸಿದ್ದರು. ಆದರೆ ೧೯೧೫ರಲ್ಲಿ ಗೋಖಲೆಯವರು ನಿಧನರಾದ ನಂತರ, ಗಾಂಧೀಜಿಯವರಂತಹ ಅಸಾಂಪ್ರದಾಯಿಕ ವ್ಯಕ್ತಿಯೊಂದಿಗೆ ಸಂಬಂಧ ಹೊಂದುವ ಬಗ್ಗೆ ಇತರ ಸದಸ್ಯರು ಸ್ಪಷ್ಟವಾಗಿ ಆತಂಕಗೊಂಡರು. ಡೆಕ್ಕನ್ ಎಜುಕೇಶನ್ ಸೊಸೈಟಿಯ ಆಜೀವ ಸದಸ್ಯರು ತಿಲಕರ ಹಿರಿಮೆಯಿಂದಾಗಿ ದೂರ ಸರಿದಂತೆ, ಅವರು ಗಾಂಧೀಜಿಯವರ ಔನ್ನತ್ಯದಿಂದ ಹೆದರಿದ್ದರು. ದೂರಕ್ಕೆ ಪರ್ವತ ಶಿಖರಗಳು ಆಕರ್ಷಕವಾಗಿ, ಪ್ರಭಾವಯುತವಾಗಿ ಕಾಣಬಹುದು. ಆದರೆ ಅವುಗಳ ಸಮೀಪ ವಾಸಿಸುವುದು ಸುಲಭದ ಮಾತೇನಲ್ಲ. ಹಾಗೆಯೇ ಮಹಾನ್ ವ್ಯಕ್ತಿಗಳ ಸಂಗವೂ ಸಹ. ಡೆಕ್ಕನ್ ಎಜುಕೇಶನ್ ಸೊಸೈಟಿಯ ಸದಸ್ಯರಿಗೆ ಇವರ

ಅರಿವಾಗಿ ತಿಲಕರ ರಾಜೀನಾಮೆಯನ್ನು ಬಲವಂತವಾಗಿ ಪಡೆಯಲು ಐದು ದೀರ್ಘ ವರ್ಷಗಳು ಬೇಕಾದರೆ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರು ಹೆಚ್ಚು ಜಾಣರಾಗಿದ್ದು ಗಾಂಧಿಯವರನ್ನು ಸೊಸೈಟಿಗೆ ಸೇರಿಸಿಕೊಳ್ಳಲು ಹಿಂಜರಿದರು. ಸೊಸೈಟಿಯ ಸದಸ್ಯತ್ವ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಗಾಂಧೀಜಿ ಉದಾರಭಾವನೆಯಿಂದ ಹಿಂತೆಗೆದುಕೊಂಡು ಅವರನ್ನು ಸಮಾಧಾನಗೊಳಿಸಿದರು.

ಹಿನ್ನೋಟದಲ್ಲಿ ಈ ಎರಡೂ ಘಟನೆಗಳಿಂದಾಗಿ ತಮ್ಮ ಸ್ವತಂತ್ರ ದಾರಿಗಳನ್ನು ಕಂಡುಕೊಳ್ಳಲು ಈ ಇಬ್ಬರು ವ್ಯಕ್ತಿಗಳಿಗೂ ಸಾಧ್ಯವಾಗಿ ದೇಶಕ್ಕೇ ಅಳಿಯಲಾಗದಷ್ಟು ಒಳಿತಾಯಿತು. ಸಾರ್ವಜನಿಕ ಸೇವೆಗೆ ಮುಡುಪಿಡಲು ಸಾಕಷ್ಟು ಸಮಯವನ್ನು ಒದಗಿಸುವ ಮತ್ತೊಂದು ಜೀವನೋಪಾಯದ ಮೂಲವನ್ನು ಕಂಡುಕೊಳ್ಳುವುದು ತಿಲಕರ ತಕ್ಷಣದ ಸಮಸ್ಯೆಯಾಗಿತ್ತು. ಭ್ರಮನಿರಸನದ ಆ ಗಳಿಗೆಯಲ್ಲೂ ಸರ್ಕಾರಿ ಸೇವೆಯನ್ನು ಸೇರುವ ಅಥವಾ ವಕೀಲಿ ವೃತ್ತಿಯನ್ನು ಕೈಗೊಳ್ಳುವ ವಿಚಾರ ಅವರ ಮನಸ್ಸಿಗೆ ಬರಲಿಲ್ಲ. ೧೮೮೯ರಲ್ಲಿ ಪ್ರಾರಂಭಿಸಿದ ಕಾನೂನು ತರಗತಿಗಳಿಂದ ಅವರಿಗೆ ಅಲ್ಪವಾದರೂ ನಿಯಮಿತವಾದ ವರಮಾನ ದೊರೆಯುತ್ತಿತ್ತು. ಇಬ್ಬರು ಗೆಳೆಯರ ಪಾಲುದಾರಿಕೆಯೊಂದಿಗೆ ಅವರು ಹೈದರಾಬಾದ್ ರಾಜ್ಯದ ಲಾಟೂರ್‌ನಲ್ಲಿ ಕೊಂಡಿದ್ದ ಜಿನ್ನಿಂಗ್ ಫ್ಯಾಕ್ಟರಿ ನಿರೀಕ್ಷಿಸಿದಂತೆ ಲಾಭದಾಯಕವಾದ ಬಂಡವಾಳ ಹೂಡಿಕೆಯಾಗಲಿಲ್ಲ.

ಡೆಕ್ಕನ್ ಎಜುಕೇಶನ್ ಸೊಸೈಟಿಗೆ ತಿಲಕರು ರಾಜೀನಾಮೆ ನೀಡಿದ್ದರಿಂದ 'ಕೇಸರಿ' ಮತ್ತು 'ಮರಾಠ' ಪತ್ರಿಕೆಗಳಿಗೆ ಹೆಚ್ಚು ಸಮಯ ಮತ್ತು ಗಮನ ನೀಡುವುದು ಅವರಿಗೆ ಸಾಧ್ಯವಾಯಿತು. ಸತ್ತ್ವಪೂರ್ಣವಾದ ಪತ್ರಿಕೋದ್ಯಮದಲ್ಲಿ ಈ ವೃತ್ತಪತ್ರಿಕೆಗಳು ಖ್ಯಾತಿ ಗಳಿಸಿದ್ದವು. ಆದರೆ ಅನೇಕ ವರ್ಷಗಳವರೆಗೆ ಇವು ನಷ್ಟದಲ್ಲೇ ಮುಂದುವರಿದಿದ್ದುವು. ಡೆಕ್ಕನ್ ಎಜುಕೇಶನ್ ಸೊಸೈಟಿಯ ಸ್ಥಾಪನೆಯ ನಂತರ ಪತ್ರಿಕೆಗಳನ್ನು ಸೊಸೈಟಿಯ ಸದಸ್ಯರ ವೈಯಕ್ತಿಕ ಅಧಿಕಾರಕ್ಕೊಳಪಡಿಸಲಾಯಿತು. ಆದರೆ ಈ ವ್ಯವಸ್ಥೆ ಕಾರ್ಯಸಾಧ್ಯವಾಗಿ ಕಂಡುಬರಲಿಲ್ಲ ಹಾಗೂ ಶೇಖರಗೊಂಡಿದ್ದ ಸಾಲ ಸೋಲಗಳೊಂದಿಗೆ ಅವುಗಳನ್ನು ನಡೆಸಲು ಆಗರ್ಕರರು ನಿರಾಕರಿಸಿದನಂತರ. ಪತ್ರಿಕೆಗಳನ್ನು ಅಕ್ಟೋಬರ್ ೧೮೮೭ರಲ್ಲಿ ಡಬ್ಲ್ಯು. ಟಿ. ಕೇಳ್ಕರ್ ಅವರಿಗೆ ವಹಿಸಿಕೊಡಲಾಯಿತು. ತಿಲಕರ ಪ್ರಕಾರ. ಪತ್ರಿಕೆಗಳನ್ನು ಮುಚ್ಚಿಬಿಡಬೇಕೆಂದೂ ಸಹ ಆಗರ್ಕರ್ ಸಲಹೆ ಮಾಡಿದರು. ಸಾಮಾಜಿಕ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಪ್ರಚುರಪಡಿಸಲು ಅವರು ಹೊಂದಿದ್ದ ಆಸಕ್ತಿಗೆ ಈ ಸಲಹೆ ವಿರುದ್ಧವಾಗಿತ್ತು. ಸ್ವ-ಅಭಿವ್ಯಕ್ತಿಗೆ ಅವಕಾಶ ಇಲ್ಲದಿರುವ ತೀವ್ರ ಅನಿಸಿಕೆಯಿಂದ ಆಗರ್ಕರರು ಗೋಖಲೆಯವರ ಸಹಕಾರದೊಂದಿಗೆ 'ಸುಧಾರಕ್' ಎಂಬ ಹೊಸ ನಿಯತಕಾಲಿಕವನ್ನು ಪ್ರಾರಂಭಿಸಿದರು. ಇದರ ಇಂಗ್ಲಿಷ್ ಲೇಖನಗಳನ್ನು ಗೋಖಲೆಯವರು ಬರೆಯುತ್ತಿದ್ದರು. 'ಸುಧಾರಕ್'ನ ಪ್ರಾರಂಭದಿಂದ ತಿಲಕ್ ಮತ್ತು ಆಗರ್ಕರರ ನಡುವಣ ಭಿನ್ನಾಭಿಪ್ರಾಯಗಳು ಬಿಗಡಾಯಿಸಿದ್ದೇ ಅಲ್ಲದೆ ಡೆಕ್ಕನ್ ಎಜುಕೇಶನ್ ಸೊಸೈಟಿಯ ಸದಸ್ಯರ ನಡುವಣ ಅಂತರವೂ ಹೆಚ್ಚಾಯಿತು. ಪ್ರತಿ ಪಂಗಡಕ್ಕೂ ಈಗ ತನ್ನ ಅಭಿಪ್ರಾಯಗಳನ್ನು ಎತ್ತಿ ಹಿಡಿಯಲು ತನ್ನದೇ ಆದ ಸಾಧನ ದೊರಕಿತು.

ಪತ್ರಿಕೆಗಳೊಂದಿಗೆ ತಿಲಕರ ಸಂಬಂಧ ಮುಂದುವರಿಯಿತು ಹಾಗೂ ೧೮೮೭ರಲ್ಲಿ ಅವರು 'ಕೇಸರಿ'ಯ ಪ್ರಕಾಶಕನೆಂದು ತಮಗೆ ತಾನೇ ಸಾರಿದರು. ಅಂದರೆ ಅವರು ಅದರ ಸಂಪಾದಕರೂ ಆದಂತಾಯಿತು. ಪತ್ರಿಕೆಗಳ ಮುದ್ರಣ ಆಗುತ್ತಿದ್ದ ಆರ್ಯಭೂಷಣ ಪ್ರೆಸ್‌ನ ಆಡಳಿತ ನಡೆಸಲು ಮುಂಬೈನಿಂದ ಕರೆಸಲಾದ ಹೆಚ್. ಎನ್. ಗೋಖಲೆಯವರ ಮಾತಿಗೆ ಕಟ್ಟುಬಿದ್ದು ತಿಲಕರು ನಿರ್ವಾಹವಿಲ್ಲದೆ ಎರಡೂ ಪತ್ರಿಕೆಗಳ "ಮುಂದಿನ ಅಡಮಾನವಿಟ್ಟ ಮಾಲಿಕ"ರಾಗಬೇಕಾಯಿತು. 'ಕೇಸರಿ'ಯ ಪ್ರಸಾರ ಕ್ಷಿಪ್ರವಾಗಿ ೫,೦೦೦ಕ್ಕೆ ಏರಿತು. ಆದರೆ 'ಮರಾಠ'ದಿಂದ ಆದ ನಷ್ಟ 'ಕೇಸರಿ'ಯಿಂದ ಬಂದ ಲಾಭವನ್ನು ಕಬಳಿಸಿತು. ಆಗರ್ಕರರ ಸಮಾಜ ಸುಧಾರಕ ಅಭಿಪ್ರಾಯಗಳನ್ನೇ 'ಮರಾಠ'ದ ಸಂಪಾದಕ ಡಬ್ಲ್ಯು. ಬಿ. ಕೇಳ್ಕರರೂ ಹೊಂದಿದ್ದು. ಎರಡೂ ಪತ್ರಿಕೆಗಳಲ್ಲಿ ವ್ಯಕ್ತವಾಗುತ್ತಿದ್ದ ಅಭಿಪ್ರಾಯಗಳ ಘರ್ಷಣೆಯಿಂದ ಸ್ವಲ್ಪ ಮಟ್ಟಿನ ಮನಸ್ತಾಪವೂ ಉಂಟಾಯಿತು. ಪ್ರಕೃತವಾದ ಜ್ವಲಂತ ವಿಷಯಗಳ ಬಗ್ಗೆ 'ಕೇಸರಿ' ಮತ್ತು 'ಸುಧಾರಕ್' ನಡುವೆ ಘನಘೋರಾಟ ನಡೆಯುತ್ತಿದ್ದರೆ. 'ಮರಾಠ' ವಿಪರ್ಯಾಸವಾಗಿ ತನ್ನ ಲಾಯದ ಸಂಗಾತಿಯನ್ನು ವಿರೋಧಿಸುತ್ತಿತ್ತು.

ಹೀಗೆ. ಮಾಲಿಕತ್ವದ ನಿಯಮಗಳ ಪರಿಷ್ಕರಣ ಆಗತ್ಯವಾಗಿ ಪರಿಣಮಿಸಿತು. 'ಕೇಸರಿ'ಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ತಿಲಕರು ಇಚ್ಛಿಸಿದರು. ಕೇಳ್ಕರರು ಬಹುಮುಖ ಪ್ರತಿಭೆಯ ಲೇಖಕರಾಗಿದ್ದರೂ. ಫರ್ಗುಸನ್ ಕಾಲೇಜಿನಲ್ಲಿ ಪ್ರೊಫೆಸರರಾಗಿ ಹೊಂದಿದ್ದ ಕಾರ್ಯಭಾರ ಹಾಗೂ ಮರಾಠಿ ರಂಗಭೂಮಿಯಲ್ಲಿ ಬೆಳೆಯುತ್ತಿದ್ದ ಆಸಕ್ತಿಯ ದೃಷ್ಟಿಯಿಂದ ಮರಾಠದ ಸಂಪಾದಕರಾಗಿ ಮುಂದುವರೆಯಲು ಆಸಕ್ತರಾಗಿರಲಿಲ್ಲ. ಹೆಚ್. ಎನ್. ಗೋಖಲೆಯವರು ಮುದ್ರಣಾಲಯದ ವ್ಯವಹಾರದ ಬಗ್ಗೆ ಮಾತ್ರ ಸಂಬಂಧ ಹೊಂದಿದ್ದರು. ೧೮೯೧ರ ಕೊನೆಯಲ್ಲಿ. ಆರ್ಯಭೂಷಣ ಪ್ರೆಸ್‌ಗೆ ಕೊಡಬೇಕಾದ ೭,೦೦೦ ರೂಪಾಯಿಗಳ ಸಾಲದೊಂದಿಗೆ ತಿಲಕರು 'ಕೇಸರಿ' ಮತ್ತು 'ಮರಾಠ'ದ ಏಕಮಾತ್ರ ಮಾಲಿಕರಾಗಬೇಕೆಂದು ಅಂತಿಮವಾಗಿ ಒಪ್ಪಿಕೊಳ್ಳಲಾಯಿತು. ಗೋಖಲೆ ಮತ್ತು ಕೇಳ್ಕರರಿಗೆ ಸಂಯುಕ್ತವಾಗಿ ಮುದ್ರಣಾಲಯದ ಮಾಲಿಕತ್ವ ಸೇರಿತು.

ತಿಲಕರ ವೃತ್ತಿಜೀವನದಲ್ಲಿ ೧೮೯೦ ಮತ್ತು ೧೮೯೧ರ ವರ್ಷಗಳು ಅತ್ಯಂತ ಪ್ರಮುಖವಾಗಿದ್ದುವು. ಆ ವರ್ಷಗಳು ಅವರ ಜೀವನ ಕವಲೊಡೆದುದನ್ನು ಸೂಚಿಸಿದವು. ಹಿಂದಿನದನ್ನು ಅಳಿಯುತ್ತಾ. ಮುಂದಿನದನ್ನು ಮನಗಾಣಲು ಪ್ರಯತ್ನಿಸುತ್ತಾ ಅವರು ಜೀವನದ ನಡುವೆ ನಿಂತರು. ಶಿಕ್ಷಣ ತಜ್ಞರಾಗಿ ಅವರು ಕಳೆದ ಹತ್ತು ವರ್ಷಗಳ ಕೊನೆಯಲ್ಲಿ ತಮ್ಮ ಸಹೋದ್ಯೋಗಿಗಳನ್ನು ಅಗಲಬೇಕಾಯಿತು ಹಾಗೂ ಬಹುಶಃ ತಮ್ಮ ಮೊದಲಿನ ಆದರ್ಶಗಳ ಬಗ್ಗೆ ಭ್ರಮನಿರಸನ ಹೊಂದಬೇಕಾಯಿತು. ಮತ್ತೊಂದು ದೃಷ್ಟಿಯಲ್ಲಿ. ಅವರು ಪತ್ರಿಕೋದ್ಯಮಿಯಾಗಿ ಖ್ಯಾತಿ ಗಳಿಸಿದ್ದರು. ಹಾಗೂ ಸಾರ್ವಜನಿಕ ಜೀವನದಲ್ಲಿ ಅಡ್ಡಿ ಆತಂಕಗಳನ್ನೂ. ಪ್ರತಿಫಲ. ಪುರಸ್ಕಾರಗಳನ್ನೂ ಅನುಭವಿಸಿದ್ದರು. ಖಾಸಗಿ ಲಾಭಕ್ಕಾಗಿ ಸಾರ್ವಜನಿಕ ಜೀವನದಿಂದ ಹಿಂದೆ ಸರಿಯುವ ವಿಚಾರ ತಿಲಕರಲ್ಲಿ ಒಮ್ಮೆಯೂ ಸುಳಿಯಲಿಲ್ಲ. ಡೆಕ್ಕನ್ ಎಜುಕೇಶನ್ ಸೊಸೈಟಿಯಿಂದ ಬಿಡುಗಡೆ ಹೊಂದಿದ ಅವರ ಮುಂದೆ ರಾಷ್ಟ್ರೀಯ ಸೇವೆಗೆ ಹೊಸ ಮಾರ್ಗಗಳು

ಉಂಟಾದವು. ಹಣಕಾಸಿನ ದೃಷ್ಟಿಯಿಂದ ಅವರ ಪರಿಸ್ಥಿತಿ ತೃಪ್ತಿಕರವಾಗಿದ್ದದ್ದು ಅಷ್ಟಕ್ಕಷ್ಟೇ. ಭಾರಿ ಸಾಲದ ಹೊರೆಯನ್ನೂ ಅವರು ಹೊತ್ತುಕೊಂಡಿದ್ದರು. ತಮ್ಮ ಗುರಿಯನ್ನು ಸಾಧಿಸುವ ದಿಸೆಯಲ್ಲಿ ಅವರು ದೃಢವಾದ ಹೆಜ್ಜೆ ಇಟ್ಟಿದ್ದರು ಹಾಗೂ ಅವರ ಎರಡು ಪತ್ರಿಕೆಗಳ ರೂಪದಲ್ಲಿ. ನೆಪೋಲಿಯನ್‌ನ ನುಡಿಕಟ್ಟಿನಂತೆ. ೫೦೦ ಬಯೋನೆಟ್‌ಗಳನ್ನು ಹೊಂದಿದ್ದರು.

ಅಧ್ಯಾಯ 4

ಯಾವುದು ಮೊದಲು?
ರಾಜಕೀಯ ಸುಧಾರಣೆಯೋ? ಸಾಮಾಜಿಕ ಸುಧಾರಣೆಯೋ?

ಸಮಾನತೆಯನ್ನು ಎಲ್ಲರೂ ಒಪ್ಪಿಕೊಳ್ಳುವ ಈ ದಿನಗಳಲ್ಲಿ ಹಾಗೂ ಸಾಮಾನ್ಯ ನಡವಳಿಗೆ ವಿರುದ್ಧವಾಗಿ ವರ್ತಿಸುವುದು ಪ್ರಜ್ಞಾವಂತರ ಲಕ್ಷಣವಾಗಿರುವಾಗ, ಕಳೆದ ಶತಮಾನದ ಎಂಭತ್ತು ಮತ್ತು ತೊಂಭತ್ತರ ದಶಕಗಳಲ್ಲಿ ಸಮಾಜ ಸುಧಾರಣೆ ಕೆರಳಿಸುತ್ತಿದ್ದ ಭಾವೋದ್ರೇಕಗಳನ್ನು ಊಹಿಸುವುದು ಇಂದು ಕಠಿಣ. ಕೆಲವು ವಿಶಿಷ್ಟ ಸುಧಾರಣೆಗಳ ಲೋಪದೋಷಗಳ ಬಗ್ಗೆಯೂ ಅಲ್ಲದೆ, ಸಾಮಾಜಿಕ ಅಥವಾ ರಾಜಕೀಯ ಸುಧಾರಣೆಗಳಲ್ಲಿ ಯಾವುದು ಮೊದಲಾಗಬೇಕು ಎಂಬ ಕೇಂದ್ರ ವಿಷಯದ ಬಗ್ಗೆ ತೀವ್ರ ವಿವಾದವೆದ್ದಿತ್ತು. ತಮ್ಮ ಸಾರ್ವಜನಿಕ ಜೀವನದ ಮೊದಲ ವರ್ಷಗಳಲ್ಲಿ ರಾಜಕೀಯ ಸುಧಾರಣೆಯ ತೀವ್ರ ಪ್ರಚಾರಕರಾಗಿದ್ದ ತಿಲಕರು ಈ ವಿವಾದದಲ್ಲಿ ಮುಳುಗಿದ್ದರು.

ಹಿಂದೂ ಸಮಾಜದ ಅನಿಷ್ಟ ಪದ್ಧತಿಗಳನ್ನು ಕೊನೆಗೊಳಿಸುವಲ್ಲಿ ಪ್ರಜ್ಞಾವಂತ ಬ್ರಿಟಿಷ್ ಆಡಳಿತಗಾರರು ಮೊದಲ ಕ್ರಮಗಳನ್ನು ಕೈಗೊಂಡರು. ಲಾರ್ಡ್ ವಿಲಿಯಂ ಬೆಂಟಿಂಕ್ ೧೮೨೯ರಲ್ಲಿ ಸತಿ ಪದ್ಧತಿಯನ್ನು ನಿಷೇಧಿಸಿದ. ವಿಧವಾ ಪುನರ್ವಿವಾಹಕ್ಕೆ ೧೮೫೬ರಲ್ಲಿ ಕಾನೂನಿನ ಸಮ್ಮತಿ ದೊರೆಯಿತು. ಆದರೆ ರಾಜಕೀಯ ಅನುಕೂಲ ದೃಷ್ಟಿಯಿಂದಾಗಿ, ಸಮಾಜ ಸುಧಾರಣೆಯ ಬಗ್ಗೆ ಬ್ರಿಟಿಷರು ಹೊಂದಿದ್ದ ಉತ್ಸಾಹ ವೇಗ ಕುಂದಿತು. ವಿಕ್ಟೋರಿಯಾ ರಾಣಿಯ ಐತಿಹಾಸಿಕ ಅಧಿಕಾರ ಘೋಷಣೆಯಲ್ಲಿ (೧೮೫೮) ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳ ವಿಷಯದಲ್ಲಿ ಕೈಹಾಕುವುದಿಲ್ಲವೆಂದು ತಿಳಿಸಲಾಗಿತ್ತು. ಈ ಘೋಷಣೆ ಒಂದೇ ಕಡೆ ನಿಂತಲ್ಲೇ ನಿಲ್ಲುವ ಸಾಮಾಜಿಕ ವ್ಯವಸ್ಥೆಯ ಒಂದು ಸನ್ನದಂತಿದೆಯೆಂದು ಸಂಪ್ರದಾಯಸ್ಥರು ಭಾವಿಸಿದರು.

ಅಧಿಕೃತ ನಿಲುವಿನಲ್ಲಿ ಈ ಪರಿವರ್ತನೆ ಆಗುವುದಕ್ಕೆ ಮೊದಲು, ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕದಿಂದ ಆಳವಾದ ಚಿಂತನೆ ನಡೆದು ಹಿಂದೂ ಸಮಾಜದಲ್ಲಿ ವಿಚಾರಗಳ ತಾಕಲಾಟ ಪ್ರಾರಂಭವಾಗಿತ್ತು. ರಾಜಾ ರಾಮ್‌ಮೋಹನ್ ರಾಯ್ ಈ ಚಿಂತನೆಯ ಅತ್ಯುತ್ತಮ ಅಭಿವ್ಯಕ್ತಿಯಾಗಿದ್ದರು. "ಭಾರತೀಯ ಪುನರುತ್ಥಾನದ ತಂದೆ" ಎಂದು ಅವರನ್ನು ಸೂಕ್ತವಾಗಿಯೇ ಕರೆಯಲಾಗಿದೆ. ಅವರ ಬ್ರಾಹ್ಮೋ ಸಮಾಜದ ಪ್ರಭಾವ ಮುಖ್ಯವಾಗಿ ಬಂಗಾಳಕ್ಕೆ ಸೀಮಿತವಾಗಿದ್ದರೂ ಭಾರತದ ಇತರ ಭಾಗಗಳಿಗೆ ಈ ಪ್ರಭಾವ ಉಕ್ಕಿ ಹರಿಯಲು ಅನೇಕ ವರ್ಷಗಳು ಹಿಡಿಯಿತು. ಪಂಜಾಬದಲ್ಲಿ ೧೮೭೫ರಲ್ಲಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜ ಬೇರೂರಿದಂತೆ ೧೮೬೭ರಲ್ಲಿ ಮುಂಬೈನಲ್ಲಿ ಸ್ಥಾಪಿಸಲಾದ ಪ್ರಾರ್ಥನಾ ಸಮಾಜ ಬೇರೂರಿರಲಿಲ್ಲ. ಬ್ರಾಹ್ಮೋ ಸಮಾಜ ಸುಶಿಕ್ಷಿತ ವರ್ಗಗಳ ಮೇಲೆ ಮಾತ್ರ ಪ್ರಭಾವ

ಬೀರಿತ್ತು. ದಯಾನಂದರನ್ನು ಕೆಲವೊಮ್ಮೆ "ಭಾರತದ ಲ್ಯೂಥರ್" ಎಂದು ಕರೆಯಲಾಗುತ್ತದೆ. ಹಿಂದೂ ಧರ್ಮದ ಗೊಡ್ಡು ಕಟ್ಟಡದ ತಳವನ್ನೇ ಅವರು ಅಲುಗಾಡಿಸಿದರು.

ಮಹಾರಾಷ್ಟ್ರದಲ್ಲಿ ಪ್ರಾರ್ಥನಾ ಸಮಾಜ ದುರ್ಬಲವಾಗಿಯೇ ಉಳಿಯಿತು. ಆದರೆ ಮಹಾತ್ಮಾ ಜ್ಯೋತಿಬಾ ಫುಲೆ ೧೮೭೩ರಲ್ಲಿ ಸ್ಥಾಪಿಸಿದ ಸತ್ಯ ಶೋಧಕ ಸಮಾಜ, ಬ್ರಾಹ್ಮಣರ ಪ್ರಾಬಲ್ಯದ ವಿರುದ್ಧ ಅದು ನಡೆಸಿದ ಹೋರಾಟದಿಂದಾಗಿ ಸಾರ್ವತ್ರಿಕ ಚಳವಳಿಯಾಗಿ ಬೆಳೆಯಿತು. ಅದಕ್ಕೂ ಹಿಂದೆ, ಕಳೆದ ಶತಮಾನದ ಮೂವತ್ತರ ದಶಕದಲ್ಲಿ 'ದರ್ಪಣ್' ವಾರಪತ್ರಿಕೆಯನ್ನು ನಡೆಸುತ್ತಿದ್ದ ಬಾಳಶಾಸ್ತ್ರಿ ಜಂಭೇಕರ್ ಅವರವರೆಗೂ ಮಹಾರಾಷ್ಟ್ರದಲ್ಲಿ ಸಮಾಜ ಸುಧಾರಣೆಯ ಚಳವಳಿಯನ್ನು ಗುರುತಿಸಬಹುದು. "ಲೋಕಹಿತವಾದಿ" ಎಂದು ಜನಸಾಮಾನ್ಯರಿಗೆ ಪರಿಚಿತವಾಗಿದ್ದ ಗೋಪಾಲ ಹರಿ ದೇಶಮುಖ್ ಅವರು ಜಂಭೇಕರ್ ಅವರ ಉತ್ತಮ ಕಾರ್ಯವನ್ನು ಮುಂದುವರಿಸಿದರು.

ಹೀಗೆ ಹತ್ತೊಂಭತ್ತನೆಯ ಶತಮಾನದಲ್ಲಿ ಸಮಾಜ ಸುಧಾರಣೆಯ ಕೂಗು ಭಾರತದಾದ್ಯಂತ ಹಬ್ಬುತ್ತಿದ್ದಾಗ, ಅದರಲ್ಲಿ ಕೆಲವು ಅಹಿತಕರ ಅಂಶಗಳೂ ಇದ್ದವು. ಅದರಿಂದ ಹಿಂದೂ ಧರ್ಮ, ಸಂಸ್ಕೃತಿ ಮತ್ತು ಸಂಪ್ರದಾಯಗಳ ಬಗ್ಗೆ ಕೀಳರಿಮೆ ಉಂಟಾಯಿತು. ಈ ಬಗ್ಗೆ ತಿಲಕರು ಹೀಗೆ ನುಡಿದರು: "ಪಾಶ್ಚಿಮಾತ್ಯ ನಾಗರಿಕತೆಯ ಪರಿಚಯ ನಮಗೆ ಪ್ರಥಮವಾಗಿ ಆದಾಗ, ನಮ್ಮ ಜನತೆಯಲ್ಲಿ ಕೆಲವರು ಅದರ ವೈಜ್ಞಾನಿಕ ಜ್ಞಾನ ಮತ್ತು ವಿಧಾನದ ಬಗ್ಗೆ ಎಷ್ಟು ದಿಗ್ಭ್ರಮೆಗೊಂಡರೆಂದರೆ, ನಮ್ಮ ಪ್ರಾಚೀನ ವಿದ್ಯೆಯನ್ನು ನಿರುಪಯೋಗಿ ಎಂದು ಪರಿಗಣಿಸಿದರು ಹಾಗೂ ಪಾಶ್ಚಿಮಾತ್ಯ ವಿಜ್ಞಾನಗಳನ್ನು ಕಲಿಯಲು ಮುಂದೆ ಧಾವಿಸಿದರು. ನಮ್ಮ ಧರ್ಮದ ನಿಜವಾದ ಸ್ವರೂಪವನ್ನು ಅಭ್ಯಸಿಸಲಾಗಲಿ. ಮನುಷ್ಯ ಮತ್ತು ದೇವರ ನಡುವೆ ನಮ್ಮ ಧರ್ಮ ಏನು ಹೇಳುತ್ತದೆ ಎಂಬುದನ್ನು ಅರಿತುಕೊಳ್ಳಲಾಗಲಿ ಅವರು ಗಮನ ನೀಡಲಿಲ್ಲ. ಈ ವಿಷಯದ ಮೇಲೆ ನಮ್ಮಲ್ಲಿನ ಪುಸ್ತಕಗಳಲ್ಲಿ ಏನು ಬರೆದಿದೆ ಎಂಬುದನ್ನು ತಿಳಿದುಕೊಳ್ಳುವುದಂತಿರಲಿ, ಯಾವ ಪುಸ್ತಕಗಳಿವೆ ಎಂಬುದನ್ನು ತಿಳಿದುಕೊಳ್ಳಲೂ ಅವರು ಲಕ್ಷ್ಯ ಕೊಡಲಿಲ್ಲ. ಈ ವಿಚಾರಗಳು ಹಾಗೂ ದೈನಂದಿನ ಜೀವನದ ನಡುವಣ ಸಂಬಂಧವನ್ನು ಅರಿತುಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ."

ಕೇಶಬ್‌ಚಂದ್ರ ಸೇನ್‌ರಂತೆ ಅನೇಕರು ಕ್ರೈಸ್ತ ಧರ್ಮದ ಆಕರ್ಷಣೆಗೊಳಗೊಂಡರು. ಕೇಶಬ್‌ಚಂದ್ರ ಸೇನ್‌ರು ಕ್ರೈಸ್ತಧರ್ಮವನ್ನು ಬಹಿರಂಗವಾಗಿ ಅಪ್ಪಿಕೊಳ್ಳುವುದರಲ್ಲಿದ್ದರು. ಹಿಂದೂ ಸಮಾಜದ ಕುಂದುಕೊರತೆಗಳನ್ನು ದೊಡ್ಡದು ಮಾಡಿ, ಅವುಗಳನ್ನು ಪದೇ ಪದೇ ಟೀಕಿಸಿ, ತಮಗೆ ದೊರೆತ ಅವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಕ್ರೈಸ್ತ ಧರ್ಮ ಪ್ರಚಾರಕರು ತೀವ್ರವಾಗಿ ಶ್ರಮಿಸಿದರು. ದಯಾನಂದರು ಅವರ ವಿರುದ್ಧ ತಮ್ಮ ಧಾಳಿಯನ್ನು ಪ್ರಾರಂಭಿಸುವುದಕ್ಕೆ ಮೊದಲೇ, ವಿಷ್ಣುಬುವಾ ಬ್ರಹ್ಮಚಾರಿಯವರಂತಹವರು ಈ ಧರ್ಮ ಪ್ರಚಾರಕರ ಮತಾಂತರ ಚಟುವಟಿಕೆಗಳ ವಿರುದ್ಧ ಹೋರಾಡುತ್ತಿದ್ದರು.

ವಿಷ್ಣುಶಾಸ್ತ್ರಿ ಚಿಪ್ಳೂಣಕರರು ತಮ್ಮ 'ನಿಬಂಧಮಾಲ' ಪ್ರಾರಂಭಿಸಿದಾಗ ಮಹಾರಾಷ್ಟ್ರದಲ್ಲಿ ಪುನರುಜ್ಜೀವನ ಚಳವಳಿ ಪ್ರಾರಂಭವಾಯಿತು. ಅಲ್ಲಿಯವರೆಗೆ, ಹಿಂದೂ

ಧರ್ಮ ಮತ್ತು ಸಂಸ್ಕೃತಿಯ ಪರವಾಗಿ ವಾದಿಸಿದವರು ಕೇವಲ ಅದರ ಸಮರ್ಥನೆಯಲ್ಲೇ ತೃಪ್ತರಾಗಿದ್ದರು. ವಿಷ್ಣುಶಾಸ್ತ್ರಿಯವರ ಲೇಖನಗಳಲ್ಲಿ ಸಮರ್ಥನೆ ಅಥವಾ ತಪ್ಪೊಪ್ಪಿಗೆಯನ್ನು ಸೂಚಿಸುವಂತಹುದೇನೂ ಇರಲಿಲ್ಲ. ಅವರು ವಿದೇಶಿ ಧರ್ಮ ಪ್ರಚಾರಕರನ್ನೇ ಅಲ್ಲದೆ. ಸ್ಥಳೀಯ ಸಮಾಜ ಸುಧಾರಕರನ್ನು, ಅದರಲ್ಲೂ ಪಾಶ್ಚಿಮಾತ್ಯ ರೀತಿನೀತಿಗಳನ್ನೂ, ಸಂಪ್ರದಾಯಗಳನ್ನೂ ಅನುಕರಿಸುವವರನ್ನು ಉಗ್ರವಾಗಿ ಖಂಡಿಸಿದರು. ಅವರ ವಾದ ಕೆಲವೊಮ್ಮೆ ಒರಟುತನ ಮತ್ತು ಅಸಭ್ಯತೆಗೆ ಇಳಿದರೂ ಅದು ಜನರ ಮನಸ್ಸಿಗೆ ನಾಟುತ್ತಿತ್ತು ಎಂದು ಧಾರಾಳವಾಗಿ ಹೇಳಬಹುದು.

ತಿಲಕರು ಪ್ರಾಯಕ್ಕೆ ಬಂದನಂತರ ಸಮಾಜ ಸುಧಾರಣೆ ಮತ್ತು ಸಂಪ್ರದಾಯ ವಾದದ ನಡುವಣ ಹೋರಾಟವನ್ನು ಸೇರಿದರು. ಈ ವಿಷಯದ ಮೇಲೆ ತಿಲಕರು ಮತ್ತು ಆಗರ್ಕರರ ನಡುವೆ ಅವರ ವಿದ್ಯಾರ್ಥಿ ದಿನಗಳಲ್ಲಿ ಅನೇಕ ಸ್ವಾರಸ್ಯಕರ ಚರ್ಚೆಗಳು ನಡೆಯುತ್ತಿದ್ದುವು. ಆಗರ್ಕರರು ರಾಷ್ಟ್ರಪ್ರೇಮಿಯಾಗಿದ್ದಂತೆ ಸಮಾಜ ಸುಧಾರಣೆಯ ಉಗ್ರ ಪ್ರವಾದಿಯೂ ಆಗಿದ್ದರು. ಆದರೆ ರಾಜಕೀಯ ಸುಧಾರಣೆಗೆ ಆದ್ಯತೆಯ ಗಮನ ದೊರಕಬೇಕೆಂದು ತಿಲಕರು ಭಾವಿಸಿದ್ದರು. ಸಾಮಾನ್ಯವಾಗಿ ಭಾವಿಸಲಾಗಿರುವಂತೆ ಸಂಪ್ರದಾಯತಾವಾದ ಮತ್ತು ಹಳೆಯ ಗೊಡ್ಡು ಆಚಾರಗಳನ್ನು ಅವರೆಂದೂ ಬೆಂಬಲಿಸಿರಲಿಲ್ಲ.

ತಿಲಕರ ಜೀವಿತ ಕಾಲದಲ್ಲಿ ಅವರ ಬಗ್ಗೆ ಅಂತಹ ಅಭಿಪ್ರಾಯ ಮೂಡಿದ್ದು ಸಹಜವಾಗಿತ್ತು. ಏಕೆಂದರೆ ಅವರು ಸಮಾಜ ಸುಧಾರಕರನ್ನು ಸತತವಾಗಿ ವಿರೋಧಿಸಿದ್ದರು. ಸಮಾಜ ಸುಧಾರಕರಂತೆ ಹಿಂದೂ ಸಮಾಜದ ಪುನರುಜ್ಜೀವನವನ್ನು ಅವರೂ ಬಯಸಿದ್ದರು. ಆದರೆ ಅವರು ಹಿಂದೂ ಸಮಾಜದ ಧಾರ್ಮಿಕ ಸಿದ್ಧಾಂತಗಳು, ತತ್ತ್ವಜ್ಞಾನದ ಸಂಪ್ರದಾಯಗಳು ಮತ್ತು ನೈತಿಕ ಮೌಲ್ಯಗಳಲ್ಲಿ ಆಳವಾದ ವಿಶ್ವಾಸ ಹೊಂದಿದ್ದರು ಹಾಗೂ ಅಗತ್ಯವಾದ ಬದಲಾವಣೆಗಳು ಕ್ರಮೇಣ ಆಗಬೇಕೆಂದೂ ಅವು ಬಲವಂತಕ್ಕೆ ಬದಲಾಗಿ ಸಮ್ಮತಿಯಿಂದ ಆಗಬೇಕೆಂದೂ ಅವರ ವಾದವಾಗಿತ್ತು. ಸಾಮಾಜಿಕ ಸುಧಾರಣೆಗೆ ಸಾಮೂಹಿಕ ಶಿಕ್ಷಣ ಅತ್ಯುತ್ತಮ ಸಾಧನವೆಂದು ನಂಬಿದ್ದರು ಹಾಗೂ ಈ ಸುಧಾರಣೆಯನ್ನು ಹೊಂದುವಲ್ಲಿ ಒಂದು ಟನ್ ಉಪದೇಶಕ್ಕೆ ಒಂದು ಔನ್ಸಿನಷ್ಟು ಆಚರಣೆ ಸಮವೆಂದು ಅವರು ತಿಳಿದಿದ್ದರು. ಸುಧಾರಣೆಗಳ ಪ್ರವಾದಿಗಳ ತತ್ತ್ವಗಳು ಮತ್ತು ಕಾರ್ಯಗಳ ನಡುವೆ ಇದ್ದ ಅಂತರ ತಿಲಕರ ಪರಿಹಾಸಕ್ಕೆ ಗುರಿಯಾಗಿದ್ದು ಉಚಿತವಾಗಿಯೇ ಇದೆ.

ಆ ಕಾಲದ ಬಗ್ಗೆ ಅಧ್ಯಯನ ಮಾಡುತ್ತಿರುವ ನಿಷ್ಪಕ್ಷಪಾತ ವಿದ್ಯಾರ್ಥಿಯೊಬ್ಬ, ಆಗಿನ ಸಮಾಜ ಸುಧಾರಕರು ತಾರತಮ್ಯ ಜ್ಞಾನಕ್ಕಿಂತಲೂ ಹೆಚ್ಚಾಗಿ ಉತ್ಸಾಹದಿಂದ ಪ್ರೇರಿತರಾಗಿದ್ದರೆಂಬ ಅಭಿಪ್ರಾಯಕ್ಕೆ ಬರುವುದು ಅನಿವಾರ್ಯ. ಆಗರ್ಕರ್ ಅಂತಹವರು ಸಮಾಜ ಸುಧಾರಣೆಯ ಬಗ್ಗೆ ಧರ್ಮೋಪದೇಶಕರ ಹುರುಪನ್ನು ಹೊಂದಿದ್ದರೆ, ಬೈರಾಂಜಿ ಮಲಬಾರಿ ಅಂತಹವರು ಪಾಶ್ಚಿಮಾತ್ಯ ಸಮಾಜದ ಅನುಕರಣೆಯ ಬಗ್ಗೆ ಮಾತ್ರವೇ ವ್ಯಗ್ರರಾಗಿದ್ದರು. ಸಮಾಜ ಸುಧಾರಣೆಯ ಅಗತ್ಯದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದಕ್ಕೆ ಬದಲಾಗಿ, ಮಲಬಾರಿ ಅವರು ೧,೦೦೦ ಮೈಲಿಗಳ

ದೂರದ ಬ್ರಿಟನ್‌ನಲ್ಲಿ ಚಳವಳಿಯೊಂದನ್ನು ನಡೆಸಿದ್ದು ವಿಚಿತ್ರವಾಗಿತ್ತು. ಬ್ರಿಟಿಷ್ ಆಡಳಿತಗಾರರು ವಿದೇಶೀಯರೂ, ಬೇಜವಾಬ್ದಾರಿಯುತರೂ ಆಗಿದ್ದುದೇ ಅಲ್ಲದೆ, ಮೂಲತಃ ಭಿನ್ನವಾದ ಧಾರ್ಮಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿದ್ದರಿಂದ ಅವರು ಸಮಾಜ ಸುಧಾರಣೆಯನ್ನು ಜಾರಿಗೆ ತರುವುದನ್ನು ತಿಲಕರು ವಿರೋಧಿಸಿದರು.

ದೈವ್ವ ಧರ್ಮಗ್ರಂಥವನ್ನು ಉಲ್ಲೇಖಿಸುವಂತೆ, ಧಾರ್ಮಿಕ ಅಧಿಕಾರದ ಮೂಲಕ ತಮ್ಮ ಮೆಚ್ಚಿನ ಸುಧಾರಣೆಗಳಿಗೆ ಬೆಂಬಲ ನೀಡಲು ಪ್ರಯತ್ನಿಸಿದವರನ್ನಂತೂ ತಿಲಕರು ಸ್ವಲ್ಪವೂ ಸಹಿಸಲಿಲ್ಲ. ಅವರ ವಾಗಾಡಂಬರವನ್ನು ಬಯಲಿಗೆಳೆಯುವುದು ತಿಲಕರಿಗೆ ಎಷ್ಟೂ ಕಠಿಣವಾಗಲಿಲ್ಲ. ಖ್ಯಾತ ಪೌರಸ್ತ್ಯ ಪಂಡಿತರಾದ ಡಾ। ಆರ್. ಜಿ. ಭಂಡಾರ್ಕರ್ ಅವರ ವಿರುದ್ಧವೂ ತಿಲಕರು ವಾದಕ್ಕೆ ಪ್ರತಿವಾದ, ಪದ್ಯಕ್ಕೆ ಪದ್ಯ, ಗದ್ಯಕ್ಕೆ ಗದ್ಯವನ್ನು ಉಲ್ಲೇಖಿಸಿ ಹೋರಾಡಿದರು. ಸಮಾಜ ಪುನರ್ನಿರ್ಮಾಣದ ಅಗತ್ಯವನ್ನು ಒಮ್ಮೆ ಒಪ್ಪಿಕೊಂಡ ಮೇಲೆ ಧಾರ್ಮಿಕ ಗ್ರಂಥಗಳ ಊರುಗೋಲುಗಳ ನೆರವನ್ನು ಪಡೆಯುವುದು ಹಾಸ್ಯಾಸ್ಪದವೇ ಸರಿ.

ತಿಲಕರ ವಿರೋಧಿಗಳು ಅವರನ್ನು ಕಟ್ಟಾ ಸಂಪ್ರದಾಯವಾದಿ, ಮತಾಂಧ ಹಾಗೂ ಪ್ರಗತಿ ವಿರೋಧಿ ಎಂದು ಖಂಡಿಸಿದ್ದು ಅನಿವಾರ್ಯವಾಗಿದೆ. ಆವೇಶಗಳು ಪುಟಿದೆದ್ದಾಗ, ಕಪ್ಪು ಅಥವಾ ಬಿಳಿಯನ್ನು ಬಿಟ್ಟರೆ ಬೇರೆ ಬೇರೆ ಬಣ್ಣದ ಅಭಿಪ್ರಾಯಗಳಿಗೆ ಎಡೆಯಿಲ್ಲ. ಕೇವಲ ಗಿಣಿಯಂತೆ ಪುನರುಚ್ಚಾರ ಮಾಡುವುದರಿಂದ ಮಾತ್ರವೇ, ತಿಲಕರು ಸಾಮಾಜಿಕ ಪ್ರಗತಿಯ ವಿರೋಧಿ ಎಂಬ ಆಪಾದನೆ ಐತಿಹಾಸಿಕ ಸೋಗು ಗಳಿಸಿರುವುದು ವಿಚಿತ್ರವಷ್ಟೇ ಅಲ್ಲ, ಅನ್ಯಾಯವೂ ಕೂಡ. ಅವರ ಜೀವನ ಚರಿತ್ರೆಯನ್ನು ಇತ್ತೀಚೆಗೆ ಬರೆದ ಭಾರತೀಯರು ಈ ಆಪಾದನೆಗೆ ಮೌನ ಸಮ್ಮತಿ ನೀಡಿರುವುದೇ ಅಲ್ಲದೆ, ಹೆನ್ರಿಕ್ ಕ್ರೇಮರ್ ('ವರ್ಲ್ಡ್ ಕಲ್ಚರ್ಸ್ ಅಂಡ್ ವರ್ಲ್ಡ್ ರಿಲಿಜಿಯನ್ಸ್' ಪುಸ್ತಕದಲ್ಲಿ) ಮತ್ತು ಅಮೌರಿ ದ್ ರಿಯಂಕೋರ್ಟ್ ('ದಿ ಸೌಲ್ ಆಫ್ ಇಂಡಿಯಾ' ಪುಸ್ತಕದಲ್ಲಿ) ಅವರಂತಹ ಪಾಂಡಿತ್ಯಪೂರ್ಣ ವಿದೇಶಿ ಲೇಖಕರೂ ಸಹ ಅದಕ್ಕೆ ಅಂತರರಾಷ್ಟ್ರೀಯ ಪ್ರಚಲನೆ ಕೊಟ್ಟಿದ್ದಾರೆ.

ಈ ಆಪಾದನೆ ತಿಲಕರನ್ನು ತಪ್ಪಾಗಿ ಚಿತ್ರಿಸುತ್ತದೆ. ಹಾಗೂ ಅವರ ನೆನಪಿಗೆ ಇದರಿಂದ ಅನ್ಯಾಯವಾಗುತ್ತದೆ. ಮೋರ್ಲೆ ಅವರು ಹೇಳಿದಂತೆ, ಸಮಾಜದ ಸಮಗ್ರ ಪುನರುಜ್ಜೀವನಕ್ಕೆ ಸಮಾಜ ಸುಧಾರಕ ಹಾಗೂ ರಾಜಕಾರಣಿ ಇಬ್ಬರ ಅಗತ್ಯವೂ ಸಮಾನವಾಗಿದೆ. ರಾಜಕೀಯ ಪ್ರಗತಿಗೆ ತಿಲಕರು ಉದ್ದೇಶಪೂರ್ವಕವಾಗಿ ಪ್ರಾಶಸ್ತ್ಯ ನೀಡಿದ್ದರು. ಸ್ವಾತಂತ್ರ್ಯ ಎಲ್ಲ ಸುಧಾರಣೆಗಳ ಮೂಲಮಂತ್ರ ಎಂದು ಅವರು ಸರಿಯಾಗಿಯೇ ನಂಬಿದ್ದರು. ಭಾರತ ಸ್ವಾತಂತ್ರ್ಯ ಗಳಿಸಿದಾಗಿನಿಂದೀಚೆಗೆ ಈ ನಂಬಿಕೆಗೆ ಧಾರಾಳವಾದ ಸಮರ್ಥನೆ ದೊರೆತಿದೆ. ಇತರ ವಿವಾದಾಸ್ಪದ ವಿಷಯಗಳಲ್ಲಿ ತೊಡಗುವುದರಿಂದ, ಆದರ್ಶಗಳ ಬಗ್ಗೆ ಗೊಂದಲ, ಶಕ್ತಿ, ಶ್ರಮಗಳ ಶಿಥಿಲತೆ ಉಂಟಾಗುತ್ತದೆ. "ಯಾವುದು ಮೊದಲಾಗಬೇಕು: ಸಾಮಾಜಿಕ ಸುಧಾರಣೆಯೋ, ರಾಜಕೀಯ ಸುಧಾರಣೆಯೋ?" ಎಂಬ ವಿಷಯದ ಬಗ್ಗೆ ತಾವು ಮಾಡಿದ ಭಾಷಣದಲ್ಲಿ ನ್ಯಾಯಮೂರ್ತಿ ಕೆ. ಟಿ. ತೆಲಂಗ್ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಒಪ್ಪಿ, ಅವುಗಳ ಬಗ್ಗೆ

ವ್ಯಾಖ್ಯಾನಿಸಿ, ತಿಲಕರು ೧೮೮೪ರಲ್ಲಿ 'ಕೇಸರಿ'ಯಲ್ಲಿ ಅಗ್ರಲೇಖನವೊಂದನ್ನು ಬರೆದರು. ರಾಜಕೀಯ ಸ್ವಾತಂತ್ರ್ಯಕ್ಕೆ ಸಾಮಾಜಿಕ ಮುನ್ನಡೆ ಅತ್ಯಾವಶ್ಯಕ ಎಂಬ ಅಭಿಪ್ರಾಯವನ್ನು ತೆಲಂಗ್ ವಿರೋಧಿಸಿದರು.

ಹದಿನೇಳನೆಯ ಶತಮಾನದಲ್ಲಿ ದೊರೆಗಳಿಂದ ರಾಜಕೀಯ ಅಧಿಕಾರವನ್ನು ಕಸಿದುಕೊಂಡ ಬ್ರಿಟಿಷ್ ಜನರು ಹತ್ತೊಂಭತ್ತನೆಯ ಶತಮಾನದ ವರೆಗೆ ಸಾಮಾಜಿಕವಾಗಿ ಹಿಂದೆಯೇ ಉಳಿದಿದ್ದರು. ಬ್ರಿಟನ್‌ನ ಸಾಮಾಜಿಕ ಪರಿಸ್ಥಿತಿಗಳನ್ನು ಹೋಲುತ್ತಿದ್ದ ಪರಿಸ್ಥಿತಿಗಳನ್ನು ಹೊಂದಿದ್ದ ಐರ್ಲೆಂಡ್ ಸಹ ಭಾರತದಂತೆ ಬ್ರಿಟನ್‌ನ ದಾಸ್ಯಕ್ಕೊಳಗಾಗಿತ್ತು. "ಪ್ರಸಕ್ತ ಪರಿಸ್ಥಿತಿಗಳಲ್ಲಿ, ನಮ್ಮ ಶಕ್ತಿಯ ದೊಡ್ಡ ಪಾಲು ಸಾಮಾಜಿಕ ಸುಧಾರಣೆಗಿಂತ ರಾಜಕೀಯ ಸುಧಾರಣೆಗೆ ದೊರೆಯಬೇಕು" ಎಂಬ ತೆಲಂಗ್ ಅವರ ಅಭಿಪ್ರಾಯವನ್ನು ತಿಲಕರು ಒಪ್ಪಿದ್ದರು.

ತಿಲಕರು ಸಾಮಾಜಿಕ ಸುಧಾರಣೆಗೆ ವಿರುದ್ಧವಾಗಿರಲಿಲ್ಲ. ಆದರೆ ಯಾವ ಸಮಾಜದ ಉದ್ಧಾರಕ್ಕೆ ಈ ಸುಧಾರಣೆಯಾಗಬೇಕಿತ್ತೋ ಅದರ ಗಂಟಲಲ್ಲಿ ಸುಧಾರಣೆಯನ್ನು ತುರುಕುವುದು ತಿಲಕರಿಗೆ ಬೇಕಿರಲಿಲ್ಲ. ೧೮೯೦ರಲ್ಲಿ ಪೂನಾದಲ್ಲಿ ಮಾಡಿದ ಭಾಷಣದಲ್ಲಿ ಅವರು ಹೀಗೆ ನುಡಿದರು:

"ಸಮಾಜ ಸುಧಾರಣೆಯ ಬಗ್ಗೆ ಬಹಳ ಮಾತು ನಡೆದಿದೆ. ಆದರೆ ಜನಸಾಮಾನ್ಯರನ್ನು ನಾವು ಸುಧಾರಿಸಬೇಕಾಗಿದೆಯೆಂಬುದನ್ನು ನಾವು ಗಮನದಲ್ಲಿಡಬೇಕು: ನಾವು ಅವರಿಂದ ದೂರವಿದ್ದದ್ದೇ ಆದರೆ ಸುಧಾರಣೆ ಅಸಾಧ್ಯವಾಗುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ. ವಿಧವಾ ವಿವಾಹ ಅಪೇಕ್ಷಣೀಯ ಸುಧಾರಣೆಯಾಗಿದ್ದರೂ ಬಹುತೇಕ ಸುಧಾರಕರು ತಮ್ಮ ಕುಟುಂಬಗಳಲ್ಲಿ ಇದನ್ನು ಆಚರಣೆಗೆ ತರುತ್ತಿಲ್ಲ. ಆದ್ದರಿಂದ. ಪ್ರತಿಯೊಬ್ಬರೂ ಸುಧಾರಣೆಯನ್ನು ತಮ್ಮಿಂದಲೇ ಪ್ರಾರಂಭಿಸಬೇಕು ಹಾಗೂ ಇತರರನ್ನು ವಾದಕ್ಕಿಂತಲೂ ಕೃತಿಯಿಂದ ಪರಿವರ್ತಿಸಬೇಕೆಂದು ನಾನು ಭಾವಿಸುತ್ತೇನೆ. ಸುಧಾರಣಾವಾದಿಗಳು ತಮ್ಮದೇ ಬೋಧನೆಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು."

ತಿಲಕರ ಸಾರ್ವಜನಿಕ ಜೀವನದ ಮೊದಲ ಕೆಲವು ವರ್ಷಗಳು ರಾಜಕೀಯ ಹೋರಾಟಕ್ಕಿಂತಲೂ ಹೆಚ್ಚಾಗಿ ಸಾಮಾಜಿಕ ಸುಧಾರಣೆಯ ವಿವಾದದಲ್ಲಿ ಕಳೆದವು ಎಂಬುದು ವಿಪರ್ಯಾಸವೇ ಸರಿ. ೧೮೮೪ರಲ್ಲಿ ರಖ್ಮಾಬಾಯಿ–ದಾದಾಜಿ ಪ್ರಕರಣದಿಂದ ೧೯೦೧ರಲ್ಲಿ ವೇದೋಕ್ತ ಘಟನೆಯವರೆಗೂ ಇದಕ್ಕೆ ಅನೇಕ ಪ್ರಚೋದನೆಗಳು ದೊರೆತವು. ದಾಂಪತ್ಯದ ಹಕ್ಕುಬಾಧ್ಯತೆಗಳನ್ನು ಮರಳಿ ಕೊಡಿಸಬೇಕೆಂಬ ಗಂಡನ ಮನವಿಯನ್ನೊಳಗೊಂಡ ರಖ್ಮಾಬಾಯಿ ಪ್ರಕರಣ ಭಾರೀ ಕೋಲಾಹಲವನ್ನುಂಟುಮಾಡಿತು. ದಾದಾಜಿಯೊಂದಿಗೆ ಮದುವೆ ತನ್ನ ಒಪ್ಪಿಗೆ ಇಲ್ಲದೆ ಆಯಿತೆಂದೂ. ಆದ್ದರಿಂದ ಅವನ ಜೊತೆ ಇರಲು ತನ್ನನ್ನು ಬಲವಂತ ಮಾಡಬಾರದೆಂದೂ ರಖ್ಮಾಬಾಯಿಯ ವಾದವಾಗಿತ್ತು. ಈ ವಾದ ಹಿಂದೂ ಕಾನೂನಿಗೆ ಸ್ಪಷ್ಟವಾಗಿ ವಿರುದ್ಧವಾಗಿತ್ತು. ಆಕೆಯ ಪರವಾಗಿ ಆಗಿದ್ದ ಮೊದಲ ತೀರ್ಪನ್ನು ಶ್ರೇಷ್ಠ ನ್ಯಾಯಾಲಯ ತಳ್ಳಿಹಾಕಿತು. ಆದರೆ

ರಖ್ಮಾಬಾಯಿಯ ಪರವಾಗಿ ಸಾರ್ವಜನಿಕರಲ್ಲಿ ಸಹಾನುಭೂತಿ ಉಂಟಾಯಿತು ಹಾಗೂ ಆಕೆಯ ಸಲುವಾಗಿ ಒಂದು ನಿಧಿಯನ್ನೂ ಸಂಗ್ರಹಿಸಲಾಯಿತು.

ಶ್ರೇಷ್ಠ ನ್ಯಾಯಾಲಯದ ತೀರ್ಪು ಹಿಂದೂ ಕಾನೂನು ಮತ್ತು ಪದ್ಧತಿಯನ್ನು ಎತ್ತಿಹಿಡಿದಿದೆ ಎಂದು ತಿಲಕರು ತೀರ್ಪನ್ನು ಸ್ವಾಗತಿಸಿದರು. ಅವರು ಈ ಬಗ್ಗೆ ರಾನಡೆಯವರೊಂದಿಗೆ ಮಾಡಿದ ಬಿರುಸಿನ ವಾದದಲ್ಲಿ, ಇಚ್ಛೆ ಇಲ್ಲದ ಹೆಂಡತಿಯನ್ನು ಗಂಡನೊಂದಿಗೆ ಇರಲು ಒತ್ತಾಯಿಸಬಾರದೆಂಬ ಅಭಿಪ್ರಾಯ ಆಧಾರರಹಿತ ಎಂದು ತೋರಿಸಲು ಧರ್ಮಗ್ರಂಥಗಳಲ್ಲಿ ತಮಗಿದ್ದ ಆಳವಾದ ಜ್ಞಾನದ ನೆರವು ಪಡೆದರು. ತಿಲಕರು 'ಕೇಸರಿ'ಯಲ್ಲಿ ಬರೆದ ಎರಡು ಲೇಖನಗಳು ಅತ್ಯಂತ ಪ್ರಭಾವಪೂರ್ಣವಾಗಿದ್ದರೂ. ಮಾನವೀಯ ಅಂಶಗಳನ್ನು ಅವರು ಕಡೆಗಾಣಿಸಿದಂತೆ ತೋರುತ್ತದೆ ಹಾಗೂ ಮಹಿಳೆಯ ಉದ್ಧಾರದ ವಿರೋಧಿಯಾಗಿ ತಮ್ಮನ್ನು ತಾವೇ ಚಿತ್ರಿಸಿಕೊಂಡಂತೆ ಕಾಣುತ್ತದೆ.

ಚರ್ಚೆಗಳ ಪ್ರಖರತೆಯಿಂದ ತಿಲಕರು ಆಗಾಗ ಇಂತಹ ತೀವ್ರ ನಿಲುವುಗಳನ್ನು ತಾಳುತ್ತಿದ್ದರು ಎಂಬುದನ್ನು ಅಲ್ಲಗಳೆಯುವುದು ವ್ಯರ್ಥವೇ ಸರಿ. ಒಂದಾದನಂತರ ಒಂದಾಗಿ ಎದ್ದ ವಿವಾದಗಳಲ್ಲಿ ತಿಲಕರು ಕೆಲವು ಸಲ ಸಂಪ್ರದಾಯವಾದಿ ಅಭಿಪ್ರಾಯವನ್ನು ಎತ್ತಿಹಿಡಿದ ವ್ಯಕ್ತಿಯಾಗಿದ್ದರು. ಹೀಗಾಗಿ ಪ್ರಗತಿ ವಿರೋಧಿ ಎಂಬ ಸುಧಾರಣಾವಾದಿಗಳ ಆಪಾದನೆಯನ್ನು ಅವರು ಎದುರಿಸಬೇಕಾಯಿತು. ಆದರೆ ಅದೇ ಸಮಯಕ್ಕೆ ಸಂಪ್ರದಾಯವಾದಿಗಳ ಕೃತಜ್ಞತೆಯನ್ನೇನೂ ಅವರು ಗಳಿಸಲಿಲ್ಲ. ಏಕೆಂದರೆ ತಿಲಕರು ಸುಧಾರಣಾವಾದಿಗಳಿಂದ ಎಷ್ಟು ಮೂಲಭೂತವಾಗಿ ಭಿನ್ನವಾಗಿದ್ದರೋ ಸಂಪ್ರದಾಯವಾದಿಗಳಿಂದಲೂ ಅಷ್ಟೇ ಭಿನ್ನವಾಗಿದ್ದರು. ಮಲಬಾರಿ ಮತ್ತು ಅವರ ಸ್ನೇಹಿತರ ಪ್ರಯತ್ನಗಳಿಂದ, ಜನವರಿ ೯, ೧೮೯೧ರಂದು ಇಂಪೀರಿಯಲ್ ಶಾಸಕಾಂಗ ಮಂಡಳಿಯಲ್ಲಿ ಮಂಡಿಸಲಾದ 'ಒಪ್ಪಿಗೆಯ ವಯಸ್ಸು' ಮಸೂದೆ, ಯಾರೂ ಅಸೂಯೆಪಡಲಾಗದ ತಿಲಕರ ಪರಿಸ್ಥಿತಿಯನ್ನು ಎತ್ತಿತೋರಿಸಿತು. ೧೨ ವರ್ಷಗಳಿಗೂ ಕಡಿಮೆ ವಯಸ್ಸಿನ ಹೆಂಡತಿಯೊಂದಿಗೆ ಸಂಭೋಗ ಮಾಡುವುದನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡಬೇಕೆಂಬುದು ಹಾಗೂ ಹೆಂಡತಿ ಪ್ರಾಪ್ತ ವಯಸ್ಕಳಾದಾಗ. ಆಕೆ ಇಚ್ಛಿಸಿದಲ್ಲಿ ಮದುವೆಯನ್ನು ನಿರಾಕರಿಸುವ ಅವಕಾಶ ಆಕೆಗೆ ಇರಬೇಕೆಂಬುದು ಈ ಮಸೂದೆಯ ಮುಖ್ಯ ಸಲಹೆಗಳಾಗಿದ್ದುವು.

ಮಸೂದೆ ಹಿಂದೂ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳಲ್ಲಿ ಹಸ್ತಕ್ಷೇಪ ಮಾಡುತ್ತದೆಂದು ತಿಲಕರು ಅದನ್ನು ವಿರೋಧಿಸಿದರು ಹಾಗೂ ಅದರ ವಿರುದ್ಧ ಪ್ರಬಲವಾದ ಚಳವಳಿಯನ್ನು ನಡೆಸಿದರು. ನಕಾರಾತ್ಮಕ ನಿಲುವನ್ನು ತಾಳುವುದರೊಂದಿಗೆ ತೃಪ್ತರಾಗದೆ, ತಿಲಕರು ಸಮಾಜ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ರೂಪಿಸಿದರು. ಸುಧಾರಣೆಗೆ ಬೆಂಬಲ ನೀಡುವವರು ಸ್ವ-ಇಚ್ಛೆಯಿಂದ ಈ ಸಲಹೆಗಳಿಗೆ ಬದ್ಧರಾಗಬೇಕಿತ್ತು. ಈ ಸಲಹೆಗಳನ್ನು ಇಲ್ಲಿ ಉಲ್ಲೇಖಿಸುವುದು ಸಮಯೋಚಿತವಾಗಿದೆ. ಏಕೆಂದರೆ ತಿಲಕರು ಪ್ರಗತಿವಿರೋಧಿಯಾಗಿದ್ದರು ಎಂಬ ಭಾವನೆಯನ್ನು ಹೋಗಲಾಡಿಸಲು ಅವು ನೆರವಾಗುತ್ತವೆ: (೧) ಹುಡುಗಿಯರಿಗೆ ೧೬ರ ವಯಸ್ಸಿಗೆ ಮುನ್ನ ಮದುವೆ ಮಾಡಬಾರದು. (೨) ತರುಣರಿಗೆ ೨೦ರ ವಯಸ್ಸಿಗೆ ಮೊದಲು ಮದುವೆ

ಮಾಡಬಾರದು. (೩) ೪೦ರ ನಂತರ ಯಾವ ಗಂಡಸೂ ಮದುವೆಯಾಗಬಾರದು. (೪) ಒಬ್ಬ ಗಂಡಸು ಪುನಃ ಮದುವೆಯಾಗಬೇಕಾದಾಗ ಅವನು ವಿಧವೆಯೊಬ್ಬಳನ್ನು ಮದುವೆಯಾಗಬೇಕು. (೫) ಮದ್ಯಪಾನವನ್ನು ನಿಷೇಧಿಸಬೇಕು. (೬) ವರದಕ್ಷಿಣೆಯ ಪದ್ಧತಿಯನ್ನು ರದ್ದು ಮಾಡಬೇಕು. (೭) ವಿಧವೆಯರ ತಲೆಗಳನ್ನು ಬೋಳಿಸಬಾರದು. (೮) ಈ ಸುಧಾರಣೆಗಳನ್ನು ಒಪ್ಪಿಕೊಳ್ಳುವವರು ಅವುಗಳನ್ನು ಜಾರಿಗೆ ತರಲು ತಮ್ಮ ವರಮಾನದ ಶೇಕಡ ಹತ್ತರಷ್ಟನ್ನು ಕಾಣಿಕೆಯಾಗಿ ಕೊಡಬೇಕು. ತಿಲಕರ ಸಲಹೆಗಳಿಗೆ ಬೆಂಬಲ ನೀಡಲು ಸುಧಾರಣಾವಾದಿಗಳ ಪಂಗಡದಲ್ಲಿದ್ದ ಯಾರೂ ಮುಂದೆ ಬರಲಿಲ್ಲ ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ.

೧೯೬೧ರಲ್ಲಿ ವರದಕ್ಷಿಣೆಯನ್ನು ನಿಷೇಧಿಸಲಾಯಿತು ಹಾಗೂ ಮದ್ಯಪಾನ ನಿಷೇಧ ನಮ್ಮ ಸಂವಿಧಾನದ ನಿರ್ದೇಶನಾ ತತ್ತ್ವಗಳಲ್ಲಿದ್ದರೂ ಇನ್ನೂ ದೇಶಾದ್ಯಂತ ಜಾರಿಗೆ ಬರಬೇಕಾಗಿದೆ ಎಂಬ ಅಂಶಗಳನ್ನು ಗಮನಿಸಿದಾಗ ತಿಲಕರ ಸಲಹೆಗಳು ಎಷ್ಟು ಪ್ರಗತಿಗಾಮಿಯಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಮಸೂದೆ ಯಾವುದೇ ಹೊಸ ತತ್ತ್ವಗಳನ್ನು ಒಳಗೊಂಡಿಲ್ಲ ಹಾಗೂ ೧೦ ವರ್ಷಗಳಿಗೆ ಕಡಿಮೆ ವಯಸ್ಸಿನ ಹುಡುಗಿಯೊಂದಿಗೆ ಸಂಭೋಗ ಮಾಡುವುದನ್ನು ನಿಷೇಧಿಸುವ ಹಿಂದಿನ ಕಾಯಿದೆಯ ಕಾರ್ಯಾಚರಣೆಯನ್ನು ಮಾತ್ರ ಅದು ವಿಸ್ತರಿಸಿದೆ ಎಂಬ ಕಾರಣದಿಂದ ತೀವ್ರ ಸಾರ್ವಜನಿಕ ವಿರೋಧವಿದ್ದರೂ 'ಒಪ್ಪಿಗೆಯ ವಯಸ್ಸು' ಮಸೂದೆಯನ್ನು ಅಂಗೀಕರಿಸಲಾಯಿತು. ಕೆಲವು ಸಂಸ್ಕೃತ ಗ್ರಂಥಗಳಿಗೆ ಡಾ। ಭಂಡಾರ್ಕರ್ ನೀಡಿದ ವ್ಯಾಖ್ಯೆ ಸರ್ಕಾರದ ಕೈಗಳನ್ನು ಬಲಪಡಿಸಿತು. ಸರ್ಕಾರದ ಪಂಡಿತರ ಅಧಿಕೃತ ಅಭಿಪ್ರಾಯಗಳು ತಿಲಕರ ಅಭಿಪ್ರಾಯಗಳಿಗೆ ತಾಳೆಯಾಗಿದ್ದವು ಎಂಬುದು ಗಮನಾರ್ಹವಾಗಿದೆ. "ನನ್ನೊಂದಿಗೆ ಸರಿಯಾಗಿರುವುದಕ್ಕಿಂತಲೂ ಡಾ। ಭಂಡಾರ್ಕರ್ ಅವರೊಡನೆ ತಪ್ಪಾಗಿರಲು ಸರ್ಕಾರ ಕೊನೆಗೆ ತೀರ್ಮಾನಿಸಿತು" ಎಂದು ತಿಲಕರು ಕುಹಕವಾಗಿ ಟೀಕಿಸಿದರು.

"ಪಂಚಹೌದ್ ಘಟನೆ" ಎಂದು ಕರೆಯಲಾದ ಸಂಗತಿ ನಂತರ (ಅಕ್ಟೋಬರ್ ೧೮೯೦) ನಡೆಯಿತು. ವಿಧಿಯ ಚಮತ್ಕಾರವೋ ಎಂಬಂತೆ ಜೋಶಿ ಎನ್ನುವವರೊಬ್ಬರು ಸುಧಾರಕರು ಹಾಗೂ ಅವರ ವಿರೋಧಿಗಳನ್ನು ಪುಸಲಾಯಿಸಿ ಕ್ರೈಸ್ತ ಧಾರ್ಮಿಕ ಶಾಲೆಯಲ್ಲಿ ಒಟ್ಟಿಗೆ ಟೀ ಕುಡಿಯುವಂತೆ ಮಾಡಿದರು. ಮರುದಿನ ಅವರು ಹಿಗ್ಗಿನಿಂದ ಒಟ್ಟಿಗೆ ಟೀ ಕುಡಿದವರ ಹೆಸರುಗಳನ್ನು ಪ್ರಕಟಿಸಿದರು. ಕ್ರೈಸ್ತರೊಂದಿಗೆ ಬ್ರಾಹ್ಮಣರು ತಿಂಡಿ ತಿನ್ನುವುದು ಆ ಕಾಲದಲ್ಲಿ ಜಾತಿಯನ್ನು ಅಪವಿತ್ರಗೊಳಿಸುವ ಕಾರ್ಯವಾಗಿತ್ತು. ಇಂತಹ ಪಾಪದ ಪರಿಹಾರಕ್ಕೆ ಇದ್ದ ಒಂದೇ ಮಾರ್ಗವೆಂದರೆ ಪ್ರಾಯಶ್ಚಿತ್ತ. ತಪ್ಪಿತಸ್ಥರು (ಈ ಪೈಕಿ ತಿಲಕರೂ, ಸಮಾಜ ಸುಧಾರಣೆಯ ಪ್ರವರ್ತಕರಾಗಿದ್ದ ರಾನಡೆಯವರೂ ಸೇರಿದ್ದರು) ಪ್ರಾಯಶ್ಚಿತ್ತ ಮಾಡಿಕೊಂಡರು. ಈ ಘಟನೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ರಾನಡೆಯವರು ತೆಪ್ಪಗೆ ಪ್ರಾಯಶ್ಚಿತ್ತ ಮಾಡಿಕೊಂಡರೆ, ತಿಲಕರು ಸರ್ದಾರ್ ಬಾಳಾ ಸಾಹೇಬ್ ನಾಟು ಅವರಂತಹ ಸಂಪ್ರದಾಯವಾದಿ ಧುರೀಣರುಗಳ ವಿರುದ್ಧ ಹಿಂದೂಗಳ ಅತ್ಯುನ್ನತ ಧಾರ್ಮಿಕ ಅಧಿಕಾರಿಯಾದ

ಶಂಕರಾಚಾರ್ಯರ ಮುಂದೆ ತಮ್ಮ ಪ್ರಕರಣವನ್ನು ಬಲವಾಗಿ ವಾದಿಸಿದ ನಂತರವೇ ತಮ್ಮದೇ ಷರತ್ತಿಗೊಳಪಟ್ಟು ಪ್ರಾಯಶ್ಚಿತ್ತ ಮಾಡಿಸಿಕೊಂಡರು.

ಈ ಘಟನೆಯ ಬಗ್ಗೆ ತಿಲಕರು ಮಾಡಿದ ಟೀಕೆ ಅಭಿಪ್ರಾಯಗಳನ್ನು ಸರಿಯಾಗಿ ತೂಗಿದ ಟೀಕೆಯಾಗಿದೆ. "ಸುಧಾರಕರು ಮಂತ್ರದ ಕೋಲಿನಿಂದ ಸಮಾಜ ಸುಧಾರಣೆ ಮಾಡಲು ಬಯಸುತ್ತಾರೆ. ಆ ಕಾಲದ ಪ್ರಜ್ಞೆ ಮತ್ತು ವಾತಾವರಣಕ್ಕೆ ಸಮಂಜಸವಾದ ಸುಧಾರಣೆಗಳನ್ನು ತರಬಹುದು ಎಂದು ನಾವು ಭಾವಿಸಿದ್ದೇವೆ. ನಮಗೆಲ್ಲಾ ಸಂಸಾರಗಳಿವೆ ಹಾಗೂ ನಾವು ಸಮಾಜದೊಂದಿಗೆ ಬಾಳಲಿಚ್ಛಿಸುತ್ತೇವೆ. ಈ ಪರಿಸ್ಥಿತಿಗಳಲ್ಲಿ ವ್ಯಕ್ತಿಯ ಆಕಾಂಕ್ಷೆಗಳು ಮತ್ತು ಸಮಾಜದ ನಿರೀಕ್ಷೆಗಳ ನಡುವೆ ಸಾಮರಸ್ಯ ಉಂಟಾಗಬೇಕು. ಇಂತಹ ಸಾಮರಸ್ಯಗಳ ಮೂಲಕ ಸಾಧಿಸಲಾದ ಸುಧಾರಣೆಗಳು ಮಾತ್ರ ಉಳಿಯುತ್ತವೆ. ತಮ್ಮದೇ ವೈಯಕ್ತಿಕ ವಿಲಕ್ಷಣ ಇಚ್ಛೆಗಳಿಗೆ ಅನುಗುಣವಾಗಿ ಮಾತ್ರ ಜೀವಿಸಬೇಕೆನ್ನುವವರು ಮರುಭೂಮಿಯ ದ್ವೀಪವೊಂದರಲ್ಲಿ ವಾಸಿಸಬೇಕು. ಸಮಾಜದಲ್ಲಿ ಬಾಳಬೇಕೆನ್ನುವವರು ಸಾಮರಸ್ಯದ ಹಾದಿಯನ್ನನುಸರಿಸಬೇಕು."

ಸುಧಾರಣಾವಾದಿಗಳು ಮತ್ತು ಸಂಪ್ರದಾಯವಾದಿಗಳ ವಿರುದ್ಧದ ವ್ಯಾಜ್ಯಕ್ಕೆ ಪಂಡಿತಾ ರಮಾಬಾಯಿ ಮತ್ತೊಂದು ಕಾರಣವನ್ನು ಒದಗಿಸಿದರು. ಕಟ್ಟಾ ಸಂಪ್ರದಾಯ ನಿಷ್ಠರ ಮನೆಯಲ್ಲಿ ಬೆಳೆದಿದ್ದರೂ, ಧರ್ಮಗ್ರಂಥಗಳ ಅಪಾರ ಜ್ಞಾನ ಹೊಂದಿದ್ದರೂ– ಆ ಕಾಲಕ್ಕೆ ಒಬ್ಬ ಹೆಣ್ಣಿಗೆ ಇದು ಅಸಾಧಾರಣ ಸಾಧನೆಯಾಗಿತ್ತು – ಈ ಪ್ರತಿಭಾಶಾಲಿ ಮಹಿಳೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರು. ಪೂನಾದ ಶಾರದಾ ಸದನವನ್ನು ಹುಡುಗಿಯರ ಶಾಲೆಯಾಗಿ ಅವರು ನಡೆಸುತ್ತಿದ್ದಾಗ, ಶಾಲೆಯ ವಿದ್ಯಾರ್ಥಿನಿಯರಲ್ಲಿ ಮತಾಂತರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆಂಬ ಸಂಶಯ ಉಂಟಾಗಿತ್ತು. ಶಾರದಾ ಸದನದ ಸಲಹಾ ಮಂಡಳಿಯಲ್ಲಿ ಭಂಡಾರ್ಕರ್, ರಾನಡೆ ಮತ್ತು ತೆಲಂಗ್‌ರಂತಹ ಮಹನೀಯರಿದ್ದರು ಹಾಗೂ ತಿಲಕರೂ ಸಹ ಈ ಸಂಸ್ಥೆಯ ಬಗ್ಗೆ ಸದಭಿಪ್ರಾಯವನ್ನು ಹೊಂದಿದ್ದರು. ಆದರೆ ಪಂಡಿತಾ ರಮಾಬಾಯಿಯವರ ಪ್ರಾಮಾಣಿಕತೆಯ ಬಗ್ಗೆ ತಿಲಕರಿಗೆ ಸಂಶಯ ಮೂಡಲೂ,'ಕೇಸರಿ'ಯಲ್ಲಿ ಅವರು ಅಕೆಯನ್ನು ಬಯಲಿಗೆಳೆಯಲೂ ಬಹಳ ಸಮಯ ಹಿಡಿಸಲಿಲ್ಲ. "ಮಹಿಳಾ ಶಿಕ್ಷಣದ ಸೋಗಿನಲ್ಲಿ ನಮ್ಮ ಸಮಾಜದಲ್ಲಿ ವ್ಯಾಪಿಸಲು ಪ್ರಯತ್ನಿಸುವ ಕ್ರೈಸ್ತ ಮಹಿಳೆಯರನ್ನು ಮತ್ತು ಅವರ ಬೆಂಬಲಿಗರನ್ನು– ಅವರು ಎಷ್ಟೇ ಜ್ಞಾನಿಗಳಿರಲಿ – ಜನತೆಯ ಹಾಗೂ ಹಿಂದೂ ಧರ್ಮದ ಶತ್ರುಗಳೆಂದು ನಾವು ಭಾವಿಸುತ್ತೇವೆ."

ಈ ಎಚ್ಚರಿಕೆ ತೆಗೆದುಹಾಕಲಾಗದ ಸಾಕ್ಷ್ಯದ ಆಧಾರ ಹೊಂದಿದ್ದರೂ, ತಿಲಕರನ್ನು ಸಮಾಜ ಸುಧಾರಕರ ಸಿಟ್ಟಿಗೆ ಗುರಿಮಾಡಿತು. ಮಹಿಳಾ ಶಿಕ್ಷಣದ ಶತ್ರು ಎಂದು ತಿಲಕರನ್ನು ಕರೆಯಲಾಯಿತು. ಪಂಡಿತಾ ರಮಾಬಾಯಿ ಮತಾಂತರ ಚಟುವಟಿಕೆಗಳನ್ನು ಬಹಿರಂಗವಾಗಿಯೇ ನಡೆಸುತ್ತಿದ್ದುದರಿಂದ ಸ್ವಲ್ಪ ಸಮಯದಲ್ಲೇ ರಾನಡೆ ಮತ್ತು ಭಂಡಾರ್ಕರ್ ಅವರು ಶಾರದಾ ಸದನದೊಂದಿಗೆ ತಮ್ಮ ಸಂಬಂಧವನ್ನು ಕಡಿದುಕೊಳ್ಳಬೇಕಾಗಿ ಬಂದಿತು. ಇದರಿಂದ ತಿಲಕರ ಮೊದಲಿನ ನಿಲುವಿಗೆ ಸಮರ್ಥನೆ ದೊರಕಿತು. ಐದು ವರ್ಷಗಳನಂತರ ರಮಾಬಾಯಿ ಸಂಸ್ಥೆಯನ್ನು ಕೇದ್‌ಗಾಂವ್‌ಗೆ ವರ್ಗಾಯಿಸಿ

ದರು ಹಾಗೂ ಘಂಟಾಘೋಷವಾಗಿ ಅದನ್ನು ಮುಕ್ತಿ ಸದನ ಎಂಬ ಹೆಸರಿನ ಕ್ರೈಸ್ತ ಸಂಸ್ಥೆಯ ಅಂಗವಾಗಿ ಮಾಡಿದರು.

ಡಿಸೆಂಬರ್ ೧೮೯೫ರಲ್ಲಿ ಪೂನಾದಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನ ನಡೆಯುವ ಚಪ್ಪರದಲ್ಲಿ ಸಾಮಾಜಿಕ ಸಮ್ಮೇಳನವನ್ನು ನಡೆಸಬೇಕೆಂಬ ಸಲಹೆ ಎರಡೂ ಶಿಬಿರಗಳ ನಡುವಣ ಘರ್ಷಣೆಗೆ ಮತ್ತೊಂದು ಸಂದರ್ಭ ಒದಗಿಸಿತು. ವಿಚಿತ್ರವಾದ ಆಪಾದನೆಗಳನ್ನೂ. ಪ್ರತ್ಯಾಪಾದನೆಗಳನ್ನೂ ಮಾಡಲಾಯಿತು ಹಾಗೂ ಸಾಮಾಜಿಕ ಸಮ್ಮೇಳನ ನಡೆಸಲು ಬಳಸುವುದಕ್ಕೆ ಚಪ್ಪರವನ್ನು ಬಿಟ್ಟುಕೊಡುವುದಕ್ಕಿಂತಲೂ. ಅದಕ್ಕೆ ಬೆಂಕಿ ಇಟ್ಟುಬಿಡುವುದಾಗಿ ಕೆಲವು ಬಿಸಿರಕ್ತದ ಸಂಪ್ರದಾಯವಾದಿಗಳು ಬೆದರಿಕೆ ಹಾಕಿದರೆಂದು ಹೇಳಲಾಗಿತ್ತು. ಸಮ್ಮೇಳನವನ್ನು ಬೇರೆಡೆ ನಡೆಸುವ ರಾನಡೆಯವರ ತೀರ್ಮಾನದಿಂದ ಎರಡೂ ಗುಂಪುಗಳ ನಡುವೆ ಬಹಿರಂಗ ಘರ್ಷಣೆ ನಡೆಯುವುದು ತಪ್ಪಿತು. ಸಂಪ್ರದಾಯವಾದಿಗಳು ಸಹಜವಾಗಿ ಇದನ್ನು ಒಂದು ವಿಜಯ ಎಂದು ಹೇಳಿಕೊಂಡರು. 'ವೇದೋಕ್ತ' ಘಟನೆ ಇದಕ್ಕೂ ಬಹಳ ನಂತರದ ಘಟನೆಯಾಗಿದ್ದರೂ – ೧೯೦೧ – ಸಮಾಜ ಸುಧಾರಣೆಯ ವಿಷಯದಲ್ಲಿ ತಿಲಕರು ಹೊಂದಿದ್ದ ಯುಕ್ತಾಯುಕ್ತ ವಿವೇಚನೆಯನ್ನು ಅದು ತೋರಿಸುತ್ತದೆ. ವೈದಿಕ ಆಚರಣೆಗಳ ಹಕ್ಕುಬಾಧ್ಯತೆಯನ್ನು ಬ್ರಾಹ್ಮಣೇತರರಿಗೂ ಕೊಡಬೇಕೇ ಎಂಬುದು ಪ್ರಶ್ನೆಯಾಗಿತ್ತು. ತಿಲಕರು ಅದಕ್ಕೆ ವಿರುದ್ಧವಾಗಿಲ್ಲದಿದ್ದರೂ. ಬ್ರಾಹ್ಮಣ ಪುರೋಹಿತರನ್ನು ಒತ್ತಾಯಿಸುವುದನ್ನು ಅವರು ವಿರೋಧಿಸಿದರು:

"ಹಳೆಯ ಪದ್ಧತಿಯ ಮೇರೆಗೆ ಕೊಡಮಾಡಿರುವ ಇನಾಂಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಷರತ್ತಿನ ಮೇಲೆ ಅವರ ಇಚ್ಛೆಯ ವಿರುದ್ಧ ಸಂಪ್ರದಾಯಸ್ಥ ಬ್ರಾಹ್ಮಣರನ್ನು ಬ್ರಾಹ್ಮಣೇತರ ಕುಟುಂಬಗಳಲ್ಲಿ ವೈದಿಕ ಆಚರಣೆಗಳನ್ನು ನಡೆಸುವಂತೆ ಒತ್ತಾಯಪಡಿಸಬಹುದೇ ಎಂಬುದು ಪ್ರಶ್ನೆ. ಈ ಪ್ರಶ್ನೆಗೆ ಹೌದು ಎಂದು ನಾವು ಉತ್ತರಿಸಿದರೆ ವೈಯಕ್ತಿಕ ಸ್ವಾತಂತ್ರ್ಯದ ತತ್ತ್ವವನ್ನೇ ಉಲ್ಲಂಘಿಸಿದಂತಾಗುತ್ತದೆ. ಪ್ರತಿಯೊಂದು ಕೋಮೂ ತಾನು ಇಚ್ಛಿಸಿದಲ್ಲಿ ವೇದೋಕ್ತ ಆಚರಣೆಗಳನ್ನು ಸ್ವತಂತ್ರವಾಗಿ ನಡೆಸಬಹುದು: ಆದರೆ ಬೇರೆ ತಿಳಿವಳಿಕೆಯಿಂದ ಹಳೆಯ ನಿಯಮಗಳನ್ನು ಕೊಟ್ಟಿರುವ ಪ್ರಾಚೀನ ಇನಾಂಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದನ್ನು ಯಾರೂ ಸಮರ್ಥಿಸಲಾರರು."

ಸಮಾಜ ಸುಧಾರಕರೊಂದಿಗೆ ಸಂಪೂರ್ಣ ಸಹಮತ ಹೊಂದಲು ತಿಲಕರು ನಿರಾಕರಿಸಿದರು. ಹಾಗೂ ಅವರನ್ನು ಆಗಾಗ ಖಂಡಿಸುತ್ತಿದ್ದರು. ಆದರೆ ತಿಲಕರು ಸಾಮಾಜಿಕ ಪ್ರಗತಿಯ ಅಂಧ ವಿರೋಧಿಯಾಗಿದ್ದರು ಎಂದು ಇದರರ್ಥವಲ್ಲ. ಧಾನ್ಯವನ್ನು ಹೊಟ್ಟಿನಿಂದ ಪ್ರತ್ಯೇಕಿಸುವ ಒಳದೃಷ್ಟಿಯನ್ನು ಅವರು ಹೊಂದಿದ್ದರು. "ಅಸ್ಪೃಶ್ಯತೆಯನ್ನು ತಾನು ಸಂಕಲ್ಪಿಸಿದ್ದಾಗಿ ದೇವರು ಹೇಳಿದರೆ ಆ ದೇವರನ್ನೂ ನಾನು ಗುರುತಿಸುವುದಿಲ್ಲ" ಎಂಬ ಅವರ ಘೋಷಣೆ. ಅಸ್ಪೃಶ್ಯತೆ ಜೀವಿಸುವುದಕ್ಕಿಂತಲೂ ಹಿಂದೂ ಧರ್ಮ ಸಾಯುವುದು ಒಳ್ಳೆಯದು ಎಂಬ ಆಗಾಗ ಉಲ್ಲೇಖಿಸಲಾಗುವ ಗಾಂಧೀಜಿಯವರ ಮಾತಿಗಿಂತ ಹೆಚ್ಚು ಖಂಡಿತವಾಗಿದೆ. ಆದರೆ. ತಿಲಕರು ಸಮಾಜ ಸುಧಾರಣೆ

ನಡೆಸಲು ಸಿದ್ಧರಾಗಿರಲಿಲ್ಲ. ಏಕೆಂದರೆ ಉದ್ದೇಶಪೂರ್ವಕವಾಗಿ ರಾಜಕೀಯ ಹೋರಾಟಕ್ಕೆ ಮಾತ್ರವೇ ತಮ್ಮನ್ನು ಅರ್ಪಿಸಿಕೊಳ್ಳುವ ಆಯ್ಕೆಯನ್ನು ಅವರು ಮಾಡಿದ್ದರು.

ಮಹಿಳಾ ಶಿಕ್ಷಣದ ಬಗ್ಗೆ ತಿಲಕರು ಪ್ರಗತಿಪರ ಅಭಿಪ್ರಾಯಗಳನ್ನು ಹೊಂದಿದ್ದರು. ಸಮಾಜದ ಅತ್ಯಂತ ಹೆಚ್ಚಿನ ಹಿತ ಸಾಧಿಸುವ ರೀತಿಯಲ್ಲಿ ಮಹಿಳಾ ಶಿಕ್ಷಣದ ಸುಧಾರಣೆಯಾಗಬೇಕೆಂಬ ಅವರ ಮನವಿ ಇಂದಿಗೂ ಸಮಂಜಸವಾಗಿದೆ. ಹಾಗೆಯೇ ಅವರು ಬಾಲ್ಯವಿವಾಹವನ್ನು ವಿರೋಧಿಸಿದ್ದರು. ಆದರೆ ಬಾಲ್ಯವಿವಾಹ ನಮ್ಮ ರಾಷ್ಟ್ರೀಯ ಅಧಃಪತನದ ಪ್ರಮುಖ ಕಾರಣ ಎಂಬ ಸಮಾಜ ಸುಧಾರಕರ ಸಾರಾಸಗಟು ನಂಬಿಕೆಯನ್ನು ಅವರು ಒಪ್ಪಿರಲಿಲ್ಲ. ಮುದುಕರು ಎಳೆಯ ಬಾಲೆಯರನ್ನು ಮದುವೆಯಾಗುವುದನ್ನು ಅವರು ಆಗರ್ಕರರ ಭಾವೋದ್ರಿಕ್ತ ಧ್ವನಿಯಿಂದಲೇ ವಿರೋಧಿಸಿದರು. ತಿಲಕರು ಕೇವಲ ವೇದಿಕೆಯ ಸುಧಾರಕರಾಗಿರಲಿಲ್ಲ. ತಾವು ನುಡಿದಂತೆ ನಡೆದುಕೊಂಡರು. 'ಬಾಂಬೆ ಕ್ರಾನಿಕಲ್'ನ ಪುಟಗಳಲ್ಲಿ ಡಾ। ಆರ್. ಪಿ. ಪರಾಂಜಪೆ ಅವರಿಗೆ, ತಮ್ಮ ನಿಧನಕ್ಕೆ ಒಂದು ವರ್ಷ ಮುನ್ನ ನೀಡಿದ, ಈಗ ಸುಪರಿಚಿತರಾಗಿರುವ, ಪ್ರತ್ಯುತ್ತರದಲ್ಲಿ ತಿಲಕರ ಸಾಮಾಜಿಕ ನಂಬಿಕೆಯನ್ನು ಅವರದೇ ಮಾತುಗಳಲ್ಲಿ ಸಂಗ್ರಹವಾಗಿ ಹೇಳಬಹುದು:

"ರಾಜಕೀಯ ವಿಮೋಚನೆಗೆ ಮೊದಲು ಸಾಮಾಜಿಕ ಪುನರ್ನಿರ್ಮಾಣ ಕೈಗೊಳ್ಳಬೇಕೆಂಬ ಅಭಿಪ್ರಾಯ ನನ್ನದಲ್ಲ. ರಾಜಕೀಯ ವಿಮೋಚನೆಗೆ ನಾನು ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತೇನೆ. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿ ಇಲ್ಲದೆಯೇ, ನನ್ನ ಅಭಿಪ್ರಾಯದಲ್ಲಿ ರಾಷ್ಟ್ರೀಯ ಪುನರುದ್ಧಾರ ಸಾಧಿಸಲಾಗುವುದಿಲ್ಲ. ಹಾಗೂ ಈ ಅಭಿಪ್ರಾಯಗಳನ್ನು ಬೋಧಿಸಲೂ, ಒತ್ತಿಹೇಳಲೂ ನನ್ನ ವೃತ್ತಿಜೀವನದಾದ್ಯಂತ ನಾನು ಪ್ರಯತ್ನಿಸಿದ್ದೇನೆ. 'ಒಪ್ಪಿಗೆಯ ವಯಸ್ಸು' ಮಸೂದೆಯನ್ನು ನಾನು ವಿರೋಧಿಸಿದಾಗ, ನಾನು ಹಾಗೆ ಮಾಡಿದ್ದು ಮುಖ್ಯವಾಗಿ ಈ ಕಾರಣದಿಂದಲೇ. ಸಾರ್ವಜನಿಕರಿಗೆ ಸಂಪೂರ್ಣವಾಗಿ ಜವಾಬ್ದಾರಿಯಾಗಿಲ್ಲದ ಶಾಸಕಾಂಗ ಸಾಮಾಜಿಕ ಪ್ರಶ್ನೆ ಕೈಹಾಕಲು ಸಮರ್ಥವಾಗಿದೆ ಎಂದು ನಾನು ಭಾವಿಸಿರಲಿಲ್ಲ, ಈಗಲೂ ಸಹ ಭಾವಿಸಿಲ್ಲ."

ಸಮಾಜ ಸುಧಾರಣೆಯ ಚಳವಳಿಯ ವಿರೋಧಿ ಎಂದು ಅವರನ್ನು ಕರೆಯಲಾಗುತ್ತಿದ್ದ ಬಗ್ಗೆ ತಿಲಕರು ಹೀಗೆ ಬರೆದರು:

"ಒಬ್ಬ ನಿಜವಾದ ರಾಷ್ಟ್ರೀಯವಾದಿ ಹಳೆಯ ತಳಪಾಯಗಳ ಮೇಲೆ ಕಟ್ಟಲು ಇಚ್ಛಿಸುತ್ತಾನೆ. ಹಳೆಯದನ್ನು ಸಂಪೂರ್ಣವಾಗಿ ತುಚ್ಛೀಕರಿಸುವುದರ ಆಧಾರದ ಮೇಲೆ ಆಗುವ ಸುಧಾರಣೆ ರಚನಾತ್ಮಕ ಕೆಲಸವಾಗಿ ಅವನಿಗೆ ಕಾಣುವುದಿಲ್ಲ. ಆದ್ದರಿಂದ ಆತ, ಯಾವುದೇ ಸುಧಾರಣೆ ಮಾಡುವ ಮೊದಲು ಒಂದು ನಿರ್ದಿಷ್ಟ ರಾಷ್ಟ್ರೀಯ ಹಿತವನ್ನು ಉಳಿಸಿ ಬೆಳೆಸಲು ಪ್ರಯತ್ನಿಸುತ್ತಾನೆ. ಐರಿಶ್ ರಾಜಕೀಯದಲ್ಲೂ ಅಂತಹುದೇ ಬದಲಾವಣೆ ಆಗಿದೆ...... ನಮ್ಮ ಸಂಸ್ಥೆಗಳನ್ನು ಆಂಗ್ಲೀಕರಿಸಲು ಹಾಗೂ ಸಮಾಜ ಸುಧಾರಣೆಯ ಹೆಸರಿನಲ್ಲಿ ಅವುಗಳ ರಾಷ್ಟ್ರೀಯತೆಯನ್ನು ಕಳಚಲು ನಾವಿಚ್ಛಿಸುವುದಿಲ್ಲ. ಪ್ರಗತಿ ಸಾಧಿಸಬೇಕೆಂಬುದು ನಮ್ಮ ಇಚ್ಛೆ. ವಿಶ್ವದ ನಾಗರಿಕ ದೇಶಗಳೊಂದಿಗೆ ನಮ್ಮ ದೇಶ ಸಮಾನ ಸ್ಥಾನ ಹೊಂದಬೇಕೆಂಬುದು ನಮ್ಮ ಬಯಕೆ. ಶ್ರೀ ಪರಾಂಜಪೆಯವರ ಪಕ್ಷದ ಜನರು ದೇವರಿಗೆ ನಮ್ಮ ಪ್ರಾರ್ಥನೆ ಸಲ್ಲಿಸುವುದರಲ್ಲಿ ಕೂಡ ಪರಕೀಯ

ವಿಧಾನಗಳನ್ನನುಸರಿಸುವಂತೆ ನಮ್ಮನ್ನು ಕೇಳಬಹುದು: ಆದರೆ ರಾಷ್ಟ್ರೀಯತಾವಾದಿಗಳಾದ ನಾವು ಹಳೆಯ ಪದ್ಧತಿಯಲ್ಲಿರುವ ಎಲ್ಲ ಒಳಿತಿಗೆ ಕೊಡಬೇಕಾದ ಬೆಲೆ ಕೊಟ್ಟು. ನಮ್ಮ ರಾಷ್ಟ್ರೀಯ ಏಳಿಗೆಗೆ ಅಗತ್ಯವಾದ ಪ್ರಗತಿ ಮತ್ತು ಸುಧಾರಣೆಗಳಿಗೆ ಬಾಧಕವಾಗದಂತೆ ರಾಷ್ಟ್ರೀಯ ಅಂತಃಕರಣವನ್ನು ಎತ್ತಿಹಿಡಿಯಲೂ ಕಾಪಾಡಲೂ ಇಚ್ಛಿಸುತ್ತೇವೆ."

ವಿಧವಾ ಪುನರ್ವಿವಾಹ ಮತ್ತು ಅಸ್ಪೃಶ್ಯತಾ ನಿವಾರಣೆಯ ಬಗ್ಗೆಯೂ ತಿಲಕರು ಇಷ್ಟೇ ಸ್ಪಷ್ಟವಾಗಿ ಬರೆದರು:

"ವಿಧವಾ ಪುನರ್ವಿವಾಹ ಚಳವಳಿ ಪರಾಕಾಷ್ಠೆಯಲ್ಲಿದ್ದಾಗ. ಸಮಂಜಸವಾದ ಆಧಾರದ ಮೇಲೆ ಶಂಕರಾಚಾರ್ಯರು ಹಾಗೂ ಹಿಂದೂ ಸಂಪ್ರದಾಯವಾದಿಗಳ ನಾಯಕರೊಂದಿಗೆ ರಾಜಿಗೆ ಬರಬೇಕೆಂದು ಸುಧಾರಕರಿಗೆ ಸಲಹೆ ಮಾಡಿದವನೇ ನಾನು. ನನ್ನ ಅಭಿಪ್ರಾಯದಲ್ಲಿ. ವಿಧವಾ ಪುನರ್ವಿವಾಹ ನಿಷೇಧದ ದುಷ್ಟಪದ್ಧತಿ ಸಾಮಾನ್ಯ ಪದ್ಧತಿಯಾಗಿಲ್ಲ ಹಾಗೂ ಬ್ರಾಹ್ಮಣರಿಗೆ ಮತ್ತು ಬ್ರಾಹ್ಮಣ ಸಂಪ್ರದಾಯಗಳು ಮತ್ತು ನಡೆವಳಿಗಳನ್ನು ಅನುಕರಿಸುವುದು ಸೂಕ್ತ ಎಂದು ತಿಳಿದಿರುವ ಇತರ ಜಾತಿಗಳಿಗೆ ಮಾತ್ರ ಸೀಮಿತವಾಗಿದೆ. ಆದ್ದರಿಂದ ನಾನು ಸಲಹೆ ಮಾಡಿದ್ದೇನೆಂದರೆ. ವಿಧವಾ ಪುನರ್ವಿವಾಹಕ್ಕೆ ನಂತರದ ಹಿಂದೂ ಕಾನೂನು ಅವಕಾಶ ನೀಡದೆ ಹೋಗಿದ್ದರೂ. ಶಾಸ್ತ್ರಗಳು ಸಮ್ಮತಿಸುವ ವಿವಾಹದ ವಿಧಗಳಲ್ಲಿ ಅದನ್ನು ಸೇರಿಸುವುದರಿಂದ ಒಮ್ಮತಕ್ಕೆ ಬರಬಹುದು ಮತ್ತು ಹೀಗೆ ಸಂಪ್ರದಾಯಸ್ಥರ ಅನುಮೋದನೆಯಿಂದ ಸಾಮಾಜಿಕ ಬಹಿಷ್ಕಾರದಿಂದ ಉಂಟಾಗುವ ಎಲ್ಲ ಅನರ್ಥತೆಗಳನ್ನು ನಿವಾರಿಸಬಹುದು."

ಅವರ ಅಭಿಪ್ರಾಯಗಳ ಈ ನೇರ ನಿರೂಪಣೆಯ ಮುಂದೆ ತಿಲಕರನ್ನು ಮತಾಂಧ ಅಥವಾ ಪ್ರಗತಿವಿರೋಧಿ ಎಂದು ಕರೆಯುವುದು ಭಾಷೆಯನ್ನು ಹಿಂಸಿಸಿದಂತೆ. ಅವರ ಜೀವನದಾದ್ಯಂತ ಅವರನ್ನು ಸುತ್ತುವರೆದಿದ್ದ ವಿವಾದದ ದಪ್ಪ ಧೂಳಿನಲ್ಲಿ ಇಂತಹ ತಪ್ಪು ವಿಚಾರಗಳು ಉಂಟಾಗುವುದಕ್ಕೆ ಸ್ವಲ್ಪ ಸಮರ್ಥನೆ ಇದ್ದಿರಬಹುದು. ಅವರ ಭಾಷಣಗಳು ಮತ್ತು ಬರವಣಿಗೆಯನ್ನು ನಿರ್ಲಿಪ್ತತೆಯಿಂದ ಮತ್ತು ನಿಷ್ಪಕ್ಷಪಾತವಾಗಿ ಅಭ್ಯಸಿಸಿದರೆ. ಅವರ ವ್ಯಕ್ತಿತ್ವದ ನ್ಯಾಯವಾದ ನಿಷ್ಕರ್ಷೆ ಆಗುತ್ತದೆ. ಜನಸಾಮಾನ್ಯರನ್ನು ತಮ್ಮೊಂದಿಗೆ ಕರೆದೊಯ್ಯಲು ಅವರಿಚ್ಛಿಸಿದರು ಎಂಬ ದೃಷ್ಟಿಯಿಂದ ತಿಲಕರನ್ನು ಪೂರ್ವಾಚಾರಪ್ರಿಯ ಎಂದು ಕರೆಯಬಹುದು. ಆದರೆ ಯಾವುದೇ ಬದಲಾವಣೆ ಅಥವಾ ಸುಧಾರಣೆಯನ್ನು ಅವರು ವಿರೋಧಿಸಿದರು ಎಂದು ಹೇಳುವುದು ಅನ್ಯಾಯವಾಗುತ್ತದೆ. ಟೆನ್ನಿಸನ್ ಅವರ "ನಿಜವಾದ ಸಂಪ್ರದಾಯಸ್ಥ"ನಂತೆ ತಿಲಕರು ಅಲಂಕಾರ ಮಾಡಿದ ಕೊಂಬೆಯನ್ನು ಸವರಿಸಲು ಸದಾ ಸಿದ್ಧರಾಗಿದ್ದರು. ಸಮಾಜ ಸುಧಾರಣೆ. ಬಲವಂತದಿಂದಾದ ವಿದೇಶಿ ಕಸಿಯಾಗದೆ. ಸಮಾಜದ ಜೈವಿಕ ಮತ್ತು ಕ್ರಮಬದ್ಧ ಬೆಳವಣಿಗೆಯಾಗಬೇಕೆಂದು ಅವರು ಬಯಸಿದರು. ರಾನಡೆಯವರು ತಮ್ಮದೇ ರಾಜಕೀಯ ಸೌಮ್ಯತೆಗೆ ಅನ್ವಯಿಸಿದ ಮಾತುಗಳನ್ನು ನಾವು ತಿಲಕರ ಸಾಮಾಜಿಕ ಸಂಪ್ರದಾಯತನಕ್ಕೂ ಅನ್ವಯಿಸಬಹುದು : "ಅಸಾಧ್ಯವಾದದ್ದನ್ನು ಅಥವಾ ಬಹಳ ದೂರದ ಆದರ್ಶಗಳನ್ನು ಎಟುಕಿಸಲು ಎಂದೂ ನಿರರ್ಥಕವಾಗಿ ಆಶಿಸದ ಪರಿಸ್ಥಿತಿಯನ್ನು

ಸೌಮ್ಯತೆ ಸೂಚಿಸುತ್ತದೆ. ಆದರೆ ಸಹಜ ಬೆಳವಣಿಗೆಯ ಕ್ರಮದಲ್ಲಿ ಮತ್ತೊಂದು ಹೆಜ್ಜೆಯನ್ನಿಡಲು ಪ್ರತಿ ದಿನವೂ ಪ್ರಯತ್ನಿಸುವುದನ್ನೂ, ತನ್ನ ಕೈಗೆ ಅತಿ ಸಮೀಪವಿರುವ ಕೆಲಸವನ್ನು ಸಾಮರಸ್ಯ ಮತ್ತು ನ್ಯಾಯಭಾವನೆಯಿಂದ ಮಾಡುವುದನ್ನೂ ಸೌಮ್ಯತೆ ಸೂಚಿಸುತ್ತದೆ."

ಡಿ. ಎಸ್. ಶರ್ಮಾ ಅವರು 'ದಿ ರಿನೈಸಾನ್ಸ್ ಆಫ್ ಹಿಂದೂಯಿಸಂ' ಪುಸ್ತಕದಲ್ಲಿ ತೀಕ್ಷ್ಣ ವಿವೇಚನೆಯಿಂದ ಸೂಚಿಸಿರುವಂತೆ. ಇಂತಹ ಧೋರಣೆ ರಾಜಕೀಯ ಹೋರಾಟಕ್ಕಿಂತಲೂ ಸಾಮಾಜಿಕ ಸುಧಾರಣೆಗೆ ಹೆಚ್ಚು ಸೂಕ್ತವಾಗಿದೆ. "ಸುಧಾರಕ ಜ್ಞಾನಪ್ರಸಾರ ಮಾಡಬೇಕು; ರಾಜಕಾರಣಿ ಶಕ್ತಿಯನ್ನು ಹೊಮ್ಮಿಸಬೇಕು. ಮೊದಲಿನವರು ಮನ ವೊಲಿಸುವ ಕೆಲಸ ಮಾಡಬೇಕು: ಎರಡನೆಯವರು ಒಂದು ರೀತಿಯ ಬಲಪ್ರಯೋಗ ಮಾಡಬೇಕು. ತಿಲಕರು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರು ಹಾಗೂ ತಮ್ಮ ವಿರೋಧಿಗಳು ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಸಮಾಜ ಸುಧಾರಣೆಯಲ್ಲಿ ಬಲಪ್ರಯೋಗವನ್ನೂ. ರಾಜಕೀಯದಲ್ಲಿ ಮನ ಒಲಿಸುವುದನ್ನೂ ಮಾಡಲು ಪ್ರಯತ್ನಿಸಿದರು ಎಂದು ಭಾವಿಸಿದರು."

ಅಧ್ಯಾಯ 5

ಏಳು ಮಹತ್ತ್ವದ ವರ್ಷಗಳು

ಡೆಕ್ಕನ್ ಎಜುಕೇಶನ್ ಸೊಸೈಟಿಗೆ ತಿಲಕರು ರಾಜೀನಾಮೆ ನೀಡಿದ ವರ್ಷವಾದ ೧೮೯೦ ಮತ್ತು ರಾಜದ್ರೋಹದ ಅಪಾದನೆಯ ಮೇಲೆ ಶಿಕ್ಷೆಗೊಳಗಾದ ೧೮೯೭ರ ನಡುವಣ ಏಳು ವರ್ಷಗಳು ಅವರ ಜೀವನದ ಅತ್ಯಂತ ಮಹತ್ತ್ವದ ವರ್ಷಗಳಾಗಿದ್ದವು. ಈ ಏಳು ವರ್ಷಗಳಲ್ಲಿ ಅವರು ಶಿಕ್ಷಣತಜ್ಞರಿಂದ ರಾಜಕಾರಣಿಯಾಗಿ ಪರಿವರ್ತನ ಹೊಂದಿದರು. ಪ್ರಾಂತೀಯ ನಾಯಕತ್ವದಿಂದ ರಾಷ್ಟ್ರೀಯ ನಾಯಕತ್ವಕ್ಕೇರಿದರು. ಅವರ ವಿಪುಲ ಶಕ್ತಿ, ಉತ್ಸಾಹಗಳು ಹಲವು ದಿಕ್ಕುಗಳಲ್ಲಿ ಒಮ್ಮೆಗೇ ಹರಿದವು. ಅವರು ಎರಡು ನಿಯತಕಾಲಿಕೆಗಳನ್ನೂ ಕಾನೂನು ತರಗತಿಯೊಂದನ್ನೂ ನಡೆಸಿದರು. ಸಮಾಜ ಸುಧಾರಕರೊಂದಿಗೆ ಅವರು ಎಡೆಬಿಡದ ಹೋರಾಟ ನಡೆಸಿದರು. ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು ಅವರು ಪ್ರಾರಂಭಿಸಿದರು. ಪೂನಾ ಮುನಿಸಿಪಾಲಿಟಿಯ ಕೌನ್ಸಿಲರ್ ಆದರು. ಮುಂಬೈ ವಿಶ್ವವಿದ್ಯಾನಿಲಯದ ಸೆನೆಟ್‌ನ ಫೆಲೋ ಆದರು. ಹಾಗೂ ಮುಂಬೈ ವಿಧಾನ ಪರಿಷತ್ತಿನ ಸದಸ್ಯರಾದರು. ಸೌಮ್ಯವಾದಿಗಳಿಂದ ಸಾರ್ವಜನಿಕ ಸಭೆಯನ್ನು ವಶಪಡಿಸಿಕೊಂಡರು. ೧೮೯೬ರ ಕ್ಷಾಮದಲ್ಲಿ ರೈತರ ಪರವಾಗಿ ದುಡಿದರು. ಅದರ ಮುಂದಿನ ವರ್ಷ ಪ್ಲೇಗುರೋಗ ಉಂಟಾದಾಗ ತಮ್ಮ ಅಳಿಲುಸೇವೆ ಸಲ್ಲಿಸಿದರು. ರಾಷ್ಟ್ರೀಯ ಕಾಂಗ್ರೆಸ್ ಮತ್ತು ಪ್ರಾಂತೀಯ ರಾಜಕೀಯ ಸಮ್ಮೇಳನಾಧಿವೇಶನಗಳಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದರು. ಅವರ ಚೈತನ್ಯಕ್ಕೆ ಇದೆಲ್ಲಾ ಸಾಲದೆಂಬಂತೆ, 'ಓರಿಯನ್' ಎಂಬ ಪುಸ್ತಕವನ್ನು ಬರೆದರು. ಪ್ರೊ| ಮ್ಯಾಕ್ಸ್ ಮುಲ್ಲರ್ ಅವರಂತಹ ವಿಶ್ವವಿಖ್ಯಾತ ವಿದ್ವಾಂಸರ ಪ್ರಶಂಸಾಯುಕ್ತ ಗಮನವನ್ನು ಅದು ಸೆಳೆಯಿತು.

ಈ ಏಳು ವರ್ಷಗಳಲ್ಲಿನ ತಿಲಕರ ವೈವಿಧ್ಯಮಯ ಚಟುವಟಿಕೆಗಳ ಜಾಡು ಹಿಡಿಯಲು ಹಾಗೂ ಅವುಗಳನ್ನು ಬೇರೆ ಬೇರೆಯಾಗಿ ವಿಂಗಡಿಸಲು ಪ್ರಯತ್ನಿಸಿದಂತೆಲ್ಲಾ ಅವರು ದುಡಿಮೆ ಮಾಡಲು ಹೊಂದಿದ್ದ ಅಗಾಧ ಶಕ್ತಿಯ ಬಗ್ಗೆ ಬೆರಗಾಗುತ್ತದೆ ದುಡಿಯುವ ತೀವ್ರ ಇಚ್ಛೆಯ ದೆವ್ವ ಅವರನ್ನು ಹಿಡಿದಂತಿತ್ತು. ಅವರ ಜೀವನದ ಮುಖ್ಯ ನದಿಯಲ್ಲಿ ಅನೇಕ ಉಪನದಿಗಳು ಸೇರಿ ಹರಿದು ಅವರ ಜೀವನಕ್ಕೆ ವಿಶಿಷ್ಟವಾದ ಒಂದು ಚೇತನವನ್ನೂ, ಘನತೆಯನ್ನೂ ನೀಡಿದ್ದವು.

ಕ್ರಾಫೋರ್ಡ್ ಪ್ರಕರಣ ಎಂದು ಕರೆಯಲಾದ ಘಟನೆಯಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವುದರೊಂದಿಗೆ ೧೮೮೯ರಲ್ಲಿ ಸಾರ್ವಜನಿಕ ಜೀವನದಲ್ಲಿ ತಿಲಕರು ಪಾದಾರ್ಪಣ ಮಾಡಿದರು. ಕಂದಾಯ ಕಮಿಷನರ್ ಕ್ರಾಫೋರ್ಡ್‌ಗೆ ನೌಕರಿ ಪಡೆಯಲು ಲಂಚ ಕೊಟ್ಟಿದ್ದರಿಂದಾಗಿ ಸರ್ಕಾರಿ ಸೇವೆಯಿಂದ ವಜಾ ಆಗಿದ್ದ ಕೆಲವು ಮಾಮ್ಲತೇದಾರರ ಪರವಾಗಿ ಮಾಡಿದ ಭಾಷಣ ತಿಲಕರು ಮಾಡಿದ ಮೊದಲ ಪ್ರಮುಖ ಸಾರ್ವಜನಿಕ

ಭಾಷಣವಾಗಿತ್ತು. ಲಂಚ ತೆಗೆದುಕೊಳ್ಳಲು ಕ್ರಾಫೋರ್ಡ್‌ನ ಮುಖ್ಯ ಏಜೆಂಟ್ ಆಗಿದ್ದಕ್ಕೆ ಹಣಮಂತರಾವ್ ಇನಾಂದಾರನನ್ನು ತಪ್ಪಿತಸ್ಥ ಎಂದು ತೀರ್ಮಾನಿಸಲಾಗಿತ್ತು. ಮಾಫಿ ದೊರಕಿಸಿಕೊಡಲಾಗುವುದೆಂಬ ಆಶ್ವಾಸನೆಯ ಆಮಿಷ ತೋರಿಸಿ ಮಾಮ್ಲತ್ ದಾರರ ಪೈಕಿ ಅನೇಕರು ಈತನ ವಿರುದ್ಧ ಪ್ರಕರಣದಲ್ಲಿ ಸಾಕ್ಷ್ಯ ನೀಡುವಂತೆ ಮಾಡ ಲಾಗಿತ್ತು. ಲಂಚ ಸ್ವೀಕರಿಸಿದ ಆಪಾದನೆಯಿಂದ ಕ್ರಾಫೋರ್ಡ್‌ನನ್ನು ನಿರ್ದೋಷಿ ಎಂದು ತೀರ್ಮಾನಿಸಲಾಯಿತು ಹಾಗೂ ತನ್ನ ಅಧೀನ ಅಧಿಕಾರಿಗಳಿಂದ ಸಾಲಗಳನ್ನು ಪಡೆದ ಎಂಬ ತಪ್ಪಿಗೆ ಮಾತ್ರ ಆತನನ್ನು ಗುರಿಮಾಡಲಾಯಿತು. ಆತನ ಚರ್ಮದ ಬಣ್ಣ ಆತನ ಅತ್ಯಂತ ಬಲವಾದ ಪ್ರತಿವಾದವಾಗಿತ್ತು ಹಾಗೂ ಆತನಿಗೆ ದೊರೆತ ಶಿಕ್ಷೆಯೆಂದರೆ ಕೇವಲ ಸೇವೆಯಿಂದ ವಜಾ ಮಾತ್ರವಾಗಿತ್ತು. ಆದರೆ ಮಾಮ್ಲತ್‌ದಾರರಿಗೆ ಮಾಫಿ ಕೊಡಲಾಗುವುದೆಂಬ ಆಶ್ವಾಸನೆಗೆ ತಕ್ಕಂತೆ ಸರ್ಕಾರ ನಡೆದುಕೊಳ್ಳಲಿಲ್ಲ ಹಾಗೂ ಅವರನ್ನು ಅನೇಕ ರೀತಿಗಳಲ್ಲಿ ದಂಡನೆಗೆ ಗುರಿಮಾಡಿತು.

ನ್ಯಾಯದ ಈ ಅಣಕದ ವಿರುದ್ಧ ತಿಲಕರು ಪ್ರತಿಭಟಿಸಿದರು ಹಾಗೂ ಕ್ರಾಫೋರ್ಡ್‌ನ ಮೋಸಗಳಿಗೆ ಪರಿಹಾರ ದೊರಕಬೇಕೆಂದು ಕೋರಿದರು. ಭಾರತದಲ್ಲಿ ಈ ಪರಿಹಾರ ದೊರಕುವ ಲಕ್ಷಣ ಕಾಣಲಿಲ್ಲದ ಕಾರಣ ತಿಲಕರು ಡಿಗ್ಬಿ ಮತ್ತು ಬ್ರಾಡ್‌ಲಾರಂತಹ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಿಗೆ ಈ ವಿಷಯದಲ್ಲಿ ಕ್ರಮ ಕೈಗೊಳ್ಳುವಂತೆ ಮನವಿಮಾಡಿದರು. ಇದರಿಂದಲೂ ಏನೂ ಆಗಲಿಲ್ಲ. ಆದರೆ ನಂತರ ಭಾರತ ಸರ್ಕಾರ ಮಾಮ್ಲತ್‌ದಾರರ ಮೇಲಿನ ಕ್ರಮಗಳನ್ನು ನಿಲ್ಲಿಸಿತು ಹಾಗೂ ಈ ಪೈಕಿ ಬಹುತೇಕ ಜನರು ನೌಕರಿಯನ್ನು ಪುನಃ ಗಳಿಸಿದರು ಇಲ್ಲವೆ ಅವರಿಗೆ ಪೂರ್ಣ ನಿವೃತ್ತಿವೇತನ ಕೊಡಲಾಯಿತು. ಕ್ರಾಫೋರ್ಡ್ ಸಂಗತಿ ಹೀಗೆ ಪಟ್ಟು ಬಿಡದೆ ಅನ್ಯಾಯ ವೊಂದನ್ನು ಎದುರಿಸಿದ ತಿಲಕರ ಜೀವನದ ಪ್ರಥಮ ಘಟನೆಯಾಗಿತ್ತು. ಪಟ್ಟುಬಿಡದೆ ಹೋರಾಡುವ ಪ್ರವೃತ್ತಿ ಅನಂತರ ಅವರ ಜೀವನದ ಒಂದು ಭಾಗವೇ ಆಯಿತು. ಕೃತಜ್ಞ ಮಾಮ್ಲತ್‌ದಾರರು ತಿಲಕರಿಗೆ ಪಾಕೆಟ್ ಗಡಿಯಾರವೊಂದನ್ನು ಉಡುಗೊರೆ ಯಾಗಿ ಕೊಟ್ಟರು. ಅದನ್ನು ಅವರು ತಮ್ಮ ಜೀವನದ ಕೊನೆಯ ದಿನಗಳವರೆಗೂ ಧರಿಸುತ್ತಿದ್ದರು.

೧೮೯೫ರಲ್ಲಿ ತಿಲಕರು ಮುಂಬೈ ವಿಶ್ವವಿದ್ಯಾನಿಲಯದ ಸೆನೇಟ್‌ನ ಫೆಲೊ ಆಗಿ ಚುನಾಯಿತರಾದರು. ಹಾಗೂ ಮರುವರ್ಷ ತಮ್ಮ ಸಹೋದ್ಯೋಗಿ ಎಂ. ಬಿ. ನಾಮ್ ಜೋಶಿಯವರ ಪ್ರೇರಣೆಯಿಂದ ಪೂನಾ ಮುನಿಸಿಪಾಲಿಟಿಯ ಕೌನ್ಸಿಲರ್ ಆದರು. ಮುನಿಸಿಪಾಲಿಟಿಯ ಕಾರ್ಯದಲ್ಲಿ ನಾಮ್‌ಜೋಶಿ ಅವರು ತೀವ್ರ ಆಸಕ್ತಿ ಹೊಂದಿ ದ್ದರು. ತಿಲಕರು ಆಡಳಿತ ಸಮಿತಿಗೂ ಬೇಗ ಚುನಾಯಿತಗೊಂಡರೂ, ಮುನಿಸಿಪಲ್ ವ್ಯವಹಾರಗಳಲ್ಲಿ ಅವರು ವಿಶೇಷವಾಗಿ ಭಾಗವಹಿಸಿದಂತೆ ಕಾಣುವುದಿಲ್ಲ. ಮುನಿಸಿ ಪಾಲಿಟಿಯೊಂದಿಗೆ ಅವರು ಹೊಂದಿದ್ದ ಸಂಬಂಧ ಒಂದೂವರೆ ವರ್ಷದೊಳಗಡೆ ಕೊನೆಗೊಂಡಿತು.

ಮುಂಬೈ ವಿಧಾನ ಪರಿಷತ್ತಿನ ಸದಸ್ಯತ್ವವನ್ನು ತಿಲಕರು ಸ್ವಲ್ಪ ಹೆಚ್ಚು ಕಾಲ ಹೊಂದಿದ್ದರು. ರಾನಡೆ ಮತ್ತು ಗೋಖಲೆಯವರು ಪ್ರತಿಸ್ಪರ್ಧಿಯೊಬ್ಬರಿಗೆ ಬೆಂಬಲ

ಸಿಡಿದ್ದರೂ ೧೮೯೫ರಲ್ಲಿ ತಿಲಕರು ಪರಿಷತ್ತಿಗೆ ಚುನಾಯಿತರಾದರು. ೧೮೯೨ರ ಕಾಯಿದೆಯ ಮೇರೆಗೆ ರಚಿಸಿದ ಪ್ರಾಂತೀಯ ವಿಧಾನ ಮಂಡಳಿಗಳು ಚರ್ಚಾಕೂಟಗಳಿಗಿಂತ ಹೆಚ್ಚಿನ ಸ್ಥಾನಮಾನ ಹೊಂದಿರಲಿಲ್ಲ. ಚುನಾವಣೆಯ ಅಂಶವನ್ನು ಸೇರಿಸಿದ್ದರೂ, ಅದಕ್ಕೂ ಒಂದು ಕೊಕ್ಕೆ ಹಾಕಲಾಗಿತ್ತು. ಯಾವುದೇ ಪ್ರತಿನಿಧಿಯ ಚುನಾವಣೆಯನ್ನು ನಿಷೇಧಿಸುವ ಅಧಿಕಾರವನ್ನು ಗವರ್ನರರಿಗೆ ಕೊಡಲಾಗಿತ್ತು. "ಒಬ್ಬ ಉನ್ಮತ್ತ ಪತ್ರಿಕೋದ್ಯಮಿ ಹಾಗೂ ಮರ್ಯಾದೆ ಕಳೆದುಕೊಂಡ ಚಳವಳಿಗಾರ" ಎಂಬ ಕಾರಣದ ಮೇಲೆ ತಿಲಕರ ಚುನಾವಣೆಯನ್ನು ಅನೂರ್ಜಿತಗೊಳಿಸಬೇಕೆಂದು ಆಂಗ್ಲೋ-ಇಂಡಿಯನ್ ನಿಯತಕಾಲಿಕೆಗಳು ಬೊಬ್ಬೆ ಹಾಕಿದವು. ಅವುಗಳಿಗೆ 'ಕೇಸರಿ' ಗಾಂಭೀರ್ಯದಿಂದ ಉತ್ತರ ಕೊಟ್ಟಿತು:

"ಶ್ರೀ ತಿಲಕ್ ಸೆಂಟ್ರಲ್ ಡಿವಿಜನ್‌ನಿಂದ ಚುನಾಯಿತರಾದಲ್ಲಿ, ಲಾರ್ಡ್ ಸ್ಯಾಂಡ್‌ಹರ್ಸ್ಟ್ ತಮ್ಮ ವಿಟೋ ಅಧಿಕಾರವನ್ನು ಬಳಸಿ ಚುನಾವಣೆಯನ್ನು ಅನೂರ್ಜಿತಗೊಳಿಸಬೇಕೆಂದು ನಮ್ಮ ಸಮಕಾಲೀನರು ಸಲಹೆ ಮಾಡಿದ್ದಾರೆ. ಒಂದು ಚುನಾವಣಾ ಕ್ಷೇತ್ರ ಆರಿಸಿದ ಪ್ರತಿನಿಧಿಯ ಚುನಾವಣೆಯ ಮೇಲೆ ಸರ್ಕಾರ ವಿಟೋ ಅಧಿಕಾರ ಪ್ರಯೋಗಿಸಿದರೆ, ವಿಧಾನ ಮಂಡಳಿಗಳನ್ನು ಸುಧಾರಿಸುವ ಪ್ರಯತ್ನಗಳೂ, ೧೮೯೨ರ ಇಂಡಿಯನ್ ಕೌನ್ಸಿಲ್ಸ್ ಆಕ್ಟ್‌ನಿಂದ ಆಗಿರುವ ಕಿಂಚಿತ್ ಒಳಿತೂ ನಿಷ್ಪ್ರಯೋಜಕವಾಗುತ್ತವೆ."

ತಿಲಕರು ಮೊದಲ ಸಲ ಎರಡು ವರ್ಷಗಳ ಅವಧಿಗೆ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಪರಿಷತ್ತು ಕೇವಲ ಎಂಟು ದಿನಗಳು ಸಭೆ ಸೇರಿತ್ತು. ಹಾಗೂ ೧೬ ತಾಸುಗಳಿಗೂ ಕಡಿಮೆ ಕಾಲ ಕೆಲಸಮಾಡಿತು ಎಂಬುದರಿಂದ ಪರಿಷತ್ತಿನ ಸೋಗಿನ ಸ್ವರೂಪ ಸ್ಪಷ್ಟವಾಗಿ ತಿಳಿಯುತ್ತದೆ. ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ತಿಲಕರು ತಮಗೆ ದೊರೆತ ಅವಕಾಶವನ್ನು ಪೂರ್ಣವಾಗಿ ಉಪಯೋಗಿಸಿಕೊಂಡರು. ಗೋಖಲೆಯವರಂತೆ ಅವರು ನೀಲಿ ಪುಸ್ತಕಗಳನ್ನು (ಸರ್ಕಾರದ ವರದಿಗಳು) ಶ್ರದ್ಧೆಯಿಂದ ಓದುತ್ತಿದ್ದರು. ಕಂದಾಯ, ಅಬಕಾರಿ ಮತ್ತು ಅರಣ್ಯ ಇಲಾಖೆಗಳ ಕಾರ್ಯನಿರ್ವಹಣೆಯನ್ನು ಅವರು ಕೂಲಂಕಷವಾಗಿ ಪರೀಕ್ಷೆ ಮಾಡಿ ಹೀಗೆ ಸೂಚಿಸಿದರು: "ಕಳೆದ ೨೫ ವರ್ಷಗಳಲ್ಲಿ ಪ್ರೆಸಿಡೆನ್ಸಿಯ ಕಂದಾಯ ಸುಮಾರು ೫.೫ ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ. ಭೂಮಿ, ಕಾಡು ಮತ್ತು ಅಬ್ಕಾರಿಗಳಿಂದ ಎಷ್ಟು ದೊರೆಯಬಹುದೋ ಅಷ್ಟನ್ನೂ ಪಡೆಯಲಾಗಿದೆ. ಹೀಗೆ ಗಳಿಸಲಾದ ಕಂದಾಯದಲ್ಲಿ ಒಂದು ಸಣ್ಣ ಅಂಶವನ್ನು ಮಾತ್ರ ಪ್ರಾಂತ್ಯದ ಸುಧಾರಣೆಗೆ ವೆಚ್ಚ ಮಾಡಲಾಗಿದೆ."

ತಿಲಕರು ವಿಧಾನ ಪರಿಷತ್ತಿನ ಸದಸ್ಯರಾಗುವ ಸಮಯಕ್ಕೇ ಮಹಾರಾಷ್ಟ್ರದಲ್ಲಿ ಕ್ಷಾಮ ಉಂಟಾಗಿತ್ತು. ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಆದ ವಿಳಂಬದಿಂದ ಜನರು ಅನುಭವಿಸುತ್ತಿದ್ದ ತೀವ್ರ ತೊಂದರೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ತಿಲಕರು ಈ ವೇದಿಕೆಯನ್ನು ಬಳಸಿದರು. ಮುಚ್ಚುಮರೆಯಿಲ್ಲದೆ ಮಾತಾಡಿದ್ದಕ್ಕಾಗಿ ಪರಿಷತ್ತಿನ ಸದಸ್ಯರೊಬ್ಬರು ಅವರನ್ನು ಟೀಕಿಸಿದಾಗ, ಅವರು ಹೀಗೆಂದರು: "ನನ್ನ ದೃಷ್ಟಿಯಲ್ಲಿ, ಸದಸ್ಯತ್ವ ಪ್ರಾಮಾಣಿಕ ಹಾಗೂ ನ್ಯಾಯವಾದ ಟೀಕೆಯನ್ನು ನಿಲ್ಲಿಸುವ

ಉದ್ದೇಶದಿಂದ ಬಾಯಿಗೆ ತುರುಕಿದ ಬಟ್ಟೆಯಾಗಲೀ, ತಿಂಡಿಯಾಗಲೀ ಅಲ್ಲ. ಅದು ಹಾಗಾಗಿದ್ದಲ್ಲಿ, ಅಧಿಕಾರಿಗಳು – ಅವರು ಎಷ್ಟೇ ದೊಡ್ಡವರಾಗಿರಲಿ – ಮಾಡಿದ ಸ್ಪಷ್ಟ ತಪ್ಪುಗಳ ಮೇಲಾಗಲಿ ಅವರ ತೀವ್ರ ಅಲಕ್ಷ್ಯದ ಮೇಲಾಗಲಿ ಪರದೆ ಎಳೆಯುವುದಕ್ಕೆ ಒಪ್ಪಿಗೆ ಕೊಡುವುದಕ್ಕಿಂತ ಅಂತಹ ಸದಸ್ಯತ್ವವನ್ನು ನಾನು ಖಂಡಿತವಾಗಿ ತ್ಯಜಿಸಬೇಕಾಗುತ್ತದೆ." ತಿಲಕರನ್ನು ವಿಧಾನ ಪರಿಷತ್ತಿಗೆ ಎರಡನೆಯ ಸಲ ೧೮೯೭ರಲ್ಲಿ ಪುನಃ ಚುನಾಯಿಸಲಾಯಿತು. ಆದರೆ ಅವರ ವಿರುದ್ಧ ರಾಜದ್ರೋಹದ ಆಪಾದನೆಯ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕಿದಾಗ ಅವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು.

೧೮೯೫ರ ವರ್ಷದ ಪ್ರಾಮುಖ್ಯತೆಯೆಂದರೆ, ಆ ವರ್ಷ ತಿಲಕರು ಸಾರ್ವಜನಿಕ ಸಭೆಯನ್ನು ವಶಪಡಿಸಿಕೊಂಡರು. ಸಾರ್ವಜನಿಕ ಪ್ರಶ್ನೆಗಳ ತೀವ್ರ ಅಧ್ಯಯನದ ಬಗ್ಗೆ ಹಾಗೂ ಸರ್ಕಾರದ ಪರಿಶೀಲನೆಗೆ ಅಧಿಕಾರೇತರ ಅಭಿಪ್ರಾಯವನ್ನು ಮುಂದಿಡುವ ಬಗ್ಗೆ ಸಭೆ ವಿಶಿಷ್ಟ ಹೆಸರು ಗಳಿಸಿತ್ತು. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ ಸ್ಥಾಪನೆಗೆ ಹದಿನೈದು ವರ್ಷಗಳ ಮುನ್ನ ಸ್ಥಾಪಿಸಲಾದ ಸಾರ್ವಜನಿಕ ಸಭಾ ದೇಶದ ಒಂದು ಪ್ರಮುಖ ರಾಜಕೀಯ ಸಂಸ್ಥೆಯಾಗಿ ಮಾನ್ಯತೆ ಹೊಂದಿತ್ತು. ಸಭೆಯ ಪ್ರಥಮ ಹಾಗೂ ನಿಷ್ಠಾವಂತ ಕಾರ್ಯದರ್ಶಿ ಗಣೇಶ ವಾಸುದೇವ ಜೋಶಿ (ಸಾರ್ವಜನಿಕ ಕಾಕಾ ಎಂದೇ ಅವರು ಪರಿಚಿತರಾಗಿದ್ದರು) ಸಾರ್ವಜನಿಕ ಪ್ರಶ್ನೆಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡುವ ಸಂಪ್ರದಾಯಗಳನ್ನು ಹಾಕಿದ್ದರು. ಸಭೆ ತ್ರೈಮಾಸಿಕವೊಂದನ್ನು ಸಹ ಪ್ರಕಟಿಸುತ್ತಿತ್ತು ಹಾಗೂ ರಾನಡೆಯವರು ಅದರಲ್ಲಿ ಆಗಾಗ ಲೇಖನಗಳನ್ನು ಬರೆಯುತ್ತಿದ್ದರು.

೧೮೯೦ರಲ್ಲಿ ಗೋಖಲೆಯವರು ಸಾರ್ವಜನಿಕ ಸಭಾದ ಕಾರ್ಯದರ್ಶಿ ಸ್ಥಾನವನ್ನು ಒಪ್ಪಿಕೊಂಡಿದ್ದು ತಿಲಕರು ಹಾಗೂ ಡೆಕ್ಕನ್ ಎಜುಕೇಶನ್ ಸೊಸೈಟಿಯ ಇತರ ಸದಸ್ಯರ ನಡುವೆ ವಿವಾದಕ್ಕೊಳಗಾಗಿದ್ದ ಅಂಶಗಳಲ್ಲಿ ಒಂದಾಗಿತ್ತು ಎಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಸಭಾದ ಸ್ಥಾಪನೆಯಾದಾಗಿನಿಂದಲೂ ರಾನಡೆಯವರು ಅದನ್ನು ಕೈಹಿಡಿದು ನಡೆಸಿದ ಚೇತನವಾಗಿದ್ದರು. ಸಭೆಯ ಹತೋಟಿಯನ್ನು ಗಳಿಸಲು ತಿಲಕರನ್ನು ಪ್ರೇರಿಸಿದ ಪ್ರಮುಖ ಕಾರಣವೆಂದರೆ, ಸಭೆ ಆಗಿನ ಸಾರ್ವಜನಿಕಾಭಿಪ್ರಾಯದ ಲಕ್ಷಣವನ್ನು ಪ್ರತಿಬಿಂಬಿಸುವಂತೆ ಮಾಡಬೇಕೆಂಬುದೇ ಆಗಿತ್ತು. ಸಭೆಯ ಪ್ರಮುಖ ಹುದ್ದೆಗಳನ್ನು ತಿಲಕರಿಗೆ ಬೇಕಾದವರು ಪಡೆದರು. ಕಾರ್ಯದರ್ಶಿ ಸ್ಥಾನವನ್ನೂ ಮಾತ್ರ ಗೋಖಲೆಯವರೇ ಉಳಿಸಿಕೊಂಡರು. ಗೋಖಲೆಯವರು ನಂತರ ರಾಜೀನಾಮೆ ಕೊಟ್ಟರು ಹಾಗೂ ಮೂರು ತಿಂಗಳ ನಂತರ ರಾನಡೆಯವರ ಆಶ್ರಯದಲ್ಲಿ ಡೆಕ್ಕನ್ ಸಭಾ ಎಂದು ಕರೆಯಲಾದ ಪ್ರತಿಸ್ಪರ್ಧಿ ಸಂಘವೊಂದನ್ನು ಸ್ಥಾಪಿಸಿದರು. ಈ ಘಟನೆ "ಸೌಮ್ಯ" ಅಥವಾ "ಲಿಬರಲ್" ಪಕ್ಷದ ಸ್ಥಾಪನೆಯನ್ನು ಸೂಚಿಸುವ ಘಟನೆ ಎಂದು ತಿಳಿಯಲಾಗಿದೆ. ಏಕೆಂದರೆ ಆಗ ರಾನಡೆಯವರು ತಮ್ಮ ಖ್ಯಾತ ಸೌಮ್ಯತೆ ಮತ್ತು ಲಿಬರಲ್ ವಾದವನ್ನು ಮಂಡಿಸಿದರು.

ಡೆಕ್ಕನ್ ಸಭಾದ ಸ್ಥಾಪನೆ ಪ್ರಜಾಸತ್ತಾತ್ಮಕವಲ್ಲದ ಕ್ರಮವೆಂದು ತಿಲಕರು ಅಭಿಪ್ರಾಯ

ಪಟ್ಟರು. ತಮ್ಮ ವಿರುದ್ಧ ಮಾಡಲಾದ ಉಗ್ರಗಾಮಿತನದ ಆಪಾದನೆಯನ್ನೂ ಅವರು ತಳ್ಳಿಹಾಕಿದರು. ಸಭಾ ರಾನಡೆಯವರ ಹತೋಟಿಯಲ್ಲಿದ್ದಾಗಲೂ ಸಭೆಯ ವಿರುದ್ಧ ರಾಜದ್ರೋಹದ ಚಟುವಟಿಕೆಗಳನ್ನು ಸರ್ಕಾರ ಆಪಾದಿಸಿತ್ತು ಎಂಬುದನ್ನು ಅವರು ತೋರಿಸಿದರು: "ಸಮಾಜ ಸುಧಾರಣೆಯ ವಿವಾದಗಳಲ್ಲಿ 'ಸೌಮ್ಯವಾದಿಗಳು' ಮತ್ತು 'ಉಗ್ರಗಾಮಿಗಳು' ಎಂಬ ಪದಗಳ ಪರಿಚಯ ನಮಗಾಗಿದೆ. ಆದರೆ ರಾಜಕೀಯದಲ್ಲಿ ಈ ಕೃತಕ ವ್ಯತ್ಯಾಸಗಳನ್ನು ಒಪ್ಪಿಕೊಳ್ಳಲು ನಾವು ನಿರಾಕರಿಸುತ್ತೇವೆ. ನಾನು ಬ್ರಿಟಿಷ್ ಸರ್ಕಾರವನ್ನು ನಾಶ ಮಾಡುತ್ತೇನೆಯೇ? ಹಾಗೂ ಶ್ರೀ ರಾನಡೆ ಮತ್ತು ಪ್ರೊ. ಗೋಖಲೆಯವರು ಅದರ ರಕ್ಷಕರಾಗುತ್ತಾರೆಯೇ? ಸೌಮ್ಯವಾದಿ ಎಂದು ಪ್ರಕ್ಕ ಸಿಕ್ಕಿಸಿಕೊಂಡು, ಇತರರು ರಾಜದ್ರೋಹದ ಪ್ರೇರಣೆಗಳಿಂದ ಪ್ರಚೋದಿತರಾಗಿದ್ದಾರೆ ಎಂದು ಹೇಳುವುದು ಉದ್ಧಟತನದ ಪರಾಕಾಷ್ಠೆಯಾಗಿದೆ."

ತಿಲಕರು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ ಐದು ವರ್ಷಗಳ ನಂತರ ಕಾಂಗ್ರೆಸ್ ಸ್ಥಾಪಿತಗೊಂಡಿತ್ತಾದರೂ, ೧೮೮೯ರ ವರೆಗೆ ಅವರು ಅದರ ಅಧಿವೇಶನಗಳಲ್ಲಿ ಭಾಗವಹಿಸಿರಲಿಲ್ಲ. ಆ ವರ್ಷ ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಮೊಟ್ಟಮೊದಲಿಗೆ ಭಾಗವಹಿಸಿದರು. ರಾಷ್ಟ್ರೀಯ ನಾಯಕರಾಗಿ ಮುಂದೆ ಪ್ರಸಿದ್ಧರಾದ ಇನ್ನಿಬ್ಬರು ತರುಣರೂ ಸಹ ಮೊದಲ ಬಾರಿಗೆ ಆ ವರ್ಷ ಕಾಂಗ್ರೆಸ್ ವೇದಿಕೆಯ ಮೇಲೆ ಕಾಣಿಸಿಕೊಂಡರು. ಅವರೇ ಗೋಪಾಲಕೃಷ್ಣ ಗೋಖಲೆ ಮತ್ತು ಲಾಲಾ ಲಜಪತ್ ರಾಯ್. ಲಾಲ್–ಪಾಲ್–ಬಾಲ್–ರಾಷ್ಟ್ರೀಯ ನಾಯಕತ್ವದ ಈ ತ್ರಿಮೂರ್ತಿಗಳಲ್ಲಿ ಸೇರಬೇಕಾಗಿದ್ದ ಬಿಪಿನ್ ಚಂದ್ರ ಪಾಲ್ ಅವರು ಮೂರು ವರ್ಷಗಳಿಗೆ ಮೊದಲೇ ಕಾಂಗ್ರೆಸ್ ಸೇರಿದ್ದರು. "ಕಾಂಗ್ರೆಸ್ ಸೇರುವುದು" ಎಂಬ ಪದಗಳು ಒಂದೇ ರೀತಿಯ ಅಪಪ್ರಯೋಗವೇ ಸರಿ. ಏಕೆಂದರೆ ಅದು ವರ್ಷಕ್ಕೊಮ್ಮೆ ಸಭೆ ಸೇರುವ ಸಂಸ್ಥೆಯಾಗಿತ್ತಷ್ಟೆ ಹಾಗೂ ಈ ಸಭೆಯಲ್ಲಿ ಬೇಸರ ಬರಿಸುವ ದೀರ್ಘ ಭಾಷಣಗಳನ್ನು ಮಾಡಲಾಗುತ್ತಿತ್ತು. ಏನೇ ಆದರೂ, ಕಾಂಗ್ರೆಸ್ ರಾಜಕೀಯ ಜಾಗೃತಿಯನ್ನು ಪ್ರತಿಬಿಂಬಿಸಿತ್ತು. ಹಾಗೂ ದೇಶಕ್ಕೆ ಸೇವೆ ಸಲ್ಲಿಸಲು ಇಚ್ಛಿಸಿದ ವ್ಯಕ್ತಿಗಳನ್ನು ಆಕರ್ಷಿಸಿತ್ತು.

ಕಾಂಗ್ರೆಸ್‌ನ ಮೊದಲ ಅಧಿವೇಶನದಲ್ಲಿ ಪೂನಾವನ್ನು ಪ್ರತಿನಿಧಿಸುವ ಗೌರವ ತಿಲಕರ ಸಹೋದ್ಯೋಗಿಗಳಾದ ವಿ. ಎಸ್. ಆಪ್ಟೆ ಮತ್ತು ಜಿ. ಜಿ. ಆಗರ್ಕರ್ ಅವರಿಗೆ ಲಭಿಸಿತು. 'ಕೇಸರಿ'ಯ ಪುಟಗಳ ಮೂಲಕ ಕಾಂಗ್ರೆಸ್‌ನ ವ್ಯವಹಾರಗಳ ಬಗ್ಗೆ ತಿಲಕರು ತೀವ್ರ ಆಸಕ್ತಿ ತೋರಿದ್ದರು. ರಾಜಕೀಯ ಸುಧಾರಣೆಗೆ ಮಾತ್ರ ಕಾಂಗ್ರೆಸ್ ಸಂಪೂರ್ಣ ಗಮನ ನೀಡಬೇಕೆಂಬ ಅಭಿಪ್ರಾಯವನ್ನು 'ಕೇಸರಿ' ಬೆಂಬಲಿಸಿತು. ಶ್ರೀ ಎ. ಒ. ಹ್ಯೂಮ್ ಅವರು ರೂಪಿಸಿದಂತೆ ಕಾಂಗ್ರೆಸ್ ಸಮಾಜ ಸುಧಾರಣೆಯ ಅಂಗವಾಗಬೇಕಿತ್ತು. ಆದರೆ ವೈಸರಾಯ್ ಲಾರ್ಡ್ ಡಫರಿನ್ ಅದು ರಾಜಕೀಯ ಸಂಸ್ಥೆಯಾಗಬೇಕೆಂಬ ಸಲಹೆ ಮಾಡಿದರು. ಈ ವಿಷಯ ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಶಾಸಕಾಂಗ ಮಂಡಳಿಗಳ ಧೋರಣೆಯ ಗೊತ್ತುವಳಿಗೆ "ಇಂಪೀರಿಯಲ್ ಶಾಸಕಾಂಗಗಳಿಗೆ ಚುನಾವಣೆಗಳನ್ನು ಪ್ರಾದೇಶಿಕ ಮಂಡಳಿಗಳ ಚುನಾಯಿತ ಸದಸ್ಯರು ಮಾಡಬೇಕೆಂದು" ತಿದ್ದುಪಡಿಯನ್ನು ಸೂಚಿಸುವ ಮೂಲಕ ತಿಲಕರು ಕಾಂಗ್ರೆಸ್ ಅಧಿವೇಶನದಲ್ಲಿ ಮೊದಲು ಕಾಣಿಸಿಕೊಂಡರು. ಗೋಖಲೆಯವರು

ತಿದ್ದುಪಡಿಗೆ ಬೆಂಬಲ ನೀಡಿದರು. ಆದರೆ ತಿದ್ದುಪಡಿ ಬಿದ್ದುಹೋಯಿತು. ಕಾಂಗ್ರೆಸ್ ಅಧಿವೇಶನ ನಡೆಯುತ್ತಿದ್ದಾಗ 'ಕೇಸರಿ'ಯನ್ನು ಮುಂಬೈನಿಂದ ದೈನಿಕವಾಗಿ ಪ್ರಕಟಿಸಿ ತಿಲಕರು ಪತ್ರಿಕೋದ್ಯಮದಲ್ಲಿ ಇತಿಹಾಸವನ್ನು ಸೃಷ್ಟಿಸಿದರು.

೧೮೮೯ರಿಂದ ಪ್ರಾರಂಭಿಸಿ, ತಿಲಕರು ಕಾಂಗ್ರೆಸ್‌ನ ಹೆಚ್ಚುಕಡಿಮೆ ಎಲ್ಲ ಅಧಿವೇಶನಗಳಲ್ಲೂ ಭಾಗವಹಿಸಿದರು. ೧೮೯೧ರ ನಾಗಪುರದ ಅಧಿವೇಶನದಲ್ಲಿ, ಶಸ್ತ್ರಗಳ ಕಾಯಿದೆಯ ಮೇಲೆ ಗೊತ್ತುವಳಿಯನ್ನು ಮಂಡಿಸುವ ಗೌರವವನ್ನು ತಿಲಕರಿಗೆ ನೀಡಲಾಯಿತು. ಆಗ ತಿಲಕರು ಮಾಡಿದ ಭಾಷಣ ಕಾಂಗ್ರೆಸ್ ವೇದಿಕೆಯ ಮೇಲಿಂದ ಅವರು ಮಾಡಿದ ಪ್ರಥಮ ಭಾಷಣವಾಗಿದ್ದರಿಂದ ಹಾಗೂ ಕಾಂಗ್ರೆಸ್‌ನ ಕಾರ್ಯಕಲಾಪಗಳಲ್ಲಿ ಮೇಲಿಂದ ಮೇಲೆ ಆ ವಿಷಯ ಚರ್ಚಿತವಾಗಿದ್ದರಿಂದ ಆ ಭಾಷಣದ ಕೆಲವು ಭಾಗಗಳನ್ನು ಇಲ್ಲಿ ಉಲ್ಲೇಖಿಸುವುದು ಉಚಿತವಾಗಿದೆ.

"ಸೈನ್ಯಕ್ಕೆ ಸೇರಿಸಿಕೊಳ್ಳಲು ತೊಂದರೆಯಾಗುತ್ತಿದೆ ಎಂದು ಸರ್ಕಾರ ಈಗಾಗಲೇ ದೂರುತ್ತಿದೆ; ಅದು ತನ್ನ ಪ್ರಸಕ್ತ ಧೋರಣೆಯನ್ನು ಮಾರ್ಪಾಡು ಮಾಡದಿದ್ದಲ್ಲಿ ಆ ತೊಂದರೆ ಹೆಚ್ಚಾಗುತ್ತದೆ ಎಂದು ನನಗನಿಸುತ್ತದೆ. ಭಾಗಶಃ, ಯೋಧಲಕ್ಷಣದ ಕೋಮುಗಳನ್ನು ಸರ್ಕಾರ ಬಲಹೀನಗೊಳಿಸುತ್ತಿರುವುದರಿಂದ ಹಾಗೂ ಭಾಗಶಃ ತನ್ನ ಪ್ರಜೆಗಳನ್ನು ಅಪನಂಬಿಕೆಯಿಂದ ಕಾಣುತ್ತಿರುವ ಸರ್ಕಾರದ ಸೇವೆ ಮಾಡುವ ಬಗ್ಗೆ ಶಂಕೆ ಹೆಚ್ಚಾಗಿರುತ್ತಿರುವುದರಿಂದ ಈ ತೊಂದರೆ ಅಧಿಕವಾಗುತ್ತದೆ. ಇಂತಹ ಎಲ್ಲ ವಿಷಯಗಳಲ್ಲಿ ಸರ್ಕಾರದ ಧೋರಣೆಯನ್ನು ತೂಗಿ ನೋಡುವುದರಿಂದ ನಮ್ಮನ್ನೆಲ್ಲಾ ಸರ್ಕಾರ ಅಪನಂಬಿಕೆಯಿಂದ ಕಾಣುತ್ತಿದೆ ಎಂದು ತೋರುತ್ತದೆ. ಸೈನ್ಯಕ್ಕೆ ಸೇರಿಸಿಕೊಳ್ಳಲು ಇರುವ ಅಡಚಣೆಗಳು ಉಳಿಯುವುದಕ್ಕೆ ಅವಕಾಶ ಕೊಟ್ಟರೆ ಸರ್ಕಾರಕ್ಕೂ, ಭಾರತಕ್ಕೂ ಅದು ಕೆಡುಕಿನ ವಿಷಯ. ಈ ಗೊತ್ತುವಳಿಯಲ್ಲಿ ಅಡಕವಾಗಿರುವ ಪ್ರತಿಭಟನೆಯಿಲ್ಲದೆ ಈ ಅಡಚಣೆಗಳಿಂದ ಉಂಟಾಗುವ ಪರಿಸ್ಥಿತಿಗಳು ರೂಪುಗೊಳ್ಳುವುದಕ್ಕೆ ನಾವು ಅನುಮತಿ ಕೊಡಬಹುದು ಎಂದು ನಾನು ಭಾವಿಸುವುದಿಲ್ಲ."

ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು ಹಾಗೂ ತಿಲಕರ ಭಾಷಣ ಸಭಿಕರಲ್ಲಿ ಗಾಢ ಪ್ರಭಾವ ಉಂಟುಮಾಡಿತು. ಮುಂದೆ ನಾಯಕನಾಗುವ ವ್ಯಕ್ತಿ ಎಂದು ಅವರನ್ನು ಕಾಣಲಾಯಿತು. ೧೮೯೩ರ ಅಧಿವೇಶನದಲ್ಲಿ, ಖಾಯಂ ನೆಲಿಸುವಿಕೆಯ ಬೇಡಿಕೆಗೆ ಬೆಂಬಲ ನೀಡಿದ ತಿಲಕರು, ಸುಶಿಕ್ಷಿತ ವರ್ಗಗಳ ಲಾಭಕ್ಕೆ ಕಾಂಗ್ರೆಸ್ ಅಸ್ತಿತ್ವದಲ್ಲಿದೆ ಎಂಬ ಆಪಾದನೆಯನ್ನು ತಿರಸ್ಕರಿಸಿದರು; "ಆ ವರ್ಗಕ್ಕೆ ಲಾಭ ದೊರಕಬೇಕೆಂದು ನಾನು ಉದ್ದೇಶಿಸಿಲ್ಲ; ಆದರೆ ಬಡ ವರ್ಗಗಳಿಗೆ ಪ್ರಯೋಜನ ದೊರಕಬೇಕೆಂದು ನಮ್ಮ ಪ್ರಯತ್ನ. ಮುಂಬೈನಿಂದ ನಾನು ಬಂದಿದ್ದರೂ, ಜಮೀನ್ದಾರರ ಪರವಾಗಿ ನಾನು ವಾದಿಸುವುದಿಲ್ಲ, ರೈತರ ಪರವಾಗಿ ನಾನು ವಾದಿಸುತ್ತೇನೆ ಎಂಬುದನ್ನು ನಾನು ಸೂಚಿಸುತ್ತೇನೆ."

ಜನತೆಯ ಸೇವೆಗೆ ಹಾಗೂ ಕಾಂಗ್ರೆಸ್ ಸಾಮಾನ್ಯ ಜನರ ಸಂಸ್ಥೆಯಾಗಿ ಬೆಳೆಯಬೇಕೆಂಬುದಕ್ಕೆ ತಿಲಕರು ಪ್ರಾಧಾನ್ಯ ನೀಡಿದರು. "ಐವತ್ತು ಉತ್ತಮ ಹಾಗೂ ಪ್ರಾಮಾಣಿಕ ಜನರಿಗೆ" ಮೊದಲು ಮನವಿ ಮಾಡಿಕೊಂಡಿದ್ದ ಹ್ಯೂಮ್ ಅವರೂ ಸಹ

ತಿಲಕರಂತೆಯೇ ವಿಚಾರ ಮಾಡಲು ಪ್ರಾರಂಭಿಸಿದರು. ಸರ್ಕಾರದ ಅನುಗ್ರಹಗಳಿಗೆ ಕಾಯದೆ ತಮ್ಮ ಕುಂದುಕೊರತೆಗಳ ಪರಿಹಾರಕ್ಕೆ ಚಳವಳಿ ಮಾಡುವಂತೆ ಕೇಳುವ ಸುತ್ತೋಲೆಯೊಂದನ್ನು ಅವರು ಫೆಬ್ರವರಿ ೧೮೯೨ರಲ್ಲಿ ಕಳಿಸಿದರು. ಹ್ಯೂಮ್ ಅವರಿಗೆ 'ಕೇಸರಿ' ಸಂಪೂರ್ಣ ಬೆಂಬಲವನ್ನು ನೀಡಿತು.

೧೮೯೧ರಲ್ಲಿ ತಿಲಕರು ಮುಂಬೈ ಪ್ರಾಂತೀಯ ರಾಜಕೀಯ ಸಮ್ಮೇಳನದ ಮೂವರು ಕಾರ್ಯದರ್ಶಿಗಳ ಪೈಕಿ ಒಬ್ಬರಾಗಿ ಚುನಾಯಿತಗೊಂಡರು. ಡಿ. ಇ. ವಾಚಾ ಮತ್ತು ಚಿಮನ್‌ಲಾಲ್ ಹೆಚ್. ಸೆಟಲವಾಡ್ ಉಳಿದಿಬ್ಬರು ಕಾರ್ಯದರ್ಶಿಗಳಾಗಿದ್ದರು. ಸಮ್ಮೇಳದ ವಾರ್ಷಿಕ ಅಧಿವೇಶನದಲ್ಲಿ ಮುಂಬೈ ಸರ್ಕಾರದ ಅಬ್ಕಾರಿ ಧೋರಣೆಯನ್ನು ಅವರು ಖಂಡಿಸಿದರು ಹಾಗೂ ತನ್ನ ಕಂದಾಯವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಮಾತ್ರ ಆಸಕ್ತಿಹೊಂದಿದ್ದ ಅಬ್ಕಾರಿ ಇಲಾಖೆ ಮದ್ಯದಂಗಡಿಗಳನ್ನು ಪ್ರಾರಂಭಿಸುವ ಅಥವಾ ಮುಚ್ಚುವ ಅಧಿಕಾರವನ್ನು ಹೊಂದಿರಬಾರದೆಂದು ಒತ್ತಾಯಪಡಿಸಿದರು. ಉಪ್ಪಿನ ತಯಾರಿಕೆ ಹಾಗೂ ಬಹಿರಂಗ ಅರಣ್ಯ ಪ್ರದೇಶಗಳಲ್ಲಿ ಉಚಿತವಾಗಿ ಹುಲ್ಲು ಮೇಯಿಸುವ ಬಗ್ಗೆ ಅನೇಕ ಸೂಚನೆಗಳನ್ನು ಅನುಮೋದಿಸಲಾಯಿತು. ಒಪ್ಪಿಗೆಯ ವಯಸ್ಸು ಮಸೂದೆಯನ್ನು ವಿರೋಧಿಸುವ ಗೊತ್ತುವಳಿಯನ್ನು ಸಮ್ಮೇಳನ ಅಂಗೀಕರಿಸದ್ದರಲ್ಲಿ ಸಮ್ಮೇಳನದ ಮೇಲೆ ತಿಲಕರು ಹೊಂದಿದ್ದ ಹಿಡಿತವನ್ನು ಕಾಣಲಾಯಿತು. ಅಂತಹ ಅನೇಕ ಗೊತ್ತುವಳಿಗಳ ಫಲಿತಾಂಶದ ಬಗ್ಗೆ ಅವರಿಗೆ ಬೇಗ ಭ್ರಮನಿರಸನವಾಗತೊಡಗಿತು. 'ಮರಾಠ' ಹೀಗೆ ಬರೆಯಿತು:

"ಒಂದು ಕಡೆ ಕಾಂಗ್ರೆಸ್ ಹಾಗೂ ಸಮ್ಮೇಳನಗಳ ಮೂಲಕ ನಾವು ಉದ್ದುದ್ದದ ಭಾಷಣಗಳನ್ನು ಮಾಡುತ್ತಿದ್ದು, ಮತ್ತೊಂದು ಕಡೆ ದೇಶವನ್ನು ಆಳುತ್ತಿರುವವರು ಬಹಳಷ್ಟು ಆಶಾಜನಕ ಭರವಸೆಗಳನ್ನು ನೀಡುತ್ತಿದ್ದರೂ, ರಾಜಕೀಯ ಏಳಿಗೆಯ ದೃಷ್ಟಿಯಿಂದಾಗಲಿ ಕೈಗಾರಿಕಾ ಏಳಿಗೆಯ ದೃಷ್ಟಿಯಿಂದಾಗಲಿ ಕಳೆದ ಆರು ವರ್ಷಗಳಲ್ಲಿ ನಿಜವಾಗಿ ಸಾಧಿಸಲಾಗಿರುವುದು ಅತ್ಯಲ್ಪ............ಮುಂದಿನ ಡಿಸೆಂಬರ್‌ಗೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಆರನೆಯ ವರ್ಷವನ್ನು ಪ್ರವೇಶಿಸುತ್ತದೆ. ಆದರೆ ಜನತೆಯ ಯಾವ ಬೇಡಿಕೆಯನ್ನು ಈಡೇರಿಸಲಾಗಿದೆ? ಈ ಪ್ರಶ್ನೆಗೆ ಉತ್ತರ ಬಹಳ ನಿರುತ್ಸಾಹದಾಯಕವಾಗಿದೆ."

೧೮೯೫ರಲ್ಲಿ ಪೂನಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ, ತೋರಿಕೆಗೆ ಸಣ್ಣ ವಿಷಯವಾದ, ಸಾಮಾಜಿಕ ಸಮ್ಮೇಳನದ ಅಧಿವೇಶನವನ್ನು ಕಾಂಗ್ರೆಸ್ ಚಪ್ಪರದಲ್ಲಿ ನಡೆಸಬೇಕೆಂಬ ವಿಷಯದ ಬಗ್ಗೆ ತಿಲಕರ ಗುಂಪು ಮತ್ತು ಸಮಾಜ ಸುಧಾರಣೆಯ ಗುಂಪಿನ ನಡುವೆ ನೇರ ಘರ್ಷಣೆ ಉಂಟಾಯಿತು. ಈ ಬಗ್ಗೆ ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಆ ವೇಳೆಗಾಗಲೇ ಈ ಪದ್ಧತಿ ಸಾಮಾನ್ಯವಾಗಿ ಬಿಟ್ಟಿತ್ತು. ಆದರೆ ಸಮಾಜ ಸುಧಾರಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬಾರದೆಂಬ ಕಾಂಗ್ರೆಸ್‌ನ ಘೋಷಿತ ಧೋರಣೆಗೆ ಅದು ವಿರುದ್ಧವಾಗಿತ್ತು. ಕಲ್ಕತ್ತೆಯಲ್ಲಿ. ಕಾಂಗ್ರೆಸ್‌ನ ಎರಡನೆಯ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಹಿರಿಯರಾಗಿದ್ದ ದಾದಾಭಾಯಿ ನವ ರೋಜಿ ಅವರೇ ಈ ಧೋರಣೆಯನ್ನು ಮಾಡಿದ್ದರು. ಅವರನ್ನು ಸಮಾಜ ಸುಧಾರಣೆ

ಯನ್ನು ವಿರೋಧಿಸುವ ವ್ಯಕ್ತಿ ಎಂದು ಯಾರೂ ದೂಷಿಸುವುದು ಸಾಧ್ಯವಿರಲಿಲ್ಲ. ಒಪ್ಪಿಗೆಯ ವಯಸ್ಸು ಮಸೂದೆಯ ಮೇಲೆ ಉಂಟಾಗಿದ್ದ ವಿವಾದದ ಸಮಯದಲ್ಲಿ ಈ ಧೋರಣೆಯನ್ನು ಹ್ಯೂಮ್ ದೃಢೀಕರಿಸಿದ್ದರು.

ತಿಲಕರ ಸಂಗಡ ಸಾಮಾಜಿಕ ಸಮ್ಮೇಳನವನ್ನು ಕಾಂಗ್ರೆಸ್ ಚಪ್ಪರದಲ್ಲಿ ನಡೆಸಬಾರದೆಂಬ ಬೇಡಿಕೆಯನ್ನು ಮಾಡಿದ್ದು ಸಮಂಜಸವಾಗಿದ್ದರೂ, ಈ ಬೇಡಿಕೆಯನ್ನು ಬೆಂಬಲಿಸಲು ಬಳಸಿದ ವಿಧಾನಗಳು ಆಕ್ಷೇಪಾರ್ಹವಾಗಿದ್ದವು. ಚಪ್ಪರವನ್ನು ಸುಟ್ಟು ಬಿಡುವ ಬೆದರಿಕೆಗಳಿಂದ ಹೆದರಿದ ಗೋಖಲೆಯವರು ಪೂನಾಗೆ ಭೇಟಿ ಕೊಡುವಂತೆ ಡಿ. ಇ. ವಾಚಾ ಅವರಿಗೆ ತುರ್ತು ಸಂದೇಶವನ್ನು ಕಳಿಸಿದರು. ವಾಚಾ ಅವರು ತಮ್ಮ ನೆನಪುಗಳಲ್ಲಿ ಈ ಘಟನೆಯನ್ನು ವಿನೋದವಾಗಿ ವಿವರಿಸಿದ್ದಾರೆ. ತಿಲಕರು ತಮ್ಮ ನಿಲುವಿನಲ್ಲಿ ದೃಢವಾಗಿಯೇ ಇದ್ದರು. ಆದರೆ ಕಾಂಗ್ರೆಸ್ ಏಕತೆಯನ್ನು ಮುಂದುವರಿಸಿಕೊಂಡು ಹೋಗುವ ಹಾಗೂ ಪೂನಾದ ಅಧಿವೇಶನವನ್ನು ಯಶಸ್ವಿಯಾಗಿಸಬೇಕೆಂಬ ಅವರ ಇಚ್ಛೆ ಮತ್ತಷ್ಟು ದೃಢವಾಗಿತ್ತು. ಸಾರ್ವಜನಿಕ ಮನವಿಯೊಂದರಲ್ಲಿ ಅವರು ಹೀಗೆ ನುಡಿದರು:

"ಪ್ರತಿಯೊಬ್ಬರೂ, ಅವರು ಸಂಪ್ರದಾಯವಾದಿಗಳಾಗಿರಲಿ, ಅಸಂಪ್ರದಾಯವಾದಿಗಳಾಗಿರಲಿ, ಕಾಂಗ್ರೆಸ್ ಚಳವಳಿಯನ್ನು ಸೇರಿ ಅದನ್ನು ಬೆಂಬಲಿಸಬೇಕು. ಪೂನಾದಲ್ಲಿ ನಡೆಯುವ ಕಾಂಗ್ರೆಸ್‌ನಲ್ಲಿ ಅಲ್ಲಿನ ಬಹುಸಂಖ್ಯಾತರು ಉತ್ಸಾಹದಿಂದ ಸೇರದಿದ್ದಲ್ಲಿ ಅದು ಯಶಸ್ವಿಯಾಯಿತೆಂದು ಹೇಳಲಾಗುವುದಿಲ್ಲ. ನಾವು ವ್ಯಾಪಾರಿ, ಕುಶಲ ಕೆಲಸಗಾರ, ಹಾಗೂ ಕಾರ್ಮಿಕ ಮತ್ತು ವಿದ್ಯಾವಂತ ವರ್ಗಗಳ ಬಳಿ ಹೋಗಿ ಅವರೆಲ್ಲರೂ ಕಾಂಗ್ರೆಸ್ ನಿಧಿಗೆ ವಂತಿಗೆ ಕೊಡುವಂತೆ ಮಾಡಬೇಕು. ಹೀಗೆ ಮಾಡಲು, ಅನಾವಶ್ಯಕವಾಗಿ ಅವರ ಸೂಕ್ಷ್ಮ ಭಾವನೆಗಳಿಗೆ ನೋವುಂಟಾಗದ ರೀತಿಯಲ್ಲಿ ನಾವು ಅವರಲ್ಲಿನ ಪ್ರತಿಯೊಬ್ಬರಿಗೂ ಮನವಿ ಮಾಡಿಕೊಳ್ಳಬೇಕು. ಕಾಂಗ್ರೆಸ್ ಕೊನೆಗೊಮ್ಮೆ ಜನತಾ ಪರಿಷತ್ತಾಗಬೇಕೆಂಬ ಗುರಿಯನ್ನು ಅದು ಹೊಂದಿದೆ ಹಾಗೂ ಕಾಂಗ್ರೆಸ್‌ನಲ್ಲಿ ಇದುವರೆಗೆ ಹೆಚ್ಚಿನ ಆಸಕ್ತಿ ಹೊಂದದ ವರ್ಗಗಳನ್ನು ಮುಟ್ಟಲು ಪ್ರಯತ್ನ ಮಾಡದೆ ಆ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ.

ಕಾಂಗ್ರೆಸ್‌ಗೆ ಜನಸಾಮಾನ್ಯರು ಆಕರ್ಷಿತಗೊಂಡರೆ, ಅವರು ಸಾಮಾಜಿಕ ಸಮ್ಮೇಳನದ ಧ್ಯೇಯಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಬೆಂಬಲ ನೀಡದೆ ಇರಬಹುದು. ಈ ಭಯ, ಸಮಾಜ ಸುಧಾರಣೆಯ ಗೆಳೆಯರು ಕಾಂಗ್ರೆಸ್‌ಗಾಗಿ ಮಾಡುವ ತಮ್ಮ ಕಾರ್ಯದ ವ್ಯಾಪ್ತಿಯನ್ನು ಸುರಕ್ಷಿತವಾದ ಒಂದು ಸಣ್ಣ ವೃತ್ತಕ್ಕೆ ನಿರ್ಬಂಧಿಸುತ್ತದೆ. ಸಮಾಜ ಸುಧಾರಣೆಯ ಪ್ರಶ್ನೆ ಏನೇ ಇರಲಿ, ಕಾಂಗ್ರೆಸ್‌ಗೆ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನಸಾಮಾನ್ಯರನ್ನು ಸೇರಿಸಬೇಕೆಂದು ಒಂದು ಪಂಗಡ ಇಚ್ಛಿಸುತ್ತದೆ; ಸುಧಾರಣಾವಾದಿಗಳನ್ನು ಮೀರಿ ಮುಂದೆ ಹೋಗಲು ಇನ್ನೊಂದು ಪಂಗಡ ಇಚ್ಛಿಸುತ್ತಿಲ್ಲ. ಆದರೆ ಇಲ್ಲಿ ಮುಖ್ಯವಾದ ವಿಷಯವೇದರೆ ಪೂನಾದಲ್ಲಿ ನಡೆಯುವ ಕಾಂಗ್ರೆಸ್, ಜನತೆಯ ಕಾಂಗ್ರೆಸ್ ಆಗಿರಬೇಕೇ ಅಥವಾ ಜನತೆಯ ಒಂದು ನಿರ್ದಿಷ್ಟ ಭಾಗವಾಗಬೇಕೇ ಎಂಬುದೇ ಆಗಿದೆ. ಸಮಾಜ ಸುಧಾರಣೆಯ ಗೆಳೆಯರು ಸಾರ್ವಜನಿಕಾಭಿಪ್ರಾಯವನ್ನು ಗೌರವಿಸಲು ಇಚ್ಛಿಸದಿದ್ದಲ್ಲಿ – ಈ ಸಾರ್ವಜನಿಕಾಭಿಪ್ರಾಯವನ್ನು ಅವರ ಪೈಕಿ ಕೆಲವರು

'ಪಾಶವಿ ಬಲ' ಎಂದು ವರ್ಣಿಸಲು ಸಿದ್ಧರಿದ್ದಾರೆ ಎಂಬುದನ್ನು ತಿಳಿಸಲು ನನಗೆ ವಿಷಾದವಾಗುತ್ತದೆ–ಸಾರ್ವಜನಿಕರಲ್ಲಿ ಬಹುಸಂಖ್ಯಾತರ ಅಭಿಪ್ರಾಯಗಳನ್ನು ಮಾನ್ಯ ಮಾಡಬೇಕೆಂಬ ಕೇಳಿಕೆಯನ್ನು ಒತ್ತಿ ಹೇಳುವುದರಿಂದ ಕಾಂಗ್ರೆಸ್‌ನಲ್ಲಿ ಒಡಕುಂಟು ಮಾಡಲು ನಾನು ಸಿದ್ಧನಿಲ್ಲ."

ತಿಲಕರ ಈ ನಿಲುವಿನಿಂದ ಹಾಗೂ ನಂತರ ಸ್ವಾಗತ ಸಮಿತಿಯ ಕಾರ್ಯದರ್ಶಿ ಸ್ಥಾನಕ್ಕೆ ಅವರು ಸಲ್ಲಿಸಿದ ರಾಜೀನಾಮೆಯಿಂದ ಎರಡೂ ಶಿಬಿರಗಳಲ್ಲಿ ಯಾವುದೇ ಪರಿಣಾಮ ಉಂಟಾಗಲಿಲ್ಲ. ಕಲಹಗಳು ಹೆಚ್ಚು ಹೆಚ್ಚು ಕಹಿಯಾಗುತ್ತಲೇ ಹೋದವು. ಹಿಂಸಾತ್ಮಕ ಪ್ರದರ್ಶನಗಳಿಂದ ಅಧಿವೇಶನಕ್ಕೆ ಭಂಗ ಬರಬಹುದೆಂಬ ಭೀತಿಯು ಸಹ ಉಂಟಾಗಿತ್ತು. ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿದ್ದ ಸುರೇಂದ್ರನಾಥ ಬ್ಯಾನರ್ಜಿಯವರು ಸಾಮಾಜಿಕ ಸಮ್ಮೇಳನದ ಅಧಿವೇಶನವನ್ನು ಬೇರೆಡೆ ನಡೆಸುವಂತೆ ರಾನಡೆಯವರ ಮನವೊಲಿಸಿದರು. ಸಮಾಜ ಸುಧಾರಣೆಯ ಬಗ್ಗೆ ತಿಲಕರು ಹೊಂದಿದ್ದ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಸಮರ್ಥಿಸಿದ ಈ ಮುಂದಿನ ಸಂದೇಶವನ್ನು ಕಾಂಗ್ರೆಸ್ ಅಧ್ಯಕ್ಷರಿಂದ ಪಡೆದ ಸುಧಾರಕರಿಗೆ ಸಿಟ್ಟೇರಿಸಿತು: "ನಮ್ಮ ಕಾರ್ಯಕಲಾಪಗಳಿಂದ ಸಾಮಾಜಿಕ ಪ್ರಶ್ನೆಗಳನ್ನು ಪ್ರತ್ಯೇಕಗೊಳಿಸುವ ಕಾರಣವೆಂದರೆ, ಅಂತಹ ಪ್ರಶ್ನೆಗಳನ್ನು ನಾವು ತೆಗೆದುಕೊಂಡರೆ ಅದರಿಂದ ತೀವ್ರ ಭಿನ್ನಾಭಿಪ್ರಾಯಗಳುಂಟಾಗಿ ಕೊನೆಗೆ ಒಡಕುಂಟಾಗಬಹುದು ಹಾಗೂ ಬಿರುಕನ್ನು ತಪ್ಪಿಸುವುದು ಪ್ರಥಮ ಪ್ರಮುಖ ವಿಷಯವಾಗಿದೆ."

ಈ ಸಂದರ್ಭದಲ್ಲಿ ಪೂನಾದಲ್ಲಿನ ಪ್ರಗತಿ ವಿರೋಧಿ ವ್ಯಕ್ತಿಗಳ ಬಲೆಗೆ ತಿಲಕರು ಬಿದ್ದರೆಂದು ಅವರನ್ನು ಆಪಾದಿಸಲಾಗಿದೆ. ತಿಲಕರ ಪ್ರಾರಂಭದ ಬೆಂಬಲವಿಲ್ಲದಿದ್ದಲ್ಲಿ ಈ ವ್ಯಕ್ತಿಗಳು ತಾವು ನಡೆಸಿದ ಅತಿರೇಕಗಳನ್ನು ನಡೆಸುವ ಧೈರ್ಯ ಹೊಂದುತ್ತಿರಲಿಲ್ಲ ಎಂಬುದು ನಿಜವಿರಬಹುದಾದರೂ, ಮೇಲೆ ಉಲ್ಲೇಖಿಸಿದ ಮನವಿ ಅನುಕೂಲಸಿಂಧುವಾಗಿರದೆ ತತ್ವಗಳನ್ನು ಆಧರಿಸಿತ್ತು, ಅಗ್ಗದ ಜನಪ್ರಿಯತೆಯನ್ನು ಗಳಿಸುವ ಇಚ್ಛೆಯನ್ನು ಆಧರಿಸಿರಲಿಲ್ಲ, ಆದರೆ ಕಾಂಗ್ರೆಸ್‌ಗೆ ಜನಸಾಮಾನ್ಯರ ಬೆಂಬಲವನ್ನು ಗಳಿಸುವ ಅಗತ್ಯವನ್ನು ಆಧರಿಸಿತ್ತು ಎಂಬುದನ್ನು ತೋರಿಸುತ್ತದೆ. ಅವರು 'ಮರಾಠ'ದಲ್ಲಿ ನವೆಂಬರ್ ೧೧ರಂದು ಹೀಗೆ ಬರೆದರು: "ಸಭೆಯಲ್ಲಿ ಅಥವಾ ಸಭೆಯ ಸುತ್ತಮುತ್ತ ಬಂದಿದ್ದು ಕಾಂಗ್ರೆಸ್‌ನ ಅಧಿವೇಶನದಲ್ಲಿ ಭಾಗವಹಿಸುವುದಕ್ಕೆ ಹಾಗೂ ನಾಯಕರು ಏನು ಹೇಳುತ್ತಾರೋ ಅದಕ್ಕೆ ತಮ್ಮ ಸಮ್ಮತಿ ಸೂಚಿಸಲು ನೂರಾರು ಸಾವಿರಾರು ಜನರಿಗೆ ಅವಕಾಶ ಕೊಟ್ಟರೆ. ಕಾಂಗ್ರೆಸ್ ಜನತೆಯ ಕಾಂಗ್ರೆಸ್ ಆಗುತ್ತದೆ."

ಜನಸಾಮಾನ್ಯರೊಂದಿಗೆ ಸಂಪರ್ಕಿಸಬೇಕೆಂಬ ಈ ಉತ್ಕಟೇಚ್ಛೆಯೇ ತಿಲಕರ ಚಟುವಟಿಕೆಗಳಿಗೆ ಪ್ರಚೋದನೆ ಒದಗಿಸುತ್ತಿತ್ತು. ಜನರಲ್ಲಿ ಹೊಸ ಜಾಗೃತಿಯನ್ನುಂಟುಮಾಡುವುದೇ ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು ನಡೆಸುವುದರ ಹಿಂದಿನ ಉದ್ದೇಶವಾಗಿತ್ತು. ಮುಂದಿನ ಎರಡು ವರ್ಷಗಳಲ್ಲಿ ಕ್ಷಾಮ ಮತ್ತು ಪ್ಲೇಗಿನ ಹಾವಳಿಗಳಲ್ಲಿ ಮಾನವೀಯ ನೆರವಿನ ಕಾರ್ಯದಲ್ಲಿ ತೊಡಗಿದ್ದರೂ ತಿಲಕರು ಈ ಪ್ರಥಮ ಗುರಿಯನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡೇ ಇದ್ದರು.

ಅಧ್ಯಾಯ 6

ರಾಷ್ಟ್ರೀಯ ಉತ್ಸವಗಳು

ಇತರ ಧಾರ್ಮಿಕ ಉತ್ಸವಗಳಂತೆ ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು ಈಗ ಮಹಾರಾಷ್ಟ್ರದಲ್ಲಿ ಎಷ್ಟು ಸಾಮಾನ್ಯವಾಗಿ ಆಚರಿಸಲಾಗುತ್ತದೆಯೆಂದರೆ ಇವುಗಳನ್ನು ೯೦ ವರ್ಷಗಳ ಹಿಂದೆಯಷ್ಟೆ ತಿಲಕರು ಪ್ರಾರಂಭಿಸಿದರು ಎಂಬುದನ್ನು ನಂಬಲು ಈಗಿನ ಪೀಳಿಗೆಗೆ ಕಷ್ಟವಾಗಬಹುದು. ಗಣಪತಿಯ ವಾರ್ಷಿಕ ಪೂಜೆ ಒಂದು ಪ್ರಾಚೀನ ಆಚರಣೆಯಾಗಿತ್ತು. ಆದರೆ ತಿಲಕರು ಅದನ್ನು ಒಂದು ಸಾಮಾಜಿಕ ಉತ್ಸವವಾಗಿ ಪರಿವರ್ತಿಸಿದರು. ಮಹಾರಾಷ್ಟ್ರದಲ್ಲಿ ಗಣಪತಿ ಉತ್ಸವವನ್ನು ವಿಜೃಂಭಣೆಯಿಂದ, ಸುವ್ಯವಸ್ಥಿತವಾಗಿ ಹಾಗೂ ವ್ಯಾಪಕವಾಗಿ ಈಗ ಆಚರಿಸುವ ರೀತಿಯಲ್ಲಿ ಬೇರೆ ಯಾವ ಹಬ್ಬವನ್ನೂ ಆಚರಿಸುವುದಿಲ್ಲ. ಈ ಉತ್ಸವದ ಮನರಂಜನಾ ಅಂಶಗಳಿಗೆ ಅದರ ಸಾಮಾಜಿಕ, ರಾಜಕೀಯ ಉದ್ದೇಶಕ್ಕಿಂತ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗುತ್ತಿದೆ ಎಂಬುದು ನಿಜವಾದರೂ ಬಂಗಾಲದ ದುರ್ಗಾಪೂಜಾ ಅಥವಾ ಉತ್ತರ ಭಾರತದ ರಾಮಲೀಲಾದಂತೆ ಗಣಪತಿ ಉತ್ಸವ ಮಹಾರಾಷ್ಟ್ರದಲ್ಲಿ ಅತ್ಯಂತ ಪ್ರಮುಖ ಹಬ್ಬವಾಗಿದೆ.

ಗಜಮುಖನಾದ ಗಣಪತಿ ಅಥವಾ ಗಣೇಶ ಹಿಂದೂ ದೇವತೆಗಳಲ್ಲಿ ಪ್ರಿಯನಾದ ದೇವರು. ಗಣೇಶ ವಿದ್ಯೆಯನ್ನು ಕರುಣಿಸುವ, ವಿಘ್ನನಿವಾರಕ ದೇವರು. ಎಲ್ಲ ಶುಭ ಸಂದರ್ಭಗಳಲ್ಲಿ ಅವನ ಆಶೀರ್ವಾದವನ್ನು ಕೋರಲಾಗುವುದು. ಮೊಹರಂ ಹಬ್ಬದಲ್ಲಿ ಭಾಗವಹಿಸುತ್ತಿದ್ದ ಹಿಂದೂಗಳನ್ನು ಬೇರೆ ಬೇರೆ ದಿಕ್ಕಿಗೆ ತಿರುಗಿಸಲು ತಿಲಕರು ಪುರಾಣಗಳಲ್ಲಿ ಗಣಪತಿಗಿಂತ ಹೆಚ್ಚು ಪ್ರಿಯನಾದ ಮತ್ತೊಬ್ಬ ದೇವರನ್ನು ಕಾಣುವುದು ಸಾಧ್ಯವಿರಲಿಲ್ಲ. ೧೮೯೩ರಲ್ಲಿ ಗಣಪತಿ ಉತ್ಸವದ ಉದ್ಘಾಟನೆ ಮಾಡುವ ತಕ್ಷಣ ಉದ್ದೇಶ ಅದೇ ಆಗಿತ್ತು. ಪರಸ್ಪರರ ಹಬ್ಬ, ಹರಿದಿನಗಳಲ್ಲಿ, ಜೊತೆಗೂಡುವುದು ಕೋಮುವಾರು ನೆಮ್ಮದಿಯನ್ನು ಸ್ಥಾಪಿಸಿ, ಕಾಪಾಡುವ ಉತ್ತಮ ಮಾರ್ಗವಾಗಿದ್ದರೂ, ೧೮೯೦ ಮತ್ತು ಅದರ ಮುಂದಿನ ವರ್ಷಗಳಲ್ಲಿ ಅನೇಕ ಕೋಮುವಾರು ಗಲಭೆಗಳು ನಡೆದು ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಸಂಬಂಧಗಳು ಕಹಿಯಾಗಿದ್ದವು. ಮುಂಬೈನಲ್ಲಿ ಆಗಸ್ಟ್ ೧೧, ೧೮೯೩ರಂದು ನಡೆದ ಗಲಭೆ ಈ ಗಲಭೆಗಳ ಪೈಕಿ ಅತ್ಯಂತ ತೀವ್ರವಾಗಿತ್ತು. ಕೆಲವು ಮುಸಲ್ಮಾನರ ಹಿಂದೂ ವಿರೋಧಿ ಚಟುವಟಿಕೆಗಳು ಹಾಗೂ ಸರ್ಕಾರ ಮುಸಲ್ಮಾನರ ಪರವಾಗಿ ತಾಳಿದ ನಿಲುವಿನ ವಿರುದ್ಧ ಪ್ರತಿಭಟನೆ ಸೂಚಿಸುವ ಭಾವನೆಯಲ್ಲಿ ಗಣಪತಿ ಉತ್ಸವವನ್ನು ನಿಜವಾಗಿಯೂ ರೂಪಿಸಲಾಗಿತ್ತು. ಉತ್ಸವ ಬೇಗ ಜನರಿಗೆ ಪ್ರಿಯವಾಯಿತು ಹಾಗೂ ಸಾಮಾಜಿಕ ಸಂಘಟನೆ ಮತ್ತು ರಾಜಕೀಯ ಜಾಗೃತಿಗೆ ಉಪಯುಕ್ತ ಸಾಧನೆಯಾಗಿ ಪರಿಣಮಿಸಿತು.

ಗಣಪತಿ ಉತ್ಸವದ ಅನುಕರಣೆಯ ಸ್ವರೂಪವನ್ನು ಸುಧಾರಕರ ಶಿಬಿರದಲ್ಲಿ ಉತ್ಸ

ಏವ ವಿರೋಧಿಗಳು ಅಪಹಾಸ್ಯ ಮಾಡಿದ್ದು ಹೆಚ್ಚುಕಡಿಮೆ ಅನಿವಾರ್ಯವೇ ಆಗಿತ್ತು. ತಿಲಕರು ಈ ಬಗ್ಗೆ ಹೀಗೆ ಗಮನಿಸಿದರು :

"ಗಣಪತಿಯ ಮೆರವಣಿಗೆ ಮುಸಲ್ಮಾನರ ತಾಬೂತ್‌ಗಳ ಅನುಕರಣೆ ಎಂದು ಹೇಳುವವರು ಆಷಾಢ ಮತ್ತು ಕಾರ್ತಿಕ ಏಕಾದಶಿಯ ಸಂದರ್ಭಗಳಲ್ಲಿ ಭಜನೆ ಗುಂಪುಗಳನ್ನು ನೋಡಿಲ್ಲ. ಲೆಜ್ಹಿಂ, ದೊಡ್ಡ ಮದ್ದಲೆ ಮುಂತಾದ ವಾದ್ಯಗಳನ್ನು ಬಾರಿಸುವುದು, ನುಡಿಸುವುದನ್ನು ಪ್ರತಿಯೊಂದು ಉತ್ಸವದಲ್ಲೂ ಮಾಡಲಾಗುತ್ತದೆ. ಕಳೆದ ಇನ್ನೂರು ಅಥವಾ ಮುನ್ನೂರು ವರ್ಷಗಳಲ್ಲಿ, ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದರೂ, ನಮ್ಮಲ್ಲಿ ಕೆಲವರು ಮೊಹರಂ ಸಮಯದಲ್ಲಿ ಮುಸಲ್ಮಾನ ದೇವತೆಗಳು ಅಥವಾ ವೀರರಿಗೆ ಹರಕೆ ಹೊರುತ್ತಿದ್ದೆವು. ನಾವು ಎಲ್ಲರಲ್ಲಿ ದೇವರನ್ನು ಕಂಡಿದ್ದರಿಂದಲೇ ಹೀಗೆ ಮಾಡುತ್ತಿದ್ದೆವು. ಆದರೆ ಮುಸಲ್ಮಾನರು ನಮ್ಮ ದೀರ್ಘಕಾಲದ ಮೈತ್ರಿಯನ್ನು ಮರೆತು, ಅನಿಷ್ಟ ವ್ಯಕ್ತಿಗಳ ಜಾಲಕ್ಕೆ ಬಿದ್ದು ಹಿಂದೂ ಸಾಧು ಸನ್ಯಾಸಿಗಳಿಗೆ ಕಿರುಕುಳ ಕೊಡುವ ಕಾರ್ಯಕ್ರಮವನ್ನೇ ಪ್ರಾರಂಭಿಸಿದರು. ಅದರಿಂದ ಅನಿವಾರ್ಯವಾಗಿ ಪರಸ್ಪರ ವಿಶ್ವಾಸ ಉಳಿಯಲಿಲ್ಲ."

ಪೂನಾದಲ್ಲಿ ಗಣಪತಿ ಉತ್ಸವವನ್ನು ಏರ್ಪಾಡು ಮಾಡುವುದರಲ್ಲಿ ತಿಲಕರು ಪ್ರಮುಖ ಪಾತ್ರವನ್ನು ವಹಿಸಿದ್ದೇ ಅಲ್ಲದೆ, ಸಾರ್ವಜನಿಕ ಭಾಷಣಗಳು ಮತ್ತು 'ಕೇಸರಿ'ಯಲ್ಲಿ ಲೇಖನಗಳ ಮೂಲಕ ಅದನ್ನು ಮಹಾರಾಷ್ಟ್ರದಾದ್ಯಂತ ಜನಪ್ರಿಯಗೊಳಿಸಲು ತಮ್ಮಿಂದ ಸಾಧ್ಯವಿದ್ದಷ್ಟೂ ಶ್ರಮಿಸಿದರು. ಅವರು ಪ್ರಾಚೀನ ಗ್ರೀಸ್‌ನ ಒಲಿಂಪಿಕ್ ಉತ್ಸವ ಹಾಗೂ ಇತರ ದೇಶಗಳ ಅಂತಹುದೇ ಉತ್ಸವಗಳನ್ನು ಪ್ರಸ್ತಾಪಿಸಿ, ಗಣಪತಿ ಉತ್ಸವದಲ್ಲಿ ತುಂಬುಹೃದಯದಿಂದ ಭಾಗವಹಿಸುವಂತೆ ಜನರನ್ನು ಹುರಿದುಂಬಿಸಿದರು. ಪ್ರಾರಂಭದಿಂದಲೂ, ಗಣಪತಿ ಉತ್ಸವವನ್ನು ಜಾತಿಭೇದ ಮಾಡದೆ ನಡೆಸಲಾಯಿತು.

ಉತ್ಸವದ ಬಗ್ಗೆ ತಿಲಕರು ಹೀಗೆ ಹೇಳಿದರು: "ಧಾರ್ಮಿಕ ವಿಚಾರಗಳು ಮತ್ತು ಭಕ್ತಿ ಏಕಾಂತದಲ್ಲೂ ಸಾಧ್ಯವಿರಬಹುದಾದರೂ, ಪ್ರದರ್ಶನ ಮತ್ತು ಸಂಭ್ರಮ ಜನಜಾಗೃತಿಗೆ ಅತ್ಯಗತ್ಯ. ಈ ರಾಷ್ಟ್ರೀಯ ಮನಃಪ್ರವೃತ್ತಿಯ ಮೂಲಕ ಗಣಪತಿಯ ಪೂಜೆ ಕುಟುಂಬದ ಪೂಜಾಸ್ಥಾನದಿಂದ ಬೀದಿ ಚೌಕಕ್ಕೆ ಬಂದಿತು. ಈ ಪರಿವರ್ತನೆ ಗಮನಾರ್ಹ, ಏಕೆಂದರೆ (ಕೆಲವು ಅಪವಾದಗಳಿದ್ದರೂ) ಹಿಂದೂ ಧಾರ್ಮಿಕ ಪೂಜೆ ಬಹುತೇಕ ವೈಯಕ್ತಿಕ ಅಥವಾ ಕೌಟುಂಬಿಕ ಪೂಜೆಗೆ ಸೀಮಿತವಾದದ್ದು. ಕ್ರೈಸ್ತ ಧರ್ಮ ಅಥವಾ ಇಸ್ಲಾಂನಲ್ಲಿಯಂತೆ ಸಾಮೂಹಿಕ ಪೂಜೆ ಅಪರೂಪ. ಆದರೆ ಈ ಪ್ರಕರಣದಲ್ಲಿ ರಾಷ್ಟ್ರೀಯ ಭಾವನೆ ಅಗತ್ಯವಾದ ಸಾಮಾಜಿಕ ಗಾರೆಯನ್ನು ಒದಗಿಸಿತು."

ಉತ್ಸವ ಸಾಮಾಜಿಕ ಸಂಘಟನೆಗೆ ಪ್ರಾಧಾನ್ಯತೆ ನೀಡಿದ್ದರೂ ಅದರಿಂದ ರಾಜಕೀಯ ಜಾಗೃತಿ ಉಂಟಾಗಲೂ ಸಹಾಯವಾಯಿತು. ಈ ಕ್ಷೇತ್ರದಲ್ಲಿ ಅದರ ಉಪಯುಕ್ತತೆಯನ್ನು ಬಚ್ಚಿಡಲು ತಿಲಕರು ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. "ಕ್ರೈಸ್ತ ಧಾರ್ಮಿಕ ಗುರುಗಳು ತಮ್ಮ ಗದ್ದುಗೆಗಳಿಂದ ವಿವಾದಾಸ್ಪದ ರಾಜಕೀಯ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬಹುದು ಎಂಬುದು ನಮಗೆ ತಿಳಿದಿದ್ದರೂ, ಉತ್ಸವದ ಮೇಳ ಮೆರವಣಿಗೆಗಳಲ್ಲಿ ಜನರು ತಮ್ಮ ಸುತ್ತಮುತ್ತ ಕಾಣುವ ರಾಜಕೀಯ ಪರಿಸ್ಥಿತಿಗಳ

ಬಗ್ಗೆ ಒಂದೆರಡು ಮಾತಾಡಲು ಏಕೆ ಅಡ್ಡಿ ಉಂಟುಮಾಡಬೇಕು ಎಂದು ನಮಗೆ ತೋಚು ತ್ತಿಲ್ಲ. ಆದ್ದರಿಂದ, ಕಟ್ಟುನಿಟ್ಟಾಗಿ ಧಾರ್ಮಿಕವಲ್ಲದ ವಿಷಯಗಳನ್ನು ಹೇಳುವ ಹಾಡು ಗಳು ಆಗಾಗ ನಮ್ಮ ಕಿವಿಗೆ ಬಿದ್ದಲ್ಲಿ ತತ್ತ್ವಶಃ ಆದರಲ್ಲಿ ತಪ್ಪೇನಿಲ್ಲ ಎಂದು ತಿಳಿಯ ಬಹುದು. ಮೂಲತಃ ಧಾರ್ಮಿಕ ಉತ್ಸವವಾದ ಇದನ್ನು ರಾಜಕೀಯ ಶಿಕ್ಷಣ ನೀಡಲು ಹಾಕಿರುವ ಸೋಗು ಎಂದು ಅರ್ಭಟಿಸುವುದು ದುರುದ್ದೇಶಪೂರಿತವಾಗಿದೆ."

ಉತ್ಸವಗಳು ಸರ್ಕಾರ-ವಿರೋಧಿ ಪ್ರಚಾರಗಳ ಸ್ಪಷ್ಟ ಸಾಧನಗಳೆಂದು ತಿಲಕರ ಟೀಕಾಕಾರರು ಖಂಡಿಸಿದರು. 'ಇಂಡಿಯನ್ ಅನ್‌ರೆಸ್ಟ್'ನಲ್ಲಿ ಸರ್ ವ್ಯಾಲೆಂಟೈನ್ ಶಿರೋಲ್ ಹೀಗೆ ಗಮನಿಸಿದ:

"ನಾಟಕಗಳು ಮತ್ತು ಧಾರ್ಮಿಕ ಹಾಡುಗಳಿಗೆ ಈ ಉತ್ಸವಗಳು ಸಂದರ್ಭ ಒದಗಿಸಿದವು. ವಿದೇಶೀಯರ ಮೇಲೆ ದ್ವೇಷ ಉಂಟುಮಾಡಲು ಇವುಗಳಲ್ಲಿ ಹಿಂದೂ ಪುರಾಣದ ಕತೆಗಳನ್ನು ಚಾತುರ್ಯದಿಂದ ಅಳವಡಿಸಲಾಗಿದೆ. ವಿದೇಶೀಯನಿಗೆ ಉಪಯೋ ಗಿಸುವ ಮ್ಲೇಚ್ಛ ಎಂಬ ಪದವನ್ನು ಯುರೋಪಿಯನ್ನರಿಗೆ ಹಾಗೂ ಮುಸಲ್ಮಾನರಿಗೆ ಸಮಾನವಾಗಿ ಅನ್ವಯಿಸಲಾಗಿದೆ. ಮುಸಲ್ಮಾನರು ಮತ್ತು ಪೋಲೀಸರ ಜೊತೆ ಜಗಳ ಗಳನ್ನು ಪ್ರಚೋದಿಸುವುದಕ್ಕೆಂದೇ ಉತ್ಸವಗಳು ಸದ್ದುಗದ್ದಲದ ಮೆರವಣಿಗೆಗಳಿಗೂ ಅವಕಾಶ ಒದಗಿಸಿದ್ದು. ಈ ಜಗಳಗಳಿಂದ ನ್ಯಾಯಾಲಯದ ಪ್ರಕರಣಗಳಿಗೆ ದಾರಿಯಾ ದವು. ಇವು ಪುನಃ ಆರ್ಭಟದ ಪ್ರತಿಭಟನೆಗಳು ಮತ್ತು ಪ್ರಚೋದಕ ಕೋರಿಕೆಗಳಿಗೆ ಹೊಸ ನೆಪಗಳನ್ನು ಒದಗಿಸಿದವು. ಗಣಪತಿ ಉತ್ಸವಗಳೊಂದಿಗೆ ತಿಲಕರ ಪ್ರಚಾರದ ಕ್ಷೇತ್ರ ವ್ಯಾಪಕವಾಗಿ ಅಧಿಕವಾಯಿತು."

ಶಿವಾಜಿ ಹಬ್ಬವನ್ನು ೧೮೭೭ರಲ್ಲಿ ಉದ್ಘಾಟಿಸಲಾಯಿತು. ಗಣಪತಿ ಪುರಾಣದ ವ್ಯಕ್ತಿಯಾಗಿದ್ದರೆ, ಮರಾಠ ಸಾಮ್ರಾಜ್ಯದ ಸಂಸ್ಥಾಪಕ ಶಿವಾಜಿ ಐತಿಹಾಸಿಕ ವ್ಯಕ್ತಿಯಾ ಗಿದ್ದ. ಎರಡು ವಿಶ್ವ ಯುದ್ಧಗಳಿಗೆ ಮಹಾರಾಷ್ಟ್ರದಲ್ಲಿ ತರುಣರನ್ನು ಸೈನ್ಯಕ್ಕೆ ಸೇರಿಸಿ ಕೊಳ್ಳುವಾಗ ಬ್ರಿಟಿಷ್ ಆಡಳಿತಗಾರರೂ ಸಹ ಶಿವಾಜಿಯ ಹೆಸರನ್ನು ಬಳಸಿಕೊಂಡಿದ್ದು ಮಹಾರಾಷ್ಟ್ರದ ಜನರಲ್ಲಿ ಶಿವಾಜಿಯ ಬಗ್ಗೆ ಎಂತಹ ಉತ್ಕಟ ಭಾವನೆ ಇದೆ ಎಂಬು ದನ್ನು ಎತ್ತಿ ತೋರಿಸುತ್ತದೆ. ಶಿವಾಜಿಯ ಪಟ್ಟಾಭಿಷೇಕ ನಡೆದಿದ್ದ ಮತ್ತು ಆತ ತನ್ನ ಕೊನೆಯುಸಿರನ್ನೆಳೆದಿದ್ದ ರಾಯಗಡದಲ್ಲಿ ಮೊದಲನೆಯ ಶಿವಾಜಿ ಉತ್ಸವವನ್ನು ನಡೆಸ ಬೇಕೆಂಬ ತಿಲಕರ ಸಲಹೆಗೆ ಜನಸಾಮಾನ್ಯರಿಂದಲೇ ಅಲ್ಲದೆ ಸರ್ದಾರರು ಮತ್ತು ರಾಜ ಮಹಾರಾಜರಿಂದಲೂ ಉತ್ಸಾಹಪೂರ್ಣ ಪ್ರತಿಕ್ರಿಯೆ ದೊರೆಯಿತು. ಪೂನಾದಲ್ಲಿ ಈ ಬಗ್ಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಅನೇಕ ಸರ್ದಾರರು ಮತ್ತು ರಾಜ ಮಹಾರಾಜರು ಹಾಜರಿದ್ದರು. ಕೊಲ್ಹಾಪುರದ ಮಹಾರಾಜರಂತಹ ಒಬ್ಬ ಅರಸರು ಕೊಡುವ ದೇಣಿಗೆ ಯಿಂದ ಶಿವಾಜಿಗೆ ಸ್ಮಾರಕವೊಂದನ್ನು ನಿರ್ಮಿಸಲು ಸಾಧ್ಯವಿದ್ದರೂ, ಆ ಉದ್ದೇಶಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಸಾಮಾನ್ಯ ಜನರು ಮುಂದೆ ಬಂದರೆ ಹೆಚ್ಚು ಸೂಕ್ತವಾಗಿರುತ್ತ ದೆಂದು ತಿಲಕರು ಸಭೆಯಲ್ಲಿ ಹೇಳಿದರು. ಮುಂಬೈನ ಗವರ್ನರನೂ ಸಹ ಮೊದಲಿಗೆ ಈ ಸಲಹೆಯ ಬಗ್ಗೆ ಅನುಕೂಲಾಭಿಪ್ರಾಯವನ್ನೇ ಹೊಂದಿದ್ದ.

ಶಿವಾಜಿಯ ವಂಶಜರು ರಾಯಗಡದಲ್ಲಿ ಶಿವಾಜಿಯ ಛತ್ರಿ (ಸಮಾಧಿ) ಮತ್ತು

ಇತರ ಸ್ಮಾರಕಗಳನ್ನು ಹಾಗೂ ಇತರಡೆಗಳಲ್ಲಿನ ತಮ್ಮ ವಂಶದ ಮೂಲ ಸ್ಥಾಪಕನ ಸ್ಮಾರಕಗಳನ್ನು ರಕ್ಷಿಸುವ ಕೆಲಸ ಮಾಡಿದ್ದದ್ದು ಅಷ್ಟಕಷ್ಟೆ. ಪಾರ್ಸಿ ವಿದ್ವಾಂಸರಾದ ಆರ್. ಪಿ. ಕಾರ್ಕೇರಿಯ ಶಿವಾಜಿ ಮತ್ತು ಅವನ ಕೋಟೆಗಳ ಬಗ್ಗೆ ಮುಂಬೈನ ಏಶ್ಯಾಟಿಕ್ ಸೊಸೈಟಿಯಲ್ಲಿ ಓದಿದ ಲೇಖನ ಈ ಬಗ್ಗೆ ತಿಲಕರ ಗಮನ ಸೆಳೆಯಿತು. ಸ್ಮಾರಕಗಳನ್ನು ರಿಪೇರಿ ಮಾಡುವುದಷ್ಟೆ ಅವರ ತಕ್ಷಣದ ಆಸಕ್ತಿಯಾಗಿತ್ತೆಂದು ತೋರುತ್ತದೆ. ಇಂತಹ ಶ್ರೇಷ್ಠ ಮತ್ತು ಜನಪ್ರಿಯ ವೀರನ ಸುತ್ತಲೂ ರಾಜಕೀಯ ಉತ್ಸವವನ್ನು ಪ್ರಾರಂಭಿಸುವ ಸಾಧ್ಯತೆಗಳು ಅವರಿಗೆ ಬೇಗ ಹೊಳೆಯಿತು. ತಿಲಕರು 'ಮರಾಠ'ದಲ್ಲಿ ಹೀಗೆ ಬರೆದರು:

"ವೀರ ಪುರುಷರ ಆರಾಧನೆ ಮಾನವ ಸ್ವಭಾವದಲ್ಲಿ ಆಳವಾಗಿ ಬೇರೂರಿದೆ. ನಮ್ಮ ರಾಜಕೀಯ ಆಶೋತ್ತರಗಳಿಗೆ ಭಾರತದ ವೀರನೊಬ್ಬನ ಆರಾಧನೆಯಿಂದ ನಮ್ಮಲ್ಲಿ ಉದಿಸಬಹುದಾದ ವಿಲ್ಲ ಬಲದ ಅಗತ್ಯವಿದೆ. ಈ ಉದ್ದೇಶಕ್ಕೆ ಶಿವಾಜಿಗಿಂತಲೂ ಉತ್ತಮ ವ್ಯಕ್ತಿ ಇರಲು ಸಾಧ್ಯವಿಲ್ಲ. ಅಕ್ಬರನ ಅಥವಾ ಭಾರತೀಯ ಇತಿಹಾಸದ ಬೇರೆ ಯಾರೇ ವ್ಯಕ್ತಿಯ ಗೌರವಾರ್ಥವಾಗಲಿ ಉತ್ಸವವನ್ನು ಪ್ರಾರಂಭಿಸುವುದಕ್ಕೆ ನಮ್ಮ ವಿರೋಧವಿಲ್ಲ. ಅಂತಹ ಉತ್ಸವಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ. ಆದರೆ ಶಿವಾಜಿಯ ಉತ್ಸವ ಇಡೀ ದೇಶಕ್ಕೆ ತನ್ನದೇ ಆದ ಒಂದು ವಿಚಿತ್ರ ಮೌಲ್ಯವನ್ನು ಹೊಂದಿದೆ. ಉತ್ಸವದ ಈ ಲಕ್ಷಣ ಅಲಕ್ಷ್ಯಕ್ಕೆ ಗುರಿಯಾಗದಂತೆ, ತಪ್ಪಾಗಿ ನಿರೂಪಣೆಯಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಪ್ರತಿಯೊಬ್ಬ ವೀರನೂ, ಅವನು ಭಾರತೀಯನಾಗಿರಲಿ, ಐರೋಪ್ಯನಾಗಿರಲಿ, ಅವನ ಕಾಲಧರ್ಮಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾನೆ. ಈ ತತ್ತ್ವವನ್ನು ಒಪ್ಪಿಕೊಂಡರೆ ಶಿವಾಜಿಯ ಜೀವನದಲ್ಲಿ ಆಕ್ಷೇಪಾರ್ಹವಾದದ್ದೇನನ್ನೂ ನಾವು ಕಾಣಲು ಸಾಧ್ಯವಿಲ್ಲ. ಅವನ ಕಾರ್ಯಗಳಿಗಿಂತಲೂ ಹೆಚ್ಚಾಗಿ, ಯಾವ ಚೇತನ ಅವನನ್ನು ಜೀವನಾದ್ಯಂತ ಪ್ರೇರೇಪಿಸಿತೋ ಆ ಚೇತನ ಅವನನ್ನು ರಾಷ್ಟ್ರೀಯ ವೀರನನ್ನಾಗಿ ಮಾಡಿದೆ."

ಶಿವಾಜಿಯ ಉತ್ಸವ ಹಿಂದೂಗಳನ್ನು ಮುಸಲ್ಮಾನರ ವಿರುದ್ಧ ಎತ್ತಿಕಟ್ಟುವ ಉದ್ದೇಶ ಹೊಂದಿದೆ ಎಂಬ ಆಂಗ್ಲೋ-ಇಂಡಿಯನ್ ಟೀಕಾಕಾರರ ಆಪಾದನೆಯನ್ನು ನಿರಾಕರಿಸಲು ತಿಲಕರು ವಿಶೇಷವಾಗಿ ಕಾತುರಗೊಂಡಿದ್ದರು. ಮುಸಲ್ಮಾನರ ಧಾರ್ಮಿಕ ಭಾವನೆಗಳನ್ನು ಶಿವಾಜಿ ಕಟ್ಟುನಿಟ್ಟಾಗಿ ಗೌರವಿಸಿದ್ದನ್ನು ತಿಲಕರು ಸೂಚಿಸಿದರು. ಮುಸಲ್ಮಾನರಲ್ಲಿ ಅನೇಕರು ಮೊಗಲರ ವಿರುದ್ಧ ಶಿವಾಜಿಯ ಪಕ್ಷ ಸೇರಿದ್ದರು. ಪರಸ್ಪರರ ಸಂಬಂಧಗಳನ್ನು ಕಹಿ ಮಾಡಿಕೊಳ್ಳದೆ ನೆಲ್ಸನ್‌ನನ್ನು ಗೌರವಿಸುವ ಬ್ರಿಟನ್ ಮತ್ತು ನೆಪೋಲಿಯನ್‌ನನ್ನು ಆರಾಧಿಸುವ ಫ್ರಾನ್ಸ್‌ನ ಹೋಲಿಕೆಯನ್ನು ತಿಲಕರು ನೀಡಿದರು. ಅವರು ಮುಸಲ್ಮಾನರಿಗೆ ಹೀಗೆ ಭರವಸೆ ನೀಡಿದರು:

"ನಿಮ್ಮನ್ನು ದೂರ ಮಾಡಲಾಗಲಿ, ರೇಗಿಸುವುದಕ್ಕಾಗಲಿ ಶಿವಾಜಿ ಉತ್ಸವವನ್ನು ಆಚರಿಸುತ್ತಿಲ್ಲ. ಕಾಲ ಬದಲಾಗಿದೆ ಹಾಗೂ ಜನತೆಯ ರಾಜಕೀಯ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಮುಸಲ್ಮಾನರು ಮತ್ತು ಹಿಂದೂಗಳು ಒಂದೇ ದೋಣಿಯಲ್ಲಿದ್ದಾರೆ.

ಈ ಪರಿಸ್ಥಿತಿಯಲ್ಲಿ ಶಿವಾಜಿಯ ಜೀವನದಿಂದ ನಾವು ಒಟ್ಟಿಗೆ ಸ್ಫೂರ್ತಿ ಪಡೆಯಲಾಗದೇ?"

ತಿಳಿವಳಿಕೆ ಹೊಂದಿದ ಕೆಲವು ಮುಸಲ್ಮಾನರು ಈ ಮನವಿಗೆ ಅನುಕೂಲವಾದ ಪ್ರತಿಕ್ರಿಯೆ ತೋರಿದರೂ, ಹೆಚ್ಚಿನ ಸಂಖ್ಯೆಯ ಮುಸಲ್ಮಾನರು ಗಣಪತಿ ಮತ್ತು ಶಿವಾಜಿ ಉತ್ಸವಗಳ ಬಗ್ಗೆ ಆಳವಾದ ಸಂಶಯ ಹೊಂದಿದ್ದರು ಹಾಗೂ ಅವುಗಳಿಗೆ ವಿರುದ್ಧವಾಗಿದ್ದರು. ತಿಲಕರು ಬ್ರಿಟಿಷರ ವಿರುದ್ಧ ಇರುವಷ್ಟೇ ಮುಸಲ್ಮಾನರ ವಿರುದ್ಧವೂ ಇದ್ದಾರೆಂದೂ ಅವರನ್ನು ತಪ್ಪಾಗಿ ತೋರಿಸುವ ಅವಕಾಶವನ್ನು ಸ್ವಲ್ಪವೂ ಕಳೆದುಕೊಳ್ಳದ ಆಂಗ್ಲೊ-ಇಂಡಿಯನ್ ನಿಯತಕಾಲಿಕೆಗಳು ಮುಸಲ್ಮಾನರ ಭೀತಿಗಳನ್ನು ಪ್ರಯತ್ನಪೂರ್ವಕವಾಗಿ ಬೆಳೆಸಿದವು. ಸರ್ಕಾರ ಬಹಿರಂಗವಾಗಿಯೇ ಮುಸಲ್ಮಾನರ ಪರವಾಗಿ ಇದೆಯೆಂದೂ, ಆತ್ಮಗೌರವ ಮತ್ತು ಸ್ವರಕ್ಷಣೆಯ ದೃಷ್ಟಿಯಿಂದ ಮಾತ್ರವೇ ಹಿಂದೂಗಳು ನಿರ್ವಾಹವಿಲ್ಲದೆ ಸಂಘಟಿತರಾಗಬೇಕಾಯಿತೆಂಬುದನ್ನು ತಿಲಕರ ಹಿಂದೂ ಟೀಕಾಕಾರರು ಒಪ್ಪಿಕೊಂಡರೂ, ತಿಲಕರ ವಿರುದ್ಧದ ಕೂಗಿಗೆ ಅವರೂ ಧ್ವನಿಗೂಡಿಸಿದರು. ಶಾಸಕಾಂಗ ಮಂಡಳಿಗಳಲ್ಲಿ ಅವರಿಗೆ ದೊರೆಯಬೇಕಾದ ಪಾಲಿಗಿಂತಲೂ ಹೆಚ್ಚಿನ ಸ್ಥಾನಗಳನ್ನು ಮುಸಲ್ಮಾನರಿಗೆ ಉದಾರವಾಗಿ ಕೊಟ್ಟ ಲಕ್ನೊ ಒಪ್ಪಂದವನ್ನು ಪೂರ್ಣಗೊಳಿಸಲು ತಿಲಕರು ಐತಿಹಾಸಿಕ ಪಾತ್ರವನ್ನು ವಹಿಸಿದ್ದರೂ, ಅವರು ಮುಸಲ್ಮಾನ ವಿರೋಧಿಯಾಗಿದ್ದರು ಎಂಬ ಭಾವನೆ ಇನ್ನೂ ಇದ್ದೇ ಇದೆ.

ಆದ್ದರಿಂದ ಹಿಂದೂ-ಮುಸಲ್ಮಾನ ತಂಟಾದ್ವಟದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ತಿಲಕರು 1893ರಲ್ಲಿ, 'ಕೇಸರಿ'ಯಲ್ಲಿ ಬರೆದ ಲೇಖನಗಳನ್ನು ಪರಿಶೀಲಿಸುವುದು ಉಚಿತವಾಗುತ್ತದೆ. "ಸರ್ಕಾರ ಹಿಂದೂಗಳಿಗೆ ಪಕ್ಷಪಾತ ತೋರಿಸಿದರೆ, ಮುಸಲ್ಮಾನರು ಸಿಟ್ಟಿಗೇಳುತ್ತಾರೆ ಹಾಗೂ ಮುಸಲ್ಮಾನರಿಗೆ ಪಕ್ಷಪಾತ ತೋರಿಸಿದರೆ ಹಿಂದೂಗಳು ಸಿಟ್ಟಿಗೇಳುತ್ತಾರೆ ಮತ್ತು ಸಿಟ್ಟಿಗೆದ್ದವರು ಗಲಭೆಗಳನ್ನುಂಟುಮಾಡುವ ಪ್ರವೃತ್ತಿ ಹೊಂದುತ್ತಾರೆ" ಎಂದು ಅವರು ಖಂಡತುಂಡವಾಗಿ ಬರೆದರು. ಮುಸಲ್ಮಾನರ ವರ್ತನೆಯನ್ನು ಚರ್ಚಿಸುತ್ತಾ ಅವರು ಹೀಗೆ ಬರೆದರು: "ಮುಸಲ್ಮಾನರು ತಳೆದಿರುವ ನಿಲುವು ಸಮಂಜಸವಾಗಿಲ್ಲ. ಪ್ರತಿಯೊಂದು ಮಸೀದಿಯ ಮುಂದುಗಡೆಯೂ ಹಿಂದೂಗಳು ಎಲ್ಲಾ ರೀತಿಯ ಸಂಗೀತವನ್ನು ದಿನದ ಎಲ್ಲಾ ಸಮಯದಲ್ಲೂ ನಿಲ್ಲಿಸಬೇಕೆಂದು ಹೇಳುವುದು ಒಂದು ಅಸಾಧಾರಣ ಬೇಡಿಕೆಯಾಗಿದೆ. ಹಾಗೂ ವಿವೇಚನೆ ಇರುವ ಯಾವ ವ್ಯಕ್ತಿಯೂ ಅದಕ್ಕೆ ತನ್ನ ಒಪ್ಪಿಗೆ ಕೊಡಲಾರ. ಮಸೀದಿಯ ಮುಂದುಗಡೆ ಸಂಗೀತವನ್ನು ನಿಲ್ಲಿಸುವ ಹಕ್ಕು ಬಹುತೇಕವಾಗಿ ಸ್ಥಳೀಯ ಸಾಂಪ್ರದಾಯಗಳಲ್ಲಿ ತನ್ನ ಮೂಲವನ್ನು ಹೊಂದಿದೆ. ಆದ್ದರಿಂದ ಸೌಮ್ಯವಾದ ಸಂಗೀತವನ್ನೂ ನಿಲ್ಲಿಸಬೇಕೆಂಬ ಮಿತಿಮೀರಿದ ಬೇಡಿಕೆಯನ್ನು ಬಿಟ್ಟುಕೊಡಬೇಕೆಂದು ನಾವು ನಮ್ಮ ಮುಸಲ್ಮಾನ ಸೋದರರಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಮಸೀದಿಗಳಲ್ಲಿ ಪ್ರಾರ್ಥನೆ ನಿಲ್ಲಿಸುವಾಗ ಸಂಗೀತ ಕೇಳಿಸುವುದನ್ನು ಮುಸಲ್ಮಾನರು ಸಹಿಸದಿದ್ದಲ್ಲಿ, ರೈಲುಗಳು, ಹಡಗುಗಳು ಮತ್ತು ಅಂಗಡಿಗಳಲ್ಲಿ ಅವರು ಹೇಗೆ ಪ್ರಾರ್ಥನೆ ಮಾಡುತ್ತಾರೆ?.

ಇಷ್ಟೇ ಅಲ್ಲದೆ ಮುಸಲ್ಮಾನ ಸೂರ್ಯೋದಯ, ಮಧ್ಯಾಹ್ನ ಮತ್ತು ಸೂರ್ಯಾಸ್ತ

ಸಮಯದಲ್ಲಿ. ಅವನು ಎಲ್ಲೇ ಇದ್ದರೂ. ಪ್ರಾರ್ಥನೆ ಮಾಡಬೇಕೆಂದು ಅವರ ಧರ್ಮಗ್ರಂಥಗಳು ಗೊತ್ತುಪಡಿಸಿವೆ. ಆದ್ದರಿಂದ ಸಂಗೀತ ಪ್ರಾರ್ಥನೆಗೆ ಅಡ್ಡಿಯುಂಟುಮಾಡುತ್ತದೆ ಎಂದು ಹೇಳುವುದೂ. ಮಸೀದಿಗಳ ಮುಂದೆ ಸಂಗೀತ ನಡೆಯುವುದು ಅಧಾರ್ಮಿಕವೆಂದಾಗಲೀ. ದೈವನಿಂದನೆ ಎಂದಾಗಲೀ ಹೇಳುವುದೂ ತಪ್ಪಾಗುತ್ತದೆ. ಕೆಲವು ಸ್ವಾರ್ಥಿ ಮತ್ತು ದುಷ್ಟ ಕಾರ್ಯಭಾರಿಗಳು ಈ ತಪ್ಪು ವಿಚಾರಗಳನ್ನು ಅವರಲ್ಲಿ ಮೂಡಿಸಿರಬೇಕು. ಮುಸಲ್ಮಾನರು ವಿವೇಕವಾದ ನಿಲುವನ್ನು ತಳೆದರೆ ಮಸೀದಿಗಳ ಮುಂದೆ ಸಂಗೀತ ನಡೆಯುವ ಈ ಪ್ರಶ್ನೆಯನ್ನು ಸುಲಭವಾಗಿ ಬಗೆಹರಿಸಬಹುದು. ಸರ್ಕಾರದ ಪಕ್ಷಪಾತ ದೋರಣೆ ಅಥವಾ ವಿಶೇಷ ಸಂಗ್ರಹದ ಬಗ್ಗೆ ವ್ಯಾಕುಲರಾಗುವುದರಿಂದ ಪ್ರಯೋಜನವಿಲ್ಲ. ನಿಜವಾದ ಪರೀಕ್ಷಾ ಕಾಲ ಬಂದಾಗ. ಹಿಂದೂಗಳು. ಮುಸಲ್ಮಾನರಿಬ್ಬರನ್ನೂ ಸಮಾನವಾಗಿ ನಿಕೃಷ್ಟತೆಯಿಂದ ಕಾಣಲಾಗುತ್ತದೆ ಹಾಗೂ ಎಡೆಬಿಡದೆ ಅವರನ್ನು ತುಳಿಯಲಾಗುತ್ತದೆ."

ಎರಡೂ ಕೋಮುಗಳ ನಡುವೆ ತಕ್ಕಡಿಯನ್ನು ಸರಿಯಾಗಿ ಹಿಡಿಯಬೇಕೆಂದೂ ಅವುಗಳ ನಡುವಣ ಭಿನ್ನಾಭಿಪ್ರಾಯಗಳನ್ನೂ ನಿಷ್ಪಕ್ಷಪಾತವಾಗಿ ಬಗೆಹರಿಸಬೇಕೆಂದೂ ತಿಲಕರು ಸರ್ಕಾರಕ್ಕೆ ಮನವಿ ಮಾಡಿದರು:

"ಒಬ್ಬ ಧರ್ಮಾಂಧ ಹಿಂದೂ ಮುಸಲ್ಮಾನ ಮೊಹಲ್ಲಾ ಪ್ರವೇಶಿಸಿ ಮಾಂಸ ವ್ಯಾಪಾರಿಯ ಅಂಗಡಿಯಿಂದ ಹಸುವನ್ನು ರಕ್ಷಿಸಲು ಪ್ರಯತ್ನಿಸಿದರೆ ಅವನ ಮಿತಿ ಮೀರಿದ ಧರ್ಮಾಭಿಮಾನವನ್ನು ಶಿಕ್ಷಾರ್ಹನನ್ನಾಗಿ ಪರಿಗಣಿಸಬೇಕು. ಹಾಗೆಯೇ. ಗಣೇಶ ಚತುರ್ಥಿಯಂದು ಹಿಂದೂ ಭಕ್ತರ ಮೆರವಣಿಗೆಯೊಂದು ವಾದ್ಯಗಳನ್ನು ನುಡಿಸುತ್ತಾ ಮಸೀದಿಯ ಮುಂದೆ ಹಾದು ಹೋದಾಗ ತನ್ನ ಪ್ರಾರ್ಥನೆಗೆ ಭಂಗ ಬಂದಿತೆಂದು ಮುಸಲ್ಮಾನನೊಬ್ಬ ಹೇಳಿದರೆ ಅದು ತಪ್ಪೆಂದು ಅವನಿಗೆ ಮನವರಿಕೆ ಮಾಡಿಕೊಡಬೇಕು. ಹಿಂದೂಗಳು ಮತ್ತು ಮುಸಲ್ಮಾನರು ಸೌಹಾರ್ದತೆಯಿಂದ ಇರಬೇಕೆಂದು ಲಾರ್ಡ್ ಹ್ಯಾರಿಸ್ (ಬಾಂಬೆಯ ಗವರ್ನರ್) ಉಪದೇಶ ಮಾಡುವಾಗ. ಬ್ರಿಟಿಷ್ ರಾಣಿಯು ಪ್ರಜೆಗಳ ನಡುವೆ ತಕ್ಕಡಿಯನ್ನು ಸರಿಯಾಗಿ ಹಿಡಿಯಬೇಕೆಂದೂ ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿ ಕಟ್ಟಬಾರದೆಂದೂ ತಮ್ಮ ಅಧಿಕಾರಿಗಳಿಗೆ ಸೂಚಿಸಬೇಕು".

ಈ ಉಪಯುಕ್ತ ಸಲಹೆಯನ್ನು ಸರ್ಕಾರ ಅನುಸರಿಸದಿದ್ದಲ್ಲಿ. ಮುಂದಿನ 54 ವರ್ಷಗಳು ಬಾಧಿಸದ ಭ್ರಾತೃಘಾತಕ ಕಲಹ ಭಾರತಕ್ಕೆ ತಪ್ಪುತ್ತಿತ್ತು. ಈ ಕಲಹ ದೇಶದ ವಿಭಜನೆಯಲ್ಲಿ ಅದರ ಭಯಾನಕ ಪರಿಣಾಮಗಳೊಂದಿಗೆ ಕೊನೆಗೊಂಡಿತು. ಆದರೆ. ಮುಂದಿನ ದಶಕಗಳಲ್ಲಿ ವಿನಾಶಕಾರಿಯಾದ ಯೂಪಸ್ ಮರದಂತೆ ಬೆಳೆದ "ಒಡೆದು ಆಳುವ" ಧೋರಣೆಯ ಬೀಜಗಳನ್ನು ಆಗಾಗಲೇ ಬಿತ್ತಲಾಗಿತ್ತು. ಈ ಬಗ್ಗೆ ತಿಲಕರು ತೀವ್ರವಾಗಿ ಎಚ್ಚರದಿಂದಿದ್ದರೆಂಬ ಅಂಶ. ಅವರ ಭಾಷಣಗಳಲ್ಲಿ ಮತ್ತು ಲೇಖನಗಳಲ್ಲಿ "ಮೂರನೆಯ ಪಕ್ಷದ" ಬಗ್ಗೆ ಹೇರಳವಾಗಿ ಪ್ರಸ್ತಾಪಿಸಲಾಗಿರುವುದರಿಂದಲೂ. ಮುಸಲ್ಮಾನರೊಡನೆ ರಾಜಕೀಯವಾಗಿ ನಡೆದುಕೊಳ್ಳಬೇಕಾದಾಗ ಅವರು ಅನುಸರಿಸುತ್ತಿದ್ದ ನ್ಯಾಯ ಮತ್ತು ಉದಾರ ನಿಲುವಿನಿಂದಲೂ ಸ್ಪಷ್ಟವಾಗುತ್ತದೆ. ಕೋಮುವಾರು ಏಕ

ಯದ ಬಗ್ಗೆ ತಿಲಕರ ಒಳದೃಷ್ಟಿಯನ್ನು ತೋರಿಸುವ ಸಂಗತಿಯೊಂದನ್ನು ಸಿ. ಆರ್. ದಾಸ್ ಅವರು ಬರೆದಿದ್ದಾರೆ:

"1906ರಲ್ಲಿ ಕಲ್ಕತ್ತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಲೋಕಮಾನ್ಯರು ಹಾಗೂ ಮಹಾರಾಷ್ಟ್ರದ ಇತರ ಗೆಳೆಯರು ನನ್ನ ಅತಿಥಿಗಳಾಗಿದ್ದರು. ಆ ಸಮಯದಲ್ಲಿ ಲಕ್ನೋದಿಂದ ಒಬ್ಬ ಮಹನೀಯರು ಅವರನ್ನು ಕಾಣಲು ಬಂದರು. ಅವರು ಬಂದಾಗ ನಾನೂ ಇದ್ದೆ. ಈ ಮಹನೀಯರು ರಾಜಕೀಯದಲ್ಲಿ ಸೌಮ್ಯವಾದಿಗಳಿದ್ದರು ಹಾಗೂ ಒಂದು ರೀತಿ ಸಿಟ್ಟಿನಿಂದ ಮಾತನಾಡಲು ಪ್ರಾರಂಭಿಸಿದರು. ಲೋಕಮಾನ್ಯರು ಕಾಂಗ್ರೆಸ್ ನಲ್ಲಿ ಒಡಕುಂಟುಮಾಡುತ್ತಿದ್ದಾರೆಂದು ಅವರು ಆಪಾದಿಸಿದರು ಹಾಗೂ ಮುಸಲ್ಮಾನರು ಏನು ಮಾಡುತ್ತಿದ್ದಾರೆಂಬುದು ನಿಮಗೆ ಗೊತ್ತೇ? ಅವರು ಹಿಂದೂಗಳ ವಿರುದ್ಧ ಒಟ್ಟಾಗುತ್ತಿದ್ದಾರೆ ಹಾಗೂ ಸಮಗ್ರ ಇಸ್ಲಾಂ ಚಳವಳಿಯೊಂದನ್ನು ಪ್ರಾರಂಭಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು. ಲೋಕಮಾನ್ಯರ ಕಣ್ಣುಗಳು ಹೊಳೆದವು. ಇದು ಖಂಡಿತವೆಂದು ನಿಮಗೆ ತಿಳಿದಿದೆಯೋ? ಎಂದು ಕೇಳಿದರು. ಅದಕ್ಕೆ ಆ ಮಹನೀಯರು, ಖಂಡಿತವೇ? ನಾನು ಇಲ್ಲಿ ನಿಮ್ಮೊಂದಿಗೆ ಮಾತನಾಡುತ್ತಿರುವಷ್ಟೇ ಖಂಡಿತ. ಅವರ ಕೆಲವು ಕಾಗದಗಳನ್ನು ನೋಡಿದ್ದೇನೆ. ನೀವು ಹಿಂದೂಗಳನ್ನು ಒಡೆಯುತ್ತೀರಿ. ನಮ್ಮನ್ನು ಧ್ವಂಸ ಮಾಡಲು ಮುಸಲ್ಮಾನರು ಒಗ್ಗಟ್ಟಾಗುತ್ತಿದ್ದಾರೆ' ಎಂದರು. ಅವರಿಗೆ ಲೋಕಮಾನ್ಯರು ಮುಗುಳುನಗೆಯಿಂದ ಹೀಗೆ ಉತ್ತರಿಸಿದಾಗ ನನಗೆ ಆಶ್ಚರ್ಯವಾಯಿತು: ಅವರ ನಗೆಯನ್ನಂತೂ ವರ್ಣಿಸುವುದು ನನಗೆ ಅಸಾಧ್ಯ; 'ಹಾಗಾದರೆ ನಮ್ಮ ಮುಕ್ತಿ ಸಮೀಪಿಸುತ್ತಿದೆಯೇ? ಮುಸಲ್ಮಾನರು ಒಗ್ಗಟ್ಟಾದ ಕೂಡಲೇ ಸರ್ಕಾರ ಅವರ ಬೆನ್ನು ಹತ್ತುತ್ತದೆ ಎಂಬುದು ನಿಮಗೆ ತಿಳಿಯುವುದಿಲ್ಲವೇ? ಸರ್ಕಾರ ಅವರ ಬೆನ್ನು ಹತ್ತಿದ ಗಳಿಗೆಯಲ್ಲೇ ಅವರು ನಮ್ಮೊಂದಿಗೆ ಒಗ್ಗೂಡುತ್ತಾರೆ.'

ಶಿವಾಜಿ ಉತ್ಸವಕ್ಕೆ ಮತ್ತೆ ಹೋಗೋಣ. ರಾಯಗಡದಲ್ಲಿ ಏಪ್ರಿಲ್ 15, 1896ರಂದು ನಡೆದ ಮೊದಲ ಉತ್ಸವ ಭಾರೀ ಯಶಸ್ವಿಯಾಯಿತು. ಈ ಉತ್ಸವವನ್ನು ಮಹಾರಾಷ್ಟ್ರದ ಇತರೆಡೆಗಳಲ್ಲೂ, ದೂರದ ಕಲ್ಕತ್ತೆಯಲ್ಲೂ ನಡೆಸಲಾಯಿತು. ಕಲ್ಕತ್ತೆಯಲ್ಲಿ ಕೆಲವು ವರ್ಷಗಳವರೆಗೆ ಬಂಗಾಲಿಗಳು ಉತ್ಸವವನ್ನು ಸಂಭ್ರಮದಿಂದ ನಡೆಸಿದರು. ಶಿವಾಜಿಯ ಜೀವನ ಮತ್ತು ಕಾಲದ ವಿಮರ್ಶಕ ಅಧ್ಯಯನಕ್ಕೆ ಉತ್ಸವ ಚಾಲನೆಯನ್ನು ಒದಗಿಸಿತು. ಮಹಾನ್ ಮರಾಠ ದೊರೆಯನ್ನು ಒಬ್ಬ ರಾಷ್ಟ್ರೀಯ ವೀರನಾಗಿ ಜನಮನದಲ್ಲಿ ಸ್ಥಾಪಿಸಿದ ಕೀರ್ತಿ ರಾನಡೆಯವರ ನಂತರ ತಿಲಕರಿಗೆ ಸಲ್ಲುತ್ತದೆ. ಆದರೆ ಈ ಉತ್ಸವ ಮುಂದಿನ ವರ್ಷದಲ್ಲೇ (1897) ತಿಲಕರನ್ನು ರಾಜದ್ರೋಹದ ಆಪಾದನೆಯ ಮೇಲೆ ವಿಚಾರಣೆಗೆ ಗುರಿಮಾಡಿತು. ಶಿವಾಜಿ ಅಫಜಲ್‌ಖಾನ್‌ನನ್ನು ಕೊಂದ ಬಗ್ಗೆ ತಿಲಕರು ಮಾಡಿದ ಭಾಷಣ ಮತ್ತು ನಂತರ 'ಕೇಸರಿ'ಯಲ್ಲಿ ಅದರ ಮುದ್ರಣ ಸಮಕಾಲೀನ ರಾಜಕೀಯ ಪರಿಸ್ಥಿತಿಗೆ ಸಂಬಂಧ ಹೊಂದಿದೆಯೆಂದೂ ಹಿಂಸೆಗೆ ಪ್ರಚೋದನೆ ಕೊಡುತ್ತದೆಯೆಂದೂ ಆಪಾದಿಸಲಾಯಿತು. ಮಹಾನ್ ರಾಷ್ಟ್ರೀಯ ವ್ಯಕ್ತಿಯೊಬ್ಬನನ್ನು ಗೌರವಿಸಿದ ತಿಲಕರು ತಾನೇ ಒಬ್ಬ ಮಹಾನ್ ರಾಷ್ಟ್ರೀಯ ವ್ಯಕ್ತಿಯಾಗುತ್ತಿದ್ದರು.

ಅಧ್ಯಾಯ 7

ಕ್ಷಾಮ ಮತ್ತು ಪ್ಲೇಗು

ಎಪ್ಪತ್ತರ ದಶಕದ ಭಯಾನಕ ಕ್ಷಾಮದ ನೆನಪುಗಳು ಇನ್ನೂ ಸಂಪೂರ್ಣವಾಗಿ ಅಳಿಸದಿರುವುದಕ್ಕ ಮೊದಲೇ 1896ರಲ್ಲಿ ಮಹಾರಾಷ್ಟ್ರದ ಜನತೆಯ ಮೇಲೆ ಮತ್ತೊಂದು ವಿಪತ್ತು ಎರಗಿತು. ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತೀಯರಿಗೆ ಕ್ಷಾಮಗಳ ಪರಿಚಯ ಬಹಳ ಚೆನ್ನಾಗಿ ಆಗಿತ್ತು. ಕೊನೆಯ ಕ್ಷಾಮ ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ವರ್ಷಕ್ಕೆ ಕೇವಲ ಐದು ವರ್ಷಗಳಿಗೆ ಮುನ್ನ ಉಂಟಾಯಿತು. ಈ ಕ್ಷಾಮ ಬಂಗಾಲದಲ್ಲಿ ಸಂಭವಿಸಿತು ಹಾಗೂ ಬಂಗಾಲ ಅನುಭವಿಸಬೇಕಾಗಿ ಬಂದ ಅತ್ಯಂತ ಭೀಕರ ಕ್ಷಾಮವಾಗಿತ್ತು. ಹತ್ತೊಂಭತ್ತನೆಯ ಶತಮಾನದ ಕೊನೆಯ ಕಾಲು ಭಾಗದಲ್ಲೇ ಹದಿನೆಂಟು ಕ್ಷಾಮಗಳು ಸಂಭವಿಸಿ 19 ದಶಲಕ್ಷ ಜೀವಗಳನ್ನು ಆಹುತಿ ತೆಗೆದುಕೊಂಡಿದ್ದವು.

ಪರಿಚಯ ಇದ್ದ ಮಾತ್ರಕ್ಕೇ ಕ್ಷಾಮಕ್ಕೆ ತುತ್ತಾದ ಜನರಿಗೆ ಹಸಿವಿನ ಬಾಧೆಯನ್ನು ಅನುಭವಿಸುವ ಶಕ್ತಿ ಹೆಚ್ಚಾಗುವುದಿಲ್ಲ. ಪ್ರತಿಯೊಂದು ಸಲ ಕ್ಷಾಮ ಉಂಟಾದಾಗಲೂ ಉಪವಾಸ, ನಿರ್ಗತಿಕತೆ ಹಾಗೂ ಕೆಲವೊಮ್ಮೆ ಜನರು ತೀವ್ರ ನಿರಾಶೆಯಿಂದ ತೊಡಗುವ ಹಿಂಸಾಕೃತ್ಯಗಳು – ಈ ಬೆದರಿಕೆಗಳೇ ಪುನಃ ಉಂಟಾಗುತ್ತವೆ. ಕ್ಷಾಮ ಪ್ರಾರಂಭವಾಗಿರುವುದನ್ನು ಒಪ್ಪಿಕೊಳ್ಳಲು ಸಾಮಾನ್ಯವಾಗಿ ಅಧಿಕಾರಿಗಳು ಇಚ್ಛಿಸುವುದಿಲ್ಲ. ಹಾಗೂ ಕ್ಷಾಮ ಉಂಟಾಗಿದೆ ಎಂದು ಅವರು ಒಪ್ಪಿಕೊಂಡಾಗಲೂ ಭೂ ಕಂದಾಯ ಎತ್ತುವ ಕೆಲಸಕ್ಕೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಕ್ಷಾಮದ ವ್ಯಾಪ್ತಿಯನ್ನು ಅತ್ಯಲ್ಪವಾಗಿ ತೋರಿಸಲು ಪ್ರಯತ್ನಿಸುತ್ತಾರೆ. ಕ್ಷಾಮ ಉಂಟಾಗಿದೆ ಎಂದು ಒಪ್ಪಿಕೊಂಡರೆ ಆಡಳಿತದ ದಕ್ಷತೆಯನ್ನು ಅದು ಪ್ರತಿಬಿಂಬಿಸುತ್ತದೆ ಕೂಡ.

ಅವರ ಅಭ್ಯಾಸಕ್ಕೆ ತಕ್ಕಂತೆ, 1896ರ ಕ್ಷಾಮದ ಮೊದಲ ಮುನ್ಸೂಚನೆಗಳನ್ನು ಅಧಿಕಾರಿಗಳು ಕಡೆಗಣಿಸಿದರು. ಚಳಿಗಾಲದ ಮಳೆಯನ್ನು ನಂಬುವಂತೆ ಜನರಿಗೆ ತಿಳಿಸಲಾಯಿತು. ಕಳವಳಕ್ಕೆ ಯಾವುದೇ ಕಾರಣವಿಲ್ಲವೆಂದೂ, ಕ್ಷಾಮಸ್ಥಿತಿಯು ಆಗತ್ಯವಿಲ್ಲವೆಂದೂ, ವೈಸ್‌ರಾಯ್ ಮತ್ತು ವಿದೇಶಾಂಗ ಕಾರ್ಯದರ್ಶಿ ಬ್ರಿಟಿಷ್ ಜನತೆಗೆ ಭರವಸೆ ನೀಡಿದರು. ಪರಿಹಾರ ಕ್ರಮಗಳಿಗೆ ಬದಲಾಗಿ ಕಂದಾಯ ಸಂಗ್ರಹಣೆಯ ಕಾರ್ಯ ಎಂದಿನಂತೆ ಮುಂದುವರಿಯಿತು. ಹಾಗೂ ಅರಣ್ಯ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. 1876ರ ಕ್ಷಾಮದ ನಂತರ ಜಾರಿಗೆ ತರಲಾದ ಕ್ಷಾಮ ಪರಿಹಾರ ಸಂಹಿತೆಯ ಪ್ರಕಾರ, ರೂಪಾಯಿಗೆ ಐದು ಆಣೆಗಳಿಗಿಂತಲೂ ಕಡಿಮೆ ಬೆಳೆಯಾದ ಪ್ರದೇಶದಲ್ಲಿ ಭೂ ಕಂದಾಯವನ್ನು ತಾತ್ಕಾಲಿಕವಾಗಿ ಸಂಪೂರ್ಣವಾಗಿ ರದ್ದುಪಡಿಸಬೇಕಾಗಿತ್ತು. ಅಥವಾ ಪ್ರಮಾಣಕ್ಕನುಗುಣವಾಗಿ ಕಡಿಮೆ ಮಾಡಬೇಕಾಗಿತ್ತು. ಈ ಸಂಹಿತೆಯ ಅನುಷ್ಠಾನವನ್ನೂ ಸಹ ಒಂದಲ್ಲ ಒಂದು ಕಾರಣದ ಮೇಲೆ ಮುಂದೆ

ಹಾಕಲಾಗಿತ್ತು. ವಿದೇಶೀ ಆಳ್ವಿಕೆಯ ಉಪೇಕ್ಷೆಗೆ ತಕ್ಕಂತೆ, ಇದೇ ಸಮಯಕ್ಕೆ ವೈಸ್‌ರಾಯ್ ಭಾರತೀಯ ಸಂಸ್ಥಾನಗಳ ಪ್ರವಾಸವನ್ನು ಪ್ರಾರಂಭಿಸಿದರು. ಕ್ಷಾಮದ ನಿರ್ದಯೀ ಹಿನ್ನೆಲೆಯಲ್ಲಿ ವೈಭವಾಡಂಬರಗಳ ಪ್ರದರ್ಶನದ ಪ್ರವಾಸವಾಗಿತ್ತು ಇದು.

ರೈತರ ಕುಂದುಕೊರತೆಗಳನ್ನು ಬಹಿರಂಗಪಡಿಸಲೂ, ಕ್ಷಾಮ ಪರಿಹಾರ ಸಂಹಿತೆಯ ಮೇರೆಗೆ ಅವರು ಹೊಂದಿದ್ದ ಹಕ್ಕುಗಳನ್ನು ಅವರಿಗೆ ತಿಳಿಸಲೂ, ಪರಿಹಾರ ವ್ಯವಸ್ಥೆ ಮಾಡಲೂ, ಜಡತೆ ಮತ್ತು ಆಲಸ್ಯದಿಂದಿದ್ದ ಅಧಿಕಾರಿಗಳನ್ನು ಅಲುಗಾಡಿಸಿ ಎಬ್ಬಿಸಲೂ ತಿಲಕರು ಕೂಡಲೇ ಕಾರ್ಯತತ್ಪರರಾದರು. ಸಾರ್ವಜನಿಕ ಸಭಾದ ಲಾಂಛನದಡಿ ಶ್ರದ್ಧಾವಂತ ಕಾರ್ಯಕರ್ತರ ಒಂದು ತಂಡವನ್ನೇ ಅವರು ರಚಿಸಿದರು. ಕ್ಷಾಮದ ಸರಿಯಾದ ಅಂಕಿ ಅಂಶಗಳನ್ನು ಸಂಗ್ರಹಿಸಲೂ, ಕಷ್ಟನಷ್ಟಗಳ ಪರಿಹಾರಕ್ಕೆ ಇರುವ ಮಾರ್ಗಗಳನ್ನು ಸಂತ್ರಸ್ತ ಜನರಿಗೆ ತಿಳಿಸಿಕೊಡಲೂ ತಿಲಕರು ಕ್ಷಾಮಪೀಡಿತ ಪ್ರದೇಶಗಳಿಗೆ ಈ ಕಾರ್ಯಕರ್ತರನ್ನು ಕಳಿಸಿದರು. ಕ್ಷಾಮದ, ಜನರ ಮೇಲೆ ಹಾಕಿದ ಮಿತಿ ಮೀರಿದ ತೆರಿಗೆಗಳ ಮತ್ತು ಅವರಿಗೆ ಮಾಡಿದ ಅನ್ಯಾಯಗಳ ವರದಿಗಳ ಪ್ರಕಟಣೆಗೆ ಮತ್ತು ಕ್ಷಾಮ ಪರಿಹಾರ ಸಂಹಿತೆಯ ಮಾಹಿತಿಯ ಪ್ರಕಟಣೆಗೆ 'ಕೇಸರಿ' ಮತ್ತು 'ಮರಾಠ'ದ ಪುಟಗಳನ್ನು ಬಳಸಲಾಯಿತು. ಸಂಹಿತೆಯನ್ನು ಮರಾಠಿಗೆ ಅನುವಾದಿಸಿ ಅದರ ಸಾವಿರಾರು ಪ್ರತಿಗಳನ್ನು ಕ್ಷಾಮಪೀಡಿತ ಪ್ರದೇಶಗಳಲ್ಲಿ ಉಚಿತವಾಗಿ ಹಂಚಲಾಯಿತು.

ಇಂತಹ ಒಂದು ಚಳವಳಿಯನ್ನು ಭಾರತದಲ್ಲಿ ಹಿಂದೆಂದೂ ಕಂಡಿರಲಿಲ್ಲ. ರೈತರಿಗೆ ತಿಳಿವಳಿಕೆ ಕೊಡಲೂ, ಅವರನ್ನು ಸಂಘಟಿಸಲೂ ಮತ್ತು ಪ್ರಕೃತಿ ವಿಕೋಪ ಹಾಗೂ ಅಧಿಕಾರ ವರ್ಗದ ಅನ್ಯಾಯವನ್ನು ಎದುರಿಸಲು ಅವರನ್ನು ತಯಾರು ಮಾಡಲೂ ಮೊದಲ ಬಾರಿಗೆ ನಾಯಕರೊಬ್ಬರು ಮುಂದೆ ಬಂದಿದ್ದರು. ತಿಲಕರು ಪ್ರಾರಂಭಿಸಿದ ಹೋರಾಟ ಅಧಿಕಾರಿಗಳನ್ನು ಕೆರಳಿಸಿ, ಸಿಟ್ಟಿಗೆಬ್ಬಿಸಿದ್ದರೂ, ಆ ಹೋರಾಟ ಕ್ರಮಬದ್ಧವಾಗಿತ್ತು. ಕಾನೂನಿನ ಪುಸ್ತಕದಲ್ಲಿದ್ದ ಕ್ಷಾಮ ಪರಿಹಾರದ ನಿಯಮಗಳ ಪ್ರಕಾರ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದಷ್ಟೇ ಅವರು ಕೋರಿದ್ದು. ಪರಿಹಾರವನ್ನು ಧೈರ್ಯದಿಂದ ಕೋರುವಂತೆ ಅವರು ಜನರನ್ನು ಒತ್ತಾಯಪಡಿಸಿದರು.

"ಯಾರೂ ಸಾಯಬಾರದೆಂದು ರಾಣಿ ಇಚ್ಛಿಸಿರುವಾಗ, ಎಲ್ಲರೂ ಬದುಕಬೇಕೆಂದು ಗವರ್ನರ್ ಘೋಷಿಸುವಾಗ, ಅಗತ್ಯವಾದರೆ ಸಾಲ ಹೊರಲೂ ವಿದೇಶಾಂಗ ಕಾರ್ಯದರ್ಶಿ ಸಿದ್ಧವಾಗಿರುವಾಗ, ಅಂಜಿಕೆ ಮತ್ತು ಉಪವಾಸದಿಂದ ನೀವು ಸಾಯುತ್ತೀರೇನು? ಸರ್ಕಾರಕ್ಕೆ ಕೊಡಬೇಕಾದ ಬಾಕಿ ಸಲ್ಲಿಸಲು ನಿಮ್ಮಲ್ಲಿ ಹಣವಿದ್ದರೆ ಅವಶ್ಯವಾಗಿ ಸಲ್ಲಿಸಿ. ಆದರೆ ನಿಮ್ಮಲ್ಲಿ ಹಣವಿಲ್ಲದಿದ್ದಲ್ಲಿ, ಸರ್ಕಾರದ ಅಧೀನ ಅಧಿಕಾರಿಗಳ ಕಲ್ಪಿತ ಕ್ರೋಧದಿಂದ ತಪ್ಪಿಸಿಕೊಳ್ಳಲು ಮಾತ್ರವೇ ನಿಮ್ಮ ವಸ್ತುಗಳನ್ನು ಮಾರಿಬಿಡುತ್ತೀರಾ? ಸಾವಿನ ಸಮ್ಮುಖದಲ್ಲಿ ನೀವು ಧೈರ್ಯವಾಗಿರಲಾರಿರಾ? ನಾವು ಎಷ್ಟೇ ಕ್ಷಾಮಗಳನ್ನಾದರೂ ಎದುರಿಸಬಲ್ಲೆವು. ಆದರೆ ಕುರಿಗಳಂತಹ ಜನರನ್ನು ಕಟ್ಟಿಕೊಂಡು ನಾವೇನು ಮಾಡಬೇಕು? ಇಂತಹ ಕ್ಷಾಮ ಇಂಗ್ಲೆಂಡ್‌ನಲ್ಲಿ ಉಂಟಾಗಿದ್ದು,

ನಮ್ಮ ವೈಸ್‌ರಾಯ್‌ರಂತೆ ಅಲ್ಲಿಯ ಪ್ರಧಾನ ಮಂತ್ರಿ ಉದಾಸೀನದಿಂದ ಇದ್ದಿದ್ದರೆ ಅವರ ಸರ್ಕಾರ ತಡವಿಲ್ಲದೆ ಉರುಳುತ್ತಿತ್ತು."

ಈ ಮಾತುಗಳಿಂದ ಜನರು ತಮ್ಮ ಶಕ್ತಿಯನ್ನು ತಿಳಿಯುವುದು ತಕ್ಷಣ ಆಗಲಿಲ್ಲವಾದರೂ, ಅಧಿಕಾರಿಗಳು ಈ ಮಾತುಗಳನ್ನು ಗ್ರಹಿಸಿದರು. ಪರಿಹಾರ ಕಾರ್ಯದಲ್ಲಿ ತೊಡಗಿದ್ದ ಸಾರ್ವಜನಿಕ ಸಭಾದ ಕಾರ್ಯಕರ್ತರಿಗೆ ಕಿರುಕುಳ ಕೊಡಲು ಅಧಿಕಾರಿಗಳಿಗೆ ಪ್ರಚೋದನೆ ದೊರಕಿತು. ಸಾರ್ವಜನಿಕ ಸಭೆಗಳನ್ನು ನಡೆಸಲು ಕಾರ್ಯಕರ್ತರಿಗೆ ಅಧಿಕಾರಿಗಳು ಅವಕಾಶ ಕೊಡಲಿಲ್ಲ. ರೈತರಿಗೆ ಹಂಚಬೇಕೆಂದು ಕಾರ್ಯಕರ್ತರು ಹೊಂದಿದ್ದ ಕ್ಷಾಮ ಪರಿಹಾರ ಸಾಹಿತ್ಯವನ್ನು ನಾಶಪಡಿಸಲಾಯಿತು. ಭೂ ಕಂದಾಯವನ್ನು ಕೊಡಲು ಸಾಧ್ಯವಿಲ್ಲದೆ ಇದ್ದವರು ಅದನ್ನು ಕೊಡಬಾರದೆಂದು ಜನರಿಗೆ ತಿಳಿಸುತ್ತಿದ್ದ ಕಾರ್ಯಕರ್ತರಿಗೆ ತೀವ್ರ ಬೆದರಿಕೆಯನ್ನು ಹಾಕಲಾಯಿತು. ಹೆಚ್ಚು ಉತ್ಸಾಹಿ ಕಾರ್ಯಕರ್ತರ ವಿರುದ್ಧ ಮೊಕದ್ದಮೆಗಳನ್ನೂ ಸಹ ಹೂಡಲಾಯಿತು.

ಈ ಕಿರುಕುಳಗಳಿದ್ದರೂ, ಸಾರ್ವಜನಿಕ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಗಳನ್ನು ಮಾಡಿದ್ದರೂ, ತಿಲಕರು ಮತ್ತು ಅವರ ಕಾರ್ಯಕರ್ತರ ತಂಡ ತಮ್ಮ ಪ್ರಚಾರವನ್ನು ಮುಂದುವರೆಸಿದರು. ತಿಲಕರು ಚಿತ್ರ ಮೂಡುವಂತೆ ವರ್ಣಿಸಿದ ಮಾತುಗಳಲ್ಲಿ ಹೇಳುವುದಾದರೆ, "ಪೋಲೀಸ್ ಬಂದೂಕುಗಳ ವ್ಯಾಪ್ತಿಯಲ್ಲೂ" ಸಹ ಬೃಹತ್ ಸಭೆಗಳನ್ನು ನಡೆಸಲಾಯಿತು. ತಮ್ಮ ಸಹ-ಕಾರ್ಯಕರ್ತರಲ್ಲಿ ಕೆಲವರನ್ನು ದಸ್ತಗಿರಿ ಮಾಡಲಾಗಿದೆ ಎಂಬುದು ಅವರಿಗೆ ತಿಳಿದಾಗ, ಕಾಂಗ್ರೆಸ್ ಅಧಿವೇಶನಕ್ಕೆಂದು ಕಲ್ಕತ್ತೆಗೆ ಹೋಗಿದ್ದ ತಿಲಕರು ಅಲ್ಲಿಂದ ಲಗುಬಗನೆ ಹಿಂತಿರುಗಿದರು ಹಾಗೂ ಹೀಗೆ ಸಾರಿದರು: "ಪ್ರಸಕ್ತ ಆಡಳಿತ ಕಾನೂನಿನ ಆಡಳಿತವಾಗಿದೆ. ಸರ್ಕಾರದ ಕಾನೂನಿನ ಅರ್ಥವನ್ನು ಜನರಿಗೆ ವಿವರಿಸಿದ್ದಕ್ಕಾಗಿ ನನ್ನ ಸಹೋದ್ಯೋಗಿಗಳನ್ನು ವಿಚಾರಣೆಗೆ ಗುರಿಪಡಿಸಿದರೆ,ನಾನೂ ಅದೇ ಕಾರ್ಯವನ್ನು ಇನ್ನೂ ವ್ಯಾಪಕವಾದ ಪ್ರಮಾಣದಲ್ಲಿ ಮಾಡುವುದರಿಂದ, ನನ್ನನ್ನೂ ವಿಚಾರಣೆಗೆ ಗುರಿಪಡಿಸಲು ಇನ್ನೂ ಬಲವತ್ತರವಾದ ಕಾರಣವಿದೆ."

ಪ್ರೊಫೆಸರ್ ಪರಾಂಜಪೆಯವರೂ ಸೇರಿದಂತೆ ಕ್ಷಾಮ ಪರಿಹಾರ ಕಾರ್ಯಕರ್ತರಲ್ಲಿ ಕೆಲವರನ್ನು ವಿಚಾರಣೆಗೆ ಗುರಿಪಡಿಸಿದಾಗ ತಿಲಕರು ಸೇಣ್ ಊರಿನಲ್ಲಿ ಹಾಜರಿದ್ದರು. ಪ್ರತ್ಯಕ್ಷದರ್ಶಿಯಾಗಿದ್ದ ಆರ್. ಎನ್. ಮಾಂಡಲೀಕ್ ಅವರ ಮಾತುಗಳಲ್ಲಿ ಅಲ್ಲಿ ಏನು ನಡೆಯಿತೆಂಬುದನ್ನು ಅತ್ಯುತ್ತಮವಾಗಿ ಹೇಳಬಹುದು:

"ಪ್ರತಿಯೊಂದು ಸಭೆಯಲ್ಲೂ ಸುಮಾರು ಹತ್ತು ಸಾವಿರ ಜನರಿದ್ದ ಬೃಹತ್ ಸಭೆಗಳನ್ನು ಸೇಣ್‌ನ ಜನರು ಎಂದೂ ಮರೆಯುವುದಿಲ್ಲ. ಪ್ರೊ.ಪರಾಂಜಪೆಯವರ ವಿರುದ್ಧದ ಪ್ರಕರಣ ಪ್ರಾರಂಭವಾಗುವುದಕ್ಕೆ ಮೊದಲು, ಪ್ರಕರಣದ ವಿಚಾರಣೆಗೆ ನಡೆಸುತ್ತಿದ್ದ ಕಲೆಕ್ಟರನ ಟೆಂಟ್‌ನ ಸುತ್ತಲೂ ಸಾವಿರಾರು ಜನರು ಸೇರಿದ್ದರು.. ಅವರು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು ಹಾಗೂ 'ತಿಲಕರಿಗೆ ಜಯವಾಗಲಿ' ಎಂದು ಕೂಗಿದರು. ಜನರನ್ನು ನಿರ್ಬಂಧಿಸುವುದಾಗಲಿ, ದೂರವಿಡುವುದಾಗಲಿ ಪೋಲಿಸರಿಗೆ ಸಾಧ್ಯವಾಗದೆ ಹೋಯಿತು. ಆದ್ದರಿಂದ, ಹೊರಗಡೆ ಹೋಗಿ ಜನರೊಂದಿಗೆ ಮಾತನಾಡಿ ಅವರನ್ನು ಸಮಾಧಾನಪಡಿಸುವಂತೆ ಕಲೆಕ್ಟರನು ತಿಲಕರನ್ನು ಕೋರಿಕೊಂಡನು. ತಿಲಕರು ಜನರನ್ನು

ಸಮಾಧಾನಪಡಿಸಿದರು. ಐದು ನಿಮಿಷಗಳಲ್ಲಿ ಪ್ರಕರಣ ಮುಕ್ತಾಯಗೊಂಡಿತು. ಪ್ರೊ. ಪರಾಂಜಪೆಯವರನ್ನು ನಿರಪರಾಧಿ ಎಂದು ಬಿಡುಗಡೆ ಮಾಡಲಾಯಿತು. ಹಾಗೂ ಇತರ ಪ್ರಕರಣಗಳನ್ನು ಮುಂದೆ ಹಾಕಲಾಯಿತು. ಕಲೆಕ್ಟರನು ನಂತರ ತಿಲಕರೊಂದಿಗೆ ಮಾತನಾಡಲು ಅವರನ್ನು ಕರೆದನು. ಅವನು ಹೇಳಿದ್ದು ನನಗೆ ನೆನಪಿದೆ: 'ಇಂತಹ ಸ್ವರೂಪದ ಪ್ರಕರಣವೊಂದರಲ್ಲಿ ಅನಕ್ಷರಸ್ಥ ರೈತರ ಗುಂಪೊಂದು ಹೀಗೆ ಜಮಾಯಿಸಿದ್ದನ್ನು ಭಾರತದಲ್ಲಾಗಲಿ, ಇಂಗ್ಲೆಂಡ್‌ನಲ್ಲಾಗಲಿ ನಾನು ಎಂದೂ ನೋಡಿಲ್ಲ. ಇಂತಹ ಜನಸಮುದಾಯಗಳನ್ನು ನೋಡಿದಾಗ ಏಳು ಬಿಷಪ್ಪರ ಪ್ರಕರಣ ನನ್ನ ನೆನಪಿಗೆ ಬಂದಿತು. ಇದು ನಿಮ್ಮ ಜನಪ್ರಿಯತೆಗೆ ಸಾಕ್ಷಿಯಾಗಿದೆ.' "

ಚಳವಳಿಯಿಂದಾಗಿ ಸರ್ಕಾರ ಕ್ಷಾಮ ಪರಿಹಾರ ಸಂಹಿತೆಯನ್ನು ಬೇಗ ಅನುಷ್ಠಾನಕ್ಕೆ ತರಬೇಕಾಯಿತು. ಬ್ರಿಟನ್‌ನಲ್ಲಿ ಕ್ಷಾಮ ನಿಧಿಯೊಂದನ್ನೂ ಸಹ ಸ್ಥಾಪಿಸಲಾಯಿತು. ಸಂಹಿತೆಯ ಮೇರೆಗೆ ನೇಕಾರರೂ ಸಹ ಪರಿಹಾರ ಪಡೆಯಲು ಅರ್ಹರಾಗಿದ್ದರೂ, ಅಹಮದ್‌ನಗರ್ ಮತ್ತು ಶೋಲಾಪುರದ ನೇಕಾರರಿಗೆ ಸಹಾಯ ಮಾಡಬೇಕೆಂಬ ತಿಲಕರ ಮನವಿಗೆ ಸರ್ಕಾರದಿಂದ ಅನುಕೂಲ ಪ್ರತಿಕ್ರಿಯೆ ಉಂಟಾಗಲಿಲ್ಲ. ಸಾರ್ವಜನಿಕ ಸಭಾಗೆ ಕೊಟ್ಟಿದ್ದ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲು ಸರ್ಕಾರಕ್ಕೆ ಒಂದು ನಂಬಬಹುದಾದ ನೆಪವೂ ಸಿಕ್ಕಿತು. ಇದಕ್ಕೆ 'ಮರಾಠ'ದಲ್ಲಿ ಸೂಕ್ತ ಉತ್ತರವೂ ಬಂದಿತು:

"ಸರ್ಕಾರಕ್ಕೆ ಕಳಿಸಿದ ಯಾವುದೇ ಅರ್ಜಿಯನ್ನು ಅದು ಅನುಕೂಲಾಭಿಪ್ರಾಯದಿಂದ ಪರಿಗಣಿಸಬಹುದು ಅಥವಾ ಪರಿಗಣಿಸದಿರಬಹುದು. ಆದರೆ ಅಷ್ಟು ಮಾತ್ರಕ್ಕೆ ಸಾರ್ವಜನಿಕ ಘೊರಣೆಯ ಪ್ರಶ್ನೆಗಳ ಬಗ್ಗೆ ಸರ್ಕಾರಕ್ಕೆ ಅರ್ಜಿಗಳನ್ನು ಕಳಿಸುವುದಕ್ಕೆ ಯಾರಿಗೂ ಅವಕಾಶವಿಲ್ಲ ಎಂದಾಗುವುದಿಲ್ಲ."

ತಿಲಕರ ಕ್ಷಾಮ ಪರಿಹಾರ ಕಾರ್ಯ ದುಪ್ಪಟ್ಟು ಉಪಯುಕ್ತವಾಗಿತ್ತು. ಆರ್ಥಿಕ ಪರಿಹಾರ ದೊರಕಿಸುವ ಪ್ರಯತ್ನದಲ್ಲಿ ಅವರು ರಾಜಕೀಯ ಜಾಗೃತಿಯನ್ನು ದೇಶದ ಬುಡದವರೆಗೂ ಮುಟ್ಟಿಸಿದರು..

ದಿಟ್ಟ ರೈತರು ತಮ್ಮ ದೇಶದ ಹೆಮ್ಮೆ
ಮರಳಿ ದೊರೆಯಲಾರದದು ನಾಶವಾದರೆ ಒಮ್ಮೆ

ಎಂಬುದು ಅವರಿಗೆ ತಿಳಿದಿತ್ತು.

ರೈತರ ಪರಿಸ್ಥಿತಿಗಳನ್ನು ಸುಧಾರಿಸುವುದರಿಂದ ದೇಶದ ಬಲವನ್ನು ಕಾಪಾಡಿದಂತಾಗುತ್ತದೆ. ಒಂದು ದೇಶದ ಜನಸಂಖ್ಯೆಯ ಶೇಕಡ 85 ರಷ್ಟು ಜನರು ದಾರಿದ್ರ್ಯ ಮತ್ತು ಅಜ್ಞಾನದಲ್ಲಿ ಮುಳುಗಿರುವಾಗ ಆ ದೇಶ ಪ್ರಗತಿ ಹೊಂದಲು ಸಾಧ್ಯವಿಲ್ಲ. 1896ರಲ್ಲಿ ಮಹರಾಷ್ಟ್ರದಲ್ಲಿ ತಿಲಕರು ಕೈಗೊಂಡ ಕ್ಷಾಮ ಪರಿಹಾರ ಚಳವಳಿಯ ಮೂಲಕ ಅವರ ಧ್ಯೇಯ ಚಾಲನೆಯನ್ನು ಪಡೆಯಿತು. ಇಪ್ಪತ್ತೊಂದು ವರ್ಷಗಳ ನಂತರ ಗಾಂಧೀಜಿಯವರೂ ಸಹ ಚಂಪಾರಣ್ ಮತ್ತು ಖೇಡಗಳಲ್ಲಿ ಚಳವಳಿಗಳನ್ನು ನಡೆಸುವ ಮೂಲಕ ಭಾರತದ ರಾಜಕೀಯ ಹೋರಾಟದಲ್ಲಿ ಪ್ರಥಮವಾಗಿ ಕಾಲಿಟ್ಟರು.

ರಾಷ್ಟ್ರೀಯ ಜೀವನದಲ್ಲಿ ರೈತರ ಪ್ರಾಮುಖ್ಯತೆಯನ್ನು ತಿಲಕರು 'ಕೇಸರಿ'ಯಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ:

"ಸರ್ಕಾರ ನಮ್ಮ ಕೂಗು ಕೇಳಬೇಕೆಂದು ನಾವು ಕಳೆದ ಹನ್ನೆರಡು ವರ್ಷಗಳಿಂದಲೂ ಗಂಟಲು ರಾಚುವಂತೆ ಕೂಗುತ್ತಿದ್ದೇವೆ. ಒಂದು ಸೊಳ್ಳೆಯ ಶಬ್ದ ಸರ್ಕಾರದ ಮೇಲೆ ಏನು ಪರಿಣಾಮ ಮಾಡುತ್ತದೋ, ಅದಕ್ಕಿಂತಲೂ ಹೆಚ್ಚು ಪರಿಣಾಮ ನಮ್ಮ ಕೂಗಿನಿಂದ ಆಗಿಲ್ಲ. ನಮ್ಮನ್ನು ಆಳುವವರು ನಮ್ಮ ಹೇಳಿಕೆಗಳನ್ನು ನಂಬುವುದಿಲ್ಲ ಎಂದು ಹೇಳುತ್ತಾರೆ. ಬಲವಾಗಿ ನ್ಯಾಯಬದ್ಧವಾದ ವಿಧಾನಗಳ ಮೂಲಕ ನಮ್ಮ ಕುಂದುಕೊರತೆಗಳನ್ನು ಈಗ ಸರ್ಕಾರದ ಕಿವಿಗಳಲ್ಲಿ ತುಂಬಲು ನಾವು ಪ್ರಯತ್ನಿಸೋಣ. ಮುಗ್ಧ ಹಳ್ಳಿಗರಿಗೆ ಸಾಧ್ಯವಾದಷ್ಟು ಉತ್ತಮ ಶಿಕ್ಷಣವನ್ನು ನಾವು ಕೊಡಬೇಕು. ಸಮಾನತೆಯ ಶರತ್ತುಗಳ ಮೇಲೆ ನಾವು ಅವರನ್ನು ಸಂಧಿಸಬೇಕು, ಅವರ ಹಕ್ಕುಗಳನ್ನು ಅವರಿಗೆ ತಿಳಿಸಿಕೊಡಬೇಕು ಹಾಗೂ ನ್ಯಾಯಬದ್ಧವಾಗಿ ಹೇಗೆ ಹೋರಾಡಬೇಕೆಂಬುದನ್ನೂ ಅವರಿಗೆ ತೋರಿಸಿ ಕೊಡಬೇಕು.

ಆಗ ಮಾತ್ರ ಕಾಂಗ್ರೆಸ್‌ಅನ್ನು ಉಪೇಕ್ಷಿಸಿದರೆ ಭಾರತೀಯ ರಾಷ್ಟ್ರವನ್ನೂ ಉಪೇಕ್ಷಿಸಿದಂತೆ ಎಂದು ಸರ್ಕಾರ ಅರಿತುಕೊಳ್ಳುತ್ತದೆ. ಆಗ ಮಾತ್ರ ಕಾಂಗ್ರೆಸ್ ನಾಯಕರ ಪ್ರಯತ್ನಗಳಿಗೆ ಯಶಸ್ಸಿನ ಕಿರೀಟ ದೊರೆಯುತ್ತದೆ. ಇಂತಹ ಕಾರ್ಯಕ್ಕೆ, ರಾಜಕೀಯವೆಂದರೆ ರಜಾದಿನಗಳ ಮನರಂಜನೆಯಾಗದೆ ಕಟ್ಟುನಿಟ್ಟಿನ ನಿಯಮಿತತನ ಮತ್ತು ಅತ್ಯಂತ ಪ್ರಾಮಾಣಿಕತೆಯಿಂದ ಮಾಡಬೇಕಾದ ಪ್ರತಿದಿನದ ಕರ್ತವ್ಯ ಎಂದು ತಿಳಿಯುವ ಶಕ್ತಿ ಹಾಗೂ ಏಕಮನಸ್ಸಿನ ಕಾರ್ಯಕರ್ತರ ಭಾರಿ ತಂಡದ ಅಗತ್ಯವಿದೆ."

ಕ್ಷಾಮ ಪರಿಹಾರದ ಕಾರ್ಯದಲ್ಲಿ ತೀವ್ರವಾಗಿ ನಿರತರಾಗಿದ್ದಾಗಲೇ, 1897ರಲ್ಲಿ ಪೂನಾದಲ್ಲಿ ಗೆಡ್ಡೆ ಏಳುವ ಪ್ಲೇಗು ರೋಗ ಹರಡಿ ಉಂಟಾದ ಹಾವಳಿಗೆ ಮತ್ತು ಅದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಪ್ರಯತ್ನಗಳಿಗೆ ತಿಲಕರು ಗಮನ ಕೊಡಬೇಕಾಯಿತು. ಆಗ ಯಾವುದೇ ಚಿಕಿತ್ಸೆ ಇಲ್ಲದಿದ್ದ ವಿಚಿತ್ರ ಹಾಗೂ ಭಯಾನಕ ಸಾಂಕ್ರಾಮಿಕ ರೋಗ ಉಂಟು ಮಾಡಿದ ಗಾಬರಿಯನ್ನು ಈಗ ಊಹಿಸುವುದೂ ಕಠಿಣ. ರೋಗವನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಅಮಾನುಷ ವಿಧಾನಗಳಿಂದ ಉಂಟಾದ ಭೀತಿ ಮತ್ತು ರೋಷದ ಆಳವನ್ನು ಅಳೆಯುವುದು ಇನ್ನೂ ಕಠಿಣ. ಹಾಗೆ ನೋಡಿದರೆ ಪ್ಲೇಗು ಉಂಟುಮಾಡಿದ ಭೀತಿಗಿಂತಲೂ ಪ್ಲೇಗು ವಿರುದ್ಧ ಕೈಗೊಂಡ ಕ್ರಮಗಳು ಜನರ ಮನಸ್ಸಿನಲ್ಲಿ ಹೆಚ್ಚು ಭೀಕರವಾದ ಭಯವನ್ನು ಮೂಡಿಸಿದವು.

ಪ್ಲೇಗಿನ ಪಿಡುಗು ಮೊದಲು ಮುಂಬಯಿಯಲ್ಲಿ. ಅನಂತರ ಪೂನಾದಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಪ್ಲೇಗು ಎಷ್ಟು ಮಾರಕವಾಗಿತ್ತೆಂದರೆ, ಅಂತ್ಯಕ್ರಿಯೆಗಳನ್ನು ನಡೆಸಲು ಸ್ಮಶಾನಗಳಲ್ಲಿ ಜನರು ಸಾಲುಗಳಲ್ಲಿ ನಿಲ್ಲಬೇಕಾಯಿತು. ಜನರು ಅತೀವ ಗಾಬರಿಯಿಂದ ಮನೆಗಳನ್ನು ಬಿಟ್ಟು ಓಡಿದರು. ಹೀಗೆ ರೋಗ ಸ್ಥಳದಿಂದ ಸ್ಥಳಕ್ಕೆ ಹರಡಿತು.ಅಧಿಕಾರಿಗಳೂ ತಮ್ಮ ಕರ್ತವ್ಯಸ್ಥಾನಗಳನ್ನು ಬಿಟ್ಟು ಬೇರೆಡೆಗಳಲ್ಲಿ ರಕ್ಷಣೆ ಹೊಂದಲು ಪ್ರಯತ್ನಿಸಿದರು. ಪರಿಸ್ಥಿತಿ ಎಷ್ಟು ಪ್ರಕೋಪಕ್ಕೆ ಹೋಗಿದೆ ಎಂದು ತಿಳಿಯಲು ಅಧಿಕಾರಿ ವರ್ಗಗಳಿಗೆ ಕೆಲವು ತಿಂಗಳುಗಳೇ ಬೇಕಾಯಿತು ಹಾಗೂ ಫೆಬ್ರವರಿ 4, 1897ರಂದು ಸಾಂಕ್ರಾಮಿಕ ರೋಗಗಳ ಕಾಯಿದೆಯನ್ನು ಅನುಮೋದಿಸಲಾಯಿತು.

ಪ್ರಯಾಣಿಕ ಹಡಗುಗಳು ಮತ್ತು ಸಾರಿಗೆ ಹಡಗುಗಳನ್ನು ನಿಲ್ಲಿಸುವ, ರೈಲ್ವೆ

ಪ್ರಯಾಣಿಕರನ್ನು ಪರೀಕ್ಷಿಸುವ ಹಾಗೂ ರೋಗ ತಗಲಿದ ವ್ಯಕ್ತಿಗಳನ್ನು ಆಸ್ಪತ್ರೆಗೆ ಸಾಗಿಸುವ ವ್ಯಾಪಕ ಮತ್ತು ತೀವ್ರ ಅಧಿಕಾರಿಗಳನ್ನು ಕಾಯಿದೆ ಕೊಟ್ಟಿರು. ಯಾವುದೇ ಮನೆಯನ್ನು ಶೋಧಿಸಬಹುದಾಗಿತ್ತು.ಹಾಗೂ ಮುನ್ಸೂಚನೆಯಿಲ್ಲದೆ ಯಾರೇ ವ್ಯಕ್ತಿಯನ್ನು ಬಲವಂತವಾಗಿ ಪ್ರತ್ಯೇಕವಾಗಿಡಬಹುದಾಗಿತ್ತು. ಕೊನೆಯ ಎರಡು ಕ್ರಮಗಳನ್ನು ಜಾರಿಗೆ ತರುವುದನ್ನು ಬ್ರಿಟಿಷ್ ಸೈನಿಕರಿಗೆ ವಹಿಸಲಾಗಿತ್ತು. ಇವು ಪೂನಾದಲ್ಲಿ ಅತ್ಯಂತ ಆತಂಕವನ್ನೂ, ಸಿಟ್ಟನ್ನೂ ಉಂಟುಮಾಡಿದವು. ಮನೆಗಳಲ್ಲಿ ಬಲವಂತವಾಗಿ ನುಗ್ಗಲಾಯಿತು ಹಾಗೂ ಅಪವಿತ್ರಗೊಳಿಸಲಾಯಿತು; ಅಮೂಲ್ಯವಾದ ಆಸ್ತಿಯನ್ನು ನಾಶಪಡಿಸಲಾಯಿತು; ಪೀಠೋಪಕರಣಗಳು, ಬಟ್ಟೆ, ಹಾಸಿಗೆ ಇತ್ಯಾದಿಗಳನ್ನು ಶುದ್ಧೀಕರಿಸುವ ನೆಪದಲ್ಲಿ ಸುಟ್ಟು ಬೂದಿ ಮಾಡಲಾಯಿತು. ಬ್ರಿಟಿಷ್ ಸೈನಿಕರಿಗೆ ಇದು ಒಂದು ದೊಡ್ಡ ತಮಾಷೆಯಾಗಿದ್ದಂತೆ ತೋರಿತು.

ಪ್ರಾರಂಭದಲ್ಲಿ ತಿಲಕರು ಅಧಿಕಾರಿಗಳೊಂದಿಗೆ ತಿಳಿವಳಿಕೆಯ, ಸಹಕಾರದ ನಿಲುವನ್ನು ಹೊಂದಿದ್ದರು. ಹೆಂಗಸರಿಗೆ ಕಿರುಕುಳ ಕೊಡದಿರಲು, ಪೂಜಾ ಸ್ಥಾನಗಳನ್ನು ಅಪವಿತ್ರಗೊಳಿಸದಿರಲೂ ಅಥವಾ ಜನತೆಯ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡದಿರಲೂ ಪ್ಲೇಗು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆಜ್ಞೆಯನ್ನು ನೀಡಲಾಗಿದೆಯೆಂದು ಅವರು ಜನರಿಗೆ ಭರವಸೆ ನೀಡಿದರು. ಯಾವುದೇ ಅಪ್ರಿಯ ಘಟನೆಗಳಾಗುವುದನ್ನು ತಪ್ಪಿಸಲು, ಶೋಧನಾ ತಂಡಗಳೊಂದಿಗೆ ಹೋಗಬೇಕೆಂದು ಅವರು ಸ್ವಯಂಸೇವಕರನ್ನು ಕೇಳಿಕೊಂಡರು. ಆದರೆ ಪ್ಲೇಗು ಸಮಿತಿಯ ಅಧ್ಯಕ್ಷನಾಗಿ ನೇಮಕಗೊಂಡಿದ್ದ ಸಿವಿಲಿಯನ್ ಅಧಿಕಾರಿಯಾದ ರ್‍ಯಾಂಡ್‌ನ ಮೇಲ್ವಿಚಾರಣೆಯಲ್ಲಿ ಪ್ಲೇಗು-ವಿರುದ್ಧದ ಕಾರ್ಯಾಚರಣೆಗಳ ಕಠೋರತೆ ಮತ್ತು ದಡ್ಡತನ ಹೆಚ್ಚಾದಂತೆ ತಿಲಕರ ನಿಲುವು ಬದಲಾಯಿಸಿತು. ಅವರು ಹೀಗೆ ಗಮನಿಸಿದರು:

"ವೈಜ್ಞಾನಿಕ ದೃಷ್ಟಿಯಿಂದ, ಜನರನ್ನು ಪ್ರತ್ಯೇಕಗೊಳಿಸುವುದು ಬಹಳ ಉಪಯುಕ್ತವಾಗಿದ್ದರೂ, ಆಳುವವರು ಆಳಿಸಿಕೊಳ್ಳುವವರ ಬಗ್ಗೆ ಸಾಮಾನ್ಯವಾಗಿ ನಡೆದುಕೊಳ್ಳುವ ರೀತಿಯಿಂದ ಹಾಗೂ ಇತರ ಬೇರೆ ಬೇರೆ ಕಾರಣಗಳಿಂದ ಪ್ರತ್ಯೇಕಗೊಳಿಸುವುದನ್ನು ಆಚರಣೆಗೆ ತರುವುದು ಬಹುತೇಕ ಅಸಾಧ್ಯವಾಗಿ ಬಿಟ್ಟಿದೆ. ಆಸ್ಪತ್ರೆಯೆಂದರೆ ಜನರನ್ನು ಕೊಲ್ಲುವ ಸ್ಥಳ ಎಂಬ ಅಭಿಪ್ರಾಯ ಎಷ್ಟು ಆಳವಾಗಿ ಬೇರೂರಿದೆಯೆಂಬುದನ್ನು, ಇದಕ್ಕೆ ಸಂಬಂಧಿಸಿದಂತೆ ಪೂನಾ ಮತ್ತು ಮುಂಬಯಿಯಲ್ಲಿ ಕೇಳಿ ಬರುವ ವಿಚಿತ್ರ ವದಂತಿಗಳಿಂದ ಸುಲಭವಾಗಿ ತಿಳಿಯಬಹುದು. ಆಸ್ಪತ್ರೆಗಳ ಬಗ್ಗೆ ಇರುವ ಈ ಭೀಕರ ಭೀತಿ ಕೆಲವು ಭ್ರಷ್ಟ ಪೋಲೀಸರ ಕೃತ್ಯಗಳಿಂದ ಮತ್ತಷ್ಟು ಹೆಚ್ಚಿದೆ."

ಸಾರ್ವಜನಿಕ ವಿಶ್ವಾಸವನ್ನು ಪುನಃ ಸ್ಥಾಪಿಸಲು ತಿಲಕರು ಖಾಸಗಿ ಆಸ್ಪತ್ರೆಯೊಂದನ್ನು ತೆರೆದು ಪರಿಹಾರಕ್ಕಾಗಿ ಒಂದು ನಿಧಿಯನ್ನು ಸ್ಥಾಪಿಸಿದರು.ಗಾಬರಿಯಿಂದ ಪೂನಾ ಬಿಟ್ಟು ಓಡಿಹೋದ ಇತರ ಪ್ರಮುಖ ವ್ಯಕ್ತಿಗಳಂತಲ್ಲದೆ, ನೋವು, ಸಂಕಷ್ಟಗಳಿಗೀಡಾದ ಜನರಿಗೆ ಸಹಾಯ ಮಾಡುತ್ತಾ ತಿಲಕರು ನಗರದಲ್ಲೇ ಉಳಿದರು.ಬರ್ಬರ ವಿಧಾನಗಳನ್ನು ಅನುಸರಿಸುತ್ತಿದ್ದ ಸರ್ಕಾರವನ್ನು ಅವರು ಟೀಕಿಸಿದ್ದೇ ಅಲ್ಲದೆ ಜನತಾ ನಾಯಕರ ನಿರುತ್ಸಾಹ ಮತ್ತು ನಿಷ್ಕ್ರಿಯತೆಗಳ ಬಗ್ಗೆಯೂ ಹೇಳಿದರು:

"ಯಾವುದೇ ವಿಶೇಷ ಅನುಕೂಲ ಪಡೆಯದೆ ಭಾರತದ ಜನತೆಯ ಮೇಲೆ ಅನಗತ್ಯವಾಗಿ ಜುಲುಂ ಮಾಡಲು ಆಳುವ ರಾಣಿಯವರು ಹಾಗೂ ವಿದೇಶಾಂಗ ಕಾರ್ಯದರ್ಶಿ ಮತ್ತು ಅವರ ಮಂಡಳಿ ಆಜ್ಞೆಯನ್ನು ಹೊರಡಿಸಬಾರದಾಗಿತ್ತೆಂಬುದೂ, ಬಾಂಬೆ ಸರ್ಕಾರ ಇಂತಹ ಆಜ್ಞೆಯೊಂದನ್ನು ಜಾರಿಗೆ ತರುವುದನ್ನು ರ್‍ಯಾಂಡ್‌ನಂತಹ ಸಂಶಯ ಸ್ವಭಾವದ, ವಿಷಣ್ಣ, ಕ್ರೂರ ಅಧಿಕಾರಿಗೆ ವಹಿಸಿಕೊಡಬಾರದಿತ್ತೆಂಬುದು ನಿಜ. ಇದಕ್ಕಾಗಿ ಸರ್ಕಾರವನ್ನು, ಬಾಂಬೆ ಗವರ್ನರರನ್ನೂ ಎಷ್ಟು ದೂಷಿಸಿದರೂ ಸಾಲದು.

"ಆದರೆ ಸರ್ಕಾರ ಜುಲುಂ ಮಾಡುತ್ತದೆ ಎಂಬುದೂ, ಅತ್ಯುನ್ನತ ಅಧಿಕಾರಿಯವರೆಗೆ ಯಾರೇ ಆದರೂ ಈ ಜುಲುಂಗೆ ಪರಿಹಾರ ಒದಗಿಸುವುದಿಲ್ಲವೆಂಬುದೂ ಸ್ಪಷ್ಟವಾದಾಗ, ನಮ್ಮ ಜನರನ್ನು ರಕ್ಷಿಸಲು ಯಾವುದಾದರೂ ವಿಧಾನವನ್ನು ಕಂಡುಹಿಡಿಯಬೇಕಾದದ್ದು ನಮ್ಮ ನಾಯಕರ ಕರ್ತವ್ಯವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಈಗ ನಗರದಲ್ಲಿ ಹಬ್ಬಿರುವ ಬೆಂಕಿಯಿಂದ ದೂರ ಹೋಗಿ ಅಲ್ಲಿಂದ ಬೊಬ್ಬೆ ಹಾಕುವುದರ ಹೊರತಾಗಿ ಬೆಂಕಿಯನ್ನು ನಂದಿಸಲು ನಮ್ಮ ನಾಯಕರು ಏನಾದರೂ ಪ್ರಯತ್ನ ಪಟ್ಟಿದ್ದಾರೆಯೇ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಿದರೆ ನಾವೇನು ಉತ್ತರ ಕೊಡಬೇಕು? ಪ್ಲೇಗು ಕಾಯಿದೆಯನ್ನು ಅನುಮೋದಿಸಿದ ಕೂಡಲೇ, ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂಬುದನ್ನು ನಾವು ಗಮನಿಸಬೇಕಾಗಿತ್ತು ಹಾಗೂ ನಮ್ಮ ರಕ್ಷಣೆಗೆ ಕ್ರಮಗಳನ್ನೂ ಕೈಗೊಳ್ಳಬೇಕಾಗಿತ್ತು. ಆದರೆ ನಾಯಕರು ತಾವೇ ಸ್ವತಃ ಓಡಿಹೋದರು."

ಪ್ಲೇಗು ರೋಗ ತಗ್ಗಿದೆ ಹಾಗೂ ಮನೆಗಳ ಶೋಧನೆಯನ್ನು ನಿಲ್ಲಿಸಲಾಗುವುದು ಎಂದು ಅಧಿಕೃತ ಸೂಚನೆ ಹೊರಡಿಸಿದ ನಂತರವೂ, ರ್‍ಯಾಂಡ್‌ನ ನಿರಂಕುಶ, ಮನಸ್ವೀ ಸ್ವರೂಪದ ಆಡಳಿತ ಮುಂದುವರೆಯಿತು. ಪ್ಲೇಗು ಪಿಡುಗಿನ ಆವೇಶ ಇಳಿದಿದ್ದರೂ, ಪ್ಲೇಗಿನ ಪ್ರಕರಣಗಳು ಇನ್ನೂ ಸಂಭವಿಸುತ್ತಿದ್ದವು. ಹೀಗಿದ್ದರೂ, ತಿಲಕರ ಆಸ್ಪತ್ರೆಯನ್ನೂ ಮುಚ್ಚುವಂತೆ ಆಜ್ಞಾಪಿಸಲಾಯಿತು! ಉನ್ನತ ಅಧಿಕಾರಿಗಳಿಗೆ ಮನವಿ ಮಾಡಿದ ನಂತರವೇ ಈ ಅವಿವೇಕದ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಯಿತು.

ಪೂನಾದಲ್ಲಿ ನಡೆದ ಘಟನೆಗಳ ಪ್ರತಿಧ್ವನಿ ಲಂಡನ್‌ನಲ್ಲೂ ಕೇಳಿಸಿತು. ಹಿಂದಿನ ಪ್ಲೇಗು ವಿರುದ್ಧದ ಕ್ರಮಗಳನ್ನು ಗಮನಿಸಿದ್ದ ಗೋಖಲೆಯವರು ವೆಲ್ಬಿ ಆಯೋಗದ ಮುಂದೆ ಸಾಕ್ಷ್ಯ ನೀಡಲು ಲಂಡನ್‌ಗೆ ಹೋಗಿದ್ದರು. ಪೂನಾದಲ್ಲಿದ್ದ ಅವರ ಅನೇಕ ಸ್ನೇಹಿತರು ಮತ್ತು ಪರಿಚಿತರು, ಬ್ರಿಟಿಷ್ ಸೈನಿಕರು ನಡೆಸಿದ "ಘೋರ ಅತ್ಯಾಚಾರಗಳ" ವೃತ್ತಾಂತಗಳನ್ನು ಅವರಿಗೆ ವರದಿಮಾಡಿ ಈ ವಿಷಯದಲ್ಲಿ ಕ್ರಮ ಕೈಗೊಳ್ಳುವಂತೆ ಕೋರಿದ್ದರು. ಪೂನಾದ ಪ್ರಜೆಗಳ ಮೇಲೆ ನಡೆಸಲಾದ ಕೆಲವು ಅತಿರೇಕಗಳನ್ನು ವಿವರಿಸಿ, ಗೋಖಲೆಯವರು 'ದಿ ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಗೆ ಪತ್ರವೊಂದನ್ನು ಬರೆದರು:

"ಪ್ಲೇಗು ಸಮಿತಿಯ ನಿಯಮಗಳನ್ನು ಧಿಕ್ಕರಿಸಿ, ಬ್ರಿಟಿಷ್ ಸೈನಿಕರು ಅಡಿಗೆ ಮನೆಗಳನ್ನೂ, ಪೂಜಾ ಕೋಣೆಗಳನ್ನೂ ಪ್ರವೇಶಿಸಿದ್ದಾರೆ; ಆಹಾರವನ್ನು ಮಲಿನ ಮಾಡಿ, ವಿಗ್ರಹಗಳ ಮೇಲೆ ಉಗಿದಿದ್ದಾರೆ. ಇಲ್ಲವೆ ಅವುಗಳನ್ನು ರಸ್ತೆಯ ಮೇಲೆ

ಎಸೆದಿದ್ದಾರೆ...... ಇದಕ್ಕಿಂತಲೂ ನೀಚ ಕೆಲಸ ಮಾಡಿದ್ದಾರೆ. ಪರೀಕ್ಷೆ ಮಾಡಲು ಮನೆಗಳಲ್ಲಿ ಸಾಕಷ್ಟು ಬೆಳಕಿಲ್ಲ ಎಂಬ ನೆಪದ ಮೇಲೆ ಹೆಂಗಸರನ್ನು ರಸ್ತೆಗಳಿಗೆ ಎಳೆದು ಅವರ ಬಟ್ಟೆಗಳನ್ನು ಕಳಚಿದ್ದಾರೆ. ನನಗೆ ಪತ್ರ ಬರೆದಿರುವವರು – ಅವರ ಮಾತುಗಳನ್ನು ನಾನು ಖಂಡಿತವಾಗಿಯೂ ನಂಬಬಲ್ಲೆ – ಇಬ್ಬರು ಹೆಂಗಸರ ಶೀಲಭಂಗ ಮಾಡಲಾಯಿತೆಂದೂ, ಈ ಪೈಕಿ ಒಬ್ಬಾಕೆ ಅವಮಾನದಿಂದ ಬದುಕುವುದರ ಬದಲಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ವರದಿಯಾಗಿರುವುದಾಗಿಯೂ ನನಗೆ ತಿಳಿಸಿದ್ದಾರೆ."

ವಿದೇಶಾಂಗ ಕಾರ್ಯದರ್ಶಿ ಈ ಆಪಾದನೆಗಳನ್ನು "ಕೀಡೆಣಿಸುವ ಒಂದು ಕಲ್ಪಿತ ಕಥೆ" ಎಂದು ರೋಷದಿಂದ ತಳ್ಳಿಹಾಕಿದರು. ಭಾರತೀಯ ರಾಷ್ಟ್ರೀಯತೆಯ ಶತ್ರು ಎಂದು ಕುಖ್ಯಾತನಾಗಿದ್ದ ಹಾಗೂ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯನಾಗಿದ್ದ ಮುಂಚಜ್ಜಿ ಭೌನಾಗರಿ ಗೋಖಲೆಯವರನ್ನು "ಕ್ಷುದ್ರ ಸುಳ್ಳುಗಾರ" ಎಂದು ಕರೆದ. ಆಪಾದನೆಗಳಿಗೆ ಆಧಾರವನ್ನೊದಗಿಸುವುದು ಗೋಖಲೆಯವರಿಗೆ ಅಸಾಧ್ಯವಾಯಿತು ಹಾಗೂ ಯಾರ ಮಾತುಗಳಲ್ಲಿ ಅವರು ಸಂಪೂರ್ಣ ವಿಶ್ವಾಸವನ್ನಿಟ್ಟಿದ್ದರೋ ಅವರೂ ಸಹ ಗೋಖಲೆಯವರನ್ನು ನಡುನೀರಿನಲ್ಲಿ ಕೈಬಿಟ್ಟರು. ಭಾರತಕ್ಕೆ ಮರಳಿದ ನಂತರ ಯಾರನ್ನು ಅನುದ್ದೇಶಪೂರ್ವಕವಾಗಿ ದೂಷಿಸಿದ್ದರೋ ಅವರ ಕ್ಷಮೆ ಕೇಳುವ ಹೊರತು ಗೋಖಲೆಯವರಿಗೆ ಅನ್ಯಮಾರ್ಗವಿರಲಿಲ್ಲ. ಸಂಭಾವಿತರೊಬ್ಬರಿಗೆ ಉಳಿದಿದ್ದ ಒಂದೇ ಮಾರ್ಗವನ್ನು ಅವರು ಅನುಸರಿಸಿದ್ದರಲ್ಲಿ ಅನುಮಾನವಿಲ್ಲದಿದ್ದರೂ, ಅವರು ಕ್ಷಮೆ ಕೋರಿಕೊಂಡ ಹೀನಾಯವಾದ ಮತ್ತು ಎಲ್ಲೆ ಮೀರಿದ ರೀತಿಯಿಂದಾಗಿ ಅವರ ಸ್ವಂತ ಸ್ನೇಹಿತರು ಮತ್ತು ಅಭಿಮಾನಿಗಳಿಗೂ ನೋವುಂಟಾಯಿತು. ಗೋಖಲೆಯವರ ಮುಖ್ಯ ವರದಿಗಾರರೆನಿಸಿಕೊಂಡಿದ್ದ ನಾಟು ಸೋದರರನ್ನು ಯಾವುದೋ ಕಂದಾಚಾರದ ನಿಯಮವೊಂದರ ಮೇರೆಗೆ ವಿಚಾರಣೆಯಿಲ್ಲದೆ ಎರಡು ವರ್ಷಗಳ ಕಾಲ ಬಂಧನದಲ್ಲಿಡಲಾಗಿತ್ತು.

ಈ ಮಧ್ಯೆ, ಪ್ಲೇಗು ಅತ್ಯಾಚಾರಗಳ ಬೆನ್ನಿಗೇ ರ್ಯಾಂಡ್ ಮತ್ತು ಲೆಫ್ಟಿನೆಂಟ್ ಅಮರ್ಸ್ಟ್‌ನ ಭಯಾನಕ ಕೊಲೆಯ ಘಟನೆ ನಡೆಯಿತು. ಪೂನಾದ ಗವರ್ನ್‌ಮೆಂಟ್ ಹೌಸ್‌ನಲ್ಲಿ ರಾಣಿಯ ವಜ್ರಮಹೋತ್ಸವ ಸಮಾರಂಭದ (ಜೂನ್ 22, 1897) ಪ್ರಯುಕ್ತ ನಡೆದ ಔತಣಕೂಟದ ನಂತರ ಹಿಂತಿರುಗುತ್ತಿದ್ದಾಗ ಇವರಿಬ್ಬರ ಕೊಲೆ ನಡೆಯಿತು. ರ್ಯಾಂಡ್ ಎಲ್ಲರ ಜಿಗುಪ್ಸೆಗೆ ಒಳಗಾಗಿದ್ದ ವ್ಯಕ್ತಿಯಾಗಿದ್ದರೂ ಅವನ ಮೇಲೆ ಈ ರೀತಿ ಸೇಡು ತೀರಿಸಿಕೊಳ್ಳಲಾಗುತ್ತದೆ ಎಂದು ಯಾರೂ ಊಹಿಸಲು ಸಾಧ್ಯವಿರಲಿಲ್ಲ. ಈ ಅಪರಾಧದಿಂದ ಜನರು ತಲ್ಲಣಗೊಂಡಿದ್ದರೂ ಸರ್ಕಾರ ತನ್ನ ವಿವೇಚನೆಯನ್ನೇ ಕಳೆದುಕೊಂಡಿತು. ನಿಷ್ಠಾವಂತ ಭಾರತೀಯರಾಗಿದ್ದ ಸರ್ ಕೊವಾಸ್‌ಜಿ ಜೆಹಾಂಗೀರರಿಗೂ ರ್ಯಾಂಡ್‌ನ ಅಂತಿಮಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಲಿಲ್ಲ. ಪೂನಾದಲ್ಲಿ ಪುಂಡು ದಂಡನೆಯ ಪೋಲೀಸರನ್ನು ತಕ್ಷಣ ನೇಮಿಸಲಾಯಿತು. ಕೊಲೆಗಾರನನ್ನು ಹಿಡಿದವರಿಗೆ 20,000 ರೂಪಾಯಿಗಳ ಬಹುಮಾನವನ್ನು ಪ್ರಕಟಿಸಲಾಯಿತು. ಹಾಗೂ ಜೊತೆಗಾರನೊಬ್ಬ ವಿಶ್ವಾಸದ್ರೋಹ ಮಾಡಿದ್ದರಿಂದ ದಾಮೋದರ್ ಚಾಫೇಕರನನ್ನು ಕೆಲವು ತಿಂಗಳಲ್ಲಿ ದಸ್ತಗಿರಿ ಮಾಡಿ ನಂತರ ಗಲ್ಲಿಗೇರಿಸಲಾಯಿತು.

ವಜ್ರಮಹೋತ್ಸವ ಸಮಾರಂಭದಲ್ಲಿ ಹಾಜರಿದ್ದ ತಿಲಕರಿಗೆ ಕೊಲೆಯ ಬಗ್ಗೆ ಹಾಗೂ ಕೊಲೆಯ ನಂತರ ಉಂಟಾದ ಪರಿಣಾಮದ ಬಗ್ಗೆ ದಿಗ್ಭ್ರಮೆಯಾಯಿತು. ಅವರು ಈ ಬಗ್ಗೆ ಹೀಗೆ ಬರೆದರು: "ದುರಭಿಮಾನಿಯೊಬ್ಬ ಘೀಕರ ಕೃತ್ಯವನ್ನು ಮಾಡಬೇಕೆಂಬ ವಿಚಾರವನ್ನು ತನ್ನ ತಲೆಯಲ್ಲಿ ತುಂಬಿಕೊಂಡ ಮಾತ್ರಕ್ಕೇ – ಈ ಕೃತ್ಯದ ಬಗ್ಗೆ ನಾವೆಲ್ಲರೂ ಸಮಾನವಾಗಿ ವ್ಯಥೆಪಡುತ್ತೇವೆ – ವ್ಯಕ್ತಿಗಳು ಮಾಡಿದ ಎಲ್ಲ ಒಳ್ಳೆಯ ಕೆಲಸವನ್ನೂ, ಒಂದು ಕೋಮಿನ ಒಟ್ಟಾರೆ ಸದ್ಭಾವನೆ ಮತ್ತು ಸಹನೆಯನ್ನು ಕಡೆಗಣಿಸುವುದು ಬಹಳ ಮೂರ್ಖತನವಾಗಿದೆ". ಇಡೀ ಬ್ರಾಹ್ಮಣ ಸಮುದಾಯದ ಮೇಲೆ ದೋಷಾರೋಪಣೆ ಮಾಡಲು ಮತ್ತು ಬ್ರಿಟಿಷ್ ಸರ್ಕಾರವನ್ನು ಉರುಳಿಸುವ ಸಂಚನ್ನು ಅದು ಮಾಡುತ್ತಿದೆ ಎಂದು ಸೂಚಿಸಲು ಆಂಗ್ಲೋ-ಇಂಡಿಯನ್ ನಿಯತಕಾಲಿಕೆಗಳು ಮಾಡಿದ ಪ್ರಯತ್ನಗಳ ಬಗ್ಗೆ ಅವರು ವಿಶೇಷವಾಗಿ ಉದ್ವಿಗ್ನಗೊಂಡಿದ್ದರು. ಪೂನಾದ ಬ್ರಾಹ್ಮಣರ ವಿರುದ್ಧ ಎದ್ದ ಆಂಗ್ಲೋ-ಇಂಡಿಯನ್ ಕೂಗಿಗೆ ಬ್ರಿಟಿಷ್ ವೃತ್ತಪತ್ರಿಕೆಗಳೂ ಧ್ವನಿಗೂಡಿಸಿದವು. 'ಡೈಲಿ ನ್ಯೂಸ್' ಹೀಗೆ ಟೀಕೆ ಮಾಡಿತು.

"ಪೂನಾ ಕೊಲೆಯ ಹಿಂದೆ ಯಾವ ಧರ್ಮಾಂಧತೆಯೂ ಇಲ್ಲ. ಪೂನಾ ಇಡೀ ದೇಶದಲ್ಲಿ ನಡೆಯುತ್ತಿರುವ ರಾಜದ್ರೋಹ ಮತ್ತು ದಂಗೆಯ ಸಂಚಿನ ಕೇಂದ್ರ. ಪೂನಾ ಬ್ರಾಹ್ಮಣರು, ಅದರಲ್ಲೂ ಈ ಪೈಕಿ ಸುಶಿಕ್ಷಿತರಾದವರು ಇಡೀ ಭಾರತದಲ್ಲಿ ಕುಖ್ಯಾತರು. ಅವರ ವೃತ್ತಪತ್ರಿಕೆಗಳಿಂದ, ಅವರ ರಹಸ್ಯ ದೂತರು ಮತ್ತು ಸಂಘಗಳಿಂದ ಬ್ರಿಟಿಷ್ ಅಧಿಕಾರದ ವಿರುದ್ಧ ಬಂಡಾಯವನ್ನೆಬ್ಬಿಸಲು ಅವರು ಪ್ರಯತ್ನಿಸುತ್ತಿದ್ದಾರೆ."

ಪೂನಾದ ಕಲೆಕ್ಟರನು ಪ್ರಮುಖ ನಾಗರಿಕರ ಸಭೆಯೊಂದಕ್ಕೆ ಅವರು ಅಪರಾಧಕ್ಕೆ ಜವಾಬ್ದಾರರೇನೋ ಎನ್ನುವ ಹಾಗೆ ಹಾಕಿದ ಬೆದರಿಕೆಗಳು ಸರ್ಕಾರದ ನಿಲುವನ್ನು ಪ್ರತಿಬಿಂಬಿಸಿದವು. ಆತ ಹೀಗೆ ಸಭೆಗೆ ಎಚ್ಚರಿಕೆ ನೀಡಿದ: "ನಿಮ್ಮ ಪೈಕಿ ಸರ್ಕಾರಕ್ಕೆ ಅನಿಷ್ಟ, ರಾಜದ್ರೋಹ, ಒಳಸಂಚು ಮತ್ತು ಕೊಲೆಯ ಅಪರಾಧಗಳು ತಡೆಯಿಲ್ಲದೆ ಮುಂದುವರೆದರೆ, ನಿಮ್ಮಿಂದ ತಡೆಯುವುದಕ್ಕೆ ಅಸಾಧ್ಯ ಎಂದು ಕಂಡುಬಂದರೆ, ಅವುಗಳನ್ನು ತಡೆಯಲು ಸರ್ಕಾರ ಅನಿವಾರ್ಯವಾಗಿ ಉಗ್ರ ಕ್ರಮಗಳನ್ನು ಕೈಗೊಳ್ಳುವುದು." ಬ್ರಾಹ್ಮಣರಿಗೆ ಗಾಳ ಹಾಕುವ ಆಟ ಮುಂದುವರೆಯಿತು ಹಾಗೂ ತಿಲಕರನ್ನು ವೈಯಕ್ತಿಕವಾಗಿ ಕೊಲೆಯ ಅಪರಾಧದಲ್ಲಿ ಸಿಕ್ಕಿಸುವ ಪ್ರಯತ್ನವನ್ನೂ ಮಾಡಲಾಯಿತು. ತಿಲಕರ ಲೇಖನಗಳು ಮತ್ತು ಭಾಷಣಗಳನ್ನು ರಾಜದ್ರೋಹಕರ ಎಂದು ಸರ್ಕಾರ ಪರಿಗಣಿಸುವುದಿಲ್ಲವೇ ಎಂದು ಭೌನಾಗರಿ ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆ ಕೇಳಿದ. ಇದು ಕಾನೂನಿನ ವಿಷಯವಾಗಿದ್ದು, ಹಾಗೆ ಸರ್ಕಾರ ಈ ಬಗ್ಗೆ ಅಂತಿಮ ತೀರ್ಮಾನಕ್ಕೆ ಬಂದಿಲ್ಲ ಎಂಬ ಗಮನಾರ್ಹ ಉತ್ತರವನ್ನೂ ನೀಡಲಾಯಿತು.

ತಿಲಕರು 'ಕೇಸರಿ'ಯಲ್ಲಿ ಎರಡು ಅಗ್ರಲೇಖನಗಳನ್ನು ಬರೆದು ಈ ಮಿಥ್ಯಾರೋಪಗಳು ಮತ್ತು ಬೆದರಿಕೆಗಳಿಗೆ ಚುಚ್ಚು ಮಾತಿನ ಉತ್ತರ ಕೊಟ್ಟರು. ಆ ಲೇಖನಗಳ ಶೀರ್ಷಿಕೆಗಳೇ ಬಹಳ ವಿಷಯ ತಿಳಿಸುವಂತಿದ್ದವು: "ಸರ್ಕಾರ ಬುದ್ಧಿ ಕಳೆದುಕೊಂಡಿದೆಯೇ?" ಮತ್ತು "ಆಡಳಿತ ನಡೆಸುವುದೆಂದರೆ ಸೇಡು ತೀರಿಸಿಕೊಳ್ಳುವುದಲ್ಲ." ಆಗಿನ ಸಂಶಯ ಮತ್ತು ಗಾಬರಿಯ ವಾತಾವರಣದಲ್ಲಿ ಇಷ್ಟು ನಿರ್ದಾಕ್ಷಿಣ್ಯವಾಗಿ ಬರೆಯುವಾರ

ದೆಂದು ಸ್ನೇಹಿತರು ಪ್ರತಿಭಟಿಸಿದಾಗ, ತಿಲಕರು ಅವರಿಗೆ ಹೀಗೆ ಹೇಳಿದರು."ನಾನು ಕಟುವಾದ ಭಾಷೆ ಬರೆಯುತ್ತೇನೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅಧಿಕಾರಿಗಳು ನಡೆಸುತ್ತಿರುವ ಅನ್ಯಾಯದ ಬಗೆ ನನ್ನ ಹೃದಯ ಉದ್ವಿಗ್ನತೆಯಿಂದ ತುಂಬಿದೆ. ನನ್ನಿಂದ ಬರುವ ಮಾತುಗಳು ನನ್ನೊಳಗಿನ ಭಾವನೆಗಳಿಂದ ಸಹಜವಾಗಿ ಉಕ್ಕಿಹೊರಹೊಮ್ಮುವ ಮಾತುಗಳಾಗಿವೆ. ನಾನು ಎಷ್ಟೇ ಕಟುವಾದ ಭಾಷೆಯನ್ನೇ ಬಳಸಿರಲಿ. ಸರ್ಕಾರದ ಕ್ರಮಗಳನ್ನು ಟೀಕಿಸುವಲ್ಲಿ ನಾನು ಕಾನೂನಿನ ಮಿತಿಗಳಲ್ಲಿಯೇ ಇದ್ದೇನೆ ಎಂಬುದು ನನಗೆ ಮನದಟ್ಟಾಗಿದೆ."

ತಿಲಕರು ಎಷ್ಟು ತಪ್ಪು ತಿಳಿದುಕೊಂಡಿದ್ದರೆಂಬುದು ನಂತರ ಸ್ವತಃ ಅವರಿಗೇ ತಿಳಿಯಿತು. ಅದನ್ನು ಮುಂದಿನ ಅಧ್ಯಾಯದಲ್ಲಿ ಕಾಣಬಹುದು.

ಅಧ್ಯಾಯ 8

ರಾಜದ್ರೋಹದ ಅಪರಾಧಿ

ರ್‍ಯಾಂಡ್ ಮತ್ತು ಆಮರ್‍ಸ್ಟ್ ಜೂನ್ 22. 1897ರಂದು ಪೂನಾದಲ್ಲಿ ಕೊಲೆಯಾದರು. ತಿಲಕರನ್ನು ಜುಲೈ 27ರಂದು ಬಾಂಬೆಯಲ್ಲಿ ದಸ್ತಗಿರಿ ಮಾಡಲಾಯಿತು. ಈ ಎರಡೂ ಘಟನೆಗಳ ನಡುವೆ ತೋರಿಕೆಗೆ ಏನೂ ಸಂಬಂಧವಿರಲಿಲ್ಲ. 'ಕೇಸರಿ'ಯಲ್ಲಿ ಪ್ರಕಟವಾದ ಒಂದು ಕವನ ಮತ್ತು ಒಂದು ಲೇಖನದ ಆಧಾರದ ಮೇಲೆ ರಾಜದ್ರೋಹದ ಆಪಾದನೆಯನ್ನು ತಿಲಕರ ಮೇಲೆ ಹೊರಿಸಲಾಗಿತ್ತು. ಕೊಲೆಗಳ ನಂತರ ಅಧಿಕಾರಿಗಳಲ್ಲಿ ಉಂಟಾದ ಗಾಬರಿ ಮತ್ತು ಆಂಗ್ಲೊ-ಇಂಡಿಯನ್ ನಿಯತಕಾಲಿಕೆಗಳು ನಡೆಸಿದ ನೀಚ ಪ್ರಚಾರ ತಿಲಕರನ್ನು ದಸ್ತಗಿರಿ ಮಾಡುವುದಕ್ಕೆ ಸರ್ಕಾರವನ್ನು ಪ್ರಚೋದಿಸಿತು. ತಿಲಕರ ಲೇಖನಗಳಿಂದ ಕೆಲವು ಭಾಗಗಳನ್ನು ತಪ್ಪು ಅಭಿಪ್ರಾಯ ಮೂಡುವಂತೆ ಬದಲಾಯಿಸಿ, ವಿರೂಪಗೊಳಿಸಿ ಪ್ರಕಟಿಸಿದ 'ದಿ ಟೈಂಸ್ ಆಫ್ ಇಂಡಿಯಾ' ಇಂತಹ ನಿಯತಕಾಲಿಕೆಗಳಲ್ಲಿ ಪ್ರಮುಖವಾಗಿತ್ತು. "ಪ್ಲೇಗು ಅಧಿಕಾರಿಗಳ ಸ್ವೇಚ್ಛಾಪ್ರವೃತ್ತಿಯ ವಿರುದ್ಧ ಕೇವಲ ಬೊಬ್ಬೆ ಹಾಕುವುದರ ನಿರರ್ಥಕತೆಯನ್ನು" ಮನಗಾಣಬೇಕೆಂದು ತಿಲಕರು ಮಾಡಿದ ಮನವಿಯ ಬಗ್ಗೆ ಆ ಪತ್ರಿಕೆ ಪ್ರಸ್ತಾಪಿಸಿ, ಹೀಗೆ ಬರೆಯಿತು:

"ಶ್ರೀ ರ್‍ಯಾಂಡ್ ಮತ್ತು ಆತನ ಸಹಾಯಕರ ವಿರುದ್ಧ 'ಕೇವಲ ಬೊಬ್ಬೆ ಹಾಕುವುದರ ನಿರರ್ಥಕತೆಯ 'ಬಗ್ಗೆ ಶ್ರೀ ತಿಲಕ್ ಮಾಡಿದ ಪ್ರವಚನದ ಬಗ್ಗೆ ನ್ಯಾಯದರ್ಶಿಗಳ ಮಂಡಳಿ ಹೊಂದಬಹುದಾದ ಅಭಿಪ್ರಾಯದ ಬಗ್ಗೆ ನಾವು ಯಾವ ಸಲಹೆಗಳನ್ನೂ ಮುಂದಿಡದೆ ಹೋದರೂ. ಕೇವಲ ಬೊಬ್ಬೆ ಹಾಕುವುದರ ಸಾಮರ್ಥ್ಯದ ಬಗ್ಗೆ ಗೌರವಾನ್ವಿತ ಸದಸ್ಯರು ಹೊಂದಿದ್ದ ಅಪನಂಬಿಕೆಯನ್ನು ಪಿಸ್ತೂಲು ಹಿಡಿದ ಒಬ್ಬ ವ್ಯಕ್ತಿ ತುಂಬು ಮನಸ್ಸಿನಿಂದ ಒಪ್ಪಿಕೊಂಡಂತೆ ತೋರುತ್ತದೆ.

ಅಪನಂಬಿಕೆಯ ಈ ಕೂಗು ತುತ್ತತುದಿಗೇರಿದಂತೆ. ತಿಲಕರು 'ದಿ ಟೈಂಸ್ ಆಫ್ ಇಂಡಿಯಾ'ಗೆ ಪ್ರತಿಭಟನೆಯ ಪತ್ರವೊಂದನ್ನು ಬರೆದರು:

"ಪೂನಾದಲ್ಲಿ ಸಂಭವಿಸಿದ, ದಿಗ್ಭ್ರಮೆ ಉಂಟುಮಾಡುವ ದುರಂತ ನಿಮ್ಮ ಯುಕ್ತಾಯುಕ್ತ ಪರಿಜ್ಞಾನವನ್ನು ಮಸುಕುಗೊಳಿಸಿರಬಹುದು. ಪೂನಾದಲ್ಲಿ ಪ್ಲೇಗು ಕಾರ್ಯಾಚರಣೆಗಳು ನಡೆಯುತ್ತಿದ್ದ ಸಮಯದಲ್ಲಿ ಒಬ್ಬ ಪತ್ರಿಕೋದ್ಯಮಿಯಾಗಿ ಹಾಗೂ ಒಬ್ಬ ಸಂಭಾವಿತನಾಗಿ ನಾನು ನಡೆದುಕೊಂಡಿದ್ದನ್ನು ನೀವು ಸಂಪೂರ್ಣವಾಗಿ ತಪ್ಪಾಗಿ ವರದಿ ಮಾಡಿದ್ದೀರಿ. ನಾನಾಗಲಿ ಅಥವಾ ನನ್ನ ಪತ್ರಿಕೆಯಾಗಲಿ ಜನರ ಅಸಮಾಧಾನವನ್ನು ಕೆರಳಿಸಲು ಏನಾದರೂ ಮಾಡಿದೆ ಎಂದು ನಿರೂಪಿಸುವ ಮೂಲಕ ನೀವು ನನಗೆ ತೀವ್ರ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳುವ ಹಕ್ಕು ನನಗಿದೆ ಎಂದು ನಾನು ಭಾವಿಸುತ್ತೇನೆ. ನಿಮ್ಮಂತಲ್ಲದೆ. ವೈಯಕ್ತಿಕ ತಿಳಿವಳಿಕೆಯಿಂದ ನಿಜ. ಸಾಧಾರ ಎಂದು ನಾನು ಮನದಟ್ಟು ಮಾಡಿಕೊಂಡಿದ್ದ ದೂರುಗಳು ಮತ್ತು ಕುಂದುಕೊರತೆಗಳ ಬಗ್ಗೆ ನಾನು

ಕಣ್ಣು ಮುಚ್ಚುವುದು ಸಾಧ್ಯವಾಗಲಿಲ್ಲ. ನಿಮ್ಮಂತಹ ಆಂಗ್ಲೋ -ಇಂಡಿಯನ್ ನಿಯತ ಕಾಲಿಕೆಗಳು ವಿಷಯದ ಬಗ್ಗೆ ಸರಿಯಾದ ಅಭಿಪ್ರಾಯವನ್ನು ಹೊಂದುವಂತೆ ಮಾಡುವುದು ಸುಲಭಸಾಧ್ಯವೇನಲ್ಲ. ಇಂತಹ ಸಮಯದಲ್ಲಿ ವ್ಯಕ್ತಿಗಳು, ಕೋಮುಗಳು ಮತ್ತು ಸಂಸ್ಥೆ ಗಳ ವಿರುದ್ಧ ಹಿಂದೆಮುಂದೆ ಯೋಚಿಸದೆ ಆಪಾದನೆಗಳನ್ನೂ ಮಾಡುವಲ್ಲಿ ನೀವು 'ಲಂಡನ್ ಟೈಮ್ಸ್'ನ ಹೆಜ್ಜೆಗಳನ್ನು ಅನುಸರಿಸಲು ಇಚ್ಛಿಸಿದ್ದೀರಿ ಎಂದು ತೋರುತ್ತದೆ."

ಫೋನಿಕ್ಸ್ ಕೊಲೆಗಳಲ್ಲಿ ಭಾಗಿಯಾಗಿದ್ದರು ಎಂಬ ಆಪಾದನೆಯ ಮೇಲೆ ಐರಿಶ್ ದೇಶಪ್ರೇಮಿ ಪಾರ್ನೆಲ್ ಅವರನ್ನು ಬ್ರಿಟಿಷ್ ಪತ್ರಿಕೆಗಳು ಮತ್ತು ಕೆಲವು ಪಾರ್ಲಿಮೆಂಟ್ ಸದಸ್ಯರು ಬೆನ್ನು ಹತ್ತಿದ್ದರ ಬಗ್ಗ ತಿಲಕರು ಕೊನೆಯ ವಾಕ್ಯಗಳಲ್ಲಿ ಪ್ರಸ್ತಾಪಿಸಿದ್ದರು. ತಮ್ಮ ಬಗ್ಗೆ ಅನ್ಯಾಯವಾಗಿ ಬರೆದ ಪತ್ರಿಕೆಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊ ಳ್ಳಲು ತಿಲಕರು ನಿರ್ಧರಿಸಿದರು ಹಾಗೂ ಅದಕ್ಕಾಗಿ ಅವರು ಮುಂಬಯಿಗೆ ಜುಲೈ 27ರಂದು ಹೋದರು. ಆದರೆ ಅಂದು ರಾತ್ರಿ ಅವರನ್ನು ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ 124-ಎ ಮೇರೆಗೆ ದಸ್ತಗಿರಿ ಮಾಡಲಾಯಿತು. ರ್‍ಯಾಂಡ್‌ನ ಕೊಲೆ ಮತ್ತು ತಿಲಕರ ನಡುವೆ ಯಾವುದೇ ಸಂಬಂಧವನ್ನು ಪತ್ತೆ ಮಾಡಲು ಸಿ.ಐ.ಡಿ. ನಡೆಸಿದ ಪ್ರಯತ್ನಗಳು ವಿಫಲ ವಾದ್ದರಿಂದ, ರಾಜದ್ರೋಹದ ಸೆಕ್ಷನ್‌ನ ಮೊರೆ ಹೋಗಬೇಕಾಯಿತು.

1897ರಲ್ಲಿ ರಾಜಕೀಯ ಚಳವಳಿ ಇನ್ನೂ ಶೈಶವಾವಸ್ಥೆಯಲ್ಲಿತ್ತು. ರಾಜದ್ರೋ ಹದ ಆಪಾದನೆಯ ಮೇಲೆ ವಿಚಾರಣೆ ಎನ್ನುವುದು ತಿಳಿದೇ ಇರಲಿಲ್ಲ. ರಾಜದ್ರೋಹ ಎಂಬ ಪದವೇ ಅನೇಕರಲ್ಲಿ ಭೀತಿಯನ್ನುಂಟು ಮಾಡಿತು ಹಾಗೂ ತಿಲಕರ ದಸ್ತಗಿರಿಯ ನಂತರ ಅವರ ಸ್ನೇಹಿತರು ಮತ್ತು ಪರಿಚಿತರಲ್ಲಿ ಅನೇಕರು ಎಲ್ಲರಿಗೂ ಕಾಣುವ ಹಾಗೆ ಅವರಿಂದ ದೂರ ಸರಿದರು. ತಿಲಕರ ಹಣಕಾಸಿನ ಸ್ಥಿತಿ ಹೇಳಿಕೊಳ್ಳುವಂತಿರಲಿಲ್ಲವಾದು ದರಿಂದ ನ್ಯಾಯಾಲಯದಲ್ಲಿ ಹೋರಾಡಲು ಬೇಕಾದ ಹಣವನ್ನು ಹೊಂಚಿಕೊಳ್ಳುವ ಪ್ರಶ್ನೆಯೂ ಸಾಕಷ್ಟು ತೊಂದರೆಯನ್ನೊಡ್ಡಿತು. ಆದರೆ ಜನಸಾಮಾನ್ಯರು ತಿಲಕರ ಬೆಂಬ ಲಕ್ಕು ಮುಂದೆ ಬಂದರು. ರಕ್ಷಣೆಯ ನಿಧಿಯೊಂದನ್ನು ಸ್ವಯಂ-ಪ್ರೇರಣೆಯಿಂದ ಪ್ರಾರಂಭಿ ಸಲಾಯಿತು. ನಿಧಿಯನ್ನು ಸಂಗ್ರಹಿಸುವ ಕಾರ್ಯದಲ್ಲಿ ಬಂಗಾಲ ಪ್ರಧಾನ ಪಾತ್ರ ವಹಿ ಸಿತ್ತು ಹಾಗೂ ಅಲ್ಲಿ 50,000 ರೂಪಾಯಿಗಳ ನಿಧಿಯನ್ನು ಸಂಗ್ರಹಿಸಲಾಯಿತು. ಬಾಂಬೆ ಶ್ರೇಷ್ಠ ನ್ಯಾಯಾಲಯದಲ್ಲಿ ತಿಲಕರ ಪರವಾಗಿ ವಾದಿಸಲು ಇಬ್ಬರು ಪ್ರಮುಖ ಬ್ಯಾರಿಸ್ಟರ್‌ಗಳನ್ನೂ ಸಹ ಬಂಗಾಲ ಕಳಿಸಿತು.

ಜಾಮೀನು ಪಡೆಯಲು ಮೂರು ಸಲ ನಡೆಸಿದ ಪ್ರಯತ್ನಗಳು ವಿಫಲವಾದ ನಂತರ, ಆಗಸ್ಟ್ 4ರಂದು ನ್ಯಾಯಮೂರ್ತಿ ಬದ್ರುದ್ದೀನ್ ತ್ಯಾಬ್ಜಿ ತಿಲಕರಿಗೆ ಜಾಮೀನು ನೀಡಿದರು. ಪ್ರಕರಣ ಸೆಪ್ಟೆಂಬರ್ 8ರಂದು ನ್ಯಾಯಮೂರ್ತಿ ಸ್ಟ್ರಾಚಿಯ ಮುಂದೆ ಸೆಶನ್ಸ್ ನ್ಯಾಯಾಲಯದಲ್ಲಿ ಬಂತು. ಆರು ಯುರೋಪಿಯನ್ನರು ಮತ್ತು ಮೂವರು ಭಾರತೀಯರಿದ್ದ ನ್ಯಾಯದರ್ಶಿಗಳ ಮಂಡಳಿಯನ್ನು ರಚಿಸಲಾಯಿತು. ಉದ್ವೇಗದ ವಾತಾವರಣದಲ್ಲಿ ಅಡ್ವೊಕೇಟ್ ಜನರಲ್ ಫಿರ್ಯಾದಿಯ ಪರವಾಗಿ ಪ್ರಕರಣವನ್ನು ಪ್ರಾರಂಭಿಸಿದರು "ಅಸಮಾಧಾನದ ಭಾವನೆಗಳನ್ನು ಕೆರಳಿಸುವುದು" ಎಂಬುದು ಸೆಕ್ಷನ್

124-ಎ-ನ ಮುಖ್ಯ ಪದಗಳಾಗಿದ್ದವು ಹಾಗೂ 'ಅಸಮಾಧಾನ' ಎಂಬ ಪದದ ಅರ್ಥ ಮತ್ತು ಒಳಾರ್ಥದ ಮೇಲೆ ಇಡೀ ಪ್ರಕರಣ ಅವಲಂಬಿಸಿತ್ತು.

ಬ್ರಿಟಿಷ್ ಸರ್ಕಾರದ ಬಗ್ಗೆ ಅಸಮಾಧಾನವನ್ನು ಕೆರಳಿಸುವುದು ತಿಲಕರ ನಿಜವಾದ ಉದ್ದೇಶವಾಗಿತ್ತು ಹಾಗೂ ಆಪಾದನೆಯ ವಸ್ತುವಾಗಿರುವ ಲೇಖನಗಳ ಮೂಲಕ ಅದನ್ನು ಉರುಳಿಸುವ ಉದ್ದೇಶ ಹೊಂದಲಾಗಿತ್ತು ಎಂಬುದು ಅಡ್ವೊಕೇಟ್- ಜನರಲ್‌ನ ವಾದವಾಗಿತ್ತು. ಆದರೆ ಪ್ರತಿವಾದಿಯ ವಕೀಲರು ಹೀಗೆ ವಾದಿಸಿದರು:

"ರ್‍ಯಾಂಡ್‌ನ ಕೊಲೆಯಾಗದಿದ್ದರೆ, ತಿಲಕರನ್ನು ನ್ಯಾಯಾಲಯಕ್ಕೆ ಎಳೆಯುತ್ತಿರಲಿಲ್ಲ. ತಿಲಕರ ಅಪರಾಧ ಎಂದು ಹೇಳಲಾಗಿರುವ ವಸ್ತು ಪದ್ಯಗಳ ರೂಪದಲ್ಲಿದೆ. ಛಂದೋಬದ್ಧವಾದ ರಚನೆಯನ್ನು ಕಟ್ಟುನಿಟ್ಟಾದ ಕಾನೂನಿನ, ನಿಷ್ಕೃಷ್ಟ ಮತ್ತು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸುವುದು ಸಾಧ್ಯವಿಲ್ಲ. ಶಿವಾಜಿ ಉತ್ಸವ ಸ್ಕಾಟ್ಲೆಂಡಿನ ರಾಬರ್ಟ್ ಬ್ರೂಸ್ ಮತ್ತು ವಿಲಿಯಂ ವಾಲ್ಲೇಸರ ಉತ್ಸವದಂತೆಯೇ ಇದೆ. ಅಂತಹ ರಾಷ್ಟ್ರೀಯ ಸಮಾರಂಭಗಳಲ್ಲಿ ಉತ್ಸಾಹದಿಂದ ತುಂಬಿದ ಜನರು ಹದ್ದು ಮೀರಿದ, ಅತಿಶಯೋಕ್ತಿಯ ಮತ್ತು ಅಲಂಕಾರಿಕ ಭಾಷೆಯನ್ನು ಬಳಸುತ್ತಾರೆ. ರ್‍ಯಾಂಡ್‌ನ ಕೊಲೆಯಾಗುವುದಕ್ಕೆ ಬಹಳ ಮೊದಲೇ ಅಫ್‌ಜಲ್‌ಖಾನ್‌ನ ಕೊಲೆಯ ಬಗ್ಗೆ ವಿವಾದವಿತ್ತು ಹಾಗೂ ಊಹೆಯನ್ನು ಎಷ್ಟರ ಮಟ್ಟಿಗೆ ಹರಿಬಿಟ್ಟರೂ ಎರಡು ಕೊಲೆಗಳ ನಡುವೆ ಸಂಬಂಧ ಕಲ್ಪಿಸುವುದು ಸಾಧ್ಯವಿಲ್ಲ.ಕೊಲೆಗೆ ನೆರವಾದ ಅಪರಾಧವನ್ನು ತಿಲಕರು ಮಾಡಿದ್ದಾರೆ ಎಂಬ ಬಗ್ಗೆ ಸರ್ಕಾರ ನಿಜವಾಗಿ ನಂಬಿದ್ದರೆ, ಅವರ ಮೇಲೆ ಈ ಅಪರಾಧವನ್ನು ಬಹಿರಂಗವಾಗಿ ಹೊರಿಸಬಹುದಿತ್ತು. ಅವರ ಮೇಲೆ ಈ ಆಪಾದನೆಯನ್ನು ಮಾಡಿಲ್ಲ; ಆದರೆ ಸೆಕ್ಷನ್ 124-ಎ ಮೇರೆಗೆ ಕಾನೂನು ಕ್ರಮ ಜರುಗಿಸಲಾಗಿದೆ ಎಂಬ ಅಂಶವೇ ಸರ್ಕಾರದ ವಾದದ ದೌರ್ಬಲ್ಯವನ್ನು ತೋರಿಸುತ್ತದೆ."

ಸೆಕ್ಷನ್ 124-ಎ ಅನ್ನು 1870ರಲ್ಲಿ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಸೇರಿಸಲಾಯಿತು. ಕಲ್ಕತ್ತ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಸರ್ ರೋಮರ್ ಪೆಥೆರಾಮ್ ಬಂಗಬಾಸಿ ಪ್ರಕರಣದಲ್ಲಿ ಈ ಸೆಕ್ಷನ್‌ನ ಬಗ್ಗೆ ಪ್ರಥಮ ವ್ಯಾಖ್ಯೆಯನ್ನು ನೀಡಿದರು. ನ್ಯಾಯಾಧೀಶ ಸ್ಟ್ರಾಚಿ ಆ ವ್ಯಾಖ್ಯೆಯನ್ನೇ ಅನುಸರಿಸಿದಂತೆ ತೋರುತ್ತದೆ. ಅತ ಅಸಮಾಧಾನ ಎಂದರೆ ಸಮಾಧಾನ ಇಲ್ಲದಿರುವುದು ಎಂಬ ಸರಳ ಅರ್ಥ ಎಂದು ಹೇಳಿದರು. ನ್ಯಾಯಾಧೀಶರು ಹೀಗೆ ತಮ್ಮ ಅಭಿಪ್ರಾಯವನ್ನು ಮುಂದುವರಿಸಿದರು:

"ಸರ್ಕಾರಕ್ಕೆ ಹಗೆತನವನ್ನು ಸೂಚಿಸುವುದೆಲ್ಲವೂ ಅಸಮಾಧಾನ ಎಂದರ್ಥ. ಅಸಮಾಧಾನ ಎಂದರೆ ಕಾನೂನಿನ ಅರ್ಥ ಅದೇ. ಒಬ್ಬ ಮನುಷ್ಯ ಅಸಮಾಧಾನವನ್ನು ಕೆರಳಿಸಬಾರದು ಅಥವಾ ಕೆರಳಿಸಲು ಪ್ರಯತ್ನಿಸಬಾರದು: ಸರ್ಕಾರದ ಬಗ್ಗೆ ಯಾವುದೇ ರೀತಿ ಶತ್ರುತ್ವ ಭಾವನೆ ಇತರರಲ್ಲಿ ಉಂಟಾಗುವಂತೆ ಮಾಡಬಾರದು ಅಥವಾ ಉಂಟಾಗುವಂತೆ ಪ್ರಯತ್ನಿಸಬಾರದು: ಸಣ್ಣದಾಗಲೀ, ದೊಡ್ಡದಾಗಲೀ ಅಸಮಾಧಾನದ ಭಾವನೆಗಳನ್ನು ಒಬ್ಬ ಮನುಷ್ಯ ಕೆರಳಿಸಿದರೆ ಅಥವಾ ಕೆರಳಿಸಲು ಪ್ರಯತ್ನಿಸಿದರೆ, ಈ ಸೆಕ್ಷನ್‌ನ ಮೇರೆಗೆ ಅವನು ಅಪರಾಧಿಯಾಗುತ್ತಾನೆ. ಈಗ ಪರಿಶೀಲಿಸಲಾಗುತ್ತಿರುವ ಪ್ರಕರಣ ಅಸಮಾಧಾನವನ್ನು ಕೆರಳಿಸಿದೆಯೇ ಎಂಬುದು ಸಂಪೂರ್ಣವಾಗಿ ಅಪ್ರಕೃತ."

ವಿಚಾರಣೆಯ ಐದನೆಯ ದಿನ (ಸೆಪ್ಟಂಬರ್ 14) ನ್ಯಾಯಾಧೀಶ ಸ್ಟ್ರಾಚಿ ಪ್ರಕರಣವನ್ನು ನ್ಯಾಯದರ್ಶಿಗಳ ಮಂಡಳಿಗೆ ಒಪ್ಪಿಸಿದ ಹಾಗೂ ಮಂಡಳಿ ಆರರ ಬಹುಮತದಿಂದ ಆಪಾದಿತ ಅಪರಾಧಿ ಎಂಬ ತೀರ್ಪನ್ನು ನೀಡಿತು. ನ್ಯಾಯಾಧೀಶ ಆ ತೀರ್ಪನ್ನು ಅಂಗೀಕರಿಸಿ ತಿಲಕರಿಗೆ ಹದಿನೆಂಟು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದ.

ದೇಶದಾದ್ಯಂತ ಈ ಸುದ್ದಿ ದಿಗ್ಭ್ರಮೆಯನ್ನೂ, ನೋವನ್ನೂ ಉಂಟು ಮಾಡಿತು. ವಿಚಾರಣೆಯನ್ನು ದೇಶ ಕಾತುರದಿಂದ ಗಮನಿಸುತ್ತಿತ್ತು. ಕೊನೆಯ ದಿನ ಸಂಜೆ ತೀರ್ಪು ಪ್ರಕಟವಾಗುವುದು ಎಂಬುದು ತಿಳಿದಾಗ ಅಂದು ಜನರ ಭಾರಿ ಗುಂಪುಗಳು ವೃತ್ತಪತ್ರಿಕೆಗಳು ಮತ್ತು ಟೆಲಿಗ್ರಾಫ್ ಕಚೇರಿಗಳನ್ನು ಮುತ್ತಿದವು. ತಿಲಕರು ಅಪರಾಧಿ ಎಂದು ತೀರ್ಮಾನವಾದ ಬಗ್ಗೆ ದುಃಖದಿಂದ ಸಿಟ್ಟಿನವರೆಗೆ ಅನೇಕ ರೀತಿಯಲ್ಲಿ ಸಾರ್ವಜನಿಕ ಪ್ರತಿಕ್ರಿಯೆ ಉಂಟಾಯಿತು. ಆಂಗ್ಲೊ-ಇಂಡಿಯನ್ ಮತ್ತು ಅಧಿಕೃತ ವೃತ್ತಗಳು ಮಾತ್ರ ಸುದ್ದಿಯ ಬಗ್ಗೆ ಹಿಗ್ಗು ತೋರಿದವು. ಆ ಸಂಜೆಯ ನೆನಪನ್ನು ಅಳಿಸಲು ಸಾಧ್ಯವಿಲ್ಲ ಹಾಗೂ ಆ ಘಟನೆ ದೇಶದ ಆಂಗ್ಲೊ- ಇಂಡಿಯನ್ ಕೋಮುಗಳು ಮತ್ತು ದೇಶೀಯರ ನಡುವಣ ಬಂಧಗಳನ್ನು ಬಲಗೊಳಿಸುವುದಕ್ಕೆ ಅನುಕೂಲವಾಗಿದೆ ಎಂದು ಹೇಳಲು ಬರುವಂತಿಲ್ಲ ಎಂದು ಮದ್ರಾಸ್‌ನ ಪತ್ರಿಕೆಯೊಂದು ಬರೆಯಿತು.

ಈ ಘಟನೆ ನಡೆದ ಮೂರು ತಿಂಗಳ ನಂತರ ಅಮರಾವತಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ವೇದಿಕೆಯ ಮೇಲಿಂದ ಸುರೇಂದ್ರನಾಥ್ ಬ್ಯಾನರ್ಜಿ ಹೀಗೆ ಘೋಷಿಸಿದರು: "ದೇಶ ದುಃಖಿತಪ್ತವಾಗಿದೆ. ಶ್ರೀ ತಿಲಕರ ಬಗ್ಗೆ ನನ್ನ ಹೃದಯ ಅನುಕಂಪದಿಂದ ತುಂಬಿದೆ. ಸೆರೆವಾಸದಲ್ಲಿರುವ ಅವರನ್ನು ನನ್ನ ಭಾವನೆಗಳು ತಟ್ಟುತ್ತಿವೆ. ಭಾರತೀಯ ವೃತ್ತಪತ್ರಿಕೆಗಳ ಪರವಾಗಿ ಹೇಳುವುದಾದರೆ, ಶ್ರೀ ತಿಲಕರ ವಿರುದ್ಧ ಮಾಡಿರುವ ಆಪಾದನೆಗಳ ಬಗ್ಗೆ ಅವರು ನಿರ್ದೋಷಿ ಎಂದು ನಾವು ನಂಬಿದ್ದೇವೆ ಎಂದು ನಾನು ಕಿಂಚಿತ್ತೂ ಹಿಂಜರಿಯದೆ ಹೇಳುತ್ತೇನೆ". ಅದೇ ಸಮಯದಲ್ಲಿ ಬ್ರಿಟನ್‌ನಲ್ಲಿದ್ದ ದಾದಾಭಾಯಿ ನವರೋಜಿ ಹೀಗೆ ನುಡಿದರು: "ವೃತ್ತಪತ್ರಿಕೆಗಳ ಬಾಯಿ ಮುಚ್ಚುವುದು ಆತ್ಮಹತ್ಯೆ ಮಾಡಿಕೊಂಡಂತೆ. ಶ್ರೀ ತಿಲಕರ ಮೇಲೆ ಮೊಕದ್ದಮೆ ಹೂಡುವುದಕ್ಕಿಂತ ಹೆಚ್ಚಿನ ತಪ್ಪು ಎಂದೂ ಆಗಿರಲಿಲ್ಲ. ಬ್ರಿಟಿಷ್ ಸರಕಾರವನ್ನು ಯಾವ ತತ್ತ್ವಗಳ ಮೇಲೆ ನಡೆಸಲಾಗುತ್ತಿತ್ತೋ, ಅವುಗಳಿಗೆ ಇದು ಭಿನ್ನವಾಗಿದೆ."

ಬ್ರಿಟಿಷ್ ಪತ್ರಿಕೆಯಾದ 'ಡೈಲಿ ಕ್ರಾನಿಕಲ್' ಸಹ ಹೀಗೆ ಬರೆಯಿತು: "ನಿಜವಾದ ರಾಜದ್ರೋಹವನ್ನು ಸಾಬೀತು ಮಾಡಿ – ಎಲ್ಲಕ್ಕಿಂತ ಹೆಚ್ಚಾಗಿ, ಅಪರಾಧದೊಂದಿಗೆ ಅದರ ಸಂಬಂಧವನ್ನು ನಿರ್ಣಾಯಕವಾಗಿ ತೋರಿಸಿ, – ಆಗ ತೀಕ್ಷ್ಣವಾದ, ಕಠಿಣವಾದ ಶಿಕ್ಷೆಗೆ ನಾವೆಲ್ಲರೂ ಒಪ್ಪಬಹುದು. ಆದರೆ ಕವನಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ವರ್ಣರಂಜಿತವಾದ ಹಾಗೂ ಜನಪ್ರಿಯರಾದ ದರೋಡೆಕೋರರ ಗುಣಗಾನಗಳಿಂದ ದೊಡ್ಡ ಸುಳ್ಳಿನ ಕಂತೆಗಳನ್ನು ಕಟ್ಟುವುದಾದರೆ, ಸರ್ಕಾರ ಅಪಾಯದ ಹಾದಿಯಲ್ಲಿದೆ ಎಂಬ ಭಾವನೆಯುಂಟಾಗುತ್ತದೆ. ಕಾನೂನಿಗೆ ನ್ಯಾಯಾಧೀಶ ಸ್ಟ್ರಾಚಿ ಮಾಡಿರುವ ವ್ಯಾಖ್ಯೆಯನ್ನು ಇಂಗ್ಲೆಂಡ್‌ನಲ್ಲಿ ಸಹಿಸಲಾಗುವುದಿಲ್ಲ ಎಂಬ ವಿಶ್ವಾಸ ನಮಗಿದೆ

ಹಾಗೂ ಈ ವ್ಯಾಖ್ಯೆಯನ್ನು ಶೀಘ್ರವಾಗಿ ತಳ್ಳಿಹಾಕದ ಹೊರತು ಭಾರತದಲ್ಲಿ ತೀವ್ರ ಉಪದ್ರವ ಉಂಟಾಗಬಹುದು."

ಶಿಕ್ಷೆಗೊಳಗಾದ ತಿಲಕರು, ಆ ಶಿಕ್ಷೆಯಿಂದಾಗಿ ದಿಢೀರನೆ ರಾಷ್ಟ್ರಮಟ್ಟದ ವ್ಯಕ್ತಿಯಾದರು. ಅದರಿಂದ ಇನ್ನಷ್ಟು ಪರಿಣಾಮ ಉಂಟಾಯಿತು. ರಾಜದ್ರೋಹದ ಬಗ್ಗೆ ಇದ್ದ ಭೀತಿ ಅದರಿಂದ ನಿವಾರಣೆಯಾಯಿತು. ವಿದೇಶಿ ಆಳ್ವಿಕೆಯನ್ನು ತೆಪ್ಪಗೆ ಒಪ್ಪಿಕೊಳ್ಳುವುದು ಕೊನೆಗೊಂಡಿತು. ಆರಾಮ ಕುರ್ಚಿಯ ರಾಜಕೀಯ ಮತ್ತು ಆರಾಮದಾಯಕ ನಾಯಕತ್ವಕ್ಕೆ ಅದು ಮಂಗಳ ಹಾಡಿತು. ರಾಷ್ಟ್ರೀಯತೆಯ ಹೊಸ ಶಕೆಗೆ ಅದು ನಾಂದಿಯಾಯಿತು. ದೇಶಸೇವೆಯೆಂದರೆ ಕಷ್ಟನಷ್ಟ ಮತ್ತು ತ್ಯಾಗಗಳಿಗೆ ಸಿದ್ಧವಾಗಿರಬೇಕೆಂಬ ಭಾವನೆ ಹುಟ್ಟಿತು. ಕೇವಲ ಅಬ್ಬರದ ಭಾಷಣಗಳನ್ನು ಮಾಡುವುದರಲ್ಲಿ ದೇಶಪ್ರೇಮವಿಲ್ಲ. 'ಮುನ್ನುಗ್ಗಿ ಮಾಡುವುದರಲ್ಲಿದೆ' ಎಂಬ ಭಾವನೆ ಬಲವಾಯಿತು.

ಶಿಕ್ಷೆಯಾದ ಏಳು ದಿನಗಳನಂತರ ತಿಲಕರು ಪ್ರಿವಿ ಕೌನ್ಸಿಲ್‌ಗೆ ಮೇಲ್ಮನವಿ ಮಾಡಿಕೊಳ್ಳಲು ಅನುಮತಿ ಕೋರಿ ಬಾಂಬೆ ಶ್ರೇಷ್ಠ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಅರ್ಜಿಯನ್ನು ಪರಿಶೀಲಿಸಿದ ನ್ಯಾಯಾಲಯದ ಪೂರ್ಣಪೀಠ, ಮೇಲ್ಮನವಿಯನ್ನು ಸಮರ್ಥಿಸುವ ತಪ್ಪು ತೀರ್ಪು ಆಗಿಲ್ಲವೆಂಬ ಕಾರಣದಿಂದ ಅರ್ಜಿಯನ್ನು ತಿರಸ್ಕರಿಸಿತು. ಆದರೆ "ಅಸಮಾಧಾನ"ವನ್ನು ಕೇವಲ ಸಮಾಧಾನ ಇಲ್ಲದಿರುವುದು ಎಂದು ವ್ಯಾಖ್ಯೆ ಮಾಡುವುದರಲ್ಲಿ ನ್ಯಾಯಾಧೀಶ ಸ್ಟ್ರಾಚಿ ತಪ್ಪು ಮಾಡಿದ್ದಾನೆ ಎಂದು ಪೀಠ ಅಭಿಪ್ರಾಯಪಟ್ಟಿತು. ಇದರಿಂದ ನ್ಯಾಯದರ್ಶಿಗಳ ಮಂಡಳಿಗೆ ತಪ್ಪು ನಿರ್ದೇಶನ ನೀಡಿದಂತಾಯಿತು. ಅದು ಮೇಲ್ಮನವಿಗೆ ಸಾಕಷ್ಟು ಕಾರಣವನ್ನು ಒದಗಿಸಬಹುದಿತ್ತು. ನಂತರ ಲಂಡನ್‌ನಲ್ಲಿ ಪ್ರಿವಿ ಕೌನ್ಸಿಲ್‌ಗೆ ಮಾಡಿಕೊಂಡ ವಿಶೇಷ ಮನವಿಯೂ ಸಹ ಅಯಶಸ್ವಿಯಾಯಿತು. ಇಲ್ಲಿ ಅದನ್ನು ಪ್ರಸ್ತಾಪಿಸಬೇಕಾದ ಒಂದೇ ಕಾರಣವೆಂದರೆ, ನಂತರ ಬ್ರಿಟನ್‌ನ ಪ್ರಧಾನ ಮಂತ್ರಿಯಾದ ಹೆಚ್. ಹೆಚ್. ಅಸ್ಕ್ವಿತ್ ತಿಲಕರ ಪರವಾಗಿ ವಕಾಲತ್ತು ವಹಿಸಿದ್ದರು. "ಅಸಮಾಧಾನ" ಎಂಬ ಪದದಲ್ಲಿ ರಾಜದ್ವೇಷ ಮತ್ತು ಎಲ್ಲ ವಿಧದ ಶತ್ರುತ್ವ ಭಾವನೆಗಳು ಸೇರಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುವಂತೆ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ 124-ಎ ಅನ್ನು ಮರುವರ್ಷ ತಿದ್ದುಪಡಿ ಮಾಡಿದಾಗ ಮಾತ್ರವೇ ನ್ಯಾಯಾಧೀಶ ಸ್ಟ್ರಾಚಿಯ ತೀರ್ಪಿನಿಂದ ಉಂಟಾಗಿದ್ದ ಅನಿಶ್ಚಯತೆ ನಿವಾರಣೆಯಾಯಿತು.

ಕ್ರಿಮಿನಲ್ ಅಪರಾಧಿಯಂತೆ ತಿಲಕರು ಜೈಲಿನಲ್ಲಿ ಕಠಿಣ ಶಿಕ್ಷೆಗೊಳಪಡಬೇಕಾಯಿತು. ರಾಜಕೀಯ ಕೈದಿಗಳು ಎಂಬ ವರ್ಗದ ಬಗ್ಗೆ ಆಗ ಯಾರು ಕೇಳಿಯೂ ಇರಲಿಲ್ಲ ಹಾಗೂ ರಾಜದ್ರೋಹ ಮಾಡಿದ ಅಪರಾಧಿಯನ್ನು ಸಾಮಾನ್ಯ ಕೈದಿಗಳಿಗಿಂತಲೂ ಹೆಚ್ಚು ಕಠಿಣವಾಗಿ ಕಾಣಲಾಗುತ್ತಿತ್ತು. ಇಪ್ಪತ್ತರ, ಮೂವತ್ತರ ದಶಕಗಳಲ್ಲಿ ಅಸಹಕಾರ ಚಳವಳಿಯ ಸಮಯದಲ್ಲಿ ಜೈಲುಗಳನ್ನು ತುಂಬಿದ ರಾಜಕೀಯ ಕೈದಿಗಳು ತಿಲಕರು ಅನುಭವಿಸಿದ ನೋವು, ಸಂಕಷ್ಟಗಳನ್ನು ಊಹಿಸುವುದೂ ದುಸ್ಸಾಧ್ಯ. ಚಾಪೆಗಳಿಗೆ ತೆಂಗಿನ ನಾರನ್ನು ಎಕ್ಕುವ ಕಠಿಣ ಕೆಲಸವನ್ನು ಅವರಿಗೆ ಕೊಡಲಾಯಿತು. ಅವರು ಇದನ್ನೂ ಇತರ ಕಾರ್ಯಗಳನ್ನೂ ಸಂತೋಷದಿಂದಲೇ ಮಾಡಿದರು. ಆದರೆ ಜೈಲಿನ ಒರಟು ಆಹಾರವನ್ನು ಮಾತ್ರ

ನುಂಗುವುದು ಅವರಿಗೆ ಕಷ್ಟವಾಗಿತ್ತು. ನಾಲ್ಕೇ ತಿಂಗಳಲ್ಲಿ ಅವರ ತೂಕ ಗಾಬರಿಯಾಗುವಷ್ಟು ಅಂದರೆ 135ರಿಂದ 105 ಪೌಂಡ್‌ಗಳಿಗೆ ಇಳಿಯಿತು.

ತಿಲಕರನ್ನು ಕಾಣಲು ಅನುಮತಿ ಪಡೆದು ಅವರನ್ನು ನೋಡಿದವರಿಗೆ ಅವರು ಈ ಶಿಕ್ಷೆಯಿಂದ ಜೀವಂತ ಉಳಿಯುತ್ತಾರೋ ಎಂಬ ಸಂಶಯ ಉಂಟಾಯಿತು. ತಿಲಕರ ಕಾನೂನು ಸಲಹೆಗಾರರಲ್ಲಿ ಒಬ್ಬರಾಗಿದ್ದ ಶ್ರೀ ಎಸ್. ಎಸ್. ಸೆಟ್ಲೂರ್ ಜೈಲುಗಳ ಸುಧಾರಣೆಗಾಗಿ ಶ್ರಮಿಸುತ್ತಿದ್ದ ಲಂಡನ್‌ನ ಹೊವರ್ಡ್ ಅಸೋಸಿಯೇಶನ್‌ನೊಂದಿಗೆ ಈ ಬಗ್ಗೆ ಪತ್ರವ್ಯವಹಾರ ಮಾಡಿದರು. ಈ ಅಸೋಸಿಯೇಶನ್‌ನ ಕಾರ್ಯದರ್ಶಿಗೆ ಮೊದಲು ಬರೆದುಕೊಂಡ ಅರ್ಜಿ ಮಾಮೂಲಾಗಿ ನೌಕರಶಾಹಿಯ ಅಲಕ್ಷ್ಯಕ್ಕೆ ಒಳಗಾಯಿತು. ಆದರೆ ಜೈಲಿನಲ್ಲಿ ತಿಲಕರು ತೀರಿಕೊಂಡರೆ ಆಗುವ ಪರಿಣಾಮಗಳ ಬಗ್ಗೆ ಅನಂತರ ಸೆಟ್ಲೂರ್ ಕೊಟ್ಟ ಎಚ್ಚರಿಕೆಗಳಿಂದ ಸ್ವಲ್ಪ ಪರಿಣಾಮ ಉಂಟಾಯಿತು.

ಮುಂಬಯಿಯಲ್ಲಿ ತಿಲಕರು ಪ್ಲೇಗು ಉಂಟಾಗಿ ಬಾಂಬೆ ಸರ್ಕಾರ ತಿಲಕರನ್ನು ಪೂನಾದ ಯರಾವ್ಡ ಜೈಲಿಗೆ ವರ್ಗಾಯಿಸಬೇಕಾಗಿ ಬಂದಿತು. ಮುಂಬಯಿ ಜೈಲಿನಲ್ಲಿದ್ದಾಗ ತಿಲಕರು ಪ್ಲೇಗು ವಿರುದ್ಧದ ಇನಾಕ್ಯುಲೇಶನ್ ಆಗಿನ್ನೂ ಪ್ರಾಯೋಗಿಕ ಹಂತದಲ್ಲಿದ್ದರೂ ಇತರ ಖೈದಿಗಳು ತಮ್ಮ ಉದಾಹರಣೆಯನ್ನು ಅನುಕರಿಸಲೆಂದು ತಾವು ಇನಾಕ್ಯುಲೇಶನ್ ಮಾಡಿಸಿಕೊಂಡರು. ಹೊವಾರ್ಡ್ ಅಸೋಸಿಯೇಶನ್‌ನ ಮನವಿಯ ಮೇರೆಗೆ ತಿಲಕರನ್ನು ಪೂನಾದಲ್ಲಿ ಸ್ವಲ್ಪ ಉತ್ತಮವಾಗಿ ಕಾಣಲಾಯಿತು ಹಾಗೂ ಹಾಲು ಮತ್ತು ಇತರ ಒಳ್ಳೆಯ ಆಹಾರವನ್ನೂ ಕೊಡಲಾಯಿತು. ಓದಲು ಅವರಿಗೆ ಪುಸ್ತಕಗಳನ್ನೂ ಕೊಡಲಾಯಿತು.ಅವರಿಗೆ ಒಪ್ಪಿಸಿದ ನೂಲಿಗೆ ಬಣ್ಣ ಹಾಕುವ ಕೆಲಸದಲ್ಲೂ ಅವರು ಆಸಕ್ತಿ ವಹಿಸಿದರು. ಅವರ ಕೃತಿ 'ಓರಿಯಾನ್'ನಿಂದಾಗಿ ಅವರ ಪಾಂಡಿತ್ಯದ ಬಗ್ಗೆ ಪ್ರಭಾವಿತರಾಗಿದ್ದ ಪ್ರೊ. ಮ್ಯಾಕ್ಸ್ ಮುಲ್ಲರ್ ಅವರು ತಿಲಕರಿಗೆ ಋಗ್ವೇದದ ಪ್ರತಿಯನ್ನು ಕಳಿಸಿದಾಗ ಅವರಿಗೆ ಆಶ್ಚರ್ಯ, ಸಂತೋಷ ಉಂಟಾಯಿತು.

ಯರಾವ್ಡದಲ್ಲಿ ತಿಲಕರು ತಮಗೆ ಪ್ರಿಯವಾದ ವಿಷಯವಾದ ವೇದಗಳ ಪ್ರಾಚೀನತೆ ಮತ್ತು ಆರ್ಯರ ನಾಗರಿಕತೆಯ ಅಧ್ಯಯನವನ್ನು ಮುಂದುವರೆಸಿದರು. ಈ ಅಧ್ಯಯನ ಐದು ವರ್ಷಗಳ ನಂತರ ಅವರು ಬರೆದ 'ದಿ ಆರ್ಕ್ಟಿಕ್ ಹೋಮ್ ಇನ್ ದಿ ವೇದಾಸ್' ಪುಸ್ತಕದ ಆಧಾರವಾಗಿತ್ತು. ತಮ್ಮ ಸಂಶೋಧನೆಗೆ ಬಹಳ ಪ್ರಾಮುಖ್ಯವಾಗಿದ್ದ ವೇದದ ಒಂದು ಸ್ತೋತ್ರದ ಸರಿಯಾದ ಅರ್ಥ ಹೊಳೆದಾಗ ತಮಗೆಷ್ಟು ಸಂತೋಷವಾಯಿತೆಂಬುದನ್ನು ಬಿಡುಗಡೆಯಾದ ನಂತರ ತಿಲಕರು ತಮ್ಮ ಗೆಳೆಯರೊಬ್ಬರಿಗೆ ಹೇಳಿದರು. "ಜೈಲಿನಲ್ಲಿ ಸಂತೋಷ ಆಗುತ್ತಾದರೂ ಹೇಗೆ" ಎಂದು ಆ ಗೆಳೆಯರು ಸಹಜವಾಗಿ ಕೇಳಿದರು. "ನೀವಲ್ಲಿಗೆ ಹೋಗದೆ ನಿಮಗದು ತಿಳಿಯುವುದಿಲ್ಲ" ಎಂಬುದೇ ತಿಲಕರ ಉತ್ತರವಾಗಿತ್ತು.

ರ್‍ಯಾಂಡ್‌ನ ಕೊಲೆ ಮಾಡಿದ ಅಪರಾಧಕ್ಕೆ ಯರಾವ್ಡ ಜೈಲಿನಲ್ಲಿ ಗಲ್ಲು ಶಿಕ್ಷೆ ಅನುಭವಿಸಲು ಕಾಯುತ್ತಿದ್ದ ದಾಮೋದರ ಚಾಫೇಕರನ ಕೋರಿಕೆಯ ಮೇರೆಗೆ ಅವನಿಗೆ ಕನಿಕರ ತೋರಿಸಬೇಕೆಂದು ಕೇಳಿಕೊಳ್ಳುವ ಅರ್ಜಿಯನ್ನು ಸಿದ್ಧಪಡಿಸಲು ತಿಲಕರಿಗೆ ಅನುಮತಿ ನೀಡಲಾಯಿತು. ಆದರೆ ಈ ಅರ್ಜಿಯನ್ನು ತಿರಸ್ಕರಿಸಲಾಯಿತು. ಇವರಿಬ್ಬರ ನಡುವೆ ಇತಹ

ಸಂಪರ್ಕ ಉಂಟಾಗುವುದಕ್ಕೆ ಸರ್ಕಾರ ಯಾವುದೇ ಕುತಂತ್ರದ ಉದ್ದೇಶವನ್ನು ಹೊಂದಿತ್ತೆಂಬುದು ಊಹಾಪೋಹದ ವಿಷಯವಾಗಿದ್ದರೂ, ಅವರಿಬ್ಬರ ನಡುವೆ ಯಾವುದೇ ಸಂಬಂಧವನ್ನು ಕಂಡುಹಿಡಿಯುವುದರಲ್ಲಿ ಸರ್ಕಾರ ವಿಫಲಗೊಂಡಿತು. ತಿಲಕರು ತಮ್ಮಲ್ಲಿದ್ದ ಗೀತೆಯನ್ನು ಚಾಪೇಕರನಿಗೆ ಕೊಟ್ಟರು. ಆತ ಅದನ್ನು ನೇಣುಗಂಬಕ್ಕೆ ಹೋಗುವವರೆಗೂ ತನ್ನ ಬಳಿಯೇ ಇಟ್ಟುಕೊಂಡಿದ್ದ. ಹಿಂದೂ ವಿಧಿಗಳಿಗನುಗುಣವಾಗಿ ಅವನ ಶವ ಸಂಸ್ಕಾರವನ್ನು ತಿಲಕರು ವ್ಯವಸ್ಥೆ ಮಾಡಿದರು.

ಈ ಮಧ್ಯೆ, ತಿಲಕರನ್ನು ಬಿಡುಗಡೆ ಮಾಡಬೇಕೆಂದು ಭಾರತ ಹಾಗೂ ಬ್ರಿಟನ್‌ನಲ್ಲಿ ಚಳವಳಿಯನ್ನು ಪ್ರಾರಂಭಿಸಲಾಯಿತು. ಪ್ರೊ. ಮ್ಯಾಕ್ಸ್ ಮುಲ್ಲರ್ ತಿಲಕರ ಬಗ್ಗೆ ಹೊಂದಿದ್ದ ಆಸಕ್ತಿಯಿಂದ ಚಳವಳಿಗೆ ಬಲ ದೊರೆಯಿತು ಹಾಗೂ ಸರಿಯಾಗಿ ಯೋಚಿಸಿ ತೀರ್ಮಾನಿಸಿದ ವಿಳು ಕಾರಣಗಳ ಆಧಾರದ ಮೇಲೆ ತಿಲಕರನ್ನು ಕ್ಷಮಿಸಬೇಕೆಂದು ಕೋರುವ ಮನವಿ ಪತ್ರವೊಂದನ್ನು ರಾಣಿಗೆ ಕಳಿಸಲಾಯಿತು. ಅವರನ್ನು ಬಿಡುಗಡೆ ಮಾಡುವುದರಿಂದ ಸಾರ್ವಜನಿಕರ ಮನಸ್ಸಿನಲ್ಲಿ ಅನುಕೂಲಕರ ಪರಿಣಾಮ ಆಗುತ್ತದೆಂದು ಮನವಿ ಪತ್ರಕ್ಕೆ ಸಹಿ ಹಾಕಿದ ಮಹನೀಯರು ತಿಳಿಸಿದ್ದರು. ಸರ್ ವಿಲಿಯಂ ಹಂಟರ್, ಸರ್ ರಿಚರ್ಡ್ ಗಾರ್ಥ್, ದಾದಾಭಾಯಿ ನವರೋಜಿ, ಆರ್.ಸಿ. ದತ್ ಮತ್ತು ಪ್ರೊ. ಮ್ಯಾಕ್ಸ್ ಮುಲ್ಲರ್ ಅವರು ಈ ಪೈಕಿ ಸೇರಿದ್ದರು.

ಈ ಒತ್ತಡವನ್ನು ವಿರೋಧಿಸುವುದು ಸರ್ಕಾರಕ್ಕೆ ಆಗಲಿಲ್ಲವಾದರೂ, ಬೇಷರತ್ತಾಗಿ ತಿಲಕರನ್ನು ಬಿಡುಗಡೆ ಮಾಡುವುದಕ್ಕೂ ಅದು ಸಿದ್ಧವಿರಲಿಲ್ಲ. ಅವರು ಎರಡು ಷರತ್ತುಗಳಿಗೆ ಒಪ್ಪಿಕೊಂಡರೆ ಅವರನ್ನು ಬಿಡುಗಡೆಮಾಡಲು ಸಿದ್ಧವಿರುವುದಾಗಿ ಸರ್ಕಾರ ತಿಳಿಸಿತು: ಅವರ ಬಿಡುಗಡೆಯಾದ ನಂತರ ಅವರ ಗೌರವಾರ್ಥ ಏರ್ಪಡಿಸಬಹುದಾದ ಯಾವುದೇ ಸಮಾರಂಭಗಳನ್ನು ಒಪ್ಪಿಕೊಳ್ಳಬಾರದು ಹಾಗೂ "ಸರ್ಕಾರದ ವಿರುದ್ಧ ಅಸಮಾಧಾನವನ್ನು ಕೆರಳಿಸಲು ಕೃತಿ, ಭಾಷಣ ಅಥವಾ ಲೇಖನದ ಮೂಲಕ ಏನನ್ನೂ ಮಾಡಬಾರದು".

ದೀರ್ಘ ಸಂಧಾನಗಳ ನಂತರ, ಎರಡನೆಯ ಷರತ್ತಿಗೆ ಬದಲಾಗಿ, ರಾಜದ್ರೋಹದ ಆಪಾದನೆಯ ಮೇಲೆ ಮತ್ತೊಮ್ಮೆ ತಾವು ಶಿಕ್ಷೆಗೊಳಗಾದರೆ, ಉಳಿದಿರುವ ಇನ್ನೂ ಆರು ತಿಂಗಳ ಅವಧಿಯನ್ನು ತಮ್ಮ ಶಿಕ್ಷೆಗೆ ಸೇರಿಸಬಹುದೆಂಬ ಷರತ್ತನ್ನು ತಿಲಕರು ಸಲಹೆ ಮಾಡಿದರು. ಅವಮಾನಕರವಾದ ಷರತ್ತನ್ನು ಒಪ್ಪಿಕೊಳ್ಳಲು ತಿಲಕರು ನಿರಾಕರಿಸಿದ್ದು ಅವರ ಸ್ವಭಾವಕ್ಕನುಗುಣವಾಗಿತ್ತು. ಹಾಗೆ ನೋಡಿದರೆ, ವಿಚಾರಣೆಗೂ ಮೊದಲೇ, ಕಲ್ಕತ್ತೆಯ 'ಅಮೃತ ಬಜಾರ್ ಪತ್ರಿಕಾ'ದ ಸಂಪಾದಕ ಮೋತಿಲಾಲ್ ಘೋಷ್ ಅವರೂ ಸೇರಿದಂತೆ ತಿಲಕರ ಕೆಲವು ಸ್ನೇಹಿತರು ಸರ್ಕಾರದಲ್ಲಿ ಕ್ಷಮೆ ಯಾಚಿಸಿ, ಹೆಚ್ಚು ಕಡಿಮೆ ಖಚಿತವಾದ ಜೈಲುವಾಸದ ಶಿಕ್ಷೆಯಿಂದ ತಪ್ಪಿಸಿಕೊಳ್ಳುವಂತೆ ಅವರನ್ನು ಒತ್ತಾಯಪಡಿಸಿದ್ದರು. ತಿಲಕರು ಹೀಗೆ ಉತ್ತರಿಸಿದರು:

"ನಾನು ದೋಷಿ ಎಂದು ತಪ್ಪೊಪ್ಪಿಕೊಳ್ಳುವುದಕ್ಕೆ ಸಮವಾದ್ದನ್ನು ನಾನು ಮಾಡಬೇಕೆಂದು ಆ ಪಕ್ಷ ನಿರೀಕ್ಷಿಸುತ್ತದೆ. ಹಾಗೆ ಮಾಡಲು ನಾನು ಸಿದ್ಧನಿಲ್ಲ. ಜನರ ಮಧ್ಯೆ ನನ್ನ ಪರಿಸ್ಥಿತಿ ಸಂಪೂರ್ಣವಾಗಿ ನನ್ನ ಗುಣವನ್ನೇ ಅವಲಂಬಿಸಿದೆ; ನನ್ನ ಮೇಲೆ ಹೊರಿಸಿರುವ

ಮೊಕದ್ದಮೆಯಿಂದ ನಾನು ಅಧೀರನಾದರೆ, ಮಹಾರಾಷ್ಟ್ರದಲ್ಲಿ ವಾಸಿಸುವುದೂ ಒಂದೇ ಅಂಡಮಾನ್ ದ್ವೀಪಗಳಲ್ಲಿ ವಾಸಿಸುವುದೂ ಒಂದೇ. ಈ ಪ್ರಕರಣದ ಸತ್ಯಾಸತ್ಯತೆಯ ಬಗ್ಗೆ ಹೇಳುವುದಾದರೆ, ನ್ಯಾಯದ ಬಗ್ಗೆ ಅಲ್ಲ, ಮರಾಠಿಯ ಬಗ್ಗೆ ಪರಿಚಯವಿಲ್ಲದ ನ್ಯಾಯದರ್ಶಿಗಳ ಮಂಡಳಿಯ ಬಗ್ಗೆ ಮಾತ್ರ ನಾನು ಚಿಂತಿಸುತ್ತೇನೆ. ನೀವೆಲ್ಲರೂ ಇದನ್ನು ಸಲಹೆ ಮಾಡಿದರೆ, ಇಷ್ಟು ಹೇಳಲು ಮಾತ್ರ ನಾನು ಸಿದ್ಧನಾಗಿದ್ದೇನೆ: 'ಲೇಖನಗಳು ರಾಜ ದ್ರೋಹಕರ ಎಂದು ನಾನು ಭಾವಿಸುವುದಿಲ್ಲ, ಆದರೆ ಸರ್ಕಾರದ ಸಲಹೆಗಾರರು ಅವು ಹಾಗೆ ಎಂದು ಭಾವಿಸಿದರೆ ಅದಕ್ಕಾಗಿ ನಾನು ವಿಷಾದಿಸುತ್ತೇನೆ.' ಪೂನಾದ ನಾಯಕರಿಗೆ ಮುಖ ಭಂಗ ಮಾಡುವುದು ಅವರ ಉದ್ದೇಶ. ಆದರೆ ಪ್ರೊ. ಗೋಖಲೆಯವರಲ್ಲಿ ಅವರು ಕಂಡಂತಹ ಕಚ್ಚಾ ಜೊಂಡನ್ನು ನನ್ನಲ್ಲಿ ಅವರು ಕಾಣುವುದಿಲ್ಲ. ಒಂದು ಹಂತ ಮೀರಿದಾಗ ನಾವೆಲ್ಲರೂ ಜನತೆಯ ಸೇವಕರು ಎಂಬುದನ್ನು ನೀವು ನೆನಪಿನಲ್ಲಿಡಬೇಕು.ಒಂದು ಮಹ ತ್ವದ ಸಮಯದಲ್ಲಿ ನೀವು ಶೋಚನೀಯವಾಗಿ ಸಾಹಸದ ಕೊರತೆಯನ್ನು ತೋರಿಸಿದರೆ ಅವರಿಗೆ ವಿಶ್ವಾಸಘಾತ ಮಾಡುತ್ತೀರಿ ಹಾಗೂ ಅವರನ್ನು ನಿರಾಶರನ್ನಾಗಿ ಮಾಡುತ್ತೀರಿ."

ತಿಲಕರು ಸಲಹೆ ಮಾಡಿದ ಷರತ್ತಿನಲ್ಲಿ ಅವರ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನಕ್ಕೆ ಅಗೌರವ ಉಂಟುಮಾಡುವಂತಹುದೇನೂ ಇರಲಿಲ್ಲ. ಮುಂಬೈ ಸರ್ಕಾರ ಈ ಷರತ್ತನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ತಿಲಕರು ಸೆಪ್ಟೆಂಬರ್ 6,1898ರಂದು ರಾತ್ರಿ 9 ಗಂಟೆಗೆ ಸ್ವತಂತ್ರ ವ್ಯಕ್ತಿಯಾದರು. ಆದರೆ ಅವರು ಮೊದಲಿನ ತಿಲಕರನ್ನು ಹಿಂಡಿ ಮಾಡಿದ ವ್ಯಕ್ತಿಯಂತಾಗಿದ್ದರು. ಅವರ ಸೋದರಿಯ ಮಗನ ಮಾತುಗಳಲ್ಲಿ ಹೇಳುವು ದಾದರೆ ಅವರು "ಗುಳಿ ಬಿದ್ದ ಕಣ್ಣುಗಳು, ಕುಂದಿದ, ಹಿಂಡಿದಂತಿದ್ದ ಕೆನ್ನೆಗಳು ಮತ್ತು ಅಸ್ಥಿರ ನಡಿಗೆಯುಳ್ಳ ಅಸ್ಥಿಪಂಜರವಾಗಿ" ಮನೆಗೆ ಹಿಂತಿರುಗಿದರು.

ಅವಧಿಗೆ ಮೊದಲೇ ತಿಲಕರಿಗೆ ಬಿಡುಗಡೆಯಾದ ಸುದ್ದಿ ಅಪರಿಮಿತ ಸಂತೋಷ ವನ್ನುಂಟುಮಾಡಿತು. ಪೂನಾ ನಗರವಿಡೀ ಸುದ್ದಿ ಹರಡಿ ಅವರು ಹಿಂತಿರುಗಿದ ಒಂದೇ ಗಂಟೆಯಲ್ಲಿ ನೂರಾರು ಜನರು ಅವರ ಮನೆಗೆ ಬಂದರು. ಮರುದಿನ ಸಾವಿರಾರು ಜನರು ಬಂದರು. ದೇಶದ ಎಲ್ಲಾ ಭಾಗಗಳಿಂದ ಶುಭಾಶಯಗಳನ್ನು ತಿಳಿಸುವ ತಂತಿಗಳು ಮತ್ತು ಪತ್ರಗಳು ಬಂದವು. ಆಗ ಇಂಗ್ಲೆಂಡಿನಲ್ಲಿದ್ದ ಆರ್.ಸಿ.ದತ್ ತಿಲಕರಿಗೆ ಹೀಗೆ ಪತ್ರ ಬರೆ ದರು: "ನೀವು ಅನುಭವಿಸಿದ ಕಷ್ಟಕಾರ್ಪಣ್ಯಗಳನ್ನು ನೆನಪು ಮಾಡಿಕೊಂಡಾಗ ನನ್ನ ಹೃದ ಯದಲ್ಲಿ ಎಂತಹ ಭಾವನೆಗಳುಂಟಾಗುತ್ತವೆ ಎಂಬುದನ್ನು ನಾನು ಮಾತುಗಳಲ್ಲಿ ವರ್ಣಿಸ ಲಾರೆ. ನೀವು ಇದುವರೆಗೆ ತೋರಿದ ಕೆಚ್ಚು ಮತ್ತು ಕಷ್ಟಸಹಿಷ್ಣುತೆ ಪ್ರಶಂಸಾರ್ಹ. ನಿಮ್ಮ ಉದಾಹರಣೆಯ ಪರಿಣಾಮ ಶಾಶ್ವತ ಎಂಬುದರ ಬಗ್ಗೆ ನನಗೆ ಸಂದೇಹವಿಲ್ಲ. ನಿಮ್ಮ ಸಾಹಸಗಳು ಎಂದೂ ವ್ಯರ್ಥವಾಗುವುದಿಲ್ಲ. ಅವುಗಳು ಫಲ ಕೊಟ್ಟೇ ಕೊಡುತ್ತವೆ. ನೀವು ಅನುಭವಿಸಿದ ಕಷ್ಟಗಳಿಂದ ದೇಶ ವಿಜಯಗಳಿಸುತ್ತದೆ."

ವಿಜಯ ಇನ್ನೂ ಬಹಳ ದೂರವಿತ್ತು. ಹಾಳಾದ ತಮ್ಮ ಆರೋಗ್ಯವನ್ನು ಪುನಃ ಗಳಿಸುವುದು ತಿಲಕರ ತಕ್ಷಣದ ಅಗತ್ಯವಾಗಿತ್ತು. ಹಾಗೂ ಅದಕ್ಕಾಗಿ ತಿಲಕರು ಕುಟುಂಬ ದೊಂದಿಗೆ ತಮಗೆ ಪ್ರಿಯವಾದ ಪರ್ವತಧಾಮ, ಸಿಂಹಗಡಕ್ಕೆ ಹೋದರು.

ಅಧ್ಯಾಯ 9

ತಾಯ್ ಮಹಾರಾಜ್ ಪ್ರಕರಣ

ಆಕಸ್ಮಿಕಗಳು ಮನುಷ್ಯರನ್ನು ಆಳುತ್ತವೆ, ಮನುಷ್ಯರು ಆಕಸ್ಮಿಕಗಳನ್ನಲ್ಲ ಎಂದು ಹೆರೊಡೊಟಿಸ್ ಹೇಳಿದ್ದಾನೆ. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾಗ ತಿಲಕರು ಪೂನಾಗೆ ಭೇಟಿ ನೀಡಿದ ಅಂತಹ ಆಕಸ್ಮಿಕ ಘಟನೆ ಮುಂದಿನ ಏಳು ವರ್ಷಗಳು ಅವರ ಜೀವನವನ್ನು ಆಳಿತು ಹಾಗೂ ಆನಂತರವೂ ಅವರ ಕೊನೆಯ ದಿನಗಳವರೆಗೆ ನಿರಂತರ ಚಿಂತೆಗೆ ಅವರನ್ನೀಡು ಮಾಡಿತ್ತು. ಅವರು ಪಡೆದ ಜಾಮೀನು ಸಹ ಆಕಸ್ಮಿಕವಾಗಿತ್ತು. ಅದಕ್ಕೆ ಮೊದಲು ಮೂರು ಸಲ ಮೂವರು ನ್ಯಾಯಾಧೀಶರು ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲು ನಿರಾಕರಿಸಿದ್ದರು. ಕೇವಲ ಆಕಸ್ಮಿಕವಾಗಿ ತಿಲಕರು ಕೈ ಹಾಕಬೇಕಾಗಿ ಬಂದ ಇನ್ನೊಬ್ಬ ಮನುಷ್ಯನ ಉಯಿಲಿನಿಂದಾಗಿ ಅವರು ದೀರ್ಘಕಾಲದ ಸಿವಿಲ್ ಮೊಕದ್ದಮೆ ಹಾಗೂ ಕ್ರಿಮಿನಲ್ ಕ್ರಮಕ್ಕೆ ಒಳಗಾಗಬೇಕಾಯಿತು. ಇದರಲ್ಲಿ ಒಬ್ಬ ವಿಧವೆಯ ಸ್ವೇಚ್ಛಾವರ್ತನೆಯನ್ನು ಸರ್ಕಾರದ ಸೇಡಿನ ಸಾಧನವನ್ನಾಗಿ ಮಾಡಲಾಯಿತು.

ಡೆಕ್ಕನ್‌ನ ಶ್ರೇಷ್ಠ ಸರ್ದಾರನಾದ ಬಾಬಾ ಮಹಾರಾಜ್ ಕಾಲರಾಗೆ ತುತ್ತಾಗಿ ಮರಣಶಯ್ಯೆಯಲ್ಲಿ ಮಲಗಿದ್ದಾಗ ತಿಲಕರು ಆತನನ್ನು ಆಗಸ್ಟ್ 7, 1897ರಂದು ಭೇಟಿಯಾದರು. ತಮ್ಮ ಸ್ನೇಹಿತನ ಒತ್ತಾಯದ ಕೊನೆಯ ಕೋರಿಕೆಗೆ ಕಟ್ಟುಬಿದ್ದ ತಿಲಕರು ಆತನ ಆಸ್ತಿಯ ಟ್ರಸ್ಟಿಗಳ ಪೈಕಿ ಒಬ್ಬರಾಗಲು ಸಮ್ಮತಿಸಿದರು. ಖಾಪರ್ಡೆ, ಕುಂಭೋಜ್‌ಕರ್ ಮತ್ತು ನಾಗಪುರ್ಕರ್ ಉಳಿದ ಮೂವರು ಟ್ರಸ್ಟಿಗಳಾಗಿದ್ದರು. ಬಾಬಾ ಮಹರಾಜ್ ತನ್ನ ಉಯಿಲಿನಲ್ಲಿ ಮಾಡಿದ್ದ ಸೂಚನೆಗಳು ಸ್ಪಷ್ಟವಾಗಿದ್ದವು:

"ನನ್ನ ಹೆಂಡತಿ ಗರ್ಭಿಣಿಯಾಗಿದ್ದಾಳೆ. ಆಕೆ ಮಗಳನ್ನು ಹಡೆದರೆ ಅಥವಾ ಒಬ್ಬ ಮಗ ಹುಟ್ಟಿ ಸ್ವಲ್ಪವೇ ಕಾಲ ಬದುಕಿದ್ದರೆ, ಆಗ ನನ್ನ ಕುಟುಂಬದ ಹೆಸರನ್ನು ಮುಂದುವರಿಸುವ ಉದ್ದೇಶಕ್ಕೆ ಟ್ರಸ್ಟಿಗಳ ಸಲಹೆಯ ಮೇರೆಗೆ, ಅಗತ್ಯ ಬಿದ್ದಷ್ಟು ಸಲವೂ, ಶಾಸ್ತ್ರೋಕ್ತವಾಗಿ ನನ್ನ ಹೆಂಡತಿಯ ತೊಡೆಯ ಮೇಲೆ ಕೂರಿಸಿ ಒಬ್ಬ ಹುಡುಗನನ್ನು ದತ್ತು ತೆಗೆದುಕೊಳ್ಳಬೇಕು ಹಾಗೂ ಅವನು ಪ್ರಾಪ್ತ ವಯಸ್ಕನಾಗುವವರೆಗೂ ಟ್ರಸ್ಟಿಗಳು ಆ ಮಗನ ಪರವಾಗಿ ನನ್ನ ಚರ, ಸ್ಥಿರ ಆಸ್ತಿಯ ಆಡಳಿತವನ್ನು ನಡೆಸಬೇಕು."

ಬಾಬಾ ಮಹರಾಜ್‌ನ ವಿಧವೆ ಸಕ್ವಾರ್‌ಬಾಯಿಗೆ (ಆಕೆಯನ್ನು ಸಾಮಾನ್ಯವಾಗಿ ತಾಯ್ ಮಹಾರಾಜ್ ಎಂದೇ ಕರೆಯಲಾಗುತ್ತಿತ್ತು) ಗಂಡ ತೀರಿಕೊಂಡಾಗ ಸುಮಾರು ಹದಿನೈದು ವರ್ಷವಾಗಿತ್ತಷ್ಟೆ. ತನ್ನ ಗಂಡ ಸತ್ತ ಐದು ತಿಂಗಳನಂತರ ಆಕೆ ಮಗನನ್ನು ಹಡೆದಳು. ಮಗು ಸ್ವಲ್ಪ ಕಾಲದಲ್ಲೇ ತೀರಿಕೊಂಡಿತು. ಆಸ್ತಿಯ ಕಾರಕೂನನಾಗಿದ್ದ ನಾಗಪುರ್ಕರ್, ತಿಲಕರು ಜೈಲಿನಲ್ಲಿದ್ದ ಹಾಗೂ ಇತರ ಇಬ್ಬರು ಟ್ರಸ್ಟಿಗಳು ಪೂನಾದ ಹೊರಗಡೆ ಇದ್ದ ಸಂದರ್ಭದ ದುರ್ಲಾಭ ಪಡೆದು. ತನ್ನ ಮಗನನ್ನು ದತ್ತು ತೆಗೆದುಕೊಳ್ಳುವಂತೆ ಮಾಡಬೇಕೆಂಬ ದೃಷ್ಟಿಯಿಂದ ತಾಯ್ ಮಹಾರಾಜಳ ಮೇಲೆ ಪ್ರಭಾವ ಬೀರಲು

ಪ್ರಾರಂಭಿಸಿದ. ಮೊದಲ ಮೂರು ವರ್ಷಗಳು ಆಸ್ತಿಯ ವ್ಯವಹಾರಗಳನ್ನು ಸುಗಮವಾಗಿ ನಡೆಸಲಾಯಿತು. ತಿಲಕರು ಜೈಲಿನಲ್ಲಿದ್ದಾಗಲೇ ಇತರ ಟ್ರಸ್ಟಿಗಳು ಉಯಿಲಿನ ಪ್ರೊಬೇಟ್ ಪಡೆದರು. ಆಸ್ತಿ ವಿಪರೀತ ಸಾಲಗಳಿಗೆ ಒಳಗಾಗಿತ್ತು. ಒತ್ತೆಗಳನ್ನು ಬಿಡಿಸಿಕೊಳ್ಳುವುದಕ್ಕೆ ಕಟ್ಟುನಿಟ್ಟಿನ ಮಿತವ್ಯಯ ಮಾಡಬೇಕಾದ್ದು ಅಗತ್ಯವಾಗಿತ್ತು. ಸಾಲಗಾರರ ಪೈಕಿ ಸಾಲ ಕೂಡಲೇ ತೀರಿಸಬೇಕೆಂದು ದುಂಬಾಲು ಬಿದ್ದವರ ಸಾಲಗಳನ್ನು ತೀರಿಸಲು ತಿಲಕರು ತಮ್ಮ ಸ್ವಂತ ಆಸ್ತಿಯನ್ನು ಒತ್ತೆಇಡಬೇಕಾಗಿ ಬಂದಿತು. ಮಿತವ್ಯಯ ಮಾಡಬೇಕೆಂದು ಟ್ರಸ್ಟಿಗಳು ಒತ್ತಾಯಪಡಿಸಿದ್ದರಿಂದ ತಾಯ್ ಮಹಾರಾಜ್‌ಗೆ ಬೇಸರ ಉಂಟಾಯಿತು. ಇದರಿಂದ ಆಕೆಯ ವಿಶ್ವಾಸ ಗಳಿಸಲು ನಾಗಪುರ್ಕರ್‌ಗೆ ಒಂದು ಸಾಧನ ದೊರಕಿತು. ಆಕೆ ಆಸ್ತಿಯ ಸಮಾನ ಮಾಲಿಕಳೆಂದೂ, ಆದ್ದರಿಂದ ಟ್ರಸ್ಟಿಗಳ ಹತೋಟಿಯನ್ನೂ ಮತ್ತು ದತ್ತು ತೆಗೆದುಕೊಂಡ ಮಗನಿಂದ ಆಕೆಗೆ ಬರಬೇಕಾದ ಆಸ್ತಿಯ ನಿರಾಕರಣೆಯನ್ನೂ ಒಂದು ದೂರಾಗಿ ಪರಿಗಣಿಸಬೇಕೆಂದು ಆಕೆಯ ಮನಸ್ಸಿನಲ್ಲಿ ಮೂಡಿಸಲಾಯಿತು.

ಕುಟುಂಬದ ಅನೇಕ ಶಾಖೆಗಳಲ್ಲಿ ಸೂಕ್ತವಾದ ಹುಡುಗನೊಬ್ಬನನ್ನು ಹುಡುಕುವ ಟ್ರಸ್ಟಿಗಳ ಪ್ರಯತ್ನವನ್ನು ತಾಯ್ ಮಹಾರಾಜ್ ಬಹಿರಂಗವಾಗಿ ವಿರೋಧಿಸಲಿಲ್ಲ. ಹೈದರಾಬಾದ್ ರಾಜ್ಯದಲ್ಲಿದ್ದ ಕುಟುಂಬದ ಬಾಬ್ರೆ ಶಾಖೆಯನ್ನು ಟ್ರಸ್ಟಿಗಳು ಆರಿಸಿದರು. ತಿಲಕ್ ಮತ್ತು ಖಾಪರ್ಡೆಯವರೊಂದಿಗೆ ತಾಯ್ ಮಹಾರಾಜ್ ಔರಂಗಾಬಾದ್‌ಗೆ ಹೋದಳು. ಅಲ್ಲಿ ಐವರು ಹುಡುಗರಲ್ಲಿ ಒಬ್ಬನನ್ನು ಅಂತಿಮವಾಗಿ ಆಯ್ಕೆ ಮಾಡಬೇಕಾ ಗಿತ್ತು. ವಿಧವೆ ಹಾಗೂ ಟ್ರಸ್ಟಿಗಳೊಂದಿಗೆ ಕೆಲವು ದಿನಗಳಿರುವಂತೆ ಹುಡುಗರಿಗೆ ತಿಳಿಸಲಾ ಗಿತ್ತು. ನಿಕಟ ಪರಿಶೀಲನೆಯನಂತರ ಹಾಗೂ ಜ್ಯೋತಿಷಿಗಳೊಂದಿಗೆ ಸಮಾಲೋಚಿಸಿ ಜಗನ್ನಾಥನೆಂಬ ಹುಡುಗನನ್ನು ಆರಿಸಲಾಯಿತು. ತಾಯ್ ಮಹಾರಾಜ್ ಹುಡುಗನನ್ನು ದತ್ತು ಕೊಡಬೇಕೆಂದು ವಿಧ್ಯುಕ್ತವಾಗಿ ಅವನ ತಂದೆಯನ್ನು ಕೇಳಿದಳು. ಇದಕ್ಕೆ ಆತ ಒಪ್ಪಿಕೊಂಡ. ದತ್ತು ಸ್ವೀಕಾರದ ಕಾಗದಪತ್ರಗಳನ್ನು ಜೂನ್ 27, 1901ರಂದು ಸಿದ್ಧ ಪಡಿಸಲಾಯಿತು. ಮರುದಿನ, ಶಾಸ್ತ್ರಗಳಿಗೆ ಅನುಗುಣವಾಗಿ ತಾಯ್ ಮಹಾರಾಜ್ ಧಾರ್ಮಿಕ ಸಮಾರಂಭದಲ್ಲಿ ಜಗನ್ನಾಥನನ್ನು ತೊಡೆಯ ಮೇಲೆ ಕೂರಿಸಿಕೊಂಡು ದತ್ತು ತೆಗೆದುಕೊಂಡಳು. ಈ ಸಮಾರಂಭಕ್ಕೆ ಗೆಳೆಯರು ಬಂದಿದ್ದರು. ಕಾಗದಪತ್ರಗಳನ್ನು ಪ್ರಮಾಣೀಕರಿಸಲಾಯಿತು. ಹಾಗೂ ಹದಿನೈದು ವರ್ಷಗಳ ನಂತರ ಪ್ರಿವಿ ಕೌನ್ಸಿಲ್ ತೀರ್ಪು ನೀಡಿದಂತೆ ಆ ಕಾಗದಪತ್ರಗಳು "ನಿಜವಾಗಿ ದತ್ತು ತೆಗೆದುಕೊಂಡಿದ್ದಕ್ಕೆ" ನಿರ್ಣಾಯಕ ಸಾಕ್ಷಿಯಾಗಿದ್ದವು.

ಕುಟುಂಬದ ಸ್ಥಾನಮಾನಕ್ಕೆ ತಕ್ಕಂತೆ ಮುಂದಿನ ಸಮಾರಂಭಗಳನ್ನು ಪೂನಾದಲ್ಲಿ ನಡೆಸಬೇಕೆಂಬ ಉದ್ದೇಶದಿಂದ ಅವುಗಳನ್ನು ಮುಂದೆ ಹಾಕಲಾಯಿತು. ಆದರೆ ತಾಯ್ ಮಹಾರಾಜ್ ಪೂನಾಗೆ ಹಿಂತಿರುಗುತ್ತಿದ್ದಂತೆ, ಜಗನ್ನಾಥನನ್ನು ದತ್ತು ತೆಗೆದುಕೊಂಡಿದ್ದು ಬಲವಂತವಾಗಿ ಆಯಿತೆಂದು ಹೇಳಿ ಅದನ್ನು ನಿರಾಕರಿಸುವಂತೆ ಆಕೆಯನ್ನು ಪ್ರೇರೇಪಿಸ ಲಾಯಿತು. ನಾಗಪುರ್ಕರ್‌ನ ಹಿರಿತನದಲ್ಲಿ ಆಕೆಯ ಧೂರ್ತ ಸಲಹೆಗಾರರು ತಾಯ್ ಮಹಾರಾಜಳ ಒಳಿತಿಗಿಂತಲೂ ಹೆಚ್ಚಾಗಿ ತಮ್ಮ ದುರಾಸೆಯಿಂದ ಪ್ರೇರಿತರಾಗಿದ್ದರು.

ಜಿಲ್ಲಾ ಮ್ಯಾಜಿಸ್ಟ್ರೇಟ್ ಹೆಚ್. ಎಫ್.ಆಸ್ಟನ್‌ನ ಬಳಿ ಹೋಗಿ ಟ್ರಸ್ಟಿಗಳ ಕಾಠಿಣ್ಯ ಮನೋಭಾವದ ವಿರುದ್ಧ ರಕ್ಷಣೆ ಕೋರಬೇಕೆಂದು ಆಕೆಯನ್ನು ಅವರು ಪುಸಲಾಯಿಸಿದರು.

ತರುಣಿಯಾದ ವಿಧವೆ ಕಣ್ಣೀರು ಸುರಿಸುತ್ತಾ ಹೇಳಿದ ದುಃಖದ ಕತೆಯನ್ನು ಕೇಳಿ ಆಸ್ಟನ್‌ನಲ್ಲಿ ಅಬಲೆಯರನ್ನು ರಕ್ಷಿಸುವ ಭಾವನೆ ಉಂಟಾಗಿರಬೇಕು. ಆದರೆ ತಿಲಕರ ವಿರುದ್ಧ ಅವನು ಕೈಗೊಂಡ ಕ್ರಮದ ಹಿಂದಿದ್ದ ಪ್ರಧಾನ ಕಾರಣವೆಂದರೆ ಮುಖ್ಯ ಚಳವಳಿಗಾರನ ಮೇಲೆ ತನ್ನ ಸಿಡುಕು ತೀರಿಸಿಕೊಳ್ಳಬೇಕೆಂಬುದೇ ಆಗಿತ್ತು. ಸತಾರಾದ ಒಬ್ಬ ಅಪ್ರಮುಖ ಸಂಪಾದಕನಿಗೆ ಜೀವಾವಧಿ ಗಡೀಪಾರು ಶಿಕ್ಷೆ ಕೊಟ್ಟು ಆಸ್ಟನ್ ಆವಾಗಲೇ ಕುಖ್ಯಾತನಾಗಿದ್ದ. ಸರ್ಕಾರದ ಸದಭಿಪ್ರಾಯ ಗಳಿಸುವ ಸಲುವಾಗಿ ತಿಲಕರನ್ನು ಅಪಾದನೆಗೆ ಸಿಕ್ಕಿಸಲು ದೊರೆತ ಅವಕಾಶವನ್ನು ಅವನು ಥಕ್ಕನೆ ಹಿಡಿದಿದ್ದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ಇತಿಹಾಸದಲ್ಲಿ ನ್ಯಾಯಾಧೀಶನೊಬ್ಬ ಕಾರ್ಯಾಂಗದ ಅನುಕೂಲ ಸಾಧನವಾಗಿ ಆಗಿದ್ದು ಇದು ಮೊದಲನೆಯ ಸಲವೇನೂ ಆಗಿರಲಿಲ್ಲ.

ತಾನು ಮಗನಿಗೆ ಜನ್ಮ ಕೊಟ್ಟಿರುವುದರಿಂದ ಟ್ರಸ್ಟಿಗಳಿಗೆ ಕೊಟ್ಟ ಪ್ರೊಬೇಟ್ ಅನೂರ್ಜಿತ ಮತ್ತು ನಿರರ್ಥಕವಾಗಿರುವುದರ ಕಾರಣದ ಮೇಲೆ ಆ ಪ್ರೊಬೇಟ್ ಅನ್ನು ರದ್ದುಗೊಳಿಸಬೇಕೆಂದು, ಆಸ್ಟನ್‌ನ ಸಕ್ರಿಯ ಪ್ರೋತ್ಸಾಹ ಹೊಂದಿದ ತಾಯ್ ಮಹಾರಾಜ್ ಜುಲೈ 29, 1901ರಂದು ಅರ್ಜಿ ಹಾಕಿದಳು. ಈ ವಿಷಯದ ಬಗ್ಗೆ ಮಾತ್ರ ತನ್ನ ಪರಿಶೀಲನೆಯನ್ನು ಸೀಮಿತಗೊಳಿಸುವುದಕ್ಕೆ ಬದಲಾಗಿ ಆಸ್ಟನ್‌ನ ಹೆಚ್ಚಿನ ಮುತುವರ್ಜಿ ವಹಿಸಿ ದತ್ತು ತೆಗೆದುಕೊಂಡ ವಿಷಯದಬಗ್ಗೆ ಹಾಗೂ ಅದರಲ್ಲಿ ತಿಲಕರು ವಹಿಸಿದ ಪಾತ್ರದ ಬಗ್ಗೆ ಮನ ಹರಿಸಿದ. ಅವನು ಹದಿನಾಲ್ಕು ದಿನಗಳು ತಿಲಕರನ್ನು ಕಿರುಕುಳದ ಪಾಟೀಸವಾಲಿಗೆ ಒಳಪಡಿಸಿ, ಅವರು " ಅತ್ತಲೂ ಇಲ್ಲದ, ಇತ್ತಲೂ ಇಲ್ಲದ, ಡೋಲಾಯಮಾನದ ಸುತ್ತು ಬಳಸಿ ಮಾತನಾಡುವ ಸಾಕ್ಷಿ: ವರ್ತನೆ ಸ್ಪಷ್ಟವಾಗಿ ಅಪ್ರಾಮಾಣಿಕ." ಎಂದು ದಾಖಲೆಯಲ್ಲಿ ಬರೆದ.

ಏಪ್ರಿಲ್ 4, 1902ರಂದು ತೀರ್ಪು ಕೊಡಲಾಯಿತು. ಈ ತೀರ್ಪು ಪ್ರೊಬೇಟ್ ರದ್ದು ಪಡಿಸಿದ್ದೇ ಅಲ್ಲದೆ, ಔರಂಗಾಬಾದ್‌ನ ದತ್ತು ಸ್ವೀಕಾರವನ್ನು ಸುಳ್ಳುಮಾಡಿ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 476ರ ಮೇರೆಗೆ ಕಾನೂನು ಕ್ರಮ ಜರುಗಿಸಲು ತಿಲಕರನ್ನು ನಗರದ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿತು. ಅವರ ವಿರುದ್ಧ ಕೆಳಕಂಡ ಏಳು ಅಪಾದನೆಗಳನ್ನು ಮಾಡಲಾಗಿತ್ತು: (1)ನಾಗಪುರ್ಕರ್ ವಿರುದ್ಧ ತಿಲಕರು ವಿಶ್ವಾಸ ದ್ರೋಹದ ಸುಳ್ಳು ದೂರುಗಳನ್ನು ಮಾಡಿದ್ದರು. (2) ಔರಂಗಾಬಾದ್ ಪ್ರಯಾಣದ ಲೆಕ್ಕಗಳಲ್ಲಿ ತಿದ್ದುಪಡಿ ಮಾಡುವುದರಿಂದ ಹಾಗೂ ಹೊಸ ಅಂಶಗಳನ್ನು ಸೇರಿಸಿ ಮುಂದೆ ಬಳಸುವುದಕ್ಕಾಗಿ ತಪ್ಪು ಸಾಕ್ಷ್ಯವನ್ನು ಅವರು ಸೃಷ್ಟಿಸಿದ್ದರು. (3) ಮೇಲಿನದಕ್ಕೆ ಸಂಬಂಧಿಸಿದಂತೆ, ಸುಳ್ಳು ಪತ್ರದ ಸೃಷ್ಟಿ. (4)ತಪ್ಪು ಎಂದು ತಿಳಿದಿದ್ದ ಸಾಕ್ಷ್ಯವನ್ನು ನಿಜವಾದ ಸಾಕ್ಷ್ಯ ಎಂದು ತಿಲಕರು ದುರುದ್ದೇಶದಿಂದ ಬಳಸಿದರು ಅಥವಾ ಬಳಸಲು ಪ್ರಯತ್ನಿಸಿದರು. (5) ದತ್ತು ಸ್ವೀಕಾರದ ಕಾಗದ ಪತ್ರಗಳನ್ನು ಅವು ನೈಜ ಎಂಬಂತೆ ದುರುದ್ದೇಶದಿಂದ ಬಳಸಿದರು. (6) ತಾಯ್ ಮಹಾರಾಜಳ ಸಹಿಯ ಮೇಲೆ ತಮ್ಮ ಬರೆವಣಿಗೆಯನ್ನು ಸೇರಿ

ಸಿದ್ದ ದತ್ತು ಸ್ವೀಕಾರದ ಕಾಗದ ಪತ್ರವನ್ನು ನಿಜ ಎಂದು ತಿಲಕರು ಅದನ್ನು ಮೋಸದಿಂದ ಬಳಸಿದರು. ಮತ್ತು (7) ಉದ್ದೇಶಪೂರ್ವಕವಾಗಿ ಅವರು ಸುಳ್ಳು ಸಾಕ್ಷ್ಯ ನೀಡಿದ್ದರು.

ಈ ಸಮಗ್ರ ಆಪಾದನೆಗಳು ವಿಪರೀತ ಆಶ್ಚರ್ಯವನ್ನುಂಟುಮಾಡಿದವು ಹಾಗೂ ಅವುಗಳನ್ನು ನಂಬುವುದೂ ಕಷ್ಟವಾಗಿತ್ತು. ಗೌರವ ಸ್ಥಾನದಲ್ಲಿದ್ದ ಈ ವ್ಯಕ್ತಿಯನ್ನು ತರುಣಿಯಾದ ಮತ್ತು ಅರಕ್ಷಿತಳಾದ ವಿಧವೆಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳಿದ ಧೂರ್ತ ವ್ಯಕ್ತಿ ಎಂದು ಹೀಗಳೆಯಲಾಗಿತ್ತು. ತಿಲಕರಿಗೆ ಇದು ಅವರ ಜೀವನದ ಅತ್ಯಂತ ಕರಾಳ ಗಳಿಗೆಯಾಗಿ ಕಂಡಿದ್ದಿರಬೇಕು. ಐದು ವರ್ಷಗಳಿಗೆ ಮುನ್ನ ರಾಜದ್ರೋಹದ ಅಪರಾಧಿಯಾಗಿ ಶಿಕ್ಷೆ ಪಡೆದ ಸಮಯಕ್ಕಿಂತಲೂ ಕರಾಳವಾಗಿದ್ದಿರಬೇಕು. ಆದರೆ ಅವರ ಸ್ವಭಾವ ಸಹಜವಾದ ಚಿತ್ತಶಾಂತಿ ಕದಡಿದ್ದರೆ ಅದು ಕೇವಲ ಒಂದು ಕ್ಷಣಮಾತ್ರ. ತಮ್ಮ ಉದ್ದೇಶಗಳ ನಿಷ್ಕಳಂಕತೆ ಮತ್ತು ಧ್ಯೇಯದ ನ್ಯಾಯದ ಬಗ್ಗೆ ಅವರಿಗೆ ಸಂಪೂರ್ಣ ವಿಶ್ವಾಸವಿತ್ತು. ದೀರ್ಘಕಾಲ ನಡೆದ ವಿಚಾರಣೆಯಲ್ಲಿ ಅವರು ಸಂಪೂರ್ಣವಾಗಿ ಅಸಂಬದ್ಧವಾಗಿದ್ದ ಆಪಾದನೆಗಳ ವಿರುದ್ಧ ಒಂದು ಸಣ್ಣ ಕಾಗದದ ಚೂರನ್ನೂ ಸಾಕ್ಷ್ಯವಾಗಿ ಮುಂದಿಡಲು ಉದ್ದೇಶಪೂರ್ವಕವಾಗಿ ನಿರಾಕರಿಸಿದರು.

ಈ ಮಧ್ಯೆ, ತನ್ನ ಸುತ್ತ ಇದ್ದ ಧೂರ್ತ ವ್ಯಕ್ತಿಗಳ ಚಿತಾವಣೆಯಿಂದ ಮತ್ತು ಆಸ್ಟನ್‌ನ ಅನುಗ್ರಹದಿಂದ, ತಾಯ್ ಮಹಾರಾಜ್ ಆಗಸ್ಟ್ 19, 1901ರಂದು ಕೊಲ್ಹಾಪುರದ ಮಹಾರಾಜನ ಸಮ್ಮುಖದಲ್ಲಿ ಕೊಲ್ಹಾಪುರ ಶಾಖೆಯ ಬಾಳ ಮಹಾರಾಜನನ್ನು ತನ್ನ ಮಗನಾಗಿ ದತ್ತು ತೆಗೆದುಕೊಂಡಳು. ಪೂನಾದ ತನ್ನ ಸ್ವಂತ ಮನೆಯಲ್ಲಿ ದತ್ತಕ ಸಮಾರಂಭವನ್ನು ನಡೆಸಬೇಕೆಂಬ ಆಕೆಯ ಪ್ರಯತ್ನಗಳು ತಿಲಕರ ಜಾಗರೂಕತೆ ಮತ್ತು ದೃಢ ನಿಲುವಿನಿಂದಾಗಿ ವಿಫಲಗೊಂಡವು. ಹೊಸ ದತ್ತಕದಿಂದಾಗಿ ಸಮಸ್ಯೆ ಮತ್ತಷ್ಟು ಜಟಿಲವಾಯಿತು. ಹಾಗೂ ಎರಡನೆಯ ದತ್ತಕವನ್ನು ಅಸಿಂಧು ಎಂದು ಘೋಷಿಸಬೇಕೆಂದೂ, ಜಗನ್ನಾಥ ಮಹಾರಾಜನ ದತ್ತಕವನ್ನು ಸ್ಥಿರೀಕರಿಸಬೇಕೆಂದೂ ಪೂನಾದ ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಿದರು.

ಆಸ್ಟನ್‌ನ ತೀರ್ಪಿನ ವಿರುದ್ಧ ತಿಲಕರು ಮುಂಬೈ ಶ್ರೇಷ್ಠ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು. ಪ್ರೊಬೇಟ್ ಬಗ್ಗೆ ಆಗಿದ್ದ ತೀರ್ಮಾನವನ್ನು ಶ್ರೇಷ್ಠ ನ್ಯಾಯಾಲಯ ರದ್ದುಪಡಿಸಿತಾದರೂ ತಿಲಕರ ವಿರುದ್ಧ ಕ್ರಿಮಿನಲ್ ವಿಚಾರಣೆಯನ್ನು ರದ್ದುಪಡಿಸಲು ನಿರಾಕರಿಸಿತು. ಆ ಹಂತದಲ್ಲಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆಂಬ ಕಾರಣದ ಮೇಲೆ ನ್ಯಾಯಾಲಯ ಹೀಗೆ ಮಾಡಿತು. ತಿಲಕರ ವಿರುದ್ಧ ಸಾಕ್ಷ್ಯ ಸಂಗ್ರಹಿಸಲು ಸರ್ಕಾರ ಇಬ್ಬರು ಪೋಲೀಸ್ ಅಧಿಕಾರಿಗಳನ್ನು ನೇಮಿಸಿತು. ತಿಲಕರ ವಿರುದ್ಧ ಕಾನೂನಿನ ಕ್ರಮ ಯಶಸ್ವಿಯಾಗುವ ಸಾಧ್ಯತೆಗಳು ಮಂಕಾಗಿದ್ದ ಆ ಅಧಿಕಾರಿಗಳ ವರದಿಯನ್ನು ಪಕ್ಷಪಾತದಿಂದ ಕೂಡಿದ್ದೆಂದು ತಳ್ಳಿಹಾಕಲಾಯಿತು ಹಾಗೂ ತಿಲಕರನ್ನು ವಿಚಾರಣೆ ಮಾಡಲು ವಿಶೇಷ ಮ್ಯಾಜಿಸ್ಟ್ರೇಟನನ್ನು ನೇಮಿಸಲಾಯಿತು. ತಿಲಕರ ನಿಜವಾದ ವಿರೋಧಿ ಯಾರು ಎಂಬ ಬಗ್ಗೆ ಏನಾದರೂ ಸಂಶಯವಿದ್ದಿದ್ದರೆ, ಈ ಕ್ರಮದಿಂದ ಹಾಗೂ ತಿಲಕರ ವಿರುದ್ಧ ವಿಚಾರಣೆ ನಡೆಸಲು ಆಗುವ ವೆಚ್ಚಗಳಿಗೆ 30,000 ರೂಪಾಯಿಗಳನ್ನು ಮಂಜೂರು ಮಾಡಿದ ಆಜ್ಞೆಯಿಂದ ಈ ಸಂಶಯ ನಿವಾರಣೆಯಾಯಿತು. ಸರ್ಕಾರ

ತಾಯ್ ಮಹಾರಾಜಳನ್ನು ತನ್ನ ಆಯುಧವನ್ನಾಗಿ ಮಾಡಿಕೊಂಡಿದ್ದಷ್ಟೇ ಅಲ್ಲದೆ ತಿಲಕರ ವಿರುದ್ಧದ ಪ್ರಕರಣವನ್ನೂ "ದತ್ತು" ತೆಗೆದುಕೊಂಡಿತ್ತು. ರಾಜಕೀಯ ಹಗೆತನ ಇದಕ್ಕೂ ಮೀರಿ ಹೋಗಲು ಸಾಧ್ಯವಿಲ್ಲ.

ಆಸ್ಟನ್ ಮಾಡಿದ್ದ ಏಳು ಆಪಾದನೆಗಳ ಮೇಲೆ ತಿಲಕರನ್ನು ವಿಚಾರಣೆ ಮಾಡಲು ನೇಮಕಗೊಂಡಿದ್ದ ವಿಶೇಷ ಮ್ಯಾಜಿಸ್ಟ್ರೇಟ್ ವಿಚಾರಣೆಯ ನಾಟಕವನ್ನು ಮಾಡಿದ ಎಂದೇ ಹೇಳಬಹುದು. ಎರಡು ಅಂಶಗಳ ಮೇಲೆ ತಿಲಕರನ್ನು ದೋಷಿಯನ್ನಾಗಿ ಮಾಡಿದ ಹಾಗೂ ಹದಿನೆಂಟು ತಿಂಗಳ ಕಠಿಣ ಶಿಕ್ಷೆಯನ್ನೂ 1,000 ರೂಪಾಯಿಗಳ ದಂಡವನ್ನೂ ವಿಧಿಸಿದ. ತಿಲಕರನ್ನು ಜೈಲಿಗೆ ಕಳಿಸಬೇಕೆಂಬ ಅವನ ನಿರ್ಲಜ್ಜೆಯ ಅವಸರ ಎಷ್ಟಿತ್ತೆಂದರೆ,ಮೇಲ್ಮನವಿಯನ್ನು ಮಾಡಿಕೊಳ್ಳಲೂ ತಿಲಕರಿಗೆ ಆ ದಿನ ಸಾಕಷ್ಟು ಸಮಯವನ್ನು ನೀಡಲಿಲ್ಲ. ಜೈಲಿಗೆ ಕಳಿಸುವಾಗ ಸಾಮಾನ್ಯ ಖೈದಿಯಂತೆ ತಿಲಕರಿಗೆ ಬೇಡಿಗಳನ್ನೂ ಹಾಕಲಾಗಿತ್ತು. ಇಡೀ ದೇಶ ಇದರಿಂದ ಕ್ರೋಧತಪ್ತವಾಯಿತು.ತೀರ್ಪನ್ನು ಪುನರ್‌ಪರಿಶೀಲಿಸಬೇಕೆಂದು ಕೋರಿ ಸೆಶನ್ಸ್ ನ್ಯಾಯಾಲಯಕ್ಕೆ ಕಳಿಸಿದ ಅರ್ಜಿಗೆ ಉತ್ತರವಾಗಿ ನ್ಯಾಯಾಲಯ ಅಪರಾಧವನ್ನು ಸ್ಥಿರೀಕರಿಸಿದರೂ, ಶಿಕ್ಷೆಯನ್ನು ಆರು ತಿಂಗಳಿಗೆ ಇಳಿಸಿತು. ಆದರೆ ಶ್ರೇಷ್ಠ ನ್ಯಾಯಾಲಯ ತಿಲಕರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇ ಅಲ್ಲದೆ ಅವರ ಮೇಲಿನ ದೋಷಾರೋಪಣೆಯನ್ನು ರದ್ದುಗೊಳಿಸಿ, ಅವರನ್ನು ಎಲ್ಲ ಆಪಾದನೆಗಳಿಂದ ಮುಕ್ತಗೊಳಿಸಿತು. ಸೆಶನ್ಸ್ ನ್ಯಾಯಾಲಯದ ವಿಚಾರಣೆಯ ಒಂದು ಅಂಶದ ಬಗ್ಗೆ ಶ್ರೇಷ್ಠ ನ್ಯಾಯಾಲಯ ಪ್ರಸ್ತಾಪಿಸಿ, "ಅದು ಕ್ರಿಮಿನಲ್ ನ್ಯಾಯಶಾಸ್ತ್ರದ ಮೊದಲ ತತ್ವಗಳಿಗೆ ವ್ಯತಿರಿಕ್ತವಾಗಿದೆ" ಎಂದು ತೀರ್ಪು ಕೊಟ್ಟಿತು.

ಕೊನೆಗೆ ತಿಲಕರ ನಿರಪರಾಧಕ್ಕೆ ಸಮರ್ಥನೆ ದೊರಕಿತಾದರೂ, ತಾಯ್ ಮಹಾರಾಜ್ ಆಸ್ಟನ್‌ನ ಕೃಪಾಕಟಾಕ್ಷವನ್ನು ಪಡೆದ ನಂತರದ ನಾಲ್ಕು ವರ್ಷಗಳ ಕಾಲ (ಈ ಮಧ್ಯೆ ಆಕೆ ತೀರಿಕೊಂಡಿದ್ದಳು) ಅವರು ವಿಷಮ ಪರೀಕ್ಷೆಯನ್ನು ಎದುರಿಸಬೇಕಾಯಿತು. ಅಗ್ನಿಪರೀಕ್ಷೆಯ ನಂತರ ಮತ್ತಷ್ಟು ಹೊಳೆಯುವ ಬಂಗಾರದಂತೆ ತಿಲಕರ ಗುಣ ಮತ್ತಷ್ಟು ಮಿರುಗಿತು. ಅವರು ಈ ಘಟನೆಯ ಬಗ್ಗೆ ಹೀಗೆ ನುಡಿದರು: "ವರ್ಷಗಳ ಕಾಲ ಈ ಪ್ರಕರಣ ನನ್ನೆಲ್ಲ ಬೌದ್ಧಿಕ ಮತ್ತು ದೈಹಿಕ ಶಕ್ತಿಯನ್ನು ವ್ಯಯಿಸಿತು. ಕೊನೆಗೆ ಒಳಿತಾದದ್ದೆಲ್ಲವೂ ಒಳಿತೇ. ಏನೇ ಆದರೂ, ಸಂತೋಷದ ನಗುವನ್ನೂ, ದುಃಖದ ಅಳುವನ್ನೂ ವಿಧಿಯ ಆಟವೆಂದು ಬಗೆದು ಸ್ಥಿರ ಮನಸ್ಸಿನಿಂದ ನಮ್ಮ ಕರ್ತವ್ಯಗಳನ್ನು ಮಾಡಬೇಕು."

ಜಗನ್ನಾಥ ಮಹಾರಾಜನ ದತ್ತಕವನ್ನು ಸ್ಥಿರೀಕರಿಸಬೇಕೆಂದು ಕೋರಿ ಸೆಪ್ಟೆಂಬರ್ 1901ರಲ್ಲಿ ಹಾಕಿದ ದಾವೆ ಇನ್ನೂ ಇತ್ಯರ್ಥವಾಗಿರಲಿಲ್ಲ. ಈ ದಾವೆ ತಿಲಕರಿಗೆ ಕಾನೂನಿನ ಒಂದು ದೀರ್ಘ ಪ್ರಯಾಣವಾಗಿ ಪರಿಣಮಿಸಿತು. ಮೊದಲಿಗೆ ಪೂನಾದ ಪ್ರಥಮ ದರ್ಜೆಯ ಸಿವಿಲ್ ನ್ಯಾಯಾಲಯ ಜುಲೈ 31, 1906ರಂದು ಅವರ ಪರವಾಗಿ ತೀರ್ಪು ಕೊಟ್ಟಿತು. ಪೂನಾ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾದ ತೀರ್ಪನ್ನು ಮುಂಬೈ ಶ್ರೇಷ್ಠ ನ್ಯಾಯಾಲಯ 1910ರಲ್ಲಿ ನೀಡಿತು. ಆಗ ತಿಲಕರು ಮಾಂಡಲೇಯಲ್ಲಿ ಖೈದಿಯಾಗಿದ್ದರು. ಅಂತಿಮವಾಗಿ ಪ್ರಿವಿ ಕೌನ್ಸಿಲ್ ಮಾರ್ಚ್ 26. 1915ರಂದು ದತ್ತಕದ ವಿಷಯದಲ್ಲಿ ಸಂಪೂರ್ಣವಾಗಿ ತಿಲಕರ ಪರವಾಗಿ ತೀರ್ಪು ನೀಡಿತು. ಮುಂಬೈ ಶ್ರೇಷ್ಠ ನ್ಯಾಯಾಲಯ

ಸಿವಿಲ್ ದಾವೆಯಲ್ಲಿ ಕ್ರಿಮಿನಲ್ ಪ್ರಕರಣಗಳನ್ನೂ ಕುರಿತು ಸಾಕ್ಷ್ಯಗಳನ್ನು ಅಂಗೀಕರಿಸಿದ ಬಗ್ಗೆ ಪ್ರಿವಿ ಕೌನ್ಸಿಲ್‌ನ ನ್ಯಾಯಾಧೀಶರು ಕೆಲವು ಕಟುವಾದ ಅಂಶಗಳನ್ನು ತಿಳಿಸಿದರು.

"ಇಂತಹ ಕಾರ್ಯವಿಧಾನದಿಂದ, ನ್ಯಾಯ ವ್ಯತಿರಿಕ್ತವಾಗುವ ಅಪಾಯವಿದೆ. ಸಿವಿಲ್ ದಾವೆಯೊಂದನ್ನು ಸಾಧಾರಣ ರೀತಿಯಲ್ಲಿ ನಡೆಸಿ ಅಲ್ಲಿಗೆ ಬಂದ ಸಾಕ್ಷ್ಯದ ಮೇಲೆ ನ್ಯಾಯ ತೀರ್ಮಾನ ಮಾಡಬೇಕು. ವಾದಿಯ ಸಾಕ್ಷ್ಯಕ್ಕೆ ಬೆಂಬಲ ನೀಡಲು ಸಾಕ್ಷ್ಯಪತ್ರಗಳನ್ನು ಬಳಸುವುದು ಸಾಧ್ಯವಿರಲಿಲ್ಲ. ಸಾಕ್ಷ್ಯವನ್ನು ಅಲ್ಲ ಎಂದು ತೋರಿಸಲು ಅಥವಾ ಅದನ್ನು ಕಡೆಗಣಿಸಲು ಅವುಗಳನ್ನು ಬಳಸುವುದಕ್ಕೆ ಸಮರ್ಥನೆ ಇಲ್ಲ. ಸುಳ್ಳು ಸಾಕ್ಷ್ಯ ನೀಡಿದ್ದಕ್ಕೆ ನಡೆದ ಕಾನೂನಿನ ಕ್ರಮ ಕೊನೆಯಲ್ಲಿ ಸಂಪೂರ್ಣವಾಗಿ ವಿಫಲವಾಯಿತು ಎಂದು ನ್ಯಾಯಮೂರ್ತಿಗಳಿಗೆ ತಿಳಿಸಲಾಯಿತು. ಯಶಸ್ವಿಯಾಯಿತೋ ಇಲ್ಲವೋ, ಸಿವಿಲ್ ದಾವೆಯಲ್ಲಿ ಕ್ರಿಮಿನಲ್ ಕ್ರಮಗಳನ್ನು ಕೈಗೊಂಡಿದ್ದು ನ್ಯಾಯ ಬಾಹಿರವಾಗಿತ್ತು."

ಹಾಗೆ ನೋಡಿದರೆ, ಮೊದಲು ಕೈಗೊಂಡ ಕ್ರಮವೇ ನ್ಯಾಯಬಾಹಿರತೆಗಿಂತ ಕೀಳಾಗಿತ್ತು. ಅದು ಘೋರ ಅನ್ಯಾಯವಾಗಿತ್ತು, ಹಾಗೂ ಅನೈತಿಕವಾಗಿತ್ತು. ತಿಲಕರ ಬಗ್ಗೆ ಇದ್ದ ಅಂಥ ದ್ವೇಷದಿಂದ ಮತ್ತು ಅವರ ವ್ಯಕ್ತಿತ್ವಕ್ಕೆ ಮಸಿಬಳಿದು ಅವರ ರಾಜಕೀಯ ಖ್ಯಾತಿಯನ್ನು ಕೆಡಿಸುವ ಕುಟಿಲೋಚ್ಛೆಯಿಂದ ಸರ್ಕಾರ ದುಡುಕಿ ಈ ಕ್ರಮ ಕೈಗೊಂಡಿತ್ತು. ತಾಯ್ ಮಹಾರಾಜ್ ಪ್ರಕರಣದ ಇಪ್ಪತ್ಮೂರು ವರ್ಷಗಳುದ್ದಕ್ಕೂ ತಿಲಕರ ಅನನ್ಯ ಕೆಚ್ಚು ಮತ್ತು ದೇವರಲ್ಲಿ ಅವರಿಗಿದ್ದ ನಂಬಿಕೆ ಅವರನ್ನು ಕಾಪಾಡಿಕೊಂಡು ಬಂದಿತು. ಏಕೆಂದರೆ, ಇದು ವಿಚಿತ್ರವಾಗಿ ಕಂಡರೂ, ಪ್ರಿವಿ ಕೌನ್ಸಿಲ್‌ನ ತೀರ್ಪಿನಿಂದಲೂ ಈ ಪ್ರಕರಣದ ಮೇಲೆ ತೆರೆ ಬೀಳಲಿಲ್ಲ. ತೀರ್ಪನ್ನು ಜಾರಿಗೆ ತರಲು ಒಂದಿಲ್ಲ ಒಂದು ಕಾರಣದಿಂದ ಮುಂಬೈ ಸರಕಾರ ವಿಳಂಬ ಮಾಡಿತು ಹಾಗೂ ಫೆಬ್ರವರಿ 1917ರಲ್ಲಿ ಮಾತ್ರವೇ ನ್ಯಾಯಾಲಯ ಆಸ್ತಿಯನ್ನು ಜಗನ್ನಾಥ ಮಹಾರಾಜನಿಗೆ ವಹಿಸಿತು.

ಇಷ್ಟಾದರೂ, ಕೊಲ್ಹಾಪುರ ರಾಜ್ಯ ಎತ್ತಿದ ಆಕ್ಷೇಪವನ್ನು ಬಗೆಹರಿಸಬೇಕಾಗಿ ಬಂದಿತು. ತನ್ನ ಪ್ರದೇಶದಲ್ಲಿರುವ ಜಗನ್ನಾಥ್ ಮಹಾರಾಜನ ಆಸ್ತಿಗೆ ಸಂಬಂಧಪಟ್ಟಂತೆ ಪ್ರಿವಿ ಕೌನ್ಸಿಲ್‌ನ ತೀರ್ಪಿಗೆ ತಾನು ಒಳಗಾಗಿಲ್ಲವೆಂದು ರಾಜ್ಯ ಸರ್ಕಾರ ಪರಿಗಣಿಸಿದ್ದೇ ಅಲ್ಲದೆ, ಮಹಾರಾಜ ಬ್ರಿಟಿಷ್ ಪ್ರದೇಶದಲ್ಲಿ ಪಡೆದಿರುವ ಆಸ್ತಿ ಮೂಲತಃ ತಾನು ಕೊಟ್ಟ ಇನಾಂ ಆಗಿರುವುದರಿಂದ ಅದನ್ನು ಕೊಲ್ಹಾಪುರಕ್ಕೆ ಮರಳಿಸಬೇಕೆಂದೂ ಕೇಳಿಕೊಂಡಿತ್ತು. ಕೊಲ್ಹಾಪುರದ ಸರ್ಕಾರ ಬಾಳ ಮಹಾರಾಜನನ್ನು ಬಾಬಾ ಮಹಾರಾಜನ ದತ್ತಕ ಮಗನೆಂದೇ ಕಂಡು, ಅದೇ ರೀತಿ ಕೊಲ್ಹಾಪುರದ ಆಸ್ತಿಯನ್ನು ಅವನಿಗೇ ವಹಿಸಿತು. ತಿಲಕರು ನಿಧನರಾಗುವುದಕ್ಕೆ ಕೇವಲ ಹತ್ತು ದಿನಗಳಿಗೆ ಮುನ್ನ ಮುಂಬೈ ಶ್ರೇಷ್ಠ ನ್ಯಾಯಾಲಯ ಕೊಲ್ಹಾಪುರ ರಾಜ್ಯದ ದಾವೆಯನ್ನು ವಜಾ ಮಾಡಿತು.

ತಿಲಕರು ನಿಧನರಾದ ಕೆಲವು ವರ್ಷಗಳ ನಂತರವೇ ಸರ್ದಾರ್ ಎಂಬ ಆನುವಂಶಿಕ ಪದವಿಯನ್ನು ಜಗನ್ನಾಥ್ ಮಹಾರಾಜನಿಗೆ ನೀಡಲಾಯಿತು. ತಮ್ಮ ಜೀವನದ ಸುಮಾರು ಮೂರನೆಯ ಒಂದು ಭಾಗದ ಕಾಲ ಕಾಡಿದ ತಾಯ್ ಮಹಾರಾಜ್

ಪ್ರಕರಣ ಒಂದು ವಿಷಮ ಪರೀಕ್ಷೆಯಾಗಿತ್ತು. ಅದೇ ಸಮಯದಲ್ಲಿ ಅವರು ರಾಜಕೀಯ ಹೋರಾಟದ ಕಷ್ಟಕಾರ್ಪಣ್ಯಗಳನ್ನೂ ಅನುಭವಿಸಿದರು. ಕರ್ಮಯೋಗಿಯೊಬ್ಬನ ಕಷ್ಟ ಸಹಿಷ್ಣುತೆ ಮತ್ತು ಶಾಂತಚಿತ್ತದಿಂದ ಮಾತ್ರವೇ ಅವರು ಇದನ್ನೆಲ್ಲಾ ಸಹಿಸಿದರು. ತಾಯ್ ಮಹಾರಾಜ್ ಪ್ರಕರಣದ ಎಲ್ಲ ಏಳುಬೀಳುಗಳಲ್ಲೂ ತಿಲಕರು ತೋರಿದ ನಿಷ್ಠೆ, ಪ್ರಾಮಾಣಿಕತೆ, ಮತ್ತು ಸಾಹಸದ ಉದಾಹರಣೆ ಅತ್ಯುನ್ನತ ಗೌರವವನ್ನು ಪಡೆಯಬೇಕಾದ ಅರ್ಹತೆಯನ್ನು ಅವರಿಗೆ ಕೊಟ್ಟಿದೆ.

ರಾಜದ್ರೋಹದ ಆಪಾದನೆಯ ಮೇಲೆ ಜೈಲುವಾಸಕ್ಕೊಳಗಾದ್ದರಿಂದ ನಿಂತು ಹೋಗಿದ್ದ ತಿಲಕರ ರಾಜಕೀಯ ಚಟುವಟಿಕೆಗಳ ಎಳೆಯನ್ನು ಪುನಃ ಮುಂದುವರೆಸುವ ಮೊದಲು, 1898 ಮತ್ತು 1904ರ ನಡುವೆ ಕೆಲವು ಸಂಗತಿಗಳನ್ನು ಇಲ್ಲಿ ತಿಳಿಯೋಣ. ಸಿಂಹಗಡದಲ್ಲಿ ಎರಡು ತಿಂಗಳು ವಿಶ್ರಾಂತಿ ತೆಗೆದುಕೊಂಡ ನಂತರ ತಿಲಕರು ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಮದ್ರಾಸ್‌ಗೆ ಹೋದರು. ಆದರೆ ಅದರಲ್ಲಿ ಸಕ್ರಿಯ ಪಾತ್ರವನ್ನೇನೂ ವಹಿಸಲಿಲ್ಲ. ಮದ್ರಾಸ್‌ನಿಂದ ಅವರು ಸಿಲೋನ್‌ಗೆ ಮನರಂಜನೆಗಾಗಿ ಹೋದರು. ಈ ಭೇಟಿ ಹಾಗೂ ಮುಂದಿನ ವರ್ಷದ ಕೊನೆಯಲ್ಲಿ ಬರ್ಮಾಗೆ ನೀಡಿದ ಭೇಟಿ ತಿಲಕರು ತಮ್ಮ ಜೀವನದಲ್ಲಿ ವಿಹಾರಕ್ಕೆಂದು ಹೊರಗಡೆ ಹೊರಟ ಎರಡೇ ಪ್ರಯಾಣಗಳಾಗಿದ್ದವು. ಸಿಲೋನ್‌ನ ಮತ್ತು ಬರ್ಮಾದ ಜನತೆಯ ನಡೆವಳಿಕೆಗಳನ್ನೂ, ಆಚರಣೆಗಳನ್ನೂ ಅವರು ನಿಕಟವಾಗಿ ಗಮನಿಸಿದರು ಹಾಗೂ ಅವರು ಗಮನಿಸಿದ ಅಂಶಗಳಿಂದ ಸಮಾಜ ಸುಧಾರಣೆ ಮತ್ತು ರಾಜಕೀಯ ಪ್ರಗತಿ ಒಟ್ಟಿಗೆ ಆಗಬೇಕಿಲ್ಲವೆಂಬ ಅವರ ಅಭಿಪ್ರಾಯ ಖಚಿತವಾಯಿತು. ಸಿಲೋನ್ ಮತ್ತು ಬರ್ಮಾ ಸಾಮಾಜಿಕವಾಗಿ ಭಾರತಕ್ಕಿಂತ ಬಹಳ ಮುಂದಿದ್ದರೂ, ರಾಜಕೀಯವಾಗಿ ಅವು ಭಾರತದ ಸ್ಥಿತಿಯಲ್ಲೇ ಇದ್ದವು. ಹಾಗೆ ನೋಡಿದರೆ, ಅವರಲ್ಲಿ ರಾಷ್ಟ್ರೀಯ ಜಾಗೃತಿ ಬಹಳ ತಡವಾಗಿ ಉಂಟಾಯಿತು. ಪೂನಾದಲ್ಲಿ ಮಾಡಿದ ಭಾಷಣವೊಂದರಲ್ಲಿ ತಿಲಕರು ಹೀಗೆ ನುಡಿದರು:

"ಭಾರತದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಮೊದಲು ಜಾತಿ, ಭೇದಗಳಿಲ್ಲದಿರುವುದು, ಧಾರ್ಮಿಕ ಸ್ವಾತಂತ್ರ್ಯ, ಮಹಿಳಾ ಶಿಕ್ಷಣ, ವಿಳಂಬ ವಿವಾಹ, ವಿಧವಾ ಪುನರ್ವಿವಾಹ, ವಿವಾಹ ವಿಚ್ಛೇದನ ಮುಂತಾದ ಎಲ್ಲ ಸುಧಾರಣೆಗಳು ಆಗಿರಬೇಕೆಂದು ಕೆಲವು ಉತ್ತಮ ಜನರು ಒಂದೇ ಸಮನೆ ಹೇಳುವ ಅಭ್ಯಾಸ ಹೊಂದಿದ್ದಾರೆ. ಈ ಎಲ್ಲ ಸುಧಾರಣೆಗಳು ಬರ್ಮಾದಲ್ಲಿ ಈಗಾಗಲೇ ಪ್ರಚಲಿತವಾಗಿವೆ. ಆದರೆ ಬರ್ಮೀಯರಲ್ಲಿ ತಮ್ಮ ಧರ್ಮ, ತಮ್ಮ ದೇಶ ಅಥವಾ ತಮ್ಮ ಕೈಗಾರಿಕೆಯ ಬಗ್ಗೆ ಅವನಿಂದ ನಿರೀಕ್ಷಿಸಲಾಗುವ ಭಾವನೆ ಕಂಡುಬರಲಿಲ್ಲ. ಆದ್ದರಿಂದ ಸಾಮಾಜಿಕ ಸುಧಾರಣೆ ಮತ್ತು ರಾಷ್ಟ್ರೀಯ ಪುನರುಜ್ಜೀವನದ ನಡುವೆ ಯಾವುದೇ ಅಂತರ್ಗತ ಸಂಬಂಧವಿಲ್ಲ ಎಂಬ ತೀರ್ಮಾನಕ್ಕೆ ನಾವು ಬರಬಹುದು."

ರ್‍ಯಾಂಡ್‌ನ ಕೊಲೆಗೆ ಚಾಫೇಕರ್ ಗಲ್ಲಿಗೇರಿದ ಮೇಲೆ ಒಂದು ಭೀಕರ ಕೃತ್ಯ ನಡೆಯಿತು. ಚಾಫೇಕರನಿಗೆ ದ್ರೋಹ ಮಾಡಿದರು ಎಂದು ಸಂಶಯಕ್ಕೊಳಗಾಗಿದ್ದ ದ್ರಾವಿಡ ಸೋದರರನ್ನು ಒಂದು ರಾತ್ರಿ ಪೂನಾದಲ್ಲಿ ಅವರ ಮನೆಯಿಂದ ಹೊರಗಡೆ ಕರೆಸಿ, ಗುಂಡಿಟ್ಟು ಕೊಲ್ಲಲಾಯಿತು. ಭಯೋತ್ಪಾದ ಕೃತ್ಯಗಳು ಹೀಗೆ ಮರುಕಳಿಸಿದ್ದ

ರಿಂದ ಆಂಗ್ಲೋ- ಇಂಡಿಯನ್ ಪತ್ರಿಕೆಗಳಿಗೆ ಪುನಃ ನಡುಕ ಉಂಟಾಯಿತು. "ತಿಲಕರು ಕೊಲೆಗಳ ವ್ಯವಸ್ಥಾಪಕರಾಗಿಲ್ಲದಿದ್ದರೂ ಅವರು ನಿರ್ದೇಶಿಸುತ್ತಿರುವ ಕೊಲೆಗಳ ಚಳವಳಿಯ ಬಗ್ಗೆ ಪ್ರಸ್ತಾಪಿಸಿದ ಲಂಡನ್ 'ಗ್ಲೋಬ್'ಪತ್ರಿಕೆಯ ಸುದ್ದಿಯನ್ನು 'ದಿ ಟೈಮ್ಸ್ ಆಫ್ ಇಂಡಿಯಾ' ಅಕ್ಟೋಬರ್‌ನಲ್ಲಿ ಪ್ರಕಟಿಸಿತು. ತಿಲಕರು ಕೂಡಲೇ ದಾವೆ ಹಾಕಿ 'ದಿ ಟೈಮ್ಸ್ ಆಫ್ ಇಂಡಿಯಾ' ಬೇಷರತ್ತಾಗಿ ಕ್ಷಮೆ ಕೋರುವಂತೆ ಮಾಡಿದರು. ತನ್ನ ಟೀಕೆಯನ್ನು ಸಮರ್ಥನೆ ಮಾಡುವ ಆಟಾಟೋಪ ತೋರಿಸಿದ ನಂತರ 'ಗ್ಲೋಬ್' ಸಹ ಕ್ಷಮೆ ಕೋರಬೇಕಾಗಿ ಬಂದಿತು.

ಜೂನ್ 4, 1899ರಂದು 'ಕೇಸರಿ'ಯಲ್ಲಿ ಪ್ರಖ್ಯಾತ ಅಗ್ರ ಲೇಖನವೊಂದನ್ನು ಬರೆಯುವ ಮೂಲಕ ಸಕ್ರಿಯ ರಾಜಕೀಯಕ್ಕೆ ತಾವು ಹಿಂತಿರುಗಿದ್ದನ್ನು ತಿಲಕರು ಸಾಂಕೇತಿಕವಾಗಿ ಸೂಚಿಸಿದರು. ಧಾರ್ಮಿಕ ಪ್ರಾರ್ಥನೆಯಾದ 'ಪುನಶ್ಚ ಹರಿ ಓಂ' ಈ ಲೇಖನದ ಶೀರ್ಷಿಕೆಯಾಗಿತ್ತು. ಲೇಖನದಲ್ಲಿ ಅವರು ಆವೇಶದಿಂದ ಏಕತೆಗಾಗಿ ಮನವಿ ಮಾಡಿದರು:

"ಪ್ಲೇಗಿನಿಂದಾದ ಅವ್ಯವಸ್ಥೆ ಮತ್ತು ಸರ್ಕಾರದ ಸಿಟ್ಟಿನ ನಿಲುವಿನಿಂದಾಗಿ ನಮ್ಮೆಲ್ಲ ಆಂದೋಲನಗಳು ತಟಸ್ಥವಾಗಿರುವುದು ನಮಗೆ ಕಂಡುಬರುತ್ತದೆ. ಅವುಗಳಿಗೆ ಪುನಃ ಜೀವ ತುಂಬುವುದು ನಮಗೆ ಬೇಕಾಗಿದ್ದರೆ, ನಾವು ಮೊದಲು ಒಗ್ಗಟ್ಟಾಗಬೇಕು. ಕಳೆದ ಎರಡು ವರ್ಷಗಳ ಅನುಭವದಿಂದ ನಾವು ಜಾಣರಾಗಬಾರದೇ? ನಮ್ಮನ್ನು ಆಳುವವರಿಂದ ನಾವು ಪಡೆಯಲಿಚ್ಛಿಸುವ ಹಕ್ಕುಗಳ ಬಗ್ಗೆ ಎರಡೂ ರಾಜಕೀಯ ಪಕ್ಷಗಳು ಒಮ್ಮತದಿಂದಿವೆ.

ಇದು ನಿಜವಾದಲ್ಲಿ, ಸೌಮ್ಯತೆಗೆ ಮತ್ತು ಉಗ್ರತೆಗೆ ಸ್ಥಳವೆಲ್ಲಿ? ಸರ್ಕಾರ ಈಗಾಗಲೇ ನಮ್ಮ ವಾಕ್ ಸ್ವಾತಂತ್ರ್ಯವನ್ನು ನಿರ್ಬಂಧಿಸಿದೆ. ಆದ್ದರಿಂದ ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಒತ್ತಿ ಹೇಳುವುದು ಆತ್ಮಘಾತಕ. ತಪ್ಪು ಸಂಶಯಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವುದರಿಂದ ನಾವು ಪರಸ್ಪರ ದೂರವಿರುವುದು ಬೇಡ."

ಸೌಮ್ಯವಾದಿಗಳಿಗೆ ಇಂತಹ ಮನವಿಗಳಿಗೆ ಕಿವಿಕೊಡುವ ಮನಸ್ಸಿರಲಿಲ್ಲ. ಸ್ವಭಾವದಲ್ಲಿ ತಿಲಕರಿಗಿಂತ ಭಿನ್ನವಾಗಿದ್ದೇ ಅಲ್ಲದೆ, ರಾಜದ್ರೋಹದ ಆಪಾದನೆಯಿಂದ ಶಿಕ್ಷೆಗೊಳಪಟ್ಟಾಗಿನಿಂದಲೂ ತಿಲಕರು ಅವರಿಗೆ ಒಂದು ರೀತಿಯ ಅನಿಷ್ಟ ಪ್ರಾಣಿಯಂತಾಗಿಬಿಟ್ಟಿದ್ದರು. ಕೇಂಬ್ರಿಜ್‌ನಿಂದ ಸೀನಿಯರ್ ರ್‍ಯಾಂಗ್ಲರ್ ಆಗಿ ಆರ್.ಸಿ. ಪರಾಂಜಪೆಯವರು ಹಿಂತಿರುಗಿದಾಗ ಡೆಕ್ಕನ್ ಎಜುಕೇಶನ್ ಸೊಸೈಟಿ ಅವರಿಗೆ ನೀಡಿದ ಸತ್ಕಾರ ಸಮಾರಂಭಕ್ಕೆ ತಿಲಕರನ್ನು ಆಹ್ವಾನಿಸಲೂ ಇಲ್ಲ. ಮುಂಬೈಯ ಗವರ್ನರ್ ಲಾರ್ಡ್ ಸ್ಯಾಂಡ್‌ಹರ್ಸ್ಟ್‌ನ ಆಳ್ವಿಕೆಯನ್ನು ಖಂಡಿಸುವ ಗೊತ್ತುವಳಿಯೊಂದನ್ನು ಲಖ್ನೊ ಕಾಂಗ್ರೆಸ್‌ನಲ್ಲಿ(1899) ತಿಲಕರು ಮಂಡಿಸಿದಾಗ, ಅದನ್ನು ವಿರೋಧಿಸಿ ಸೌಮ್ಯವಾದಿ ಪ್ರತಿನಿಧಿಗಳು ಬೊಬ್ಬೆ ಹಾಕಿದರು. ಗೊತ್ತುವಳಿಯನ್ನು ಮತಕ್ಕೆ ಹಾಕಲೇಬೇಕೆಂದು ಒತ್ತಾಯಪಡಿಸಿದರೆ ತಮ್ಮ ಸ್ಥಾನ ತ್ಯಜಿಸುವುದಾಗಿ ಅಧ್ಯಕ್ಷರಾಗಿದ್ದ ಆರ್.ಸಿ.ದತ್ ಬೆದರಿಕೆ ಹಾಕಿದಾಗ ಗೊತ್ತುವಳಿಯನ್ನು ವಾಪಸು ತೆಗೆದುಕೊಳ್ಳಬೇಕಾಯಿತು.

ಈ ಗೊತ್ತುವಳಿಗೆ ವ್ಯಕ್ತಪಡಿಸಿದ ಮುಖ್ಯ ಆಕ್ಷೇಪಣೆಯೆಂದರೆ ಅದು ಪ್ರಾಂತೀಯ

ವಿಷಯಕ್ಕೆ ಸಂಬಂಧಿಸಿತ್ತು ಎಂಬುದೇ ಆಗಿತ್ತು. ಆದ್ದರಿಂದ ತಿಲಕರು ಸತಾರಾದಲ್ಲಿ ಮೇ 1900ರಲ್ಲಿ ನಡೆದ ಮುಂಬೈ ಪ್ರಾಂತೀಯ ಸಮ್ಮೇಳನದಲ್ಲಿ ಈ ವಿಷಯವನ್ನೂ ಪುನಃ ಎತ್ತಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಜಿ.ಕೆ.ಪಾರೇಖ್ ಅವರ ನಾಯಕತ್ವದಲ್ಲಿ ಸೌಮ್ಯವಾದಿಗಳು ಅದನ್ನು ವಿರೋಧಿಸಿದರು. ಏಕೆಂದರೆ ಸರ್ಕಾರವನ್ನು ಖಂಡಿಸುವುದರಿಂದ ಆಗುವ ಪರಿಣಾಮಗಳ ಬಗ್ಗೆ ಅವರು ಹೆದರಿದ್ದರು. ಗೊತ್ತುವಳಿಯನ್ನು ನಿರರ್ಥಕಗೊಳಿಸಲಾಗದೆ ಹೋದರೂ, ಅದನ್ನು ಮುಂದಕ್ಕಾದರೂ ಹಾಕಬೇಕೆಂದು ಪಾರೇಖ್ ಅನೇಕ ತಂತ್ರಗಳನ್ನು ಪ್ರಯತ್ನಿಸಿದರು ಹಾಗೂ ಕೊನೆಗೆ ರಾಜಿಯಾಗುವಂತೆ ಪ್ರತಿನಿಧಿಗಳ ಮನಪ್ಪೊಲಿಸಿದರು. ತಿಲಕರು ಈ ಅಂಜಿಕೆಯನ್ನು ಹಳಿದು 'ಕೇಸರಿ'ಯಲ್ಲಿ ಹೀಗೆ ಬರೆದರು: "ಕಾಂಗ್ರೆಸ್‌ಗಳು ಮತ್ತು ಸಮ್ಮೇಳನಗಳನ್ನು ನಡೆಸುವುದು ಹೊಗಳು ಭಟ್ಟರು ಮತ್ತು ಅವರಂತಹ ಇತರ ವ್ಯಕ್ತಿಗಳು ಪ್ರತಿಯೊಬ್ಬ ಗವರ್ನರನಿಗೆ ಸ್ಮಾರಕಗಳನ್ನು ನಿರ್ಮಿಸುವುದಕ್ಕಲ್ಲ. ಸಾರ್ವಜನಿಕ ಅಭಿಪ್ರಾಯವನ್ನು ನಿರ್ಭೀತಿಯಿಂದ ಆದರೆ ಸಂಯಮದಿಂದ ಹೇಳಲು ಹಿಂಜರಿಯದೆ ಇರುವವರಿಗಾಗಿ ಅವುಗಳನ್ನು ನಡೆಸಲಾಗುತ್ತದೆ. ಆದ್ದರಿಂದ, ಮುಂಬೈ ಪ್ರಾಂತೀಯ ಸಮಿತಿಯ ಅಧ್ಯಕ್ಷರು ತಳೆದ ನಿಲುವು ಸ್ವೇಚ್ಛಾನುಸಾರದ ವಿಧಿಬದ್ಧವಲ್ಲದ ನಿಲುವಾಗಿದೆ."

ಮುಂಬೈ ವಿಧಾನ ಪರಿಷತ್ತಿನಲ್ಲಿ ಮಂಡಿಸಲಾದ ಭೂ ಕಂದಾಯ ಸಂಹಿತೆಯನ್ನು ತಿದ್ದುಪಡಿಮಾಡಿದ ಅಧಿಕೃತ ಮಸೂದೆಯ ನಂತರ ರೈತರ ಸಮಸ್ಯೆಗಳ ಬಗ್ಗೆ ತಿಲಕರು 1901ರಲ್ಲಿ 'ಕೇಸರಿ'ಯಲ್ಲಿ ಅನೇಕ ಲೇಖನಗಳನ್ನು ಬರೆದರು. ತಮ್ಮ ಭೂಮಿಗಳನ್ನು ಪರಭಾರೆ ಮಾಡುವ ಅನಿರ್ಬಂಧಿತ ಸ್ವಾತಂತ್ರ್ಯದಿಂದ ರೈತರು ವಾರ್ಷಿಕ ಗೇಣಿದಾರರ ಸ್ಥಿತಿಗೆ ಇಳಿಯುತ್ತಿದ್ದಾರೆಂಬ ಕಾರಣದ ಮೇಲೆ ಸಾಹುಕಾರರಿಗೆ ತನ್ನ ಭೂಮಿಯನ್ನು ಒತ್ತೆ ಇಡುವ ಅಥವಾ ಮಾರುವ ರೈತನ ಸಾಮರ್ಥ್ಯವನ್ನು ನಿರ್ಬಂಧಿಸಲು ಮಸೂದೆ ಉದ್ದೇಶಿಸಿತ್ತು. ಪರಿಷತ್ತಿನಲ್ಲಿ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿತ್ತು. ಸಾರ್ವಜನಿಕ ಅಭಿಪ್ರಾಯವನ್ನು ತಿಳಿಯಲು ಮಸೂದೆಯ ಪರಿಶೀಲನೆಯನ್ನು ಮುಂದೆ ಹಾಕಬೇಕೆಂಬ ಫಿರೋಜ್‌ಶಾ ಮೆಹ್ತಾ ಅವರ ತಿದ್ದುಪಡಿಯನ್ನು ತಿರಸ್ಕರಿಸಿದಾಗ, ಅವರ ಮತ್ತು ಗೋಖಲೆಯವರ ಮುಖಂಡತ್ವದ ಎಲ್ಲ ಚುನಾಯಿತ ನಾಯಕರು ಸಭಾತ್ಯಾಗ ಮಾಡಿದರು. ಮುಂಬೈ ವಿಧಾನ ಪರಿಷತ್ತಿನಲ್ಲಿ ಮೊದಲ ಬಾರಿಗೆ ಇಂತಹ ಸಭಾತ್ಯಾಗ ನಡೆದಿದ್ದು, ಅದರಿಂದ ಕೋಲಾಹಲ ಉಂಟಾಯಿತು. ಆಗ ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಾಹುಕಾರರು ಮತ್ತು ರೈತರ ನಡುವಣ ಪರಸ್ಪರ ಸಂಬಂಧವನ್ನು ನಾಶಪಡಿಸುವ ಉದ್ದೇಶ ಹೊಂದಿದ್ದ ಮಸೂದೆಗೆ ಮೆಹ್ತಾ ತೋರಿದ ವಿರೋಧಕ್ಕೆ ತಿಲಕರು ಬಲವಾದ ಬೆಂಬಲ ನೀಡಿದರು.

ದಿಲ್ಲಿ ಕಾಂಗ್ರೆಸ್ (1901) ಮತ್ತು ಕಲ್ಕತ್ತೆಯ ಕಾಂಗ್ರೆಸ್‌ಗಳಲ್ಲಿ ತಿಲಕರನ್ನು ಹರ್ಷೋದ್ಗಾರಗಳಿಂದ ಅಭಿನಂದಿಸಲಾಯಿತು. ಅವರು ಕಲ್ಕತ್ತೆಯಲ್ಲಿದ್ದ ಬಗ್ಗೆ ಗಾಂಧೀಜಿ ಹೀಗೆ ಬರೆದಿದ್ದಾರೆ: "ನಾನಿದ್ದ ಬ್ಲಾಕ್‌ನಲ್ಲೇ ಲೋಕಮಾನ್ಯರೂ ಇದ್ದರು. ಅವರು ಬಂದು ದಿನ ತಡವಾಗಿ ಬಂದ ನೆನಪು ನನಗೆ. ಎಂದಿನಂತೆ, ಲೋಕಮಾನ್ಯರು ತಮ್ಮ ದರ್ಬಾರಿಲ್ಲದೆ ಇದ್ದಿರಲಿಲ್ಲ. ನಾನೊಬ್ಬ ಚಿತ್ರಕಾರನಾಗಿದ್ದರೆ, ಹಾಸಿಗೆಯ ಮೇಲ್ಲೆ

ಅವರು ಕುಳಿತಿದ್ದನ್ನು ನಾನು ನೋಡಿದ್ದಂತೆಯೇ ಚಿತ್ರಿಸುತ್ತಿದ್ದೆ – ನನ್ನ ನೆನಪಿನಲ್ಲಿ ಇಡೀ ದೃಶ್ಯ ಅಷ್ಟು ನಿಚ್ಚಳವಾಗಿದೆ. ಅವರನ್ನು ಭೇಟಿ ಮಾಡಿದ ಅಸಂಖ್ಯಾತ ಜನರ ಪೈಕಿ ಒಬ್ಬರನ್ನು ಮಾತ್ರ ಇಂದು ನಾನು ನೆನಪು ಮಾಡಿಕೊಳ್ಳಬಲ್ಲೆ. ಅವರೇ ಬಾಬು ಮೋತಿ ಲಾಲ್ ಘೋಷ್. ಅವರ ಗಟ್ಟಿ ನಗು ಮತ್ತು ಆಳುವ ಜನಾಂಗದ ತಪ್ಪು ಕೃತ್ಯಗಳ ಬಗ್ಗೆ ಅವರಾಡಿದ ಮಾತುಗಳನ್ನು ಮರೆಯಲು ಸಾಧ್ಯವಿಲ್ಲ."

'ಕೇಸರಿ'ಯ ಗಾತ್ರವನ್ನು ಫೆಬ್ರವರಿ 1902ರಲ್ಲಿ ದ್ವಿಗುಣಗೊಳಿಸಲಾಯಿತು. ಹಿಂದಿನ 21 ವರ್ಷಗಳಲ್ಲಿ ಆದ ಅದರ ಪ್ರಗತಿಯನ್ನು ಪುನರ್‌ಪರಿಶೀಲಿಸಲು ತಿಲಕರು ಈ ಸಂದರ್ಭವನ್ನು ಉಪಯೋಗಿಸಿಕೊಂಡರು. ಈ ಅವಧಿಯಲ್ಲಿ ಪತ್ರಿಕೆಯ ಪ್ರಸಾರ 700 ರಿಂದ 13,000ಕ್ಕೆ ಏರಿತ್ತು. ಪತ್ರಿಕೆಯನ್ನು ಓದುವವರ ಸಂಖ್ಯೆ ಅದರ ಅನೇಕ ಪಟ್ಟಿನಷ್ಟಿತ್ತು. ಏಕೆಂದರೆ ಸರ್ಕಾರ – ವಿರೋಧಿ ಪತ್ರಿಕೆಗೆ ಬಹಿರಂಗವಾಗಿ ಚಂದಾದಾರ ರಾಗುವುದಕ್ಕೆ ಜನರು ಹೆದರುತ್ತಿದ್ದರು. ತಿಲಕರು ತಮ್ಮ ಪತ್ರಿಕೆಯ ಧೋರಣೆಯನ್ನು ಪುನಃ ಸ್ಪಷ್ಟವಾಗಿ ತಿಳಿಸಿದರು.

"ತಮ್ಮ ಹಕ್ಕುಗಳಿಗಾಗಿ ಹೋರಾಡಲು ಬಲವನ್ನು ಗಳಿಸುವುದಕ್ಕಾಗಿ ನಿರ್ಭೀತ ರಾಗಿರಬೇಕೆಂದು ಜನರಿಗೆ ಕಲಿಸುವುದು ನಮ್ಮ ಇಚ್ಛೆಯಾಗುವವರೆಗೆ, ನಾವು ಯಾವು ದಕ್ಕೂ ಹೆದರಬೇಕಾದ್ದಿಲ್ಲ. ಲಾರ್ಡ್ ಲಿಟ್ಟನ್ ಪತ್ರಿಕಾ ಕಾಯಿದೆಯನ್ನು ಜಾರಿಗೆ ತಂದ ಸಮಯದಲ್ಲಿ 'ಕೇಸರಿ' ಜನ್ಮ ತಾಳಿತು. ವೃತ್ತಪತ್ರಿಕೆಗಳಲ್ಲಿ ಬರೆದದ್ದು ಆಳುವವರ ಮನಸ್ಸು ನೋಯಿಸಬಾರದ ರೀತಿಯಲ್ಲಿ ಇರಬೇಕೆಂದು ಆಗ ಭಾವಿಸಲಾಗಿತ್ತು. ಆ ಕಾಲ ಈಗ ಹೋಗಿದೆ. ಜನರನ್ನು ಜಾಗ್ರತಗೊಳಿಸಲೂ, ಅವರಿಗೆ ನಿಷ್ಠೆಯನ್ನು ಮತ್ತು ಏಕತೆಯ ಭಾವನೆಯನ್ನು ಕಲಿಸಲೂ ಕಾರ್ಯಪ್ರವೃತ್ತರಾಗುವುದು ನಮ್ಮ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಆಳುವವರ ಸಲುವಾಗಿ ನಾವು ಬರೆಯುವುದಿಲ್ಲ, ಆದರೆ ಓದುಗರು ನಮ್ಮ ಚೇತನವನ್ನು ಮೈಗೂಡಿಸಿಕೊಳ್ಳಲಿ, ನಮ್ಮ ವಿಚಾರಗಳನ್ನೂ, ನಮ್ಮ ನೋವುಗಳನ್ನೂ ಮತ್ತು ನಮ್ಮ ಕ್ರೋಧವನ್ನೂ ಅರಿತುಕೊಳ್ಳಲಿ ಎಂದು ನಾವು ಬರೆಯುತ್ತೇವೆ."

ಜನವರಿ 1903ರಲ್ಲಿ ತಿಲಕರ ಜ್ಯೇಷ್ಠ ಪುತ್ರ ವಿಶ್ವನಾಥ ಪ್ಲೇಗಿನಿಂದ ನಿಧನನಾದ. ಅನೇಕರು ವ್ಯಕ್ತಪಡಿಸಿದ ಸಂತಾಪಕ್ಕೆ ಅವರು ತೋರಿದ ಪ್ರತಿಕ್ರಿಯೆ ಅವರ ಸ್ವಭಾವಕ್ಕೆ ಸಹಜವಾಗಿತ್ತು. "ಇಡೀ ನಗರ ಹತ್ತಿಕೊಂಡು ಉರಿಯುವಾಗ, ಪ್ರತಿಯೊಬ್ಬರೂ ತಮ್ಮ ಪಾಲಿನ ಎಣ್ಣೆ ಸುರಿಯಬೇಕು." ಮರುದಿನ ಬೆಳಿಗ್ಗೆ ಅವರು 'ಕೇಸರಿ'ಯ ಅಗ್ರ ಲೇಖನ ವೊಂದನ್ನು ಹೇಳಿ ಬರೆಸುತ್ತಿದ್ದಾಗ, ಅವರ ಕಿರಿಯ ಮಗನಿಗೆ ಜ್ವರ ಬಂದಿದೆಯೆಂಬ ಸುದ್ದಿಯನ್ನು ಅವರಿಗೆ ತಿಳಿಸಲಾಯಿತು. ಅವರ ಸ್ಥಾನದಲ್ಲಿ ಬೇರೆ ಯಾವ ವ್ಯಕ್ತಿ ಇದ್ದಿದ್ದರೂ, ಸಂಪೂರ್ಣವಾಗಿ ನಿರ್ವಿಣ್ಣರಾಗಿ ಬಿಡುತ್ತಿದ್ದರು. ಆದರೆ ತಿಲಕರು ತಮ್ಮ ಸ್ವಭಾವಕ್ಕೆ ತಕ್ಕಂತೆ, ಹಸ್ತಪ್ರತಿಯನ್ನು ಮತ್ತೊಮ್ಮೆ ಓದಿ ಮುದ್ರಣಕ್ಕೆ ಕಳಿಸುವವರೆಗೂ ತಮ್ಮ ಕೆಲಸದಲ್ಲಿ ತಲ್ಲೀನರಾಗಿದ್ದರು.

ಯರಾವ್ಡ ಜೈಲಿನಲ್ಲಿದ್ದಾಗ ತಿಲಕರು ರೂಪುರೇಷೆ ಹಾಕಿದ್ದ 'ದಿ ಆರ್ಕ್ಟಿಕ್ ಹೋಮ್ ಇನ್ ದಿ ವೇದಾಸ್' ಎಂಬ ಪುಸ್ತಕ 1903ರಲ್ಲಿ ಪ್ರಕಟವಾಯಿತು.

ಪುಸ್ತಕದ ಹೆಚ್ಚಿನ ಭಾಗವನ್ನು 1902ರಲ್ಲಿ ಸಿಂಹಗಡದಲ್ಲಿ ಬರೆದಿದ್ದರು. ತಿಲಕರು ಗಂಟೆಗಟ್ಟಳೆ ಒಂದೇ ಸಮನೆ ಹೇಳಿ ಬರೆಸುತ್ತಿದ್ದರು. ಆದರೆ ಹೊಸ ವಿಚಾರ ಹೊಳೆದಾಗ ಬರೆವಣಿಗೆಯನ್ನು ದೀರ್ಘಕಾಲ ನಿಲ್ಲಿಸಲಾಗುತ್ತಿತ್ತು. ಹೆಚ್. ಡಬ್ಲ್ಯು. ನೆವಿನ್‌ಸನ್ ಹೇಳಿದಂತೆ ವೇದಗಳ ಸಂಶೋಧನೆಗೆ ಪುಸ್ತಕ ಹೊಂದಿರುವ ಮೌಲ್ಯವೇ ಅಲ್ಲದೆ, "ಲೇಖಕರು ಅನೇಕ ಹಿಂಸೆಗಳಿಗೆ ಒಳಗಾಗಿದ್ದಾಗ, ಹಣ, ಹೆಸರು, ಪ್ರಭಾವ ಮತ್ತು ಉಳಿದೆಲ್ಲವೂ ಪಣವಾಗಿದ್ದಾಗ, ಪವಿತ್ರ ಗ್ರಂಥಗಳ ಬಗ್ಗೆಯಾಗಲೀ, ಆರ್ಕ್ಟಿಕ್ ವೃತ್ತಗಳ ಬಗ್ಗೆಯಾಗಲೀ ವಿಚಾರ ಮಾಡುವ ಸಾಹಸವನ್ನು ಬಹಳ ಕೆಲವೇ ಮಂದಿ ಹೊಂದಿರುತ್ತಿದ್ದ ಸಮಯದಲ್ಲಿ ಅದು ಕಾಣಿಸಿಕೊಂಡಿದ್ದರಿಂದ" ಪುಸ್ತಕ ಗಮನಾರ್ಹವಾಗಿದೆ.

ಅಧ್ಯಾಯ 10

ಚೈತನ್ಯ ತುಂಬಿದ ಧೋರಣೆ

ತಾಯ್ ಮಹಾರಾಜ್ ಪ್ರಕರಣದಲ್ಲಿ ಮಗ್ನರಾಗಿದ್ದರಿಂದ, ಎರಡು ವರ್ಷಗಳನ್ನು ಬಿಟ್ಟು ತಿಲಕರು ಮುಂಬೈಯಲ್ಲಿ (ಡಿಸೆಂಬರ್ 1904) ಕಾಂಗ್ರೆಸ್ ಅಧಿವೇಶನದಲ್ಲಿ ಭಾಗ ವಹಿಸಿದರು ಹಾಗೂ ಅಲ್ಲಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಿ ಸ್ವಾಗತಿಸಲಾಯಿತು. ಕಾಂಗ್ರೆಸ್ ಚೈತನ್ಯ ತುಂಬಿದ ಧೋರಣೆಯನ್ನು ಅನುಸರಿಸಬೇಕೆಂಬ ಸರ್ ಹೆನ್ರಿ ಕಾಟನ್ ಮತ್ತು ವೆಡ್ಡೆರ್‌ಬರ್ನ್ ಅವರ ಹೇಳಿಕೆಯನ್ನು ತಿಲಕರು ಸಂಪೂರ್ಣವಾಗಿ ಸಮರ್ಥಿಸಿ ದ್ದರು. ಸರ್ ಹೆನ್ರಿ ಕಾಟನ್ ಅಧಿವೇಶನದ ಅಧ್ಯಕ್ಷತೆವಹಿಸಿದ್ದರು. ಕಾಂಗ್ರೆಸ್‌ನ ಯುವ ವರ್ಗಗಳು ಇಂತಹ ಧೋರಣೆಯ ಬಗ್ಗೆ ಉತ್ಸಾಹ ಹೊಂದಿದ್ದವು. ಆದರೆ ಕಾಂಗ್ರೆಸ್‌ನ ಮೇಲೆ ಮೇಲುಗೈ ಹೊಂದಿದ್ದ ಫಿರೋಜ್‌ಶಾ ಮೆಹ್ತಾರಿಗೆ ಬದಲಾವಣೆ ಬೇಡವಾಗಿತ್ತು. ಅಮ್‌ಸ್ಟರ್ಡಾಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ, ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯನ್ನು ಖಂಡಿಸುವ ಗೊತ್ತುವಳಿಯನ್ನು ಅಂಗೀಕರಿಸ ಲಾಗಿತ್ತು. ಈ ಸಮ್ಮೇಳನದಲ್ಲಿ ದಾದಾಭಾಯಿ ನವರೋಜಿ ಹುರುಪಿನ ಪಾತ್ರ ವಹಿಸಿದ್ದರು. ಅದರ ಬಗ್ಗೆಯೂ ಮೆಹ್ತಾ ಪ್ರತಿಕೂಲ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಕಾಂಗ್ರೆಸ್‌ಗೆ ಒಂದು ಘಟನೆಯನ್ನು ರೂಪಿಸುವ ಬಗ್ಗೆ ಹಾಗೂ ಅದು ವರ್ಷದುದ್ದಕ್ಕೂ ಕಾರ್ಯಪ್ರವೃತ್ತವಾಗಿರಬೇಕೆಂಬ ಸೂಚನೆಯ ಬಗ್ಗೆಯೂ ಅವರು ನಿರಾಸಕ್ತರಾಗಿದ್ದರು.

ಗೋಖಲೆಯವರು 1905 ರಲ್ಲಿ ಬ್ರಿಟನ್‌ಗೆ ಭೇಟಿ ಕೊಟ್ಟಿದ್ದಾಗ ಬಹಿಷ್ಕಾರಕ್ಕೆ ಬೆಂಬಲ ನೀಡಿದ್ದು ಅವರಲ್ಲಿ ಸಿಟ್ಟನ್ನುಂಟುಮಾಡಿತ್ತು. ಗೋಖಲೆಯವರು ಅಧ್ಯಕ್ಷತೆ ವಹಿಸಿದ್ದ ವಾರಣಾಸಿಯಲ್ಲಿ ನಡೆದ ಮುಂದಿನ ಕಾಂಗ್ರೆಸ್ ಅಧಿವೇಶನಕ್ಕೆ (ಡಿಸೆಂಬರ್ 1905) ಹೋಗದೆ ತಮ್ಮ ಈ ಸಿಟ್ಟನ್ನು ಅವರು ತೋರಿಸಿಕೊಂಡರು. ಬಂಗಾಲದ ವಿಭಜನೆಯಿಂದ ಉಂಟಾದ ಸಾರ್ವಜನಿಕ ರೋಷವನ್ನು ರಾಷ್ಟ್ರೀಯ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಬೇಕೆಂದು ತಿಲಕ್ ಮತ್ತು ಇತರ ಉಗ್ರವಾದಿ ನಾಯಕರು ಇಚ್ಛಿ ಸಿದರು. ಕಾಂಗ್ರೆಸ್ ಸಂಸ್ಥೆಯನ್ನು ಒಂದು ಪೌರುಷ ಸಂಸ್ಥೆಯನ್ನಾಗಿ ಪರಿವರ್ತಿಸಲು ಅವರು ಬಯಸಿದರು. ತಿಲಕರು ಹೀಗೆ ಹೇಳಿದರು:

"ಕಾಂಗ್ರೆಸ್‌ನ ಕಾಲಹರಣ ಚಟುವಟಿಕೆಗಳಲ್ಲಿ ನಾವು ನಂಬಿಕೆ ಕಳೆದುಕೊಂಡಿದ್ದೇವೆ. ವರ್ಷದಲ್ಲಿ ಮೂರು ದಿನ ಕಾಂಗ್ರೆಸ್ ಸಮ್ಮೇಳನ ನಡೆಸುವುದೂ, ಯಾವಾಗಲಾದರೊಮ್ಮೆ ಇಂಗ್ಲೆಂಡಿಗೆ ನಿಯೋಗವೊಂದನ್ನು ಕಳಿಸುವುದೂ ಏನೇನೂ ಸಾಲದು ಎಂದು ನಮಗ ನಿಸುತ್ತದೆ. ಬ್ರಿಟಿಷ್ ಸರ್ಕಾರವನ್ನು ಉರುಳಿಸುವುದು ನಮಗೆ ಬೇಕಿಲ್ಲ. ಆದರೆ ರಾಜ ಕೀಯ ಹಕ್ಕುಗಳಿಗಾಗಿ ನಾವು ಹೋರಾಡಬೇಕು. ಈ ಹಕ್ಕುಗಳನ್ನು ಮನವೊಲಿಸು ವುದರಿಂದ ಗಳಿಸಬಹುದು ಎಂದು ಸೌಮ್ಯವಾದಿಗಳು ಭಾವಿಸಿದ್ದಾರೆ. ಬಲವಾದ ಒತ್ತಾ ಯದಿಂದ ಅವುಗಳನ್ನು ಗಳಿಸಬಹುದು ಎಂದು ನಾವು ಭಾವಿಸಿದ್ದೇವೆ. ಇಂತಹ ಒತ್ತಾಯ

ಉಂಟುಮಾಡಲು ಕಾಂಗ್ರೆಸ್ ಶ್ರಮಿಸುತ್ತದೆಯೇ? ಇದೇ ಮುಖ್ಯವಾದ ಅಂಶ. ಅಂತಹ ಒತ್ತಾಯವನ್ನು ಮಾಡಬೇಕಾದರೆ ಕಾಂಗ್ರೆಸ್ ನಾಯಕರು ಸಂಸ್ಥೆಯ ಪ್ರಸಕ್ತ ಸ್ವರೂಪವನ್ನು ಕಳಚಬೇಕು ಹಾಗೂ ನಿರಂತರವಾಗಿ ಮತ್ತು ಉತ್ಸಾಹದಿಂದ ಕೆಲಸ ಮಾಡುವ ಸಂಸ್ಥೆಯಾಗಿ ಅದನ್ನು ಪರಿವರ್ತಿಸಬೇಕು."

ಉಗ್ರವಾದಿಗಳನ್ನು ಅನುಸರಿಸುವ ಮನಸ್ಸು ಸೌಮ್ಯವಾದಿಗಳಿಗಿರಲಿಲ್ಲವಾದರೂ, ಗೋಖಲೆಯವರಲ್ಲಿ ಹೊಸ ಬದಲಾವಣೆ ಉಂಟಾದಂತೆ ಕಂಡಿತು. ವಾರಣಾಸಿಯಲ್ಲಿ ಅವರು ಅಧ್ಯಕ್ಷೀಯ ಭಾಷಣ ಮಾಡುತ್ತಾ, ಬಂಗಾಲದಲ್ಲಿ ಜನತೆ ಮೇಲೆದ್ದಿರುವುದು ರಾಷ್ಟ್ರೀಯ ಪ್ರಗತಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ ಎಂದು ಹೇಳಿದರು. ಅವರು ಸ್ವದೇಶಿ ಹಾಗೂ ಬಹಿಷ್ಕಾರ ಚಳವಳಿಯನ್ನೂ ಬೆಂಬಲಿಸಿದರು ಮತ್ತು ಬಂಗಾಲದ ಮೇಲೆ ಎಸಗಿದ ಅನ್ಯಾಯಕ್ಕಾಗಿ ಲಾರ್ಡ್ ಕರ್ಜನ್‌ನನ್ನು ಖಂಡಿಸಿದರು. ಆದರೆ, ಸೌಮ್ಯವಾದಿಗಳ ಮಾಮೂಲು ವಿಚಾರಗಳಿಂದ ಅವರನ್ನು ವಿಮುಖಗೊಳಿಸುವುದಕ್ಕೆ ಗೋಖಲೆಯವರ ವೈಯಕ್ತಿಕ ಒಲವು ಸಾಕಾಗಿರಲಿಲ್ಲ. ಬಹಿಷ್ಕಾರದ ಗೊತ್ತುವಳಿಗೆ ಅವರು ಗೊಣಗಿಕೊಂಡೇ ಬೆಂಬಲ ಕೊಟ್ಟರು. ಆದರೆ, ಆಗ ಭಾರತದಲ್ಲಿದ್ದ ಪ್ರಿನ್ಸ್ ಆಫ್ ವೇಲ್ಸ್‌ಗೆ ಸ್ವಾಗತ ನೀಡುವ ಗೊತ್ತುವಳಿಯ ಬಗ್ಗೆ ಎರಡು ಗುಂಪುಗಳ ನಡುವೆ ಭಿನ್ನಾಭಿಪ್ರಾಯಗಳ ಘರ್ಷಣೆ ಉಂಟಾಯಿತು. ಸಾಂಪ್ರದಾಯಿಕವಾಗಿ ತೋರುವ ಈ ರಾಜಭಕ್ತಿಯ ಪ್ರದರ್ಶನದ ಬಗ್ಗೆ ಸೌಮ್ಯವಾದಿಗಳು ಉತ್ಸುಕರಾಗಿದ್ದರೂ, ದೇಶದ ಪ್ರಸ್ತುತ ಭಾವನೆಗಳಿಗೆ ಸಮಂಜಸವಾಗಿಲ್ಲವೆಂದು ತಿಲಕ್ ಮತ್ತು ಲಜಪತ್ ರಾಯ್ ಅದನ್ನು ವಿರೋಧಿಸಿದರು. ಕೊನೆಗೆ, ಗೋಖಲೆಯವರ ವೈಯಕ್ತಿಕ ಕೋರಿಕೆಯ ಮೇರೆಗೆ ಸ್ವಾಗತ ನೀಡುವ ಗೊತ್ತುವಳಿಯನ್ನು ಮಂಡಿಸಿದಾಗ ತಿಲಕರ ಗುಂಪು ಸಭೆಯಲ್ಲಿ ಹಾಜರಿರಬಾರದು ಮತ್ತು "ಸರ್ವಾನುಮತದಿಂದ ಅಂಗೀಕರಿಸಲಾಯಿತು" ಎಂದು ಸಾರುವುದಿಲ್ಲ ಎಂಬ ರಾಜಿಗೆ ಬರಲಾಯಿತು.

ಕಾಂಗ್ರೆಸ್ ಏಕತೆಯ ಮುಖವಾಡವನ್ನು ವಾರಣಾಸಿಯಲ್ಲಿಯೂ ಕಾಪಾಡಿಕೊಂಡು ಬರಲಾಯಿತು. ಆದರೆ ಅದರಲ್ಲಿ ಕಾಣುತ್ತಿದ್ದ ಸಂದುಗಳನ್ನೂ, ಬಿರುಕುಗಳನ್ನೂ ಮುಚ್ಚಿಡುವುದು ಸಾಧ್ಯವಾಗಲಿಲ್ಲ. ಉಗ್ರವಾದಿಗಳು ವಿಶೇಷವಾಗಿ ಬಂಗಾಲ, ಮುಂಬೈ ಮತ್ತು ಪಂಜಾಬ್‌ನಲ್ಲಿ ಉದ್ವಿಗ್ನರಾಗಿದ್ದರು. ಸೌಮ್ಯವಾದಿಗಳ ಬಗ್ಗೆ ದೃಢ ನಿಲುವನ್ನು ತಾಳುವಂತೆ ಮತ್ತು ಕಾಂಗ್ರೆಸ್‌ಗೆ ಅಂಟಿಕೊಂಡಿದ್ದ ಜಡತೆಯನ್ನು ನಿವಾರಿಸುವಂತೆ ಅವರು ತಮ್ಮ ನಾಯಕರಿಗೆ ಕರೆ ಕೊಟ್ಟರು. ವಾರಣಾಸಿ ಕಾಂಗ್ರೆಸ್‌ನ ನಂತರ ತಿಲಕರು ಸಾತ್ವಿಕ ಪ್ರತಿರೋಧದ ವಿಚಾರವನ್ನು ಪ್ರಸ್ತಾಪಿಸಿದರು. ವಾರಣಾಸಿಯಲ್ಲಿ ಆದ ಬೆಳವಣಿಗೆಗಳ ಬಗ್ಗೆ ಸೌಮ್ಯವಾದಿಗಳಿಗೆ ಸಮಾಧಾನವಿರಲಿಲ್ಲ. ಅಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳ ಬಗ್ಗೆ ಉಗ್ರವಾದಿಗಳು ಅವರೊಂದಿಗೆ ಬಲವಾದ ವಾಗ್ವಾದ ನಡೆಸಿದ್ದರು. ಅಧ್ಯಕ್ಷರ ನಿರ್ದಾಕ್ಷಿಣ್ಯವಾದ ಭಾಷಣದ ಬಗ್ಗೆಯೂ ಅವರಿಗೆ ಸಾಕಷ್ಟು ಕಳವಳ ಉಂಟಾಗಿತ್ತು. ಅಧ್ಯಕ್ಷರ ಭಾಷಣದಿಂದ, ಅವರು ಸೌಮ್ಯತೆಯನ್ನು ಬಿಟ್ಟುಕೊಟ್ಟಿದ್ದಾರೆಂಬ ಅಭಿಪ್ರಾಯ ಸೌಮ್ಯವಾದಿಗಳಲ್ಲಿ ಉಂಟಾಗಿತ್ತು. ಗೋಖಲೆಯವರ ತಲೆ ಸೌಮ್ಯವಾದಿಗಳ ಶಿಬಿರದಲ್ಲಿ

ದೃಢವಾಗಿ ಅಂಟಿಕೊಂಡಿದ್ದರೂ, ವಾರಣಾಸಿಯಲ್ಲಿ ಅವರ ಹೃದಯ ಉಗ್ರವಾದಿಗಳೊಂದಿಗೆ ಇದ್ದಂತೆ ಕಂಡುಬಂದಿತು.

ಮುಂದಿನ ಕೆಲವು ತಿಂಗಳುಗಳು ಎರಡೂ ಗುಂಪುಗಳು ಕಲ್ಕತ್ತ ಕಾಂಗ್ರೆಸ್‌ನಲ್ಲಿ ಸಂಪೂರ್ಣವಾಗಿ ಮೇಲುಗೈ ಪಡೆಯಲು ಹೋರಾಟವನ್ನು ಮುಂದುವರೆಸುವ ಸಿದ್ಧತೆಯಲ್ಲಿ ತೊಡಗಿದವು. ಆದರೆ ಅದಕ್ಕೂ ಬಹಳ ಮೊದಲೇ, ಯಾರು ಕಾಂಗ್ರೆಸ್‌ನ ಅಧ್ಯಕ್ಷರಾಗಬೇಕೆಂಬ ವಿಷಯದ ಬಗ್ಗೆ ಸತ್ವಪರೀಕ್ಷೆಯ ಸಮಯ ಉಂಟಾಯಿತು. ತಿಲಕರು ಅಧಿವೇಶನದ ಅಧ್ಯಕ್ಷರಾಗಬೇಕೆಂದು ಪಾಲ್ ಮತ್ತು ಇತರ ಬಂಗಾಲಿ ನಾಯಕರು ಉತ್ಸುಕರಾಗಿದ್ದರು. ಲಜಪತ್‌ರಾಯ್ ಅಧ್ಯಕ್ಷರಾಗಬೇಕೆಂದು ತಿಲಕರು ಬಯಸಿದ್ದರು. ಬಂಗಾಲದ ಕುಪಿತ ಮನೋಸ್ಥಿತಿಯಲ್ಲಿ ಕಲ್ಕತ್ತ ಅಧಿವೇಶನದಲ್ಲಿ ಏನಾಗುತ್ತದೋ ಎಂದು ಹೆದರಿದ್ದ ಸೌಮ್ಯವಾದಿಗಳಿಗೆ ಈ ಎರಡೂ ಹೆಸರುಗಳು ಬೇಡವೇಬೇಡವಾಗಿದ್ದವು. ತೀವ್ರವಾಗಿ ಹತಾಷರಾಗಿದ್ದ ಸೌಮ್ಯವಾದಿಗಳಿಗೆ, ವಯೋವೃದ್ಧರಾದ ದಾದಾಭಾಯಿ ನವರೋಜಿಯವರನ್ನು ಮೂರನೆಯ ಸಲ ಕಾಂಗ್ರೆಸ್ ಅಧ್ಯಕ್ಷರಾಗಲು ಸ್ವಾಗತಿಸುವ ವಿಚಾರ ಹೊಳೆಯಿತು. ಈ ಹಿರಿಯ ವ್ಯಕ್ತಿಯನ್ನು ಯಾರೂ ವಿರೋಧಿಸುವುದಿಲ್ಲ ಎಂದು ಅವರು ಸರಿಯಾಗಿಯೇ ನಂಬಿದ್ದರು. ಸ್ವಾಗತ ಸಮಿತಿಯ ಔಪಚಾರಿಕ ಮಂಜೂರಾತಿಯೂ ಇಲ್ಲದೆ ಅವರಿಗೆ ಆಹ್ವಾನ ಕಳಿಸಲಾಯಿತು.

ಸೌಮ್ಯವಾದಿಗಳ ಈ ಹತಾಶ ತಂತ್ರದ ಬಗ್ಗೆ ತಿಲಕರು ಒಳಗೊಳಗೇ ನಕ್ಕಿರಬೇಕು. ದಾದಾಭಾಯಿಯವರನ್ನು ಆರಿಸುವ ಮೂಲಕ ಅವರು ಹುಲಿಯನ್ನೇ ಹಿಡಿದಿದ್ದಾರೆ ಎಂಬುದು ತಿಲಕರಿಗೆ ತಿಳಿದಿತ್ತು. ಏಕೆಂದರೆ ದಾದಾಭಾಯಿ ಉಗ್ರಗಾಮಿಗಳಲ್ಲಿ ಉಗ್ರಗಾಮಿಯಾಗಿದ್ದರು. ಭಾವಿ ಅಧ್ಯಕ್ಷರು ಬರುವ ಮುನ್ನ ತಿಲಕರು 'ಕೇಸರಿ'ಯಲ್ಲಿ ಹೀಗೆ ಬರೆದರು: " ಭಾರತದ ಮೇಲೆ ನಡೆಯುತ್ತಿರುವ ಬ್ರಿಟಿಷ್ ಆಡಳಿತ ದೇಶದ ಸತ್ವವನ್ನೇ ಹೀರುತ್ತಿರುವ, ಒಳಗೇ ನಶಿಸುವ ವ್ರಣವ್ಯಾಧಿಯಾಗಿದೆ ಎಂಬುದು ದಾದಾಭಾಯಿಯವರ ಪರ್ಯಾಲೋಚಿಸಿದ ತೀರ್ಮಾನ. ಹಾಗಿದ್ದಾಗ ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣವನ್ನು ಕುರಿತ ಗೊತ್ತುವಳಿಗಳನ್ನು ಅವರು ವಿರೋಧಿಸುತ್ತಾರೆ ಎಂದೆಣಿಸುವುದು ತಿಳಿಗೇಡಿತನವಾಗುತ್ತದೆ. ದಾದಾಭಾಯಿಯವರು ವಿರಾಮ ವೇಳೆಯಲ್ಲಿ ಮನಸ್ಸನ್ನು ಬೇರೆ ಕಡೆ ಹರಿಸುವ ಸಾಧನವನ್ನಾಗಿ ರಾಜಕೀಯವನ್ನು ಪರಿಗಣಿಸುವ ಆರಾಮ ಕುರ್ಚಿ ರಾಜಕಾರಣಿಯಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅವರು ತಮ್ಮ ಜೀವನವನ್ನು ದೇಶದ ಸೇವೆಗಾಗಿ ಮುಡಿಪಾಗಿಟ್ಟಿದ್ದಾರೆ ಹಾಗೂ ಇತ್ತೀಚೆಗೆ ದೇಶದಲ್ಲಿ ಬೀಸುತ್ತಿರುವ ಹೊಸ ಚೇತನದ ಮೌಲ್ಯವನ್ನು ತಿಳಿದಿದ್ದಾರೆ."

ಕಲ್ಕತ್ತ ಕಾಂಗ್ರೆಸ್ ಸಂಸ್ಥೆ ವಯಸ್ಸಿಗೆ ಬಂದ ನಂತರ ನಡೆದ ಮೊದಲ ಅಧಿವೇಶನವಾಗಿತ್ತು. ಇಪ್ಪತ್ತು ವರ್ಷಗಳಿಗೆ ಮೊದಲು ಅದೇ ನಗರದಲ್ಲಿ ನಡೆದ ಕಾಂಗ್ರೆಸ್‌ನ ಮೊದಲ ಅಧಿವೇಶನದ ಅಧ್ಯಕ್ಷತೆಯನ್ನು ದಾದಾಭಾಯಿ ವಹಿಸಿದ್ದರು. ಇಪ್ಪತ್ತೆರಡನೆಯ ಅಧಿವೇಶನ ಅಲ್ಲಿಯವರೆಗೆ ಭಾರತದಲ್ಲಿ ನಡೆದ ಅತ್ಯಂತ ದೊಡ್ಡ ರಾಜಕೀಯ ಸಭೆಯಾಗಿತ್ತು. 2,000 ಪ್ರತಿನಿಧಿಗಳ ಜೊತೆಗೆ, ಸಾವಿರಾರು ವೀಕ್ಷಕರು ಪ್ರತಿದಿನ ಅಧಿವೇಶನದಲ್ಲಿ ಭಾಗವಹಿಸಿದರು. ಸ್ವಯಮಾಡಳಿತ-ಸ್ವರಾಜ್ಯದ-ಬೇಡಿಕೆಯನ್ನು ರೂಪಿಸುವ

ಮೂಲಕ ಆ ಅಧಿವೇಶನ ಇತಿಹಾಸವನ್ನು ನಿರ್ಮಿಸಿತು. ದಾದಾಭಾಯಿಯವರ ಧ್ವನಿ ಕ್ಷೀಣವಾಗಿತ್ತು. ಆದರೆ ಅಧ್ಯಕ್ಷೀಯ ಭಾಷಣದಲ್ಲಿ ಅವರು ಮಾಡಿದ ಘೋಷಣೆ ಎಳ್ಳಷ್ಟೂ ಕ್ಷೀಣವಾಗಿರಲಿಲ್ಲ:

"ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಸೇನೆಗಳು, ಇಲಾಖೆಗಳು ಮತ್ತು ವಿವರಗಳೆಲ್ಲದರ ಆಡಳಿತ ಆ ದೇಶದ ಜನರ ಕೈಯಲ್ಲಿದೆ. ಹಾಗೆಯೇ ಭಾರತದಲ್ಲಿಯೂ ಇರಬೇಕು. ಯುನೈಟೆಡ್ ಕಿಂಗ್‌ಡಮ್ ಮತ್ತು ವಸಾಹತುಗಳಲ್ಲಿ, ತೆರಿಗೆ ಹಾಕುವ, ಶಾಸನ ಮಾಡುವ ಮತ್ತು ತೆರಿಗೆಗಳನ್ನು ಖರ್ಚು ಮಾಡುವ ಅಧಿಕಾರ ದೇಶದ ಪ್ರತಿನಿಧಿಗಳ ಕೈಗಳಲ್ಲಿದೆ. ಭಾರತದಲ್ಲಿಯೂ ಹಾಗೆಯೇ ಇರಬೇಕು. ಇಂಗ್ಲೆಂಡ್ ಮತ್ತು ಭಾರತದ ನಡುವಣ ಹಣಕಾಸಿನ ಸಂಬಂಧಗಳನ್ನು ಸಮಾನತೆಯ ಆಧಾರದ ಮೇಲೆ ಹೊಂದಾಣಿಕೆ ಮಾಡಬೇಕು. ನಮಗೆ ಬೇಕಾದ್ದು ನ್ಯಾಯ ಮಾತ್ರ. ಇಡೀ ವಿಷಯವನ್ನು ಒಂದೇ ಪದದಲ್ಲಿ ಅಡಕ ಮಾಡಬಹುದು – ಸ್ವಯಮಾಡಳಿತ ಅಥವಾ ಸ್ವರಾಜ್ಯ."

ಈ ಮಾತುಗಳಿಂದ ದೇಶ ನಿಬ್ಬೆರಗಾಯಿತು. ಉಗ್ರವಾದಿಗಳ ಶಿಬಿರದಲ್ಲಿ ಸಂಭ್ರಮವೋ ಸಂಭ್ರಮ. ಸೌಮ್ಯವಾದಿಗಳಿಗೆ ಇದರಿಂದ ಸಿಟ್ಟೆನಿಸಿದರೂ, ಅವರದನ್ನು ತೋರಿಸಿಕೊಳ್ಳಲಿಲ್ಲ. ಅಧ್ಯಕ್ಷೀಯ ಭಾಷಣ ಉಗ್ರವಾದಿಗಳಿಗೆ ಶರಣಾಗತಿಯನ್ನು ಸೂಚಿಸುತ್ತದೆಂದು ಆಂಗ್ಲೋ-ಇಂಡಿಯನ್ ನಿಯತಕಾಲಿಕೆಗಳು ಖಂಡಿಸಿದವು. "ಬ್ರಿಟಿಷ್ ಆಳ್ವಿಕೆಯ ಬಗ್ಗೆ ಇದ್ದ ವಿದ್ವೇಷದ ಉರಿಯನ್ನು ಆರಿಸುವಂತೆ ದಾದಾಭಾಯಿಯವರಿಗೆ ಕರೆಕೊಡಲಾಗಿತ್ತು. ಆ ಉದ್ದೇಶಕ್ಕೆ ಅವರು ಸೀಮೆ ಎಣ್ಣೆಯನ್ನು ಬಳಸಿದರಷ್ಟೇ" ಎಂದು 'ದಿ ಇಂಗ್ಲಿಷ್‌ಮ್ಯಾನ್' ಹಂಗಿಸಿತು. ಲಂಡನ್‌ನ 'ಟೈಮ್ಸ್' ಪತ್ರಿಕೆ ಹೀಗೆ ಗುಡುಗಿತು: "ನಾವು ಭಾರತವನ್ನು ಖಡ್ಗದಿಂದ ಗೆದ್ದಿದ್ದೇವೆ ಹಾಗೂ ಕಾಂಗ್ರೆಸ್‌ನಲ್ಲಿ ಪ್ರಾತಿನಿಧ್ಯ ಹೊಂದಿರುವ ಕೇವಲ ಅಲ್ಪ ಸಂಖ್ಯೆಯ, ಉನ್ನತ ಶಿಕ್ಷಣ ಪಡೆದ ವರ್ಗಗಳು ಮತ್ತು ಅವರ ದೇಶೀಯ ಶತ್ರುಗಳ ನಡುವೆ ಬ್ರಿಟಿಷ್ ಖಡ್ಗ ನಿಂತಿರುವುದು ಒಳಿತೇ ಆಗಿದೆ. ಇಡೀ ಪರಿಸ್ಥಿತಿಯಲ್ಲಿ ಅದೇ ಮೂಲಭೂತ ಅಂಶವಾಗಿದೆ. ಭಾರತದಲ್ಲಿ ಸಂಪೂರ್ಣ ಸ್ವಯಮಾಡಳಿತ ಬೇಕೆಂಬ ಎಲ್ಲಾ ಕೋರಿಕೆಗಳು ಅದರಿಂದಾಗಿ ಅಸಂಬದ್ಧವಾಗುತ್ತವೆ."

ವಿಷಯಗಳ ಸಮಿತಿಯಲ್ಲಿ ಬಹಿಷ್ಕಾರ ಹಾಗೂ ಸ್ವದೇಶಿಯ ಬಗ್ಗೆ ಮಂಡಿಸಲಾದ ಗೊತ್ತುವಳಿಗಳ ಮೇಲೆ ಸೌಮ್ಯವಾದಿಗಳು ಮತ್ತು ಉಗ್ರವಾದಿಗಳ ನಡುವೆ ತೀವ್ರ ಭಿನ್ನಾಭಿಪ್ರಾಯಗಳು ಪ್ರಕಟಗೊಂಡವು. "ಬಹಿಷ್ಕಾರ ಚಳವಳಿ ನ್ಯಾಯಬದ್ಧವಾಗಿತ್ತು, ಆಗಿದೆ," ಎಂಬ ಸ್ಪಷ್ಟ ಘೋಷಣೆಯನ್ನು ಹೊರಡಿಸುವಲ್ಲಿ ತಿಲಕರು ಯಶಸ್ವಿಯಾದರು. ಆದರೆ "ಬಂಗಾಲದಲ್ಲಿ ಪ್ರಾರಂಭವಾದಂತೆ" ಎಂಬ ನುಡಿಕಟ್ಟನ್ನು ಈ ಘೋಷಣೆಗೆ ಸೇರಿಸಿದ್ದರಿಂದ ಸಂದಿಗ್ಧತೆ ಉಂಟಾಗಿ, ಎರಡೂ ಪಕ್ಷಗಳು ತಮ್ಮದೇ ವ್ಯಾಖ್ಯೆಯ ಬಗ್ಗೆ ಸಮಾಧಾನ ಪಟ್ಟುಕೊಂಡರು. ಸ್ವದೇಶಿಯನ್ನು ಕುರಿತ ಗೊತ್ತುವಳಿಯಲ್ಲಿ "ತ್ಯಾಗ ಮಾಡಿಯಾದರೂ" ಎಂಬ ಪದಗಳನ್ನು ಸೇರಿಸಲು ನಿರಾಕರಿಸಿದ್ದರಿಂದ ತಿಲಕರು ಪ್ರತಿಭಟನೆ ಸೂಚಿಸಲು ತಮ್ಮ ಅರುವತ್ತು ಅನುಯಾಯಿಗಳೊಂದಿಗೆ ಸಭಾತ್ಯಾಗ ಮಾಡಿದರು. ಈ ಬಗ್ಗೆ ಬಹಿರಂಗ ಅಧಿವೇಶನದಲ್ಲಿ ತಿದ್ದುಪಡಿಯೊಂದನ್ನು ಮಂಡಿಸುವುದಾಗಿ ಅವರು ಹಾಕಿದ ಬೆದರಿಕೆಯಿಂದ ಈ ಪದಗಳನ್ನು ಗೊತ್ತುವಳಿಯಲ್ಲಿ ಸೇರಿಸಲಾಯಿತು.

ಕಲ್ಕತ್ತ ಅಧಿವೇಶನದಲ್ಲಿ ಯಾವುದೇ ಪಕ್ಷ ನಿರ್ಣಾಯಕ ವಿಜಯವನ್ನು ಗಳಿಸಿತು ಎಂದು ಹೇಳುವಂತಿಲ್ಲ. ಎರಡೂ ಪಕ್ಷಗಳು ಏಕತೆಯ ಅಗತ್ಯದ ಬಗ್ಗೆ ಕೇವಲ ಮೇಲು ಮೇಲೆ ಮಾತನಾಡುವುದನ್ನು ಮುಂದುವರಿಸಿದವು. ವಿಷಯುಗಳ ಸಮಿತಿ ಹಾಗೂ ಬಹಿರಂಗ ಅಧಿವೇಶನದಲ್ಲಿ ಕಾಂಗ್ರೆಸ್ ಪ್ರವೃತ್ತಿ ಸ್ಪಷ್ಟವಾಗಿ ಕಂಡುಬಂದಿತು. ಫಿರೋಜ್‌ಶಾ ಮೆಹ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಹಾಗೂ ಕೆಲವೊಮ್ಮೆ ವೃದ್ಧ ಅಧ್ಯಕ್ಷರ ವಕ್ತಾರರಾಗಿಯೂ ಕಾರ್ಯ ಮಾಡಿದರು. ಇತರರ ಮೇಲೆ ದರ್ಪ ನಡೆಸುವುದು ಅಭ್ಯಾಸವಾಗಿದ್ದ ಒಬ್ಬ ವ್ಯಕ್ತಿಗೆ ಕಲ್ಕತ್ತೆಯ ವಾತಾವರಣ ಅಪ್ಯಾಯಮಾನವಾಗಿತ್ತು ಎಂದು ಹೇಳುವುದು ಅಸಾಧ್ಯವೇ ಸರಿ. ಉಗ್ರವಾದಿಗಳು ಒಂದಕ್ಕಿಂತಲೂ ಹೆಚ್ಚು ಸಲ ಅವರ ನಿರ್ಣಯಕ್ಕೆ ಸವಾಲು ಹಾಕಿದ್ದೇ ಅಲ್ಲದೆ, ಅವರ ಅಧಿಕಾರಕ್ಕೂ ಎದುರು ಬಿದ್ದರು. ಅದು "ಮುಂಬೈನ ಸಿಂಹ"ಕ್ಕೆ ಒಂದು ಹೊಸ ಅನುಭವವಾಗಿತ್ತು. ದಾದಾಭಾಯಿಯವರ ಶಾಂತಮೂರ್ತಿ ಎದುರಿ ಗಿದ್ದುದರಿಂದ ಆವೇಶಗಳು ತಣ್ಣಗಾದವು ಹಾಗೂ ಬಹಿರಂಗವಾಗಿ ಒಡಕುಂಟಾಗುವುದು ತಪ್ಪಿತು. ಆದರೆ ಸೂರತ್ ಅಧಿವೇಶನದಲ್ಲಿನ ಬಿಕ್ಕಟ್ಟಿನ ಅಪಶಕುನಗಳು ಕಲ್ಕತ್ತೆಯಲ್ಲಿ ಸ್ಪಷ್ಟವಾಗಿ ಗೋಚರವಾಗಿದ್ದವು.

ಕಲ್ಕತ್ತೆಯ ಕಾಂಗ್ರೆಸ್‌ನ ಸಾಧನೆಗಳ ಬಗ್ಗೆ ತಿಲಕರು ಸಕಾರಣವಾಗಿಯೆ ತೃಪ್ತಿ ಪಟ್ಟಿದ್ದರು. ಅವರು ತಮ್ಮ ಭಾವನೆಗಳನ್ನು 'ಕೇಸರಿ'ಯಲ್ಲಿ ಹೀಗೆ ಹಾಸ್ಯವಾಗಿ ವ್ಯಕ್ತ ಪಡಿಸಿದರು:

ರಾಷ್ಟ್ರಪ್ರೇಮದ ಪೂಜ್ಯ ಪುರೋಹಿತರಾದ ದಾದಾಭಾಯಿಯವರು ರಾಷ್ಟ್ರೀಯ ಕಾಂಗ್ರೆಸ್‌ಗೆ ಭಾರತದ ಹಕ್ಕಾದ ಸ್ವರಾಜ್ಯದೊಂದಿಗೆ ಮಂಗಳಕರ ಮದುವೆ ಮಾಡಿಸಿದ್ದಾರೆ. ಕಾಂಗ್ರೆಸ್‌ನ ಪಿತೃಗಳು ತಾವೆಂದು ಹೇಳಿಕೊಳ್ಳುವ ಕೆಲವರು ಈ ಮದುವೆಗೆ ಸಂಪೂರ್ಣ ವಾಗಿ ಒಪ್ಪಿಗೆ ನೀಡಿರದಿದ್ದರೂ, ಮದುವೆ ಆಗಿಬಿಟ್ಟಿರುವುದರಿಂದ, ಅದನ್ನು ರದ್ದುಪಡಿ ಸುವ ಅಥವಾ ಅದರ ಅಂತಿಮ ಸಾರ್ಥಕತೆಗೆ-ಸ್ವರಾಜ್ಯ ಸಾಧನೆಗೆ-ಅಡ್ಡಿಯುಂಟು ಮಾಡುವ ಅಧಿಕಾರ ಯಾರಿಗೂ ಇಲ್ಲ. ಹೊಸ ಪಕ್ಷದ ಅಭಿಪ್ರಾಯಗಳು ಮತ್ತು ತತ್ತ್ವಗಳನ್ನು ದೇಶ ದಿನದಿಂದ ದಿನಕ್ಕೆ ಒಪ್ಪಿಕೊಳ್ಳುತ್ತಾ ಬರುತ್ತಿದೆ. ಇದು ನಮ್ಮ ರಾಜ ಕೀಯ ಪ್ರಗತಿಯ ಸಂತೋಷಕರ ಸೂಚನೆಯಾಗಿದೆ."

ಕಲ್ಕತ್ತ ಕಾಂಗ್ರೆಸ್‌ನ ನಂತರ, ಕಾಂಗ್ರೆಸ್ಸಿಗರನ್ನು ಹೊಸ ಪಕ್ಷಕ್ಕೆ ಪರಿವರ್ತಿಸಲು ತಿಲಕರು ಬಿರುಸಿನ ಚಳವಳಿಯನ್ನು ಪ್ರಾರಂಭಿಸಿದರು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ದೈವನಿಯಾಮಕವಾದದ್ದು ಎಂದು ಪಟ್ಟು ಹಿಡಿದಿದ್ದ ಫಿರೋಜ್‌ಶಾ ಮೆಹ್ತಾ ತಿಲಕರಿಗೆ ಭಾರಿ ಅಡಚಣೆಯಾಗಿದ್ದರು. ಇಷ್ಟೇ ಅಲ್ಲದೆ, ಉಗ್ರವಾದಿಗಳೊಂದಿಗೆ ಗೋಖಲೆಯವರು ಅಲ್ಪಕಾಲ ನಡೆಸಿದ 'ಸರಸ'ವೂ ಸಹ ಅವರ ಬ್ರಿಟನ್‌ನ ಬೇಟಿಯೊಂದಿಗೆ ಕೊನೆಗೊಂಡಿತ್ತು. ಅವರು ಬ್ರಿಟನ್‌ನಲ್ಲಿ, ಭಾರತಕ್ಕೆ ನೇಮಕವಾಗಿದ್ದ ಹೊಸ ವಿದೇಶಾಂಗ ಕಾರ್ಯದರ್ಶಿ ಲಾರ್ಡ್ ಮಾರ್ಲೆಯೊಂದಿಗೆ ಅನೇಕ ಚರ್ಚೆಗಳನ್ನು ನಡೆಸಿದರು. ಮಾರ್ಲೆಯನ್ನು ಕಂಡಾಗ ಯಜಮಾನರನ್ನು ಕಂಡಂತೆ ತಾವು ಭಾವಿಸಿದ್ದಾಗಿಯೂ, "ಬರ್ಕ್‌ನ ನಮ್ರ ವಿದ್ಯಾರ್ಥಿ, ಮಿಲ್‌ನ ಶಿಷ್ಯ, ಗ್ಲಾಡ್‌ಸ್ಟೋನ್‌ನ ಮಿತ್ರ ಮತ್ತು ಅವನ ಜೀವನ

ಚರಿತ್ರೆ ಬರೆದ ವ್ಯಕ್ತಿ" ಇಂಡಿಯಾ ಆಫೀಸ್‌ಗೆ ನೇಮಕವಾಗುವ ಸಾಧ್ಯತೆಯ ಬಗ್ಗೆ ತಮ್ಮ ಹೃದಯ ಹೇಗೆ ಆಸೆ ಪಟ್ಟಿತ್ತು ಎಂದು ಗೋಖಲೆಯವರು ವಾರಣಾಸಿಯಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಜಗತ್ತಿಗೆ ತಿಳಿಸಿದರು.

ಭಾರತೀಯರಿಗೆ ತಕ್ಷಣ ಯಾವುದೇ ರಾಜಕೀಯ ಹಕ್ಕನ್ನು ನೀಡುವುದಕ್ಕೆ ಲಿಬರಲ್ ಪಕ್ಷಕ್ಕೆ ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸುವುದು ಮೂರ್ಖತನವಾಗುತ್ತದೆ ಎಂಬ ಕಠಿಣ ಹೇಳಿಕೆಯಿಂದ ಗೋಖಲೆ ಮತ್ತು ಅವರ ಸಹ–ಸೌಮ್ಯವಾದಿಗಳಿಗೆ ಭ್ರಮನಿರಸನ ಮಾಡುವುದರಲ್ಲಿ ಮಾರ್ಲೆ ಎಷ್ಟೂ ಸಮಯವನ್ನು ಕಳೆಯಲಿಲ್ಲ ಎಂದು ನ್ಯಾಯವಾಗಿ ಹೇಳಬೇಕು. ಬಂಗಾಲದ ವಿಭಜನೆ ಒಂದು "ನಿರ್ಧಾರಿತ ಅಂಶ," ಏಕೆಂದರೆ ವಿಭಜನೆಗೆ ಕಾರಣಗಳು ರಾಜಕೀಯವಾಗಿರದೆ ಆಡಳಿತಾತ್ಮಕವಾಗಿದ್ದವು ಎಂದು ಹೇಳಿ ಆತ ಮತ್ತಷ್ಟು ದಿಗ್ಭ್ರಾಂತಿ ಉಂಟುಮಾಡಿದ. ಏನೇ ಆದರೂ ಮಾರ್ಲೆ ಸುಧಾರಣೆಗಳ ಗಾಳವನ್ನು ಸೌಮ್ಯವಾದಿಗಳ ಮುಂದೆ ತೂಗಾಡಿಸಿದ. ಆಗಸ್ಟ್ 1, 1906ರಂದು ಗೋಖಲೆಯವರೊಂದಿಗೆ ಆತ ನಡೆಸಿದ ಸಂಭಾಷಣೆಯ ವರ್ಣನೆ ಭಾರತದ ವೈಸ್‌ರಾಯ್ ಲಾರ್ಡ್ ಮಿಂಟೊಗೆ ಬರೆದ ಪತ್ರದಲ್ಲಿದೆ. ಆ ವರ್ಣನೆಯನ್ನು ಇಲ್ಲಿ ಕೊಡಲಾಗಿದೆ:

"ಸ್ವಯಮಾಡಳಿತ ನಡೆಸುವ ವಸಾಹತಿನ ಸ್ಥಾನಮಾನವನ್ನು ಭಾರತ ಹೊಂದಬೇಕು ಎಂಬ ತಮ್ಮ ಅಂತಿಮ ಆಶಯ ಮತ್ತು ಸಂಕಲ್ಪವನ್ನು ಗೋಖಲೆ ರಹಸ್ಯವಾಗೇ ನೀಡಲಿಲ್ಲ ಬಹಳ ಕಾಲದವರೆಗೆ – ನನಗುಳಿದಿರುವ ಅಲ್ಪಕಾಲವನ್ನೂ ಬಹಳ ಮೀರಿ – ಇದು ಕೇವಲ ಕನಸಾಗಿರುತ್ತದೆಂಬ ನನ್ನ ದೃಢ ಅಭಿಪ್ರಾಯವನ್ನು ನಾನೂ ಗುಟ್ಟಾಗಿಡಲಿಲ್ಲ. ನಾನು ಅವರಿಗೆ ಹೀಗೆ ಹೇಳಿದೆ: 'ನಿಮ್ಮ ಗುರಿಯತ್ತ ಸಮಂಜಸವಾದ ಸುಧಾರಣೆಗಳನ್ನು ಹೊಂದಲು ಈಗ ಅನ್ಯಾದೃಶವಾದ ಅವಕಾಶವಿದೆ...... ಒಂದೇ ಒಂದು ಅದನ್ನು ಕೆಡಿಸಬಹುದು. ನಿಮ್ಮ ಸ್ನೇಹಿತರ ವ್ಯತಿರಿಕ್ತ ಬುದ್ಧಿ ಮತ್ತು ಅವಿವೇಕ. ಪೂರ್ವ ಬಂಗಾಲದಲ್ಲಿ ಅವರು ಕ್ಷೋಭೆಯನ್ನು ಮುಂದುವರಿಸಿದರೆ, ಒಂದು ಹೆಜ್ಜೆ ಮುಂದಿಡುವುದೂ ಸರ್ಕಾರಕ್ಕೆ ಕಠಿಣವಾಗುತ್ತದೆ ಅಥವಾ ಸಾಧ್ಯವಾಗದೆಯೂ ಹೋಗಬಹುದು...... ಪರಿಣಾಮಕಾರಿ ಹೆಜ್ಜೆಯನ್ನಿಡಬೇಕೆಂಬ ನಮ್ಮ ನಿರ್ಧಾರದ ಬಗ್ಗೆ ನಾವು ಆಸಕ್ತರಾಗಿದ್ದೇವೆ. ನಾವು ಮಾಡುವುದನ್ನು ತೃಣೀಕರಿಸಲು ಮತ್ತು ಅಸಾಧ್ಯವಾದದ್ದನ್ನು ಕೋರಿ ಬೊಬ್ಬೆ ಹಾಕಲು ನಿಮ್ಮ ಭಾಷಣಕಾರರು ಅಥವಾ ವೃತ್ತಪತ್ರಿಕೆಗಳು ಪ್ರಯತ್ನಿಸಿದರೆ, ಆಗ ಎಲ್ಲವೂ ಹಾದಿ ತಪ್ಪುತ್ತದೆ."

ಗೋಖಲೆಯವರು ಎದುರು ಮಾತನಾಡದೆ ತಕ್ಷಣ ಇದಕ್ಕೆ ಒಪ್ಪಿಕೊಂಡರೂ. "ಬಹಳ ಸ್ನೇಹದಿಂದ ಮತ್ತು ಆಶಾಭಾವನೆಯನ್ನು ವ್ಯಕ್ತಪಡಿಸಿ" ಭಾರತದಲ್ಲಿನ ಸ್ನೇಹಿತರಿಗೆ ಪತ್ರ ಬರೆದರೆಂದೂ ಸಹ ಮಾರ್ಲೆ ಈ ಪತ್ರದಲ್ಲಿ ತಿಳಿಸಿದ್ದ. ಆದ್ದರಿಂದ, ಬ್ರಿಟನ್‌ನಿಂದ ಹಿಂತಿರುಗಿದ ನಂತರ, ಗೋಖಲೆಯವರು ಇನ್ನೂ ಹೆಚ್ಚಿನ ದೃಢ ಮನಸ್ಸಿನಿಂದ ಹಾಗೂ ಆಸೆಯಿಂದ ಸೌಮ್ಯತೆಯ ಕವಚದೊಳಗೆ ಸೇರಿಕೊಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಸೌಮ್ಯವಾದಿಗಳು ಮತ್ತು ಉಗ್ರವಾದಿಗಳ ನಡುವಣ ಸಂಬಂಧಗಳು ಬಹಳ ಬೇಗ ಹದಗೆಟ್ಟಿದ್ದಕ್ಕೆ ಮಾರ್ಲೆ ಸೌಮ್ಯವಾದಿಗಳಲ್ಲಿ ಮೂಡಿಸಿದ ಆಸೆಗಳೂ ಕನಿಷ್ಠ ಭಾಗಶಃ ಕಾರಣವಾಗಿದ್ದವು ಎಂದು ಹೇಳಬೇಕು. "ಆ ಮಿಲ್‌ನ ಶಿಷ್ಯ" ಇನ್ನೂ ಹೆಚ್ಚಿನ ಪಣಕ್ಕಾಗಿ

ಆಡುತ್ತಿದ್ದ. ಆತನ ಹೇಳಿಕೆಗಳನ್ನು ಗಮನಿಸಿದಾಗ, ಪಕ್ಷದ ಲಾಂಛನಗಳು ಯಾವುದೇ ಇರಲಿ, ಬ್ರಿಟಿಷ್ ಲಿಬರಲ್ ಸರ್ಕಾರದ ಧೋರಣೆ, ಅದರ ಹಿಂದಿನ ಸರ್ಕಾರಗಳ ಧೋರಣೆಯಂತೆ, ಉಗ್ರವಾದಿಗಳನ್ನು ಪ್ರತ್ಯೇಕಗೊಳಿಸಿ ಅವರನ್ನು ತುಳಿದು ಹಾಕುವುದೇ ಆಗಿತ್ತು ಎಂಬ ತೀರ್ಮಾನಕ್ಕೆ ಬರದೆ ಇರಲು ಸಾಧ್ಯವಿಲ್ಲ. ಸೌಮ್ಯವಾದಿಗಳ ಮೇಲೆ ಮಾರ್ಲೆ ಉಂಟು ಮಾಡಿದ ಪ್ರಭಾವದಿಂದ ಮರುವರ್ಷ ಹೀಗೆ ಹೇಳುವ ಎದೆಗಾರಿಕೆ ಆತನಲ್ಲಿ ಉಂಟಾಯಿತು:

"ಉಗ್ರವಾದಿ ತನ್ನ ಬೆಂಕಿ, ತನ್ನ ಪ್ರಜ್ವಲ ಚೈತನ್ಯ, ತನ್ನ ಇಕ್ಕಟ್ಟಿನ ಏಕಾಗ್ರತೆಯಿಂದಲೆ ಸೌಮ್ಯವಾದಿಯನ್ನು ಸದೆಬಡಿಯುತ್ತಾನೆ ಎಂಬುದು ಇತಿಹಾಸ ಓದಿದ ಯಾರಿಗಾದರೂ ತಿಳಿದಿರುವ ವಿಷಯವೆ ಆಗಿದೆ. ನಮ್ಮ ಧೋರಣೆ ಉಗ್ರವಾದಿಗಳನ್ನು ತೃಪ್ತಿಪಡಿಸುವುದಿಲ್ಲ ಎಂಬ ಕಾರಣದಿಂದ ಮಾತ್ರವೇ ಸರ್ಕಾರದ ಉದ್ದೇಶ ಸಾಧನೆಗಾಗಿ ಸೌಮ್ಯವಾದಿಗಳಿಗೆ ಬೆಂಬಲ ನೀಡಲು ನಮ್ಮಿಂದ ಸಾಧ್ಯವಾದದ್ದನ್ನೆಲ್ಲಾ ಮಾಡಲು ನಿರಾಕರಿಸುವುದು ರಾಜಕೀಯ ಮೌಢ್ಯತೆಯ ಪರಾಕಾಷ್ಟೆಯಾಗುತ್ತದೆ ಎಂದೇ ನಾವು ತಿಳಿದಿದ್ದೇವೆ. ನಮ್ಮಿಂದ ಸಾಧ್ಯವಿದ್ದರೆ, ಸೌಮ್ಯವಾದಿಗಳನ್ನು ಒಗ್ಗೂಡಿಸೋಣ ಹಾಗೂ ನಮ್ಮ ಧೋರಣೆಯಿಂದ ಉಗ್ರವಾದಿಗಳಿಗೆ ತೃಪ್ತಿಯಾಗುವುದಿಲ್ಲ ಎಂದು ನಮಗೆ ಹೇಳಿದರೆ ಹಾಗೆಯೇ ಆಗಲಿ. ನಮ್ಮ ನಿಲುವು ಅದೇ ಆಗಿರುತ್ತದೆ...... ಅವರಲ್ಲಿ ಕೆಲವರು ನನ್ನ ಮೇಲೆ ಸಿಟ್ಟಾಗಿದ್ದಾರೆ ಏಕೆ? ಏಕೆಂದರೆ ಅವರಿಗೆ ಚಂದ್ರನನ್ನು ಕೊಡುವುದು ನನಗೆ ಸಾಧ್ಯವಿಲ್ಲ. ಕೊಡುವುದಕ್ಕೆ ನನ್ನ ಹತ್ತಿರ ಚಂದ್ರನಿಲ್ಲ. ಇದ್ದಿದ್ದರೂ ನಾನು ಅವರಿಗೆ ಚಂದ್ರನನ್ನು ಕೊಡುತ್ತಿರಲಿಲ್ಲ."

ತಿಲಕರಿಗೆ ಚಂದ್ರನ ಬಗ್ಗೆ ವ್ಯಾಮೋಹವೇನೂ ಇರಲಿಲ್ಲ. ಅಥವಾ ಅದರ ಪ್ರತಿಬಿಂಬದಿಂದ ಅವರಿಗೆ ಭ್ರಮೆಯೂ ಉಂಟಾಗಲಿಲ್ಲ. ಸಾಮ್ರಾಜ್ಯಶಾಹಿ ಧೋರಣೆಗಳಿಗೆ ಸಂಬಂಧಿಸಿದಂತೆ ಲಿಬರಲ್ ಪಕ್ಷದವರು ಕನ್ಸರ್ವೇಟಿವ್ ಪಕ್ಷದವರಿಗಿಂತ ಭಿನ್ನವಾಗಿರಲಿಲ್ಲ ಎಂಬುದನ್ನು ಅವರು ತಮ್ಮ ವ್ಯವಹಾರ ಜ್ಞಾನದಿಂದ ತಿಳಿದಿದ್ದರು. ಮಿಲ್‌ನ ದೀಪದಲ್ಲಿ ಮಾರ್ಲೆ ತನ್ನ ಮೊಂಬತ್ತಿಯನ್ನು ಹಚ್ಚಿಕೊಂಡಿರಬಹುದಾದರೂ, ಆತ ಬೆಳಕಿಗಿಂತ ಹೊಗೆಯನ್ನೇ ಹರಡಿದ್ದಾನೆ ಹಾಗೂ ತನ್ನ ಹಿತಕ್ಕೆ ಅನುಕೂಲವಾದಾಗ ತತ್ತ್ವಜ್ಞಾನದ ಮೊರೆ ಹೋಗುತ್ತಾನೆ ಎಂದು ತಿಲಕರು ಹೇಳಿದರು. ಅವರು ಹೀಗೆ ಬರೆದರು:

"ಮಾರ್ಲೆಯ ಹೇಳಿಕೆಗಳ ಜಾಣ್ಮೆಯನ್ನು ಮೆಚ್ಚಬೇಕೇ ಅಥವಾ ಆತನ ಅನುಗ್ರಹದ ಮೇಲೆ ಸಂಪೂರ್ಣವಾಗಿ ಅವಲಂಬಿಸಿರುವ ನಮ್ಮ ಕೆಲವು ನಾಯಕರ ಮೌಢ್ಯವನ್ನು ಹೊಗಳಬೇಕೇ ಎಂಬುದನ್ನು ನಿರ್ಧರಿಸುವುದನ್ನು ನಮ್ಮ ಓದುಗರಿಗೆ ಬಿಡುತ್ತೇವೆ. ಮಾರ್ಲೆಯ ಭಾಷಣ ಬ್ರಿಟಿಷ್ ರಾಜತಾಂತ್ರಿಕ ನಡತೆಗೆ ಅನುಗುಣವಾಗಿಯೇ ಇದೆ. ಬಂಗಾಲದ ವಿಭಜನೆಯ ಬಗ್ಗೆ ಆತನ ವಾದ ಎಷ್ಟು ಹುಡುಗಾಟಿಕೆಯದಾಗಿದೆ ಹಾಗೂ ಬೇಸರ ಬರಿಸುತ್ತದೆಯೆಂದರೆ ಭಾರತಕ್ಕಾಗಿ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡ ಕೂಡಲೇ ಆತ ತನ್ನ ತತ್ತ್ವಜ್ಞಾನದ ಜಾಣ್ಮೆಯನ್ನು ಒತ್ತೆಯಿಟ್ಟಂತೆ ಕಂಡು ಬರುತ್ತದೆ ಎಂದು ನಾವು ಗಮನಿಸುವಂತಾಗಿದೆ. ವಿದೇಶಾಂಗ ಕಾರ್ಯದರ್ಶಿ ಆಂಗ್ಲೊ–ಇಂಡಿಯನ್ ನೌಕರಶಾಹಿಯ ತಲೆ ಮತ್ತು ಮುಖವಾಣಿಯಾಗಿದ್ದಾನೆ. ಇಡೀ ನೌಕರಶಾಹಿ, ಇಡೀ ಆಂಗ್ಲೊ–ಇಂಡಿಯನ್ ಸಮೂಹ ನಿಮ್ಮ ವಿರುದ್ಧ ಇರುವಾಗ, ವಿದೇಶಾಂಗ

ಕಾರ್ಯದರ್ಶಿ ಅವರನ್ನೆಲ್ಲಾ ಪಕ್ಕಕ್ಕೆ ತಳ್ಳಿ ನಿಮಗೆ ಸ್ವಲ್ಪ ಅಧಿಕಾರವನ್ನು ಕೊಡುತ್ತಾರೆ ಎಂದು ನೀವು ತಿಳಿದಿದ್ದೀರಾ?"

ಸುಧಾರಣೆಯ ಯೋಜನೆಯನ್ನು ಜಾರಿಗೆ ತರುವಲ್ಲಿ ವಿಪರೀತ ವಿಳಂಬವಾಗಿದ್ದರಿಂದಲೇ ಅಲ್ಲದೆ, ತನ್ನ ಉದಾರ ನೀತಿನಿಯಮಗಳು ಏನೇ ಇರಲಿ, ದಬ್ಬಾಳಿಕೆಯ ನಿರಂತರ ಚಲನೆಯನ್ನು ನಿಲ್ಲಿಸುವ ಮಾರ್ಲೆಯ ಸ್ಪಷ್ಟ ಅಶಕ್ತತೆಯಿಂದಲೂ ತಿಲಕರ ಮುನ್ನೆಚ್ಚರಿಕೆಯನ್ನು ಸಮರ್ಥಿಸಬಹುದು. ಬ್ರಿಟಿಷ್ ರಾಜಕಾರಣಿಯೊಬ್ಬ ಕೊಟ್ಟ ಮಾತನ್ನು ಮುರಿದಿದ್ದು ಅದೇ ಮೊದಲ ಸಲವೇನೂ ಅಲ್ಲ. ಮೇ 1907ರಲ್ಲಿ ಲಜಪತ್‌ರಾಯ್ ಮತ್ತು ಅಜಿತ್‌ಸಿಂಗರನ್ನು ಗಡೀಪಾರು ಮಾಡಿದ್ದು ತಿಲಕರನ್ನು 1908ರಲ್ಲಿ ಗಡೀಪಾರು ಮಾಡುವುದಕ್ಕೆ ಮುನ್ಸೂಚನೆಯಂತಿತ್ತು. ತಿಲಕರನ್ನು ಗಡೀಪಾರು ಮಾಡುವುದಕ್ಕೆ ಮಾರ್ಲೆ ತೆಪ್ಪಗೆ ಒಪ್ಪಿಕೊಳ್ಳಬೇಕಾಯಿತು. ಮಾರ್ಲೆ–ಮಿಂಟೊ ಸುಧಾರಣೆಗಳ ಬಗ್ಗೆ ಗಾಂಧೀಜಿಯವರು ಲೇಡಿ ಮಿಂಟೊಗೆ 1932ರಲ್ಲಿ ಹೀಗೆ ಹೇಳಿದರು: "ಅವು ನಮಗೆ ಕೆಡುಕುಂಟು ಮಾಡಿದವು. ಆಗ ಪ್ರತ್ಯೇಕ ಚುನಾಯಕ ಸಮುದಾಯಗಳನ್ನು ಸ್ಥಾಪಿಸದೇ ಹೋಗಿದ್ದರೆ, ನಮ್ಮ ಭಿನ್ನಾಭಿಪ್ರಾಯಗಳನ್ನು ಇಷ್ಟು ಹೊತ್ತಿಗೆ ನಾವು ಬಗೆಹರಿಸಿರಬೇಕಾಗಿತ್ತು." "ಪ್ರತ್ಯೇಕ ಚುನಾಯಕ ಸಮುದಾಯಗಳನ್ನು ನಿಮ್ಮ ನಾಯಕರಾಗಿದ್ದ ಮತ್ತು ನಿಮಗೆ ಮೊದಲು ನಿಮ್ಮ ಸ್ಥಾನದಲ್ಲಿದ್ದ ಶ್ರೀ ಗೋಖಲೆಯವರೇ ಸಲಹೆ ಮಾಡಿದ್ದು" ಎಂದು ಲೇಡಿ ಮಿಂಟೊ ಪ್ರತಿಭಟಿಸಿದಾಗ, ಗಾಂಧಿಯವರು, "ಗೋಖಲೆಯವರು ಒಳ್ಳೆಯ ಮನುಷ್ಯರಾಗಿದ್ದರು, ಆದರೆ ಒಳ್ಳೆಯ ಮನುಷ್ಯರೂ ತಪ್ಪುಗಳನ್ನು ಮಾಡಬಹುದು" ಎಂದು ಹೇಳಿದರು.

ಲಾರ್ಡ್‌ಮಾರ್ಲೆ ಸುಧಾರಣೆಯ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ 1908ರಲ್ಲಿ ಮಂಡಿಸಿದಾಗ, ತಿಲಕರು ಮಾಂಡಲೆಯಲ್ಲಿ ಖೈದಿಗಳಾಗಿದ್ದರು ಎಂದು ಇಲ್ಲಿ ಹೇಳುವುದೂ ಉಚಿತವಾಗುತ್ತದೆ. ಆದರೆ ಅವರು ಅದಕ್ಕೆ ಮೊದಲೇ ಕೋಮುವಾರು ಚುನಾಯಕ ಸಮುದಾಯಗಳ ದುಷ್ಟ ತತ್ತ್ವದ ವಿರುದ್ಧ ಬಲವಾದ ಪ್ರತಿಭಟನೆ ಮಾಡಿದ್ದರು.

ಮಾರ್ಲೆ ತನ್ನ ಪ್ರಸಲಾಪಣೆಗಳು ಮತ್ತು ಬೆದರಿಕೆಗಳಿಂದ ಸೌಮ್ಯವಾದಿಗಳನ್ನು ಒಲಿಸಿಕೊಳ್ಳುವಲ್ಲಿ ಹೇಗೆ ಯಶಸ್ವಿಯಾದ ಎಂಬ ವಿಷಯ ಮೇಲಿನ ವಿವರಗಳಿಂದ ತಿಳಿಯುತ್ತದೆ. ಬ್ರಿಟಿಷ್ ಸಾಮ್ರಾಜ್ಯವಾದ ದ್ವಂದ್ವ ಆಟವನ್ನು ಆಡುತ್ತಿತ್ತು. ಮುಸಲ್ಮಾನರಿಗೆ ಪ್ರತ್ಯೇಕ ಚುನಾಯಕ ಸಮುದಾಯಗಳನ್ನು ಹೊಂದಬೇಕೆಂಬ ಬೇಡಿಕೆಗಳನ್ನು ಮಂಡಿಸಲು ಹೋಗಿದ್ದ ಆಗಾಖಾನ್ ನಿಯೋಗವನ್ನು ಲಾರ್ಡ್ ಮಿಂಟೊ ಎದುರುಗೊಳ್ಳುತ್ತಿದ್ದಾಗ, ಉಗ್ರವಾದಿಗಳನ್ನು ಸೌಮ್ಯವಾದಿಗಳಿಂದ ಪ್ರತ್ಯೇಕಗೊಳಿಸಲು ಲಾರ್ಡ್ ಮಾರ್ಲೆ ಗೋಖಲೆಯವರೊಂದಿಗೆ ನಡೆಸಿದ ಮಾತುಕತೆಗಳಲ್ಲಿ ಪ್ರಯತ್ನಿಸುತ್ತಿದ್ದರು. ಈ ಎರಡೂ ಪ್ರಯತ್ನಗಳ ಗುರಿ ಒಂದೇ ಆಗಿತ್ತು: ಒಡೆದು ಆಳು".

ಮೂರನೆಯ ಪಕ್ಷಕ್ಕೆ ಸಂಬಂಧಿಸಿದಂತೆ ಭಾರತೀಯ ರಾಜಕೀಯ ಅಭಿಪ್ರಾಯದ ಸೌಮ್ಯ ಮತ್ತು ಉಗ್ರ ಎಂಬ ಕೃತಕ ವಿಭಜನೆಯನ್ನು ಬಯಲಿಗೆಳೆಯುವ ತಿಲಕರ ಪ್ರಯತ್ನ ನಿರರ್ಥಕವಾಯಿತು. ಈ ಪದಗಳು ಕಾಲಕ್ಕೆ ಸ್ಪಷ್ಟ ಸಂಬಂಧವನ್ನು ಹೊಂದಿವೆ

ಎಂದು ಅವರು ಹೇಳಿದರು. ಉಗ್ರವಾದ ಒಂದು ಸಹಜವಾದ ಬೆಳವಣಿಗೆ. ಇಂದಿನ ಸೌಮ್ಯವಾದಿಗಳು ನಿನ್ನೆಯ ಉಗ್ರವಾದಿಗಳಾಗಿದ್ದಂತೆ, ಇಂದಿನ ಉಗ್ರವಾದಿಗಳು ನಾಳೆಯ ಸೌಮ್ಯವಾದಿಗಳಾಗುತ್ತಾರೆ. "ಕಾಂಗ್ರೆಸ್ಸನ್ನು ಪ್ರಾರಂಭಿಸಿದಾಗ, ದಾದಾಭಾಯಿಯವರನ್ನೂ ಸಹ ಉಗ್ರವಾದಿ ಎಂದು ಪರಿಗಣಿಸಲಾಗಿತ್ತು. ನಮ್ಮ ಮಕ್ಕಳು ತಮ್ಮನ್ನು ತಾವು ಉಗ್ರವಾದಿಗಳು ಎಂದು ಕರೆದುಕೊಳ್ಳುತ್ತಾರೆ ಮತ್ತು ನಮ್ಮನ್ನು ಸೌಮ್ಯವಾದಿಗಳು ಎಂದು ಕರೆಯುತ್ತಾರೆ. ಪೀಳಿಗೆಯಿಂದ ಪೀಳಿಗೆಗೆ ಇದು ಹೀಗೇ ಮುಂದುವರೆಯುತ್ತದೆ". ಈ ವಿಚಾರಧಾರೆ ಸೌಮ್ಯವಾದಿಗಳಿಗೆ ಪ್ರಿಯವಾಗಲಿಲ್ಲ. ಸೌಮ್ಯತೆಯನ್ನು, ಬ್ರಿಟನ್‌ನ ಆಡಳಿತವನ್ನೂ ಅವರು ವಿಶ್ವಾಸದ ಅಂಶಗಳಾಗಿ ಪರಿಗಣಿಸಿದ್ದರು. ಸೈದ್ಧಾಂತಿಕ ಅಂಶ ಏನೇ ಇರಲಿ, ನಿರೀಕ್ಷಿತ ಸುಧಾರಣೆಗಳ ದೃಷ್ಟಿಯಿಂದ ಕಾಂಗ್ರೆಸ್‌ನ ಮೇಲೆ ದೃಢ ಹಿಡಿತ ಹೊಂದುವ ಅಗತ್ಯ ಮೂಲತಃ ಮುಖ್ಯವಾದ ವಿಷಯವಾಗಿತ್ತು.

ಇವುಗಳಿಗೆ ತಳಪಾಯ ಹಾಕುವ ಉದ್ದೇಶದಿಂದ ಗೋಖಲೆಯವರು ತಮ್ಮ ಸೌಮ್ಯತೆ ಹಾಗೂ ಘಟನಾವ್ಯವಸ್ಥೆಯ ಸಿದ್ಧಾಂತವನ್ನು ಪ್ರಚುರಪಡಿಸಲು ಫೆಬ್ರುವರಿ ಮತ್ತು ಮಾರ್ಚ್ 1907ರಲ್ಲಿ ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಭಾಷಣ ಪ್ರವಾಸವನ್ನು ಕೈಗೊಂಡರು. ನಮಗೆ ಬೇಕಾದ ಬದಲಾವಣೆಗಳನ್ನು ಹೊಂದಲು ನಾವು ಕೇವಲ ಘಟನಾಬದ್ಧವಾದ ವಿಧಾನಗಳನ್ನು ಮಾತ್ರ ಅನುಸರಿಸಬೇಕು ಎಂಬುದು ಅವರ ವಿಚಾರವಾಗಿತ್ತು. ಕ್ರಮಬದ್ಧವಾದ ಪ್ರಗತಿಗಷ್ಟೇ ಅಲ್ಲದೆ, ದಬ್ಬಾಳಿಕೆಯನ್ನು ತಪ್ಪಿಸಿಕೊಳ್ಳುವುದಕ್ಕೂ ಇದು ಅಗತ್ಯ. ಇಂತಹ ಅಭಿಪ್ರಾಯಗಳು ಮೇಲ್ನೋಟಕ್ಕೆ ಸರಳವಾಗಿದ್ದರೂ, ಇವು ದೇಶಕ್ಕೆ ಜವಾಬ್ದಾರನಾದ ಸರ್ಕಾರವಿರುವ, ಹಾಗೂ ಮತದಾರರ ವಿಶ್ವಾಸವನ್ನು ಗಳಿಸಲು ವಿಫಲರಾದರೆ ಅಂತಹ ಸರ್ಕಾರವನ್ನು ಉರುಳಿಸುವ, ಬ್ರಿಟನ್‌ನಂತಹ ಪ್ರಜಾಸತ್ತಾತ್ಮಕ ದೇಶಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ಗಮನಿಸುವುದಕ್ಕೆ ತಿಲಕರಿಗೆ ಬಹಳ ಸಮಯ ಬೇಕಾಗಿರಲಿಲ್ಲ. "ಅಂತಹುದೇನಾದರೂ ಭಾರತದಲ್ಲಿದೆಯೇ?" ತಿಲಕರು ಕೇಳಿದರು. "ಈ ಹಕ್ಕನ್ನು ಜನರಿಗೆ ಕೊಡುವ ಭಾರತದ ಸಂವಿಧಾನವನ್ನು ಶ್ರೀ ಗೋಖಲೆಯವರಾಗಲೀ ಅವರ ಸೌಮ್ಯವಾದಿ ಪಕ್ಷವಾಗಲೀ ತೋರಿಸುತ್ತಾರೆಯೇ?"

"ಭಾರತ ಸರ್ಕಾರ ಬ್ರಿಟಿಷ್ ಪಾರ್ಲಿಮೆಂಟ್‌ನ ಸೃಷ್ಟಿ ಹಾಗೂ ಅದು ಸೈದ್ಧಾಂತಿಕವಾಗಿ ಬ್ರಿಟಿಷ್ ಪಾರ್ಲಿಮೆಂಟ್‌ಗೆ ಜವಾಬ್ದಾರಿಯಾಗಿದೆ, ಭಾರತದ ಜನತೆಗಲ್ಲ. ಭಾರತ ಸರ್ಕಾರದ ವಿರುದ್ಧ ವರ್ತಿಸಿದ ಯಾರನ್ನೇ ಆದರೂ ಶಿಕ್ಷಿಸುವ ಹಕ್ಕು ಸರ್ಕಾರಕ್ಕಿದೆ. ಹಾಗೂ ಅದನ್ನು ಕುರಿತ ನಿಯಮ ನಿಬಂಧನೆಗಳನ್ನು ಇಂಡಿಯನ್ ಪೀನಲ್ ಕೋಡ್‌ನಲ್ಲಿ ಕಾಣಬಹುದು ಎಂಬುದು ಭಾರತೀಯ ಪರಿಸ್ಥಿತಿಯ ನಗ್ನ ಸತ್ಯವಾಗಿದೆ. ಯಾವುದನ್ನು ಶ್ರೀ ಗೋಖಲೆಯವರು ಭಾರತದ ಸಂವಿಧಾನ ಎನ್ನುತ್ತಾರೋ ಅದು ನಿಜವಾಗಿ ಇಂಡಿಯನ್ ಪೀನಲ್ ಕೋಡ್ ಎಂದು ಗಂಭೀರವಾಗಿ ಹೇಳಬಹುದು. ಆ ಕೋಡ್‌ನ ನಾಲ್ಕು ಮೂಲೆಗಳೊಳಗೆ ನಮ್ಮ ಚಳವಳಿ ನಡೆಯಬೇಕು ಎಂದು ಅವರೂ ಅವರ ಸೌಮ್ಯವಾದಿ ಗೆಳೆಯರೂ ಸಲಹೆ ಮಾಡಿದರೆ ನಾವು ಆ ವಾದವನ್ನು ತಿಳಿದುಕೊಳ್ಳಬಹುದು. ಆಗ ಅದು ನ್ಯಾಯಬದ್ಧವಾಗಿರಬೇಕು ಮತ್ತು 'ಕ್ರಮಬದ್ಧವಾಗಿರಬೇಕು

ಎಂಬರ್ಥ ಬರುತ್ತದೆ. ಇದು ಚೆನ್ನಾಗಿ ಅರ್ಥವಾಗುತ್ತದೆ".

ನಾವು ಕಾನೂನುಬಾಹಿರ ವಿಧಾನಗಳನ್ನು ಅನುಸರಿಸಬೇಕೆಂದಾಗಲಿ, ಸಶಸ್ತ್ರ ಬಂಡಾಯವನ್ನು ಮಾಡಬೇಕೆಂದಾಗಲಿ ಇದರರ್ಥವಲ್ಲ ಎಂದೂ ತಿಲಕರು ಹೇಳಿದರು. ಇವು ಸಾಧ್ಯವಿಲ್ಲ. ದಾಸ್ಯದಲ್ಲಿರುವ ದೇಶದ ಹೋರಾಟದ ಸ್ವರೂಪ ಪರಿಸ್ಥಿತಿಗಳಿಂದ ತೀರ್ಮಾನವಾಗಬೇಕು. ಆಳುವವರ ಮೇಲೆ ಒತ್ತಡವನ್ನುಂಟು ಮಾಡುವ ಎಲ್ಲ ಕಾರ್ಯ ಸಾಧ್ಯ ವಿಧಾನಗಳನ್ನು ಉಪಯೋಗಿಸಬೇಕು. ಭಾರತದ ರಾಜಕೀಯದ ನಿರ್ಣಾಯಕ ಅಂಶಗಳು ಯಾವುದಿರಬೇಕೆಂದರೆ, ಸಂವಿಧಾನವಲ್ಲ (ಅದು ಅಸ್ತಿತ್ವದಲ್ಲೇ ಇಲ್ಲ) ಅಥವಾ ಕಾನೂನಲ್ಲ. (ನೌಕರಶಾಹಿಯ ಮನ ಬಂದಂತೆ ಅದನ್ನು ಬದಲಾಯಿಸಬಹುದು) ಆದರೆ ನ್ಯಾಯ ಮತ್ತು ಸ್ವತಂತ್ರವಾಗಿರುವ ಜನತೆಯ ಪರಭಾರೆ ಮಾಡಲಾಗದ ಹಕ್ಕು. ಸ್ವಾತಂತ್ರ್ಯ ಜನರಿಗೆ ಮೇಲಿನಿಂದ ಕೆಳಗಿಳಿದು ಬರುವುದಿಲ್ಲ; ಜನರು ಮೇಲೆದ್ದು ಒಲ್ಲದ ಕೈಗಳಿಂದ ಅದನ್ನು ಜಗ್ಗಿ ಕಿತ್ತುಕೊಳ್ಳಬೇಕು ಎಂದು ತಿಲಕರು ವಾದಿಸಿದರು.

"ಆದ್ದರಿಂದ ನಮ್ಮ ವಿಧಾನಗಳು ಸ್ವಾವಲಂಬನದ ಆಧಾರ ಹೊಂದಿರಬೇಕು. ಉದಾಹರಣೆಗೆ ಬಹಿಷ್ಕಾರವನ್ನೇ ತೆಗೆದುಕೊಳ್ಳಿ, ಅದು ಸ್ವಯಂ ಅನುಸರಿಸಬೇಕಾದ ಹಾಗೂ ಅಹಿಂಸಾತ್ಮಕ ಕ್ರಮ. ಪಿಕೆಟಿಂಗ್ ಮಾಡಬೇಕೆಂದಾಗಲಿ, ವಿದೇಶಿ ವಸ್ತುಗಳನ್ನು ಕೊಳ್ಳುವುದನ್ನು ಕಡ್ಡಾಯವಾಗಿ ತಪ್ಪಿಸಬೇಕೆಂದಾಗಲಿ, ನಾವು ಹೇಳುವುದಿಲ್ಲ. ಸಾತ್ವಿಕ ಪ್ರತಿರೋಧದ ಕ್ರಮವಾಗಿ 'ರಾಜದ್ರೋಹಕರ ಸಭೆಗಳ' ಕಾಯಿದೆಯಂತಹ ಕ್ರಮಗಳನ್ನು ಗಮನಕ್ಕೆ ತೆಗೆದುಕೊಳ್ಳಲು ನಾವು ನಿರಾಕರಿಸಿಬಿಡೋಣ. ಆದರೆ ನಮಗೇನಾಗುತ್ತದೆ ಎಂಬುದನ್ನು ನಾವು ಲೆಕ್ಕಿಸುವುದಿಲ್ಲ. ಭಾರತದ ಜನತೆಯ ಒಳಿತಿಗೆ ನಾವು ಸಂಪೂರ್ಣವಾಗಿ ಹಾಗೂ ಮುಚ್ಚುಮರೆಯಿಲ್ಲದೆ ನಿಷ್ಠರಾಗಿದ್ದೇವೆ. ನಮ್ಮ ಪೈಕಿ 3,000 ಅಥವಾ 4,000 ಜನರನ್ನು ಒಂದೇ ಕಾಲಕ್ಕೆ ಜೈಲಿಗೆ ಹಾಕುವುದರಿಂದ ನೌಕರಶಾಹಿ ಪೇಚಿಗೆ ಬೀಳುತ್ತದೆ. ವ್ಯಾಪಾರವನ್ನು ಬೇರೆಡೆಗೆ ತಿರುಗಿಸಿ, ಸರ್ಕಾರದ ಕೆಲಸಕ್ಕೆ ಅಡ್ಡಿಯುಂಟುಮಾಡುವುದರಿಂದ, ಇಂಗ್ಲೆಂಡ್‌ನ ಗಮನವನ್ನು ನಮಗಾಗಿರುವ ಅನ್ಯಾಯಗಳ ಕಡೆಗೆ ಆಕರ್ಷಿಸುವುದೇ ನಮ್ಮ ಗುರಿಯಾಗಿದೆ".

ಗೋಖಲೆಯವರಿಗೆ ಇಂತಹ ಬಲವಾದ ಔಷಧಿಯಿಂದ ಜುಗುಪ್ಸೆಯಾಯಿತು. ಫಿರೋಜ್‌ಶಾ ಮೆಹ್ತಾ ಅದನ್ನು ಬರಿ ಹುಚ್ಚು ಎಂದು ತಳ್ಳಿ ಹಾಕಿದರು. ಅವರ ಆಕ್ಷೇಪಣೆ ಎಷ್ಟರ ಮಟ್ಟಿಗೆ ತಾತ್ತ್ವಿಕ ಆಧಾರವನ್ನು ಹೊಂದಿತ್ತೋ ಅಷ್ಟರ ಮಟ್ಟಿಗೆ ಅನುಕೂಲ ಸಿಂಧುವಿನ ಆಧಾರವನ್ನು ಹೊಂದಿತ್ತು. ಸರ್ಕಾರವನ್ನು ವಿರೋಧಿಸುವ ಕ್ರಮಗಳು ಸರಿಯಾಗಿ ನಿರೂಪಿಸಿದ ಮಿತಿಗಳನ್ನು ಮೀರುವುದು ಗೋಖಲೆಯವರಿಗೆ ಬೇಕಾಗಿರಲಿಲ್ಲ. ಹತಾಶೆಯಿಂದ ಕೊನೆಗೆ ಬಹಿಷ್ಕಾರದ ಅಸ್ತ್ರವನ್ನು ಉಪಯೋಗಿಸುವುದನ್ನು ಅವರು ಸಮರ್ಥಿಸುತ್ತಿದ್ದರೋ ಏನೋ. ಆದರೆ ಅದನ್ನು ಒಂದೇ ಸಮನೆ ಬಳಸಿದರೆ ನಿರೀಕ್ಷಿತ ರಾಜಕೀಯ ಸುಧಾರಣೆಗಳಿಗೆ ಭಂಗ ಬರುತ್ತದೆ ಎಂದು ಅವರೆಣಿಸಿದ್ದರು. ಅವರು ಅನಂತರ ಸೂರತ್‌ನಲ್ಲಿ ಹೀಗೆ ಪ್ರಶ್ನಿಸಿದರು: "ನಾವು ಸರ್ಕಾರಕ್ಕೆ ಹೇಗೆ ಸೆಟೆ ಮುರಿಯ ಬಲ್ಲೆವು? ಸರ್ಕಾರವನ್ನು ಧಿಕ್ಕರಿಸುವುದು ನಮಗೆ ಖಂಡಿತ ಸಾಧ್ಯವಿಲ್ಲ. ಸರ್ಕಾರ ನಮ್ಮ ಚಳವಳಿಯನ್ನು ಬಹಳ ಬೇಗ ಹಿಸುಕಿಬಿಡುತ್ತದೆ".

ಅಧ್ಯಾಯ 11

ನಾಲ್ಕು ಸ್ತಂಭಗಳು

ಜಾರ್ಜ್ ನಥಾನೀಲ್ ಕರ್ಜನ್, ಬ್ರಿಟನ್ ಭಾರತಕ್ಕೆ ಕಳಿಸಿದ ಅತ್ಯಂತ ಪ್ರಭಾವಿ ವೈಸರಾಯ್‌ಗಳಲ್ಲಿ ಒಬ್ಬನಾಗಿದ್ದ. ಆದರೆ ಜನರ ಮೆಚ್ಚಿಕೆಯನ್ನು ಅತ್ಯಂತ ಕಡಿಮೆ ಗಳಿಸಿದವರಲ್ಲಿಯೂ ಒಬ್ಬನಾಗಿದ್ದ. 1899ರಲ್ಲಿ ಭಾರತಕ್ಕೆ ಬಂದಾಗಿನಿಂದಲೂ, ತಾನು ಸೀಜರನೆಂಬ ಭವ್ಯ ಕನಸಿನ ಗೀಳು ಆತನಿಗೆ ಹಿಡಿದಿತ್ತು; ಆತನ ಅವಿಶ್ರಾಂತ ಚೈತನ್ಯ ಒಂದೇ ಸಮನೆ ದಹಿಸುತ್ತಿತ್ತು. ತನ್ನ ಆರು ವರ್ಷಗಳ ಆಳ್ವಿಕೆಯಲ್ಲಿ ಭಾರತದ ಜನರ ಬಗ್ಗೆ ಕಳ ಕಳಿ ಮತ್ತು ತಾತ್ಸಾರ ಎರಡೂ ಕೂಡಿದ ವಿಚಿತ್ರ ಮನೋಭಾವನೆಯನ್ನು ಆತ ವ್ಯಕ್ತ ಪಡಿಸಿದ. ಆತನ ಅಧಿಕಾರದ ಕೊನೆಯ ವರ್ಷಗಳಲ್ಲಿ ತಾತ್ಸಾರವೇ ಪ್ರಮುಖವಾಗಿತ್ತು. ಭಾರತದ ಜನರು ಒಪ್ಪಲಿ, ಒಪ್ಪದಿರಲಿ, ಇಂಗ್ಲಿಷ್‌ನವನಿಂದ ಸಮರ್ಥವಾಗಿ ಆಳಿಸಿ ಕೊಳ್ಳುವುದಷ್ಟೆ ಅವರ ಪಾಲಿಗೆ ಸೇರಿದ್ದು. ಕಮಾಂಡರ್ – ಇನ್ – ಚೀಫ್ ಲಾರ್ಡ್ ಕಿಚಿನಿಕ್‌ನೊಡನೆ ಕಲಹವಾದ ನಂತರ ತಾನು ರಾಜೀನಾಮೆ ನೀಡಿ ಆ ಬಳಿಕ ನಡೆದ ಬೀಳ್ಕೊಡುಗೆಯ ಸಮಾರಂಭದಲ್ಲಿ ಮಾಡಿದ ಭಾಷಣದಲ್ಲಿ ಕರ್ಜನ್, ತಾನು ಭಾರತದ ಜನತೆಗೆ ಯಾವುದೇ ರಾಜಕೀಯ ರಿಯಾಯಿತಿಗಳನ್ನು ಏಕೆ ಕೊಡಲಿಲ್ಲವೆಂದರೆ, "ಭಾರತದ ಹಿತ ದೃಷ್ಟಿಯಿಂದಲೇ ಹಾಗೆ ಮಾಡುವುದು ಜಾಣತನವೆಂದಾಗಲಿ, ರಾಜ್ಯನೀತಿಜ್ಞತೆ ಯೆಂದಾಗಲಿ ತಾನು ಪರಿಗಣಿಸಲಿಲ್ಲ" ಎಂದು ನಿರ್ಲಿಪ್ತವಾಗಿ ಹೇಳಿದ!

ಇಂತಹ "ಉನ್ನತ ವ್ಯಕ್ತಿ"ಯ ಆಳ್ವಿಕೆ ಅಶಾಂತಿಯನ್ನು, ಕೋಪವನ್ನು ಉಂಟು ಮಾಡಿದ್ದು ಅನಿವಾರ್ಯವಾಗಿತ್ತು. 1905ರಲ್ಲಿ ಆತ ಮಾಡಿದ ಬಂಗಾಲದ ವಿಭಜನೆಯಂತೂ ಹಿಂದೆಂದೂ ಕಾಣದ ಕೋಲಾಹಲವನ್ನುಂಟುಮಾಡಿತು. ಈ ವಿಭಜನೆಯಿಂದ ಇಡೀ ದೇಶವು ದುಃಖ, ಅಸಮಾಧಾನ ಪಟ್ಟಿತು. ಬುಗಾಲದ ಪ್ರತಿ ಕೋಮು ಮತ್ತು ಪ್ರತಿ ದೃಷ್ಟಿಕೋನ ವಿಭಜನೆಯನ್ನು ವಿರೋಧಿಸಿತು. ಸಭೆಗಳು, ಪ್ರಾರ್ಥನೆಗಳು, ಕಡೆಗೆ ಬ್ರಿಟಿಷ್ ಪಾರ್ಲಿಮೆಂಟ್‌ಗೆ ಸಲ್ಲಿಸಿದ ದೈನ್ಯ ಮನವಿಯಿಂದಲೂ ಸಹ ಕರ್ಜನ್‌ನ "ಮುಕುಟಪ್ರಾಯದ ಮೌಢ್ಯವನ್ನು" ನಿವಾರಿಸಲು ಸಾಧ್ಯವಾಗಲಿಲ್ಲ. ಸೌಮ್ಯವಾದಿಗಳಾಗಿದ್ದ ಗೋಪಾಲಕೃಷ್ಣ ಗೋಖಲೆಯವರೂ ಸಹ ವಾರಣಾಸಿ ಕಾಂಗ್ರೆಸ್‌ನಲ್ಲಿ ಮಾಡಿದ ಅಧ್ಯ ಕ್ಷೀಯ ಭಾಷಣದಲ್ಲಿ ಕರ್ಜನ್‌ನನ್ನು ಔರಂಗಜೇಬ್‌ಗೆ ಹೋಲಿಸಬೇಕಾಗಿ ಬಂದಿತು.

ವಿಭಜನೆಯ ವಿರುದ್ಧ ಹೋರಾಡಲು ಬಂಗಾಲದ ಜನತೆ ಒಟ್ಟಿಗೆ ಸಿಡಿದೆದ್ದರು. ವಿಭಜನೆ ಜಾರಿಗೆ ಬಂದ ಅಕ್ಟೋಬರ್ 16, 1905ರ ದಿನವನ್ನು ಶೋಕ ದಿನವನ್ನಾಗಿ ಆಚರಿಸಲಾಯಿತು. ಅಡಿಗೆ ಮನೆಗಳಲ್ಲಿ ಬೆಂಕಿ ಉರಿಯಲಿಲ್ಲ. ಜನರು ಬರಿಗಾಲುಗಳಲ್ಲಿ ನಡೆದರು. ಭ್ರಾತೃತ್ವದ ಸಂಕೇತವಾಗಿ ಜನರು ಪರಸ್ಪರ ಕೈಗಳಿಗೆ ಕೆಂಪು ರಾಖಿ ಕಟ್ಟಿದರು. ಅಂದು ಸಂಜೆ ಕಲ್ಕತ್ತ ಟೌನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಸಭೆಗೆ ಸೇರಿದ್ದ ಜನರ ಸಂಖ್ಯೆ ಎಷ್ಟು ಅಪಾರವಾಗಿತ್ತೆಂದರೆ, ಜನಸಮೂಹವನ್ನು ನಾಲ್ಕು ಪ್ರತ್ಯೇಕ ಸಭೆಗಳಾಗಿ ವಿಂಗಡಿಸ

ಬೇಕಾಗಿ ಬಂತು. ಸಭೆ ಬಂಗಾಲದ ಏಕತೆಯ ಪ್ರಣಾಳಿಕೆಯನ್ನು ಅನುಮೋದಿಸಿತು ಹಾಗೂ ವಿಭಜನೆಯ ವಿರುದ್ಧ ಪ್ರತಿಭಟನೆ ಸೂಚಿಸಲು ಬ್ರಿಟಿಷ್ ವಸ್ತುಗಳ ಸಾರ್ವತ್ರಿಕ ಬಹಿಷ್ಕಾರವನ್ನು ಘೋಷಿಸಿತು.

ಬಂಗಾಲದ ರಾಷ್ಟ್ರಪ್ರೇಮಿ ಆಂದೋಲನವನ್ನು ತಿಲಕರು ತುಂಬು ಹೃದಯದಿಂದ ಸ್ವಾಗತಿಸಿದರು. ಬಹಿಷ್ಕಾರಕ್ಕೆ ದೇಶವನ್ನು ಸಂಘಟಿಸುವ ಕಾರ್ಯದಲ್ಲಿ ಅವರು ತೊಡಗಿದರು. ಅವರು ವಿಭಜನೆಯನ್ನು ವೇಷ ತೊಟ್ಟಿರುವ ಒಳಿತು ಎಂದು ಕರೆದರು. ಏಕೆಂದರೆ ರಾಷ್ಟ್ರೀಯ ಏಕತೆಯ ಹೊಸ ಪ್ರಜ್ಞೆಯನ್ನುಂಟುಮಾಡುವುದರಲ್ಲಿ ಅದು ಸಹಾಯ ಮಾಡಿತು. ಬಂಗಾಲದ ಧ್ಯೇಯ ಭಾರತದ ಧ್ಯೇಯವಾಗಿ ಪರಿಣಮಿಸಿತು ಹಾಗೂ ಆಂದೋಲನ ತ್ರಿವಿಕ್ರಮನಂತೆ ನಾಲ್ಕು ವಿಧದ ಕಾರ್ಯಕ್ರಮವಾಗಿ — ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯ ಬೆಳೆಯಿತು, ತಿಲಕರು ಆಗಸ್ಟ್ 22, 1905 ರಂದು 'ಕೇಸರಿ'ಯಲ್ಲಿ "ರಾಷ್ಟ್ರೀಯ ಬಹಿಷ್ಕಾರ" ಎಂಬ ಶೀರ್ಷಿಕೆಯಡಿ ಅಗ್ರ ಲೇಖನವೊಂದರಲ್ಲಿ ಹೀಗೆ ಬರೆದರು:

"ಬಹಿಷ್ಕಾರ ಆಂದೋಲನದ ಸಂಪೂರ್ಣ ಪ್ರಾಮುಖ್ಯತೆಯನ್ನು ಅನೇಕರು ಇನ್ನೂ ಗ್ರಹಿಸಿಲ್ಲ ಎಂದು ತೋರುತ್ತದೆ. ಇಂತಹ ಕ್ರಮಗಳು ಖಂಡಿತವಾಗಿಯೂ ಅಗತ್ಯ. ಅದರಲ್ಲಿಯೂ ಒಂದು ದೇಶದ ಜನತೆ ಮತ್ತು ಅವರ ಪರಕೀಯ ಯಜಮಾನರ ನಡುವೆ ಹೋರಾಟ ನಡೆಯುತ್ತಿರುವಾಗ ಇವು ಅಗತ್ಯ. ಸಿಟ್ಟಿಗೆದ್ದ ಜನರು ಹೇಗೆ ತಮ್ಮ ಬೇಡಿಕೆಗಳನ್ನು ನಿರಾಕರಿಸಿದ ದೊರೆಗೆ ಬುದ್ಧಿ ಕಲಿಸಲು ತೊಡಗಿದರೆಂಬ ಗಮನಾರ್ಹ ದೃಷ್ಟಾಂತ ಇಂಗ್ಲೆಂಡ್‌ನ ಇತಿಹಾಸದಲ್ಲೇ ಇದೆ. ಸರ್ಕಾರದ ವಿರುದ್ಧ ಆಯುಧ ಹಿಡಿಯುವ ಶಕ್ತಿಯಾಗಲಿ, ಮನಸ್ಸಾಗಲಿ ನಮಗಿಲ್ಲ. ಆದರೆ ದೇಶದಿಂದ ಲಕ್ಷಾಂತರ ರೂಪಾಯಿಗಳು ಸೋರಿ ಹೋಗುತ್ತಿರುವುದನ್ನು ನಿಲ್ಲಿಸಲು ನಾವು ಪ್ರಯತ್ನಿಸಬಾರದೇಕೆ? ಅಮೆರಿಕದ ವಸ್ತುಗಳಿಗೆ ಚೀಣ ಹಾಕಿರುವ ಬಹಿಷ್ಕಾರದಿಂದ ಅಮೆರಿಕದ ಸರ್ಕಾರದ ಕಣ್ಣು ತೆರೆದಿರುವುದನ್ನು ನಾವು ನೋಡುತ್ತಿಲ್ಲವೇ? ದಾಸ್ಯದಲ್ಲಿರುವ ಜನತೆ, ಎಷ್ಟೇ ಅಸಹಾಯರಾಗಿರಲಿ, ಏಕತೆ, ಕೆಚ್ಚು ಮತ್ತು ದೃಢ ನಿರ್ಧಾರದಿಂದ ತಮ್ಮ ಸೊಕ್ಕಿನ ಯಜಮಾನರನ್ನು ಹತ್ತಿಕ್ಕ ಬಲ್ಲರು ಎಂಬುದನ್ನು ಇತಿಹಾಸ ಧಾರಾಳವಾಗಿ ತೋರಿಸಿಕೊಟ್ಟಿದೆ. ಆದ್ದರಿಂದ ಈ ಪ್ರಸಕ್ತ ಬಿಕ್ಕಟ್ಟಿನಲ್ಲಿ ದೇಶದ ಇತರ ಭಾಗಗಳಲ್ಲಿರುವ ಜನರು ಬಂಗಾಲಿಗಳಿಗೆ ಸಹಾಯ ಹಸ್ತ ನೀಡುತ್ತಾರೆ ಎಂಬ ವಿಶ್ವಾಸ ನಮಗಿದೆ".

ಬಹಿಷ್ಕಾರ ಆಂದೋಲನದ ವಾಸ್ತವಿಕ ಹಾಗೂ ನಕಾರಾತ್ಮಕ ಅಂಶಗಳೆರಡನ್ನು ತಿಲಕರು ಒತ್ತಿ ಹೇಳಿದರು. ಮೊದಲಿಗೆ ಈ ಆಂದೋಲನ ಸ್ವದೇಶಿ ವಸ್ತುಗಳ ಬಳಕೆಗೆ ಪ್ರೋತ್ಸಾಹ ನೀಡುತ್ತದೆ. ಈ ಬಗ್ಗೆ ಸರ್ವಾನುಮತ ಅಭಿಪ್ರಾಯ ಹೊಂದಿತ್ತು. ಮಹಾರಾಷ್ಟ್ರದಲ್ಲಿ ಸ್ವದೇಶಿ ಆಂದೋಲನ ಪೂರ್ವೇತಿಹಾಸ ಹೊಂದಿತ್ತು. ಹಿಂದಿನ ಅಧ್ಯಾಯವೊಂದರಲ್ಲಿ ಪ್ರಸ್ತಾಪಿಸಿರುವ ಜಿ.ಹೆಚ್.ದೇಶ್‌ಮುಖ್ (ಲೋಕಹಿತವಾದಿ) ಅವರಲ್ಲಿ ಇದನ್ನು ಗುರುತಿಸಬಹುದು. ಸ್ವದೇಶಿ ವಸ್ತುಗಳು ಎಷ್ಟೇ ಒರಟಾಗಿ, ಒಷ್ಟಾಗಿ ದ್ದರೂ, ಅವುಗಳನ್ನೇ ಬಳಸುವಂತೆ ದೇಶಮುಖರು ಜನರನ್ನು ಹುರಿದುಂಬಿಸಿದರು. 1872 ಮತ್ತು 1873ರಲ್ಲಿ ತಮ್ಮ ಭಾಷಣಗಳ ಮೂಲಕ ಸ್ವದೇಶಿಯ ಬಗ್ಗೆ ಸಾರ್ವಜನಿಕ ಗಮನ

ವನ್ನು ಸೆಳೆದವರು ರಾನಡೆಯವರು. ಒಂದು ದೇಶದ ಮೇಲೆ ಮತ್ತೊಂದು ಜನತೆಯ ಕೈಗಾರಿಕಾ ಪ್ರಾಬಲ್ಯ ಆ ದೇಶದ ರಾಜಕೀಯ ದಾಸ್ಯಕ್ಕಿಂತಲೂ ಕಡಿಮೆ ಗಮನವನ್ನು ಸೆಳೆಯುತ್ತದೆ ಎಂದು ಅವರು ಹೇಳಿದರು. ಅದು ಅಗೋಚರವಾದ ರೀತಿಯಲ್ಲಿ ಹಾನಿ ಉಂಟುಮಾಡುವುದರಿಂದ ಅದರ ಪರಿಣಾಮಗಳು ಹೆಚ್ಚು ವಿನಾಶಕಾರಿಯಾಗಿವೆ. ಸರ್ಕಾರ ಎಲ್ಲಿಯವರೆಗೆ ಭಾರತೀಯ ಕೈಗಾರಿಕೆಗಳಿಗೆ ರಕ್ಷಣೆ ಒದಗಿಸುವುದಿಲ್ಲವೋ ಅಲ್ಲಿಯವರೆಗೆ ಸ್ವದೇಶಿಯನ್ನು ಧರ್ಮವನ್ನಾಗಿ ಆಚರಿಸುವುದನ್ನು ರಾನಡೆಯವರು ಬೆಂಬಲಿಸಿದರು. ಅವರು ತಮ್ಮ ಸೃಜನಾತ್ಮಕ ಪ್ರತಿಭೆಯಿಂದ ಕೈಗಾರಿಕಾ ಸಮ್ಮೇಳನದ ಸ್ಥಾಪನೆಗೆ ನೆರವಾದರು.

ಸ್ವದೇಶಿಯ ವಿಷಯದಲ್ಲಿ ಜಿ.ವಿ.ಜೋಶಿ, ರಾನಡೆಯವರ ಶ್ರದ್ಧಾವಂತ ಅನುಯಾಯಿಯಾಗಿದ್ದರು. ಜೋಶಿ ತಾವೇ ನೂತ ಮತ್ತು ನೇಯ್ದ ಖಾದಿಯನ್ನು ಮಾತ್ರ ಬಳಸುವ ಶಪಥವನ್ನು ಮಾಡಿದರು. ಗಾಂಧೀಜಿಯವರು ಖಾದಿಯನ್ನು ತಮ್ಮ ರಾಷ್ಟ್ರೀಯ ಕಾರ್ಯಕ್ರಮದ ಒಂದು ಅಂಶವನ್ನಾಗಿ ಮಾಡಿದ ನಾಲ್ಕು ದಶಕಗಳಿಗೆ ಮೊದಲೇ ನಡೆದದ್ದು ಇದು. ಹೀಗೆ ಮನೆಯಲ್ಲೇ ನೂತ ಬಟ್ಟೆಯನ್ನು ಧರಿಸಿದ್ದ ಜೋಶಿ ಸಾರ್ವಜನಿಕ ಸಭಾದ ಪ್ರತಿನಿಧಿಯಾಗಿ ದಿಲ್ಲಿಯಲ್ಲಿ ನಡೆದ ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದರು.

ತಮ್ಮ ಗುರುಗಳ ಹಾಗೆ ಗೋಖಲೆಯವರೂ ಸ್ವದೇಶಿಗೆ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ಸ್ವದೇಶಿ, "ಉತ್ಕೃಷ್ಟ ಮಟ್ಟದಲ್ಲಿ, ಮಾತೃಭೂಮಿಯ ಆಳವಾದ, ಭಾವಪೂರ್ಣವಾದ ಗಾಢವಾದ ಮತ್ತು ಸರ್ವವ್ಯಾಪಿಯಾದ ಪ್ರೀತಿಯಾಗಿದೆ" ಎಂದು ಅವರು ಹೇಳಿದರು. ಭಾರತದ ಸರ್ಕಾರದ ಸ್ವತಂತ್ರ ವ್ಯಾಪಾರಿ ಧೋರಣೆ ಆಗಿನ ದಿನಗಳ ಆರ್ಥಿಕ ವಿಚಾರಧಾರೆಯ ಆಧಾರವನ್ನು ಹೊಂದಿದಂತೆ ತೋರಿಕೆಗೆ ಕಂಡುಬಂದರೂ, ಅದರ ರಾಜಕೀಯ ಲಕ್ಷಣವನ್ನು ಮುಚ್ಚಿಡುವುದು ಸಾಧ್ಯವಾಗಲಿಲ್ಲ. ಆ ಧೋರಣೆ ನಮ್ಮ ಸಾಂಪ್ರದಾಯಿಕ ಕಸುಬುಗಳನ್ನು ಮೂಲೆಗೆ ಕೂರಿಸಿತು ಹಾಗೂ ದೇಶಿಯ ಕೈಗಾರಿಕೆಗಳನ್ನು ಪ್ರಾರಂಭಿಸುವ ಪ್ರಯತ್ನಗಳನ್ನು ಚಿವುಟಿ ಹಾಕಿತು. ಅದು ಭಾರತದ ಮೇಲಿನ ಬ್ರಿಟನ್‌ನ ಹಿಡಿತವನ್ನು ಪರೋಕ್ಷವಾಗಿ ಬಿಗಿಗೊಳಿಸಿತು. ಆದ್ದರಿಂದ ಸ್ವದೇಶಿ ಮತ್ತು ಬಹಿಷ್ಕಾರ ಆಂದೋಲನದಲ್ಲಿ ನಮ್ಮ ಆರ್ಥಿಕ ಉದ್ಧಾರ ಅಡಗಿದ್ದುದಷ್ಟೇ ಅಲ್ಲದೆ, ಸ್ವಾತಂತ್ರ್ಯ ಗಳಿಸುವುದಕ್ಕೆ ಪ್ರಬಲವಾದ ಸಾಧನವೂ ಆಗಿತ್ತು. ತಮ್ಮ ಬಹುತೇಕ ಸಮಕಾಲೀನರಿಗಿಂತಲೂ ಹೆಚ್ಚು ಸ್ಪಷ್ಟವಾಗಿ ಈ ಆಂದೋಲನದ ದ್ವಿವಿಧ ಸಾಧ್ಯತೆಗಳನ್ನು ತಿಲಕರು ಅರಿತುಕೊಂಡರು. ಒಂದು ಕಡೆ ಅವರು ಸ್ವದೇಶಿ ಉದ್ಯಮಕ್ಕೆ ಪ್ರೋತ್ಸಾಹ ಕೊಡಲು ಪ್ರಾರಂಭಿಸಿದರು. ಹಾಗೂ ಮತ್ತೊಂದು ಕಡೆ ಅದರ ರಾಜಕೀಯ ಲಕ್ಷಣವನ್ನು ಮನಮುಟ್ಟುವಂತೆ ನಾಟಿಸಿದರು. ಸ್ವದೇಶಿ ವಸ್ತುಗಳನ್ನು ಬಳಸಲು ನಿರ್ಧರಿಸಿದರೂ. ಅವುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆಯೇ ಎಂಬ ಸಂಶಯ ವ್ಯಕ್ತಪಡಿಸಿದವರನ್ನು ತಿಲಕರು ಹೀಗೆ ಮೂದಲಿಸಿದರು:

"ನಾವು ಮೊದಲು ಗಿರಣಿಗಳನ್ನು ಹೊಂದಬೇಕು, ಅನಂತರ ಸ್ವದೇಶಿ ವಸ್ತುಗಳನು ನಾವು ತಯಾರಿಸಲು ಪ್ರಾರಂಭಿಸುತ್ತೇವೆ; ಆಗ ಮಾತ್ರ ಅವುಗಳನ್ನು ಬಳಸುವ ಬಗ್ಗೆ ನಾವು ಯೋಚಿಸುತ್ತೇವೆ ಎಂಬುದು ಅವರ ವಾದವಾಗಿದೆ. ಇಂತಹ ವಾದದ ಮೌಢ್ಯತೆ

ಎಷ್ಟು ಸ್ಪಷ್ಟವಾಗಿದೆಯೆಂದರೆ, ಅದರ ಬಗ್ಗೆ ಕನಿಕರ ಉಂಟಾಗುತ್ತದೆ. ಮನುಷ್ಯ ನೀರಿಗೆ ಬೀಳುವ ಮೊದಲು ಈಜು ಕಲಿತಿರಬೇಕೆಂದು ನಿರೀಕ್ಷಿಸುವುದು ಹೇಗೆ ಮೂರ್ಖ ತನವೋ, ಹಾಗೆಯೇ ದೇಶೀಯ ವಸ್ತುಗಳ ಉತ್ಪಾದನೆ ಸಾಕಷ್ಟು ಆದ ನಂತರ ಜನರು ಸ್ವದೇಶಿ ವಸ್ತುಗಳನ್ನು ಬಳಸಬೇಕೆಂಬ ಮಾತು ಅಷ್ಟೇ ಮೂರ್ಖತನವಾಗಿದೆ. ಜನರಿಂದ ಅಥವಾ ಸರ್ಕಾರದಿಂದ ಸಾಕಷ್ಟು ಪ್ರೋತ್ಸಾಹ ದೊರೆತಾಗಲೇ ಈ ಉತ್ಪಾದನೆ ಸಾಧ್ಯ ವಾಗುತ್ತದೆ. ಸದ್ಯದ ಪರಿಸ್ಥಿತಿಗಳಲ್ಲಿ ಸರ್ಕಾರದ ಪ್ರೋತ್ಸಾಹ ಅಸಾಧ್ಯ: ಜನರೂ ಸಹ ಈ ಬಗ್ಗೆ ಸಂಶಯಗಳನ್ನು ಕೆದಕಿದರೆ ಹೇಗೋ ಉಳಿದುಕೊಂಡು ಬಂದಿರುವ ಸ್ಥಳೀಯ ವ್ಯಾಪಾರಗಳು ಮತ್ತು ಕೈಗಾರಿಕೆಗಳು ನಶಿಸಿ ಹೋಗುತ್ತವೆ. ಸಾಕಷ್ಟು ಸ್ವದೇಶಿ ವಸ್ತುಗಳ ಉತ್ಪಾದನೆಯಾಗುವವರೆಗೆ ಸ್ವದೇಶಿ ಆಂದೋಲನವನ್ನು ಮುಂದಕ್ಕೆ ಹಾಕಬೇಕೆಂದು ಹೇಳುತ್ತಿರುವವರು ಉದ್ದೇಶಪೂರ್ವಕವಾಗಿ ಪ್ರಸಕ್ತ ಆಂದೋಲನವನ್ನು ವಿರೂಪ ಗೊಳಿಸುತ್ತಿದ್ದಾರೆ, ತಪ್ಪಾಗಿ ತೋರಿಸುತ್ತಿದ್ದಾರೆ."

ಸ್ವದೇಶಿ ಮತ್ತು ಬಹಿಷ್ಕಾರ ಆಂದೋಲನಗಳ ರಾಜಕೀಯ ಲಕ್ಷಣದ ಬಗ್ಗೆ ತಿಲಕರು ಯಾವುದೇ ಮುಚ್ಚುಮರೆ ಮಾಡಲಿಲ್ಲ. ತ್ಯಾಗ ಮಾಡಬೇಕಾಗಿ ಬಂದರೂ, ಭಾರತೀಯ ವಸ್ತುಗಳಿಗೆ ಆದ್ಯತೆ ಕೊಡಬೇಕೆಂದು, ಅವು ದೊರೆಯದಿದ್ದರೆ, ಬ್ರಿಟಿಷೇತರ ವಸ್ತುಗಳನ್ನು ಮಾತ್ರ ಕೊಳ್ಳಬೇಕೆಂದೂ ಅವರು ಜನರನ್ನು ಕೇಳಿಕೊಂಡರು.

"ಭಾರತದಲ್ಲಿ ಬ್ರಿಟಿಷ್ ಸರ್ಕಾರ ಅಪಾಯದ ವಿರುದ್ಧ ಪಡೆದಿರುವ ರಕ್ಷಣೆಯಿಂದ ಅದಕ್ಕೆ ಮೊಂಡು ಧೈರ್ಯ ಬಂದಿದೆ ಹಾಗೂ ಆಳಿಸಿಕೊಳ್ಳುವವರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಅಲಕ್ಷಿಸುವ ಭಾವನೆಯುಂಟಾಗಿದೆ. ಸಾರ್ವಜನಿಕ ಮನಸ್ಸಿನ ಪ್ರಸಕ್ತ ಪ್ರಕ್ಷುಬ್ಧ ಸ್ಥಿತಿಯ ಲಾಭ ನಾವು ಪಡೆಯಬೇಕು ಹಾಗೂ ದೇಶೀಯ ಮತ್ತು ಬ್ರಿಟಿಷೇತರ ತಯಾರಿಕೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಪ್ರಚುರಪಡಿಸಲು ಕೇಂದ್ರ ಸಂಸ್ಥೆ ಯೊಂದನ್ನು ಸ್ಥಾಪಿಸಬೇಕು. ಈ ಸಂಸ್ಥೆ ದೇಶದಾದ್ಯಂತ ಶಾಖೆಗಳನ್ನು ಹೊಂದಿರಬೇಕು ಹಾಗೂ ಭಾಷಣಗಳು ಮತ್ತು ಸಭೆಗಳ ಮೂಲಕ ಹೊಸ ಕೈಗಾರಿಕೆಗಳನ್ನು ಸ್ಥಾಪಿಸು ವುದರ ಮೂಲಕ ಆಂದೋಲನವನ್ನು ಮುಂದುವರಿಸಲು ನಿರಂತರ ಪ್ರಯತ್ನಗಳನ್ನು ಮಾಡಬೇಕು."

ತಿಲಕರು ನುಡಿದಂತೆ ನಡೆದುಕೊಂಡರು. ಅವರು ತಮ್ಮ ವೈಯಕ್ತಿಕ ಮತ್ತು ಮನೆವಾರ್ತೆಯ ಅಗತ್ಯಗಳಿಗೆ ಸ್ವದೇಶಿ ವಸ್ತುಗಳನ್ನು ಮಾತ್ರ ಬಳಸಿದರು. ತಮ್ಮ ನಿಯತಕಾಲಿಕಗಳಿಗೆ ಸ್ವದೇಶಿ ಕಾಗದವನ್ನು ಬಳಸುವುದು ಅವರಿಗೆ ಅಭ್ಯಾಸವಾಗಿತ್ತು ಹಾಗೂ ಅದು ದೊರೆಯದಿದ್ದಾಗ ಬ್ರಿಟಿಷೇತರ ಕಾಗದವನ್ನು ಕೊಳ್ಳುತ್ತಿದ್ದರು. ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಉತ್ಸಾಹಿ ತರುಣರಿಗೆ ಅವರು ನೆರವಾದರು. ಭಾರತೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು "ಪ್ರತಿ ವ್ಯಕ್ತಿಯಿಂದ ಒಂದು ಕಾಸು" ಸಂಗ್ರಹಿಸು ವುದಕ್ಕಾಗಿ 1903ರಲ್ಲಿ ಪ್ರಾರಂಭಿಸಲಾದ "ಕಾಸು ನಿಧಿ" ಚಳವಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದರು. 1906ರಲ್ಲಿ ಮುಂಬೈ ಸ್ವದೇಶಿ ಸಹಕಾರ ಮಳಿಗೆಯನ್ನು ಸ್ಥಾಪಿಸುವುದರಲ್ಲಿ ತಿಲಕರು ಪ್ರಮುಖ ಪಾತ್ರ ವಹಿಸಿದ್ದರು. ಈ ಮಳಿಗೆ ಈಗಲೂ ಉತ್ತಮವಾಗಿ ನಡೆಯುತ್ತಿದೆ. ಸರ್ ರತನ್ ಟಾಟಾ ಮತ್ತು ಸರ್ ಮನಮೋಹನ್

ರಾಮ್‌ಜಿ ಅವರೊಂದಿಗೆ ತಿಲಕರು ಅದರ ಡೈರೆಕ್ಟರುಗಳ ಮಂಡಳಿಯಲ್ಲಿದ್ದರು. ಅವರು ಅನೇಕ ಸ್ವದೇಶಿ ಪ್ರದರ್ಶನಗಳಿಗೆ ಆಶ್ರಯ ಕೊಟ್ಟರು. ಒಂದು ಪ್ರದರ್ಶನವನ್ನು ತಮ್ಮ ಮನೆಯಲ್ಲೇ ನಡೆಸಿದರು ಹಾಗೂ ಸ್ವದೇಶಿ ಚಳವಳಿಯನ್ನು ಜನಪ್ರಿಯಗೊಳಿಸಲು ಮಹಾರಾಷ್ಟ್ರದಾದ್ಯಂತ ಪ್ರವಾಸ ಮಾಡಿದರು.

ತಿಲಕರ ಚತುರ್ಮುಖ ಕಾರ್ಯಕ್ರಮಕ್ಕೆ ಬಿ.ಪಿ.ಪಾಲ್ ಮತ್ತು ಅರಬಿಂದೋ ಘೋಷ್ ಅವರಂತಹ ಬಂಗಾಲಿ ನಾಯಕರೇ ಬೆಂಬಲ ಕೊಟ್ಟಿದ್ದೇ ಅಲ್ಲದೆ, ಇತರ ಪ್ರಾಂತ್ಯಗಳಿಂದ ಅವರಿಗೆ ಬೆಂಬಲ ನೀಡಿದವರಲ್ಲಿ ಲಾಲಾ ಲಜಪತ್‌ರಾಯ್ ಅತ್ಯಂತ ಪ್ರಮುಖ ನಾಯಕರಾಗಿದ್ದರು. (ನಿಜವಾಗಿ ಅದು ತ್ರಿಮುಖ ಕಾರ್ಯಕ್ರಮವಾಗಿತ್ತು. ಸ್ವದೇಶ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ-ಇವುಗಳ ಮೂಲಕ ಸ್ವರಾಜ್ಯ ಪಡೆಯುವ ಗುರಿ ಹೊಂದಲಾಗಿತ್ತು) ದಿಲ್ಲಿ ಕಾಂಗ್ರೆಸ್‌ನಲ್ಲಿ ಮೊದಲು ಪ್ರಸ್ತಾಪ ಮಾಡಿದ್ದ "ಪ್ರಾಬಲ್ಯ – ದೌರ್ಬಲ್ಯವಲ್ಲ" ಎಂಬ ಹೊಸ ಘೋಷಣೆಯನ್ನು ಲಾಲ್ – ಬಾಲ್ – ಪಾಲ್ ತ್ರಿಮೂರ್ತಿಗಳು ಜನಪ್ರಿಯಗೊಳಿಸಿದರು. ಬಹಿಷ್ಕಾರವನ್ನು ಬಂಗಾಲದಲ್ಲಿ ಮಾತ್ರ ನಡೆಸಲಾಗುವುದು ಹಾಗೂ ವಿಭಜನೆಯನ್ನು ಹಿಂತೆಗೆದುಕೊಳ್ಳುವವರೆಗೆ ಮಾತ್ರ ಅದು ಜಾರಿಯಲ್ಲಿರುತ್ತದೆ ಎಂಬ ಭಾವನೆಯನ್ನು ನಿವಾರಿಸಲೂ ಸಹ ಈ ಘೋಷಣೆ ಪ್ರಯತ್ನಿಸಿತು.

ಬಹಿಷ್ಕಾರದಿಂದ ಬ್ರಿಟಿಷ್ ವ್ಯಾಪಾರದ ಮೇಲೆ ಏನು ಪರಿಣಾಮ ಉಂಟಾಯಿತು ಎಂಬುದನ್ನು ಕಲ್ಕತ್ತೆಯ ಬ್ರಿಟಿಷ್ ಸಮುದಾಯದ ಮುಖವಾಣಿಯಾಗಿದ್ದ 'ದಿ ಇಂಗ್ಲಿಷ್ ಮ್ಯಾನ್'ನ ರೋದನದಿಂದ ನೋಡಬಹುದು:

ಅನೇಕ ಪ್ರಮುಖ ಮಾರವಾಡಿ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗಿವೆ ಹಾಗೂ ಅನೇಕ ಭಾರಿ ಐರೋಪ್ಯ ಆಮದು ಸಂಸ್ಥೆಗಳು ತಮ್ಮ ಚಿಲ್ಲರೆ ವಸ್ತುಗಳ ಶಾಖೆಗಳನ್ನು ಮುಚ್ಚಬೇಕಾಗಿ ಬಂದಿದೆ ಇಲ್ಲವೇ ಅತಿ ಸಣ್ಣ ಪ್ರಮಾಣದಲ್ಲಿ ವ್ಯಾಪಾರವನ್ನು ಮಾಡಬೇಕಾಗಿ ಬಂದಿದೆ. ವೇರ್ ಹೌಸ್‌ಗಳಲ್ಲಿರುವ ದಾಸ್ತಾನುಗಳು ಹೆಚ್ಚಾಗುತ್ತಾ ಬಂದಿವೆ. ಈ ವಿಷಯ ಎಷ್ಟು ಚೆನ್ನಾಗಿ ತಿಳಿದಿದೆಯೆಂದರೆ,ಅದನ್ನು ಮುಚ್ಚಿಡುವ ಪ್ರಯತ್ನ ವ್ಯರ್ಥವಾಗುತ್ತದೆ. ಹಾಗೆ ನೋಡಿದರೆ, ಬಹಿಷ್ಕಾರದಿಂದ ವ್ಯಾಪಾರಕ್ಕೆ ಆಗಿರುವ ಎಲ್ಲ ಹಾನಿಗಳು ಸಂಪೂರ್ಣವಾಗಿ ತಿಳಿಯುವ ಹಾಗೆ ಮಾಡಬೇಕಾದ ಸಮಯ ಬಂದಿದೆ. ಬಹಿಷ್ಕಾರ ಹಾಕುತ್ತಿರುವವರಿಗೆ ಪ್ರೋತ್ಸಾಹ ನೀಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ಅವರಿಗೆ ಪ್ರೋತ್ಸಾಹದ ಅಗತ್ಯವಿಲ್ಲ. ಇಂಗ್ಲಿಷ್ ಆಳ್ವಿಕೆಯ ಶತ್ರುಗಳು ದೇಶದಲ್ಲಿನ ಬ್ರಿಟಿಷ್ ಹಿತಗಳಿಗೆ ನೋವುಂಟುಮಾಡಲು ಬಹಿಷ್ಕಾರದಲ್ಲಿ ಅತ್ಯಂತ ಪರಿಣಾಮಕಾರಿಯಾದ ಆಯುಧವನ್ನು ಕಂಡುಕೊಂಡಿದ್ದಾರೆ ಎಂಬ ಅಂಶದ ಬಗ್ಗೆ ಸ್ವದೇಶದ ಜನತೆ ಹಾಗೂ ಭಾರತ ಸರ್ಕಾರಕ್ಕೆ ಸಂಪೂರ್ಣ ತಿಳುವಳಿಕೆ ಕೊಡಬೇಕಾದ ಪ್ರಶ್ನೆಯೂ ಇದೆ. ಬಹಿಷ್ಕಾರಕ್ಕೆ ಬಗ್ಗಬಾರದು. ಇಲ್ಲವಾದರೆ, ಅದು ಭಾರತದೊಂದಿಗೆ ಇರುವ ಬ್ರಿಟಿಷ್ ಸಂಬಂಧವನ್ನು ಸಶಸ್ತ್ರ ದಂಗೆಗಿಂತಲೂ ಹೆಚ್ಚು ಖಂಡಿತವಾಗಿ ಹಾಳು ಮಾಡುತ್ತದೆ.

ಸ್ವದೇಶಿ ಮತ್ತು ಬಹಿಷ್ಕಾರ ಶಕ್ತ ರಾಜಕೀಯ ಆಯುಧವಾಗುತ್ತದೆಂಬ ತಿಲಕರ ನಂಬಿಕೆಗೆ ಅವರು ಆಶಿಸಿದ್ದಕ್ಕಿಂತಲೂ ಬೇಗ ಸಮರ್ಥನೆ ದೊರಕಿತು. ಲಾಲಾ ಲಜಪತ್

ರಾಯ್ ಅವರ ಪ್ರಕಾರ, ತಿಲಕರು ದಿಲ್ಲಿ ಕಾಂಗ್ರೆಸ್‌ನಲ್ಲಿ ಸಾತ್ತ್ವಿಕ ಪ್ರತಿರೋಧ ಚಳವಳಿಯ ಬಗ್ಗೆ ಯೋಚಿಸಲು ಪ್ರಾರಂಭಿಸಿದರು. ಅದರ ಗುರಿಗಳು ಹೀಗಿದ್ದವು: (1) ತಮ್ಮನ್ನು ಆಳುವವರ ಸರ್ವಶಕ್ತಿಯನ್ನು ದೇಶ ಮತ್ತು ಜನತೆ ಒಪ್ಪಿಕೊಳ್ಳುವಂತೆ ಮಾಡಿದ ಮಂತ್ರಮುಗ್ಧತೆಯನ್ನು ನಾಶಪಡಿಸುವುದು; (2) ದೇಶದ ಒಳಿತಿಗಾಗಿ ಜನರು ತ್ಯಾಗ ಭಾವನೆಯನ್ನು ಹೊಂದಿ, ಕಷ್ಟ ಸಹಿಸಲು ಸಿದ್ಧವಾಗಿರುವುದೇ ಅಲ್ಲದೆ ಸ್ವಾತಂತ್ರ್ಯದ ಉತ್ಕಟ ಪ್ರೇಮವನ್ನು ಹೊಂದುವಂತೆ ಮಾಡುವುದು; ಮತ್ತು (3) ಭಾರತದ ಸ್ವಾತಂತ್ರ್ಯವನ್ನು ಗಳಿಸುವುದು. ಸಾತ್ತ್ವಿಕ ಪ್ರತಿರೋಧದ ವಿಚಾರ ತಿಲಕರ ಮನಸ್ಸಿನಲ್ಲಿ ಒಂದು ವರ್ಷದ ಕಾಲ ಗುಂಯ್‌ಗುಡುತ್ತಿತ್ತು. ಕಲ್ಕತ್ತೆಯ ಕಾಂಗ್ರೆಸ್‌ನ ನಂತರವೇ ಅವರು ಅದನ್ನು ಹೊರಗೆಡವಿದರು. "ಹೊಸ ಪಕ್ಷದ ಸಿದ್ಧಾಂತಗಳು" ಎಂಬ ಬಗ್ಗೆ ಮಾಡಿದ ಪ್ರಖ್ಯಾತ ಭಾಷಣದಲ್ಲಿ ಅವರು ಹೀಗೆ ಹೇಳಿದರು:

"ನಮ್ಮಲ್ಲಿ ಆಯುಧಗಳಿಲ್ಲ ಹಾಗೂ ಆಯುಧಗಳ ಅಗತ್ಯವೂ ಇಲ್ಲ. ನಮ್ಮಲ್ಲಿ ಇನ್ನೂ ಬಲವಾದ ಆಯುಧವಿದೆ. ಬಹಿಷ್ಕಾರದ ರೂಪದಲ್ಲಿ ರಾಜಕೀಯ ಆಯುಧವಿದೆ. ಕೆಲವೇ ಇಂಗ್ಲಿಷ್ ಜನರ ಕೈಯಲ್ಲಿರುವ ಇಡೀ ಆಡಳಿತವನ್ನು ನಮ್ಮ ನೆರವಿನಿಂದ ನಡೆಸಲಾಗುತ್ತದೆ. ನಮ್ಮ ಮೇಲೇ ನಡೆಯುತ್ತಿರುವ ದಬ್ಬಾಳಿಕೆಗೆ ನಾವೇ ಸಾಧನಗಳಾಗಿದ್ದೇವೆ. ಈ ದೇಶದಲ್ಲಿ ಅವರ ಸಂಖ್ಯೆ ಅತ್ಯಲ್ಪ ಎಂಬುದು ಇಂಗ್ಲಿಷ್ ಜನರಿಗೆ ತಿಳಿದಿದೆ. ಅವರು ಶಕ್ತರು ನೀವು ದುರ್ಬಲರು ಎಂದು ನಿಮ್ಮನ್ನು ಮೋಸದಿಂದ ನಂಬಿಸುವ ಕೆಲಸವನ್ನು ಅವರಲ್ಲಿ ಪ್ರತಿಯೊಬ್ಬರೂ ಮಾಡುತ್ತಾರೆ.

ನೇರವಾಗಿ ಹೋರಾಡುವ ಶಕ್ತಿ ನಿಮಲ್ಲಿಲ್ಲದಿದ್ದರೆ, ವಿದೇಶಿ ಸರ್ಕಾರ ನಿಮ್ಮನ್ನು ಆಳುವುದಕ್ಕೆ ನೆರವು ನೀಡದಿರಲು ನಿಮ್ಮ ಸ್ವಂತ ಅನುಕೂಲಗಳನ್ನೂ, ಅಗತ್ಯಗಳನ್ನೂ ವರ್ಜಿಸುವ ಶಕ್ತಿ ನಿಮ್ಮಲ್ಲಿಲ್ಲವೇ? ಇದೇ ಬಹಿಷ್ಕಾರ ಹಾಗೂ ಬಹಿಷ್ಕಾರ ಒಂದು ರಾಜಕೀಯ ಆಯುಧ ಎಂದು ನಾವು ಹೇಳುವುದರ ಅರ್ಥ ಇದೇ. ಕಂದಾಯವನ್ನು ಸಂಗ್ರಹಿಸಲೂ, ಶಾಂತಿಯನ್ನು ಕಾಪಾಡಲೂ ಅವರಿಗೆ ನಾವು ನೆರವಾಗುವುದು ಬೇಡ. ಗಡಿಗಳಾಚೆ ಅಥವಾ ಭಾರತದ ಹೊರಗಡೆ ಭಾರತೀಯ ರಕ್ತ ಮತ್ತು ಹಣದಿಂದ ಯುದ್ಧ ಮಾಡುವುದಕ್ಕೆ ನಾವು ಅವರಿಗೆ ನೆರವು ನೀಡುವುದು ಬೇಡ. ನ್ಯಾಯದ ಆಡಳಿತ ನಿರ್ವಹಿಸಲು ಅವರಿಗೆ ನಾವು ಸಹಾಯ ಮಾಡುವುದು ಬೇಡ. ನಮ್ಮದೇ ನ್ಯಾಯಾಲಯಗಳನ್ನು ನಾವು ಹೊಂದೋಣ ಹಾಗೂ ಸಮಯ ಬಂದಾಗ, ನಾವು ತೆರಿಗೆಗಳನ್ನು ಕೊಡುವುದು ಬೇಡ. ನಿಮ್ಮ ಒಗ್ಗಟ್ಟಿನ ಪ್ರಯತ್ನಗಳಿಂದ ನೀವು ಇದನ್ನು ಮಾಡಬಲ್ಲಿರಾ? ನೀವು ಮಾಡಬಲ್ಲಿರಾದರೆ, ನಾಳೆಯಿಂದ ನೀವು ಸ್ವತಂತ್ರರು"

ಹೀಗೆ 1906ರಲ್ಲಿ ತಿಲಕರು, ಗಾಂಧೀಜಿ 14 ವರ್ಷಗಳ ನಂತರ ಆರಂಭಿಸಿದ ಅಸಹಕಾರ ಚಳವಳಿಯ ಹೆಚ್ಚು ಕಡಿಮೆ ಪ್ರತಿಯೊಂದು ಅಂಶ ಅಂಶವನ್ನೂ ಮೊದಲೇ ನಿರೀಕ್ಷಿಸಿದರು. ಜನರ ಕಷ್ಟಸಹಿಷ್ಣುತೆಗೆ ಮನವಿ ಮಾಡಿಕೊಂಡ ಲೋಕಮಾನ್ಯರು ಮಹಾತ್ಮ ಗಾಂಧಿಯವರ ಧ್ವನಿಯಲ್ಲೇ ಮಾತನಾಡಿದಂತೆ ತೋರುತ್ತದೆ. ಬಂಗಾಲದ ವಿಭಜನೆಯಿಂದ ದೇಶದಲ್ಲಿ ಅದ್ಭುತವಾಗಿ ಅಲ್ಲೋಲಕಲ್ಲೋಲ ಉಂಟಾಗಿದ್ದರೂ, ಸಾತ್ತ್ವಿಕ ಪ್ರತಿರೋಧ ಚಳವಳಿಯನ್ನು ಪ್ರಾರಂಭಿಸುವ ಸಮಯ ಇನ್ನೂ ಬಂದಿರಲಿಲ್ಲ. ಗಾಂಧಿಯವರ

ಲಾಂಛನದಡಿ ಅಸಹಕಾರ ಚಳವಳಿಯನ್ನು ಪ್ರಾರಂಭಿಸುವುದಕ್ಕೆ ಸಿದ್ಧವಾಗುವ ಮುನ್ನ ದೇಶ ದೀರ್ಘಾವಧಿ ಹೋರಾಟದಲ್ಲಿ ತೊಡಗ ಬೇಕಾಗಿತ್ತು, ಕಷ್ಟನಷ್ಟಗಳನ್ನನುಭವಿಸ ಬೇಕಾಗಿತ್ತು. ಏನೇ ಆದರೂ, ನಿರಾಯುಧರಾದ ಜನತೆಯ ವಿಮೋಚನೆಗೆ ಸಾತ್ವಿಕ ಪ್ರತಿರೋಧದ ಅಂತರ್ಗತ ಬಲಕ್ಕೆ ನಿರ್ದಿಷ್ಟ ರೂಪುರೇಷೆಗಳನ್ನು ಗುರುತಿಸಿದ ಗೌರವ ತಿಲಕರಿಗೆ ಸಲ್ಲಬೇಕು.

ತಿಲಕರು ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲೂ ಕಾರ್ಯತತ್ಪರರಾಗಿದ್ದರು. ಶಿಕ್ಷಣಕ್ಕೆ ಪ್ರಥಮ ಒಲವು ಹೊಂದಿದ್ದ ಹಾಗೂ ಡೆಕ್ಕನ್ ಎಜುಕೇಶನ್ ಸೊಸೈಟಿಯ ಸ್ಥಾಪಕರಾಗಿದ್ದ ವ್ಯಕ್ತಿಯಿಂದ ಇದನ್ನು ನಿರೀಕ್ಷಿಸಬೇಕಾದ್ದು ಸಹಜವೇ. ಖಾಸಗಿ ಶಿಕ್ಷಣ ಸಂಸ್ಥೆಗಳೂ ಸಹ, ಅನೇಕ ರೀತಿಯ ಕಾಣುವಂತಹ, ಕಾಣದಂತಹ ಮಾರ್ಗಗಳ ಮೂಲಕ ಸರ್ಕಾರಿ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಕುಖ್ಯಾತ ಲಿಸ್ಲಿ ಸುತ್ತೋಲೆ ಇದಕ್ಕೆ ಒಂದು ಉದಾಹರಣೆ. ಸಹಾಯ ಧನವನ್ನು ಕಳೆದುಕೊಳ್ಳಬೇಕಾಗಿ ಬಂದರೂ, ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಕಾಪಾಡಿಕೊಂಡು ಬರುವಂತೆ ತಿಲಕರು ಈ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಒತ್ತಾಯಪಡಿಸಿದರು. ಆಗ ಫರ್ಗುಸನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ವಿನಾಯಕ ದಾಮೋದರ ಸಾವರ್ಕರ್ ಸ್ವದೇಶಿ ಸಭೆಯೊಂದರಲ್ಲಿ ಭಾಗವಹಿಸಿದ್ದಕ್ಕಾಗಿ ಕಾಲೇಜಿನ ಪ್ರಿನ್ಸಿಪಾಲರು ಅವರಿಗೆ ಹತ್ತು ರೂಪಾಯಿಗಳ ದಂಡ ವಿಧಿಸಿ ಹಾಸ್ಟೆಲಿನಿಂದ ಹೊರಹಾಕಿದಾಗ,ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ಗೋಖಲೆಯವರು ಮ್ಯಾಂಚೆಸ್ಟರ್‌ನಲ್ಲಿ ಸಮರ್ಥಿಸುತ್ತಿದ್ದಾಗ ಇಂತಹ ಶಿಸ್ತಿನ ಕ್ರಮವನ್ನು ಪೂನಾದಲ್ಲಿ ಕೈಗೊಳ್ಳುವ ವಿಪರ್ಯಾಸವನ್ನು ತಿಲಕರು ಎತ್ತಿ ತೋರಿಸಿದರು. ಶಿಸ್ತಿನ ಹೆಸರಿನಲ್ಲಿ ವಿದ್ಯಾರ್ಥಿಗಳ ಮೇಲೆ ಮನಸ್ಸಿಗೆ ಬಂದಂತೆ ನಿರ್ಬಂಧ ವಿಧಿಸುವುದನ್ನು ಅವರು ಖಂಡಿಸಿದರು. ತಮ್ಮ ಭಾಷಣಗಳಿಗೆ ವಿದ್ಯಾರ್ಥಿಗಳು ಹಾಜರಾಗುವುದನ್ನು ಎಲ್ಲಿಯವರೆಗೆ ತಡೆಯುವುದಿಲ್ಲವೋ ಅಲ್ಲಿಯವರೆಗೆ ಅವರು ಸರ್ಕಾರಿ ಶಾಲೆಗಳಿಗೆ ಸೇರುವುದನ್ನು ತಾವು ಲೆಕ್ಕಿಸುವುದಿಲ್ಲವೆಂದು ತಿಲಕರು ಹಾಸ್ಯದ ಚಟಾಕಿ ಹಾರಿಸಿದರು!

1906ರಲ್ಲಿ ಮಹಾರಾಷ್ಟ್ರ ವಿದ್ಯಾಪ್ರಸಾರಕ ಮಂಡಳವನ್ನು ಸ್ಥಾಪಿಸಲು ತಿಲಕರು ನೆರವಾದರು. ಅದರ ಆಶ್ರಯದಲ್ಲಿ ಮೊದಲು ಕೊಲ್ಹಾಪುರದಲ್ಲಿ ಮತ್ತು ನಂತರ ತಳೆಗಾಂವ್‌ನಲ್ಲಿ ನಡೆಸಲಾದ ಸಮರ್ಥ ವಿದ್ಯಾಲಯ ಹಣಕಾಸಿನ ತೊಂದರೆಗಳಿಗೆ ಸಿಕ್ಕಿದಾಗ ಅವರು ಭಾಷಣ ಪ್ರವಾಸ ಕೈಗೊಂಡು ಮಂಡಳಕ್ಕೆ 20,000 ರೂಪಾಯಿಗಳನ್ನು ಸಂಗ್ರಹಿಸಿದರು. ರಾಷ್ಟ್ರೀಯ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದೂ ಸಹ ಅವರು ಸಲಹೆ ಮಾಡಿದರು. ಆದರೆ ಈ ಸಲಹೆಗೆ ಸ್ಪಷ್ಟ ರೂಪ ಕೊಡಲಾಗಲಿಲ್ಲ.

ಯಾವ ಶಿಕ್ಷಣ ದೇಶವನ್ನು ಅರಿಯುವಂತೆ ಮಾಡುತ್ತದೆಯೋ ಅದು ರಾಷ್ಟ್ರೀಯ ಶಿಕ್ಷಣವೆಂದು ತಿಲಕರು ವರ್ಣಿಸಿದರು. ಇದನ್ನು ಮಾಡುವುದರಲ್ಲೇ ಶಾಲೆಗಳು, ಕಾಲೇಜುಗಳು ವಿಫಲಗೊಂಡಿದ್ದವು. ಅಮೇರಿಕದಲ್ಲಿ ಆ ದೇಶದ ಸ್ವಾತಂತ್ರ್ಯ ಘೋಷಣೆಯನ್ನು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ ಎಂದು ಅವರು ಹೇಳಿದರು. ಅಂತಹ ಶಿಕ್ಷಣವನ್ನು ಭಾರತದಲ್ಲಿ ರಾಜದ್ರೋಹಕರ ಎಂದು ಪರಿಗಣಿಸಲಾಗುತ್ತದೆ. ಉದಾಹರಣೆಗೆ,

"ಸಕ್ಕರೆಗಾಗಿ ಪ್ರತಿವರ್ಷ ಈ ದೇಶದಿಂದ ಆರು ಕೋಟಿ ರೂಪಾಯಿಗಳು ಹೊರಗಡೆ ಸೋರಿ ಹೋಗುತ್ತಿವೆ" ಎಂಬುದು ನಮ್ಮ ವಿದ್ಯಾರ್ಥಿಗಳಿಗೆ ತಿಳಿದಿರಲಿಲ್ಲ ಎಂದು ಅವರು ಹೇಳಿದರು. "ಇದೆಲ್ಲದಕ್ಕೆ ಕಾರಣ ನಮ್ಮ ಸರ್ಕಾರದ ಕೈಗಾರಿಕಾ ಧೋರಣೆ. ಆದರೆ ನಮಗದು ತಿಳಿದಿಲ್ಲ. ಕಾಲೇಜುಗಳನ್ನು ಬಿಟ್ಟ 25 ವರ್ಷಗಳ ನಂತರ ಈ ವಿಷಯಗಳನ್ನು ನಾವು ಕಲಿತಿದ್ದೇವೆ. ನಮ್ಮ ತರುಣರು ತಮ್ಮ ತಾರುಣ್ಯದಲ್ಲೇ ಈ ವಿಷಯಗಳನ್ನು ತಿಳಿದುಕೊಳ್ಳಬೇಕು. ಬೇರೆ ದೇಶಗಳಲ್ಲಿ, ತಾಂತ್ರಿಕ ಮತ್ತು ಕೈಗಾರಿಕಾ ಶಿಕ್ಷಣ ಶಿಕ್ಷಣದ ಒಂದು ಪ್ರಮುಖ ಭಾಗವಾಗಿದೆ. ಆದರೆ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳು ಕೇವಲ ಸಣ್ಣಪುಟ್ಟ ಅಧಿಕಾರಿಗಳನ್ನು ತಯಾರಿಸುವ ಉದ್ದೇಶವನ್ನು ಮಾತ್ರ ಹೊಂದಿವೆ." ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಹಾಗೂ ಪರಸ್ಪರ ಧರ್ಮದ ಬಗ್ಗೆ ಸಹನೆ ಮತ್ತು ಗೌರವವನ್ನು ಹೊಂದಲು ಧಾರ್ಮಿಕ ಶಿಕ್ಷಣವೂ ಅದೇ ಮಾಧ್ಯಮದಲ್ಲಿ ದೊರೆಯಬೇಕು ಎಂದು ತಿಲಕರು ವಾದಿಸಿದರು.

ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿ ಭಾರತದಲ್ಲಿ ರಾಷ್ಟ್ರಭಾಷೆಯಾಗಬೇಕೆಂದು ತಿಲಕರು ಸಲಹೆ ಮಾಡಿದರು. ಡಿಸೆಂಬರ್ 1905ರಲ್ಲಿ ನಡೆದ ನಾಗರಿ ಪ್ರಚಾರಿಣಿ ಸಭಾದ ಸಮ್ಮೇಳನದಲ್ಲಿ ಅವರು ಹೀಗೆ ಹೇಳಿದರು: "ಸಾಮಾನ್ಯ ಲಿಪಿ ರಾಷ್ಟ್ರೀಯ ಆಂದೋಲನದ ಅವಿಭಾಜ್ಯ ಅಂಗವಾಗಿದೆ. ಒಂದು ದೇಶವನ್ನು ನೀವು ಒಗ್ಗೂಡಿಸಬೇಕಾದರೆ, ಸಾಮಾನ್ಯ ಭಾಷೆಗಿಂತ ಬಲವಾದ ಶಕ್ತಿ ಇನ್ನೊಂದಿಲ್ಲ." ಭಾರತದಾದ್ಯಂತ ಲಾರ್ಡ್ ಕರ್ಜನ್ ಆಗ ಜಾರಿಗೆ ತಂದ ಸ್ಟಾಂಡರ್ಡ್ ಸಮಯಕ್ಕಿಂತ ಸಾಮಾನ್ಯ ಲಿಪಿ ಹೆಚ್ಚು ಪ್ರಮುಖವಾಗಿದೆ ಎಂದು ಅವರು ಭಾವಿಸಿದ್ದರು.

ಮದ್ಯಪಾನ ನಿಷೇಧ ಚಳವಳಿಯಲ್ಲೂ ತಿಲಕರು ಎಲ್ಲರಿಗಿಂತ ಮೊದಲೇ ಆಸಕ್ತಿ ವಹಿಸಿದ್ದರು. ಅದು ಬಹಿಷ್ಕಾರ ಆಂದೋಲನದ ಅಂಗವೇನಾಗಿರಲಿಲ್ಲ. ಅವರು ಮುಂಬೈ ವಿಧಾನ ಪರಿಷತ್ತಿನ ಸದಸ್ಯರಾದಾಗಿನಿಂದಲೂ ಮದ್ಯವರ್ಜನೆಯ ಚಳವಳಿಯಲ್ಲಿ ಆಸಕ್ತಿ ಹೊಂದಿದ್ದರು. ಬ್ರಿಟಿಷ್ ಆಳ್ವಿಕೆಯೇ ಕುಡಿತದ ದುಶ್ಚಟಕ್ಕೆ ಕಾರಣವೆಂದು ಅವರು ಆರೋಪಿಸಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಕುಡಿತ ಸಾಮಾನ್ಯವಾಗಿದ್ದರೂ ಭಾರತದಲ್ಲಿ ಆ ಚಟ ಹರಡಿದ್ದು ಬ್ರಿಟಿಷರು ಬಂದ ನಂತರವೇ. ಪೇಶ್ವಾಗಳ ಆಳ್ವಿಕೆಯಲ್ಲಿ ಅಬ್ಕಾರಿ ಕಂದಾಯ ಪ್ರತಿ ಜಿಲ್ಲೆಗೆ ಸುಮಾರು ಒಂದು ಸಾವಿರ ರೂಪಾಯಿಗಳಿದ್ದದ್ದು ಬ್ರಿಟಿಷ್ ಆಳ್ವಿಕೆಯ 80 ವರ್ಷಗಳಲ್ಲಿ ಆರು ಲಕ್ಷ ರೂಪಾಯಿಗಳಷ್ಟು ಹೆಚ್ಚಾಯಿತು. ಕುಡಿತದ ಚಟಕ್ಕೆ ಹೀಗೆ ಸರ್ಕಾರ ಮಾತ್ರವೇ ಜವಾಬ್ದಾರವಾಗಿತ್ತು. ಕುಡಿತ ನಮ್ಮ ಧಾರ್ಮಿಕ ಶಿಕ್ಷಣ ಮತ್ತು ಸಾಮಾಜಿಕ ಶಿಷ್ಟಾಚಾರಗಳಿಗೆ ವಿರುದ್ಧವಾಗಿತ್ತು.

1907ರಲ್ಲಿ ಗೋಖಲೆಯವರ ಅಧ್ಯಕ್ಷತೆಯಲ್ಲಿ ಪೂನಾದಲ್ಲಿ ಸ್ಥಾಪಿಸಲಾದ ಮದ್ಯವರ್ಜನಾ ಸಂಘದ ಆಡಳಿತ ಸಮಿತಿಯಲ್ಲಿ ತಿಲಕರು ಸದಸ್ಯರಾಗಿದ್ದರು. ಮದ್ಯಪಾನ ನಿಷೇಧಕ್ಕಾಗಿ, ಶಾಂತಿಯುತ ಪಿಕೆಟಿಂಗ್ ಸೇರಿದಂತೆ ಸಂಘ ಪ್ರಬಲ ಪ್ರಚಾರವನ್ನು ನಡೆಸಿತು. ಆದರೆ ಅಬ್ಕಾರಿ ಅಧಿಕಾರಿಗಳ ಒತ್ತಾಯದಿಂದ ಪೋಲೀಸರು ಸ್ವಯಂಸೇವಕರಿಗೆ ಕಿರುಕುಳ ಕೊಡಲು ಪ್ರಾರಂಭಿಸಿದಾಗ ಮದ್ಯಪಾನ ವಿರೋಧಿ ಚಳವಳಿ ಪ್ರಕೋಪಕ್ಕೆ ಹೋಯಿತು. ಶಾಂತಿಯುತ ಪ್ರಚಾರವನ್ನೂ ನಿಷೇಧಿಸಿದ್ದಾಗ, ಮದ್ಯದಂಗಡಿ

ಗಳ ಪಿಕೆಟಿಂಗ್ ನಡೆಸುವ ಕಾರ್ಯಕ್ರಮವನ್ನು ತಿಲಕರು ಯೋಜಿಸಿದರು. ಮದ್ಯವನ್ನು ತೊಲಗಿಸಬೇಕೆಂದು ಅವರು ತರುಣ ಪೀಳಿಗೆಯನ್ನು ಒತ್ತಾಯಪಡಿಸಿದರು.

"ಮದ್ಯಸೇವನೆಯನ್ನು ಸಮರ್ಥಿಸುವವರ ಧೋರಣೆಯನ್ನು ಪ್ರತಿಭಟಿಸಿ ಜೈಲುಗಳಿಗೆ ಹೋಗಲು ತರುಣರು ಸಿದ್ಧವಾಗಬೇಕು. ನೆರೆಹೊರೆಯವರು ಮತ್ತು ಬಂಧುಗಳು ಈ ಯುವಕರಿಗೆ ಸಕ್ರಿಯ ಸಹಾಯ ನೀಡಬೇಕು. ಮದ್ಯದ ಬಗ್ಗೆ ನಿಮಗೆ ಎಷ್ಟು ಅಸಹ್ಯ ಉಂಟಾಗಬೇಕೆಂದರೆ, ಅದರ ಸೇವನೆಯ ವಿರುದ್ಧ ಹೋರಾಡುವಾಗ ಜೈಲಿಗೆ ಹೋಗಬೇಕಾದ ತೊಂದರೆ ಅತ್ಯಂತ ಗೌಣವಾಗಿ ಕಾಣಬೇಕು."

ಈ ಮದ್ಯಪಾನ ನಿಷೇಧ ಚಳವಳಿಯಿಂದ ಮಹಾರಾಷ್ಟ್ರದಾದ್ಯಂತ ಹಲವಾರು ಮದ್ಯದಂಗಡಿಗಳು ಮುಚ್ಚಿ, ಚಳವಳಿ ಗಮನಾರ್ಹ ಯಶಸ್ಸನ್ನು ಗಳಿಸಿದ್ದೇ ಅಲ್ಲದೆ, ತಿಲಕರು ಈ ಚಳವಳಿಯನ್ನು ಸ್ವದೇಶಿ ಚಳವಳಿಯಂತೆ ರಾಜಕೀಯ ಆಯುಧವಾಗಿ ಬಳಸುತ್ತಿದ್ದಾರೆಂಬ ಸಂಶಯ ಸರ್ಕಾರಕ್ಕೆ ಉಂಟಾಗುವಂತೆ ಮಾಡಿತು. ಅಬ್ಕಾರಿ ಕಂದಾಯದ ನಷ್ಟದ ಏಟು ಜೋರಾಗಿತ್ತು. ಅದರ ರಾಜಕೀಯ ಪರಿಣಾಮಗಳು ಮತ್ತಷ್ಟು ಜೋರಾಗಿದ್ದವು. ತಿಲಕರು ಜೂನ್ 1908ರಲ್ಲಿ ರಾಜದ್ರೋಹದ ಆಪಾದನೆಯ ಮೇಲೆ ದಸ್ತಗಿರಿಯಾಗಿಲ್ಲದಿದ್ದರೆ ಮದ್ಯಪಾನ ನಿಷೇಧ ಚಳವಳಿ ಹೇಗೆ ರೂಪುಗೊಳ್ಳುತ್ತಿತ್ತು ಎಂದು ಊಹಿಸುವುದು ಕುತೂಹಲಕರವೇ. ಅವರ ಬಲವಂತದ ಗೈರುಹಾಜರಿಯಲ್ಲಿ ಕುಂದಿ ಕೊನೆಮುಟ್ಟಿದ ಅನೇಕ ಚಳವಳಿಗಳಂತೆ ಇದೂ ಕೊನೆಗೊಂಡಿತು.

ಅಧ್ಯಾಯ 12

ಸೂರತ್ ಬಿರುಕು

ಡಿಸೆಂಬರ್ 27, 1907ರಂದು ಸೂರತ್‌ನಲ್ಲಿ ಯಾರು ಕಾಂಗ್ರೆಸ್ಸನ್ನು ಒಡೆದರು? ಆ ಐತಿಹಾಸಿಕ ಅಧಿವೇಶನದಲ್ಲಿ ಭಾಗವಹಿಸಿದವರು ಎಲ್ಲಿಯವರೆಗೆ ಬದುಕಿದ್ದರೋ ಅಲ್ಲಿಯವರೆಗೆ ಈ ಪ್ರಶ್ನೆಯನ್ನು ಬಿರುಸಿನಿಂದ, ಉದ್ವೇಗದಿಂದ ಚರ್ಚಿಸಲಾಯಿತು. ಈಗಲೂ ಸಹ, ಸೂರತ್ ಕಾಂಗ್ರೆಸ್, ರಾಜಕೀಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಕೆರಳಿಸುತ್ತದೆ. ಕಾಂಗ್ರೆಸ್ ಎರಡು ಗುಂಪುಗಳಾಗಿ ಆಗ ಒಡೆಯಿತು; ಹಾಗೂ ಸೌಮ್ಯವಾದಿ ಕುರಿಗಳನ್ನು ಉಗ್ರವಾದಿ ಮೇಕೆಗಳಿಂದ ಪ್ರತ್ಯೇಕಿಸಲಾಯಿತು.

ಸೂರತ್ ಬಿರುಕಿನ ಬಗ್ಗೆ ಹಾಗೂ ಅದರಲ್ಲಿ ತಿಲಕರು ವಹಿಸಿದ ಪಾತ್ರದ ಬಗ್ಗೆ ನಿಷ್ಪಕ್ಷಪಾತವಾದ ವಿಮರ್ಶೆ ಮಾಡಲು ಎರಡೂ ಪಕ್ಷಗಳು ಹೊರಡಿಸಿದ ವಿಪುಲವಾದ ಹೇಳಿಕೆಗಳು ಹಾಗೂ ಕೆಲವು ವಿದೇಶಿ ವೀಕ್ಷಕರ ಪ್ರತ್ಯಕ್ಷದರ್ಶಿ ವರದಿಗಳು ಲಭ್ಯವಿದೆ. ತಿಲಕರು ಸೂರತ್ ಕಾಂಗ್ರೆಸ್‌ನ ನಾಯಕರಾಗಿದ್ದರು ಅಥವಾ ಖಳನಾಯಕರಾಗಿದ್ದರು. ಡಾ. ರಾಶ್ ಬಿಹಾರಿ ಘೋಷ್‌ರ ಚುನಾವಣೆಯ ವಿರುದ್ಧ ತಿಲಕರು ತಾಳಿದ ಉಗ್ರ ನಿಲುವಿನಿಂದಾಗಿ, ಹಿಂಸಾತ್ಮಕ ದೊಂಬಿ ಉಂಟಾಗಿ ಕೊನೆಗೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಒಡೆಯಿತು.

ಹಿಂದಿನ ಅಧ್ಯಾಯದಲ್ಲಿ ಕಂಡಂತೆ, ಸೂರತ್‌ನ ಯುದ್ಧ ನಿಜವಾಗಿ ಕಲ್ಕತ್ತೆಯಲ್ಲಿ ಪ್ರಾರಂಭವಾಯಿತು. ಅಲ್ಲಿ ಬಿಕ್ಕಟ್ಟು ಉಂಟಾಗುವ ಬೆದರಿಕೆ ಇತ್ತು. ಆದರೆ ಅದನ್ನು ತಪ್ಪಿಸಲಾಗಿತ್ತು. "ಸೌಮ್ಯವಾದಿಗಳು ಉಗ್ರವಾದಿಗಳ ಧೋರಣೆಯಲ್ಲಿ ಕಡಿಮೆಯೇನೂ ಅಲ್ಲದ ಭಾಗವನ್ನು ಅನುಸರಿಸುವ ಮೂಲಕ" ಇದನ್ನು ತಪ್ಪಿಸಲಾಯಿತು ಎಂದು 'ಲಂಡನ್ ಟೈಮ್ಸ್' ಹಂಗಿಸಿತು. ಉಗ್ರವಾದಿಗಳನ್ನು ಸೋಲಿಸಲು ಮತ್ತು ಅವರನ್ನು ಹತಾಶೆಗೊಳಿಸಲು ಸೌಮ್ಯವಾದಿಗಳು ಕಲ್ಕತ್ತೆಯಲ್ಲಿ ದೀರ್ಘಾವಧಿ ತಂತ್ರವನ್ನು ರೂಪಿಸಿದ್ದರು ಎಂದು ನಂಬುವುದಕ್ಕೆ ಕಾರಣವಿತ್ತು. ಮುಂದಿನ ಅಧಿವೇಶನವನ್ನು ಲಾಹೋರ್‌ನಲ್ಲಿ ನಡೆಸಬೇಕೆಂದು ಲಜಪತ್‌ರಾಯ್ ನೀಡಿದ ಆಹ್ವಾನವನ್ನು ಅವರು ನಿರಾಕರಿಸಿದರು. ಹಾಗೂ ಫಿರೋಜ್‌ಶಾ ಮೆಹ್ತಾ ಅವರ ಪ್ರಭಾವ ಹೆಚ್ಚಾಗಿ ನಡೆಯುವ ನಾಗಪುರವನ್ನು ಆರಿಸಿದರು. ಡಾ. ರಾಶ್ ಬಿಹಾರಿ ಘೋಷ್‌ರನ್ನು ಮುಂದಿನ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ವಿಚಾರವೂ ಸೌಮ್ಯವಾದಿಗಳಲ್ಲೇ ಮೂಡಿತ್ತೆಂದು ಹೇಳಲಾಗಿತ್ತು. ಇದಕ್ಕಿಂತಲೂ ಹೆಚ್ಚು ಅನಿಷ್ಟಕರವಾದದ್ದೆಂದರೆ. ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣದ ಮೇಲೆ ಕಲ್ಕತ್ತೆಯಲ್ಲಿ ಅಂಗೀಕರಿಸಲಾದ ನಿರ್ಣಯಗಳನ್ನು ಸಂಪೂರ್ಣವಾಗಿ ಕೈ ಬಿಡುವುದಲ್ಲದಿದ್ದರೂ, ಅವುಗಳ ಪ್ರಖರತೆಯನ್ನು ಇಳಿಸುವ ಅವರ ತೀರ್ಮಾನ.

ಸೂರತ್‌ನಲ್ಲಿ ಮಾರ್ಚ್ 29,1907ರಂದು ನಡೆದ ಮುಂಬೈ ಪ್ರಾಂತೀಯ ಸಮ್ಮೇಳನ

ದಲ್ಲಿ ದೊರಕಿದ ಮೊದಲ ಅವಕಾಶವನ್ನೇ ಸೌಮ್ಯವಾದಿಗಳು ಇದಕ್ಕಾಗಿ ಉಪಯೋಗಿಸಿಕೊಂಡರು. ಅದರ ಅಧ್ಯಕ್ಷ ಡಾ. ಭಾಲಚಂದ್ರ ಭಾಟವಡೇಕರ್ ಸೌಮ್ಯತೆಯ ಗುಣದ ಬಗ್ಗೆ ದೀರ್ಘವಾಗಿ ಉಪನ್ಯಾಸ ಮಾಡಿದರೆ, ಫಿರೋಜ್ ಶಾ ಮೆಹ್ತಾ ಸಮ್ಮೇಳನದ ಬಾಯಿ ಬಡಿದು ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣದ ಮೇಲಿನ ಗೊತ್ತುವಳಿಗಳನ್ನು ಕೈ ಬಿಡುವಂತೆ ಮಾಡಿದರು. ಸ್ವದೇಶಿಯ ಮೇಲಿನ ಗೊತ್ತುವಳಿ ರಾಷ್ಟ್ರೀಯ ಕಾಂಗ್ರೆಸ್‌ಗಿಂತಲೂ ಹೆಚ್ಚಾಗಿ ಕೈಗಾರಿಕಾ ಸಮ್ಮೇಳನಕ್ಕೆ ಹೆಚ್ಚು ಸೂಕ್ತವಾಗಿದೆ ಎಂದು ಅಧ್ಯಕ್ಷರು ಸಲಹೆ ಮಾಡಿದರು! ರಾಯಪುರದಲ್ಲಿ ನಡೆದ ಸೆಂಟ್ರಲ್ ಪ್ರಾವಿನ್ಸೆಸ್ ಮತ್ತು ಬೆರಾರ್ ಪ್ರಾಂತೀಯ ಸಮ್ಮೇಳನದಲ್ಲಿ ಇಂತಹುದೇ ಚಮತ್ಕಾರದ ಕ್ರಮಗಳನ್ನು ಅನುಸರಿಸಲಾಯಿತು. ಬಂಗಾಲದಲ್ಲಿ ವಂದೇ ಮಾತರಂ ಹಾಡುವುದನ್ನು ನಿಷೇಧಿಸಲಾಗಿದೆ ಎಂಬ ಕಾರಣ ನೀಡಿ ಅದನ್ನು ಸಮ್ಮೇಳನದಲ್ಲಿ ಹಾಡಲೂ ಅಧ್ಯಕ್ಷರು ಅವಕಾಶ ಕೊಡಲಿಲ್ಲ. ಅಲಹಾಬಾದ್‌ನಲ್ಲಿ ನಡೆದ ಯು. ಪಿ. ಪ್ರಾಂತೀಯ ಸಮ್ಮೇಳನದಲ್ಲಿ 200 ಪ್ರತಿನಿಧಿಗಳನ್ನು ಅವರು ಬಹಿಷ್ಕಾರದ ಬೆಂಬಲಿಗರಾಗಿದ್ದರಿಂದ ಸಭೆಗೆ ಸೇರಿಸಲಿಲ್ಲ.

ಮೊದಲೇ ಸಿದ್ಧಪಡಿಸಿದ ಯೋಜನೆಯಿಲ್ಲದೆ ಸೌಮ್ಯವಾದಿಗಳು ದೇಶದಾದ್ಯಂತ ಇಂತಹ ತಂತ್ರಗಳನ್ನು ಅನುಸರಿಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ಉಗ್ರವಾದಿಗಳಿಗೆ ಸವಾಲನ್ನು ಸ್ವೀಕರಿಸುವುದನ್ನು ಬಿಟ್ಟು ಅನ್ಯಮಾರ್ಗವಿರಲಿಲ್ಲ. ಅಧ್ಯಕ್ಷರನ್ನು ಚುನಾಯಿಸಬೇಕಾಗಿದ್ದ ಸ್ವಾಗತ ಸಮಿತಿಯಲ್ಲಿ ಬಹುಮತವನ್ನು ಗಳಿಸಲು ಅವರು ನಾಗಪುರದಲ್ಲಿ ದೃಢ ಪ್ರಯತ್ನ ಮಾಡಿದರು. ಸೌಮ್ಯವಾದಿಗಳಿಗೆ ಕೇವಲ 800 ಸದಸ್ಯರನ್ನು ಸೇರಿಸಿಕೊಳ್ಳುವುದು ಸಾಧ್ಯವಾಯಿತು. ಉಗ್ರವಾದಿಗಳು 1800 ಮತಗಳನ್ನು ಪಡೆದರು. ಅಧ್ಯಕ್ಷರನ್ನು ಚುನಾಯಿಸುವುದಕ್ಕೆ ಬೇಕಾದ ನಾಲ್ಕನೆಯ-ಮೂರರಷ್ಟು ಬಹುಮತಕ್ಕೆ ಇದು ಸ್ವಲ್ಪ ಕಡಿಮೆ ಬಿದ್ದಿತು. ತಮ್ಮಿಚ್ಛೆ ನಡೆಯುವುದಿಲ್ಲ ಎಂದು ಸೌಮ್ಯವಾದಿಗಳು ಬೇಗನೆ ಅರಿತುಕೊಂಡರು. ಉಗ್ರವಾದಿಗಳು ತೀವ್ರವಾಗಿ ಪ್ರತಿಭಟಿಸಿದರೂ, ಕಾಂಗ್ರೆಸ್ ಅಧಿವೇಶನವನ್ನು ನಡೆಸುವುದಕ್ಕೆ ಸಂಪೂರ್ಣ ಜವಾಬ್ದಾರಿಯನ್ನೂ ವಹಿಸಿಕೊಳ್ಳುವುದಕ್ಕೆ ತಾವು ಸಿದ್ಧವಾಗಿದ್ದರೂ ಕಾಂಗ್ರೆಸ್ ಅಧಿವೇಶನವನ್ನು ನಡೆಸುವುದು ಸ್ವಾಗತ ಸಮಿತಿಗೆ ಸಾಧ್ಯವಿಲ್ಲ ಎಂದು ಸೌಮ್ಯವಾದಿಗಳು ಘೋಷಿಸಿದರು. ಅಧಿವೇಶನವನ್ನು ಎಲ್ಲಿ ನಡೆಸಬೇಕೆಂಬ ವಿವಾದವನ್ನು ಪರಿಹರಿಸಬೇಕೆಂದು ಫಿರೋಜ್‌ಶಾ ಮೆಹ್ತಾ ಅವರನ್ನು ಕೋರಿಕೊಂಡಾಗ, ಸೂರತ್‌ನಿಂದ ಬಂದ ಅನುಕೂಲಕರ ಆಹ್ವಾನವನ್ನು ಅವರು ತಕ್ಷಣ ಒಪ್ಪಿಕೊಂಡರು. ಆ ವರ್ಷದ ಮೊದಲಲ್ಲಿ ಸೂರತ್‌ನಲ್ಲಿ ನಡೆದ ಪ್ರಾಂತೀಯ ಸಮ್ಮೇಳನದಲ್ಲಿ ಅವರು ಸುಲಭ ಜಯಗಳಿಸಿದ್ದರು.

ಮಾರ್ಲೆಯ 'ನೆನಪುಗಳು' ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿರುವ, ಅಕ್ಟೋಬರ್ 11,1907ರಂದು ಗೋಖಲೆಯವರು ವೆಡ್ಡರ್‌ಬರ್ನ್‌ಗೆ ಬರೆದ ಪತ್ರ ಈ ಎಲ್ಲ ಹೂಟಗಳ ಮೇಲೆ ಪರೋಕ್ಷವಾಗಿ ಬೆಳಕು ಚೆಲ್ಲುತ್ತದೆ:

"ಈ ವಾರ ನನಗೆ ಬಂದಿರುವ ಅತ್ಯಂತ ಆಸಕ್ತಪೂರ್ಣ ಭಾರತೀಯ ವಸ್ತುಗಳ ಪೈಕಿ ಒಂದು ಗೋಖಲೆ ವೆಡ್ಡರ್‌ಬರ್ನ್‌ಗೆ ಬರೆದ ಪತ್ರ. ಈಗ ಅನಿವಾರ್ಯವಾಗಿ ಕಾಣುತ್ತಿರುವ ಕಾಂಗ್ರೆಸ್‌ನ ಬಿರುಕನ್ನು ಹೇಗೆ ತಪ್ಪಿಸಬೇಕೆಂಬುದು (ಗೋಖಲೆ ಬರೆಯುತ್ತಾರೆ) ತೀವ್ರ

ವಾಗಿ ಗಮನ ಕೊಡಬೇಕಾದ ಪ್ರಶ್ನೆಯಾಗಿದೆ. ಈ ಸಮಯದಲ್ಲಿ ಪರಿಸ್ಥಿತಿ ಎಷ್ಟು ಕರಾಳ ವಾಗಬಹುದೋ ಅಷ್ಟು ಕರಾಳವಾಗಿದೆ. ಕಾಂಗ್ರೆಸ್‌ನ ಸಭೆಗಳನ್ನು ನಾಗಪುರದಿಂದ ತೆಗೆದು ಹಾಕುವುದಕ್ಕಿಂತ ಕೊರೆಯಾದ ಯಾವುದೇ ಕ್ರಮದಿಂದ ಪರಿಹಾರವನ್ನು ಕಂಡುಹಿಡಿಯುವ ಆಶಯ ಅವರಿಗಿಲ್ಲ. ಆದರೆ ಇದರಿಂದ ಬಿರುಕುಂಟಾಗುತ್ತದೆ; ಏಕೆಂದರೆ ಆ ಸಂದರ್ಭದಲ್ಲಿ ಹೊಸ ಪಕ್ಷ (ಉಗ್ರಗಾಮಿಗಳು) ನಾಗಪುರದಲ್ಲಿ ತಮ್ಮದೇ ಪ್ರತ್ಯೇಕ ಕಾಂಗ್ರೆಸ್ ನಡೆಸು ವುದಾಗಿ ಒತ್ತಾಯ ಪಡಿಸಬಹುದು. ಬಿರುಕು ಉಂಟಾದರೆ ಅದು ವಿನಾಶಕರವಾಗುತ್ತದೆ. ಏಕೆಂದರೆ ಆಗ ಅಧಿಕಾರಶಾಹಿ ಯಾವ ತೊಂದರೆಯೂ ಇಲ್ಲದೆ ಎರಡೂ ವರ್ಗಗಳನ್ನು ಅಡಗಿಸುತ್ತದೆ. ದೇಶದಲ್ಲಿ ಅವರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲವೆಂಬ ಕಾರಣ ತೋರಿಸಿ ಗೋಖಲೆ ಮತ್ತು ಅವರ ಸ್ನೇಹಿತರನ್ನು ಕಡೆಗಣಿಸಲಾಗುತ್ತದೆ ಹಾಗೂ ಹೊಸ ಪಕ್ಷವನ್ನು ಅತ್ಯಂತ ಬುದ್ಧಿವಂತ ಜನರು ಪಕ್ಷದ ವಿರುದ್ಧ ಇದ್ದಾರೆಂಬ ಕಾರಣ ನೀಡಿ ಅಡಗಿಸಲಾಗುವುದು".

"ಪಕ್ಷದ ಒಬ್ಬ ಮ್ಯಾನೇಜರ್‌ನ ಪಾತ್ರದಲ್ಲಿ ಗೋಖಲೆ ಒಂದು ಮಗು ಎಂದು ಕಳೆದ ಹನ್ನೆರಡು ತಿಂಗಳಲ್ಲಿ ನನಗೆ ಅನೇಕ ಸಲ ಅನಿಸಿದೆ. ನಾಯಕನಾಗಬೇಕೆಂದು ಬಯಸು ತ್ತಿರುವ ಮ್ಯಾನೇಜರ್ ಅಥವಾ ಹಾಗೆ ನೋಡಿದರೆ ಯಾರೇ ರಾಜಕಾರಣಿ ಎಂದೆಂದೂ ಕುಂಯ್‌ಗುಡಬಾರದು. ಗೋಖಲೆ ಯಾವಾಗಲೂ ಕುಂಯ್‌ಗುಡುತ್ತಲೇ ಇರುತ್ತಾರೆ. ನಾನು ಗೋಖಲೆಯ ಸ್ಥಾನದಲ್ಲಿದ್ದಿದ್ದರೆ, ನ್ಯಾಯಪಾಲನೆ ಮತ್ತು ಸುಧಾರಣೆಗಳ ಆಧಾರದ ಮೇಲೆ ಅಧಿಕಾರ ಶಾಹಿಯೊಡನೆ ಒಪ್ಪಂದಕ್ಕೆ ಬರಬೇಕೆಂದು ಪಟ್ಟು ಹಿಡಿಯುತ್ತಿದ್ದೆ. ಈ ಮಾರ್ಗದಿಂದ ಏನು ಪಡೆಯಬಹುದು ಎಂದು ತಿಳಿಯುವ ಬುದ್ಧಿ ಅವರಿಲ್ಲಿದ್ದಿದ್ದರೆ. ಬಿರುಕು ಉಂಟಾದಾಗ ಅವರಿಗೆ ಅದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಏಕೆಂದರೆ ಆಗ ಅವರು ಸಮಂಜಸವಾದ ವಿಷಯಗಳ ಮೇಲೆ ಗುರಿಗಳನ್ನು ಹೊಂದಲು ಸ್ವತಂತ್ರರಾಗುತ್ತಾರೆ. ಅವರು ಕೇಳುವ ಪೈಕಿ ಶೇಕಡ 60 ಅಥವಾ 70ರಷ್ಟನ್ನು ನಮ್ಮಿಂದ ಪಡೆಯಬಹುದು".

ಕಾಂಗ್ರೆಸ್ ಅಧಿವೇಶನದ ಸ್ಥಳವನ್ನು ನಾಗಪುರದಿಂದ ಸೂರತ್‌ಗೆ ಮೆಹ್ತಾ ಅವರು ಚಾತುರ್ಯದಿಂದ ಬದಲಾಯಿಸಿದ್ದನ್ನು ತಿಲಕರು ಕ್ರೀಡಾಭಾವನೆಯಿಂದ ಕಂಡರು. ಅವರು ಹೀಗೆಂದರು: "ಫಿರೋಜ್‌ಶಾ ಮೆಹ್ತಾ ಎಲ್ಲಿ ಕಾಂಗ್ರೆಸ್ಸನ್ನು ನಡೆಸಲು ನಿರ್ಧರಿಸುತ್ತಾರೋ ಅಲ್ಲಿಗೆ ರಾಷ್ಟ್ರೀಯ ಪಕ್ಷ ಹೋಗುತ್ತದೆ. ಏಕೆಂದರೆ, ಕಾಂಗ್ರೆಸ್ಸನ್ನು ಒಡೆಯುವುದಾಗಲೀ, ಅದರ ಅಧಿವೇಶನ ನಡೆಯುವುದನ್ನು ತಪ್ಪಿಸುವುದಾಗಲೀ ರಾಷ್ಟ್ರೀಯ ಪಕ್ಷದ ಉದ್ದೇಶ ಎಂದೂ ಆಗಿರಲಿಲ್ಲ. ಆದರೆ ಈ ವಿವಾದ ಇಷ್ಟು ಬೇಗ ಮುಗಿಯುವುದಿಲ್ಲ ಎಂಬುದನ್ನು ಮೆಹ್ತಾ ನೆನಪಿನಲ್ಲಿಟ್ಟಿರಲಿ. ಹೊಸ ಪಕ್ಷ ಯಶಸ್ವಿ ಯಾಗುವವರೆಗೆ ಹಳೆಯ ಮತ್ತು ಹೊಸ ಪಕ್ಷಗಳ ನಡುವಣ ಜಗಳ ಮುಂದುವರಿಯು ತ್ತದೆ. ಸೂರತ್‌ನಂತಹ ಕ್ಷೇಮವಾದ ಸ್ಥಳ ಪ್ರತಿ ವರ್ಷ ದೊರೆಯುತ್ತದೆ ಎಂದು ಯಾರೂ ಭಾವಿಸುವುದು ಬೇಡ. ಹಾಗೆ ನೋಡಿದರೆ, ಸೂರತ್ ಕ್ಷೇಮವಾದ ಸ್ಥಳವೋ ಅಥವಾ ಅಲ್ಲವೋ ಎಂಬುದು ಯಾರಿಗೂ ತಿಳಿದಿಲ್ಲ".

ಸೂರತ್‌ನಲ್ಲಿ ಸ್ವಾಗತ ಸಮಿತಿಯನ್ನು ರಚಿಸಿದಾಗ ದೇಶದಲ್ಲಿದ್ದ ಪರಿಸ್ಥಿತಿ ಇದು.

ಈ ಸಮಿತಿಯಲ್ಲಿ ಸೌಮ್ಯವಾದಿಗಳನ್ನೇ ತುಂಬಲಾಗಿತ್ತು ಎಂದು ಹೇಳಬೇಕಾದ ಅಗತ್ಯವಿಲ್ಲ. ಅಧ್ಯಕ್ಷರ ಚುನಾವಣೆಯೂ ಸೇರಿದಂತೆ ಎಲ್ಲವೂ ತಮ್ಮಿಷ್ಟದಂತೆ ನಡೆಯುತ್ತದೆಂದು ಸೌಮ್ಯವಾದಿಗಳು ಆಶಿಸಿದ್ದರು. ಆದರೆ ನವೆಂಬರ್ 11ರಂದು ಲಜಪತ್ ರಾಯ್ ಅವರು ಅನಿರೀಕ್ಷಿತವಾಗಿ ಬಿಡುಗಡೆಯಾದ ಅಂಶ ಉಗ್ರವಾದಿಗಳ ಸಂಘಟನೆಗೆ ಇಂಬು ಕೊಟ್ಟಿದ್ದು ಸೌಮ್ಯವಾದಿಗಳ ಆಶಾಭಂಗಕ್ಕೆ ಕಾರಣವಾಯಿತು. ಲಜಪತ್ ರಾಯ್ ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ ಪತ್ರಗಳು ಮತ್ತು ತಂತಿಗಳು ದೇಶದೆಲ್ಲೆಡೆಯಿಂದ ಬಂದವು. ಡಾ.ರಾಶ್ ಬಿಹಾರಿ ಘೋಷ್‌ರ ಚುನಾವಣೆ ಸುಗಮವಾಗಿ ನಡೆಯುವಂತೆ ಖಚಿತಪಡಿಸಿ ಕೊಳ್ಳಲು ಮೆಹ್ತಾ, ಗೋಖಲೆ ಮತ್ತು ಇತರ ಸೌಮ್ಯವಾದಿ ನಾಯಕರನ್ನು ಕಳಿಸಿದರು. ಲಜಪತ್ ರಾಯ್ ಅವರ ಗಡೀಪಾರಿನ ವಿರುದ್ಧ ಪ್ರತಿಭಟನೆ ಸೂಚಿಸುವ ಗೊತ್ತುವಳಿ ಯನ್ನು ಅಂಗೀಕರಿಸಲು ಕಾಂಗ್ರೆಸ್ ಉದ್ದೇಶಿಸಿರುವುದರಿಂದ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವುದು ಸೂಕ್ತವಲ್ಲವೆಂದು ವಾದಿಸಿ, ಗೋಖಲೆಯವರು ರಾಷ್ಟ್ರೀಯವಾದಿ ಗಳನ್ನು ತಮ್ಮೆಡೆಗೆ ಎಳೆದುಕೊಳ್ಳಲು ಪ್ರಯತ್ನಿಸಿದರು. ಅಧ್ಯಕ್ಷರಾಗಿ ಅವರು ಚುನಾಯಿತ ರಾದರೆ, ಅದೇ ನೂರು ಪಟ್ಟಿಗಿಂತಲೂ ಹೆಚ್ಚಿನ ಪ್ರತಿಭಟನೆಯಾಗುತ್ತದೆಂಬ ಸ್ಪಷ್ಟ ಉತ್ತರ ಈ ವಾದಕ್ಕೆ ದೊರೆಯಿತು.

ಸೌಮ್ಯವಾದಿಗಳು ವಾದಗಳಿಂದ ವಿರೋಧಿಗಳ ಮನವೊಲಿಸಲು ವಿಫಲರಾದಾಗ, ಸ್ವಾಗತ ಸಮಿತಿ ಸೌಮ್ಯವಾದಿಗಳ ಕೈಗಳಲ್ಲಿದೆಯೆಂದೂ, – ಸಭೆಯ ಬಗ್ಗೆ ಹೊರಗಿನ ಸದಸ್ಯರಿಗೆ ಸುದ್ದಿ ಕೊಡುವುದನ್ನು ಉದ್ದೇಶಪೂರ್ವಕವಾಗಿ ತಡ ಮಾಡಲಾಗಿತ್ತು – ತಮ್ಮ ಇಚ್ಛೆಯಂತೆಯೇ ನಡೆದುಕೊಳ್ಳುವುದಾಗಿಯೂ ವಿರೋಧಿಗಳಿಗೆ ಒರಟಾಗಿ ತಿಳಿಸ ಲಾಯಿತು. ಲಜಪತ್ ರಾಯ್ ಅವರ ಹೆಸರನ್ನು ಸಲಹೆಮಾಡಿದ ಸೂಚನೆಯನ್ನೂ ಸಹ ಅಕ್ರಮ ಎಂದು ತಳ್ಳಿ ಹಾಕಲಾಯಿತು. ಇದರಿಂದ ಪ್ರತಿಭಟನೆ ಸೂಚಿಸಲು ಸಭಾತ್ಯಾಗ ಮಾಡುವುದರ ಹೊರತಾಗಿ ಉಗ್ರವಾದಿಗಳಿಗೆ ಬೇರೆ ದಾರಿ ಉಳಿಯಲಿಲ್ಲ. ರಾಶ್ ಬಿಹಾರಿ ಘೋಷ್ ಸೂರತ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ "ಸರ್ವಾನುಮತದಿಂದ" ಚುನಾಯಿತ ರಾದರೆಂದು ಘೋಷಿಸಲಾಯಿತು.

ತಿಲಕರು 'ಕೇಸರಿ'ಯಲ್ಲಿ ಬರೆದ ಅನೇಕ ಸಂಪಾದಕೀಯ ಲೇಖನಗಳಲ್ಲಿ ತಾಳ್ಮೆ ಮತ್ತು ಸಹನೆ ಹೊಂದುವಂತೆ ತಮ್ಮ ಅನುಯಾಯಿಗಳನ್ನು ಕೇಳಿಕೊಂಡರು ಹಾಗೂ ಪ್ರತ್ಯೇಕ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವನ್ನು ನಡೆಸಬೇಕೆಂಬ ಸಲಹೆಯನ್ನು ನಿರಾ ಕರಿಸಿದರು:

"ಸ್ವಲ್ಪ ನಿಷ್ಪಕ್ಷಪಾತವಾಗಿ ವಿಚಾರ ಮಾಡಿದಾಗ,ರಾಷ್ಟ್ರೀಯವಾದಿಗಳು ಈ ವರ್ಷ ವಲ್ಲದಿದ್ದರೂ ಮುಂದಿನ ವರ್ಷ ಕಾಂಗ್ರೆಸ್‌ನಲ್ಲಿ ಮೇಲುಗೈ ಪಡೆದೇ ಪಡೆಯುತ್ತಾರೆ ಎಂಬುದು ತಿಳಿಯುತ್ತದೆ. ಆದ್ದರಿಂದ ಆ ದಿಶೆಯಲ್ಲಿ ಅವರು ಪ್ರಯತ್ನ ಮಾಡಬೇಕು. ಕಾಂಗ್ರೆಸ್ ತ್ಯಜಿಸಿ ಹೊಸ ಸಂಸ್ಥೆಯನ್ನು ಪ್ರಾರಂಭಿಸಬಾರದು. ಸೂರತ್‌ನಲ್ಲಿ ಸೌಮ್ಯ ವಾದಿಗಳು ಬಹುಮತ ಹೊಂದಬಹುದು. ಆದರೆ ಅದರಿಂದ ರಾಷ್ಟ್ರೀಯವಾದಿಗಳು ಅಧೀರರಾಗಬೇಕಿಲ್ಲ. ಈಗಾಗಲೇ ಜನತೆಯ ಅಂಗೀಕಾರ ಪಡೆಯುತ್ತಿರುವ ತಮ್ಮ ಅಭಿಪ್ರಾಯವನ್ನು ಒತ್ತಿ ಹೇಳಲು ಅವರು ಪ್ರಯತ್ನಿಸಬೇಕು."

ಲಜಪತ್ ರಾಯ್ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮತ್ತೊಂದು ಸಂಪಾದಕೀಯದಲ್ಲಿ ಅವರು ಒತ್ತಾಯ ಮಾಡಿದರು. ಅದರಲ್ಲಿ ತಿಲಕರು ಹೀಗೆ ಬರೆದರು: "ಯಾರು ಅಧ್ಯಕ್ಷರಾಗಬೇಕೆಂಬುದು ನಿಜವಾದ ವಿವಾದಗ್ರಸ್ತ ವಿಷಯವಲ್ಲ. ನಿರಂಕುಶವಾಗಿ ವರ್ತಿಸಲು ಹಾಗೂ ಇತರರ ಅಭಿಪ್ರಾಯಗಳನ್ನು ಅದುಮಿಡಲು ಒಂದು ನಿರ್ದಿಷ್ಟ ಗುಂಪಿನ ವ್ಯಕ್ತಿಗಳಿಗೆ ಸ್ವಾತಂತ್ರ್ಯವಿರಬೇಕೇ ಎಂಬುದು ನಿಜವಾದ ವಿವಾದಗ್ರಸ್ತವಾದ ವಿಷಯ. ರಾಷ್ಟ್ರೀಯವಾದಿಗಳಿಗೂ ಕಾಂಗ್ರೆಸ್ ಬೇಕು. ಅದನ್ನು ಮುರಿಯುವ ಅಥವಾ ಕಾನೂನುರಹಿತ ಪರಿಸ್ಥಿತಿಯನ್ನು ಸೃಷ್ಟಿ ಮಾಡುವ ಉದ್ದೇಶ ಅವರಿಗಿಲ್ಲ. ಆದರೆ ಮೆಹ್ತಾ ಮತ್ತು ವಾಚಾ ಅವರುಗಳ ಏಕಸ್ವಾಮ್ಯ ಅಥವಾ ಪರಮಾಧಿಕಾರಕ್ಕೆ ಅವರು ಅವಕಾಶ ಕೊಡುವುದಿಲ್ಲ. ಸರ್ಕಾರಕ್ಕೆ ಅಸಂತೋಷ ಉಂಟುಮಾಡಬಾರದೆಂದು ಕಾತುರರಾಗಿರುವ ಗೋಖಲೆಯವರಿಂದ ಮಾರ್ಗದರ್ಶನ ಪಡೆಯಲೂ ಅವರು ಸಿದ್ಧರಾಗಿಲ್ಲ. ಅಧ್ಯಕ್ಷರ ಆಯ್ಕೆಯನ್ನು ಕುರಿತ ವಿವಾದದ ಮೂಲ ಇಲ್ಲಿದೆ. ಇದು ತತ್ತ್ವದಪ್ರಶ್ನೆಯಾಗಿದೆ. ವ್ಯಕ್ತಿಗಳ ಪ್ರಶ್ನೆಯಲ್ಲ."

ತಿಲಕರು ಡಿಸೆಂಬರ್ 23ರಂದು, ಲಜಪತ್‌ರಾಯ್ 24ರಂದೂ ಸೂರತ್ ತಲುಪಿದರು. ಸೂರತ್‌ನ ಜನರು ಅವರಿಬ್ಬರಿಗೂ ನೀಡಿದ ಅದ್ಭುತ ಸ್ವಾಗತದ ಮುಂದೆ ಅಧ್ಯಕ್ಷರಾಗಿ ಚುನಾಯಿತರಾಗಲಿದ್ದವರಿಗೆ ದೊರೆತ ಅಧಿಕೃತ ಸ್ವಾಗತ ಕಳಪೆಯಾಗಿತ್ತು. ಈ ಮಧ್ಯೆ, ಅಧ್ಯಕ್ಷ ಸ್ಥಾನಕ್ಕೆ ತಾವು ಸ್ಪರ್ಧಿಸುತ್ತಿಲ್ಲವೆಂದು ಲಜಪತ್‌ರಾಯ್ ಘೋಷಿಸಿದರು. ಸೌಮ್ಯವಾದಿಗಳು ಈ ಪ್ರಕಟಣೆಯನ್ನು ಸಂತೋಷ, ನೆಮ್ಮದಿಯ ನಿಟ್ಟುಸಿರಿನಿಂದ ಸ್ವಾಗತಿಸಿದರು. ಅದು ಬಹುಕಾಲ ಉಳಿಯಲಿಲ್ಲ. ದಿನದ ಬಹುತೇಕ ಇಪ್ಪತ್ನಾಲ್ಕು ತಾಸುಗಳೂ ಎರಡೂ ಶಿಬಿರಗಳಲ್ಲಿ ವಿಪರೀತ ಚಟುವಟಿಕೆ ಎದ್ದು ಕಾಣುತ್ತಿತ್ತು. ತಮ್ಮ ಕಾರ್ಯಕ್ರಮಗಳನ್ನು ರೂಪಿಸಲು ಎರಡೂ ಪಕ್ಷಗಳು ಪ್ರತ್ಯೇಕ ಪೂರ್ವಭಾವಿ ಸಭೆಗಳನ್ನು ನಡೆಸಿದವು. ತಮ್ಮ ಧೋರಣೆಗಳನ್ನು ವಿವರಿಸಲು ಎರಡೂ ಪಂಗಡಗಳ ಸದಸ್ಯರು ಸಾರ್ವಜನಿಕ ಸಭೆಗಳನ್ನು ನಡೆಸಿದರು.

ಗೊತ್ತುವಳಿಗಳ ಕರಡನ್ನು ತಯಾರಿಸುವ ಕೆಲಸವನ್ನು ಸ್ವಾಗತ ಸಮಿತಿ ಗೋಖಲೆಯವರಿಗೆ ಒಪ್ಪಿಸಿದ್ದರೂ, ಅಧಿವೇಶನ ಪ್ರಾರಂಭವಾಗುವವರೆಗೂ ಯಾವುದೇ ಗೊತ್ತುವಳಿ ತಯಾರಾಗದೆ ಇದ್ದದ್ದು ವಿಚಿತ್ರವಾಗಿತ್ತು. ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಷಯಗಳ ಪಟ್ಟಿಯಲ್ಲಿ ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ ಇಲ್ಲದೆ ಇದ್ದದ್ದರಿಂದ ಸಂಶಯ ಉಂಟಾಗಿತ್ತು. ಈ ಪಟ್ಟಿಯ ಸುತ್ತೋಲೆಯನ್ನು ಅಧಿವೇಶನ ಪ್ರಾರಂಭವಾಗುವುದಕ್ಕೆ ಹತ್ತು ದಿನಗಳ ಮೊದಲೇ ಕಳಿಸಲಾಗಿತ್ತು. ತಡವಾಗಿ ಈ ವಿಷಯವನ್ನು ಅಳವಡಿಸಿದರೂ, ಸಂಶಯಗಳು ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ. ಕಲ್ಕತ್ತೆಯ ಕಾಂಗ್ರೆಸ್‌ನಲ್ಲಿ ಕೈಗೊಂಡ ನಿಲುವಿನಿಂದ ಯಾವುದೇ ರೀತಿಯ ವಿಮುಖತೆಯನ್ನು ಎಲ್ಲ ಸಂವಿಧಾನಿಕ ವಿಧಾನಗಳಿಂದ ಹಾಗೂ ಅಗತ್ಯವಾದರೆ ಅಧ್ಯಕ್ಷರ ಚುನಾವಣೆಯನ್ನು ವಿರೋಧಿಸುವುದರಿಂದ ತಪ್ಪಿಸಲು 500 ರಾಷ್ಟ್ರೀಯವಾದಿ ಪ್ರತಿನಿಧಿಗಳ ಸಭೆ ನಿರ್ಧರಿಸಿತು.

ಲಜಪತ್‌ರಾಯ್ ಮತ್ತು ಕಾಂಗ್ರೆಸ್‌ಗೆ ವೀಕ್ಷಕರಾಗಿದ್ದ ಬ್ರಿಟಿಷ್ ಪಾರ್ಲಿಮೆಂಟ್

ಸದಸ್ಯ ಡಾ. ರುಥರ್‌ಫೋರ್ಡ್ ಅವರಂತಹ ಮಧ್ಯಸ್ಥಗಾರರು ರಾಜಿ ಮಾಡಿಸಲು ಪ್ರಯತ್ನಗಳನ್ನು ನಡೆಸಿದರು. ಎರಡೂ ಶಿಬಿರಗಳ ನಡುವಣ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ರಾಜಿಯ ಸಂಯುಕ್ತ ಸಮಿತಿಗಳನ್ನು ನೇಮಿಸಬೇಕೆಂದು ಸಲಹೆ ಮಾಡಲಾಯಿತು. ಅಧಿವೇಶನ ಆರಂಭವಾಗಬೇಕಾಗಿದ್ದ ದಿನ – ಡಿಸೆಂಬರ್ 26 – ಬೆಳಿಗ್ಗೆ ತಿಲಕ್ ಮತ್ತು ಇತರ ರಾಷ್ಟ್ರೀಯವಾದಿಗಳು ಸುರೇಂದ್ರನಾಥ್ ಬ್ಯಾನರ್ಜಿಯವರನ್ನು ಭೇಟಿಯಾಗಿ, ಮುಖ್ಯ ಗೊತ್ತುವಳಿಗಳನ್ನು ಯಥಾಸ್ಥಿತಿಯಾಗಿ ಮುಂದುವರಿಸಿದರೆ ಹಾಗೂ ಲಜಪತ್‌ರಾಯ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಜನಪ್ರಿಯ ಬಯಕೆಯ ಬಗ್ಗೆ ಉದ್ಘಾಟನಾ ಭಾಷಣಗಳಲ್ಲಿ ಔಚಿತ್ಯಪೂರ್ಣ ಪ್ರಸ್ತಾಪ ಮಾಡುವುದಾದರೆ ಅಧ್ಯಕ್ಷರ ಚುನಾವಣೆಗೆ ತಮ್ಮ ವಿರೋಧವನ್ನು ಹಿಂತೆಗೆದುಕೊಳ್ಳುವುದಾಗಿ ತಿಳಿಸಿದರು. ಬ್ಯಾನರ್ಜಿ ತಕ್ಷಣ ಇದನ್ನು ಒಪ್ಪಿಕೊಂಡರೂ, ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಮಾಲ್ವಿ ಮೊಂಡುತನ ತೋರಿಸಿದರು.

ಗೋಖಲೆಯವರು ಸಿದ್ಧಪಡಿಸಿದ್ದ ಕಾಂಗ್ರೆಸ್ ಘಟನೆಯ ಕರಡು ಪ್ರತಿಯನ್ನು ಅದರ ಹಿಂದಿನ ದಿನ – ಡಿಸೆಂಬರ್ 25 – ತಿಲಕರು ಪಡೆದಿದ್ದರು. "ಬ್ರಿಟಿಷ್ ಸಾಮ್ರಾಜ್ಯದ ಇತರ ಸದಸ್ಯ ದೇಶಗಳು ಹೊಂದಿರುವಂತಹ ಸ್ವಯಂಮಾಡಳಿತ ಸರ್ಕಾರವನ್ನು ಭಾರತ ಗಳಿಸುವುದು" ಕಾಂಗ್ರೆಸ್‌ನ ಗುರಿ ಎಂದು ಈ ಕರಡಿನಲ್ಲಿ ತಿಳಿಸಲಾಗಿತ್ತು. "ಸ್ವಯಮಾಡಳಿತ ನಡೆಸುವ ವಸಾಹತುಗಳು" ಎಂದು ತಿಳಿಸಿದ ಕಲ್ಕತ್ತೆಯ ಗೊತ್ತುವಳಿಗಿಂತ ಇದು ಭಿನ್ನವಾಗಿರಬಹುದು ಅಥವಾ ಅರಿಯದೆ ಆದ ಬದಲಾವಣೆಯಾಗಿರಬಹುದು. ಇದರ ಬಗ್ಗೆ ಗೋಖಲೆಯವರ ಗಮನ ಸೆಳೆದಾಗ, ಅದನ್ನು ತಿದ್ದುಪಡಿ ಮಾಡಲು ಅವರು ತಕ್ಷಣ ಒಪ್ಪಿಕೊಂಡರು. ಆದರೆ ಈ ಲೋಪದಿಂದ ಸೌಮ್ಯವಾದಿಗಳ ನಿಸ್ಪೃಹತೆಯ ಬಗ್ಗೆ ಉಗ್ರವಾದಿಗಳ ಸಂಶಯ ಹೆಚ್ಚಾಗಿದ್ದುದು ಸಹಜವಾಗಿಯೇ ಇದೆ.

ಡಿಸೆಂಬರ್ 26ರಂದು ಅಧಿವೇಶನ ಉದ್ಘಾಟನೆಯಾಗುವುದಕ್ಕೆ ಸ್ವಲ್ಪ ಸಮಯ ಮೊದಲು ಕಾಂಗ್ರೆಸ್ ಪಂಡಾಲ್‌ನಲ್ಲಿ ಪ್ರತಿನಿಧಿಗಳಿಗೆ ಕರಡು ಗೊತ್ತುವಳಿಗಳನ್ನು ಹಂಚಿದಾಗ ಈ ಅನುಮಾನಗಳು ಬಲಗೊಂಡವು. ಪ್ರತಿಯೊಂದು ಗೊತ್ತುವಳಿಯಲ್ಲೂ ವಿಪರೀತ ಬದಲಾವಣೆಯಾಗಿತ್ತು. "ಸ್ವಲ್ಪ ತ್ಯಾಗ ಮಾಡಬೇಕಾಗಿ ಬಂದರೂ, ಆಮದು ಮಾಡಿದ ವಸ್ತುಗಳಿಗಿಂತ ಸ್ವದೇಶಿ ವಸ್ತುಗಳಿಗೆ ಆದ್ಯತೆ ನೀಡುವ ಮೂಲಕ ಅವುಗಳ ಉತ್ಪಾದನೆಯನ್ನು ಚುರುಕುಗೊಳಿಸಬೇಕೆಂದು "ಕಲ್ಕತ್ತ ಕಾಂಗ್ರೆಸ್‌ನ ಗೊತ್ತುವಳಿ ಜನತೆಗೆ ಕರೆ ಕೊಟ್ಟಿತ್ತು. ಸೂರತ್ ಕರಡಿನಲ್ಲಿ "ಸ್ವಲ್ಪ ತ್ಯಾಗ ಮಾಡಬೇಕಾಗಿ ಬಂದರೂ" ಎಂಬ ಮುಖ್ಯ ಪದಗಳನ್ನು ಬಿಟ್ಟುಬಿಡಲಾಗಿತ್ತು.

"ದೇಶದ ಅಗತ್ಯಗಳಿಗೆ ಸೂಕ್ತವಾದ ಸಾಹಿತ್ಯಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ವ್ಯವಸ್ಥೆಯೊಂದನ್ನು ರಾಷ್ಟ್ರೀಯ ಸ್ವರೂಪದಲ್ಲಿ ಹಾಗೂ ರಾಷ್ಟ್ರೀಯ ಹತೋಟಿಯಲ್ಲಿ ಸ್ಥಾಪಿಸಬೇಕೆಂದು" ರಾಷ್ಟ್ರೀಯ ಶಿಕ್ಷಣದ ಮೇಲಿನ ಗೊತ್ತುವಳಿಯಲ್ಲಿ ಕಲ್ಕತ್ತ ಕಾಂಗ್ರೆಸ್ ಸಲಹೆ ಮಾಡಿತ್ತು. "ದೇಶದ ಅಗತ್ಯಗಳಿಗೆ ಸೂಕ್ತವಾದ ಸ್ವತಂತ್ರ – ಸಾಹಿತ್ಯಿಕ, ವೈಜ್ಞಾನಿಕ ಮತ್ತು ತಾಂತ್ರಿಕ – ಶಿಕ್ಷಣ ವ್ಯವಸ್ಥೆಯೊಂದನ್ನು ಸ್ಥಾಪಿಸಬೇಕೆಂಬ" ಸಲಹೆಯಾಗಿ ಅದನ್ನು ಸೂರತ್ ಕರಡು ಮಾರ್ಪಡಿಸಿತು. ಬಹಿಷ್ಕಾರ

ಗೊತ್ತುವಳಿಯಲ್ಲಿ ಅತ್ಯಂತ ಪ್ರಮುಖವಾದ ಬದಲಾವಣೆಯನ್ನು ಮಾಡಲಾಗಿತ್ತು. "ಬಂಗಾಲ ಪ್ರಾಂತ್ಯದ ವಿಭಜನೆಯನ್ನು ಪ್ರತಿಭಟಿಸುವ ರೂಪದಲ್ಲಿ ಆ ಪ್ರಾಂತ್ಯ ಪ್ರಾರಂಭಿಸಿದ ಬಹಿಷ್ಕಾರ ಆಂದೋಲನ ನ್ಯಾಯಬದ್ಧವಾಗಿತ್ತು, ನ್ಯಾಯಬದ್ಧವಾಗಿದೆ ಎಂಬ ಅಭಿಪ್ರಾಯ" ಕಲ್ಕತ್ತ ಕಾಂಗ್ರೆಸ್ಸಿನದಾಗಿತ್ತು. "ಬಂಗಾಲಪ್ರಾಂತ್ಯದ ವಿಭಜನೆಯನ್ನು ಪ್ರತಿಭಟಿಸುವ ರೂಪದಲ್ಲಿ ಆ ಪ್ರಾಂತ್ಯ ಕೈಗೊಂಡ 'ವಿದೇಶಿ ವಸ್ತುಗಳ' ಬಹಿಷ್ಕಾರ ನ್ಯಾಯಬದ್ಧವಾಗಿತ್ತು, ನ್ಯಾಯಬದ್ಧವಾಗಿದೆ ಎಂಬುದು ಈ ಕಾಂಗ್ರೆಸ್‌ನ ಅಭಿಪ್ರಾಯ" ಎಂದು ಅದನ್ನು ಸೂರತ್‌ನಲ್ಲಿ ಬದಲಾಯಿಸಲಾಯಿತು.

ಕಲ್ಕತ್ತ ಗೊತ್ತುವಳಿಗಳನ್ನು ಈ ರೀತಿ ಹೇಳದೆ ಕೇಳದೆ ಬದಲಾಯಿಸಿದ್ದರಿಂದ ಹಾಗೂ ರಾಷ್ಟ್ರೀಯವಾದಿಗಳ ಮಡಿಲಲ್ಲಿ ದಿಢೀರನೆ ಅವುಗಳನ್ನು ಹಾಕಿದ ರೀತಿಯಿಂದ ರಾಷ್ಟ್ರೀಯವಾದಿಗಳು ಕುಪಿತಗೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಕಾಂಗ್ರೆಸ್‌ಅನ್ನು ಸೌಮ್ಯವಾದಿಗಳ ಸಂಸ್ಥೆಯಾಗಿ ಬದಲಾಯಿಸಲು ಮತ್ತು ಉಗ್ರವಾದಿಗಳನ್ನು ಅದರಿಂದ ಹೊರಗಿಡಲು ಮಾಡಿದ ಧೂರ್ತ ಪ್ರಯತ್ನ ಇದು ಎಂದು ಮಾತ್ರ ಇದರಿಂದ ತಿಳಿಯಬಹುದು. ವಿವರಣೆಗಳನ್ನು ಕೋರುವುದಕ್ಕೆ ಅಥವಾ ಕರಡಿನ ಮಾರ್ಪಾಡನ್ನು ಕೋರುವುದಕ್ಕೆ ಸಮಯವಿರಲಿಲ್ಲ. ಬದಲಾವಣೆಗಳ ಬಗ್ಗೆ ಗೋಖಲೆಯವರು ನಂತರ ನೀಡಿದ ವಿವರಣೆಯಿಂದ ಉಗ್ರವಾದಿಗಳಿಗೆ ತೃಪ್ತಿಯಾಗುವ ಸಂಭವವೂ ಇರಲಿಲ್ಲ.

'ಇಂಡಿಯಾ' ನಿಯತಕಾಲಿಕದಲ್ಲಿ (ಲಂಡನ್‌ನಲ್ಲಿ ಪ್ರಕಟಿಸುತ್ತಿದ್ದ ಕಾಂಗ್ರೆಸ್ ಪತ್ರಿಕೆ) ಅಚ್ಚಾಗಿದ್ದ ಗೊತ್ತುವಳಿ ತಪ್ಪಾಗಿ ನಮೂದಿಸಿದ್ದರಿಂದ "ಸ್ವಲ್ಪ ತ್ಯಾಗ ಮಾಡಿಯಾದರೂ" ಎಂಬ ಪದಗಳು ಸ್ವದೇಶಿ ಗೊತ್ತುವಳಿಯಿಂದ ಬಿಟ್ಟು ಹೋಯಿತು ಎಂದು ಗೋಖಲೆ ಹೇಳಿದರು. ಆಗ ತಮ್ಮ ಪರಾಮರ್ಶೆಗೆ ಆ ಪತ್ರಿಕೆ ಮಾತ್ರ ದೊರೆತಿತ್ತು ಎಂದು ಅವರು ಹೇಳಿದರು. ರಾಷ್ಟ್ರೀಯ ಶಿಕ್ಷಣದ ಮೇಲಿನ ಗೊತ್ತುವಳಿಯಲ್ಲಿ ಮಾಡಿದ ಅಲ್ಪ ಮಾರ್ಪಾಡು ಅದರ ಪದಸಮುಚ್ಚಯವನ್ನು ಸುಧಾರಿಸಲು ಮಾತ್ರ ಮಾಡಲಾಯಿತೆಂದು ಗೋಖಲೆ ಹೇಳಿದರು. ಕಲ್ಕತ್ತೆಯ ಮೂಲ ಗೊತ್ತುವಳಿಯ ಬಗ್ಗೆ ತಿಲಕರು ಮಾಡಿದ ವ್ಯಾಖ್ಯೆ "ಅನ್ಯಾಯವಾಗಿತ್ತು ಮತ್ತು ಅಸಮರ್ಥನೀಯವಾಗಿತ್ತು" ಎಂಬ ಕಾರಣದ ಮೇಲೆ ಬಹಿಷ್ಕಾರದ ಗೊತ್ತುವಳಿಯಲ್ಲಿ ಮಾಡಿದ ಬದಲಾವಣೆಯನ್ನು ಗೋಖಲೆ ಸಮರ್ಥಿಸಿದರು. ಹಾಗೂ ಅದರಿಂದಾಗಿ ಮಾರ್ಪಾಡನ್ನು ಮಾಡಬೇಕಾದ ಅಗತ್ಯ ಇದೆ ಎಂದು ತಿಳಿಯಲಾಯಿತು ಎಂದು ಹೇಳಿದರು.

ಓಗೆ ಸೂರತ್ ಕಾಂಗ್ರೆಸ್ ಉದ್ವೇಗ ಮತ್ತು ಕಾತುರದ ವಾತಾವರಣದಲ್ಲಿ ಪ್ರಾರಂಭವಾಯಿತು. ಹಾಗೂ ಕರಡು ಗೊತ್ತುವಳಿಗಳನ್ನು ಹಂಚಿದಾಗ ಉದ್ವೇಗ ಮತ್ತು ಕಾತುರ ಕಣ್ಣಿಗೆ ಕಾಣುವಂತೆ ಹೆಚ್ಚಾದವು. ಸ್ವಾಗತ ಸಮಿತಿಯ ಅಧ್ಯಕ್ಷರ ಸ್ವಾಗತ ಭಾಷಣವನ್ನು ತುಂಬಿದ ಸಭೆ ಮೌನವಾಗಿ ಆಲಿಸಿತು. ಡಾ.ಘೋಷ್‌ರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿ ಅಂಬಾಲಾಲ್ ದೇಸಾಯಿ ಮಾಡಿದ ಭಾಷಣವನ್ನು ಮೌನವಾಗಿ ಕೇಳಲಾಯಿತು. ಈ ಸೂಚನೆಗೆ ಬೆಂಬಲವಾಗಿ ಮಾತನಾಡಲು ಸುರೇಂದ್ರನಾಥ ಬ್ಯಾನರ್ಜಿಯವರು ಎದ್ದು ನಿಂತಾಗ ಭಯಂಕರ ಗೊಂದಲ ಉಂಟಾಯಿತು. "ಪುನಃಪುನಃ ಅವರು ಕೂಗಿದರು. ಮೌನದಂತೆ ಅದು ಕೇಳಿಸಲಿಲ್ಲ. ಅವರಂತಹ ಧ್ವನಿಯೂ ಆ ಗದ್ದಲದಲ್ಲಿ ಪಿಸುಮಾತೂ

ಆಗಿರಲಿಲ್ಲ." ಮೌಲ್ವಿ ಒಂದೇ ಸಮನೆ 'ಶಿಸ್ತು, ಶಿಸ್ತು' ಎಂದು ಗಂಟೆ ಬಾರಿಸಿದರು. ತಮ್ಮ ಮಾತು ಕೇಳಿಸುವುದು ಸಾಧ್ಯವಾಗಲಿ ಎಂದು ಸುರೇಂದ್ರನಾಥ ಬ್ಯಾನರ್ಜಿ ಮೇಜಿನ ಮೇಲೆ ನಿಂತರು. ಆದರೆ ಗದ್ದಲ ಪುನಃ ಹೆಚ್ಚಾಯಿತು. ಅಧಿವೇಶನವನ್ನು ಇದ್ದಕ್ಕಿದ್ದಂತೆ ಮುಂದಕ್ಕೆ ಹಾಕಬೇಕಾಯಿತು.

ಆ ರಾತ್ರಿ ಎರಡೂ ಗುಂಪುಗಳನ್ನು ಒಟ್ಟಾಗಿಸಲು ತೀವ್ರ ಪ್ರಯತ್ನಗಳನ್ನು ಮಾಡಲಾಯಿತು. ಆದರೆ ಅವು ವ್ಯರ್ಥವಾದವು. ಪ್ರತಿಯೊಂದು ಪ್ರಾಂತ್ಯದಿಂದ ಒಬ್ಬ ಸೌಮ್ಯವಾದಿ ಮತ್ತು ಒಬ್ಬ ಉಗ್ರವಾದಿಯನ್ನು ಆರಿಸಿ ಡಾ.ರುಧರ್‌ಫೋರ್ಡ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಬೇಕೆಂದೂ, ಅದರ ತೀರ್ಮಾನಕ್ಕೆ ಎರಡೂ ಪಂಗಡಗಳು ಬದ್ಧವಾಗಿರಬೇಕೆಂದೂ ತಿಲಕರು ಸಲಹೆ ಮಾಡಿದರು. ಫಿರೋಜ್‌ಶಾ ಈ ಸಲಹೆಯನ್ನು ಸಾರಾಸಗಟು ತಳ್ಳಿ ಹಾಕಿದರೆಂದು ತೋರುತ್ತದೆ. ಮುಂದೆ ಹಾಕಲಾದ ಸಭೆ ಡಿಸೆಂಬರ್ 27ರಂದು ಸೇರುವುದಕ್ಕೆ ಮೊದಲು ಅಧ್ಯಕ್ಷರ ಚುನಾವಣೆಗೆ ಎರಡನೆಯ ಪ್ರತಿನಿಧಿ ಬೆಂಬಲ ಸೂಚಿಸಿದನಂತರ ಚುನಾವಣೆಯ ಬಗ್ಗೆ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಲು ತಾವು ಇಚ್ಛಿಸುವುದಾಗಿ ತಿಲಕರು ಸ್ವಾಗತ ಸಮಿತಿಯ ಅಧ್ಯಕ್ಷರಿಗೆ ಪತ್ರವನ್ನು ಕಳಿಸಿದರು. ಅದಕ್ಕೆ ಯಾವ ಉತ್ತರವೂ ಬರಲಿಲ್ಲ.

ಮರುದಿನ ಸಭೆ ಪುನಃ ಪ್ರಾರಂಭವಾದಾಗ ಅಸಂಪೂರ್ಣವಾಗಿದ್ದ ಭಾಷಣವನ್ನು ಪೂರ್ಣ ಮಾಡುವಂತೆ ಸುರೇಂದ್ರನಾಥ ಬ್ಯಾನರ್ಜಿಯವರನ್ನು ಕೋರಲಾಯಿತು. ತಿಲಕರು ಪುನಃ ನೆನಪಿನ ಚೀಟಿಯೊಂದನ್ನು ಕಳಿಸಿದರು. ಅದನ್ನು ಪುನಃ ಕಡೆಗಾಣಿಸಲಾಯಿತು. ಆಗ ಅವರು ತಮ್ಮ ವಾಕ್ ಸ್ವಾತಂತ್ರ್ಯವನ್ನು ದೃಢೀಕರಿಸಲು ವೇದಿಕೆಯತ್ತ ನಡೆದರು. ಬಹಳ ಕೂಗಾಟದ ನಡುವೆ, ಅಧ್ಯಕ್ಷರ ಚುನಾವಣೆಯ ಸೂಚನೆ ಸಾಂಗವಾಗಿ ನಡೆಯಿತೆಂದು ಮೌಲ್ವಿ ಸಾರಿದರು. ತಮ್ಮ ಭಾಷಣವನ್ನು ಮಾಡಲು ಡಾ.ರಾಶ್ ಬಿಹಾರಿ ಘೋಷ್ ತಕ್ಷಣ ಮೇಲೆದ್ದರು. "ಸೋದರ ಪ್ರತಿನಿಧಿಗಳೇ, ಮಹಿಳೆಯರೇ ಮತ್ತು ಮಹನೀಯರೇ, ನೀವು ನನಗೆ ನೀಡಿರುವ ವಿಶಿಷ್ಟ ಗೌರವಕ್ಕಾಗಿ ನನ್ನ ವಂದನೆಗಳನ್ನು ತಿಳಿಸುವುದು ನನ್ನ ಮೊದಲ ಕರ್ತವ್ಯವಾಗಿದೆ" ಎಂದು ಅವರು ಪ್ರಾರಂಭಿಸಿದರು.

ಆ ಸಭೆಯಲ್ಲಿ ಹಾಜರಿದ್ದ ಹೆಚ್.ಡಬ್ಲ್ಯು ನೆವಿನ್‌ಸನ್‌ರ ಮಾತುಗಳಲ್ಲಿ, ಅವರ "ಮೊದಲ ಕರ್ತವ್ಯ"ದಾಚೆ ಅವರು ಹೋಗಲೇ ಇಲ್ಲ. "ಸಿಡಿಲಿನಿಂದ ಪ್ರಭಾವಿತವಾದ ಗಾಳಿಯಲ್ಲಿ ಮಿಂಚು ಸುಳಿಯುವಂತೆ, ತಿಲಕರು ಅಧ್ಯಕ್ಷರ ಕುರ್ಚಿಯ ಮುಂದುಗಡೆ ನೆಟ್ಟಗೆ ನಿಂತು ವಾದಿಸುತ್ತಾ, ಪ್ರತಿಭಟಿಸುತ್ತಾ ಇದ್ದದ್ದು ಕಂಡು ಬಂತು. ಇಷ್ಟೆಲ್ಲವನ್ನೂ ತಮ್ಮ ಶಾಂತವಾದ, ಮೊನಚಾದ ಧ್ವನಿಯಲ್ಲಿ, ವಿಧಿಯ ಬಗ್ಗೆ ಲೆಕ್ಕಿಸದ ಧ್ವನಿಯಲ್ಲಿ ಹೇಳಿದರು. ಒಂದು ತಿದ್ದುಪಡಿಯ ಮುನ್ಸೂಚನೆಯನ್ನು ಅವರು ಕೊಟ್ಟಿದ್ದರು; ಅದನ್ನು ಮಂಡಿಸಲು ಅವರಲ್ಲಿ ನಿಂತಿದ್ದರು, ನಿಂತೇ ಇರುತ್ತಾರೆ.

"ಕಾಂಗ್ರೆಸ್ಸನ್ನು ಮುಂದಕ್ಕೆ ಹಾಕುವ ಸೂಚನೆಯನ್ನು ನೀವು ಮಂಡಿಸಲಾರಿರಿ. ನಿಮ್ಮದು ಅಕ್ರಮವೆಂದು ನಾನು ಸಾರುತ್ತೇನೆ" ಎಂದು ಮೌಲ್ವಿ ಅರಚಿದರು. 'ಅಧ್ಯಕ್ಷರ ಚುನಾವಣೆಗೆ ತಿದ್ದುಪಡಿಯೊಂದನ್ನು ಮಂಡಿಸಲು ನಾನು ಇಚ್ಛಿಸುತ್ತೇನೆ. ನೀವು ಅಧ್ಯಕ್ಷ ಸ್ಥಾನದಲ್ಲಿಲ್ಲ' ಎಂದು ತಿಲಕರು ಉತ್ತರಿಸಿದರು. 'ನಿಮ್ಮದು ಅಕ್ರಮವೆಂದು ನಾನು

ಘೋಷಿಸುತ್ತೇನೆ' ಎಂದು ಡಾ. ಘೋಷ್ ಕೂಗಿದರು. 'ನೀವು ಚುನಾಯಿತರಾಗಿಲ್ಲ. ನಾವು ಪ್ರತಿನಿಧಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ' ಎಂದು ತಿಲಕರು ಉತ್ತರಿಸಿದರು.

ಉಳಿದದ್ದೆಲ್ಲಾ ಕೋಲಾಹಲದಲ್ಲಿ ಮುಳುಗಿತು. ತಿಲಕರು ಕೈ ಚಾಚಿಕೊಂಡು ಸಭಿಕರಿಗೆ ಎದುರಾಗಿ ನಿಂತರು. ಅವರ ಎರಡೂ ಬದಿಗಳಲ್ಲಿ ತರುಣ ಸೌಮ್ಯವಾದಿಗಳು ಚಂಗನೆ ಎದ್ದು ನಿಂತು. ಕೈಗಳನ್ನು ಯದ್ವಾತದ್ವಾ ಆಡಿಸಿ, ಸೇಡಿನ ಭಾವನೆಯನ್ನು ತೋರಿಸಿದರು. ಮುಷ್ಟಿಗಳನ್ನು 'ಅಲ್ಲಾಡಿಸುತ್ತಾ, ಕಿರುಚುತ್ತಾ, ತಿಲಕರನ್ನು ವೇದಿಕೆಯಿಂದ ಕೆಳಗೆಸೆಯಲು ಹವಣಿಸಿದರು. ತಿಲಕರ ಹಿಂದಿದ್ದ ಡಾ. ಘೋಷ್ ಮೇಜಿನ ಮೇಲೆ ಹತ್ತಿ ಕೇಳಿಸದ ಗಂಟೆಯನ್ನು ಬಾರಿಸುತ್ತಾ, ಕೀರಲು ಧ್ವನಿಯಲ್ಲಿ ಉದ್ರೇಕದಿಂದ ಆ ಗೊಂದಲಮಯ ಸಭೆಯಲ್ಲಿ ಅರ್ಥವಾಗದ ದೂಷಣೆಗಳನ್ನು ಮಾಡಿದರು.

ಗೋಖಲೆಯವರು ಸೌಮ್ಯವಾದಿಗಳ ಹುಚ್ಚು ಕ್ರೋಧವನ್ನು ತಡೆ ಹಿಡಿಯುತ್ತಾ, ಶಾಂತಿಯನ್ನು ಕಾಪಾಡಬೇಕೆಂದು ಹೇಳುತ್ತಾ, ತೀವ್ರ ಸಂದರ್ಭದಲ್ಲೂ ಪ್ರಸನ್ನ ಚಿತ್ತರಾಗಿ ತಮ್ಮ ಹಳೆಯ ಪ್ರತಿಸ್ಪರ್ಧಿಯ ಪಕ್ಕದಲ್ಲಿ ನಿಂತು ಅವರ ಮೇಲೆರಗಲಿದ್ದ ಅಪಾಯದಿಂದ ಅವರನ್ನು ರಕ್ಷಿಸಲು ತಮ್ಮ ಎರಡೂ ಕೈಗಳನ್ನು ತಿಲಕರ ಸುತ್ತ ಚಾಚಿದರು. ಆದರೆ ತಿಲಕರು ಯಾವ ರಕ್ಷಣೆಯನ್ನು ಕೋರಲಿಲ್ಲ. ತೋಳುಗಳನ್ನು ಮಡಿಚಿ ಸೆಟೆದು ನಿಂತರು, ಹಿಂಸೆ ಎಷ್ಟೇ ಆಗಲಿ, ಹಿಂಸೆ ನನ್ನನ್ನು ಅಲುಗಾಡಿಸಲಿ ನೋಡುವ, ಎಂದು ನಿಂತರು. ಏಕೆಂದರೆ ನರಕ ಅಥವಾ ಸ್ವರ್ಗದ ಇನ್ನಾವುದಕ್ಕೂ ಅವರು ಅಲ್ಲಾಡುತ್ತಿರಲಿಲ್ಲ. ಅವರ ಮುಂದೆ ಬಿಳಿಯುಡುಪು ಧರಿಸಿದ್ದ ಜನಸಮೂಹ ಉಕ್ಕೇರಿದ ಸಮುದ್ರದಂತೆ ಮೊರೆಯಿಟ್ಟಿತು.

ಇದ್ದಕ್ಕಿದ್ದಂತೆ ಏನೋ ಗಾಳಿಯಲ್ಲಿ ಹಾರಿತು – ಜೋಡು! – ಕೆಂಪು ತೊಗಲಿನ, ಚೂಪು ತುದಿಯ, ತಳದಲ್ಲಿ ಸೀಸ ಹೊಡೆದ ಮರಾಠ ಜೋಡು! ಅದು ಸುರೇಂದ್ರನಾಥ ಬ್ಯಾನರ್ಜಿಯವರ ಕೆನ್ನೆಗೆ ತಾಗಿತು: ಅಲ್ಲಿಂದ ಹಾರಿ ಫಿರೋಜ್‌ಶಾ ಮೆಹ್ತಾ ಮೇಲೆ ಬಿತ್ತು. ಅಲ್ಲಿಂದ ಕೆಳಗೆ ಬಿತ್ತು ಹಾಗೂ ಸಂಜ್ಞೆ ಮಾಡಿದಂತೆ ಬಿಳಿ ಟೋಪಿ ಹಾಕಿದ ಜನರ ಅಲೆಗಳು ವೇದಿಕೆಯ ಕೆಳಗಡೆಗೆ ನುಗ್ಗಿದವು. ಮೇಲೆ ನೆಗೆಯುತ್ತಾ, ಹಾರುತ್ತಾ, ಉನ್ಮಾದದ ಉಸಿರು ಬಿಡುತ್ತಾ ನುಗ್ಗಿದ ಜನರು ಸೌಮ್ಯವಾದಿಗಳಂತೆ ಕಂಡ ಯಾವುದೇ ತಲೆಗೆ ಬಾರಿಸಿದರು ಹಾಗೂ ಇನ್ನೊಂದ ಗಳಿಗೆಯಲ್ಲಿ ಹಸುರು ಬಣ್ಣದ ಮೇಜಿನ ಮೇಲೆ ನಿಂತಿದ್ದ ಕಂದು ಕಾಲುಗಳ ನಡುವೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅವ್ಯವಸ್ಥೆಯಲ್ಲಿ ಧೂಳೀಪಟವಾದ ನೋಟವನ್ನು ನಾನು ಕಂಡೆ."

ಕಣ್ಣಿಗೆ ಕಟ್ಟುವಂತಹ ಈ ವಿವರಣೆಯಲ್ಲಿ ಧ್ವನಿತವಾಗಿರುವಂತೆ, ಕೇವಲ ಉಗ್ರವಾದಿಗಳಷ್ಟೆ ಹಿಂಸೆಯಲ್ಲಿ ತೊಡಗಲಿಲ್ಲ ಎಂಬ ವಿಷಯವನ್ನು ಸೇರಿಸಬೇಕು ಎಂಬ ಮಾತನ್ನು ರಾಷ್ಟ್ರೀಯವಾದಿ ಸ್ವಯಂಸೇವಕರನ್ನು ವಜಾ ಮಾಡಿ ಗೂಂಡಾಗಳನ್ನು ಬಾಡಿಗೆಗೆ ತೆಗೆದುಕೊಂಡು ಅವರನ್ನು ಅನೇಕ ಸ್ಥಳಗಳಲ್ಲಿ ನಿಲ್ಲಿಸಲಾಗಿತ್ತು ಹಾಗೂ "ಅವರು ತಮ್ಮ ಯಜಮಾನರಪರವಾಗಿ ಗೊಂದಲದಲ್ಲಿ ಭಾಗವಹಿಸಿದರು" ಎಂದು ರಾಷ್ಟ್ರೀಯವಾದಿ ಪಕ್ಷ ಹೊರಡಿಸಿದ ಹೇಳಿಕೆ ಸ್ವಾಗತ ಸಮಿತಿಯ ಮೇಲೆ ಸ್ಪಷ್ಟವಾಗಿ ಆರೋಪ ಮಾಡಿತು. ರಾಷ್ಟ್ರೀಯವಾದಿಯೊಬ್ಬರು ಚಪ್ಪಲಿ ಎಸೆದರು ಎಂಬುದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲ. ಸೌಮ್ಯವಾದಿಯೊಬ್ಬರು ತಿಲಕರತ್ತ ಅದನ್ನು ಎಸೆದಿದ್ದಿರಲೂಬಹುದು.

ಗೂಂಡಾಗಿರಿಗೆ ಮೂಲತಃ ಯಾರಾದರೂ ಜವಾಬ್ದಾರಿಯಾಗಿರಲಿ, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ದಾಖಲೆಗಳಲ್ಲಿ ಅದು ಒಂದು ಕರಾಳ ದಿನವಾಗಿತ್ತು. ಇಪ್ಪತ್ತೆರಡು ವರ್ಷಗಳ ದೇಶಪ್ರೇಮ ಕಠಿಣ ಹೋರಾಟದಲ್ಲಿ ಅದು ಗಳಿಸಿದ್ದ ಮರ್ಯಾದೆ ಎವೆಯಿಕ್ಕುವಷ್ಟರಲ್ಲಿ ಕರಗಿಹೋಯಿತು. ಕ್ರೋಧ, ಉನ್ಮಾದಗಳು ಬೇಗ ಮರೆಯಾಗಿ ಅವುಗಳ ಸ್ಥಾನದಲ್ಲಿ ದುಃಖ ನಾಚಿಕೆ ಉಂಟಾದವು. ಆದರೆ ಸೌಮ್ಯವಾದಿಗಳಿಗೆ ಮಾತ್ರ ಒಡಕು ಸಂಪೂರ್ಣವಾಗಿತ್ತು, ಅಂತಿಮವಾಗಿತ್ತು. ಮರುದಿನ ಸಮ್ಮೇಳನವನ್ನು ನಡೆಸಲು ಅವರು ನಿರ್ಧರಿಸಿದರು. ಸೌಮ್ಯತೆ ಮತ್ತು ಘಟನಾ ವ್ಯವಸ್ಥೆಗೆ ಬದ್ಧರಾಗುವ ದೀರ್ಘ ಶಪಥಕ್ಕೆ ಸಹಿ ಹಾಕಲು ಸಿದ್ಧರಾಗುವವರೆಗೆ ಮಾತ್ರ ಈ ಸಮ್ಮೇಳನಕ್ಕೆ ಪ್ರವೇಶವನ್ನು ಸೀಮಿತಗೊಳಿಸಲಾಗಿತ್ತು. (ಕಳೆದ ಮೂರು ವರ್ಷಗಳಿಂದ ಯಾವುದನ್ನು ಮಾಡಬೇಕೆಂದು ಲಾರ್ಡ್ ಮಾರ್ಲೆ ಅವರನ್ನು ಹುರಿದುಂಬಿಸುತ್ತಿದ್ದರೋ ಅದನ್ನೇ ಅವರು ಸಾರ್ಥಕಗೊಳಿಸುತ್ತಿದ್ದ ಬಗ್ಗೆ ಸೌಮ್ಯವಾದಿಗಳಿಗೆ ಆಗ ಅರಿವಿತ್ತೇ?)

ಆದರೆ ತಿಲಕರು ರಾಜಿಯಾಗುವ ಬಗ್ಗೆ ಎಲ್ಲ ಆಸೆಯನ್ನೂ ತ್ಯಜಿಸಿರಲಿಲ್ಲ. ಸೌಮ್ಯವಾದಿ ನಾಯಕರಿಗೆ ಬರೆದ ಪತ್ರದಲ್ಲಿ ಅವರು ಹೀಗೆ ತಿಳಿಸಿದರು:

"ಕಾಂಗ್ರೆಸ್‌ನ ಅತ್ಯುತ್ತಮ ಹಿತದೃಷ್ಟಿಯಿಂದ, ನನ್ನ ಪಕ್ಷ ಹಾಗೂ ನಾನು ಡಾ.ರಾಶ್ ಬಿಹಾರಿ ಘೋಷ್‌ರ ಚುನಾವಣೆಗೆ ನಮ್ಮ ವಿರೋಧವನ್ನು ಕೈ ಬಿಡಲು ಸಿದ್ಧರಿದ್ದೇವೆ ಹಾಗೂ ಮರೆತು, ಮನ್ನಿಸುವ ಭಾವನೆಯೊಂದಿಗೆ ನಡೆದುಕೊಳ್ಳಲು ಸಿದ್ಧರಿದ್ದೇವೆ. ಆದರೆ ಮೊದಲನೆಯದಾಗಿ, ಸ್ವರಾಜ್, ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣದ ಮೇಲಿನ ಹಿಂದಿನ ವರ್ಷದ ಗೊತ್ತುವಳಿಗಳಿಗೆ ಬದ್ಧರಾಗಿರಬೇಕು ಹಾಗೂ ಅವುಗಳನ್ನು ಸ್ಪಷ್ಟವಾಗಿ ಪುನಃ ದೃಢೀಕರಿಸಬೇಕು. ಎರಡನೆಯದಾಗಿ, ರಾಷ್ಟ್ರೀಯವಾದಿ ಪಕ್ಷಕ್ಕೆ ಹಿಡಿಸದ ಸಾಲುಗಳು ಡಾ. ಘೋಷ್‌ರ ಭಾಷಣದಲ್ಲೇನಾದರೂ ಇದ್ದರೆ, ಅಂತಹ ಸಾಲುಗಳನ್ನು ಬಿಟ್ಟುಬಿಡಬೇಕು."

ಒಡಂಬಡಿಕೆಯ ಇಂಗಿತದ ಅಸ್ತಿತ್ವವನ್ನು ಒಪ್ಪುವಷ್ಟೂ ಸಹ ಸೌಮ್ಯವಾದಿಗಳಿಗೆ ಸಹನೆಯಿರಲಿಲ್ಲ ಹಾಗೂ ಅವರು ತಮ್ಮ ಸಮ್ಮೇಳನದ ಕಾರ್ಯಕ್ರಮವನ್ನು ನಡೆಸಿದರು. ಸೂರತ್‌ನಲ್ಲಿ ಉಂಟಾಗಿದ್ದ ಉದ್ರೇಕ ತಣ್ಣಗಾದಾಗ ಹಾಗೂ ಎರಡೂ ಪಕ್ಷಗಳು ನ್ಯಾಯಸಮ್ಮತವಾದ ಮನೋಸ್ಥಿತಿಯಲ್ಲಿದ್ದಾಗ ಏಕತೆಯನ್ನು ಪುನಃ ಸ್ಥಾಪಿಸಬಹುದೆಂಬ ಆಶಯವನ್ನು ತಿಲಕರು ಹೊಂದಿದ್ದರು. ಏನೇ ಆದರೂ, ಈ ಒಡಕಿನಿಂದ ಮೂರನೆಯ ಪಕ್ಷಕ್ಕಷ್ಟೆ ಲಾಭವಾಗಬಲ್ಲದು, ಹಾಗೂ ಅದು ಮೊದಲು ರಾಷ್ಟ್ರೀಯವಾದಿಗಳನ್ನು ಸಂಪೂರ್ಣವಾಗಿ ತುಳಿದು ನಂತರ ಸೌಮ್ಯವಾದಿಗಳ ಕಡೆ ತಿರುಗಲು ಒಡಕಿನ ಪೂರ್ಣ ಪ್ರಯೋಜನ ಪಡೆಯುತ್ತದೆ ಎಂದು ಅವರು ವಾದಿಸಿದರು. ಅರಬಿಂದೋ ಘೋಷ್‌ರಂತಹ ತಮ್ಮ ಉತ್ಸಾಹಿ ಅನುಯಾಯಿಗಳು ರಾಷ್ಟ್ರೀಯವಾದಿಗಳ ಪ್ರತ್ಯೇಕ ಕಾಂಗ್ರೆಸ್ ನಡೆಸುವುದನ್ನು ಅವರು ತಪ್ಪಿಸಿದರು.

ಒಡಕನ್ನು ಮುಚ್ಚಲು ಅವರು ಮಾಡಿದ ನಂತರದ ಪ್ರಯತ್ನಗಳು ಕನಿಷ್ಠ ಕೆಲವಾದರೂ ಸೌಮ್ಯವಾದಿಗಳಲ್ಲಿ ಸ್ವಾಗತಾರ್ಹ ಪ್ರತಿಕ್ರಿಯೆಯನ್ನು ಉಂಟುಮಾಡಿತು. ಪೂನಾ ಜಿಲ್ಲಾ ಸಮ್ಮೇಳನ, ಧುಲಿಯಾ ಪ್ರಾಂತೀಯ ಸಮ್ಮೇಳನ ಮತ್ತು ಬಂಗಾಲದಲ್ಲಿ

ಪಟ್ನಾ ಸಮ್ಮೇಳನ ನಡೆಸುವುದರಲ್ಲಿ ಈ ಸೌಮ್ಯವಾದಿಗಳು ಉಗ್ರವಾದಿಗಳೊಂದಿಗೆ ಸೇರಿದರು. ರವೀಂದ್ರನಾಥ ಟಾಗೋರ್ ಪಟ್ನಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಆದರೆ ಜುಲೈ 1908ರಲ್ಲಿ ತಿಲಕರಿಗೆ ಗಡೀಪಾರು ಶಿಕ್ಷೆಯಾಯಿತು. ನಾಗಪುರದಲ್ಲಿ ಕಾಂಗ್ರೆಸ್‌ನ ಅಧಿವೇಶನವನ್ನು ನಡೆಸಬೇಕೆಂದು ಅವರ ಅನುಯಾಯಿಗಳು ನಂತರ ಮಾಡಿದ ಪ್ರಯತ್ನಗಳನ್ನು ಸರ್ಕಾರ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 144ರ ಮೇರೆಗೆ ತುಳಿದು ಹಾಕಿತು.

ಹೀಗೆ ರಾಷ್ಟ್ರೀಯವಾದಿಗಳನ್ನು ಮೂಲೆಗೆ ತಳ್ಳಲಾಯಿತು ಹಾಗೂ ಸರ್ಕಾರದ ಅನುಗ್ರಹದಿಂದ ಸೌಮ್ಯವಾದಿಗಳು ಕಾಂಗ್ರೆಸ್‌ನ ಮೇಲೆ ಸವಾಲಿಲ್ಲದ ಹತೋಟಿ ಪಡೆದರು. ಸುಮಾರು ಎಂಟು ವರ್ಷಗಳ ಕಾಲ ಅವರು ಈ ಹತೋಟಿ ಹೊಂದಿದ್ದರು. ಈ ಪೈಕಿ ಮೊದಲ ಆರು ವರ್ಷಗಳು ತಿಲಕರು ಜೈಲಿನಲ್ಲಿದ್ದರು ಹಾಗೂ ಉಗ್ರವಾದಿಗಳು ಸರ್ಕಾರದ ರೋಷದ ಸಂಪೂರ್ಣ ಹೊಡೆತಕ್ಕೆ ಒಳಗಾದರು.

ತಿಲಕರು 1914ರಲ್ಲಿ ಸ್ವತಂತ್ರರಾದ ಮೇಲೆ ಹಾಗೂ ಗೋಖಲೆ ಮತ್ತು ಮೆಹ್ತಾ ಅವರ ನಿಧನದಿಂದಾಗಿ ಕಾಂಗ್ರೆಸ್‌ನ ಸ್ವರೂಪ ಬದಲಾಗಲು ಪ್ರಾರಂಭವಾಯಿತು. ಏಕತೆಗಾಗಿ ತಿಲಕರು ಮಾಡಿದ ಶ್ರದ್ಧಾಪೂರ್ವಕ ಪ್ರಯತ್ನಗಳಿಂದಾಗಿ ಲಕ್ನೊದಲ್ಲಿ 1917 ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಎರಡೂ ಪಂಗಡಗಳೂ ಒಂದಾದವು. ಆದರೆ ಈ ಏಕತೆಯೂ ಅಲ್ಪಕಾಲದ್ದಾಗಿತ್ತು. ಗಾಂಧೀಜಿ ರಾಜಕೀಯ ಕ್ಷೇತ್ರದಲ್ಲಿ ಮುಂದೆ ಬಂದು, ತಿಲಕರು 1920ರಲ್ಲಿ ತೀರಿಕೊಂಡ ನಂತರ ಸೌಮ್ಯವಾದಿಗಳು (ಅಥವಾ ಅವರು ತಮ್ಮನ್ನು ತಾವೇ ನಂತರ ಕರೆದುಕೊಂಡಂತೆ – ಲಿಬರಲ್‌ವಾದಿಗಳು) ಕ್ರಮೇಣ ಎಲ್ಲೋ ಮೂಲೆಯಲ್ಲಿ ಅಡಗಿ ಹೋದರು.

ಅಧ್ಯಾಯ 13

ಗಡೀಪಾರು

ರಾಜದ್ರೋಹದ ಆಪಾದನೆಯ ಮೇಲೆ ತಿಲಕರು ಮೊದಲು ಶಿಕ್ಷೆಗೆ ಗುರಿಯಾಗಲು 1897ರಲ್ಲಿ ಪೂನಾದಲ್ಲಿ ಆದ ಕೊಲೆಗಳು ತಕ್ಷಣದ ಪ್ರಚೋದನೆಯಾಗಿದ್ದರೆ, ಬಂಗಾಲದಲ್ಲಿ ಏಪ್ರಿಲ್ 30, 1908ರಂದು ಕಾಣಿಸಿಕೊಂಡ ಬಾಂಬ್ ಎಸೆಯುವ ಪದ್ಧತಿ,ಅದಾದ ಎರಡು ತಿಂಗಳನಂತರ ಅವರ ದಸ್ತಗಿರಿಗೆ ಕಾರಣವಾಯಿತು. ಅಂದು ಮುಜಫರ್‌ಪುರದಲ್ಲಿ ಖುದಿ ರಾಮ್ ಬೋಸ್ ಮತ್ತು ಪ್ರಫುಲ್ಲ ಚಕಿ ಜಿಲ್ಲಾ ನ್ಯಾಯಾಧೀಶ ಕಿಂಗ್ಸ್‌ಫೋರ್ಡ್‌ನನ್ನು ಕೊಲ್ಲುವ ಉದ್ದೇಶದಿಂದ ಒಂದು ಬಾಂಬ್ ಎಸೆದರು. ರಾಜಕೀಯ ಅಪರಾಧಿಗಳಿಗೆ ಆತ ಕೊಡುತ್ತಿದ್ದ ಭಯಂಕರ ಶಿಕ್ಷೆಗಳಿಂದಾಗಿ ಅವನನ್ನು ಕಂಡರೆ ಜನರಿಗಾಗುತ್ತಿರಲಿಲ್ಲ. ಆದರೆ ಈ ಬಾಂಬ್ ಸ್ಫೋಟದಿಂದ ಇಬ್ಬರು ಐರೋಪ್ಯ ಮಹಿಳೆಯರು ಸತ್ತರು. ಈ ಘಟನೆ ವಿಪರೀತ ಭಯವನ್ನೂ ಗಾಬರಿಯನ್ನೂ ಚಿಂತೆಯನ್ನೂ ಉಂಟುಮಾಡಿತು ಹಾಗೂ ಅದರ ಪ್ರತಿಕ್ರಿಯೆಗಳು ದೇಶದೆಲ್ಲೆಡೆ ಉಂಟಾದವು. ಭಯೋತ್ಪಾದನೆಯನ್ನು ಪ್ರತಿ–ಭಯೋತ್ಪಾದನೆಯಿಂದಲೇ ಎದುರಿಸಲು ಸರ್ಕಾರ ಪ್ರಯತ್ನಿಸಿತು. ಆಂಗ್ಲೊ–ಇಂಡಿಯನ್ ನಿಯತಕಾಲಿಕಗಳಂತೂ ಬೌದ್ಧಿಕ ಸಮತೋಲನವನ್ನೇ ಕಳೆದುಕೊಂಡವು.

ಒಂದೇ ದಿನದಲ್ಲಿ (ಜೂನ್ 8,1908) ಎರಡು ಉಗ್ರ ಕ್ರಮಗಳನ್ನು ಕಾನೂನಿನ ಪುಸ್ತಕಕ್ಕೆ ಸೇರಿಸಲಾಯಿತು. ಸ್ಫೋಟಕ ವಸ್ತುಗಳ ಕಾಯಿದೆ ಮತ್ತು ವೃತ್ತಪತ್ರಿಕೆಗಳ (ಅಪರಾಧಗಳಿಗೆ ಪ್ರಚೋದನೆ) ಕಾಯಿದೆಗಳ ಬಲೆಯಲ್ಲಿ ಸಿಕ್ಕಿ ಬೀಳುವವರಿಗೆ ಭೀಕರ ಶಿಕ್ಷೆಗಳು ಕಾದಿದ್ದವು. ಹದಿನಾಲ್ಕು ವರ್ಷಗಳ ಗಡೀಪಾರು ಶಿಕ್ಷೆಗೆ ಸ್ಫೋಟವನ್ನು ಉಂಟು ಮಾಡುವ ಇಚ್ಛೆ ಮತ್ತು ಪ್ರಯತ್ನವಷ್ಟೇ (ಸ್ಫೋಟ ನಿಜವಾಗಿ ಸಂಭವಿಸದೆ ಹೋದರೂ) ಸಾಕಿತ್ತು. ಹಿಂಸೆಯ ಕೃತ್ಯಗಳಿಗೆ ಪ್ರಚೋದನೆ ಕೊಟ್ಟ ಮುದ್ರಣಾಲಯವನ್ನು ಮುಟ್ಟು ಗೋಲು ಹಾಕಿಕೊಳ್ಳುವ ಮತ್ತು ವೃತ್ತಪತ್ರಿಕೆಯ ಬಾಯಿ ಮುಚ್ಚುವ ಅಧಿಕಾರವನ್ನು ವೃತ್ತಪತ್ರಿಕಾ ಕಾಯಿದೆ ಜಿಲ್ಲಾಧಿಕಾರಿಗಳಿಗೆ ಕೊಟ್ಟಿತು. ಸೆಕ್ಷನ್ 124 – ಎ ಮತ್ತು 153 – ಎ ಮೇರೆಗೆ ರಾಜದ್ರೋಹ ಆಪಾದನೆ ಹೊರಿಸಿ ಅನೇಕ ಮೊಕದ್ದಮೆಗಳನ್ನು ಹಾಕಲಾಯಿತು ಹಾಗೂ "ಗುಡುಗಿನ" ಶಿಕ್ಷೆಗಳನ್ನು ನೀಡಲಾಯಿತು. ಈ ಶಿಕ್ಷೆಗಳನ್ನು ಕುರಿತು ಲಾರ್ಡ್ ಮಾರ್ಲೆ ಸಹ ಸೌಮ್ಯವಾಗಿ ಪ್ರತಿಭಟಿಸುವಂತಾಯಿತು.

ಆಂಗ್ಲೊ – ಇಂಡಿಯನ್ ನಿಯತಕಾಲಿಕಗಳು ಬುದ್ಧಿಯ ನಟನೆಯನ್ನು ಬಿಟ್ಟು ಕೊಟ್ಟವು. ಕೆಲವು ವರದಿಗಳನ್ನು ಉಲ್ಲೇಖಿಸಿದರೆ ಅವುಗಳ ವಿಷಪೂರಿತ ಆಕ್ರೋಶಗಳ ಸ್ವರೂಪ ಗೋಚರವಾಗುತ್ತದೆ. 'ಏಷ್ಯನ್' ಹೀಗೆ ಬರೆಯಿತು:- "ಶ್ರೀ ಕಿಂಗ್ಸ್‌ಫೋರ್ಡ್‌ರಿಗೆ ದೊಡ್ಡ ಅವಕಾಶವಿದೆ ಹಾಗೂ ಹತ್ತಿರದಿಂದ ಅವರು ಸಾಧಾರಣವಾಗಿ ಚೆನ್ನಾಗಿ ಗುಂಡು ಹಾರಿಸುತ್ತಾರೆ ಎಂದು ನಾವು ಆಶಿಸುತ್ತೇವೆ. ಅವರು ಚೆನ್ನಾಗಿ ಬೇಟೆಯಾಡಲು ಶಕ್ತ ರಾಗುತ್ತಾರೆ ಎಂದು ನಾವು ಆಶಿಸುತ್ತೇವೆ. ಹಾಗೂ ಅವರಿಗಿರುವ ಅವಕಾಶದ ಬಗ್ಗೆ

ನಮಗೆ ಅಸೂಯೆಯಾಗುತ್ತದೆ. ಅವರ ಮನೆಯ ಹತ್ತಿರ ಅಥವಾ ಅವರ ಹತ್ತಿರ ಸುಳಿಯುವ ಪ್ರತಿಯೊಬ್ಬ ಅಪರಿಚಿತ ದೇಶಿಯನ ಮೇಲೆ ಗುಂಡು ಹಾರಿಸುವುದು ಹೆಚ್ಚು ನ್ಯಾಯವಾಗಿರುತ್ತದೆ. ಹಾಗೂ ಅವರು ತಮ್ಮ ಕೋಟಿನ ಜೇಬಿನಿಂದ ಅಂಯುಧವನ್ನು ಹೊರಗೆ ತೆಗೆಯದೆಯೇ ನೇರವಾಗಿ ಗುಂಡು ಹಾರಿಸುವುದನ್ನು ಕಲಿಯುತ್ತಾರೆ ಎಂದು ಅವರ ಹಿತದೃಷ್ಟಿಯಿಂದಲೇ ನಾವು ನಂಬಿದ್ದೇವೆ."

'ಪಯೊನೀರ್' ಪತ್ರಿಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೀಗೆ ಬರೆಯಿತು: "ಒಂದು ನಗರ ಅಥವಾ ಜಿಲ್ಲೆಯಲ್ಲಿ ಗೊತ್ತಿರುವ ಎಲ್ಲ ಭಯೋತ್ಪಾದಕರನ್ನು ಒಟ್ಟಿಗೆ ದಸ್ತಗಿರಿ ಮಾಡಿ, ಅಪರಾಧದ ಪುನರಾವರ್ತನೆಯಾದರೆ, ಬಲಿಯಾದ ಪ್ರತಿಯೊಂದು ಜೀವಕ್ಕೂ ಅವರ ಪೈಕಿ ಹತ್ತು ಜನರನ್ನು ಗುಂಡಿಟ್ಟು ಕೊಲ್ಲಲಾಗುವುದೆಂದು ಸೂಚಿಸಿದರೆ ಭಯೋತ್ಪಾದಕ ಕೃತ್ಯಗಳನ್ನೆಸಗುವ ಅಭ್ಯಾಸ ಬೇಗ ನಿಲ್ಲುತ್ತದೆ."

ದ್ವೇಷವನ್ನು ಹರಡುತ್ತಿದ್ದ ಆಂಗ್ಲೊ – ಇಂಡಿಯನ್ ಪತ್ರಿಕೆಗಳ ವಿರುದ್ಧ, ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದರೂ, ರಾಷ್ಟ್ರೀಯವಾದಿ ವೃತ್ತಪತ್ರಿಕೆಗಳ ಸಂಪಾದಕರಿಗೆ ಒಂದಲ್ಲ ಒಂದು ಆಪಾದನೆಯ ಮೇಲೆ ತೀವ್ರ ಶಿಕ್ಷೆಗಳನ್ನು ನೀಡಲಾಯಿತು. 'ಕೇಸರಿ'ಯಲ್ಲಿ 'ದೇಶದ ದುರಾದೃಷ್ಟ" ಎಂಬ ಶೀರ್ಷಿಕೆಯ ಲೇಖನವನ್ನು ಬರೆದದ್ದಕ್ಕಾಗಿ ತಿಲಕರನ್ನು ಜೂನ್ 24.1908ರಂದು ದಸ್ತಗಿರಿ ಮಾಡಲಾಯಿತು. "ಈ ನಿವಾರಣೋಪಾಯಗಳು ಖಾಯಂ ಅಲ್ಲ" ಎಂಬ ಶೀರ್ಷಿಕೆಯಲ್ಲಿ ಬರೆದ ಇನ್ನೊಂದು ಲೇಖನವನ್ನು ಶಿಕ್ಷೆ ಖಚಿತವಾಗಿ ಆಗುವಂತೆ ಮಾಡಲು ಮತ್ತೊಂದು ಆಪಾದನೆಯ ಆಧಾರವನ್ನಾಗಿ ಮಾಡಲಾಯಿತು.

ಬಂಗಾಲದಲ್ಲಿ ನಡೆದ ಹಿಂಸಾಕೃತ್ಯಗಳ ಬಗ್ಗೆ ತಿಲಕರು ಮತ್ತು ಇತರ ಪ್ರಮುಖ ರಾಷ್ಟ್ರೀಯವಾದಿಗಳು ಮೇ 22ರಂದು ನೀಡಿದ ಸಾರ್ವಜನಿಕ ಹೇಳಿಕೆಯನ್ನು ಈ ಲೇಖನಗಳು ವಿಶದೀಕರಿಸಿದ್ದವು. ಆ ಹೇಳಿಕೆ ಹೀಗಿತ್ತು: "ಸಾರ್ವಜನಿಕಾಭಿಪ್ರಾಯವನ್ನು ದೀರ್ಘಕಾಲ ಹಾಗೂ ಒಂದೇ ಸಮನೆ ಕಡೆಗಣಿಸಿದ್ದರಿಂದ ಮತ್ತು ಸರ್ಕಾರದ ಧೋರಣೆ ಮುಂದುವರಿದಿರುವುದರಿಂದ ಈ ವಿಷಾದನೀಯ ಘಟನೆಗಳು ಉಂಟಾಗಿವೆ; ಕೆಲವು ವೃತ್ತಗಳಲ್ಲಿ ಆಪಾದಿಸಿದಂತೆ, ಯಾವುದೇ ಭಾಷಣಗಳು ಅಥವಾ ಲೇಖನಗಳಿಂದಲ್ಲ ಎಂದು ನಾವು ದೃಢವಾಗಿ ನಂಬಿದ್ದೇವೆ.ಪ್ರಸಕ್ತ ಪರಿಸ್ಥಿತಿಯ ನಿಜವಾದ ನಿವಾರಣೋಪಾಯ ಎಲ್ಲಿದೆಯೆಂದರೆ, ದಬ್ಬಾಳಿಕೆ ಮತ್ತು ಬಲವಂತದ ಕ್ರಮಗಳನ್ನು ಕೈಗೊಳ್ಳುವುದರಲ್ಲಲ್ಲ – ಅವು ವ್ಯರ್ಥ ಕ್ರಮಗಳಾಗುತ್ತವೆ – ಆದರೆ ಸಾರ್ವಜನಿಕರ ಕುಂದುಕೊರತೆಗಳನ್ನು ಶೀಘ್ರವಾಗಿ ನೀಗಿಸುವುದರಲ್ಲಿ ಮತ್ತು ಜನತೆಯ ನ್ಯಾಯಯುತವಾದ ಬೇಡಿಕೆಗಳಿಗೆ ಸಹಾನುಭೂತಿ ಮತ್ತು ರಾಜ್ಯನೀತಿಜ್ಞತೆಯ ಭಾವನೆಯಿಂದ ಧಾರಾಳ ರಿಯಾಯಿತಿಗಳನ್ನು ನೀಡುವುದರಲ್ಲಿದೆ."

ಸಹಾನುಭೂತಿ ಮತ್ತು ರಾಜ್ಯನೀತಿಜ್ಞತೆ ಬ್ರಿಟಿಷ್ ಆಳರಸರಲ್ಲಿ ಇಲ್ಲದೆ ಇದ್ದುದು ಎದ್ದು ಕಾಣುತ್ತಿತ್ತು. ಉಗ್ರವಾದಿ ಚಳವಳಿಗಾರರಿಗೆ ಅದರಲ್ಲೂ ಭಾರತೀಯ ಅಶಾಂತಿಯ ಕೇಂದ್ರ ಬಿಂದುವಾಗಿದ್ದ ಅವರ ನಾಯಕ ತಿಲಕರಿಗೆ ಪಾಠ ಕಲಿಸಲು ಅವರು ಪಟ್ಟು ಹಿಡಿದಿದ್ದರು. ಬೆಳಕಿಗೆ ಬಂದಿರುವ ಅಧಿಕೃತ ರಹಸ್ಯ ಕಾಗದ ಪತ್ರಗಳಿಂದ ಹಾಗೂ

ಲಾರ್ಡ್ ಮಾರ್ಲೆ (ವಿದೇಶಾಂಗ ಕಾರ್ಯದರ್ಶಿ) ಒಂದು ಕಡೆ ಲಾರ್ಡ್ ಮಿಂಟೊನೊಂದಿಗೆ (ವೈಸ್‌ರಾಯ್), ಮತ್ತೊಂದು ಕಡೆ ಲಾರ್ಡ್ ಸೈಡೆನ್‌ಹ್ಯಾಮ್‌ನೊಂದಿಗೆ (ಬಾಂಬೆಯ ಗವರ್ನರ್) ನಡೆಸಿದ ಪತ್ರವ್ಯವಹಾರದಿಂದ ತಿಲಕರ ವಿರುದ್ಧ ಅಧಿಕೃತ ವೃತ್ತಗಳಲ್ಲಿದ್ದ ಶತ್ರುತ್ವದ ಬಗ್ಗೆ ಯಾವುದೇ ಸಂಶಯ ಉಳಿಯುವುದಿಲ್ಲ. ಸೈಡೆನ್‌ಹ್ಯಾಮ್ ಮಾರ್ಲೆಗೆ ಬರೆದ ಪತ್ರವೊಂದರ ಭಾಗ ಈ ಬಗ್ಗೆ ಸಾಕಷ್ಟು ವಿವರ ತಿಳಿಸುತ್ತದೆ:

"ತಿಲಕರು ಕೇವಲ ಕಾರ್ಯಸಾಧ್ಯವಲ್ಲದ ವಿಚಾರಗಳಿಂದ ಬಹಳ ಸಂಭ್ರಮಗೊಂಡು ದುಡುಕಿನ ಹಾಗೂ ವಿವೇಕಯುತವಲ್ಲದ ಬರೆವಣಿಗೆಗಳಲ್ಲಿ ತೊಡಗಿರುವ ಪತ್ರಿಕೋದ್ಯಮಿಯಲ್ಲ. ಭಾರತದಲ್ಲಿ ಬ್ರಿಟಿಷ್ ಸರ್ಕಾರದ ಅಸ್ತಿತ್ವದ ವಿರುದ್ಧ ಇರುವ ಮುಖ್ಯ ಸಂಚುಗಾರರಲ್ಲಿ ಒಬ್ಬರು, ಬಹುಶಃ ಅವರೇ ಪ್ರಮುಖ ಸಂಚುಗಾರರು. ಈ ಸರ್ಕಾರದ ದುರ್ಬಲ ಅಂಶಗಳ ಬಗ್ಗೆ ಅವರು ಗಮನವಿಟ್ಟು ಅಧ್ಯಯನ ನಡೆಸಿದ್ದಾರೆ. ಅವರ ಗಣಪತಿ ಉತ್ಸವಗಳು, ಶಿವಾಜಿ ಸಮಾರಂಭಗಳು, ಪೈಸಾ ನಿಧಿ ಹಾಗೂ ರಾಷ್ಟ್ರೀಯ ಶಾಲೆಗಳು –ಇವೆಲ್ಲವುಗಳನ್ನೂ ಒಂದೇ ಗುರಿ ಇಟ್ಟುಕೊಂಡು ಸ್ಥಾಪಿಸಲಾಯಿತು. ಬ್ರಿಟಿಷ್ ಸರ್ಕಾರವನ್ನು ಉರುಳಿಸುವುದೇ ಆ ಗುರಿ. ಅವರ ಯೋಜನೆಯನ್ನು ಪಕ್ವಗೊಳಿಸಲು ಅವರಿಗೆ ಹೆಚ್ಚು ಸಮಯ ದೊರಕಿದ್ದಿದ್ದರೆ, ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಅವರು ಬಹುಶಃ ಯಶಸ್ವಿಯಾಗುತ್ತಿದ್ದರು. ಹಿಂಸಾ ಪಕ್ಷ ಸಲಹೆ ಮಾಡಿದ್ದ ರಶಿಯನ್ ವಿಧಾನಗಳ ಪೈಕಿ ಇದೂ ಒಂದಾಗಿತ್ತು. ಬಂಗಾಲದ ಅರಾಜಕತಾವಾದಿಗಳು ಎಂದು ಕರೆದುಕೊಳ್ಳುವವರ ಯೋಜನೆಯ ಬಗ್ಗೆ ತಿಲಕರಿಗೆ ಎಷ್ಟು ತಿಳಿದಿತ್ತು ಎಂಬುದರ ಬಗ್ಗೆ ನೇರ ಸಾಕ್ಷ್ಯ ಏನೂ ಇಲ್ಲ; ಆದರೆ ಕೆಲವು ನಾಯಕರೊಡನೆ ಅವರು ನಿಕಟ ಸಂಪರ್ಕ ಇಟ್ಟುಕೊಂಡಿದ್ದರು ಎಂಬ ಬಗ್ಗೆ ಸಂಶಯವಿಲ್ಲ."

ತಿಲಕರ ಮೇಲೆ ಮೊಕದ್ದಮೆ ಹೂಡುವುದಕ್ಕೆ ಇಲ್ಲಿ ನಿಜವಾದ ಕಾರಣವಿತ್ತು. ನ್ಯಾಯಾಲಯಕ್ಕೆ ಅವರನ್ನು ಎಳೆಯಲು ಇವೇ ಕಾರಣಗಳಾಗಿದ್ದವು. ಅವರು 'ಕೇಸರಿ'ಯಲ್ಲಿ ಬರೆದದ್ದು ಅಪರಾಧವಾಗಿರಲಿಲ್ಲ. ಆದರೆ ರಾಜಕೀಯದಲ್ಲಿ ಅವರ ಗುರಿ – ಬ್ರಿಟಿಷ್ ಸರ್ಕಾರದ ಪತನ – ಅಪರಾಧವಾಗಿತ್ತು. ತಿಲಕರ ಅಪರಾಧ ಇಂಡಿಯನ್ ಪೀನಲ್ ಕೋಡ್‌ನಲ್ಲಿರಲಿಲ್ಲ; ಆದರೆ ಅವರ ಪ್ರಜ್ವಲ ದೇಶಪ್ರೇಮದಲ್ಲಿತ್ತು. ಆದ್ದರಿಂದಲೇ ತನ್ನ ಹಾದಿಯಿಂದ ತಿಲಕರನ್ನು, ನ್ಯಾಯವೊ, ಅನ್ಯಾಯವೊ, ಏನು ಮಾಡಿಯಾದರೂ ನಿವಾರಿಸಲು ಸರ್ಕಾರ ತೀರ್ಮಾನಿಸಿತ್ತು. ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಹೀಗೆ ಗಮನಿಸಿತು: "ಅವರ, ಸಾಮಾನ್ಯ ದಾಖಲೆಯ ಮೇಲೆ ಅವರನ್ನು ದೂಷಿಸಲಾಗಿದೆ. ಅಂದರೆ ಅವರನ್ನು ಅರ್ಥ ಮಾಡಿಕೊಂಡಿರುವ ಜನಸಮೂಹದ ಭಾವನೆಗಳನ್ನು ಉನ್ನತ ಮಟ್ಟದಲ್ಲಿ ಪ್ರಚೋದಿಸಲು ಅವರು ಸಮರ್ಥರು ಹಾಗೂ ಪ್ರಚೋದಿಸುತ್ತಾರೆ ಎಂಬುದಕ್ಕಾಗಿ ಅವರನ್ನು ಶಿಕ್ಷಿಸಲಾಗಿದೆ ಎಂದರ್ಥ."

1897ರಲ್ಲಿ ನಡೆದ ಹಾಗೆ, ದಸ್ತಗಿರಿಯ ವಾರಂಟನ್ನು ಅವರ ಮೇಲೆ ಜೂನ್ 24ರಂದು ಹೊರಡಿಸಿದಾಗ ತಿಲಕರು ಬಾಂಬೆಯಲ್ಲಿದ್ದರು. ಅವರು ಪೂನಾದಲ್ಲಿ ರೈಲು ಹತ್ತುತಿದ್ದಾಗಲೇ ಅವರಿಗೆ ಮುಂದೆ ಕಾದಿರುವ ದಸ್ತಗಿರಿಯ ಬಗ್ಗೆ ಗೆಳೆಯರೊಬ್ಬರು ರಹಸ್ಯವಾಗಿ ಸುದ್ದಿ ಮುಟ್ಟಿಸಿ ಮನೆಗೆ ಮರಳುವಂತೆ ಸಲಹೆಮಾಡಿದರು. ತಿಲಕರು

ಅವರಿಗೆ ಹೀಗೆ ಉತ್ತರಿಸಿದರು." "ಓಂದಕ್ಕೆ ಹೋಗುವುದರಿಂದ ಏನುಪಯೋಗ? ಶತ್ರುವಿನ ದಾಳಿಯನ್ನೆದುರಿಸಲು ನಾನು ಸೈನ್ಯ ಕಟ್ಟಬೇಕೇ. ಹಳ್ಳಗಳನ್ನು ಅಗೆಯಬೇಕೇ? ಸರ್ಕಾರ ಇಡೀ ದೇಶವನ್ನೇ ಒಂದು ಬೃಹತ್ ಸೆರೆಮನೆಯನ್ನಾಗಿ ಮಾಡಿದೆ. ನನ್ನನ್ನು ಈ ದೊಡ್ಡ ಸೆರೆಮನೆಯಿಂದ ಸಣ್ಣ ಸೆರೆಮನೆಯೊಂದಕ್ಕೆ ಹಾಕುವುದಷ್ಟೇ ಸರ್ಕಾರ ಈಗ ಮಾಡುತ್ತದೆ." ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ತಿಲಕರು ನ್ಯಾಯಾಲಯವನ್ನು ಕೇಳದೆ ಇರುವಂತೆ ಮಾಡಲು ವಾರಂಟನ್ನು ಜಾರಿಗೆ ತರುವುದನ್ನು ಉದ್ದೇಶ ಪೂರ್ವಕವಾಗಿ ತಡ ಮಾಡಲಾಯಿತು. ಮರುದಿನ ಜಾಮೀನಿನ ಅರ್ಜಿ ಸಲ್ಲಿಸಿದಾಗ, ಚೀಫ್ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅದನ್ನು ತಳ್ಳಿ ಹಾಕಿದ್ದೆ ಅಲ್ಲದೆ. ಮತ್ತೊಂದು ಲೇಖನದ ಬಗ್ಗೆ ಇನ್ನೂ ಒಂದು ಆಪಾದನೆಯನ್ನು ಸೇರಿಸಲಾಯಿತು.

ಸೆಶನ್ಸ್ ವಿಚಾರಣೆಯನ್ನು ನಡೆಸಬೇಕಾಗಿದ್ದ ನ್ಯಾಯಾಧೀಶ ದಾವರ್‌ನ ಮುಂದೆ ಎಂ. ಎ. ಜಿನ್ನಾ ಜುಲೈ 2 ರಂದು ಅರ್ಜಿಯನ್ನು ಪುನಃ ಇಟ್ಟರು. 1897ರಲ್ಲಿ ತಿಲಕರ ವಕೀಲನಾಗಿದ್ದು ಅವರಿಗೆ ಜಾಮೀನು ಪಡೆಯಲು ಸಮರ್ಥನಾಗಿದ್ದ ದಾವರ್ ಈತನೇ ಆಗಿದ್ದ. ಪರಿಸ್ಥಿತಿ ಒಂದೇ ತೆರನ ಇದ್ದರೂ, ಹಿಂದಿನ ತೀರ್ಪು ತಿಲಕರ ಅರ್ಜಿಯನ್ನು ಬಲಪಡಿಸಿದ್ದರೂ, ಜಾಮೀನು ಅರ್ಜಿಯನ್ನು ತಳ್ಳಿಹಾಕಲಾಯಿತು. ತನ್ನ ತೀರ್ಪಿಗೆ ಕಾರಣಗಳನ್ನು ಕೊಡಲೂ ನ್ಯಾಯಾಧೀಶ ದಾವರ್ ನಿರಾಕರಿಸಿದ. ಇದರಿಂದ ನ್ಯಾಯಾಂಗದ ಗಾಳಿ ಎತ್ತ ಬೀಸುತ್ತಿದೆ ಎಂದು ತಿಳಿಯಿತು. "ಬಾಂಬೆಯ ನಾಗರಿಕರಿಂದ, ಮೇಲ್ದರ್ಜೆಯ ನಾಗರಿಕರಿಂದ ಆರಿಸಿದ," ವಿಶೇಷ ನ್ಯಾಯದರ್ಶಿಗಳ ಮಂಡಳಿಯನ್ನು ಹೊಂದಲೂ ಆತ ನಿರ್ಧರಿಸಿದ. ಮೇಲ್ದರ್ಜೆಯ ನಾಗರಿಕರು ಎಂದರೆ ಯುರೋಪಿಯನ್ನರೆ, ಎಂದು ಹೇಳಿದಂತಾಯಿತು. ಏಕೆಂದರೆ ಆಪಾದನೆಗಳಿಗೆ ಕಾರಣವಾಗಿದ್ದ ಲೇಖನಗಳ ಭಾಷೆಯಾಗಿದ್ದ ಮರಾಠಿಯನ್ನು ತಿಳಿದಿರದಿದ್ದರೂ ನ್ಯಾಯದರ್ಶಿಗಳ ಮಂಡಳಿಗೆ ಏಳು ಮಂದಿ ಯುರೋಪಿಯನ್ನರನ್ನು ನೇಮಿಸಲಾಯಿತು ಹಾಗೂ ಮಂಡಳಿಯಲ್ಲಿ ಇಬ್ಬರು ಭಾರತೀಯರು ಮಾತ್ರ ಇದ್ದರು.

ಜುಲೈ 13ರ ಐತಿಹಾಸಿಕ ವಿಚಾರಣೆಗೆ ಹೀಗೆ ವೇದಿಕೆ ಸಿದ್ಧವಾಗಿತ್ತು. ತಮ್ಮ ಪರವಾಗಿ ತಾನೇ ವಾದಿಸುವುದಾಗಿ ತಿಲಕರು ಕೈಗೊಂಡ ನಿರ್ಧಾರದಿಂದ ಸಾಕಷ್ಟು ಆಶ್ಚರ್ಯ ಉಂಟಾಯಿತು. ಆಗಿದ್ದ ವಾತಾವರಣದಲ್ಲಿ ಸೂಕ್ತ ಐರೋಪ್ಯ ವಕೀಲರನ್ನು ಪಡೆಯಲು ಇದ್ದ ಕಷ್ಟ ಭಾಗಶಃ ಇದಕ್ಕೆ ಕಾರಣವಾಗಿತ್ತು. ಪ್ರಮುಖ ಭಾರತೀಯ ವಕೀಲರೂ ಸಹ ಈ ಪ್ರಕರಣವನ್ನು ಕೈಗೆತ್ತಿಕೊಳ್ಳಲು ಹಿಂಜರಿದರು. ಏಕೆಂದರೆ ರಾಜದ್ರೋಹದ ಪ್ರಕರಣದ ಪರ ವಾದಿಸುವುದು ಆಗ ವೃತ್ತಿಯಲ್ಲಿ ಪ್ರಗತಿಗೆ ಅಡ್ಡಿಯಾಗಿತ್ತು. ಇದೂ ಅಲ್ಲದೆ ವಕೀಲರಿಗೆ ಕೊಡಬೇಕಾದ ಹಣದ ಪ್ರಶ್ನೆಯೂ ಇತ್ತು. 1897ರಲ್ಲಿ ಮಾಡಿದಂತೆ ರಕ್ಷಣಾ ನಿಧಿಯನ್ನು ಎತ್ತಲೂ ಯಾರೂ ಮುಂದೆ ಬರಲಿಲ್ಲ. ದಬ್ಬಾಳಿಕೆಯಿಂದ ಜನರು ಅಷ್ಟು ಬಗ್ಗಿದ್ದರು.

ತಿಲಕರು ಶಿಕ್ಷೆಗೆ ಗುರಿಯಾಗುವುದಂತೂ ಶತಃಸಿದ್ಧವಾಗಿತ್ತು. ಆದ್ದರಿಂದ ತಿಲಕರು ವೈಯಕ್ತಿಕವಾಗಿ ತಮ್ಮ ಪರ ವಾದಿಸಿದ್ದರಿಂದ ಒಂದು ರೀತಿಯಲ್ಲಿ ಬಹಳ ಒಳ್ಳೆಯದೇ ಆಯಿತು. ಕೇವಲ ಬಿಡುಗಡೆ ಕೋರುವ ವ್ಯಕ್ತಿಯಾಗಿರಲಿಲ್ಲ ಅವರು. ಸ್ವಾತಂತ್ರ್ಯದ

ಧ್ಯೇಯಸಾಧನೆಗೆ ಹೋರಾಡುತ್ತಿದ್ದ ದೇಶದ ಪ್ರತಿನಿಧಿಯಾಗಿದ್ದರು. ಸ್ವತಂತ್ರವಾಗಿರಬೇಕೆಂಬ ಜನರ ಇಚ್ಛೆಯ ಸಂಕೇತವಾಗಿ, ಭಾರತದ ನೊಂದ, ತುಳಿಯಲ್ಪಟ್ಟ ಕೋಟ್ಯಂತರ ಜನರ ವಕ್ತಾರರಾಗಿ ಅವರು ಕಟಕಟೆಯಲ್ಲಿ ನಿಂತಿದ್ದರು. ನಮ್ಮ ಕಾನೂನಿನ ಚರಿತ್ರೆಯಲ್ಲಿ ತಿಲಕರ ವಿಚಾರಣೆ ಒಂದು ಸ್ಮರಣೀಯ ಅಧ್ಯಾಯವಾಗಿದೆ; ಅದು ನಮ್ಮ ಸ್ವಾತಂತ್ರ್ಯದ ಇತಿಹಾಸದಲ್ಲಿ ಇನ್ನೂ ಹೆಚ್ಚಿನ ಸ್ಮರಣೀಯ ಅಧ್ಯಾಯ. ನ್ಯಾಯದರ್ಶಿಗಳ ಮಂಡಳಿಯನ್ನುದ್ದೇಶಿಸಿ ಅವರು ಅಂತಿಮವಾಗಿ ಮಾಡಿದ 21 ಗಂಟೆಗಳ ಭಾಷಣ ಕಾನೂನಿನ ಆಶ್ಚರ್ಯಕರ ಜ್ಞಾನ ಮತ್ತು ನ್ಯಾಯಶಾಸ್ತ್ರದ ಕೌಶಲ್ಯವನ್ನು ತೋರಿಸಿತು. ಆದರೆ ಅದಕ್ಕಿಂತಲೂ ಹೆಚ್ಚಾಗಿ, ಅದು ಸ್ವಾತಂತ್ರ್ಯದ ವಿಧಾಯಕ ಹೇಳಿಕೆಯಾಗಿತ್ತು. ವಿದೇಶಿ ಆಳ್ವಿಕೆಯ ಸಂಕೋಲೆಯನ್ನು ಮುರಿಯಲು ಯತ್ನಿಸುವವರಿಗೆ ಒಂದು ಪ್ರಣಾಳಿಕೆಯಾಗಿತ್ತು.

ರಾಜದ್ರೋಹದ ಕಾನೂನಿನ ಬಗ್ಗೆ ನ್ಯಾಯದರ್ಶಿಗಳ ಮಂಡಳಿಗೆ ಪಾಂಡಿತ್ಯಪೂರ್ಣ ವ್ಯಾಖ್ಯಾನ ನೀಡಿದ ಮೇಲೆ, ಮಂಡಳಿಗೆ ತಿಲಕರು ಹೀಗೆ ಹೇಳಿದರು: "ನಾನು ರೂಪಿಸಿದ ಅಭಿಪ್ರಾಯಗಳಿಗಾಗಿ ನಾನಿಂದು ಕಟಕಟೆಯಲ್ಲಿದ್ದೇನೆ. ನಿಮಗೆ ಸುಧಾರಣೆಗಳು ಬೇಕಿದ್ದರೆ, ನಾಳೆ ನೀವು ಕಟಕಟೆಯಲ್ಲಿರಬಹುದು. ಸರ್ಕಾರದಲ್ಲಿ ತಪ್ಪು ಕಂಡುಹಿಡಿಯುವುದು ಅಥವಾ ಆಡಳಿತದಲ್ಲಿ ಸುಧಾರಣೆಯಾಗಬೇಕೆಂದು ಹೇಳುವುದೂ ರಾಜದ್ರೋಹವಲ್ಲ. ತನ್ನ ಜನತೆಯ ಸ್ವಾತಂತ್ರ್ಯಕ್ಕಾಗಿ ಸರ್ಕಾರದಲ್ಲಿ ಬದಲಾವಣೆಗಾಗಿ ಹೋರಾಡುವುದು ಜನ್ಮಸಿದ್ಧ ಹಕ್ಕು." ಅಧಿಕಾರಶಾಹಿ ಮತ್ತು ಸರ್ಕಾರದ ನಡುವಣ ವ್ಯತ್ಯಾಸವನ್ನು ಸರಿಯಾಗಿ ಅರಿಯುವಂತೆ ಅವರು ನ್ಯಾಯದರ್ಶಿಗಳ ಮಂಡಳಿಯನ್ನು ಕೇಳಿಕೊಂಡರು:

"ಅಧಿಕಾರಶಾಹಿ ಸರ್ಕಾರವಲ್ಲ. ಅಧಿಕಾರಶಾಹಿಯನ್ನು ಟೀಕಿಸುವುದೆಂದರೆ ಈ ದೇಶದಲ್ಲಿ ಕಾನೂನಿನ ಮೇರೆಗೆ ಸ್ಥಾಪಿಸಲಾದ ಸರ್ಕಾರವನ್ನು ತುಚ್ಛೀಕರಿಸುವುದೆಂದಾಗಲೀ ದ್ವೇಷಿಸುವುದೆಂದಾಗಲೀ ಅಲ್ಲ. ಸ್ವಯಮಾಡಳಿತದ ಹಕ್ಕನ್ನು ಕೇಳುವುದು ರಾಜದ್ರೋಹವಲ್ಲ ಎಂದು ಕಾನೂನೇ ಮಾನ್ಯತೆ ನೀಡಿದೆ. ಪ್ರಸಕ್ತ ಆಡಳಿತದಲ್ಲಿ ದೋಷಗಳು ಇವೆ ಎಂದು ನೀವು ತೋರಿಸದೆ ಹೋದರೆ ಆಡಳಿತದಲ್ಲಿ ಪಾಲನ್ನು ನೀವು ಹೇಗೆ ಕೇಳುತ್ತೀರಿ? ಯಾವುದೇ ದೋಷಗಳನ್ನು ಕಂಡುಹಿಡಿಯುವುದು ನಿಮಗೆ ಸಾಧ್ಯವಾಗದಿದ್ದಲ್ಲಿ, ಸುಧಾರಣೆಯನ್ನು ನೀವು ಕೋರಲಾರಿರಿ. ಅಧಿಕಾರಶಾಹಿಗೆ ಇದು ಅಪ್ರಿಯವಾಗಿರಬಹುದು. ಆದರೆ ಇದರಲ್ಲಿ ಸರ್ಕಾರವನ್ನು ತಿರಸ್ಕಾರ ಅಥವಾ ದ್ವೇಷಕ್ಕೆ ಈಡು ಮಾಡುವಂತಹುದೇನೂ ಇಲ್ಲ."

ಬಾಂಬ್ ಎಸೆಯುವ ಚಾಳಿಯನ್ನು ತಿಲಕರು ಬೆಂಬಲಿಸಿದರೆಂಬ ಪ್ರಾಸಿಕ್ಯೂಶನ್ ಸಲಹೆಯನ್ನು ಅವರು ನಿರಾಕರಿಸಿದರು. ಅದಕ್ಕೆ ವಿರುದ್ಧವಾಗಿ ಬಾಂಬ್ ಎಸೆಯುವುದು ಸ್ವರಾಜ್ಯವನ್ನು ಗಳಿಸುವ ವಿಧಾನವಲ್ಲ ಹಾಗೂ ಅದು ನೈತಿಕ ಧರ್ಮಕ್ಕೆ ಅನುಗುಣವಾಗಿಲ್ಲ ಎಂದು ತಾವು ಪದೇಪದೇ ಹೇಳಿದ್ದಾಗಿ ತಿಲಕರು ಮಂಡಳಿಗೆ ತಿಳಿಸಿದರು. 'ಕೇಸರಿ'ಯಲ್ಲಿ ಆ ಎರಡು ಲೇಖನಗಳನ್ನು ಬರೆದು ಸಾರ್ವಜನಿಕರಿಗೆ ಪತ್ರಿಕೋದ್ಯಮಿಯಾಗಿ ತಾವು ಸಲ್ಲಿಸಬೇಕಾಗಿದ್ದ ಕರ್ತವ್ಯವನ್ನು ಪಾಲಿಸಿದ್ದಾಗಿ ಅವರು ಹೇಳಿದರು:

"ಖುದಿರಾಮ್ ಬೋಸ್‌ಗೆ ಆಗ ತಾನೆ ಶಿಕ್ಷೆ ವಿಧಿಸಲಾಗಿತ್ತು ಹಾಗೂ ಆ ಬಗ್ಗೆ ನನ್ನ

ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಬೇಕಾಗಿತ್ತು. ಕಾಲ ಪ್ರಕ್ಷುಬ್ಧವಾಗಿದ್ದಿರಲಿ, ಶಾಂತಿಯುತವಾಗಿದ್ದಿರಲಿ, ಅದು ನನ್ನ ಕರ್ತವ್ಯವಾಗಿತ್ತು. ಕಾಲ ಪ್ರಕ್ಷುಬ್ಧವಾಗಿದ್ದರೆ, ಈ ಪ್ರಕ್ಷುಬ್ಧತೆಯ ಕಾರಣಗಳ ಬಗ್ಗೆ ಸರ್ಕಾರಕ್ಕೆ ತಿಳಿಸಿ ಹೇಳುವುದು ಪತ್ರಿಕೋದ್ಯಮಿಯ ಕರ್ತವ್ಯವಾಗುತ್ತದೆ. ಇದು ಬಹಳ ಕಠಿಣವಾದ ಕರ್ತವ್ಯ – ಉಪಕಾರ ಸ್ಮರಣೆಯಿಲ್ಲದ ಕರ್ತವ್ಯ, ಕೆಲವು ಸಲ ಬಹಳ ತೊಂದರೆಯಾಗಬಹುದಾದ ಕರ್ತವ್ಯ. ಜನರ ಅನುಕೂಲಕ್ಕೆ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ವೃತ್ತಪತ್ರಿಕೆ ಮುಂದುವರಿಯಬೇಕಾದರೆ, ಯಾವುದೇ ಪರಿಗಣನೆಯಿಂದ ನಿಮ್ಮ ಕರ್ತವ್ಯಪಾಲನೆಯಲ್ಲಿ ಹಸ್ತಕ್ಷೇಪ ಆಗುವುದಕ್ಕೂ ನೀವು ಅವಕಾಶ ಕೊಡಲು ಸಾಧ್ಯವಿಲ್ಲ. ಟೀಕಿಸುವವರು ತಪ್ಪು ಕಂಡುಹಿಡಿಯಬಹುದು, ಆದರೆ ಲೇಖಕನ ಉದ್ದೇಶವನ್ನು ಪ್ರಶ್ನಿಸುವುದು ತೀವ್ರವಾದ ಸಂಕುಚಿತ ಬುದ್ಧಿಯಾಗುತ್ತದೆ."

ಆಂಗ್ಲೋ-ಇಂಡಿಯನ್ ಪತ್ರಿಕೆಗಳ ಸುಳ್ಳು ವರದಿಗಳನ್ನು ಬಯಲಿಗೆಳೆಯುವುದೂ, ದಬ್ಬಾಳಿಕೆಯನ್ನು ತೀವ್ರಗೊಳಿಸಲು ಹಾಗೂ ದೇಶೀಯರನ್ನು ಹಿಂದೆಮುಂದೆ ನೋಡದೆ ಗುಂಡಿಟ್ಟು ಕೊಲ್ಲಲು ಅವು ಮಾಡಿದ ಹುಚ್ಚು ಸಲಹೆಗಳನ್ನು ವಿರೋಧಿಸುವುದೂ ಲೇಖನಗಳನ್ನು ಬರೆಯುವುದರ ನಿಜವಾದ ಗುರಿಯಾಗಿತ್ತು ಎಂದು ತಿಲಕರು ಹೇಳಿದರು. ಅಸಮಾಧಾನವನ್ನು ಕೆರಳಿಸುವುದು ಖಂಡಿತವಾಗಿಯೂ ತಮ್ಮ ಉದ್ದೇಶವಾಗಿರಲಿಲ್ಲವೆಂದೂ, ಆಂಗ್ಲೋ-ಇಂಡಿಯನ್ ಪತ್ರಿಕೆಗಳಲ್ಲಿ ಬಂದ ಯಾವ ನೀಚ ಹೇಳಿಕೆಗಳ ವಿರುದ್ಧ ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲವೋ ಆ ನೀಚ ಹೇಳಿಕೆಗಳಿಗೆ ಮಾತ್ರ ತಾವು ಉತ್ತರ ಕೊಡುತ್ತಿದ್ದುದಾಗಿಯೂ ಅವರು ಹೇಳಿದರು.

"ಹಾಗೆ ನೋಡಿದರೆ, 'ಪಯೋನೀರ್'ನಂತಹ ಆಂಗ್ಲೋ-ಇಂಡಿಯನ್ ಪತ್ರಿಕೆಗಳಿಗಿಂತ ಹೆಚ್ಚಿನ ಅವಕಾಶ ನಮಗೆ ದೊರಕಬೇಕು. ಏಕೆಂದರೆ ಸ್ವ-ರಕ್ಷಣೆಗಾಗಿ ಮಾಡಿದ್ದು ಅಪರಾಧವಲ್ಲ ಎಂದು ಪೀನಲ್ ಕೋಡ್ ತಿಳಿಸುತ್ತದೆ. ನ್ಯಾಯದರ್ಶಿಗಳ ಮಂಡಳಿಯ ಮಹನೀಯರೇ, ಈ ಪರಿಸ್ಥಿತಿಗಳಲ್ಲಿ ನೀವು ನಿಮ್ಮ ಸಮಾಜದ ಪ್ರತಿನಿಧಿಗಳಾಗಿದ್ದರೆ ಏನು ಮಾಡುತ್ತಿದ್ದಿರಿ? ನಾನು ಏನು ಮಾಡಿದೆನೋ ನೀವು ಅದನ್ನೇ ಮಾಡುತ್ತಿದ್ದಿರಿ ಎಂಬುದು ಸ್ಪಷ್ಟ. 'ಪಯೋನೀರ್'ನಲ್ಲಿನ ಲೇಖನದ ಬಗ್ಗೆ ಬಹಳ ಸೌಮ್ಯವಾಗಿ ನಾನು ಪ್ರಸ್ತಾಪಿಸಿದ್ದೇನೆ; ವಾದಕ್ಕೆ ವಾದದಿಂದ ನಾನು ಉತ್ತರಿಸುತ್ತಿದ್ದೇನೆ. ಈ ದೇಶದ ಜನತೆಯನ್ನು ದೂಷಿಸುತ್ತಾ ಹೋಗಲು 'ಪಯೋನೀರ್'ಗೆ ನಾವು ಅವಕಾಶ ಕೊಡಬೇಕೇ? ಹಾಗಿದ್ದಲ್ಲಿ, ದೇಶೀಯ ಭಾಷೆಗಳ ಪತ್ರಿಕೆಗಳನ್ನು ರದ್ದುಪಡಿಸಿ, ಪತ್ರಿಕಾರಂಗದಲ್ಲಿ 'ಪಯೋನೀರ್' ಅನ್ನು ಮಾತ್ರ ಬಿಡುವುದು ಒಳ್ಳೆಯದು. ಅಂತಹ ನೀಚ ಲೇಖನಕ್ಕೆ ಉತ್ತರಿಸುವುದು ನನ್ನ ಕರ್ತವ್ಯವಾಗಿತ್ತು."

ಆರೋಪಗಳ (ಅನ್ಯಾಯವಾದ ರೀತಿಯಲ್ಲಿ ಅವುಗಳನ್ನು ಒಗ್ಗೂಡಿಸಲಾಗಿತ್ತು) ಅಸ್ಪಷ್ಟತೆಯನ್ನೂ, ಇಂಗ್ಲಿಷ್ ಅನುವಾದದ ದೋಷಗಳನ್ನೂ, ("ಅಂತಹ ಅನುವಾದದಿಂದ ಯಾವುದೇ ಲೇಖನ ರಾಜದ್ರೋಹವಾಗುತ್ತದೆ") ಎಲ್ಲಕ್ಕಿಂತ ಹೆಚ್ಚಾಗಿ ಉದ್ದೇಶದ ಪ್ರಮುಖ ಅಂಶವನ್ನೂ (ಅದನ್ನು ಸಾಬೀತು ಮಾಡಲಿಲ್ಲ) ಎತ್ತಿ ತೋರಿಸಿದ ನಂತರ ತಿಲಕರು ತಮ್ಮ ಭಾಷಣದ ಕೊನೆಗೆ ಬಂದರು. ಈ ಭಾಷಣಕ್ಕೆ ಐದು ದಿನಗಳಲ್ಲಿ

21 ಗಂಟೆಗಳಿಗೂ ಸ್ವಲ್ಪ ಹೆಚ್ಚಿನ ಸಮಯ ಹಿಡಿಯಿತು. ನ್ಯಾಯದರ್ಶಿಗಳ ಮಂಡಳಿಯ ಒಂಬತ್ತು ಸದಸ್ಯರ ಪೈಕಿ ಏಳು ಮಂದಿ ಯುರೋಪಿಯನ್ನರು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರು ಈ ಮಾತುಗಳಿಂದ ತಮ್ಮ ಭಾಷಣವನ್ನು ಕೊನೆಗೊಳಿಸಿದರು.

"ಇಂಗ್ಲೆಂಡ್‌ನಲ್ಲಿ ಪತ್ರಿಕೆಗಳು ಹೊಂದಿರುವ ಸೌಲಭ್ಯವನ್ನೇ ಈ ದೇಶದಲ್ಲಿ ಕೊಡಿ ಎಂದು ನಿಮ್ಮನ್ನು ನಾನು ಖಂಡಿತವಾಗಿ ಕೇಳಬಹುದು. 1792ರಷ್ಟು ಹಿಂದೆಯೇ ಇದೇ ಪ್ರಶ್ನೆಯ ಬಗ್ಗೆ ಇಂಗ್ಲೆಂಡ್‌ನಲ್ಲೂ ಹೋರಾಟ ನಡೆಯಿತು. ಹದಿನೆಂಟನೆಯ ಶತಮಾನದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಇಂಗ್ಲಿಷ್ ಜನತೆ ಕೋರಿದರು, ಪಡೆದರು. ಈಗ ಅವರು ಆ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಇದು ಅಂತಹುದೇ ಪ್ರಕರಣ. ನಿಮಗೆ ನಿಮ್ಮ ಸಂಪ್ರದಾಯಗಳ ಬಗ್ಗೆ ಹೆಮ್ಮೆ. ದೀರ್ಘ ಹೋರಾಟದ ನಂತರ ನಿಮಗೆ ಪತ್ರಿಕಾ ಸ್ವಾತಂತ್ರ್ಯ ಲಭಿಸಿತು. ನಾವು ಇಲ್ಲಿ ಕೊಟ್ಟಿರುವ ಪ್ರಾಮುಖ್ಯತೆಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಅದಕ್ಕೆ ನೀವು ಕೊಟ್ಟಿದ್ದೀರಿ ಎಂದು ನಾನು ನಂಬಿದ್ದೇನೆ. ಒಂದು ಕಡೆ ಜನತೆ, ಮತ್ತೊಂದು ಕಡೆ ಪ್ರಬಲ ನೌಕರಶಾಹಿಯ ನಡುವೆ ಮಹಾನ್ ಹೋರಾಟವೊಂದನ್ನು ನಾನು ಗುರುತಿಸಬಲ್ಲೆ. ನಮಗೆ ಸಹಾಯ ಮಾಡಿ ಎಂದು ನಾನು ನಿಮ್ಮನ್ನು ಕೇಳುತ್ತೇನೆ, ವೈಯಕ್ತಿಕವಾಗಿ ನನಗಲ್ಲ, ಆದರೆ ಈ ದೇಶದ ಸರ್ಕಾರದಲ್ಲಿ ಪಾಲು ಪಡೆಯುವ ನಮ್ಮ ಪ್ರಯತ್ನಗಳಿಗಾಗಿ ಇಡೀ ಭಾರತಕ್ಕೆ ಸಹಾಯ ಮಾಡಿ. ನಿಮ್ಮ ಮೇಲೆ ಗುರುತರ ಜವಾಬ್ದಾರಿಯಿದೆ. ನಿಮ್ಮಲ್ಲಿ ಒಬ್ಬರಾದರೂ ಮುಂದೆ ಬಂದು ನಾನು ಮಾಡಿದ್ದು ಸರಿ ಎಂದು ಹೇಳಿದರೆ ಅದರಿಂದ ನನಗೆ ತೃಪ್ತಿಯಾಗುತ್ತದೆ. ನನಗಾಗಿ ನಾನು ನಿಮ್ಮನ್ನು ಕೇಳಿಕೊಳ್ಳುತ್ತಿಲ್ಲ, ಆದರೆ ಯಾವ ಧ್ಯೇಯವನ್ನು ಪ್ರತಿನಿಧಿಸುವ ಗೌರವ ನನಗೆ ದೊರೆತಿದೆಯೋ ಆ ಧ್ಯೇಯದ ಹಿತಕ್ಕಾಗಿ ನಾನು ಕೇಳಿಕೊಳ್ಳುತ್ತೇನೆ. ಧ್ಯೇಯವಷ್ಟೇ ಪವಿತ್ರ."

ತಿಲಕರ ನಂತರ ಮಾತನಾಡಿದ ಅಡ್ವೊಕೇಟ್ – ಜನರಲ್ "ತಿಲಕರ ಮಾತುಗಳನ್ನು ಐದು ದಿನಗಳು ಕೇಳಬೇಕಾಗಿ ಬಂದು ನ್ಯಾಯದರ್ಶಿಗಳ ಮಂಡಳಿ ಅನುಭವಿಸಿದ ಯಾತನೆ"ಯ ಬಗ್ಗೆ ಅಣಕದಿಂದ ಪ್ರಸ್ತಾಪಿಸಿದರು. ಈ ಪ್ರಾರಂಭದ ಮಾತಿನಿಂದಲೇ ಆತನ ಭಾಷಣದ ಸ್ವರೂಪ ಮತ್ತು ಧ್ವನಿ ತಿಳಿಯಿತು. ಆತ 1897ರಲ್ಲಿ ನ್ಯಾಯಾಧೀಶ ಸ್ಟ್ರಾಚಿ ನೀಡಿದ ತೀರ್ಪಿನ ಮೇಲೆ ವಿಶೇಷವಾಗಿ ಅವಲಂಬಿಸಿದ. ಪೂರ್ಣ ಪೀಠವೊಂದು ಬಲವಾದ ಒಂದು ಅಂಶದ ಮೇಲೆ ಆ ತೀರ್ಪನ್ನು ತಳ್ಳಿ ಹಾಕಿತ್ತು ಎಂಬುದನ್ನು ಆತ ಮರೆತೇ ಬಿಟ್ಟಿದ್ದ. ಅನುವಾದಗಳು ಸರಿಯಾಗಿತ್ತೆಂದು ಅಡ್ವೊಕೇಟ್ – ಜನರಲ್ ವಾದಿಸಿದ ಹಾಗೂ ತಿಲಕರು ಸಲಹೆ ಮಾಡಿದಂತೆ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನ್ಯಾಯದರ್ಶಿಗಳ ಮಂಡಳಿ ಏನೂ ಸಂಬಂಧ ಹೊಂದಿಲ್ಲವೆಂದು ಹೇಳಿದ. "ನೀವು ಪೀನಲ್ ಕೋಡನ್ನು ರಕ್ಷಿಸುತ್ತೀರಿ ಹಾಗೂ ಪೀನಲ್ ಕೋಡ್ ಪತ್ರಿಕೆಗಳನ್ನು ರಕ್ಷಿಸುತ್ತದೆ" ಎಂದು ಹೇಳಿದ . ಕೊನೆಗೆ ತಿಲಕರ ವಾದದ ಸಾರಾಂಶವನ್ನು ಆತ ಹೀಗೆ ತಿಳಿಸಿದ: "ನೀವು ಸ್ವರಾಜ್ಯ ಕೊಡದಿದ್ದರೆ ಅಥವಾ ಕೊಡಲು ಪ್ರಾರಂಭಿಸದಿದ್ದರೆ, ನಾವು ಬಾಂಬ್‌ಗಳ ಎಸೆತವನ್ನು ನಿಲ್ಲಿಸುವುದಿಲ್ಲ."

ನ್ಯಾಯಾಧೀಶ ದಾವರ್ ತನ್ನ ಅಭಿಪ್ರಾಯಗಳ ಸಂಗ್ರಹವನ್ನು ತಿಳಿಸುವುದನ್ನು

ಜುಲೈ 22, 1908ರಂದು ರಾತ್ರಿ ಏಳಕ್ಕೆ ಪ್ರಾರಂಭಿಸಿದ . ಅದು ಸಂಕ್ಷಿಪ್ತವಾಗಿತ್ತು. ಹಾಗೂ ನಿಸ್ಸಂಶಯವಾಗಿ ಪಕ್ಷಪಾತದಿಂದ ಕೂಡಿತ್ತು. ಆ ದಿನ ಬೆಳಿಗ್ಗೆ ಪ್ರಕರಣವನ್ನು ಅಂದೇ ಮುಕ್ತಾಯಗೊಳಿಸುವ ತನ್ನ ಉದ್ದೇಶವನ್ನು ಆತ ಪ್ರಕಟಿಸಿದ್ದ ಅಂಶ ವಿಚಾರಣೆ ಗ್ರೀಕ್ ದುರಂತದ ಅನಿವಾರ್ಯತೆಯ ರೀತಿಯಲ್ಲಿ ಯಾವ ಕೊನೆ ಮುಟ್ಟುತ್ತದೆಂಬುದನ್ನೂ ಸೂಚಿಸಿತ್ತು. ತೀರ್ಪಿನ ಪರಿಶೀಲನೆಗೆ ನ್ಯಾಯದರ್ಶಿಗಳ ಮಂಡಳಿ ರಾತ್ರಿ 8ಕ್ಕೆ ನ್ಯಾಯ ಸ್ಥಾನವನ್ನು ತ್ಯಜಿಸಿತು. ನ್ಯಾಯಸ್ಥಾನದಲ್ಲಿ ಬಿಗುವಿನ ಮೌನವಿತ್ತು. ಪ್ರತಿಯೊಂದು ಮುಖದ ಮೇಲೂ ತೀವ್ರ ಕಾತುರ ಎದ್ದು ಕಾಣುತ್ತಿತ್ತು. ತಿಲಕರು ಮಾತ್ರ ಅವರ ಅದೃಷ್ಟ ತೂಗಾಡುತ್ತಿದ್ದರೂ, ಏನೂ ಆಗದವರಂತಿದ್ದರು. ತಮ್ಮ ಗೆಳೆಯ ಖಾಪರ್ಡೆ ಯವರಿಗೆ ಅವರು ಹೀಗೆಂದರು: "ದಾದಾಸಾಹೇಬ್, ಇಂದು ಆಟದ ಸ್ವರೂಪ ಭಿನ್ನವಾಗಿ ಕಾಣುತ್ತಿದೆ. ಬಹುಮಟ್ಟಿಗೆ, ಜೀವಾವಧಿ ಗಡೀಪಾರು ಶಿಕ್ಷೆಯಾಗಬಹುದು. ಇದೇ ನಮ್ಮ ಕೊನೆಯ ಭೇಟಿಯಾಗಬಹುದು."

ರಾತ್ರಿ 9.20ಕ್ಕೆ ನ್ಯಾಯಾದರ್ಶಿಗಳ ಮಂಡಳಿ ಹಿಂತಿರುಗಿತು. ಏಳು – ಎರಡರ ಬಹುಮತದಿಂದ (ಏಳು ಮಂದಿ ಯುರೋಪಿಯನ್ನರು, ಇಬ್ಬರು ಭಾರತೀಯರು) ಮಂಡಳಿ ತಿಲಕರನ್ನು ಎಲ್ಲ ಮೂರು ಅಂಶಗಳ ಮೇಲೆ ತಪ್ಪಿತಸ್ಥರನ್ನಾಗಿ ಮಾಡಿತ್ತು. ನ್ಯಾಯಾಧೀಶ ತೀರ್ಪನ್ನು ಒಪ್ಪಿಕೊಂಡು ಶಿಕ್ಷೆಯನ್ನು ವಿಧಿಸುವುದಕ್ಕೆ ಮೊದಲು ಏನಾದರೂ ಹೇಳಲು ಇಚ್ಛಿಸುತ್ತೀರಾ ಎಂದು ತಿಲಕರನ್ನು ಕೇಳಿದ. ಪ್ರಸ್ತಾವನೆಯ ಅಧ್ಯಾಯದಲ್ಲಿ ಈಗಾಗಲೇ ತಿಲಕರು ಉತ್ತರವನ್ನು ಕೊಡಲಾಗಿದೆ. ಅದೀಗ ನಮ್ಮ ಇತಿಹಾಸದ ಭಾಗವಾಗಿದೆ.

"ನ್ಯಾಯಾದರ್ಶಿಗಳ ಮಂಡಳಿಯ ತೀರ್ಮಾನ ಏನೇ ಇದ್ದರೂ ನಾನು ನಿರಪರಾಧಿಯೇ ಆಗಿದ್ದೇನೆ ಎಂಬುದನ್ನು ತಿಳಿಸಲು ಮಾತ್ರ ನಾನು ಇಚ್ಛಿಸುತ್ತೇನೆ. ಮನುಷ್ಯರು ಮತ್ತು ದೇಶಗಳ ವಿಧಿಯನ್ನು ಆಳುವ ದೊಡ್ಡ ಶಕ್ತಿಗಳಿವೆ. ನಾನು ಸ್ವತಂತ್ರನಾಗಿ ಉಳಿಯುವುದಕ್ಕಿಂತಲೂ ಹೆಚ್ಚಾಗಿ ನಾನು ನೋವು,ಕಷ್ಟಗಳಿಗೆ ಈಡಾಗುವು ದರಿಂದ ನಾನು ಪ್ರತಿನಿಧಿಸುವ ಧ್ಯೇಯಕ್ಕೆ ಹೆಚ್ಚು ಶ್ರೇಯಸ್ಸು ಸಿಗಬಹುದು ಎಂಬುದು ದೈವೇಚ್ಛೆ ಆಗಿದ್ದರೂ ಆಗಿರಬಹುದು."

ಈ ಕೆಚ್ಚಿನ ಶ್ರೇಷ್ಠ ಮಾತುಗಳಿಂದ ಎರಡು ಪೀಳಿಗೆಗಳು ರೋಮಾಂಚನಗೊಂಡಿವೆ. ಆದರೆ ನ್ಯಾಯಾಧೀಶ ದಾವರ್‌ನ ಮೇಲೆ ಈ ಮಾತುಗಳಿಂದ ಬೇರೆಯೇ ಪರಿಣಾಮ ಆಯಿತು. ಆತ ಎರಡು ಗಂಟೆಗಳಿಗೆ ಮುನ್ನ ಹಾಕಿಕೊಂಡಿದ್ದ ನ್ಯಾಯದ ನಿಷ್ಪಕ್ಷಪಾತ ಮತ್ತು ಸೌಮ್ಯತೆಯ ಮುಖವಾಡವನ್ನು ಕಿತ್ತೆಸೆಯುವಂತೆ ಅವು ಆತನನ್ನು ಕೆರಳಿಸಿದವು. ಶಿಕ್ಷೆಯನ್ನು ವಿಧಿಸುವಾಗ ಆತ ಗಾಯದ ಮೇಲೆ ಹೀಗೆ ಬರೆ ಹಾಕಿದ:

"ನೀವು ಬರೆದಿರುವ ಲೇಖನಗಳನ್ನು ರಾಜಕೀಯ ಚಳವಳಿಯಲ್ಲಿ ಬಳಸಿದ ನ್ಯಾಯ ಯುತವಾದ ಆಯುಧಗಳು ಎಂದು ಹೇಳುವ ಬುದ್ಧಿ ರೋಗಪೀಡಿತ ಬುದ್ಧಿಯಾಗಿರ ಬೇಕು, ಅತ್ಯಂತ ಹೀನ ಬುದ್ಧಿಯಾಗಿರಬೇಕು ಎಂದು ನನಗೆ ತೋರುತ್ತದೆ. ಅವು ರಾಜದ್ರೋಹದಿಂದ ತುಂಬಿ ತುಳುಕುತ್ತಿವೆ. ಅವು ಹಿಂಸೆಯನ್ನು ಉಪದೇಶಿಸುತ್ತವೆ. ಅವು ಕೊಲೆಗಳ ಬಗ್ಗೆ ಒಪ್ಪಿಗೆಯನ್ನು ಸೂಚಿಸಿವೆ. ಬಾಂಬ್‌ಗಳಿಂದ ಕೊಲೆಗಳನ್ನು

ಮಾಡುವ ಹೇಡಿತನದ ಮತ್ತು ಅತ್ಯಂತ ಕ್ರೌರ್ಯದ ಕಾರ್ಯಗಳು ನಿಮಗೆ ಸಮ್ಮತ ವಾಗಿವೆ ಎಂದು ಕಾಣುತ್ತದೆ. ಅಷ್ಟೇ ಅಲ್ಲದೆ, ಭಾರತಕ್ಕೆ ಏನೋ ಒಳ್ಳೆಯದು ಬಂದಿದೆ ಎನ್ನುವ ಹಾಗೆ ಭಾರತದಲ್ಲಿ ಬಾಂಬ್ ಬಳಕೆಯನ್ನು ನೀವು ಸ್ವಾಗತಿಸಿದ್ದೀರಿ. ಈ ಹತ್ತು ವರ್ಷಗಳಲ್ಲಿ ಬ್ರಿಟಿಷ್ ಆಡಳಿತ ವರ್ಗದ ಮೇಲೆ ನಿಮಗಿರುವ ದ್ವೇಷ ಕಾಣೆಯಾಗಿಲ್ಲ. ಹಾಗೂ ಈ ಲೇಖನಗಳನ್ನು, ನೀವು ಹೇಳಿದಂತೆ ಆ ಗಳಿಗೆಯ ಪ್ರೇರಣೆಯಿಂದಲ್ಲ, ಆದರೆ ಇಬ್ಬರು ಮುಗ್ಧ ಇಂಗ್ಲಿಷ್ ಮಹಿಳೆಯರ ಮೇಲೆ ಕ್ರೂರವಾದ ಹೇಡಿತನದ, ನೀಚ ಕಾರ್ಯ ನಡೆದ ಹದಿನೈದು ದಿನಗಳ ನಂತರ ಉದ್ದೇಶಪೂರ್ವಕವಾಗಿ ಸೊಕ್ಕಿನಿಂದ ವಾರದಿಂದ ವಾರಕ್ಕೆ ಬರೆಯಲಾಯಿತು.

ಬಾಂಬ್‌ಗಳು ರಾಜಕೀಯ ಚಳವಳಿಗಳ ನ್ಯಾಯಯುತವಾದ ಆಯುಧಗಳೇನೋ ಎಂಬ ರೀತಿಯಲ್ಲಿ ಅವುಗಳ ಬಗ್ಗೆ ಬರೆದಿದ್ದೀರಿ. ಅಂತಹ ಪತ್ರಿಕೋದ್ಯಮ ದೇಶಕ್ಕೆ ಒಂದು ಶಾಪ. ನಿಮ್ಮ ವಯಸ್ಸು ಮತ್ತು ಇತರ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು, ಶಾಂತಿ ಮತ್ತು ಕಾನೂನಿನ ದೃಷ್ಟಿಯಿಂದ ನೀವು ಪ್ರೀತಿಸುತ್ತಿರುವುದಾಗಿ ಹೇಳಿಕೊಳ್ಳು ತ್ತಿರುವ ದೇಶದದೃಷ್ಟಿಯಿಂದ, ನೀವು ಸ್ವಲ್ಪ ಕಾಲ ದೇಶದ ಹೊರಗಡೆ ಇರುವುದು ಬಹಳ ಅಪೇಕ್ಷಣೀಯ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ಮೊದಲೆರಡು ಆಪಾದನೆಯ ಅಂಶಗಳ ಪ್ರತಿ ಅಂಶದ ಮೇರೆಗೆ ನಾನು ತಲಾ ಮೂರು ವರ್ಷಗಳ ಗಡೀಪಾರು ಶಿಕ್ಷೆಯನ್ನು ವಿಧಿಸುತ್ತೇನೆ. ಈ ಶಿಕ್ಷೆಗಳು ಒಂದರ ನಂತರ ಒಂದಾಗಿ ಜಾರಿಗೆ ಬರುತ್ತವೆ. ಹೀಗೆ ನಿಮಗೆ ಆರು ವರ್ಷಗಳ ಗಡೀಪಾರು ಶಿಕ್ಷೆ ದೊರೆತಿದೆ. ಆಪಾದನೆಯ ಮೂರನೆಯ ಅಂಶದ ಮೇರೆಗೆ ನಾನು ನಿಮಗೆ 1,000 ರೂಪಾಯಿಗಳ ದಂಡ ವಿಧಿಸುತ್ತೇನೆ."

ಭಾರಿ ಪೋಲೀಸ್ ಕಾವಲಿನೊಂದಿಗೆ ತಿಲಕರನ್ನು ತಕ್ಷಣ ಶ್ರೇಷ್ಠ ನ್ಯಾಯಾಲಯದ ಪಕ್ಕದ ಬಾಗಿಲೊಂದರ ಮೂಲಕ ಕೊಲಾಬಾ ರೈಲ್ವೆ ನಿಲ್ದಾಣಕ್ಕೆ ಸಾಗಿಸಲಾಯಿತು. ಅವರನ್ನು ಅಹಮದಾಬಾದ್‌ಗೆ ಕಳಿಸಲು ಅಲ್ಲಿ ವಿಶೇಷ ರೈಲನ್ನು ನಿಲ್ಲಿಸಲಾಗಿತ್ತು. ಹೀಗೆ ರಾತ್ರಿ ಬಹಳ ಹೊತ್ತಾಗಿದ್ದರೂ, ಮಳೆ ಬೀಳುತ್ತಿದ್ದರೂ, ಶ್ರೇಷ್ಠ ನ್ಯಾಯಾಲಯದ ಸುತ್ತಲೂ ಸೇರಿದ್ದ ಸಾವಿರಾರು ಜನರಿಗೆ ತಿಲಕರನ್ನು ನೋಡುವುದಕ್ಕೂ ಅವಕಾಶ ಕೊಡಲಿಲ್ಲ. ವಿಚಾರಣೆಯ ಸಮಯದಲ್ಲಿ ಶ್ರೇಷ್ಠ ನ್ಯಾಯಾಲಯದ ಬಳಿ ಸೇರುತ್ತಿದ್ದ ಜನರ ಗುಂಪುಗಳು ಎಂದಿನಂತೆ ಸಂಜೆ ಚದುರಿದ್ದವು. ಅಂದೇ ರಾತ್ರಿ ತೀರ್ಪು ನೀಡಲಾಗು ವುದೆಂಬ ಸುದ್ದಿ ನಗರದಲ್ಲಿ ಹರಡಿದಂತೆ ಜನರ ಭಾರಿ ಗುಂಪುಗಳು ಶ್ರೇಷ್ಠ ನ್ಯಾಯಾಲ ಯದ ಬಳಿ ಪುನಃ ಸೇರಿದವು. ಪೋಲೀಸ್ ಸಿಬ್ಬಂದಿಯನ್ನು ಸಾಕಷ್ಟು ಸಂಖ್ಯೆಯಲ್ಲಿ ಜಮಾ ಯಿಸಲಾಗಿತ್ತು, ಹಾಗೂ ಅಂದು ರಾತ್ರಿ ಯಾವುದೇ ತೀವ್ರ ಗಲಭೆ ನಡೆಯಲಿಲ್ಲ.

ಮರುದಿನ ಬೆಳಿಗ್ಗೆ ಬಾಂಬೆ ನಗರವಿಡೀ ಸಂಪೂರ್ಣ ಹರತಾಳವನ್ನು ಆಚರಿಸಿತು. ಜನಜೀವನ ಸ್ತಬ್ಧವಾಯಿತು. ವಿಚಾರಣೆ ಪ್ರಾರಂಭವಾದಾಗಿನಿಂದ ಕೆಲವು ಜವಳಿ ಗಿರಣಿ ಗಳಲ್ಲಿ ಆಗೊಮ್ಮೆ ಈಗೊಮ್ಮೆ ಮುಷ್ಕರಗಳು ನಡೆದಿದ್ದವು ಹಾಗೂ ವಿಚಾರಣೆಯ ಮೊದಲನೆಯ ದಿನವೇ ಗಲಭೆಗಳು ನಡೆದಿದ್ದವು. ಆದರೆ ಜುಲೈ 23ರಂದು ಅಂದು–ತಿಲಕರ ಐವತ್ತೆರಡನೆಯ ಜನ್ಮದಿನವಾಗಿತ್ತು–ಹೆಚ್ಚಿನ ಗಿರಣಿಗಳು ಬಾಗಿಲು ತೆಗೆಯಲಿಲ್ಲ. ಮಾರ್ಕೆಟ್‌ಗಳು, ಅಂಗಡಿಗಳು ತಂತಾವೇ ಮುಚ್ಚಿದ್ದವು. ರಸ್ತೆಗಳಲ್ಲಿ ಜನಸಂಚಾರವಿರಲಿಲ್ಲ.

ಕೆಲವು ರಸ್ತೆಗಳಲ್ಲಿ ಗಿರಣಿ ಕಾರ್ಮಿಕರು ಸಿಟ್ಟಿನಿಂದ ಓಡಾಡುತ್ತಿದ್ದರು. ಆಗೊಮ್ಮೆ, ಈಗೊಮ್ಮೆ. ಅಂತಹ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಆಗುವಂತೆ, ಕಲ್ಲೆಸೆತ ಮತ್ತು ಗೂಂಡಾಗಿರಿಯ ಇತರ ಕೃತ್ಯಗಳಲ್ಲಿ ತೊಡಗಿದರು.

ಮುಷ್ಕರ ಮುಂದುವರಿಯುತ್ತಲೇ ಹೋಯಿತು. ಹಾಗೂ ಅಧಿಕಾರಿಗಳಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಪೋಲೀಸರ ಜೊತೆಗೆ ಮಿಲಿಟರಿ ಪಡೆಗಳನ್ನೂ ಬಳಸಲಾಯಿತು. ಹಾಗೂ ಆಗಾಗ ಗೋಲೀಬಾರು ಮಾಡಲಾಯಿತು. ಆರು ದಿನಗಳ ಮುಷ್ಕರದ ಅವಧಿಯಲ್ಲಿ – ತಿಲಕರ ಶಿಕ್ಷಾವಧಿಯ ಪ್ರತಿಯೊಂದುವರ್ಷಕ್ಕೂ ಒಂದು ದಿನದಂತೆ – 14 ಜನರು ಸತ್ತರು ಹಾಗೂ 30 ಮಂದಿಗೆ ಗಾಯಗಳಾಯಿತು. ಅಧಿಕೃತವಲ್ಲದ ಅಂದಾಜುಗಳ ಪ್ರಕಾರ, ಸತ್ತವರ ಸಂಖ್ಯೆ 30, ಗಾಯಗೊಂಡವರ ಸಂಖ್ಯೆ 100.

ಕಾರ್ಖಾನೆಗಳ ಬಾಗಿಲು ತೆಗೆಯುವಂತೆ ಗಿರಣಿ ಮಾಲೀಕರ ಮೇಲೆ ವಿಶೇಷ ಒತ್ತಾಯವನ್ನುಂಟುಮಾಡಲಾಯಿತು. ಶಾಂತಿ ಮತ್ತು ಕಾನೂನನ್ನು ಪುನ: ಸ್ಥಾಪಿಸುವುದಕ್ಕೆ ಅಧಿಕಾರಿಗಳಿಗೆ ಸಹಾಯ ಮಾಡಲು ಗವರ್ನರ್ ಪ್ರಮುಖ ವ್ಯಕ್ತಿಗಳ ಸಮ್ಮೇಳವನ್ನು ಕರೆದ. ಆದರೆ ಬಾಂಬೆಯ ಸಾಮಾನ್ಯ ಜೀವನ ಆರು ದಿನಗಳು ಸ್ತಬ್ಧವಾಗಿತ್ತು. ಇನ್ನೂ ಅನೇಕ ನಗರಗಳು ಮತ್ತು ಪಟ್ಟಣಗಳಲ್ಲಿ ವ್ಯವಹಾರವನ್ನು ಸ್ವ-ಇಚ್ಛೆಯಿಂದ ನಿಲ್ಲಿಸಲಾಯಿತು. ವಿದ್ಯಾರ್ಥಿಗಳು ಶಾಲೆಕಾಲೇಜುಗಳಿಗೆ ಹೋಗಲಿಲ್ಲ. ತಿಲಕರಿಗೆ ವಿಧಿಸಿದ ಕ್ರೂರ ಶಿಕ್ಷೆಯ ವಿರುದ್ಧ ಪ್ರತಿಭಟಿಸಲು ಸಭೆಗಳನ್ನು ನಡೆಸಲಾಯಿತು.

ವೃತ್ತಪತ್ರಿಕೆಗಳೂ ಪ್ರತಿಭಟನೆಯ ಕೂಗಿಗೆ ದನಿಗೂಡಿಸಿದವು. ಶಿಕ್ಷೆ ವಿಧಿಸುವಾಗ ನ್ಯಾಯಾಧೀಶ ದಾವರ್ ತನ್ನ ಅಧಿಕಾರಸ್ಥಾನದಿಂದ ಆಡಿದ ಮಾತುಗಳ ಬಗ್ಗೆ ವಿಶೇಷವಾಗಿ ಆಕ್ಷೇಪಿಸಲಾಯಿತು. 'ಮರಾಠ' ಹೀಗೆ ಬರೆಯಿತು: "ತಿಲಕರು ತಮ್ಮ ದೇಶವನ್ನು ಪ್ರೀತಿಸುವುದಾಗಿ ಹೇಳಿಕೊಳ್ಳುತ್ತಾರೆ ಮಾತ್ರ ಎಂದು ಹೇಳಲು ನ್ಯಾಯಾಧೀಶರು ತಮ್ಮ ಅಧಿಕಾರ ಸ್ಥಾನವನ್ನು ಉಪಯೋಗ ಮಾಡಿಕೊಂಡರು. ಇದು ನಿರ್ದಯೀ ಹಸಿ ಸುಳ್ಳು. ಇದು ಕ್ರೌರ್ಯ; ಇದು ನೀಚತನ; ಇದು ಹೇಡಿತನ." ಸುರೇಂದ್ರನಾಥ ಬ್ಯಾನರ್ಜಿ ಅವರ ಸಂಪಾದಕತ್ವದ 'ಬಂಗಾಲಿ' ಹೀಗೆ ಬರೆಯಿತು; "ಶಿಕ್ಷೆ ಭಯಾನಕವಾದದ್ದು, ಆರೋಪಿಸಲಾಗಿರುವ ಅಪರಾಧಕ್ಕೆ ಎಳ್ಳಷ್ಟೂ ತಾಳಮೇಳವಿಲ್ಲದ್ದು ಹಾಗೂ ನಮ್ಮ ದೇಶವಾಸಿಗಳೂ ಸುವಿಚಾರಿಗಳೆಲ್ಲರೂ ಸಾರ್ವತ್ರಿಕವಾಗಿ ಖಂಡಿಸಲಾಗುವ ಶಿಕ್ಷೆ ಎಂದು ನಾವು ಪರಿಗಣಿಸಿದ್ದೇವೆ."

ಬ್ರಿಟಿಷ್ ಪತ್ರಿಕೆಗಳ ವರದಿಗಳೂ ಸಹ ಶಿಕ್ಷೆಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತವೆ. 'ಟೈಮ್ಸ್' ಪತ್ರಿಕೆ ಹೀಗೆ ಬರೆಯಿತು: "ಶಿಕ್ಷೆ ಪಡೆದ ಗಳಿಗೆಯಲ್ಲಿ ತಿಲಕರು ಭಾರತದಲ್ಲಿ ಅತ್ಯಂತ ಸುಪರಿಚಿತ ರಾಜಕಾರಣಿಯಾಗಿದ್ದರು ಹಾಗೂ ಜನತೆಯ ಬಹುವರ್ಗಗಳಲ್ಲಿ ಅವರು ಗಳಿಸಿದ್ದ ಜನಪ್ರಿಯತೆಯನ್ನೂ, ಹೊಂದಿದ್ದ ಪ್ರಭಾವವನ್ನೂ ಸರಿಗಟ್ಟುವುದಾಗಿ ಭಾರತದಲ್ಲಿ ಯಾವ ಸಾರ್ವಜನಿಕ ಮನುಷ್ಯನೂ ಹೇಳಿಕೊಳ್ಳುವುದು ಸಾಧ್ಯವಿಲ್ಲ." 'ಸ್ಟಾರ್' ಪತ್ರಿಕೆ ಹೀಗೆ ಹೇಳಿತು; "ತಿಲಕರ ಲೇಖನಗಳು ಬಾಂಬ್‌ಗಳ ಬಳಕೆಗೆ ನೇರ ಪ್ರೇರಣೆಯಾಗಿರಲಿಲ್ಲ ಎಂದು ತೋರುತ್ತದೆ......ಒಬ್ಬ ರಾಜಕಾರಣಿಯು ಆವೇಶದ ಮಾತಿನ ಮೇಲೆ ಶಾಂತಿಯ ಕಾಲದಲ್ಲಿ ನಿಲ್ಲಲಾರದ ಕರಾಳ ಅರ್ಥವನ್ನು ಗಂಭೀರ

ಸಮಯದಲ್ಲಿ ಹೊರಿಸುವುದಕ್ಕಿಂತಲೂ ಸುಲಭವಾದದ್ದಿಲ್ಲ." 'ಮ್ಯಾಂಚೆಸ್ಟರ್ ಗಾರ್ಡಿಯನ್' ಹೀಗೆ ಗಮನಿಸಿತು; "ಜನಾಂಗ ದ್ವೇಷದ ನಿವಾರಣೆ ಮತ್ತು ವಿಶ್ವಾಸ ಪುನಃಸ್ಥಾಪನೆಯಿಲ್ಲದೆ ಇಂಗ್ಲಿಷರು ಭಾರತವನ್ನು ಉತ್ತಮವಾಗಿ ಆಳುವುದು ಸರ್ವಥಾ ಸಾಧ್ಯವಿಲ್ಲ ಹಾಗೂ ಎಲ್ಲಾ ಸುಧಾರಣೆಗಳು ಸಂಪೂರ್ಣವಾಗಿ ನಿರರ್ಥಕವಾಗುತ್ತವೆ. ತಿಲಕರ ವಿಚಾರಣೆ ಮತ್ತು ಶಿಕ್ಷೆಯ ನೆನಪು ಬಹಳ ಕಾಲದವರೆಗೆ ಇವುಗಳನ್ನು ಆಗಗೊಡುವುದಿಲ್ಲ."

ಈ ಟೀಕೆಗಳ ಬಗ್ಗೆ ಲಾರ್ಡ್ ಮಾರ್ಲೆ ಎಷ್ಟು ಅಧೀರನಾದನೆಂದರೆ, ಆತ ಜುಲೈ 31 ರಂದು ಬಾಂಬೆಯ ಗವರ್ನರನನ್ನು ನಿಂದಿಸಿ ಈ ರೀತಿ ಪತ್ರ ಬರೆದ; "ನಿನ್ನ ವಕೀಲರ ಸಲಹೆಗಳ ಜೊತೆಗೆ ನನ್ನ ಸಲಹೆಯನ್ನೂ ಕೇಳಿದ್ದರೆ, ತಿಲಕರನ್ನು ಅವರ ಪಾಡಿಗೆ ಬಿಟ್ಟು ಬಿಡುವಂತೆ ನಾನು ಹೇಳುತ್ತಿದ್ದೆ ಎಂಬ ಬಗ್ಗೆ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ ಎಂದು ಹೇಳುವುದರ ಹೊರತಾಗಿ ತಿಲಕ್ ಪ್ರಕರಣದ ಬಗ್ಗೆ ನಾನೀಗ ಪುನಃ ಮೊದಲಿನಿಂದ ಪ್ರಸ್ತಾಪಿಸುವುದಿಲ್ಲ. ತಿಲಕ್ ಮಾಡಬಹುದಾಗಿದ್ದ ತಂಟೆ ಅವರ ಶಿಕ್ಷೆಯಿಂದ ಆಗುವ ತಂಟೆಯಷ್ಟು ಅಪಾಯಕರವಾಗುತ್ತಿತ್ತು ಎಂದು ನಂಬುವುದಕ್ಕೆ ನನಗೆ ಯಾವ ಕಾರಣವೂ ಕಾಣುತ್ತಿಲ್ಲ. ಆಯಿತು, ಈಗ ಹಾಲು ಚೆಲ್ಲಿ ಆಗಿದೆ, ಅಲ್ಲಿಗೆ ಅದು ಮುಗಿಯಿತು."

ತಿಲಕರ ಶಿಕ್ಷೆ ಮತ್ತು ನಂತರ ಬಾಂಬೆಯಲ್ಲಿ ಉಂಟಾದ ಅವ್ಯವಸ್ಥೆ ಮತ್ತು ಮುಷ್ಕರಗಳನ್ನು ಭಾರತದ ಮತ್ತು ಬ್ರಿಟನ್‌ನ ಹೊರಗಡೆಯೂ ಗಮನಿಸಲಾಯಿತು. ಈ ಮುಷ್ಕರಗಳು ಗಲಭೆಗಳು ಭಾರತದಲ್ಲಿ ಕ್ರಾಂತಿಕಾರಿ ಆಂದೋಲನದ ಮೊದಲ ಸೂಚನೆಗಳು ಎಂಬುದಾಗಿ ಲೆನಿನ್ ಗಮನಿಸಿದ್ದು ತಿಳಿದಿರುವ ವಿಷಯವೇ ಆಗಿದೆ.

ಪ್ರಿವಿ ಕೌನ್ಸಿಲ್‌ಗೆ ಮೇಲ್ಮನವಿ ಸಲ್ಲಿಸಲು ಆಗಸ್ಟ್ 7ರಂದು ಬಾಂಬೆ ಶ್ರೇಷ್ಠ ನ್ಯಾಯಾಲಯದ ಪೂರ್ಣ ಪೀಠದ ಅನುಮತಿಯನ್ನು ಕೋರಿ ಅರ್ಜಿ ಸಲ್ಲಿಸಲಾಯಿತು. ಜೋಸೆಫ್ ಬಾಪ್ಟಿಸ್ಟ ಉತ್ತಮವಾಗಿ ವಾದಿಸಿದರಾದರೂ, ಸೆಪ್ಟೆಂಬರ್ 8ರಂದು ಅರ್ಜಿಯನ್ನು ವಜಾ ಮಾಡಲಾಯಿತು. ಆದರೆ ಮೂರನೆಯ ಅಂಶದ ಮೇಲೆ ತಿಲಕರನ್ನು ದೋಷಿಯನ್ನಾಗಿ ಮಾಡಿದ್ದನ್ನು ಪೀಠ ತಳ್ಳಿಹಾಕಿತು. ಪ್ರಿವಿ ಕೌನ್ಸಿಲ್‌ನ ಜ್ಯುಡಿಶಿಯಲ್ ಸಮಿತಿಗೆ ಮೇಲ್ಮನವಿ ಮಾಡಿಕೊಳ್ಳಲು ವಿಶೇಷ ಅನುಮತಿ ಕೋರಿ ಮತ್ತೊಂದು ಪ್ರಯತ್ನ ಮಾಡಲಾಯಿತು. ಆದರೆ ಅದೂ ವಿಫಲವಾಯಿತು.

ಈ ಮಧ್ಯೆ ತಿಲಕರನ್ನು ಎಲ್ಲಿ ಬಂಧಿಸಿಡಬೇಕೆಂಬ ಬಗ್ಗೆ ಕಾರ್ಯಾಲಯದಲ್ಲಿ ಉನ್ನತ ಮಟ್ಟದ ಚರ್ಚೆಗಳು ನಡೆಯುತ್ತಿದ್ದವು. ಅವರನ್ನು ತಾತ್ಕಾಲಿಕವಾಗಿ ಅಹಮದಾಬಾದ್‌ನ ಸಬರಮತಿ ಜೈಲಿನಲ್ಲಿಡಲಾಗಿತ್ತು. ಅವರನ್ನು ಬರ್ಮಾಗೆ ಗಡೀಪಾರು ಮಾಡುವ ನಿರ್ಧಾರವನ್ನು ಕೈಗೊಳ್ಳಲಾಯಿತು. ಆದರೆ ಹಿಂದಿನ ವರ್ಷ ಮಾಂಡಲೆಯಲ್ಲಿ ಲಜಪತ್‌ರಾಯ್ ಅವರನ್ನು ಉದಾರವಾಗಿ ನಡೆಸಿಕೊಳ್ಳಲಾಯಿತು ಎಂದು ಹೇಳಲಾಗಿದ್ದರಿಂದ ಗೃಹ ಖಾತೆ ಆ ಜೈಲಿನ ಬಗ್ಗೆ ಅನುಕೂಲ ಅಭಿಪ್ರಾಯ ಹೊಂದಿರಲಿಲ್ಲ. ರಂಗೂನ್‌ನಿಂದ ಹತ್ತು ಮೈಲಿ ದೂರದಲ್ಲಿದ್ದ ಇನ್‌ಸೈನ್ ಜೈಲು ಅತ್ಯಂತ ಸೂಕ್ತವೆಂದು ಪರಿಗಣಿಸಲಾಯಿತು. ಆದರೆ ಅದರ ತೇವ ಹವೆ ತಿಲಕರ ಮಧುಮೇಹ ರೋಗವನ್ನು ಉಲ್ಬಣಗೊಳಿಸಬಹುದಾದ ಸಾಧ್ಯತೆಯಿತ್ತು.

ಅಂತಿಮವಾಗಿ ಮಾಂಡಲೆಯನ್ನು ಆರಿಸಲಾಯಿತು (ಈ ವಿಷಯವನ್ನು ರಹಸ್ಯವಾಗಿಡಲಾಗಿತ್ತು) ಹಾಗೂ ತಿಲಕರನ್ನು ಸೆಪ್ಟೆಂಬರ್ ೧೪ರಂದು ಬಾಂಬೆಯಲ್ಲಿ ಆರ್. ಐ. ಎಮ್.ಎಸ್, "ಹಾರ್ಡಿಂಜ್" ಹಡಗಿಗೆ ಹತ್ತಿಸಲಾಯಿತು. ಹಡಗಿನ ಕ್ಯಾಪ್ಟನ್‌ಗೆ ಮೊಹರು ಮಾಡಿದ ಆಜ್ಞೆಯನ್ನು ನೀಡಲಾಯಿತು. ತಿಲಕರು ವಯಸ್ಸು ಮತ್ತು ಆರೋಗ್ಯದ ಸ್ಥಿತಿಯನ್ನು ಪರಿಗಣಿಸಿ ಅವರ ಶಿಕ್ಷೆಯನ್ನು ಸರಳ ಶಿಕ್ಷೆಗೆ ಇಳಿಸಲಾಗಿದೆಯೆಂದು ಬಾಂಬೆ ಸರ್ಕಾರ ಸೆಪ್ಟೆಂಬರ್ ೨೧ರಂದು ಪ್ರಕಟಿಸಿತು. ೧೯೦೮ರಲ್ಲಿ ಒಳಗಾಗಿದ್ದ ಕಠಿಣ ಶಿಕ್ಷೆಯಿಂದ ಹೀಗೆ ತಿಲಕರು ಪಾರಾದರೂ. ಗಡೀಪಾರಾದ ಖೈದಿಗಳಿಗೆ ದೊರೆಯುತ್ತಿದ್ದ ಶಿಕ್ಷಾವಧಿಯ ಇಳಿತ ಹಾಗೂ ಇತರ ರಿಯಾಯಿತಿಗಳು ಅವರಿಗೆ ಇಲ್ಲವಾಯಿತು.

"ಹಾರ್ಡಿಂಜ್" ಸೆಪ್ಟೆಂಬರ್ ೨೨ರಂದು ರಂಗೂನ್ ತಲುಪಿತು. ಮರುದಿನ ತಿಲಕರು ಮಾಂಡಲೆ ತಲುಪಿದರು. ಅಲ್ಲಿ ಅವರು ತಮ್ಮ ಜೀವನದ ಮುಂದಿನ ಆರು ವರ್ಷಗಳನ್ನು ಕಳೆಯಬೇಕಾಯಿತು.

ಅಧ್ಯಾಯ 14

ಮಾಂಡಲೆಯಲ್ಲಿ

ಬರ್ಮಾದ ದೊರೆ ಥೀಬಾ ೧೮೮೫ರ ಯುದ್ಧದಲ್ಲಿ ಸೋತನಂತರ ಆತನನ್ನು ತಿಲಕರ ಜನ್ಮಸ್ಥಳವಾದ ರತ್ನಗಿರಿಗೆ ಗಡೀಪಾರು ಮಾಡಲಾಗಿತ್ತು. ಇಪ್ಪತ್ಮೂರು ವರ್ಷಗಳ ನಂತರ, ಎರಡನೆಯ ಬಾರಿ ರಾಜದ್ರೋಹದ ಆಪಾದನೆಯ ಮೇಲೆ ಶಿಕ್ಷೆಗೆ ಗುರಿಯಾದ ತಿಲಕರನ್ನು ಥೀಬಾನ ರಾಜಧಾನಿ ಮಾಂಡಲೆಗೆ ಗಡೀಪಾರು ಮಾಡಲಾಯಿತು. ಈ ವಿನಿಮಯ ಅಕಸ್ಮಾತ್ತಾಗಿ ಆದದ್ದಿರಬಹುದು. ಆದರೆ ಅದರ ಐತಿಹಾಸಿಕ ಅಣಕ ಬ್ರಿಟಿಷ್ ಸರ್ಕಾರದ ಗಮನಕ್ಕೆ ಬರಲಿಲ್ಲವೆಂದೇ ತೋರುತ್ತದೆ. ಸೆಪ್ಟೆಂಬರ್ ೨೩, ೧೯೦೮ರಂದು ಬೆಳಿಗ್ಗೆ ಮಾಂಡಲೆಯ ಸೆಂಟ್ರಲ್ ಜೈಲಿನಲ್ಲಿ ಅವರ ಕೋಣೆಗೆ ಪೋಲೀಸ್ ಕಾವಲಿನಲ್ಲಿ ಕರೆದೊಯ್ಯುತ್ತಿದ್ದಾಗ ತಿಲಕರಿಗೆ ಈ ಅಂಶ ಹೊಳೆಯದಿರುವುದು ಸಾಧ್ಯವಿರಲಿಲ್ಲ. ಮಾಂಡಲೆಯಲ್ಲಿ ಕಾಲರಾ ರೋಗ ಹರಡಿದ್ದರಿಂದ ಮ್ಯೆಕ್ಟಿಲಾದಲ್ಲಿ ಅವರನ್ನು ಕೆಲವು ತಿಂಗಳು ಇಟ್ಟಿದ್ದರ ಹೊರತಾಗಿ ಮುಂದಿನ ಆರು ವರ್ಷಗಳನ್ನು ಅವರು ಅಲ್ಲಿ ಕೋಣೆಗೆಲ್ಲ ಒಬ್ಬರೇ ಖೈದಿಯಾಗಿ ಕಳೆಯಬೇಕಾಯಿತು.

ಅವರಿದ್ದ ಕೋಣೆ ೨೦ ಅಡಿ ಉದ್ದ ೧೨ ಅಡಿ ಅಗಲದ ಮರದ ಪಂಜರವಾಗಿತ್ತು. ತಿಲಕರು ಮೊದಲನೆಯ ಅಂತಸ್ತಿನಲ್ಲಿ ವಾಸವಾಗಿದ್ದರು ಹಾಗೂ ಕೆಳಗಡೆಯ ಭಾಗ ಅಡಿಗೆ ಮನೆ ಮತ್ತು ಸ್ನಾನ ಗೃಹವಾಗಿತ್ತು. ಈ ವಾಸಸ್ಥಳ ಮೊದಲಿಗೆ ಐರೋಪ್ಯ ಖೈದಿಗಳಿಗಾಗಿತ್ತು ಹಾಗೂ ಜೈಲಿನ ಮುಖ್ಯ ಭಾಗದಿಂದ ಪ್ರತ್ಯೇಕವಾಗಿತ್ತು. ಅವೆರಡರ ನಡುವೆ ಮರದ ಅಡ್ಡಗಟ್ಟೆ ಇತ್ತು. ದೀರ್ಘಕಾಲದ ಋತುವಾದ ಬೇಸಿಗೆಯಲ್ಲಿ ಬಿಸಿಲಿನ ತೀವ್ರ ಝಳದಿಂದಾಗಿ ಆ ಸ್ಥಳ ಕುಲುಮೆಯಂತಿರುತ್ತಿತ್ತು. ಮರದ ಹಲಗೆಗಳಿಂದ ಮಾಡಿದ್ದ ಕೋಣೆಯಲ್ಲಿ ಸೆಖೆ, ಬಿಸಿಲಿನ ಬೇಗೆಯ ಬವಣೆಯಿಂದ ರಕ್ಷಣೆ ಇರಲಿಲ್ಲ. ಚಳಿಗಾಲದಲ್ಲಿ ವಿಪರೀತ ಚಳಿಯಾಗುತ್ತಿತ್ತು ಹಾಗೂ ಕೊರೆಯುವ ಗಾಳಿಯನ್ನು ತಡೆಯಲು ಮರದ ಕಟ್ಟಡಕ್ಕೆ ಸಾಧ್ಯವಿರಲಿಲ್ಲ.

ಮಾಂಡಲೆಯಲ್ಲಿ ತಿಲಕರು ಎಷ್ಟು ಕಷ್ಟ ಪಡಬೇಕಾಯಿತೆಂದರೆ, ಅಂಡಮಾನ್ ದ್ವೀಪಗಳಿಗೆ ವರ್ಗಾಯಿಸುವಂತೆ ಸರ್ಕಾರಕ್ಕೆ ಅವರು ಅರ್ಜಿ ಹಾಕಿದರು. ಕಪ್ಪು ನೀರು (ಕಾಲಾ ಪಾನಿ) ಎಂದು ಆಗ ಅದರ ಬಗ್ಗೆ ಬಹಳ ಹೆದರಿಕೆ ಇತ್ತು. ಅಲ್ಲಿ ಕ್ರಾಂತಿಕಾರಿಗಳನ್ನು ಬಂಧನದಲ್ಲಿಡಲಾಗುತ್ತಿತ್ತು. ಅಂಡಮಾನ್ ದ್ವೀಪಗಳ ಚಳಿಯ ಹವೆ ತಮಗೆ ಹೆಚ್ಚು ಸೂಕ್ತವಾಗಿರುತ್ತದೆಂದೂ, ದೀರ್ಘಾವಧಿಯ ಖೈದಿಯಾಗಿರುವುದರಿಂದ ಅಲ್ಲಿ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆಂದೂ ಅವರು ನಂಬಿದ್ದರು. ಆದರೆ ಅವರ ಕೋರಿಕೆಯನ್ನು ನಿರಾಕರಿಸಲಾಯಿತು.

ಆ ಅಸಹನೀಯ ಕೋಣೆಯಲ್ಲಿ ಅವರನ್ನು ಬಿಟ್ಟ ಸೆಪ್ಟೆಂಬರ್‌ನ ಆ ಬೆಳಿಗ್ಗೆಯಂದು ತಿಲಕರ ಮನಸ್ಸಿನಲ್ಲಿ ಯಾವ ವಿಚಾರಗಳಿದ್ದವು? ಅವರ ಮನಸ್ಸು ಹಿಂದಿನದನ್ನು

ಮೆಲುಕು ಹಾಕುತ್ತಾ, ನ್ಯೂ ಇಂಗ್ಲಿಷ್ ಶಾಲೆಯನ್ನು ಸ್ಥಾಪಿಸಿದ ದಿನದಿಂದ ಬ್ರಿಟಿಷ್ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಿದ್ದಕ್ಕಾಗಿ ಆರು ವರ್ಷಗಳ ಗಡೀಪಾರು ಶಿಕ್ಷೆಗೆ ಗುರಿಯಾದ ರಾತ್ರಿಯವರೆಗೆ ನಡೆದ ಘಟನಾವಳಿಯನ್ನು ನೆನಪಿಗೆ ತಂದುಕೊಂಡಿತೇ ? ಇವೆರಡೂ ಘಟನೆಗಳ ನಡುವೆ ಅನೇಕ ಹೋರಾಟಗಳು, ಏಳುಬೀಳುಗಳು ನಡೆದವು. ಇವುಗಳಲ್ಲಿ ಪ್ರತಿಯೊಂದೂ ದೇಶಕ್ಕಾಗಿ ಅವರು ಸಲ್ಲಿಸಿದ ಸೇವೆಯ ಒಂದು ಸ್ಪಷ್ಟ ಭಾಗವಾಗಿತ್ತು. ಹಾಗೂ ಪ್ರತಿಯೊಂದೂ ಅವರ ಜೀವನದ ಒಂದು ಮೈಲಿಗಲ್ಲಾಗಿತ್ತು.

ಈಗ ಅವರ ಸಾರ್ವಜನಿಕ ಜೀವನ ಇದ್ದಕ್ಕಿದ್ದಂತೆ ಕೊನೆಗೊಂಡಿತು. ಅವರ ವೈಯಕ್ತಿಕ ಜೀವನವೂ ನಾಲ್ಕು ಗೋಡೆಗಳೊಳಗೆ ಸೀಮಿತವಾಗಿತ್ತು. ಅವುಗಳ ಕಬ್ಬಿಣದ ಸಲಾಕೆಗಳು ಅವರನ್ನು ಅಣಕಿಸುತ್ತಿದ್ದವು. ಅವರು ಕೇವಲ ಒಬ್ಬ ಖೈದಿಯಾಗಿದ್ದರು. ಅಪರಾಧಿಯಾಗಿದ್ದ ಅವರ ಮುಂದೆ "ಕಾಲ" ದೀರ್ಘವಾಗಿ ವ್ಯಾಪಿಸಿತ್ತು. ಇನ್ನು ಮುಂದೆ ಅವರ ಜೀವನ ತನ್ನದೇ ಅಕ್ಷದ ಸುತ್ತ ಸುತ್ತುತ್ತದೆ. ಜೈಲರನ ಭೇಟಿಗಳು ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಬಂಧುಗಳೊಡನೆ ಸಂದರ್ಶನವನ್ನು ಬಿಟ್ಟರೆ ಇನ್ನೇನೂ ಅವರ ಜೀವನದ ಒಂಟಿತನದ ಬೇಸರವನ್ನು ಪರಿಹರಿಸುವುದಿಲ್ಲ ಅಥವಾ ಒಂದೇ ತೆರನ ದಿನಚರಿಯನ್ನು ಬದಲಾಯಿಸುವುದಿಲ್ಲ.

ಮಾಂಡಲೆಯಲ್ಲಿ ಒಂದು ವರ್ಷ ಕಳೆಯುವುದರೊಳಗಾಗಿ, ಶಿಕ್ಷೆಯ ಹೆಚ್ಚಿನ ಅವಧಿ ಇನ್ನೂ ಬಾಕಿಯಿದ್ದಾಗ, ಪ್ರಿವಿ ಕೌನ್ಸಿಲ್‌ಗೆ ಮನವಿ ಸಲ್ಲಿಸಲು ಇಂಗ್ಲೆಂಡ್‌ನಲ್ಲಿದ್ದ ತಿಲಕರ ಗೆಳೆಯ ಖಾಪರ್ಡೆ, ಷರತ್ತಿಗೊಳಪಟ್ಟು ತಿಲಕರಿಗೆ ಬಿಡುಗಡೆಯಾಗುವ ಸಾಧ್ಯತೆಯ ಬಗ್ಗೆ ಅವರಿಗೆ ಪತ್ರ ಬರೆದರು. ತಿಲಕರ ಚೇತನದ ಅಗ್ನಿಪರೀಕ್ಷೆಗೆ ಇದು ಅವಕಾಶವನ್ನು ಒದಗಿಸಿತು. ಅವರು ಖಾಪರ್ಡೆಯವರಿಗೆ ಬರೆದ ಪತ್ರ ಅವರ ಸ್ವಭಾವಕ್ಕೆ ಸಹಜವಾಗಿಯೇ ಇತ್ತು:

"ಯಾವುದೇ ಷರತ್ತುಗಳನ್ನು ಒಪ್ಪಿಕೊಳ್ಳುವ ಬಗ್ಗೆ ನನಗೇನೆನಿಸುತ್ತದೆ ಎಂಬುದನ್ನು ನಿಮಗೆ ತಿಳಿಸುತ್ತೇನೆ. ಅವು ೧೮೯೮ರಲ್ಲಿ ನನ್ನ ಮುಂದಿಟ್ಟ ಷರತ್ತುಗಳೇ ಆಗಿದ್ದರೆ ಅವುಗಳನ್ನು ಒಪ್ಪಿಕೊಳ್ಳಲು ನಾನು ಹಿಂಜರಿಯುವುದಿಲ್ಲ. ಮೆರವಣಿಗೆಗಳು ಹಾಗೂ ಅಂತಹ ಇತರ ಗೌರವಗಳನ್ನು ನಾನು ಲೆಕ್ಕಿಸುವುದಿಲ್ಲ. ಸಂತೋಷದಿಂದ ನಾನು ಅವುಗಳನ್ನು ತೊರೆಯುತ್ತೇನೆ. ಆದರೆ ಒಮ್ಮೆ ಜೈಲಿನಿಂದ ಹೊರಬಿದ್ದರೆ ದೇಶದ ಕಾನೂನಿನ ಮೇರೆಗೆ ಪ್ರತಿ ಪ್ರಜೆಯೂ ಹೊಂದಿರುವ ಕಾರ್ಯ ಸ್ವಾತಂತ್ರ್ಯವನ್ನು ನಾನು ಹೊಂದಬೇಕು. ೧೮೯೮ರಲ್ಲಿ ಹಾಕಿದ ಷರತ್ತುಗಳಲ್ಲಿ ಈ ಸ್ವಾತಂತ್ರ್ಯವನ್ನು ನನಗೆ ಕೊಡಲಾಗಿತ್ತು. ಆದರೆ ಅದೇ ಷರತ್ತುಗಳನ್ನು ಈಗ ನನ್ನ ಮುಂದಿಡಲಾಗುವುದು ಎಂದು ನನಗೆ ಕಾಣುವುದಿಲ್ಲ. ಷರತ್ತುಗಳನ್ನು ಮುಂದಿಟ್ಟರೂ, ಅವು ಇನ್ನಷ್ಟು ಕಠಿಣವಾಗಿರುತ್ತವೆ ಹಾಗೂ ಅವುಗಳನ್ನು ನಾನು ಹೇಗೆ ಒಪ್ಪಿಕೊಳ್ಳಬಲ್ಲೆ ಎಂಬುದು ನನಗೆ ಕಾಣುತ್ತಿಲ್ಲ. ನಾನು ನನ್ನ ಶಿಕ್ಷೆಯಲ್ಲಿ ಸುಮಾರು ಒಂದು ವರ್ಷವನ್ನು ಮುಗಿಸಿದ್ದೇನೆ ಹಾಗೂ ಇನ್ನೂ ಐದು ವರ್ಷಗಳ ನಂತರ ನಿಮ್ಮ ಮಧ್ಯೆ ಸ್ವತಂತ್ರ ಪ್ರಜೆಯಾಗಿರುತ್ತೇನೆ. ಪ್ರಜೆಯಾಗುವ ಆಶಯವನ್ನಾದರೂ ಹೊಂದಿದ್ದೇನೆ. ಎಂದೆಂದಿಗೂ ಯಾವುದೇ ಸಾರ್ವಜನಿಕ ಅಥವಾ ರಾಜಕೀಯ ಕಾರ್ಯಕ್ಕೆ ನನ್ನನ್ನು ನಾನೇ ಅಸಮರ್ಥನಾಗಿಸಿಕೊಂಡು, (ಷರತ್ತುಗಳನ್ನು ಒಪ್ಪಿಕೊಳ್ಳುವ

ಮೂಲಕ) ಈ ಅವಕಾಶವನ್ನು, ಅದು ಎಷ್ಟೇ ದೂರದಲ್ಲಿದ್ದರೂ, ನಾನು ಕಳೆದು ಕೊಳ್ಳಬೇಕೆಂದು ನೀವು ಭಾವಿಸಿದ್ದೀರಾ?

ನನಗೆ ಈಗಾಗಲೇ ೫೨ ವರ್ಷ ವಯಸ್ಸು. ಒಬ್ಬ ಮನುಷ್ಯನ ಆನುವಂಶಿಕತೆ ಮತ್ತು ಸಾಧಾರಣ ಆರೋಗ್ಯ ಅವನ ಆಯುಷ್ಯವನ್ನು ಸೂಚಿಸುವುದಿದ್ದರೆ, ನಾನು ಹೆಚ್ಚೆಂದರೆ ಹತ್ತು ವರ್ಷಗಳಿಗೂ ಅಧಿಕ ಕಾಲ ಬದುಕಿರುತ್ತೇನೆ ಎಂದು ನಾನು ತಿಳಿದಿಲ್ಲ. ಈ ಪೈಕಿ ಅನಿರ್ಬಂಧಿತ ಸಾರ್ವಜನಿಕ ಕೆಲಸಕ್ಕೆ ಐದುವರ್ಷಗಳು ಉಳಿಯುತ್ತವೆ ಎಂದಿಟ್ಟು ಕೊಳ್ಳೋಣ. ನೀವು ತಿಳಿಸಿರುವಂತಹ ಯಾವುದೇ ಷರತ್ತನ್ನು ನಾನು ಒಪ್ಪಿಕೊಂಡರೆ, ನಾನು ಸತ್ತ ಮನುಷ್ಯನಂತೆ ಬದುಕಿರಬೇಕು. ಅಂತಹ ಬಾಳು ಬಾಳುವುದು ನನಗಿಷ್ಟವಿಲ್ಲ ಎಂದು ಹೇಳಿದರೆ ಬಹಳ ಕಡಿಮೆ ಹೇಳಿದಂತೆ. ನನ್ನ ಚಟುವಟಿಕೆ ರಾಜಕೀಯಕ್ಕಷ್ಟೆ ಸೀಮಿತ ವಾಗಿಲ್ಲ ಎಂಬುದು ನಿಜ ಹಾಗೂ ರಾಜಕೀಯದಲ್ಲಿ ಭಾಗವಹಿಸುವುದಕ್ಕೆ ನನಗೆ ಅನುಮತಿ ಕೊಡದೆ ಹೋದರೂ ಸಾಹಿತ್ಯಿಕ ಕೆಲಸ ನಾನು ಮಾಡಬಹುದು. ಈ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ಹಾಗೂ ಇದು ನನ್ನ ಪೂರ್ವಜೀವನಕ್ಕೆ ಅಸ ಮಂಜಸವಾಗಿದೆ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಹಾಗೆ ಮಾಡಿದ್ದೇ ಆದರೆ ನನ್ನ ಜೀವನದ ಕೆಲಸವನ್ನೆಲ್ಲಾ ನಾನು ನಿರರ್ಥಕಗೊಳಿಸುವಂತಾಗುತ್ತದೆ. ಕೇವಲ ನನ್ನ ಕುಟುಂ ಬಕ್ಕೇ ಆಗಲಿ ಅಥವಾ ನನಗಾಗಿಯೇ ಆಗಲಿ ನಾನೆಂದೂ ಬದುಕಿಲ್ಲ; ಆದರೆ ಜನತೆಗೆ ನನ್ನ ಕರ್ತವ್ಯ ಸಲ್ಲಿಸಲು ಸದಾ ಪ್ರಯತ್ನಿಸಿದ್ದೇನೆ ಎಂಬುದು ನಿಮಗೆ ಗೊತ್ತು. ಐದು ವರ್ಷಗಳ ವೈಯಕ್ತಿಕ ಸುಖಕ್ಕಾಗಿ ಸಾರ್ವಜನಿಕ ಜೀವನದಿಂದ ನಾನು ಮರೆಯಾಗುವುದರ ನೈತಿಕ ಪರಿಣಾಮ ಎಂತಹುದಿರಬಹುದು ಎಂಬ ಬಗ್ಗೆ ನೀವೇ ತೀರ್ಮಾನಿಸಿ."

ಬುದ್ಧಿಗೆ ಅದೇ ತನ್ನ ಸ್ಥಳ ಮತ್ತು ಅಲ್ಲೇ ಅದು ನರಕವನ್ನು ಸ್ವರ್ಗವನ್ನಾಗಿಸ ಬಹುದು. ತಿಲಕರಂತಹ ಜಿತೇಂದ್ರಿಯ ಮನಸ್ಸಿಗೆ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಮತ್ತು ಅತ್ಯುತ್ತಮವಾದ ರೀತಿಯಲ್ಲಿ ಅವುಗಳನ್ನು ಬಳಸಿಕೊಳ್ಳಲು ಬಹಳ ಸಮಯ ಹಿಡಿಸಿರ ಲಿಕ್ಕಿಲ್ಲ. ವ್ಯರ್ಥ ವಿಷಾದಗಳಿಗಾಗಲೀ, ಪಲಾಯನವಾದಿ ವಿಚಾರಗಳಿಗಾಗಲೀ ಅವರ ಮನಸ್ಸು ಎಡೆಕೊಡಲಿಲ್ಲ. ಜೈಲಿನಲ್ಲಿ ದೊರೆಯುವ ಕೊನೆಯಿಲ್ಲದ ವಿರಾಮದಲ್ಲಿ ಲಹರಿಗಳನ್ನು, ನಿಲುವುಗಳನ್ನು ಬೆಳೆಸುವ ಗೋಜಿಗೂ ಅವರು ಹೋಗಲಿಲ್ಲ. ಅವರದು ತೀವ್ರವಾದ ಶಿಸ್ತಿಗೊಳಪಟ್ಟ ಮನಸ್ಸಾಗಿತ್ತು. ಹೋಗಿ ಬರುವ ದುಃಖಗಳು, ಸಂತೋಷ ಗಳಿಂದ ಅವರ ಮೇಲೆ ಯಾವ ಪರಿಣಾಮವೂ ಆಗುತ್ತಿರಲಿಲ್ಲ.

ತಿಲಕರು ಓದುವ ಮತ್ತು ಆಲೋಚನೆ ಮಾಡುವ ದಿನಚರಿಯನ್ನು ಶೀಘ್ರವಾಗಿ ರೂಢಿಸಿಕೊಂಡರು. ಕೆಲವೊಮ್ಮೆ ಒಂಟಿತನ ಅವರಿಗೆ ಬೇಸರವನ್ನುಂಟುಮಾಡಿರಬೇಕು. ಹುಮ್ಮಸ್ಸಿನ ಈ ಮನುಷ್ಯ ಓದುವುದರಲ್ಲಿ, ಹೊಸ ಭಾಷೆಗಳನ್ನು ಕಲಿಯುವುದರಲ್ಲಿ ಮತ್ತು ಗೀತೆಯ ನಿಜವಾದ ಸಂದೇಶದ ಬಗ್ಗೆ ವಿಚಾರ ಮಾಡುವುದರಲ್ಲಿ ಮಗ್ನರಾದರು.

೧೯೧೪ ರಲ್ಲಿ ಬಿಡುಗಡೆಯಾದ ನಂತರ ತಿಲಕರು ಸಂದರ್ಶನವೊಂದರಲ್ಲಿ ಹೀಗೆ ಹೇಳಿ ದರು: "ಪುಸ್ತಕಗಳನ್ನು ಓದಲು ನನಗೆ ಅವಕಾಶ ಕೊಡದೆ ಇದ್ದಿದ್ದರೆ ನನಗೇನಾಗುತ್ತಿತ್ತು ಎಂದು ನನಗೆ ತಿಳಿದಿಲ್ಲ, ಏಕೆಂದರೆ ನನ್ನ ಜೈಲುವಾಸದ ಅವಧಿಯಲ್ಲಿ ಕೋಣೆ ಮತ್ತು ಕಾಂಪೌಂಡೇ ನನ್ನ ಪಾಲಿಗೆ ಜಗತ್ತಾಗಿತ್ತು. ಕಾಂಪೌಂಟಿನ ಹೊರಗೆ ಶೂನ್ಯವಾಗಿತ್ತು.

ಪುಸ್ತಕಗಳ ವಿಷಯದಲ್ಲೂ ಮೂರು ಪ್ರತ್ಯೇಕ ಆಜ್ಞೆಗಳನ್ನು ಹೊರಡಿಸಲಾಗಿತ್ತು. ಕೆಲವೊಮ್ಮೆ ಒಂದಕ್ಕೊಂದು ವಿರುದ್ಧವಾದ ಆಜ್ಞೆಗಳನ್ನು ಹೊರಡಿಸಲಾಗಿತ್ತು. ಮೊದಲಿಗೆ ನನಗೆ ಬೇಕಾದ ಯಾವುದೇ ಪುಸ್ತಕಗಳನ್ನು ಜೈಲು ಅಧಿಕಾರಿಗಳು ಪರಿಶೀಲಿಸಿದ ನಂತರ ನನಗೆ ಕೊಡಲಾಯಿತು. ಪ್ರಸಕ್ತ ರಾಜಕೀಯದ ಬಗ್ಗೆ ಯಾವುದೇ ಪುಸ್ತಕಗಳನ್ನು ನನಗೆ ಕೊಡಲಿಲ್ಲ. ಹಾಗೆಯೇ ಭಾರತದಲ್ಲಿ ಅಥವಾ ಇಂಗ್ಲೆಂಡಿನಲ್ಲಿ ಪ್ರಕಟವಾದ ವೃತ್ತಪತ್ರಿಕೆಗಳನ್ನಾಗಲಿ, ನಿಯತಕಾಲಿಕಗಳನ್ನಾಗಲಿ ಕೊಡುವುದಕ್ಕೆ ಅನುಮತಿ ಇರಲಿಲ್ಲ. ಸ್ವಲ್ಪ ಕಾಲದ ನಂತರ, ಎಲ್ಲ ಪುಸ್ತಕಗಳು ನನ್ನ ಬಳಿಯೆ ಉಳಿಯಲು ಅವಕಾಶ ಕೊಟ್ಟಿದ್ದ ಆಜ್ಞೆಯನ್ನು ಬದಲಾಯಿಸಲಾಯಿತು. ಹಾಗೂ ಒಂದು ಸಲಕ್ಕೆ ನಾಲ್ಕು ಪುಸ್ತಕಗಳನ್ನು ಮಾತ್ರ ಇಟ್ಟುಕೊಳ್ಳಲು ನನಗೆ ಅವಕಾಶ ಕೊಡಲಾಯಿತು. ಈ ಬಗ್ಗೆ ನಾನು ಬರ್ಮಾ ಸರಕಾರಕ್ಕೆ ದೂರಿತ್ತಾಗ ನನಗೆ ಬೇಕಾದ ಎಲ್ಲ ಪುಸ್ತಕಗಳನ್ನು ನನ್ನೊಂದಿಗೆ ಇಟ್ಟುಕೊಳ್ಳಲು ಪುನಃ ಅವಕಾಶ ಕೊಡಲಾಯಿತು. ಆಗ ನಾನು ನನ್ನ 'ಗೀತಾ-ರಹಸ್ಯ' ಪುಸ್ತಕವನ್ನು ಬರೆಯುತ್ತಿದ್ದೆ. ನನ್ನ ಬಿಡುಗಡೆಯಾದಾಗ ನನ್ನ ಬಳಿ ಸುಮಾರು ನಾಲ್ಕುನೂರು ಪುಸ್ತಕಗಳಿದ್ದವು."

ತಿಲಕರು ಅಪ್ರತಿಮ ಓದುಗರಾಗಿದ್ದರು. ಆದರೆ ಅವರ ಆಸಕ್ತಿ ಮೂಲತಃ ತತ್ವಜ್ಞಾನದ ಮೇಲಿತ್ತು. ಅವರ ಸರ್ವೋತ್ಕೃಷ್ಟ ಕೃತಿಗೆ ಬೇಕಾದ ಪರಾಮರ್ಶೆಯ ಪುಸ್ತಕಗಳನ್ನೇ ಅಲ್ಲದೆ ಇತರ ಪುಸ್ತಕಗಳನ್ನೂ ಕಳಿಸಬೇಕೆಂದು ಅವರು ಮನೆಗೆ ಬರೆದ ಪ್ರತಿಯೊಂದು ಪತ್ರದಲ್ಲೂ ಕೇಳುತ್ತಿದ್ದರು. ಈ ಪೈಕಿ ಸಂಸ್ಕೃತದ ಮಹಾಗ್ರಂಥಗಳು, ಕ್ರೈಸ್ತ ಧರ್ಮ ಮತ್ತು ಬೌದ್ಧ ಧರ್ಮದ ಮೇಲಿನ ಪುಸ್ತಕಗಳು ಹಾಗೂ ಕೊರಾನ್ ಮತ್ತು ಕ್ಯಾಂಟ್, ಹೆಗೆಲ್. ಬಟ್ಲರ್. ಲಾಕ್, ಡಾರ್ವಿನ್. ಹ್ಯೂಮ್ ರೂಸ್ಸೊ. ವೋಲ್ಟೇರ್, ಡೈಡೆರಾಟ್ ಮತ್ತು ಮ್ಯಾಕ್ಸ್ ಮ್ಯುಲ್ಲರ್ ಅವರುಗಳು ಬರೆದ ಪುಸ್ತಕಗಳು ಸೇರಿದ್ದವು. ತಿಲಕರ ಪುಸ್ತಕ ಪ್ರಿಯತೆ ಎಷ್ಟಿತ್ತೆಂದರೆ, ಅವರು ತಮ್ಮ ಮನೆಯ ಗ್ರಂಥಾಲಯದ ಬಗ್ಗೆ ಕಾತುರರಾಗಿದ್ದರು ಹಾಗೂ ಅದರ ಸರಿಯಾದ ನಿರ್ವಹಣೆಯ ಬಗ್ಗೆ ಮತ್ತು ವಿಚಾರ ಮಾಡದೇ ಎರವಲು ಕೊಡುವ ಬಗ್ಗೆ ಎಚ್ಚರಿಕೆಗಳನ್ನು ನೀಡುವ ಸೂಚನೆಗಳನ್ನು ಆಗಾಗ ಕಳಿಸುತ್ತಿದ್ದರು. ಅವರಿಗೆ ಬೇಕಾದ ಒಂದು ನಿರ್ದಿಷ್ಟ ಪುಸ್ತಕವನ್ನು ಯಾವ ಕಪಾಟಿನ ಯಾವ ಶೆಲ್ಫ್‌ನ ಮೇಲೆ ಕಾಣಬಹುದು ಎಂಬುದನ್ನು ಅವರು ಸ್ಪಷ್ಟವಾಗಿ ತಿಳಿಸುತ್ತಿದ್ದರು.

ಮಾಂಡಲೆಯಲ್ಲಿದ್ದಾಗ ತಿಲಕರು ಪಾಲಿ, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಅಭ್ಯಾಸ ಮಾಡಿದರು. ವೀಬರ್‌ನ ಮೂಲಕೃತಿಯನ್ನು ಗಂಟೆಗೆ ಐದು ಪುಟಗಳ ಅದ್ಭುತ ವೇಗದಲ್ಲಿ ಓದುವುದಕ್ಕೆ ಸಾಧ್ಯವಾಗುವಷ್ಟು ಜರ್ಮನ್ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದಾಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ! "ನನ್ನ ಬಂಧನದ ಸ್ವಲ್ಪ ಭಾಗವನ್ನು ಒಳ್ಳೆಯ ಉದ್ದೇಶಕ್ಕೆ ನಾನು ಬಳಸಿದ್ದೇನೆ ಎಂದು ನಿಜವಾಗಿಯೂ ಅನಿಸುತ್ತಿದೆ" ಎಂದು ಅವರು ಸಂತೋಷಪಟ್ಟರು. ಫ್ರೆಂಚ್ ಭಾಷೆ ಅವರಿಗೆ ಹೆಚ್ಚು ಸುಲಭವಾಗಿ ಕಂಡಿತು. ಅದರ ನಾಸಿಕ ಉಚ್ಚಾರದ ಬಗ್ಗೆ ಅವರಿಗೆ ತಮಾಷೆಯೆನಿಸಿದಂತೆ ಕಾಣುತ್ತದೆ. "ಅದು ರತ್ನಗಿರಿಯ ನಮ್ಮ ಜನರ ಉಚ್ಚಾರದಂತೆಯೇ ಇದೆ" ಎಂದು ಹೇಳಿದರು. ತಿಲಕರು ಸಂಸ್ಕೃತದ ವಿದ್ವಾಂಸರಾಗಿದ್ದರಿಂದ ಅವರಿಗೆ ಪಾಲಿ ಸುಲಭವಾಗಿತ್ತು.

ಮಾಂಡಲೆಯಲ್ಲಿ ತಿಲಕರು ಕಳೆದ ಜೀವನದ ಬಗ್ಗೆ ತಿಳಿಯಲು ಅವರು ಅಲ್ಲಿಂದ ಬರೆದ

ಪತ್ರಗಳನ್ನು ಹಾಗೂ ಬಿಡುಗಡೆಯ ನಂತರ ನೀಡಿದ ಸಂದರ್ಶನವನ್ನು ನಾವು ಬಹುತೇಕ ಅವಲಂಬಿಸಬೇಕು. ಪತ್ರವ್ಯವಹಾರ ಕಟ್ಟುನಿಟ್ಟಾಗಿ ವೈಯಕ್ತಿಕ ಮತ್ತು ಕುಟುಂಬ ವ್ಯವಹಾರಗಳಿಗೆ ಮಾತ್ರ ಸಂಬಂಧಿಸಿರಬೇಕು ಎಂಬ ಷರತ್ತಿನ ಮೇಲೆ ಪ್ರತಿ ತಿಂಗಳೂ ಒಂದು ಪತ್ರವನ್ನು ಬರೆಯುವುದಕ್ಕೆ ಹಾಗೂ ಒಂದು ಪತ್ರವನ್ನು ಪಡೆಯುವುದಕ್ಕೆ ಅವರಿಗೆ ಅವಕಾಶವಿತ್ತು. ಸತಾರಾ ಜಿಲ್ಲೆಗೆ ಸೇರಿದ ಖೈದಿ ವಿ.ಆರ್.ಕುಲಕರ್ಣಿಯನ್ನು ಸುಮಾರು ಮೂರು ವರ್ಷಗಳ ಕಾಲ ಅವರ ಅಡಿಗೆಯವನನ್ನಾಗಿ ನೇಮಿಸಲಾಗಿತ್ತು. ಆತ ಇಟ್ಟ ದಾಖಲೆಯೂ ಇದೆ. "ನೀನು ಖೈದಿಯಾಗಿರುವಂತೆ ನಾನೂ ಖೈದಿ. ನೀನು ನನ್ನ ಬಗ್ಗೆ ಇಷ್ಟು ಕಾಳಜಿ ವಹಿಸಬಾರದು" ಎಂದು ತಿಲಕರು ಕುಲಕರ್ಣಿಗೆ ಹೇಳುತ್ತಿದ್ದುದುಂಟು. ತಿಲಕರನ್ನು "ಮಹಾರಾಜ್" ಎಂದು ಕರೆಯುತ್ತಿದ್ದ ಕುಲಕರ್ಣಿಗೆ ಅವರ ಬಗ್ಗೆ ಅಪಾರವಾದ ಭಕ್ತಿ ಇತ್ತು. "ನನಗೆ ಅನೇಕ ಸಲ ಖಾಹಿಲೆಯಾಗಿತ್ತು. ಆದರೆ ಮಹಾರಾಜ್ ನನ್ನನ್ನು ನನ್ನ ತಂದೆ ನೋಡಿಕೊಳ್ಳುವಂತೆಯೇ ನೋಡಿಕೊಂಡರು ಹಾಗೂ ನನ್ನ ಕಾಳಜಿ ವಹಿಸಿದರು. ಜೈಲಿನ ಆಸ್ಪತ್ರೆಗೆ ನನ್ನನ್ನು ಕಳಿಸಲು ಅಧಿಕಾರಿಗಳು ಇಚ್ಛಿಸಿದರೂ, ಅವರು ನನ್ನನ್ನು ತಮ್ಮ ಬಳಿಯೇ ಇಟ್ಟುಕೊಂಡು ಶುಶ್ರೂಷೆ ಮಾಡಿದರು. ಅವರು ನನಗಾಗಿ ಅಡಿಗೆಯನ್ನು ಮಾಡಿದರು ಹಾಗೂ ನನ್ನ ಊಟವಾದ ನಂತರವೇ ತಾವು ಊಟ ಮಾಡುತ್ತಿದ್ದರು."

ತಿಲಕರು ಗುಬ್ಬಚ್ಚಿಗಳಿಗೆ ಹೇಗೆ ಆಹಾರ ಕೊಡುತ್ತಿದ್ದರೆಂದು ಕುಲಕರ್ಣಿ ತಿಳಿಸಿದ್ದಾನೆ. ಅವು ತಿಲಕರೊಂದಿಗೆ ಎಷ್ಟು ಹೊಂದಿಕೊಂಡಿದ್ದುವೆಂದರೆ, ಅವರ ಕೋಣೆಯಲ್ಲೆಲ್ಲಾ ಹಾರಾಡುತ್ತಿದ್ದುವು, ಅವರ ಮೇಜಿನ ಮೇಲೆ ಕೂಡುತ್ತಿದ್ದವು, ಹಾಗೂ ಅವರು ಊಟಕ್ಕೆ ಕುಳಿತಾಗ ಅವರ ಭುಜಗಳ ಮೇಲೂ ಕೂಡುತ್ತಿದ್ದವು. ಒಂದು ದಿನ ತಿಲಕರ ಕೋಣೆಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟ ಜೈಲ್ ಸೂಪರಿಂಟೆಂಡೆಂಟ್‌ಗೆ ಅವರ ಸುತ್ತಲೂ ಹಕ್ಕಿಗಳು ಇದ್ದುದನ್ನು ಕಂಡು ಬಹಳ ಆಶ್ಚರ್ಯವಾಯಿತು. ಆತ ಬೆರಗಾಗಿ, "ಅವು ನಿಮಗೆ ಹೆದರುತ್ತಲೇ ಇಲ್ಲವಲ್ಲ, ಏಕೆ ಮಿಸ್ಟರ್ ತಿಲಕ್?" ಎಂದು ಕೇಳಿದರು. "ನನಗೆ ತಿಳಿಯದು, ಆದರೆ ನಾನು ಅವುಗಳಿಗೆ ತೊಂದರೆ ಮಾಡುವುದಿಲ್ಲ ಅಥವಾ ಬೆದರಿಸಿ ಓಡಿಸುವುದಿಲ್ಲ ಎಂಬುದೇ ಬಹುಶಃ ಇದಕ್ಕೆ ಕಾರಣವಿರಬೇಕು. ಸಾಧ್ಯವಿದ್ದಾಗ ನಾನು ಅವುಗಳಿಗೆ ಆಹಾರ ಹಾಕುತ್ತೇನೆ. ಎಷ್ಟೇ ಆದರೂ ಗುಬ್ಬಚ್ಚಿಗಳು ಮುಗ್ಧ ಹಕ್ಕಿಗಳು. ಆದರೆ ಹಾವುಗಳಂತಹ ವಿಷಪೂರಿತ ಜೀವಿಗಳ ವಿರುದ್ಧವೂ ನನಗೆ ವೈರವಿಲ್ಲ ಹಾಗೂ ಅವುಗಳೂ ಸಹ ನನ್ನನ್ನು ಕಂಡು ಹೆದರುವುದಿಲ್ಲ. ದೇವರ ಯಾವುದೇ ಸೃಷ್ಟಿಯನ್ನು ಕುರಿತು ನನ್ನ ಹೃದಯ ದ್ವೇಷವನ್ನೂ ಹೊಂದಿಲ್ಲ, ಭಯವನ್ನೂ ಹೊಂದಿಲ್ಲ."

ಮಾಂಡಲೆಯಲ್ಲಿ ತಿಲಕರು ಕಳೆದ ಆರು ವರ್ಷಗಳಲ್ಲಿ ಅವರ ಮನಸ್ಸಿನಲ್ಲುಂಟಾದ ವಿಚಾರಗಳು, ಭಾವನೆಗಳು, ದುಃಖಗಳು, ಆಸೆಗಳನ್ನು ತಿಂಗಳಿಗೊಮ್ಮೆ ಅವರು ಬರೆಯುತ್ತಿದ್ದ ಪತ್ರಗಳು ಪ್ರತಿಬಿಂಬಿಸುತ್ತವೆ. ತಿಲಕರ ಜೀವನದ ಬಹುಭಾಗ ಸಾರ್ವಜನಿಕ ನೋಟಕ್ಕೆ ಒಳಗಾಗಿತ್ತು. ಅವರ ಕೌಟುಂಬಿಕ ಜೀವನದ ಬಗ್ಗೆ ತಿಳಿದಿರುವುದು ಸ್ವಲ್ಪವೇ. ಅವರು ಭಾವನಾತ್ಮಕ ಜೀವಿಯಲ್ಲ ಹಾಗೂ ತೀರಾ ವ್ರತಶೀಲ ವ್ಯಕ್ತಿ ಎಂದು ಸಾಮಾನ್ಯವಾಗಿ ಭಾವಿಸಲಾಗಿತ್ತು. ಆದರೆ ಅವರ ಪತ್ರಗಳು (ಎನ್.ಸಿ.ಕೇಳ್ಕರ್ ಈ ಪೈಕಿ ಅರುವತ್ತು ಪತ್ರಗಳನ್ನು ತಿಲಕರ ಜೀವನಚರಿತ್ರೆಯಲ್ಲಿ ಪ್ರಕಟಿಸಿದ್ದಾರೆ) ಈ ಭಾವನೆಗಳನ್ನು ಸುಳ್ಳಾಗಿ

ಸಿವೆ. ತಿಲಕರು ನಿಷ್ಠಾವಂತ ಗಂಡ, ಪ್ರೀತಿಪಾತ್ರ ತಂದೆ ಮತ್ತು ಆತ್ಮೀಯ ಗೆಳೆಯರಾಗಿದ್ದುದನ್ನು ಈ ಪತ್ರಗಳು ತೋರಿಸುತ್ತವೆ. ಅವರ ಹೆಂಡತಿಗೂ ಮಧುಮೇಹರೋಗವಿತ್ತು ಹಾಗೂ ಪ್ರತಿಯೊಂದು ಪತ್ರದಲ್ಲೂ ತಿಲಕರು ಆಕೆಯ ಆರೋಗ್ಯದ ಬಗ್ಗೆ ಕಳಕಳಿಯಿಂದ ವಿಚಾರಿಸುತ್ತಿದ್ದರು ಮತ್ತು ಅನೇಕ ಚಿಕಿತ್ಸೆಗಳನ್ನು ಸೂಚಿಸುತ್ತಿದ್ದರು. ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕೆಂದು ತಮ್ಮಾಕೆಯನ್ನು ಕೇಳಿಕೊಳ್ಳುತ್ತಿದ್ದರು ಹಾಗೂ ಆಕೆಯ ಮನಸ್ಸನ್ನು ಉಲ್ಲಾಸಗೊಳಿಸಲು ತಮಗೆ ಬೇಗ ಬಿಡುಗಡೆಯಾಗಬಹುದೆಂಬ ಆಸೆಯನ್ನು ವ್ಯಕ್ತ ಮಾಡಿದ್ದರು. ಆದರೆ ಒಬ್ಬರನ್ನೊಬ್ಬರು ಪುನಃ ನೋಡುವುದಿಲ್ಲವೆಂಬ ಅತೀಂದ್ರಿಯ ಇಂಗಿತ ಇಬ್ಬರಲ್ಲೂ ಉಂಟಾಗಿತ್ತೆಂದು ತೋರುತ್ತದೆ. ಜೂನ್ ೭, ೧೯೧೨ ರಂದು ಆಕೆ ತೀರಿಕೊಂಡ ಸುದ್ದಿಯನ್ನು ತಿಳಿಸುವ ತಂತಿ ತಿಲಕರಿಗೆ ಮುಟ್ಟಿದಾಗ. ಅವರ ದುಃಖದ ಕಟ್ಟೆ ಒಡೆಯಿತು. ೪೧ ವರ್ಷಗಳ ಸಹಬಾಳ್ವೆ ದುರಂತದ ಪರಿಸ್ಥಿತಿಗಳಲ್ಲಿ ಕೊನೆಗೊಂಡಿತ್ತು. ಅವರು ತಮ್ಮ ಸೋದರಿಯ ಮಗನಿಗೆ ಹೀಗೆ ಪತ್ರ ಬರೆದರು:

“ನಿನ್ನ ತಂತಿ ಒಂದು ದೊಡ್ಡ, ಭಾರವಾದ ಪೆಟ್ಟು ಕೊಟ್ಟಿತು. ನನ್ನ ದುರಾದೃಷ್ಟಗಳನ್ನು ಶಾಂತಿಯಿಂದ ಎದುರಿಸುವುದು ನನಗೆ ರೂಢಿಯಾಗಿದೆ. ಆದರೆ ಈ ಏಟು ನನ್ನನ್ನು ಸಾಕಷ್ಟು ಅಲುಗಾಡಿಸಿತು ಎಂದು ನಾನು ಒಪ್ಪಿಕೊಳ್ಳಬೇಕು. ನಮ್ಮಲ್ಲಿ ಬೇರೂರಿರುವ ನಂಬಿಕೆಗಳ ಪ್ರಕಾರ, ಗಂಡನಿಗೆ ಮೊದಲು ಹೆಂಡತಿ ಸಾಯುವುದು ಅನಪೇಕ್ಷಣೀಯವಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಆಕೆಯಿಂದ ನಾನು ಅನಿವಾರ್ಯವಾಗಿ ದೂರವಿರಲೇಬೇಕಾಗಿ ಬಂದದ್ದು ನನ್ನನ್ನು ತುಂಬಾ ದುಃಖಿತನನ್ನಾಗಿ ಮಾಡಿದೆ. ಆದರೆ ಇದು ಹೀಗಾಗಬೇಕಾಗಿತ್ತು. ನನ್ನ ಚಿಂತೆಯ ವಿಚಾರಗಳಿಂದ ನಿನಗೆ ಮತ್ತಷ್ಟು ತೊಂದರೆ ಮಾಡುವುದಿಲ್ಲ. ನನ್ನ ಜೀವನದ ಒಂದು ಅಧ್ಯಾಯ ಮುಗಿಯಿತು ಹಾಗೂ ಇನ್ನೊಂದು ಅಧ್ಯಾಯ ಮುಗಿಯುವುದಕ್ಕೂ ಬಹಳ ಸಮಯ ಹಿಡಿಸುವುದಿಲ್ಲ ಎಂದು ನನಗೆನಿಸುತ್ತದೆ. ಆಕೆಯ ಅಂತಿಮ ಸಂಸ್ಕಾರಗಳು ಸಾಂಗವಾಗಿ ನೆರವೇರಲಿ ಹಾಗೂ ಆಕೆಯ ಚಿತಾಭಸ್ಮವನ್ನು ಅಲಹಾಬಾದ್‌ಗೆ ಅಥವಾ ಆಕೆ ಬಯಸಿರಬಹುದಾದ ಇತರ ಯಾವ ಸ್ಥಳಕ್ಕಾದರೂ ಕಳಿಸು. ಆಕೆಯ ಕೊನೆಯ ಇಚ್ಛೆಗಳನ್ನು, ಅವುಗಳನ್ನು ಈಗಾಗಲೇ ನಡೆಸಿರದಿದ್ದಲ್ಲಿ, ಚಾಚೂ ತಪ್ಪದೆ ನಡೆಸು. ಆಕೆಯ ವಸ್ತುಗಳು ಮತ್ತು ಬೆಲೆಬಾಳುವ ಸಾಮಾಗ್ರಿಗಳನ್ನು ಒಂದು ಪಟ್ಟಿಮಾಡಿ. ನಾನು ಬರುವವರೆಗೂ ಅವುಗಳನ್ನು ಬೀಗ ಹಾಕಿಡು. ಮಾಥು ಮತ್ತು ದುರ್ಗಿ (ತಿಲಕರ ಹೆಣ್ಣು ಮಕ್ಕಳು) ಅಲ್ಲೇ ಇದ್ದಾರೆ ಎಂದು ನಾನು ನಂಬಿದ್ದೇನೆ. ಅವರೂ, ರಾಮಭಾವ್ ಮತ್ತು ಬಾಪು (ತಿಲಕರ ಗಂಡು ಮಕ್ಕಳು) ಮಾತೃವಿಯೋಗದ ಬಗ್ಗೆ ಅದರಲ್ಲೂ ನಾನು ದೂರವಿರುವ ಈ ಸಮಯದಲ್ಲಿ ಬಹಳ ದುಃಖಪಟ್ಟಿರಬೇಕು. ಅವರಿಬ್ಬರಿಗಿಂತಲೂ ಸಣ್ಣ ವಯಸ್ಸಿನವನಾಗಿದ್ದಾಗ ನಾನು ಅನಾಥನಾಗಿದ್ದೆ ಎಂಬುದನ್ನು ಅವರು ನೆನಪು ಮಾಡಿಕೊಳ್ಳಲಿ. ದುರಾದೃಷ್ಟ ಮತ್ತಷ್ಟು ಸ್ವಾವಲಂಬಿಗಳಾಗುವುದಕ್ಕೆ ನಮಗೆ ಬಲ ಕೊಡಬೇಕು.”

ತಿಲಕರು ತಮ್ಮ ಅನೇಕ ಪತ್ರಗಳಲ್ಲಿ ತಮ್ಮ ಗಂಡು ಮಕ್ಕಳ ಹಾಗೂ ಬಾಬಾ ಮಹಾರಾಜನ ದತ್ತುಮಗ ಜಗನ್ನಾಥ ಮಹಾರಾಜನ ಶಿಕ್ಷಣದ ಬಗ್ಗೆ ವಿಚಾರಿಸಿದ್ದಾರೆ. ಅವರ ಶಿಕ್ಷಣದ ಬಗ್ಗೆ ಆಗಾಗ ಸಲಹೆಗಳನ್ನು ಮಾಡಿದ್ದಾರೆ. ತಾಯ್ ಮಹಾರಾಜ್ ಪ್ರಕರ

ಣದಲ್ಲಿ ಪ್ರಿವಿ ಕೌನ್ಸಿಲ್‌ಗೆ ಮಾಡಿಕೊಂಡಿದ್ದ ಮನವಿಯ ಆಗುಹೋಗುಗಳ ಬಗ್ಗೆ ವಿವರವಾದ ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ತಾನು ಸೋತಿದ್ದ ಕಾನೂನು ಪ್ರಕರಣವೊಂದರ ಬಗ್ಗೆ ತಿಲಕರನ್ನು ಹೇಗೋ ಮೊದಲು ಸಂಪರ್ಕಿಸಿದ್ದ ಕುರುಬನೊಬ್ಬನಿಗೆ ಸಲಹೆಮಾಡಲೂ ಅವರಿಗೆ ಸಮಯ ದೊರೆತಿದೆ: "ಇಷ್ಟು ದೂರದಿಂದ ಆ ಬಡಪಾಯಿಗೆ ನಾನು ಹೇಗೆ ಸಹಾಯ ಮಾಡಲಿ? ಅಮರಾವತಿಯಲ್ಲಿ ಖಾಪರ್ಡೆಯವರನ್ನು ಕಾಣುವಂತೆ ದಯವಿಟ್ಟು ಅವನಿಗೆ ತಿಳಿಸಿ."

ಮಾಂಡಲೆಯಿಂದ ತಿಲಕರು ಬರೆದ ಪತ್ರಗಳು ಅವರ ಬುದ್ಧಿ ಮತ್ತು ಹೃದಯದ ನಿಕಟ ನೋಟವನ್ನು ನಮಗೆ ಒದಗಿಸುತ್ತವೆ. ಈ ಪತ್ರಗಳು ಅವರ ಕುಟುಂಬದ ಸದಸ್ಯರಿಗಾಗಿ ಮಾತ್ರ ಬರೆದ ಪತ್ರಗಳಾಗಿದ್ದರಿಂದ, ಸಾಮಾನ್ಯವಾಗಿ ಸಾರ್ವಜನಿಕ ವ್ಯಕ್ತಿಗಳು ತಮ್ಮ ಮಾತುಗಳಲ್ಲಿ ತೋರುವ ನಿಲುವುಗಳು ಮತ್ತು ತೋರಿಕೆಗಳು ಅವುಗಳಲ್ಲಿಲ್ಲ. ಇಲ್ಲಿ ನಾವು "ಸರಳ ತಿಲಕ" ರನ್ನು ಕಾಣುತ್ತೇವೆ, ಕಠೋರ ಚಿಪ್ಪಿನ ಒಳಗೆ ಮೃದುವಾಗಿರುವ, ಕಷ್ಟಗಳನ್ನು ಧೈರ್ಯದಿಂದ ಎದುರಿಸುತ್ತಾ, ಇತರರನ್ನು ಸಾಂತ್ವನ ಮಾಡುತ್ತಾ, ಅವರಿಗೆ ಸಲಹೆ ನೀಡುತ್ತಾ ಇರುವ ತಿಲಕರನ್ನು ಕಾಣುತ್ತೇವೆ. ತಮ್ಮ ಪತ್ರವ್ಯವಹಾರದಲ್ಲಿ ಅವರು ನೂರೆಂಟು ತಾಪತ್ರಯಗಳ ಬಗ್ಗೆ, ಕಿರುಕುಳದ ಕಾನೂನು ಪ್ರಕರಣಗಳ ಬಗ್ಗೆ, ಅನಾರೋಗ್ಯಗಳು, ಸಾವುಗಳ ಬಗ್ಗೆ ಬರೆಯಬೇಕಾಗಿತ್ತು. ಇಷ್ಟಾದರೂ ಅವರ ಮನಸ್ಸು ಉನ್ನತ ವಿಷಯಗಳಲ್ಲಿ ತೊಡಗಿತ್ತು ಹಾಗೂ ಹೆಚ್ಚು ಕಡಿಮೆ ಪ್ರತಿಯೊಂದು ಪತ್ರದಲ್ಲೂ ಅವರು ಪುಸ್ತಕಗಳನ್ನು ಕೋರುತ್ತಲೇ ಇದ್ದರು.

ಈ ನಿರಂತರ ಓದು ಮತ್ತು ವಿಚಾರಮಥನದ ಅತ್ಯಂತ ಫಲಪ್ರದ ವಿಷಯವೆಂದರೆ ತಿಲಕರು ಬರೆದ 'ಗೀತಾ-ರಹಸ್ಯ' ಅದನ್ನವರು ನವೆಂಬರ್ ೧೯೧೦ರಿಂದ ಮಾರ್ಚ್ ೧೯೧೧ರ ನಡುವಣ ಐದು ತಿಂಗಳಲ್ಲಿ ಬರೆದರು. ಹೀಗೆ ತಿಲಕರು ಜೈಲಿನಲ್ಲಿ ತಮ್ಮ ಮಹಾಕೃತಿಗಳನ್ನು ಬರೆದ ಬನ್ಯಾನ್, ರ್‍ಯಾಲೆ, ವೋಲ್ಟೇರ್ ಮತ್ತು ಸೈನ್‌ರಂತಹ ಖ್ಯಾತ ಸೆರೆವಾಸಿಗಳ ಸಾಲಿಗೆ ಸೇರಿದರು. ತಿಲಕರು ತಮ್ಮ ಪುಸ್ತಕಗಳನ್ನು ಕಟ್ಟು ಹಾಕಿದ ನೋಟ್‌ಪುಸ್ತಕಗಳಲ್ಲಿ ಪೆನ್ಸಿಲ್‌ನಲ್ಲಿ ಬರೆದರು. ಇವುಗಳ ಪುಟಗಳನ್ನು ಎಣಿಸಿ, ಸಂಖ್ಯೆಯನ್ನು ಗುರುತು ಹಾಕಲಾಗಿತ್ತು. ಅವರು ತಿಂಗಳಿಗೊಮ್ಮೆ ಬರೆಯುವ ಪತ್ರಕ್ಕೆ ಹೊರತಾಗಿ ಯಾವುದೇ ಹಾಳೆಗಳನ್ನಾಗಲೀ, ಶಾಯಿ ಆಗಲಿ ಅವರಿಗೆ ಕೊಡುತ್ತಿರಲಿಲ್ಲ. ೮೦೦ ಕ್ವಾರ್ಟೋ ಪುಟಗಳ ಪುಸ್ತಕವನ್ನು ಬರೆಯುವುದಕ್ಕೆ ೧೦೮ ದಿನಗಳು ಮಾತ್ರ ಹಿಡಿಯಿತಾದರೂ, ಅನೇಕ ವರ್ಷಗಳ ಚಿಂತನೆ ಮತ್ತು ಅಧ್ಯಯನದ ಫಲವಾಗಿತ್ತು ಅದು. ಅದನ್ನು ಅಂತಿಮವಾಗಿ ಸಿದ್ಧಪಡಿಸಲು ತಿಲಕರಿಗೆ ಅನೇಕ ತಿಂಗಳುಗಳ ಸಮಯ ಹಿಡಿಯಿತು. ಮಾರ್ಚ್ ೨, ೧೯೧೧ ರಂದು ಅವರು ಹೀಗೆ ಬರೆದರು:

"ಗೀತೆಯ ಬಗ್ಗೆ ಪುಸ್ತಕ ಬರೆಯುವುದನ್ನು ಈಗಷ್ಟೆ ಮುಗಿಸಿದ್ದೇನೆ ಹಾಗೂ ಅದಕ್ಕೆ 'ಗೀತಾ - ರಹಸ್ಯ' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದೇನೆ. ಅದರಲ್ಲಿ ಕೆಲವು ಮೂಲ ವಿಚಾರಗಳನ್ನು ನಾನು ಶ್ರುತಪಡಿಸಿದ್ದೇನೆ. ಅವು, ಅನೇಕ ರೀತಿಗಳಲ್ಲಿ, ಜನರಿಗೆ ಮೊದಲ ಬಾರಿಗೆ ಪರಿಚಯವಾಗುತ್ತದೆ. ದೈನಂದಿನ ಜೀವನದ ನೈತಿಕ ಪ್ರಶ್ನೆಗಳನ್ನು ಬಗೆಹರಿಸಲು ಹಿಂದೂ ಧಾರ್ಮಿಕ ತತ್ತ್ವಜ್ಞಾನ ಹೇಗೆ ನೆರವಾಗುತ್ತದೆ ಎಂಬುದನ್ನು ನಾನು ಈ ಪುಸ್ತಕದಲ್ಲಿ

ತೋರಿಸಿದ್ದೇನೆ. ಸ್ವಲ್ಪ ಮಟ್ಟಿಗೆ ನನ್ನ ವಾದ ನೀತಿಶಾಸ್ತ್ರದ ಬಗ್ಗೆ ಗ್ರೀನ್ ಬರೆದ ಪುಸ್ತಕದಲ್ಲಿನ ವಿಚಾರಕ್ಕೆ ಅನುಗುಣವಾಗಿಯೇ ಇದೆ. ಆದರೆ ಅತಿ ಹೆಚ್ಚಿನ ಸಂಖ್ಯೆಯ ಜನರಿಗೆ ಅತಿ ಹೆಚ್ಚಿನ ಒಳಿತಾಗಲೀ, ಸ್ಫೂರ್ತಿಯಾಗಲೀ ನೈತಿಕತೆಯ ಆಧಾರ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಗೀತೆಯ ತತ್ತ್ವಜ್ಞಾನವನ್ನು ಪಾಶ್ಚಿಮಾತ್ಯ ತತ್ತ್ವಜ್ಞಾನದೊಂದಿಗೆ ಹೋಲಿಸಿ, ನಮ್ಮದು, ಅತ್ಯಂತ ಕನಿಷ್ಠವಾಗಿ ಹೇಳಬೇಕಾದರೂ, ಅವರದ್ದಕ್ಕಿಂತ ಯಾವುದೇ ರೀತಿಯಲ್ಲೂ ಕೀಳಲ್ಲ ಎಂಬುದನ್ನು ಗೀತಾ–ರಹಸ್ಯದಲ್ಲಿ ನಾನು ಸಾಬೀತು ಮಾಡಿ ತೋರಿಸಿದ್ದೇನೆ. ಕಳೆದ ಇಪ್ಪತ್ತು ವರ್ಷಗಳಿಂದ ನಾನು ಗೀತೆಯ ಬಗ್ಗೆ ಯೋಚಿಸುತ್ತಿದ್ದೇನೆ ಹಾಗೂ ನಾನು ಪ್ರತಿಪಾದಿಸಲಿರುವ ವಿಚಾರಗಳು ಸವಾಲನ್ನೊಡ್ಡುತ್ತವೆ–ಇದುವರೆಗೂ ಯಾರೂ ಅವುಗಳನ್ನು ಮುಂದಿಡುವ ಧೈರ್ಯವನ್ನೂ ಮಾಡಿಲ್ಲ. ಈಗ ನನ್ನಲ್ಲಿ ಇಲ್ಲದೆ ಇರುವ ಪುಸ್ತಕಗಳಿಂದ ಕೆಲವು ವಾದಗಳನ್ನು ಬೆಂಬಲವಾಗಿ ಇನ್ನೂ ಉದ್ಧರಿಸಬೇಕಾಗಿದೆ. ನನ್ನ ಬಿಡುಗಡೆಯಾದ ನಂತರ ಮಾತ್ರ ಈ ಕೆಲಸ ಮಾಡಬಲ್ಲೆ."

ಮಾಂಡಲೆಯಲ್ಲಿ ತಿಲಕರು ಕಟ್ಟುನಿಟ್ಟಿನ ದಿನಚರಿಯನ್ನು ಅನುಸರಿಸುತ್ತಿದ್ದರು. ಅವರು ಮುಂಜಾನೆ ಬೇಗ ಎದ್ದು ಒಂದು ಗಂಟೆಯ ಕಾಲ ಧ್ಯಾನ ಮಾಡುತ್ತಿದ್ದರು. ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಚಹ ಕುಡಿದ ನಂತರ, ಓದಲೂ ಬರೆಯಲೂ ತೊಡಗುತ್ತಿದ್ದರು. ಊಟಕ್ಕೆ ಸಾಮಾನ್ಯವಾಗಿ ಅವರಿಗೆ ಪದಾರ್ಥಗಳನ್ನು ಧಾರಾಳವಾಗಿ ಕೊಡಲಾಗುತ್ತಿತ್ತು. ಖಾಸಗಿಯಾಗಿ ಅವರು ಹೆಚ್ಚಿನ ಆಹಾರವನ್ನೂ ಪಡೆಯಬಹುದಾಗಿತ್ತು. ಪೂನಾದಿಂದ ಅವರಿಗೆ ಕೆಲವೊಮ್ಮೆ ಮಸಾಲೆ ಸಾಮಾನು, ಉಪ್ಪಿನ ಕಾಯಿ ಹಾಗೂ ಮಾವಿನ ಹಣ್ಣಿನ ಕಾಲದಲ್ಲಿ ಮಾವಿನ ಹಣ್ಣುಗಳೂ ಬರುತ್ತಿದ್ದವು. ಊಟದ ನಂತರ ಪುನಃ ಓದು, ಬರೆಹ,–ಬೇಸಿಗೆಯಲ್ಲಿ ಇದು ಬಹಳ ಕಷ್ಟವಾಗುತ್ತಿತ್ತು–ನಂತರ ಮಧ್ಯಾಹ್ನ ೧.೩೦ಕ್ಕೆ ನಿಂಬೆ ಹಣ್ಣಿನ ರಸ. ಪುನಃ ಅಭ್ಯಾಸ ಮತ್ತು ಸಂಜೆ ೫ ಗಂಟೆಗೆ ಊಟ. ಸಂಜೆ ೬ ಗಂಟೆಗೆ ಅವರ ಕೋಣೆಗೆ ಬೀಗ ಹಾಕಲಾಗುತ್ತಿತ್ತು. ಅವರು ಮಲಗುವ ಮುನ್ನ ಮತ್ತೊಂದು ಗಂಟೆ ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ಎರಡು ವರ್ಷಗಳ ನಂತರ ಮಧುಮೇಹರೋಗ ಉಲ್ಬಣಗೊಂಡಾಗ, ಅವರು ಬಾರ್ಲಿ ಹಿಟ್ಟಿನಿಂದ ಮಾಡಿದ ಪೂರಿಗಳು, ಹಾಲು ಮತ್ತು ಮೊಸರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಗಟ್ಟಿ, ಹುಳಿ ಮೊಸರು ಅವರಿಗಿಷ್ಟವಾಗಿತ್ತು. ಈ ಆಹಾರ ಅವರ ಆರೋಗ್ಯಕ್ಕೆ ಹೊಂದಿಕೊಂಡಂತೆ ಕಾಣುತ್ತದೆ.

ಹೀಗೆ ಮಾಂಡಲೆಯಲ್ಲಿ ಜೀವನ ಮುಂದುವರಿಯಿತು. ನಿಶ್ಚೇತನಗೊಳಿಸುವ ಅದರ ದಿನಚರಿಯಲ್ಲಿ ಋತುಗಳ ಬದಲಾವಣೆಯಿಂದ ಹಾಗೂ ಹಳೆಯ ಕಾಲದ ಶ್ರೇಷ್ಠ ಲೇಖಕರ ಕೃತಿಗಳ ಓದಿನಲ್ಲಿ ಮಗ್ನರಾಗುವುದರಿಂದ ಮಾತ್ರ ವ್ಯತ್ಯಾಸವಾಗುತ್ತಿತ್ತು. ಒಟ್ಟಾರೆ, ತಿಲಕರು ಸಾಧಾರಣವಾಗಿ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಂಡು ಬಂದರು. ವರ್ಷಕ್ಕೊಮ್ಮೆ ಅಥವಾ ಎರಡು ಸಲ ಅವರಿಗೆ ಸ್ವಲ್ಪ ಜ್ವರ ಬಂದಿತ್ತು. ಆದರೆ ಯಾವುದೇ ತೀವ್ರವಾದ ಅಸ್ವಸ್ಥತೆ ಆಗಲಿಲ್ಲ. ಅವರ ಮಧುಮೇಹರೋಗ ಮತ್ತಷ್ಟು ಉಲ್ಬಣಗೊಂಡಿತು ಹಾಗೂ ಅವರ ಕೆಲವು ಹಲ್ಲುಗಳೂ ಉದುರಿದವು.

ಅವರ ದೃಷ್ಟಿ ಮತ್ತು ಶ್ರವಣ ಶಕ್ತಿಯೂ ಸಹ ಕುಂದಿತು. ಆದರೆ ವೃದ್ಧಾಪ್ಯವೇ ಇವುಗಳಿಗೆ ಕಾರಣ ಎಂದು ಅವರು ತಿಳಿದಿದ್ದರು.

ಅತಿ ದೀರ್ಘವಾದ ರಾತ್ರಿಯೂ ಕೊನೆಗೊಳ್ಳಬೇಕು. ೧೯೧೪ರ ವರ್ಷ ಪ್ರಾರಂಭವಾದಂತೆ, ತಿಲಕರ ಬಿಡುಗಡೆಯ ಸಮಯ ಸನ್ನಿಹಿತವಾಯಿತು. ಮೇ ತಿಂಗಳಲ್ಲಿ ಅವರು ತಮ್ಮ ಪುಸ್ತಕಗಳನ್ನು ಪೂನಾಗೆ ಕಳಿಸಿದರು ಹಾಗೂ ತಮ್ಮ ಪ್ರಯಾಣಕ್ಕೆ ಆಜ್ಞೆ ಯಾವಾಗ ಬರುತ್ತದೆ ಎಂದು ಕಾತುರದಿಂದ ಕಾದರು. ಮೇ ಹೋಗಿ ಜೂನ್ ತಿಂಗಳು ಬರುತ್ತಿದ್ದಂತೆ ಪ್ರತಿಯೊಂದು ದಿನ ಕಳೆಯುವುದೂ ಅತ್ಯಂತ ಪ್ರಯಾಸಕರವಾಗಿರಬೇಕು. ಕೊನೆಗೆ ಜೂನ್ ೮, ೧೯೧೪ ರ ಮುಂಜಾನೆ ಜೈಲ್ ಸೂಪರಿಂಟೆಂಡೆಂಟ್ ತಿಲಕರ ಕೋಣೆಗೆ ಬಂದು ಸಾಮಾನನ್ನು ಕಟ್ಟುವಂತೆ ಹೇಳಿದರು. ರಂಗೂನ್‌ಗೆ ಹೋಗುವ ರೈಲ್‌ನಲ್ಲಿ ಅವರನ್ನು ಹತ್ತಿಸಲಾಯಿತು. ಆಗಲೂ ಸಹ ಸಾರ್ವಜನಿಕರ ಕಣ್ಣಿಗೆ ಅವರು ಬೀಳದಂತೆ ಮುನ್ನೆಚ್ಚರಿಕೆ ವಹಿಸಲಾಯಿತು. ಮರುದಿನ ಬೆಳಿಗ್ಗೆ ಅವರನ್ನು ನೇರವಾಗಿ ರಂಗೂನ್ ಬಂದರಿಗೆ ಒಯ್ದು ಎಸ್.ಎಸ್. ಮೇಯೊ ಹಡಗನ್ನು ಹತ್ತಿಸಲಾಯಿತು. ಅಲ್ಲಿ ಅವರು ಪೂನಾದ ಪೋಲೀಸರ ಮುಖಗಳನ್ನು ಗುರುತಿಸಿದರು." ತಿಲಕರ ಗಡೀಪಾರು ಕೊನೆಗೊಂಡಿತ್ತು.

ಅಧ್ಯಾಯ 15

ಏಕತೆಗೆ ಪ್ರಯತ್ನ

ಜೂನ್ ೧೬, ೧೯೧೪ರಂದು ಮಧ್ಯರಾತ್ರಿಗೆಸ್ವಲ್ಪ ಹೊತ್ತಿನನಂತರ ಇಬ್ಬರು ಪೋಲೀಸ್ ಅಧಿಕಾರಿಗಳು ತಿಲಕರನ್ನು ಅವರು ಆರು ವರ್ಷಗಳಿಗೆ ಮೊದಲು ಬಿಟ್ಟು ಹೋಗಿದ್ದ. ಪೂನಾದ ಅವರ ಮನೆಗೆ ಮುಟ್ಟಿಸಿ ಸ್ವತಂತ್ರರನ್ನಾಗಿ ಮಾಡಿದರು. ನಡುರಾತ್ರಿಯಲ್ಲಿ ಹೀಗೆ ಅವರನ್ನು ಬಿಡುಗಡೆ ಮಾಡಿದ್ದು ಹಾಗೂ ಬಿಡುಗಡೆ ಮಾಡಿದ ತಾರೀಖು ಸಹ ಜನರ ಪ್ರದರ್ಶನಗಳನ್ನು ತಪ್ಪಿಸುವ ಉದ್ದೇಶ ಹೊಂದಿದ್ದು ಸ್ಪಷ್ಟವಾಗಿಯೇ ಇದೆ. ಆದರೆ ಲೋಕಮಾನ್ಯರು ವಾಪಸು ಬಂದಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಜನರು ಸಾಲುಗಟ್ಟಿ ಅವರಿದ್ದ ಗಾಯಕ್‌ವಾಡ್ ವಾಡಾಗೆ ಹೋಗಿ ಶುಭಾಶಯಗಳನ್ನು ತಿಳಿಸಿದರು. ಮೊದಲ ಎರಡು, ಮೂರು ದಿನಗಳು ಹತ್ತಿರದಿಂದ, ದೂರದಿಂದ ಬಂದ ಜನರ ವಂದನೆಗಳನ್ನು ಸ್ವೀಕರಿಸುವುದರ ಹೊರತಾಗಿ ಅವರು ಬೇರೇನೂ ಮಾಡಲಿಲ್ಲ.

ತಿಲಕರಿಗೆ ಸಾರ್ವಜನಿಕ ಸಮಾರಂಭ ಏರ್ಪಡಿಸಲು ಅತ್ಯಂತ ಬೇಗ ವ್ಯವಸ್ಥೆ ಮಾಡಲಾಯಿತು. ಗಡೀಪಾರಿನ ದೀರ್ಘ ಕಾಲದಲ್ಲಿ ಅವರಲ್ಲಿ ತುಂಬಿದ್ದ ವಿಚಾರಗಳನ್ನು ಹೊರಗೆಡವಲು ತಿಲಕರಿಗೆ ಇದರಿಂದ ಅವಕಾಶ ದೊರೆಯಿತು. ಅವರು ಸಭೆಯಲ್ಲಿ ಹೀಗೆಂದರು:

"ಆರು ವರ್ಷಗಳನಂತರ ನಾನು ಮತ್ತೆ ನಿಮ್ಮೊಂದಿಗಿದ್ದೇನೆ. ಪ್ರಸಕ್ತ ಪರಿಸ್ಥಿತಿಯನ್ನು ಸ್ವಲ್ಪಸ್ವಲ್ಪವಾಗಿ ತಿಳಿದುಕೊಳ್ಳುತ್ತಿದ್ದೇನೆ. ಅನೇಕ ವರ್ಷಗಳ ಕಾಲ ಮಲಗಿ ಎದ್ದ ನಂತರ ಜಗತ್ತು ಸಂಪೂರ್ಣವಾಗಿ ಬದಲಾಯಿಸಿದ್ದನ್ನು ಕಂಡ ರಿಪ್ ವ್ಯಾನ್ ವಿಂಕಲ್‌ನಂತೆ ನನ್ನ ಮೊದಲ ಪ್ರತಿಕ್ರಿಯೆ ಉಂಟಾಗಿದೆ. ಅಧಿಕಾರಿಗಳು ನನ್ನನ್ನು ಎಷ್ಟು ಕಠಿಣವಾದ ಏಕಾಂತತೆಯಲ್ಲಿಟ್ಟಿದ್ದರೆಂದರೆ, ನಾನು ಜಗತ್ತನ್ನು ಮರೆಯಬೇಕು ಹಾಗೂ ಜಗತ್ತು ನನ್ನನ್ನು ಮರೆಯಬೇಕು ಎಂದು ಅಪೇಕ್ಷಿಸಿದಂತೆ ಕಾಣುತ್ತದೆ. ಆದರೂ ನಾನು ಜನರನ್ನು ಮರೆತಿಲ್ಲ ಹಾಗೂ ಜನರು ನನ್ನನ್ನೂ ಮರೆತಿಲ್ಲ ಎಂಬುದನ್ನು ಗಮನಿಸಲು ನನಗೆ ಸಂತೋಷವಾಗುತ್ತಿದೆ. ಆರು ದೀರ್ಘವರ್ಷಗಳ ಕಾಲ ನಾನು ಜನರಿಂದ ದೂರವಿದ್ದರೂ, ಅದರಿಂದ ಅವರ ಮೇಲಿನ ನನ್ನ ಪ್ರೀತಿ ಕಡಿಮೆಯಾಗಿಲ್ಲ ಹಾಗೂ ಆರು ವರ್ಷಗಳ ಹಿಂದೆ ಯಾವ ರೀತಿಯಲ್ಲಿ, ಯಾವ ಸಂಬಂಧದಿಂದ ಹಾಗೂ ಯಾವ ಸಾಮರ್ಥ್ಯದಿಂದ ಸೇವೆ ಸಲ್ಲಿಸಿದ್ದೆನೋ ಅದೇ ರೀತಿಯಲ್ಲಿ ಸೇವೆ ಸಲ್ಲಿಸಲು ನನಗಿಚ್ಛೆಯಿದೆ ಹಾಗೂ ಹಾಗೆ ಸಲ್ಲಿಸಲು ನಾನು ಸಿದ್ಧವಾಗಿದ್ದೇನೆ ಎಂದು ಜನರಿಗೆ ಆಶ್ವಾಸನೆ ನೀಡುತ್ತೇನೆ. ಆದರೆ ನಾನು ನನ್ನ ಮಾರ್ಗವನ್ನು ಸ್ವಲ್ಪ ಮಾರ್ಪಾಡು ಮಾಡಬೇಕಾಗಿ ಬರಬಹುದು."

ತಿಲಕರು ಅಧಿಕಾರಿಗಳ ಬಗ್ಗೆ ಆಡಿದ ಚುಚ್ಚು ಮಾತು ಗುರಿ ಮುಟ್ಟಿರಬೇಕು. ದೂರದ ನಾಡಿನಲ್ಲಿ ಅವರು ದೀರ್ಘಕಾಲ ಬಂಧನದಲ್ಲಿದ್ದರೆ ಅವರ ದೇಶವಾಸಿಗಳ ಪ್ರೀತಿ ಮತ್ತು ಗೌರವ ಅವರಿಗೆ ದೊರೆಯುವುದಿಲ್ಲ ಎಂದು ಅಧಿಕಾರಿಗಳು ಬಹಳವಾಗಿ

ಆಶಿಸಿದ್ದರು. ಸ್ವಾತಂತ್ರ್ಯದಿಂದೀಚೆಗೆ ಬೆಳಕಿಗೆ ಬಂದಿರುವ, ಭಾರತ ಸರ್ಕಾರ ಮತ್ತು ಬಾಂಬೆ ಸರ್ಕಾರದ ನಡುವಣ ಪತ್ರವ್ಯವಹಾರ ಅಧಿಕಾರಿಗಳ ಮನೋಭಾವನೆಯನ್ನು ಹೊರಗೆಡವುತ್ತದೆ.

ದೇಶದ ಎಲ್ಲ ಭಾಗಗಳಿಂದ ತಿಲಕರಿಗೆ ದೊರೆತ ಅದ್ಭುತ ಸ್ವಾಗತ ಹಾಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಪುನಃ ತೊಡಗುವ ಅವರ ನಿರ್ಧಾರದಿಂದ ಸರ್ಕಾರ ಸಹಜವಾಗಿ ಕೆರಳಿತು. ವಿದ್ಯಾರ್ಥಿಗಳು ಮತ್ತು ಸರ್ಕಾರಿ ನೌಕರರು ತಿಲಕರನ್ನು ಭೇಟಿಯಾಗುವುದನ್ನು ನಿಷೇಧಿಸಲಾಯಿತು. ತಿಲಕರ ಮನೆಗೆ ಭೇಟಿ ಕೊಡುವವರ ಹೆಸರುಗಳನ್ನು ಬರೆದುಕೊಳ್ಳಲು ಅವರ ಮನೆಯ ಬಳಿ ಪೋಲೀಸ್ ಪಿಕೆಟ್ ನೇಮಿಸಲಾಯಿತು. ನಂತರ ಅವರ ಮನೆಗೆ ಭೇಟಿ ನೀಡಿದವರ ಪಟ್ಟಿ ಮಾಡಿಕೊಂಡು ಅವರಿಗೆ ಎಲ್ಲ ರೀತಿಗಳಿಂದ ಕಿರುಕುಳ ಕೊಡಲಾಯಿತು. ಮುಂದೆ ನಡೆಯಲಿರುವ ಗಣಪತಿ ಉತ್ಸವದಲ್ಲಿ ಜನರು ತಿಲಕರ ಬಗ್ಗೆ ಜಯಕಾರ ಮಾಡುವುದನ್ನು ತಪ್ಪಿಸಲು ಪೂನಾದ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಜ್ಞೆ ಹೊರಡಿಸಿದ. ಇಷ್ಟಕ್ಕೇ ಸಮಾಧಾನವಾಗದೆ, ಉತ್ಸವದಲ್ಲಿ ಯಾವುದೇ ರೀತಿಯಲ್ಲಿ ಪಾಲ್ಗೊಳ್ಳಬಾರದೆಂದು ಆತ ತಿಲಕರಿಗೆ ಸೂಚಿಸಿದ. ತೊಂದರೆಗೆ ಸಿಕ್ಕಿಬೀಳಲು ಯಾವ ಅವಸರವೂ ಅವರಿಗೆ ಇರಲಿಲ್ಲವಾದ್ದರಿಂದ ಈ ಸೂಚನೆಗೆ ತಕ್ಷಣ ಅವರು ಒಪ್ಪಿಗೆ ನೀಡಿದರು. ೧೯೦೮ರ ರಿಂದೀಚೆಗೆ ರೂಪಾಂತರ ಹೊಂದಿದ್ದ ರಾಜಕೀಯ ಪರಿಸ್ಥಿತಿಯನ್ನು ಅಳೆಯುವುದಕ್ಕೆ ಅವರಿಗೆ ಸಮಯವೂ ಬೇಕಾಗಿತ್ತು. ಕಾಂಗ್ರೆಸ್ ಸೌಮ್ಯವಾದಿಗಳ ಮುಖವಾಣಿಯಾಗಿಬಿಟ್ಟಿತು. ಉಗ್ರವಾದಿಗಳು ಚೆಲ್ಲಾಪಿಲ್ಲಿಯಾಗಿದ್ದರು ಹಾಗೂ ತಮ್ಮ ಸಮಯ ಕಾಯುತ್ತಿದ್ದರು. ಅರಬಿಂದೊ ಘೋಷ್ ಅವರ ಸ್ಫುಟವಾದ ಮಾತುಗಳಲ್ಲಿ ಹೇಳಬೇಕಾದರೆ, "ದೇಶದಲ್ಲೆಲ್ಲಾ ಮೌನ ಹರಡಿದೆ. ಯಾವ ಕಡೆ ಹೋಗಬೇಕೆಂದು ಯಾರಿಗೂ ತಿಳಿದಂತೆ ತೋರುತ್ತಿಲ್ಲ ಹಾಗೂ ಎಲ್ಲ ಕಡೆಗಳಿಂದ ಈ ಪ್ರಶ್ನೆಗಳು ಬರುತ್ತಿವೆ: ನಾವೇನು ಮಾಡೋಣ? ನಾವು ಮಾಡಬಹುದಾದ್ದು ಏನಿದೆ? ಮುಂದೇನು?"

ತಿಲಕರು ರಾಜಕೀಯ ಅಂಗಳಕ್ಕೆ ಹಿಂತಿರುಗುತ್ತಿದ್ದಂತೆ, ಈ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಭಾರ ಅವರ ಮೇಲೆ ಬಿತ್ತು. ವರ್ಚಸ್ಸಿನಲ್ಲಿ ಮತ್ತು ಹೊಂದಿದ್ದ ಅನುಯಾಯಿಗಳ ಸಂಖ್ಯೆಯಲ್ಲಿ ಅವರನ್ನು ಸರಿಗಟ್ಟುವ ನಾಯಕರು ಬೇರೆ ಯಾರೂ ಇರಲಿಲ್ಲ. ಜನಸಾಮಾನ್ಯರನ್ನು ಹುರಿದುಂಬಿಸುವುದಕ್ಕೆ ಅಥವಾ ಅವರ ನಿಷ್ಠೆಯನ್ನು ಗಳಿಸುವುದಕ್ಕೆ ಸಮರ್ಥರಾದವರು ಇನ್ನಾರೂ ಇರಲಿಲ್ಲ. ಪರಿಸ್ಥಿತಿಯನ್ನು ಅಳೆಯುವುದೂ, ಗಂಟುಗಂಟಾಗಿದ್ದ ರಾಜಕೀಯ ದಾರದ ಎಳೆಯನ್ನು ಬಿಡಿಸುವುದೂ "ರಿಪ್ ವ್ಯಾನ್ ವಿಂಕಲ್"ಗೆ ಸುಲಭವಾದ ಕಾರ್ಯವಾಗಿರಲಿಲ್ಲ. ಮೊದಲಿಗೆ ಅವರು ತಮ್ಮ ಸಹಚರರೊಂದಿಗೆ ಸಮಾಲೋಚಿಸಬೇಕಾಗಿತ್ತು ಹಾಗೂ ತಮ್ಮ ಅನುಯಾಯಿಗಳನ್ನು ಒಗ್ಗೂಡಿಸಬೇಕಾಗಿತ್ತು ಹಾಗೂ ಆಗ ಕಾಂಗ್ರೆಸ್ಸನ್ನು ನಿಯಂತ್ರಿಸುತ್ತಿದ್ದವರೊಂದಿಗೆ ಚರ್ಚಿಸಬೇಕಾಗಿತ್ತು. ಸೂರತ್ ಬಿರುಕಿನ ನಂತರದ ಎಂಟು ವರ್ಷಗಳುದ್ದಕ್ಕೂ ಕಾಂಗ್ರೆಸ್‌ನ ಎರಡೂ ಬಣಗಳನ್ನು ಒಂದೇ ಲಾಂಛನದಡಿ ಪುನಃ ಕೂಡಿಸುವ ಆಸೆಯನ್ನು ತಿಲಕರು ಎಂದೂ ಕಳೆದುಕೊಂಡಿರಲಿಲ್ಲ. ಇದೆಲ್ಲವನ್ನು ಮಾಡಿದ ಮೇಲೆ ಮಾತ್ರ ಅವರು ತಮ್ಮ ಧೋರಣೆಯನ್ನು ರೂಪಿಸುವ ಕೆಲಸಕ್ಕೆ ತೊಡಗಬೇಕಾಗಿತ್ತು.

ತಿಲಕರು ಹೀಗೆ ವಿಚಾರಮಂಥನ ಮಾಡುತ್ತಿದ್ದಾಗ, ಪರಿಸ್ಥಿತಿಯನ್ನು ಇದ್ದಕ್ಕಿದ್ದಂತೆ ಬದಲಾಯಿಸಿ, ಭವಿಷ್ಯದ ಬಾಗಿಲಿಗೆ ಬೀಗದ ಕೈ ಒದಗಿಸುವಂತಹ ಘಟನೆಯೊಂದು ನಡೆಯಿತು. ಆಗಸ್ಟ್ ೪, ೧೯೧೪ ರಂದು ಬ್ರಿಟನ್ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದ್ದೇ ಈ ಘಟನೆ. ಈ ಯುದ್ಧ ಮುಂದಿನ ನಾಲ್ಕು ವರ್ಷಗಳ ಕಾಲ ಭಾರತದ ರಾಜಕೀಯ ಬೆಳವಣಿಗೆಗಳ ಮೇಲೆ ಪರಿಣಾಮ ಉಂಟುಮಾಡಿತು. ೧೯೩೯-೪೫ ರ ಅವಧಿಯಲ್ಲಿ ನಡೆದ ಎರಡನೆಯ ಜಾಗತಿಕ ಯುದ್ಧವೂ ಇನ್ನೂ ಹೆಚ್ಚು ನಿರ್ಣಾಯಕವಾದ ರೀತಿಯಲ್ಲಿ ಭಾರತದ ರಾಜಕೀಯದ ಮೇಲೆ ಪರಿಣಾಮ ಬೀರಿತ್ತು. ಎರಡನೆಯ ವಿಶ್ವಯುದ್ಧದಲ್ಲಾದಂತೆಯೇ, ಬ್ರಿಟನ್ ಯುದ್ಧದಲ್ಲಿ ಸೋಲನ್ನನುಭವಿಸುವ ಸ್ಥಿತಿ ಮುಟ್ಟಿದಂತಾದಾಗ ಅದರ ಪ್ರಭಾವ ಭಾರತದ ಮೇಲೆ ಆಗಲು ಪ್ರಾರಂಭವಾಯಿತು.

ಇಂಗ್ಲೆಂಡ್‌ನ ಕಷ್ಟ ಭಾರತದ ಅವಕಾಶ ಎಂಬ ತತ್ತ್ವದ ಪ್ರತಿಪಾದಕರಾಗಿದ್ದರು ತಿಲಕರು. ರಾಜನಿಷ್ಠ ಅಥವಾ ನೈತಿಕವಾದಿ ಟೀಕಾಕಾರರು ಏನೇ ಹೇಳಲಿ, ಈ ನೈಜ ವ್ಯವಹಾರ ಬುದ್ಧಿ ಐತಿಹಾಸಿಕ ಸಮರ್ಥನೆ ಹೊಂದಿದೆ. ೩೦ ವರ್ಷಗಳ ಅವಧಿಯಲ್ಲಿ ಬ್ರಿಟನ್ ಎರಡು ಸಲ ಅಳಿವು-ಉಳಿವಿನ ಹೋರಾಟದಲ್ಲಿ ತೊಡಗದೆ ಇದ್ದಿದ್ದರೆ, ಸ್ವಾತಂತ್ರ್ಯ ಗಳಿಸಲು ಭಾರತಕ್ಕೆ ಮತ್ತಷ್ಟು ಸಮಯ ಬೇಕಾಗುತ್ತಿತ್ತು ಎಂಬುದರ ಬಗ್ಗೆ ಸಂಶಯ ಪಡಬೇಕಿಲ್ಲ. ಆದ್ದರಿಂದ ತಿಲಕರು ಪ್ರಾರಂಭಿಸಿದ ಹೋಂ ರೂಲ್ ಚಳವಳಿಗೆ ಯುದ್ಧದ ವರ್ಷಗಳಲ್ಲಿ ಭಾರಿ ಬೆಂಬಲ ದೊರಕಿದ್ದೇ ಅಲ್ಲದೆ ಭಾರತಕ್ಕೆ ಜವಾಬ್ದಾರಿ ಸರ್ಕಾರದ ಪಾಲೂ ದೊರಕಿತು.

ಯುದ್ಧದ ಬಗ್ಗೆ ತಿಲಕರು ತೋರಿದ ಮೊದಲ ಪ್ರತಿಕ್ರಿಯೆಯಲ್ಲಿ ಯಾವುದೇ ಚೌಕಶಿಯ ಭಾವನೆ ಇರಲಿಲ್ಲವೆಂಬುದು ಗಮನಾರ್ಹ. ಆಗಸ್ಟ್ ೨೭, ೧೯೧೪ ರಂದು ಅವರು ಹೇಳಿಕೆಯೊಂದರಲ್ಲಿ ಹೀಗೆ ಉದಾರವಾಗಿ ಘೋಷಿಸಿದರು: "ಇಂತಹ ಬಿಕ್ಕಟ್ಟಿನ ಸಮಯದಲ್ಲಿ, ಬ್ರಿಟಿಷ್ ಸರ್ಕಾರಕ್ಕೆ ತನ್ನಿಂದ ಸಾಧ್ಯವಾದ ಬೆಂಬಲ, ನೆರವನ್ನು ನೀಡುವುದು ಪ್ರತಿಯೊಬ್ಬ ಭಾರತೀಯನ – ಹಿರಿಯ ಅಥವಾ ಕಿರಿಯ, ಶ್ರೀಮಂತ ಅಥವಾ ಬಡವ – ಕರ್ತವ್ಯವಾಗಿದೆ." ಅವರು ಮತ್ತೂ ಹೀಗೆ ಸಾರಿದರು:

"ಇತರ ರಾಜಕೀಯ ಕಾರ್ಯಕರ್ತರಂತೆ, ಕೆಲವು ಕ್ರಮಗಳ ಬಗ್ಗೆ ಹಾಗೂ ಒಂದು ನಿರ್ದಿಷ್ಟ ವ್ಯಾಪ್ತಿಯಲ್ಲಿ ಆಂತರಿಕ ಆಡಳಿತ ವ್ಯವಸ್ಥೆಯ ಬಗ್ಗೆ ಸರ್ಕಾರದೊಡನೆ ನಾನೂ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದೇನೆ. ಆ ದೃಷ್ಟಿಯಿಂದ ಬ್ರಿಟಿಷ್ ಸರ್ಕಾರದ ಬಗ್ಗೆ ನನ್ನ ನಿಲುವು ಯಾವುದೇ ರೀತಿಯಲ್ಲಿ ದ್ವೇಷಯುಕ್ತವೆಂದು ಹೇಳುವುದು ಅಸಂಬದ್ಧ. ಐರ್ಲೆಂಡ್‌ನಲ್ಲಿ ಐರಿಶ್ ಹೋಂರೂಲರ್‌ಗಳು ಮಾಡುತ್ತಿರುವಂತೆ, ಆಡಳಿತವ್ಯವಸ್ಥೆಯನ್ನು ಸುಧಾರಿಸುವುದಷ್ಟನ್ನೇ ನಾವು ಭಾರತದಲ್ಲಿ ಪ್ರಯತ್ನಿಸುತ್ತಿರುವುದು, ಸರ್ಕಾರವನ್ನು ಉರುಳಿಸುವುದನ್ನಲ್ಲ ಎಂದು ನಾನು ಖಡಾಖಂಡಿತವಾಗಿ ಹೇಳುತ್ತಿದ್ದೇನೆ. ಭಾರತದ ಬೇರೆ ಬೇರೆ ಭಾಗಗಳಲ್ಲಿ ಎಸಗಿರುವ ಹಿಂಸಾಕೃತ್ಯಗಳ ಬಗ್ಗೆ ನಾನು ಅಸಹ್ಯಪಟ್ಟುಕೊಂಡಿರುವುದೇ ಅಲ್ಲದೆ ಅವು, ನನ್ನ ದೃಷ್ಟಿಯಲ್ಲಿ, ನಮ್ಮ ರಾಜಕೀಯ ಪ್ರಗತಿಯ ವೇಗವನ್ನು ಬಹಳ ಮಟ್ಟಿಗೆ ಕುಂಠಿತಗೊಳಿಸಿರುವುದು ದುರಾದೃಷ್ಟಕರವಾಗಿದೆ. ವೈಯಕ್ತಿಕ ದೃಷ್ಟಿಯಿಂದ ಅಥವಾ ಸಾರ್ವಜನಿಕ ದೃಷ್ಟಿಯಿಂದ ನೋಡಿದರೂ ಈ ಕೃತ್ಯಗಳು ಖಂಡನಾರ್ಹವಾಗಿವೆ."

ತಿಲಕರ ಈ ಮಾತುಗಳನ್ನು ರಾಜನಿಷ್ಠೆಯ ಘೋಷಣೆಯೆಂದು ಹೇಳಲಾಯಿತು. ಚೆನ್ನಾಗಿ ವ್ಯಕ್ತವಾದ ಸಂಶಯದೃಷ್ಟಿಯಿಂದ ಮೊದಲುಗೊಂಡು ಬಹಿರಂಗ ಅಸಮಾಧಾನದ ವರೆಗೆ ಅನೇಕ ರೀತಿಯ ಪ್ರತಿಕ್ರಿಯೆಗಳು ಈ ಮಾತುಗಳಿಗೆ ಉಂಟಾದುವು. ಇವುಗಳಿಂದ ತಿಲಕರು ಸರ್ಕಾರಕ್ಕೆ ಬೇಕಾದ ವ್ಯಕ್ತಿಯಾಗದಿದ್ದರೂ, ಅವರನ್ನು ಟೀಕಿಸುವವರಿಂದ ವಂಚನೆಯ ಆಪಾದನೆಯಲ್ಲದಿದ್ದರೂ ಅನುಕೂಲಸಿಂಧುವಿನ ಆಪಾದನೆಗೆ ಈಡಾಗಬೇಕಾಯಿತು.

ಮಾಂಡಲೇಯಲ್ಲಿ ಆರು ವರ್ಷಗಳ ಕಾಲ ಜೈಲುವಾಸ ಅನುಭವಿಸಿ ಹಿಂತಿರುಗಿದಾಗ ತಿಲಕರಿಗೆ ೫೮ ವರ್ಷ ವಯಸ್ಸಾಗಿತ್ತು. ಅವರು ಅನುಭವಿಸಿದ್ದ ಮೂರು ಜೈಲುವಾಸಗಳ ಪೈಕಿ ಅದು ಅತ್ಯಂತ ದೀರ್ಘಾವಧಿಯದಾಗಿತ್ತು ಹಾಗೂ ಏಕಾಂತದ ಸೆರೆವಾಸ ಅವರ ಮೇಲೆ ತೀವ್ರ ಪರಿಣಾಮ ಮಾಡಿತ್ತು . ಅವರ ಚೇತನ ಸೆಟೆದೇ ನಿಂತಿದ್ದರೂ, ವೃದ್ಧಾಪ್ಯದ ಶಕ್ತಿಹೀನತೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅವರು ಹಿಂತಿರುಗಿದ ಸ್ವಲ್ಪ ದಿನಗಳಲ್ಲೇ ಗೆಳೆಯರೊಬ್ಬರಿಗೆ ಹೀಗೆ ಹೇಳಿದರು: "ನನ್ನ ಕೊನೆಗಾಲ ಸಮೀಪಿಸುತ್ತಿದೆ. ಬಹಳವೆಂದರೆ ಇನ್ನು ಒಂದು ಅಥವಾ ಎರಡು ವರ್ಷ ನಾನು ಬದುಕಿರಬಹುದು."

ಹಾಗಿದ್ದರೂ ತಿಲಕರು ತಮ್ಮ ಚಟುವಟಿಕೆಗಳನ್ನು ಸ್ವಭಾವಸಹಜವಾದ ಉತ್ಸಾಹ ಮತ್ತು ಶ್ರದ್ಧೆಯಿಂದ ಪುನರಾರಂಭಿಸಿದರು. ಅವರು ತಮ್ಮ ಮುಂದೆ ಮೂರು ಗುರಿಗಳನ್ನು ಇಟ್ಟುಕೊಂಡರು: (೧) ಕಾಂಗ್ರೆಸ್ ಏಕತೆ; (೨) ರಾಷ್ಟ್ರೀಯವಾದಿ ಪಕ್ಷದ ಪುನರ್ರಚನೆ; (೩) ಹೋಂ ರೂಲ್ ಲೀಗ್‌ನ ಸ್ಥಾಪನೆ. ಈ ಎಲ್ಲ ಗುರಿಗಳು ಒಂದಕ್ಕೊಂದು ಸಂಬಂಧ ಹೊಂದಿದ್ದವು ಹಾಗೂ ಇವು ಒಟ್ಟಿಗೆ ದೇಶ ಸ್ವರಾಜ್ಯ ಗಳಿಸುವುದಕ್ಕೆ ನೆರವಾಗಬೇಕೆಂದು ತಿಳಿಯಲಾಗಿತ್ತು. ಈ ಪೈಕಿ ಕಾಂಗ್ರೆಸ್‌ನಲ್ಲಿ ಏಕತೆಯನ್ನು ಉಂಟುಮಾಡುವುದಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು. ಸೂರತ್‌ನ ಕಾಂಗ್ರೆಸ್ ಅಧಿವೇಶನದಲ್ಲಿ ಗಲಾಟೆ ಎಬ್ಬಿಸಿದರೆಂದು ಅವರ ವಿರೋಧಿಗಳು ಅನ್ಯಾಯವಾಗಿ ತಿಲಕರ ಮೇಲೆ ಆರೋಪ ಹೊರಿಸಿದ್ದರೂ, ಕಾಂಗ್ರೆಸ್ ಏಕತೆಯಲ್ಲಿ ಅವರಿಗಿಂತಲೂ ಹೆಚ್ಚು ಭಾವನಾತ್ಮಕವಾದ ನಂಬಿಕೆಯನ್ನು ಮತ್ತೆ ಯಾರೂ ಹೊಂದಿರಲಿಲ್ಲ. ಕಾಂಗ್ರೆಸ್ ಚೈತನ್ಯಪೂರ್ಣ ಸಂಸ್ಥೆಯಾಗಿರಬೇಕೆಂದು ಅವರು ಇಚ್ಛಿಸಿದ್ದೂ, ಮುಂದೆ ಬಂದರೆ ಹಾಯುವುದಿಲ್ಲ, ಹಿಂದೆ ಬಂದರೆ ಒದೆಯುವುದಿಲ್ಲ ಎಂಬ ಸೌಮ್ಯವಾದಿಗಳ ಧೋರಣೆಯನ್ನು ಸಹಿಸದೆ ಇದ್ದದ್ದೂ ನಿಜವಾದರೂ, ಸೌಮ್ಯವಾದಿಗಳೊಂದಿಗೆ ಒಪ್ಪಂದಕ್ಕೆ ಬರಲು ತಿಲಕರು ಉತ್ಸುಕರಾಗಿದ್ದರು.

ಆ ದಿಸೆಯಲ್ಲಿ ತಿಲಕರು ಮಾಡಿದ ಪ್ರಯತ್ನಗಳ ಬಗ್ಗೆ ಸೌಮ್ಯವಾದಿಗಳ ಶಿಬಿರದಲ್ಲಿ ಸಹಜವಾಗಿ ಸಂಶಯವಿತ್ತು. ಹಾಗೆ ನೋಡಿದರೆ, ತಿಲಕರ ನಿಷ್ಠಾವಂತ ಸಹಚರರ ಪೈಕಿಯೇ ಕೆಲವರು ಈ ಪ್ರಯತ್ನಗಳನ್ನು ತಪ್ಪಾಗಿ ತಿಳಿದುಕೊಂಡಿದ್ದು ವಿಚಿತ್ರವೇ ಸರಿ. ಮಾಂಡಲೇಯಲ್ಲಿ ದೀರ್ಘಕಾಲ ಅನುಭವಿಸಿದ ನೋವಿನಿಂದಾಗಿ ಅವರ ಮನೋಬಲ ಕುಗ್ಗಿ ಸೌಮ್ಯವಾದಿಗಳಾಗಿ ಬದಲಾಯಿಸಿದ್ದಾರೆಯೇ ಎಂದು ಈ ಸಹಚರರು ಭಾವಿಸುವಂತಾಗಿತ್ತು. ಬೆಳಗಾಂ ಪ್ರಾಂತೀಯ ಕಾಂಗ್ರೆಸ್ ಸಭೆಯಲ್ಲಿ (ಎಪ್ರಿಲ್ ೧೯೧೬) ರಾಜಿಯ ಗುಣಗಳ ಬಗ್ಗೆ ತಮ್ಮ ಅನುಯಾಯಿಗಳಿಗೆ ಒತ್ತು ಹೇಳಲು ಅವರು ವಿಶೇಷವಾಗಿ ಶ್ರಮಿಸಬೇಕಾಯಿತು.

ಕಾಂಗ್ರೆಸ್ ಪ್ರತಿನಿಧಿಗಳನ್ನು ಚುನಾಯಿಸುತ್ತಿದ್ದ ಸಂಸ್ಥೆಗಳ ಮೇಲೆ ಆಗ ವಿಧಿಸಿದ್ದ ನಿರ್ಬಂಧಗಳು ಏಕತೆಯ ಹಾದಿಯಲ್ಲಿದ್ದ ಮುಖ್ಯ ಅಡಚಣೆಯಾಗಿತ್ತು. ಸ್ವಯಮಾಡಳಿತದ ವಸಾಹತಿನ ಗುರಿಯನ್ನು ಹೊಂದಿದ ಸೌಮ್ಯವಾದಿ ತತ್ತ್ವ ಅಡಕವಾಗಿದ್ದ ಕಾಂಗ್ರೆಸ್ ಘಟನೆಯ ವಿಧಿಯನ್ನು ಅಂಗೀಕರಿಸದ ಯಾವುದೇ ರಾಜಕೀಯ ಸಂಘ ಅಥವಾ ಸಾರ್ವಜನಿಕ ಸಂಸ್ಥೆಗೆ ಮಾನ್ಯತೆ ನೀಡುವಂತಿರಲಿಲ್ಲ. ಹೀಗೆ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ ಸೌಮ್ಯವಾದಿ ಸಂಘಗಳ ಕೈಗಳಲ್ಲಿ ಮಾತ್ರ ಉಳಿದಿತ್ತು ಹಾಗೂ ರಾಷ್ಟ್ರೀಯವಾದಿಗಳ ಸೇರ್ಪಡೆಗೆ ಪರಿಣಾಮಕಾರಿ ಅಡಚಣೆಯಾಗಿತ್ತು. ಕಾಂಗ್ರೆಸ್‌ನಲ್ಲಿ ಏಕತೆಯನ್ನುಂಟು ಮಾಡುವ ದೃಷ್ಟಿಯಿಂದ, ಮೇಲೆ ಹೇಳಿದ ವಿಧಿಯನ್ನು ಮಾರ್ಪಡಿಸಲು ತಿಲಕರು ಹಾಗೂ ಸೌಮ್ಯವಾದಿಗಳ ನಡುವೆ ನಡೆದ ಪ್ರಯಾಸಕರ ಸಂಧಾನಗಳ ಬಗ್ಗೆ ದೀರ್ಘವಾಗಿ ಇಲ್ಲಿ ವಿವರಿಸದೆ ಇರುವುದಕ್ಕೆ ಸ್ಥಳಾಭಾವವೇ ಕಾರಣ. ತಿಲಕರು ತಮ್ಮ ಕಾರ್ಯಕ್ರಮದಲ್ಲಿ ಏಕತೆಗೆ ಪ್ರಥಮ ಸ್ಥಾನ ಕೊಟ್ಟರು ಹಾಗೂ ಲಕ್ನೊ ಕಾಂಗ್ರೆಸ್‌ನಲ್ಲಿ (ಡಿಸೆಂಬರ್ ೧೯೧೬) ಅದನ್ನು ಸಾಧಿಸುವವರೆಗೆ ಅವರಿಗೆ ತೃಪ್ತಿ ಇರಲಿಲ್ಲ ಎಂದು ಸಂಕ್ಷಿಪ್ತವಾಗಿ ಹೇಳಬಹುದು. ಎರಡು ವರ್ಷಗಳ ಕಾಲ ನಡೆದ ಈ ಸಂಧಾನಗಳಲ್ಲಿ ಅವರ ಉದ್ದೇಶದ ಪ್ರಾಮಾಣಿಕತೆ ಹಾಗೂ ಅವರ ರಾಜಕೀಯ ಕೌಶಲ್ಯ ಎದ್ದು ಕಂಡಿತು.

ತಮ್ಮ ಅನುಯಾಯಿಗಳೊಂದಿಗೆ ಕಾಂಗ್ರೆಸ್ಸನ್ನು ಸೇರಲು ತಿಲಕರು ಮಾಡಿದ ಪ್ರಯತ್ನಗಳಿಗೆ ಫಿರೋಜ್‌ಶಾ ಮೆಹ್ತಾ ಮತ್ತು ಗೋಖಲೆಯವರ ನಾಯಕತ್ವದಲ್ಲಿ ಕಾಂಗ್ರೆಸ್‌ನ ಸೌಮ್ಯವಾದಿ ಧುರೀಣರು ಪ್ರತಿರೋಧ ತೋರಿದರು. ಏಕತೆಗಾಗಿ ತಿಲಕರು ಮಾಡಿದ ಮನವಿಗಳನ್ನು ಮೆಹ್ತಾ "ಅಸಹ್ಯಕರ ಭಾವಾತಿರೇಕ" ಎಂದು ತಳ್ಳಿ ಹಾಕಿದರು. "ನನ್ನ ಮಟ್ಟಿಗೆ ಹೇಳುವುದಾದರೆ, ಪ್ರತಿ ನಿರ್ದಿಷ್ಟ ಅಭಿಮತಗಳ ಗುಂಪು ತನ್ನ ಪ್ರತ್ಯೇಕ ಕಾಂಗ್ರೆಸ್ ಅನ್ನು ಹೊಂದುವುದು ಅತ್ಯಂತ ಅಪೇಕ್ಷಣೀಯ. ಇವುಗಳನ್ನು ಒಂದೇ ಸಂಸ್ಥೆಯಲ್ಲಿ ಸೇರಿಸಿ ಕಲಸು ಮೇಲೋಗರ ಮಾಡುವುದರಿಂದ ಯಾವ ದಿಕ್ಕಿನಲ್ಲಿ ಯಾವ ಅಭಿಪ್ರಾಯ ಹರಿಯುತ್ತದೆ ಎಂಬ ಬಗ್ಗೆ ನಿಜವಾದ ತಿಳಿವಳಿಕೆಯನ್ನು ಹೊಂದುವುದು ಗೊಂದಲಮಯವಾಗುತ್ತದೆ ಹಾಗೂ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಎಷ್ಟರ ಮಟ್ಟಿಗೆ ಅಭಿಪ್ರಾಯಗಳಲ್ಲಿ ಅಂತರವಿದೆ ಮತ್ತು ಎಷ್ಟರ ಮಟ್ಟಿಗೆ ಅಭಿಪ್ರಾಯಭೇದವಿದೆ ಎಂದು ತಿಳಿಯಲು ಸಾಧ್ಯವಿಲ್ಲ" ಎಂದು ಮೆಹ್ತಾ ಬರೆದರು.

ಮೆಹ್ತಾ ಸಲಹೆಮಾಡಿದ, ತೋರಿಕೆಗೆ ನೇರವಾದ,ವ ರ್ಮಾಗದಿಂದ ಅನೈಕಮತ್ಯಕ್ಕೆ ಪುಷ್ಟಿ ದೊರೆಯಿತು ಹಾಗೂ ದಾಸ್ಯದಲ್ಲಿದ್ದ ಜನತೆಯ ಭಿನ್ನಾಭಿಪ್ರಾಯಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಯಾವ ಅವಕಾಶವನ್ನೂ ಕಳೆದುಕೊಳ್ಳದ ಸರ್ಕಾರಕ್ಕೆ ಇದರಿಂದ ಲಾಭವೇ ಆಯಿತು ಎಂದು ಈಗ ಕಾಣುವುದು ಸುಲಭ. ಆದರೆ ಮೆಹ್ತಾರ ತೀವ್ರ ಪೂರ್ವಾಗ್ರಹ ಮತ್ತು ಸಂಶಯ ಅವರನ್ನು ಈ ವಿಚಾರಗಳ ಬಗ್ಗೆ ಕುರುಡಾಗಿಸಿದ್ದವು. ಅವರು ಕೊನೆಯವರೆಗೂ ರಾಷ್ಟ್ರೀಯವಾದಿಗಳು ಕಾಂಗ್ರೆಸ್‌ಗೆ ಹಿಂತಿರುಗುವುದರ ಬದ್ಧ ವಿರೋಧಿಯಾಗಿದ್ದರು.

ಗೋಖಲೆಯವರು ವಾಸ್ತವ ದೃಷ್ಟಿ ಹೊಂದಿದ್ದರು ಹಾಗೂ ಗೌರವಯುತ ಷರತ್ತುಗಳ ಮೇಲೆ ಉಗ್ರವಾದಿಗಳನ್ನು ಕಾಂಗ್ರೆಸ್‌ಗೆ ಪುನಃ ಸೇರಿಸಿಕೊಳ್ಳುವುದು ಸಾಧ್ಯ

ವಿದ್ದರೆ ಹಾಗೆ ಮಾಡಲು ಅವರು ಅನುಕೂಲ ಅಭಿಪ್ರಾಯ ಹೊಂದಿದ್ದರು. ಶ್ರೀಮತಿ ಆನ್ನಿ ಬೆಸೆಂಟ್ ಅವರ ಸೂಚನೆಯ ಮೇರೆಗೆ ಗೋಖಲೆ ಮತ್ತು ತಿಲಕರ ನಡುವೆ ಆ ಉದ್ದೇಶದ ಬಗ್ಗೆ ಮೊದಲ ಮಾತುಕತೆಗಳು ಡಿಸೆಂಬರ್ ೧೯೧೪ರಲ್ಲಿ ನಡೆದವು. ಸೌಮ್ಯವಾದಿಗಳು ಮತ್ತು ಉಗ್ರವಾದಿಗಳ ನಡುವಣ ಭಿನ್ನಾಭಿಪ್ರಾಯುಗಳನ್ನು ಗೋಖಲೆಯವರು ಸ್ಪಷ್ಟವಾಗಿ ಅರಿತುಕೊಂಡರು. ಸರ್ ಭೂಪೇಂದ್ರನಾಥ್ ಬಸು ಅವರಿಗೆ ಕಳಿಸಿದ ಆಪ್ತ ಪತ್ರದಲ್ಲಿ ಅವರು ಹೀಗೆ ಬರೆದರು:

"ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದಂತೆಯೇ ಸ್ವ – ಸರ್ಕಾರವನ್ನು ಭಾರತ ಹೊಂದುವುದು ಕಾಂಗ್ರೆಸ್‌ನ ಗುರಿ ಎಂಬ ಕಾಂಗ್ರೆಸ್ ಮತದ ನಿಲುವನ್ನು ತಿಲಕರು ಒಪ್ಪಿಕೊಳ್ಳುತ್ತಾರಾದರೂ, ಸಾಧ್ಯವಿದ್ದ ಕಡೆ ಸರ್ಕಾರದೊಂದಿಗೆ ಸಂಬಂಧ ಹೊಂದುವ ಮತ್ತು ಅಗತ್ಯವಿದ್ದ ಕಡೆ ಅದನ್ನು ವಿರೋಧಿಸುವ ಕಾಂಗ್ರೆಸ್‌ನ ಪ್ರಸಕ್ತ ವಿಧಾನಗಳಲ್ಲಿ ತಮಗೆ ನಂಬಿಕೆ ಇಲ್ಲ ಎಂಬುದನ್ನು ಅವರು ಶ್ರೀ ಸುಬ್ಬರಾವ್ ಅವರಿಗೆ (ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ) ಸ್ಪಷ್ಟವಾಗಿ ಮತ್ತು ನಿಸ್ಸಂದಿಗ್ಧವಾದ ಮಾತುಗಳಲ್ಲಿ ಹೇಳಿದ್ದಾರೆ. ಅದರ ಬದಲಿಗೆ, ಸಂವಿಧಾನಿಕ ಮಿತಿಗಳೊಳಗೆ, ಸರಳವಾದ, ಶುಭ್ರವಾದ ವಿರೋಧವನ್ನು ಸರ್ಕಾರಕ್ಕೆ ವ್ಯಕ್ತಪಡಿಸುವ ವಿಧಾನವನ್ನು – ಅಂದರೆ ಐರಿಶ್ ಜನರ ಅಡಚಣೆಯ ವಿಧಾನವನ್ನು – ಹೊಂದಬೇಕೆಂದು ಅವರು ಇಚ್ಛಿಸುತ್ತಾರೆ.

ಇಲ್ಲಿಯ ಸರ್ಕಾರಕ್ಕೆ ಹಾಗೂ ಇಂಗ್ಲೆಂಡ್‌ನಲ್ಲಿನ ಬ್ರಿಟಿಷ್ ಜನತೆಗೆ ಒಂದೇ ಒಂದು ಕೋರಿಕೆಯನ್ನು ಮಾತ್ರ ಮುಂದಿಡಲು ತಿಲಕರು ಇಚ್ಛಿಸುತ್ತಾರೆ. ಅದೆಂದರೆ ಭಾರತಕ್ಕೆ ಸ್ವ–ಸರ್ಕಾರದ ರಿಯಾಯಿತಿ ಕೊಡುವುದು ಹಾಗೂ ಅದನ್ನು ಕೊಡುವವರೆಗೆ ಸಾರ್ವಜನಿಕ ಸೇವೆಗಳ ಬಗ್ಗೆಯಾಗಲೀ, ಶಾಸನ ಮಂಡಳಿಗಳ ಮತ್ತು ಸ್ಥಳೀಯ ಹಾಗೂ ಪೌರ ಸಭೆಗಳ ಬಗ್ಗೆಯಾಗಲೀ ಏನೂ ಸಂಬಂಧ ಹೊಂದಬಾರದೆಂದು ತಮ್ಮ ದೇಶಬಂಧುಗಳನ್ನು ಅವರು ಒತ್ತಾಯಪಡಿಸುತ್ತಾರೆ. ದೇಶದ ಕಾನೂನುಗಳ ಮಿತಿಯಲ್ಲೇ ಸಾಧ್ಯವಿದ್ದ ಪ್ರತಿ ದಿಕ್ಕಿನಲ್ಲೂ ಸರ್ಕಾರಕ್ಕೆ ಅಡಚಣೆಯುಂಟುಮಾಡುವ ವ್ಯವಸ್ಥೆ ಮಾಡುವುದರಿಂದ, ಆಡಳಿತ ಚಕ್ರ ನಿಂತುಹೋಗುವಂತೆ ಮಾಡಿ ಅಧಿಕಾರಿಗಳು ಶರಣಾಗತರಾಗುವಂತೆ, ಮಾಡುವ ಆಶಯವನ್ನು ಅವರು ಹೊಂದಿದ್ದಾರೆ."

ಸುಬ್ಬರಾವ್ ಅವರ ಹೇಳಿಕೆ ತಿಲಕರ ಅಭಿಪ್ರಾಯಗಳನ್ನು ಎಷ್ಟು ಸರಿಯಾಗಿ ಪ್ರತಿಬಿಂಬಿಸಿತು ಎಂಬುದು ಸ್ಪಷ್ಟವಾಗಿಲ್ಲ. ಈ ಹೇಳಿಕೆ ಮುಂದಿನ ಬೆಳವಣಿಗೆಗಳನ್ನು ಒಂದು ರೀತಿಯಲ್ಲಿ ಪ್ರತೀಕ್ಷಿಸಿದಂತೆ ಹಾಗೂ ತಿಲಕರು ನಿಧನ ಹೊಂದಿದ ವರ್ಷವಾದ ೧೯೨೦ ರಲ್ಲಿ ಭಾರತದ ರಾಜಕೀಯ ಹೊಂದಿದ ಸ್ವರೂಪವನ್ನು ಮೊದಲೇ ಸೂಚಿಸಿದಂತೆ ತೋರುತ್ತದೆ. ಆದರೆ ಈ ಹೇಳಿಕೆ ಕಾಂಗ್ರೆಸ್‌ನ ಎರಡೂ ಬಣಗಳ ನಡುವೆ ಆಗ ಇದ್ದ ಅಂತರವನ್ನು ಸೌಮ್ಯವಾದಿ ನಾಯಕರನ್ನು ಚಿಂತೆಗೆ ಗುರಿ ಮಾಡಿದ್ದ ಭಯುವನ್ನು ಎತ್ತಿ ತೋರಿಸುತ್ತದೆ.

ತಿಲಕರಾದರೋ ತಮ್ಮ ನಿಲುವನ್ನು ಎಂದೂ ಮುಚ್ಚಿಡಲಿಲ್ಲ. "ತಿಲಕರು ಕಾಂಗ್ರೆಸ್ಸನ್ನು ವಶಪಡಿಸಿಕೊಳ್ಳುತ್ತಾರೆ ಎಂದು ಗೋಖಲೆಯವರು ಹೇಳಿದರೆಂದು ವರದಿಯಾಗಿದೆ. ಹೀಗೆ ಹೇಳುವುದರಿಂದ ಏನು ಉಪಯೋಗ?" ಎಂದು ಅವರು 'ಕೇಸರಿ'ಯಲ್ಲಿ

ಬರೆದ ಪ್ರಸಿದ್ಧ ಅಗ್ರ ಲೇಖನದಲ್ಲಿ ಖಂಡತುಂಡವಾಗಿ ಹೇಳಿದರು. "ರಾಷ್ಟ್ರೀಯ ಕಾಂಗ್ರೆಸ್ ದೇಶಕ್ಕೆ ಸೇರಿದ್ದು. ಅದು ತಿಲಕರ ಆಸ್ತಿಯೂ ಅಲ್ಲ. ಗೋಖಲೆಯವರ ಆಸ್ತಿಯೂ ಅಲ್ಲ. ಕಾಂಗ್ರೆಸ್ ಮಾತ್ರವೇ ಅದರ ಸ್ವಂತ ಧೋರಣೆಯನ್ನು ನಿರ್ಧರಿಸುತ್ತದೆ. ಯಾರೇ ಒಬ್ಬ ವ್ಯಕ್ತಿಯಲ್ಲ. ಕಾಂಗ್ರೆಸ್‌ನಲ್ಲಿ ತನ್ನ ಅಭಿಪ್ರಾಯಗಳನ್ನು ಮಂಡಿಸುವ, ಆ ಅಭಿಪ್ರಾಯಗಳನ್ನು ಅನುಮೋದಿಸುವಂತೆ ಬಹುಸಂಖ್ಯಾತರನ್ನು ಮನವೊಲಿಸುವ ಹಕ್ಕನ್ನು ಪ್ರತಿ ಕಾಂಗ್ರೆಸ್ಸಿಗ ಹೊಂದಿದ್ದಾನೆ ಹಾಗೂ ಈ ಅಭಿಪ್ರಾಯಗಳು ಎಲ್ಲಿಯವರೆಗೆ ಕಾನೂನು ಬದ್ಧವಾಗಿ ಹಾಗೂ ಸಂವಿಧಾನಿಕವಾಗಿ ಇರುತ್ತವೋ, ಅಲ್ಲಿಯವರೆಗೆ ಅವುಗಳನ್ನು ಮುಚ್ಚಿಡುವಂತಿಲ್ಲ ಅಥವಾ ಅದುಮಿಡುವಂತಿಲ್ಲ."

ಲೇಖನದ ಈ ಭಾಗ ರಾಜಕೀಯ ವಿವಾದಗಳ ಬಗ್ಗೆ ತಿಲಕರು ಎಷ್ಟು ಹುರುಪಿನಿಂದ ನಡೆದುಕೊಳ್ಳುತ್ತಿದ್ದರೆಂಬುದನ್ನೇ ಅಲ್ಲದೆ, ಅವರ ಎಲ್ಲ ಚಟುವಟಿಕೆಗಳಿಗೆ ಪ್ರೇರಕವಾದ ಅವರ ಪ್ರಜಾಸತ್ತಾತ್ಮಕ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಅವರು ತಳೆದ ನಿಲುವು ಸೂರತ್ ಕಾಂಗ್ರೆಸ್‌ನಲ್ಲಿ ಅವರು ಹೊಂದಿದ್ದ ನಿಲುವನ್ನು ನೆನಪಿಗೆ ತರುತ್ತದೆ ಹಾಗೂ ಈ ಎರಡೂ ನಿಲುವುಗಳನ್ನು ಕಾಲ ಸಮರ್ಥಿಸಿದೆ.

ಫೆಬ್ರುವರಿ ೧೯೧೫ರಲ್ಲಿ ಗೋಖಲೆಯವರು ನಿಧನರಾದರು. ಎಂಟು ತಿಂಗಳ ನಂತರ ಫಿರೋಜ್‌ಶಾ ಮೆಹ್ತಾ ಅವರೂ ನಿಧನರಾದಾಗ ರಾಷ್ಟ್ರೀಯವಾದಿಗಳು ಕಾಂಗ್ರೆಸ್‌ಗೆ ಹಿಂತಿರುಗುವುದು ಸುಗಮವಾಯಿತು. ಡಿಸೆಂಬರ್ ೧೯೧೫ರಲ್ಲಿ ಬಾಂಬೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಗಳಾಗಿ ಅಲ್ಲದೆ ಹೋದರೂ ವೀಕ್ಷಕರಾಗಿ ಹಾಜರಿರಲು ಈ ಪೈಕಿ ಕೆಲವರು ಬಯಸಿದರು. ಆದರೆ ಕಾಂಗ್ರೆಸ್ ಮತವನ್ನು ತಿದ್ದುಪಡಿ ಮಾಡದ ಹೊರತು ಮತ್ತು ಮಾಡುವವರೆಗೆ ಸಭೆಗೆ ಹೋಗದಿರುವಂತೆ ತಿಲಕರು ಅವರನ್ನೊಲಿಸಿದರು. ಆ ಅಧಿವೇಶನದಲ್ಲಿ ತಿದ್ದುಪಡಿಯ ಬಗ್ಗೆ ಗಮನಾರ್ಹ ಕ್ರಮವನ್ನು ಕೈಗೊಳ್ಳಲಾಯಿತು. ಬ್ರಿಟಿಷ್ ಸಾಮ್ರಾಜ್ಯದೊಳಗಡೆ ಸಂವಿಧಾನಿಕ ವಿಧಾನಗಳಿಂದ ಸ್ವ-ಸರ್ಕಾರ ಹೊಂದುವುದನ್ನು ತನ್ನ ಗುರಿಗಳಲ್ಲಿ ಒಂದಾಗಿ ಹೊಂದಿದ ಹಾಗೂ ಎರಡು ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಯಾವುದೇ ಸಂಘದ ಆಶ್ರಯದಲ್ಲಿ ಏರ್ಪಡಿಸುವ ಸಾರ್ವಜನಿಕ ಸಭೆಗಳಿಂದ ಚುನಾಯಿತರಾಗುವ ರಾಷ್ಟ್ರೀಯವಾದಿಗಳಿಗೆ ಕಾಂಗ್ರೆಸ್‌ನ ಬಾಗಿಲುಗಳನ್ನು ತೆಗೆಯುವುದು ಸಾಧ್ಯವಾಗುವಂತೆ ಅದರ ಘಟನೆಯನ್ನು ತಿದ್ದುಪಡಿ ಮಾಡಲಾಯಿತು. ತಿಲಕರು ಈ ಕ್ರಮವನ್ನು ಸ್ವಾಗತಿಸಿದರು.

ಅಧ್ಯಾಯ 16

ಹೋಂ ರೂಲ್ ಚಳವಳಿ

ಹೋಂ ರೂಲ್ ಲೀಗ್ ಸ್ಥಾಪಿಸುವ ಬಗ್ಗೆ ಚರ್ಚಿಸಲು, ಬಾಂಬೆ ಕಾಂಗ್ರೆಸ್ ಅಧಿವೇಶನದ ಪ್ರಾರಂಭದ ಹಿಂದಿನ ದಿನ ರಾಷ್ಟ್ರೀಯವಾದಿಗಳ ಸಮ್ಮೇಳನವನ್ನು ಪೂನಾದಲ್ಲಿ ನಡೆಸಲಾಯಿತು. ಇಂತಹ ಸ್ವರೂಪದ ಸಂಸ್ಥೆಯ ಉಪಯುಕ್ತತೆಯನ್ನು ವಿಶದೀಕರಿಸಿ ತಿಲಕರು 'ಕೇಸರಿ'ಯಲ್ಲಿ ಅನೇಕ ಲೇಖನಗಳನ್ನು ಬರೆದರು. ಇದಕ್ಕೆ ಮೊದಲು ಶ್ರೀಮತಿ ಆನ್ನಿಬೆಸೆಂಟ್ ಅವರು ಮದ್ರಾಸ್‌ನಲ್ಲಿ ಇಂತಹುದೇ ಸಲಹೆಯನ್ನು ರೂಪಿಸಿದ್ದರು. ಆದರೆ ಕಾಂಗ್ರೆಸ್‌ನ ಬಾಂಬೆ ಅಧಿವೇಶನದಲ್ಲಿ ತಮ್ಮ ಸಲಹೆಗೆ ಕಾಂಗ್ರೆಸ್‌ನ ಅಂಗೀಕಾರ ಪಡೆಯಲು ಅವರು ಮಾಡಿದ ಪ್ರಯತ್ನಗಳು ಸೌಮ್ಯವಾದಿಗಳ ವಿರೋಧದಿಂದಾಗಿ ವಿಫಲಗೊಂಡವು.

ಆದರೆ ಇನ್ನೂ ಕಾಂಗ್ರೆಸ್‌ನಿಂದ ಹೊರಗಡೆಯೇ ಇದ್ದ ರಾಷ್ಟ್ರೀಯವಾದಿಗಳಿಗೆ ಕಾಂಗ್ರೆಸ್‌ನ ಅಂಗೀಕಾರದ ಅಗತ್ಯವಿರಲಿಲ್ಲ. ಪೂನಾ ಸಮ್ಮೇಳನದ ಶಿಫಾರ್ಸುಗಳ ನಂತರ ಏಪ್ರಿಲ್ 28, 1916ರಂದು ಬೆಳಗಾಂನಲ್ಲಿ ಹೋಂ ರೂಲ್ ಲೀಗ್ ಅನ್ನು ಸ್ಥಾಪಿಸಲಾಯಿತು. "ಎಲ್ಲ ಸಂವಿಧಾನಿಕ ವಿಧಾನಗಳ ಮೂಲಕ ಬ್ರಿಟಿಷ್ ಸಾಮ್ರಾಜ್ಯದೊಳಗೇ ಸ್ವ–ಸರ್ಕಾರ ಹೊಂದುವ ಹಾಗೂ ಅದಕ್ಕಾಗಿ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಶಿಳಿವಳಿಕೆಕೊಡುವ, ಅದನ್ನು ಸಂಘಟಿಸುವ" ಗುರಿಯನ್ನು ಲೀಗ್ ಹೊಂದಿತ್ತು. ತಿಲಕರು ಲೀಗ್‌ನ ಚಾಲಕ ಶಕ್ತಿಯಾಗಿದ್ದರೂ ಅದರ ಕಾರ್ಯಕಾರಿ ಸಮಿತಿಯಲ್ಲಿ ಅವರು ಸೇರಲಿಲ್ಲ. ಲೀಗ್‌ನ ವ್ಯವಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜೋಸೆಫ್ ಬಾಪ್ಟಿಸ್ಟ ಅದರ ಅಧ್ಯಕ್ಷರಾಗಿ ಚುನಾಯಿತರಾದರು ಹಾಗೂ ಎನ್.ಸಿ.ಕೇಳ್ಕರ್ ಕಾರ್ಯದರ್ಶಿಯಾದರು. ಜಿ.ಎಸ್. ಖಾಪರ್ಡೆ, ಡಾ. ಬಿ. ಎಸ್. ಮುಂಜೆ, ಆರ್. ಸಿ. ಕರಂದೀಕರ್ ಮತ್ತು ಡಿ.ವಿ.ಬೆಲ್ವಿ ಸಮಿತಿಯ ಸದಸ್ಯರಲ್ಲಿ ಸೇರಿದ್ದರು.

ಮರುದಿನ ಅದೇ ಸ್ಥಳದಲ್ಲಿ ಬಾಂಬೆ ಪ್ರಾಂತೀಯ ಸಮ್ಮೇಳನ ತನ್ನ ವಾರ್ಷಿಕ ಅಧಿವೇಶನವನ್ನು ನಡೆಸಿತ್ತು. ಬಾಂಬೆ ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯವಾದಿಗಳ ಮುಂದಿಟ್ಟ ರಾಜಿಯ ಷರತ್ತುಗಳನ್ನು ಪರಿಶೀಲಿಸುವುದು ಈ ಅಧಿವೇಶನದ ಮುಖ್ಯ ಕಾರ್ಯವಾಗಿತ್ತು. ಈ ಷರತ್ತುಗಳು ತಮ್ಮ ಎಲ್ಲ ನಿರೀಕ್ಷೆಗಳನ್ನು ಈಡೇರಿಸಲಿಲ್ಲವಾದರೂ ಅವುಗಳನ್ನು ಒಪ್ಪಿಕೊಳ್ಳಬೇಕೆಂದು ತಿಲಕರು ಒತ್ತಾಯಪಡಿಸಿದರು. ತಾವು ಸೌಮ್ಯವಾದಿಯೂ ಅಲ್ಲ, ಉಗ್ರವಾದಿಯೂ ಅಲ್ಲ ಎಂದು ಹೇಳಿಕೊಂಡ ಗಾಂಧೀಜಿ ತಿಲಕರಿಗೆ ಬೆಂಬಲ ನೀಡಿದರು ಹಾಗೂ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಇದರಿಂದ ರಾಷ್ಟ್ರೀಯ ವಾದಿಗಳು ಕಾಂಗ್ರೆಸ್‌ಗೆ ಹಿಂತಿರುಗುವುದಕ್ಕೆ ದಾರಿಯಾಯಿತು.

ಪ್ರಾಂತೀಯ ಸಮ್ಮೇಳನ ಮುಗಿದ ನಂತರ, ಹೋಂ ರೂಲ್ ಲೀಗ್‌ಗೆ ಸದಸ್ಯರನ್ನು ಸೇರಿಸುವುದು ಹಾಗೂ ಪ್ರಾರಂಭದಲ್ಲಿ ಬಾಂಬೆ, ಕರ್ನಾಟಕ ಮತ್ತು ಸೆಂಟ್ರಲ್ ಪ್ರಾವಿನ್ಸೆಸ್

ನಲ್ಲಿ ಅದರ ಶಾಖೆಗಳನ್ನು ಸ್ಥಾಪಿಸುವುದು ತಿಲಕರ ತಕ್ಷಣದ ಗುರಿಯಾಗಿತ್ತು. 'ಮರಾಠ'ದಲ್ಲಿ ಬರೆದ ಪ್ರಮುಖ ಲೇಖನವೊಂದರಲ್ಲಿ ಅವರು ಲೀಗ್‌ನ ಗುರಿಗಳನ್ನು ವಿವರಿಸಿದರು:

"ದೇಶದಾದ್ಯಂತ ಸಾರ್ವಜನಿಕ ಅಭಿಪ್ರಾಯಕ್ಕೆ ತಿಳಿವಳಿಕೆ ಮೂಡಿಸಲೂ ಹೋಂ ರೂಲ್‌ಗಾಗಿ ಚಳವಳಿ ನಡೆಸಲೂ ಸಂಸ್ಥೆಯೊಂದನ್ನು ಸ್ಥಾಪಿಸಬೇಕಾದ ಸಮಯ ಖಂಡಿತವಾಗಿ ಬಂದಿದೆ ಎಂಬುದನ್ನು ಸಾರ್ವತ್ರಿಕವಾಗಿ ಅರಿಯಲಾಗಿದೆ. ಕಾಂಗ್ರೆಸ್ ಇಂತಹ ಕಾರ್ಯವನ್ನು ಜವಾಬ್ದಾರಿಯಿಂದ ನಡೆಸಲು ಅತ್ಯಂತ ಹೆಚ್ಚಿನ ಅಧಿಕಾರವನ್ನು ಸಹಜವಾಗಿ ಹೊಂದಿದ ಸಂಸ್ಥೆಯಾಗಿದೆ. ಅದರೆ ಸ್ವ-ಸರ್ಕಾರಕ್ಕಾಗಿ ಯೋಜನೆಯನ್ನು ಸಿದ್ಧಪಡಿಸಲು, ಅದರ ಕಾರ್ಯಸಾಧ್ಯ ಯಶಸ್ಸಿಗೆ ಸಕ್ರಿಯವಾಗಿ ಕೆಲಸ ಮಾಡಲೂ ಕಾಂಗ್ರೆಸ್ಸನ್ನು ಹುರಿದುಂಬಿಸುವುದಕ್ಕೆ ಸಾಧ್ಯವಾಗದಷ್ಟು ಆ ಸಂಸ್ಥೆ ಹಿಡಿತಕ್ಕೆ ಮೀರಿ ಬೆಳೆದಿದೆ. ಯಾರಾದರೂ ಪ್ರಾರಂಭದ ಪಾಯದ ಕೆಲಸ ಮಾಡಬೇಕಾಗಿದೆ. ಇನ್ನೂ ಹೆಚ್ಚು ಕಾಲ ಇದಕ್ಕಾಗಿ ಕಾಯುವುದು ಸಾಧ್ಯವಿಲ್ಲ. ಒಂದು ಮುಂಚೂಣಿಯ ಚಳವಳಿಯೆಂದು ಲೀಗ್‌ಅನ್ನು ಪರಿಗಣಿಸಬಹುದು ಹಾಗೂ ಯಾವುದೇ ಅರ್ಥದಲ್ಲಿ ಇದು ಪ್ರತ್ಯೇಕ ಚಳವಳಿಯಾಗಬೇಕೆಂಬ ಉದ್ದೇಶ ಇಲ್ಲ."

ಲೀಗ್ ಅನ್ನು ಜನಪ್ರಿಯಗೊಳಿಸಲು ತಿಲಕರು ವ್ಯಾಪಕವಾದ ಭಾಷಣ ಪ್ರವಾಸ ಕೈಗೊಂಡರು. ಅವರು ಲೀಗ್‌ನ ಗುರಿಗಳು ಮತ್ತು ಉದ್ದೇಶಗಳನ್ನು ಕಣ್ಣಿಗೆ ಕಟ್ಟುವ ಮತ್ತು ಮನಸ್ಸಿಗೆ ಮುಟ್ಟುವ ಹೋಲಿಕೆಗಳಿಂದ ವಿವರಿಸಿದರು. "ಹೋಂ ರೂಲ್ ಎಂದರೆ ತಮ್ಮ ಮನೆಯ ಆಡಳಿತವನ್ನು ತಮ್ಮದೇ ಕೈಗಳಲ್ಲಿ ಹೊಂದುವುದು ಎಂದು ಮಾತ್ರ ಅರ್ಥ. ಕಣ್ಣಿಗೆ ಕಾಣದಿರುವ ಸರ್ಕಾರವನ್ನು ಅದಿರುವಂತೆಯೇ ಉಳಿಸಿಕೊಂಡು ಕಣ್ಣಿಗೆ ಕಾಣುವ ಸರ್ಕಾರವನ್ನು ಬದಲಾಯಿಸುವ ಸಾಧನ ಅದು. ಒಬ್ಬ ರೈತನೂ ಅರ್ಥ ಮಾಡಿಕೊಳ್ಳ ಬಹುದಾದ ಹೋಂ ರೂಲ್‌ನ ಸರಳ ಸೂತ್ರ ಏನೆಂದರೆ, ನನ್ನ ಸ್ವಂತ ದೇಶದಲ್ಲಿ ನಾನು ಏನಾಗಿರಬೇಕೆಂದರೆ ಇಂಗ್ಲೆಂಡ್‌ನಲ್ಲಿ ಒಬ್ಬ ಇಂಗ್ಲಿಷ್‌ನವನು ಏನಾಗಿದ್ದಾನೋ ಅದೇ."

ಹೋಂ ರೂಲ್ ಬೇಕೆಂದು ಕೇಳುವುದು ರಾಜದ್ರೋಹವಲ್ಲ ಎಂದು ತಿಲಕರು ಎಲ್ಲ ಕಡೆ ತಮ್ಮ ಸಭಿಕರಿಗೆ ಒತ್ತಿ ಹೇಳುತ್ತಿದ್ದರು. "ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಅದು ರಾಜದ್ರೋಹವಾಗುತ್ತಿತ್ತೇನೋ. ಆದರೆ ಹೋಂ ರೂಲ್ ಯಾವುದೇ ದೇಶ ಹೊಂದಿರಬಹುದಾದ ಸೂಕ್ತ ಆಸೆ ಎಂಬ ಮಾತನ್ನು ನ್ಯಾಯಾಂಗ ಹಾಗೂ ಕಾರ್ಯಾಂಗ ಒಪ್ಪಿಕೊಂಡಿವೆ." ತಿಲಕರ ಭಾಷಣಗಳಲ್ಲಿ ರಾಜದ್ರೋಹದ ಅಂಶಗಳಿವೆಯೇ ಎಂದು ಸರ್ಕಾರ ಅವುಗಳನ್ನು ಆಗಾಗಲೇ ಪರಿಶೀಲಿಸುತ್ತಿತ್ತು ಎಂಬುದನ್ನು ತಿಲಕರು ಊಹಿಸಲೂ ಸಾಧ್ಯವಿರಲಿಲ್ಲ. ಜನಸಾಮಾನ್ಯರ ಮೇಲೆ ಅವರು ಇನ್ನೂ ಹೊಂದಿದ್ದ ಹಿಡಿತದ ಬಗ್ಗೆ ಅವರ ಪ್ರವಾಸದಲ್ಲಿ ದೊರೆತ ಸಾಕ್ಷ್ಯದಿಂದ ಸರ್ಕಾರ ನಿಜವಾಗಿ ಕೆರಳಿತು. ಎಲ್ಲೆಡೆಯೂ ತಿಲಕರನ್ನು ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು ಹಾಗೂ ಲೀಗ್‌ನ ಸಭೆಗಳಿಗೆ ಸಾವಿರಾರು ಜನರು ಸೇರಿದರು. ಮೊದಲನೆಯ ವಿಶ್ವಯುದ್ಧ ನಡೆಯುತ್ತಿದ್ದಾಗ ಸಾಮೂಹಿಕ ಚಳವಳಿಯನ್ನು ಸಹಿಸುವ ಇಚ್ಛೆ ಸರ್ಕಾರಕ್ಕೆ ಸ್ವಲ್ಪವೂ ಇರಲಿಲ್ಲ. ಬೆಳಗಾಂ ಮತ್ತು ಅಹಮದ್‌ನಗರದಲ್ಲಿ ಅವರು ಮಾಡಿದ ಭಾಷಣಗಳ ಆಧಾರದ ಮೇಲೋ ಎಂಬಂತೆ ಪೂನಾದ ಜಿಲ್ಲಾ ಮ್ಯಾಜಿಸ್ಟ್ರೇಟ್ ಜುಲೈ 22, 1916ರಂದು ತಿಲಕರಿಗೆ ನೋಟೀ

ಸು ಜಾರಿ ಮಾಡಿದ. "ಒಂದು ವರ್ಷದ ಅವಧಿಗೆ ಅವರು ಉತ್ತಮ ನಡೆವಳಿಕೆ ತೋರುವುದಕ್ಕಾಗಿ ತಲಾ 10,000ರೂಪಾಯಿಗಳ ಎರಡು ಜಾಮೀನುಗಳೊಂದಿಗೆ 20,000 ರೂಪಾಯಿಗಳಿಗೆ ಕರಾರು ಪತ್ರ ಕೊಡುವಂತೆ ನಿಮಗೆ ಏಕೆ ಆಜ್ಞಾಪಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವಂತೆ" ಈ ನೋಟೀಸ್‌ನಲ್ಲಿ ಅವರನ್ನು ಕೇಳಲಾಗಿತ್ತು.

ಈ ನೋಟೀಸು ಅಧಿಕಾರಿಗಳ ವೈಷಮ್ಯದ ಸಂಕೇತವಾಗಿದ್ದರೂ ಅದನ್ನು ಜಾರಿ ಮಾಡಿದ ತಾರೀಖಿನಿಂದಾಗಿ ಅದು ಮತ್ತಷ್ಟು ಅನಿಷ್ಟವಾಗಿತ್ತು. ಏಕೆಂದರೆ ಜುಲೈ 23 ತಿಲಕರ ಅರವತ್ತನೆಯ ಜನ್ಮದಿನವಾಗಿತ್ತು ಹಾಗೂ ಅವರ ಸಾವಿರಾರು ಅನುಯಾಯಿಗಳು ಅವರಿಗೆ ಬಿನ್ನವತ್ತಳೆಯನ್ನೂ ಒಂದು ಲಕ್ಷ ರೂಪಾಯಿಗಳ ನಿಧಿಯನ್ನೂ ಅರ್ಪಿಸುವ ಮೂಲಕ ಅವರ ಜನ್ಮದಿನವನ್ನು ಆಚರಿಸಬೇಕೆಂದು ನಿರ್ಧರಿಸಿದ್ದರು. ಅಧಿಕಾರಶಾಹಿ ತೋರಿದ ಪ್ರತೀಕಾರ ಭಾವನೆಯಿಂದ ಅವರ ಉತ್ಸಾಹ ಕುಗ್ಗುವುದಕ್ಕೆ ಬದಲಾಗಿ ಮತ್ತಷ್ಟು ಹಿಗ್ಗಿತು. ತಿಲಕರ ಜನ್ಮದಿನದ ಸಮಾರಂಭ ನಡೆದ ಗಾಯಕ್‌ವಾಡ್ ವಾಡಾದಲ್ಲಿ ಅಸಂಖ್ಯಾತ ಜನರು ಸೇರಿದರು. ಸಂಭ್ರಮದಿಂದ ನಡೆದ ಈ ಸಮಾರಂಭಕ್ಕೆ ಪರ ಊರುಗಳಿಂದ ಅನೇಕ ಪ್ರಮುಖ ವ್ಯಕ್ತಿಗಳು ಪೂನಾಗೆ ಬಂದಿದ್ದರು.

ಜನಸಾಮಾನ್ಯರ ಪ್ರೀತಿ, ಗೌರವಗಳ ಈ ಅಭಿವ್ಯಕ್ತಿಯಿಂದ ತಿಲಕರ ಹೃದಯ ತುಂಬಿ ಬಂತು. ತಮಗೆ ನೀಡಿದ ಸನ್ಮಾನಕ್ಕೆ ಅವರು ಹೀಗೆ ಉತ್ತರಿಸಿದರು:

"ಬಿನ್ನವತ್ತಳೆಯನ್ನು ಒಪ್ಪಿಕೊಳ್ಳುವುದರಿಂದ ನನಗೆ ಪೇಚಾಟವಾದರೂ, ನಾನು ಅದನ್ನೂ ಔಪಚಾರಿಕವಾಗಿ ಒಪ್ಪಿಕೊಳ್ಳಬೇಕು. ಆದರೆ ಈ ನಿಧಿಯ ವಿಚಾರ ಬೇರೆಯೇ ಆಗಿದೆ. ಈ ಹಣದಿಂದ ನಾನೇನು ಮಾಡಬೇಕು ಎಂದು ನನಗೆ ತಿಳಿಯದು. ನನಗಾಗಿ ಈ ಹಣ ನನಗೆ ಬೇಕಿಲ್ಲ. ಹಾಗೂ ವೈಯಕ್ತಿಕ ಬಳಕೆಗೆ ಅದನ್ನು ಸ್ವೀಕರಿಸುವುದೂ ಉಚಿತವಲ್ಲ. ಸಾರ್ವಜನಿಕ ಕೆಲಸಕ್ಕಾಗಿ ಆ ಹಣವನ್ನು ನ್ಯಾಸವಾಗಿ ಇಟ್ಟುಕೊಳ್ಳುವುದಕ್ಕೆ ನಾನು ಅದನ್ನು ಸ್ವೀಕರಿಸಬಹುದು. ನಮ್ಮ ಮುಂದಿರುವ ರಾಷ್ಟ್ರೀಯ ಕರ್ತವ್ಯ ಎಷ್ಟು ದೊಡ್ಡದೂ, ಎಷ್ಟು ತುರ್ತೂ ಆಗಿದೆಯೆಂದರೆ ನಾನು ತೋರಿಸುವುದಕ್ಕೆ ಸಾಧ್ಯವಾಗಿರಬಹುದಾದ್ದಕ್ಕಿಂತಲೂ ಹೆಚ್ಚು ಶ್ರದ್ಧೆ, ಸಾಹಸಗಳಿಂದ ನೀವು ಒಟ್ಟಿಗೆ ದುಡಿಯಬೇಕು. ಈ ಕರ್ತವ್ಯವನ್ನು ಮುಂದೆ ಹಾಕುವಂತಿಲ್ಲ. ಮೇಲೆದ್ದು ಕೆಲಸ ಮಾಡುವಂತೆ ನಮ್ಮ ಮಾತೃಭೂಮಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಹೇಳುತ್ತಿದೆ. ಇಲ್ಲಿ ಪ್ರತಿಸ್ಪರ್ಧೆ, ಅಸೂಯೆ, ಪ್ರತಿಷ್ಠೆ, ಜರೆತ ಅಥವಾ ಭಯಕ್ಕೆ ಸ್ಥಳವಿಲ್ಲ. ನಮ್ಮ ಪ್ರಯತ್ನಗಳಿಗೆ ದೇವರು ಮಾತ್ರ ಸಹಾಯ ಮಾಡಬಲ್ಲ ಹಾಗೂ ಅವುಗಳ ಫಲವನ್ನು ನಾವಲ್ಲದೆ ಹೋದರೂ ಮುಂದಿನ ಪೀಳಿಗೆ ಪಡೆಯುತ್ತದೆ ಎಂಬುದು ಖಚಿತ."

ತಿಲಕರಿಗೆ ನೋಟೀಸ್ ಜಾರಿ ಮಾಡಿದ್ದ ಜಿಲ್ಲಾ ಮ್ಯಾಜಿಸ್ಟ್ರೇಟ್, ನೋಟೀಸ್ ಆಗಸ್ಟ್ 7ರಂದು ವಿಚಾರಣೆಗೆ ಬಂದಾಗ, ತಾನೇ ನ್ಯಾಯಾಧೀಶನ ಕಾರ್ಯ ನಿರ್ವಹಿಸಿದ. "ಸರ್ಕಾರದ ವಿರುದ್ಧ ತಮ್ಮ ಸಭಿಕರಲ್ಲಿ ಅಸಮಾಧಾನವನ್ನುಂಟು ಮಾಡಲು ತಿಲಕರು ಬಯಸಿದರು" ಎಂಬ ತೀರ್ಮಾನಕ್ಕೆ ಆತ ಬಂದಿದ್ದು ಅಸಹಜವೇನಾಗಿರಲಿಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 108ರ ಮೇರೆಗೆ ಕರಾರು ಪತ್ರ ಬರೆದು ಕೊಡುವಂತೆ ಹಾಗೂ ಜಾಮೀನುಗಳನ್ನು ಒದಗಿಸುವಂತೆ ತಿಲಕರಿಗೆ ಆತ ನಿರ್ದೇಶಿಸಿದ.

ತಿಲಕರು ಬಾಂಬೆ ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಯನ್ನು ನ್ಯಾಯಾಧೀಶ ಬ್ಯಾಚೆಲರ್ ಮತ್ತು ನ್ಯಾಯಾಧೀಶ ಲಲ್ಲೂಭಾಯಿ ಶಾ ನವೆಂಬರ್ 9, 1916ರಂದು ಪರಿಗಣಿಸಿದರು. ವಿಚಾರಣೆ ಬೇಗ ನಡೆಯಿತು. ಅವರು ಕೊಟ್ಟ ತೀರ್ಪು ಪ್ರತಿವಾದಿಗೆ ಮಾತ್ರ ವೈಯಕ್ತಿಕವಾಗಿ ಅತ್ಯಂತ ಪ್ರಾಮುಖ್ಯವಾಗಿದ್ದುದೇ ಅಲ್ಲದೆ, ಹೋಂ ರೂಲ್ ಚಳವಳಿ ಹಾಗೂ ವಾಕ್ ಸ್ವಾತಂತ್ರ್ಯದ ಧ್ಯೇಯಕ್ಕೂ ಅಷ್ಟೇ ಮುಖ್ಯವಾಗಿತ್ತು. 1897ರಲ್ಲಿ ಶಿಕ್ಷೆ ಪಡೆದಾಗಿನಿಂದ ತಿಲಕರ ಬೆನ್ನಿಗೆ ಬಿದ್ದಿದ್ದ ರಾಜದ್ರೋಹದ ವ್ಯಾಖ್ಯೆಯನ್ನು ಈ ತೀರ್ಪು ತಳ್ಳಿಹಾಕಿತು.

ನ್ಯಾಯಮೂರ್ತಿ ಶಾ ಅವರು ತಿಲಕರನ್ನು ಆಪಾದನೆಯಿಂದ ಮುಕ್ತಗೊಳಿಸಿ, "ಒಟ್ಟಾರೆ ಅವರ ಭಾಷಣಗಳನ್ನು ಓದಿದಾಗ, ಭಾರತೀಯರು ಹೋಂ ರೂಲ್ ಗಳಿಸಬೇಕೆಂಬ ಬೇಡಿಕೆಯನ್ನು ಮುಂದಿಡುವುದು, ಈ ಬೇಡಿಕೆಗೆ ಬೆಂಬಲವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಮತ್ತು ಹೋಂ ರೂಲ್ ಲೀಗ್‌ಗೆ ಸದಸ್ಯರನ್ನು ಸೇರಿಸುವುದು – ಇಷ್ಟು ಮಾತ್ರ ಅವರ ಗುರಿಯಾಗಿತ್ತು ಎಂದು ತೋರುತ್ತದೆ. ಈ ಗುರಿಯನ್ನು ಸಾಧಿಸಲು ಯಾವುದೇ ಸಂವಿಧಾನಿಕವಲ್ಲದ ಹಾಗೂ ಕಾನೂನುಬದ್ಧವಲ್ಲದ ವಿಧಾನಗಳನ್ನು ತಿಲಕರು ಸಲಹೆ ಮಾಡಿಲ್ಲ," ಎಂದು ಹೇಳಿದರು.

ತಿಲಕರ ಬಿಡುಗಡೆಯಿಂದ ಹೋಂ ರೂಲ್ ಚಳವಳಿಗೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು. ಸುಮಾರು ಇದೇ ಸಮಯಕ್ಕೆ ಶ್ರೀಮತಿ ಬೆಸೆಂಟ್ ಅವರೂ ಸಹ ಇದೇ ರೀತಿಯ ಹೋಂ ರೂಲ್ ಲೀಗ್ ಅನ್ನು ಮದ್ರಾಸ್‌ನಲ್ಲಿ ಪ್ರಾರಂಭಿಸಿದರು. ಅದರ ಮುಂದಿನ ವರ್ಷ ಅವರು ಈ ಸಂಬಂಧದಲ್ಲಿ ಸರ್ಕಾರದೊಂದಿಗೆ ತೊಂದರೆಗೀಡಾದರು. ಈ ಎರಡೂ ಸಂಸ್ಥೆಗಳು ಸಮಾನ ಗುರಿಗಳನ್ನು ಹೊಂದಿದ್ದವು ಹಾಗೂ ನಿಕಟ ಸಹಮತದಿಂದ ಕೆಲಸ ಮಾಡಿದವು. ತಿಲಕರು ಪ್ರಚಾರ ಕಾರ್ಯವನ್ನು ಮಾಡುತ್ತಿದ್ದುದೇ ಅಲ್ಲದೆ "ಭಾರತದ ಉತ್ತಮ ಆಡಳಿತಕ್ಕಾಗಿ ಮಸೂದೆ"ಯೊಂದರ ಕರಡನ್ನು ಸಿದ್ಧಪಡಿಸುವುದರಲ್ಲೂ ತೊಡಗಿದ್ದರು. ಈ ಮಸೂದೆಯನ್ನು ಬ್ರಿಟಿಷ್ ಪಾರ್ಲಿಮೆಂಟ್‌ಗೆ ಸಲ್ಲಿಸುವ ಉದ್ದೇಶವಿತ್ತು.

ಡಿಸೆಂಬರ್ 1916ರ ಕೊನೆಯ ವಾರದಲ್ಲಿ ಲಕ್ನೊ ಕಾಂಗ್ರೆಸ್ ನಡೆಯುವ ಹೊತ್ತಿಗೆ ಹೋಂ ರೂಲ್ ಲೀಗ್ ಭದ್ರವಾಗಿ ಸ್ಥಾಪಿತಗೊಂಡಿತ್ತು. ಕಾಂಗ್ರೆಸ್‌ನ ಇತಿಹಾಸದಲ್ಲಿ ಡಿಸೆಂಬರ್ 1916 ಒಂದು ಪ್ರಮುಖ ಮೈಲಿಗಲ್ಲಾಗಿತ್ತು. ಆಗ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಅಂಬಿಕಾ ಚರಣ್ ಮಜುಂದಾರ್ ಹೀಗೆ ಹೇಳಿದರು: "ಸಂಯುಕ್ತ ಕಾಂಗ್ರೆಸ್‌ಅನ್ನು ಸೂರತ್‌ನ ಹಳೆಯ ಫ್ರೆಂಚ್ ಉದ್ಯಾನವನದ ಕಸದಲ್ಲಿ ಹೂಳಲಾಗಿತ್ತು. ಆದರೆ ಕಾಂಗ್ರೆಸ್‌ಅನ್ನು ಅದು ವೈಭವದ ದೊರೆ ವಾಜಿದ್ ಅಲಿ ಶಾನ ಉದ್ಯಾನವನವಾದ ಲಕ್ನೊದ ಕೈಸರ್ ಬಾಗ್‌ನಲ್ಲಿ ಪುನರ್ಜನ್ಮ ತಾಳಿದೆ."

ತಮ್ಮ ಅನುಯಾಯಿಗಳು ಏರ್ಪಾಡು ಮಾಡಿದ್ದ "ಹೋಂ ರೂಲ್ ಲೀಗ್ ವಿಶೇಷ ರೈಲಿನಲ್ಲಿ" ತಿಲಕರು ಬಾಂಬೆಯಿಂದ ಲಕ್ನೊಗೆ ಮಾಡಿದ ಪ್ರಯಾಣ ವಿಜೃಂಭಣೆಯ ಮೆರವಣಿಗೆಯಾಗಿತ್ತು. ದಾರಿಯ ನಿಲ್ದಾಣಗಳಲ್ಲಿ ರೈಲು ನಿಂತಾಗಲೆಲ್ಲ ತಿಲಕ್ ಮಹಾರಾಜ್ ಕೀ ಜೈ ಎಂಬ ಕೂಗು ಗಾಳಿಯನ್ನು ಛೇದಿಸುತ್ತಿತ್ತು. ಹಾಗೂ ಅವರಿಗೆ ಅನೇಕ ಸನ್ಮಾನಗಳನ್ನು ಮಾಡಲಾಯಿತು. ವಿಶೇಷ ರೈಲು ಲಕ್ನೊ ತಲುಪಿದಾಗ ರಾತ್ರಿ

ಬಹಳ ಹೊತ್ತಾಗಿದ್ದರೂ ಅಲ್ಲಿ ತಿಲಕರಿಗೆ ದೊರೆತ ಸ್ವಾಗತ ಬೇರೆ ಎಲ್ಲ ಕಡೆ ದೊರೆತ ಸ್ವಾಗತಗಳನ್ನು ಮೀರಿಸಿತ್ತು. ಅವರನ್ನು ಸ್ವಾಗತಿಸಲು ಜನರ ಭಾರಿ ಗುಂಪು ಸ್ಟೇಶನ್ನಿನಲ್ಲಿ ಕಾದಿತ್ತು ಹಾಗೂ ಅವರು ಇಳಿದುಕೊಳ್ಳುವ ಸ್ಥಳಕ್ಕೆ ಅವರನ್ನೊಯಲು ಬಂದಿದ್ದ ಗಾಡಿಯನ್ನು ಉತ್ಸಾಹಿ ಅನುಯಾಯಿಗಳು ಹಟತೊಟ್ಟು ಎಳೆದುಕೊಂಡೇ ಹೋದರು.

ಎಂಟು ವರ್ಷಗಳ ದೀರ್ಘಕಾಲದ ನಂತರ ಕಾಂಗ್ರೆಸ್ ವೇದಿಕೆಯ ಮೇಲೆ ಕಾಣಿಸಿಕೊಂಡರೂ ಲಕ್ನೊ ಕಾಂಗ್ರೆಸ್‌ನಲ್ಲಿ ತಿಲಕರು ಅತ್ಯಂತ ಪ್ರಮುಖ ವ್ಯಕ್ತಿಯಾಗಿದ್ದರು. ಸೌಮ್ಯವಾದಿಗಳೂ. ಉಗ್ರವಾದಿಗಳೂ ಒಟ್ಟಿಗೆ ಕುಳಿತು ಚರ್ಚಿಸುತ್ತಿರುವುದನ್ನು ನೋಡುವುದೇ ಒಂದು ಸಂತೋಷವಾಗಿತ್ತು. ಕಾಂಗ್ರೆಸ್‌ನ ಜೊತೆಗೆ ಅದೇ ಕಾಲಕ್ಕೆ ಅಧಿವೇಶನವನ್ನು ನಡೆಸಿದ ಮುಸ್ಲಿಂ ಲೀಗ್ ಕಾಂಗ್ರೆಸ್‌ನೊಡನೆ ಹೊಂದಿದ ಮೈತ್ರಿ ಇನ್ನೂ ಸ್ವಾಗತಾರ್ಹವಾದ ಬೆಳವಣಿಗೆಯಾಗಿತ್ತು. ಭಾರತದ ರಾಜಕೀಯದ ಮೂರು ಹೊಳೆಗಳು ಹೀಗೆ ಮೊದಲ ಬಾರಿಗೆ ಮಿಳಿತಗೊಂಡು ಸರ್ಕಾರಕ್ಕೆ ಏಕತೆಯ ರೂಪವನ್ನು ತೋರಿಸಿದವು. ಲಕ್ನೊ ಕಾಂಗ್ರೆಸ್‌ನ ಮುಖ್ಯ ಗೊತ್ತುವಳಿಯಲ್ಲಿ ಎರಡು ಭಾಗಗಳಿದ್ದವು. ಪ್ರಾಂತೀಯ ಶಾಸನ ಸಭೆಗಳಲ್ಲಿ ಪ್ರತ್ಯೇಕ ಚುನಾಯಕ ಸಮುದಾಯಗಳ ಮೂಲಕ 'ಮುಸಲ್ಮಾನರಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕೆ ಒಪ್ಪಿ ಹಿಂದೂ ಮುಸಲ್ಮಾನರ ಪ್ರಶ್ನೆಯನ್ನು ಮೊದಲ ಭಾಗ ಬಗೆಹರಿಸಿತು. ಅಧೀನ ಸ್ಥಾನದಿಂದ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸ್ವಯಮಾಡಳಿತ ನಡೆಸುವ ಡೊಮಿನಿಯನ್ ಸ್ಥಾನಕ್ಕೆ ಭಾರತವನ್ನು ಏರಿಸುವುದಕ್ಕಾಗಿ ಸಂವಿಧಾನಿಕ ಸುಧಾರಣೆಯ ಯೋಜನೆಯನ್ನು ಗೊತ್ತುವಳಿಯ ಎರಡನೆಯ ಭಾಗ ರೂಪಿಸಿತು. ಗೊತ್ತುವಳಿಗೆ ಅನುಮೋದನೆ ದೊರೆಯುವಂತೆ ಮಾಡುವಲ್ಲಿ ತಿಲಕರು ಪ್ರಮುಖ ಪಾತ್ರ ವಹಿಸಿದರು. ಆದರೆ ಈ ಗೊತ್ತುವಳಿಯಲ್ಲಿ ಕಾಲಮಿತಿಯನ್ನು ಸೇರಿಸಬೇಕೆಂಬ ಅವರ ಸೂಚನೆಯನ್ನು ಕಾಂಗ್ರೆಸ್ ಒಪ್ಪಲಿಲ್ಲ.

ಲಕ್ನೊ ಕಾಂಗ್ರೆಸ್ ರಾಜಕೀಯ ಜೀವನವನ್ನು ಚುರುಕುಗೊಳಿಸಿತು ಹಾಗೂ ಅದಕ್ಕೊಂದು ಹೊಸ ಅವಸರವನ್ನೂ, ಗುರಿಯನ್ನೂ ನೀಡಿತು. 1908ರಿಂದೀಚೆಗೆ ದೇಶದಲ್ಲಿ ಉಂಟಾಗಿದ್ದ ನೈತಿಕ ಅಧಃಪತನ ಮತ್ತು ನಿರಾಶೆಗೆ ಬದಲಾಗಿ ಶಕ್ತಿಯ ಪ್ರಜ್ಞೆ ಮತ್ತು ಏಕತೆಯ ಭಾವನೆ ಉಂಟಾದವು. ಸ್ವರಾಜ್ಯದ ಬೇಡಿಕೆಗೆ ವಿಶಾಲ ತಳಹದಿಯನ್ನೊದಗಿಸಿ ಕಾಂಗ್ರೆಸ್ ಬ್ರಿಟಿಷ್ ಸರ್ಕಾರಕ್ಕೆ ಹೊಸ ಸವಾಲನ್ನು ಒಡ್ಡಿತು. ಬ್ರಿಟಿಷ್ ಸರ್ಕಾರ ಒತ್ತಿ ಹೇಳಿದಂತೆ ಪ್ರಜಾಸತ್ತೆಯ ಉಳಿವಿಗೆ ಅದು ಯುದ್ಧವನ್ನು ಮಾಡುತ್ತಿದ್ದರೆ, ಭಾರತದ ರಾಜಕೀಯ ಆಶೋತ್ತರಗಳನ್ನು ಈಡೇರಿಸುವುದನ್ನು ಮುಂದೆ ಹಾಕುವುದು ಅದಕ್ಕೆ ಸಾಧ್ಯವಿರಲಿಲ್ಲ. ಲಕ್ನೊ ಕಾಂಗ್ರೆಸ್‌ನ ಬೇಡಿಕೆಗೆ ಅಧಿಕಾರಶಾಹಿಯ ಮೊದಲ ಪ್ರತಿಕ್ರಿಯೆಯೆಂದರೆ ಕೊರಗು. ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಭೇದವನ್ನು ಬಿತ್ತುವ ಅದರ ಪ್ರಯತ್ನಗಳು ತಿಲಕರ ರಾಜತಾಂತ್ರಿಕತೆಯಿಂದ ಮತ್ತು ಜಿನ್ನಾರ ರಾಷ್ಟ್ರಪ್ರೇಮದಿಂದ ನಿರರ್ಥಕಗೊಂಡವು. ಸೌಮ್ಯವಾದಿಗಳೂ ಸಹ ಸರ್ಕಾರಕ್ಕೆ ಬೆನ್ನು ಮಾಡಿದ್ದು ಸ್ಪಷ್ಟವಾಗಿಯೆ ಇತ್ತು.

ಕಾಂಗ್ರೆಸ್ ಅಧಿವೇಶನದ ಸಾಧನೆಗಳನ್ನು ತಿಲಕರು ಈ ಮಾತುಗಳಲ್ಲಿ ಸಂಗ್ರಹವಾಗಿ ಹೇಳಿದರು: "ಲಕ್ನೊದಲ್ಲಿ ಎರಡು ಮಹತ್ತ್ವಪೂರ್ಣ ಸಂಗತಿಗಳು ನಡೆದವು.

ಸ್ವರಾಜ್ಯದ ಸ್ಪಷ್ಟ ಬೇಡಿಕೆಯನ್ನು ಸರ್ವಾನುಮತದಿಂದ ರೂಪಿಸಲಾಗಿದ್ದು ಒಂದು. ಹಿಂದೂಗಳು ಮತ್ತು ಮುಸಲ್ಮಾನರು ಆ ಬೇಡಿಕೆಯನ್ನು ಒಂದೇ ಧ್ವನಿಯಿಂದ ಮಂಡಿಸಿದ್ದು ಇನ್ನೊಂದು, ನಮ್ಮ ಮುಸಲ್ಮಾನ ಸೋದರರಿಗೆ ವ್ಯಾಪಕವಾದ ರಿಯಾಯಿತಿಗಳನ್ನು ತೋರಿಸಲಾಗಿದೆ ಎಂಬ ಭಾವನೆ ಕೆಲವು ಕಡೆ ಇದೆ; ಆದರೆ ಕಟ್ಟು ನಿಟ್ಟಾದ ನ್ಯಾಯದ ದೃಷ್ಟಿಯಿಂದ ಅದು ಸರಿಯೋ ತಪ್ಪೋ, ಸ್ವ-ಸರ್ಕಾರದ ಬೇಡಿಕೆಗೆ ಅವರ ಮನಃಪೂರ್ವಕ ಬೆಂಬಲವನ್ನು ಪಡೆಯುವುದಕ್ಕೆ ಅದು ಅಗತ್ಯವಾಗಿತ್ತು. ಅವರ ಸಹಾಯ ಮತ್ತು ಸಹಕಾರವಿಲ್ಲದೆ ನಾವು ಮುಂದುವರಿಯುವುದು ಸಾಧ್ಯವಿಲ್ಲ. ಅವರಿಗೆ ಹೆಚ್ಚಿನ ರಿಯಾಯಿತಿಗಳೂ ಸ್ಥಾನವೂ ದೊರೆತರೆ, ಸ್ವರಾಜ್ಯಗಳಿಸಬೇಕಾದ ಅವರ ಜವಾಬ್ದಾರಿಯೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಮೂರು ಪಕ್ಷಗಳ ಹೋರಾಟ ನಡೆದರೆ, ಮೂರನೆಯ ಪಕ್ಷವನ್ನು ನಿವಾರಿಸಲು ಎರಡು ಪಕ್ಷಗಳು ಒಂದಾಗ ಬೇಕು. ಬ್ರಿಟಿಷ್‌ರೊಂದಿಗೆ ನಡೆಸಿರುವ ಹಗ್ಗ ಎಳೆಯುವ ಸ್ಪರ್ಧೆಯಲ್ಲಿ, ಮುಸಲ್ಮಾನರು ತಮ್ಮ ಬಲವನ್ನು ನಮ್ಮ ಪಕ್ಷದ ಪರ ಬಳಸಬೇಕು. ನಮ್ಮನ್ನು ನಾವೇ ಆಳಬೇಕು ಎಂದು ನಿರ್ಭೀತಿಯಿಂದ ಕೇಳಬೇಕಾದ್ದು ಪ್ರತಿಯೊಬ್ಬರ, ಎಲ್ಲರ ತಕ್ಷಣದ ಕರ್ತವ್ಯ."

ಈ ಮಾತುಗಳೊಂದಿಗೆ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಶ್ರೀ ಜಿನ್ನಾ ಮಾಡಿದ ಅಧ್ಯಕ್ಷೀಯ ಭಾಷಣದ ಕೆಲವು ಮಾತುಗಳನ್ನು ಇಲ್ಲಿ ಉಪಯುಕ್ತವಾಗಿ ಹೇಳಬಹುದು. "ತನ್ನ ಸಾಮಾನ್ಯ ದೃಷ್ಟಿ ಮತ್ತು ಆದರ್ಶದಲ್ಲಿ ಆಲ್ ಇಂಡಿಯಾ ಮುಸ್ಲಿಂಲೀಗ್ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ಸರಿಯೆದೆಯಾಗಿ ನಿಂತಿದೆ ಹಾಗೂ ದೇಶ ಒಟ್ಟಾರೆ ಮುಂದುವರಿಯುವುದಕ್ಕೆ ನಡೆಯುವ ಯಾವುದೇ ರಾಷ್ಟ್ರಪ್ರೇಮಿ ಪ್ರಯತ್ನಗಳಲ್ಲಿ ಭಾಗವಹಿಸಲು ಸಿದ್ಧವಾಗಿದೆ."

ಲಕ್ನೊದಿಂದ ತಿಲಕರು ಕಾನ್ಪುರ ಮತ್ತು ಕಲ್ಕತ್ತೆಗೆ ಹೋದರು. ಅವರು ಮುಂದಿನ ಹದಿನೆಂಟು ತಿಂಗಳುಗಳಲ್ಲಿ ದೇಶಾದ್ಯಂತ ಪ್ರವಾಸ ಕೈಗೊಂಡರು. ಅವರು ಹೋದಲ್ಲೆಲ್ಲಾ ಹೋಂ ರೂಲ್‌ನ ಸಂದೇಶವನ್ನು ಸಾರಿದರು. ಒಮ್ಮೊಮ್ಮೆ ಅದರ ಬಗ್ಗೆ ವಿವರಿಸುತ್ತಿದ್ದರು, ಕೆಲವೊಮ್ಮೆ ಅದರ ವಿಶಿಷ್ಟ ಅಂಶಗಳನ್ನು ಒತ್ತಿ ಹೇಳುತ್ತಿದ್ದರು, ಇನ್ನು ಕೆಲವೊಮ್ಮೆ ವಿಸ್ತಾರವಾಗಿ ವರ್ಣಿಸುತ್ತಿದ್ದರು ಹಾಗೂ ಅದಕ್ಕೊಂದು ಹೊಸ ಮೊನೆ ಕೊಡುತ್ತಿದ್ದರು. ಉದಾಹರಣೆಗೆ ಕಾನ್ಪುರದಲ್ಲಿ ಅವರು ಹೀಗೆ ಹೇಳಿದರು:

"ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನರಾಗಿ ಮಾತ್ರ ನಾವು ಉಳಿಯುತ್ತೇವೆ. ಕೇವಲ ಸೇವಕರಾಗಿ, ಭಾರ ಹೊರುವವರಾಗಿ ನಾವು ಈ ಸಾಮ್ರಾಜ್ಯದಲ್ಲಿ ಜೀವಿಸುವುದಿಲ್ಲ. ಕುರಿಗಳ ಮಂದೆಯಲ್ಲಿ ಬೆಳೆದ ಹುಲಿಮರಿ ನೀರಿನಲ್ಲಿ ತನ್ನ ಪ್ರತಿಬಿಂಬ ಕಂಡು ತನ್ನ ನಿಜ ವಾದ ಸ್ವರೂಪವನ್ನು ಅರಿತಂತೆ ಭಾರತ ತನ್ನ ನಿಜವಾದ ಬಲವನ್ನೂ ಗುಣವನ್ನೂ ಈಗ ಅರಿತುಕೊಂಡಿದೆ. ತಮ್ಮ ನಿಜವಾದ ಸ್ಥಾನಮಾನ ಮತ್ತು ಭವಿಷ್ಯದ ಬಗ್ಗೆ ಭಾರತದ ಜನತೆ ಈಗ ಸಂಪೂರ್ಣವಾಗಿ ಎಚ್ಚೆತ್ತಿದ್ದಾರೆ. ಭಾರತೀಯರಂತೆ ಏಷ್ಯಾದವರೇ ಆದ ಜಪಾನೀಯರು ಸ್ವರಾಜ್ಯದ ಸ್ವಾತಂತ್ರ್ಯ, ಜವಾಬ್ದಾರಿಗಳನ್ನು ಅನುಭವಿಸುತ್ತಿರುವಾಗ ನಾವು ಏಕೆ ಅವುಗಳನ್ನು ಹೊಂದಬಾರದು?"

ಲಕ್ನೊದಲ್ಲಿ ಸ್ಥಾಪಿಸಲಾದ ಏಕತೆ ಮತ್ತು ಉಕ್ಕೇರಿದ ರಾಷ್ಟ್ರೀಯ ಭಾವನೆಯನ್ನು

ಸರ್ಕಾರ ಗಾಬರಿಯಿಂದ ಗಮನಿಸಿತು.ಫೆಬ್ರುವರಿ 1917ರಲ್ಲಿ ಭಾರತದ ರಕ್ಷಣಾ ಕಾಯಿದೆಯ ಮೇರೆಗೆ, ಪಂಜಾಬ್ ಪ್ರಾಂತ್ಯವನ್ನು ತಿಲಕರು ಪ್ರವೇಶಿಸುವುದನ್ನು ನಿಷೇಧಿಸಿ ಆ ಸರ್ಕಾರ ಆಜ್ಞೆ ಹೊರಡಿಸಿತು. ಜೂನ್‌ನಲ್ಲಿ, ಮದ್ರಾಸ್ ಸರ್ಕಾರ ಶ್ರೀಮತಿ ಬೆಸೆಂಟ್ ಮತ್ತು ಅವರ ಇಬ್ಬರು ಸಹೋದ್ಯೋಗಿಗಳನ್ನು ನಿರ್ಬಂಧದಲ್ಲಿಟ್ಟಿತು. ಈ ಮಧ್ಯೆ ಹೋಂ ರೂಲ್ ಚಳವಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಧೋರಣೆಯನ್ನು ತಿಳಿಸುವ ರಹಸ್ಯ ಸುತ್ತೋಲೆಯನ್ನು ಭಾರತ ಸರ್ಕಾರ ಸ್ಥಳೀಯ ಸರ್ಕಾರಗಳಿಗೆ ಕಳಿಸಿತು. "ಭಾರತ ಸರ್ಕಾರ ಶಿಫಾರ್ಸು ಮಾಡಿದ ಸುಧಾರಣೆಗಳಾಗಲಿ ಅಥವಾ ಬ್ರಿಟಿಷ್ ಸರ್ಕಾರ ಅನುಮೋದಿಸುವ ಸಂಭವ ಇರುವ ಯಾವುದೇ ಸುಧಾರಣೆಗಳಾಗಲಿ ಭಾರತಕ್ಕೆ ಹೋಂ ರೂಲ್ ಶೀಘ್ರವಾಗಿ ಕೊಡಬೇಕೆಂಬ, ಚಳವಳಿಗಾರರು ಮರುಳಾದ ತಮ್ಮ ಸಭಿಕರ ಮುಂದಿಡುತ್ತಿರುವ, ಅಳತೆಗೆಟ್ಟ ಬೇಡಿಕೆಗಳನ್ನು ಹೋಲುವುದು ಸಾಧ್ಯವಿಲ್ಲ. ಹೋಂರೂಲ್ ಸಂಸ್ಥೆಗಳು ಆಸೆಗಳನ್ನು ಎಷ್ಟು ದೊಡ್ಡದಾಗಿ ಕೆರಳಿಸುತ್ತವೋ, ಅಷ್ಟೇ ದೊಡ್ಡದಾಗಿ ನಿರಾಶೆ ಉಂಟಾಗುತ್ತದೆ ಹಾಗೂ ಬ್ರಿಟಿಷ್ ಸರ್ಕಾರ ಅಂಗೀಕರಿಸಬಹುದಾದ ನಿಜವಾದ ಸುಧಾರಣೆಗಳು ಜಾರಿಗೆ ಬರಬೇಕಾದಾಗ ಪ್ರತಿಭಟನೆಯೂ ಅಷ್ಟೇ ಭೀಕರವಾಗಿರುತ್ತದೆ ಎಂಬ ಸತ್ಯವನ್ನು ಸುತ್ತೋಲೆ ಮರೆಮಾಚಲಿಲ್ಲ.

ಹೀಗೆ ದೇಶವನ್ನು ಆಳುವವರು ಹೋಂ ರೂಲ್ ವಿಷಯವನ್ನು ಸಾರಾಸಗಟು ಮೂಲೆಗೆ ತಳ್ಳಿಬಿಟ್ಟರು. ಆದರೆ ಅವರಿಚ್ಛಿಸಿದಂತೆ ಅದನ್ನು ''ಮನಸ್ಸಿನಿಂದಲೂ ಹೊರಗೆ ತಳ್ಳುವುದು" ಸಾಧ್ಯವಾಗಲಿಲ್ಲ. ಹೋಂ ರೂಲ್ ಚಳವಳಿಯ ನಾಯಕರನ್ನು ಪೀಡಿಸುವ ಸರ್ಕಾರದ ಧೋರಣೆಯಿಂದ ಚಳವಳಿ ತೀವ್ರಗೊಳ್ಳುವುದಕ್ಕಷ್ಟೇ ಸಹಾಯಕವಾಯಿತು.

ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್‌ಫೋರ್ಡ್ ವಿದೇಶಾಂಗ ಕಾರ್ಯದರ್ಶಿಗೆ ಕಳಿಸಿದ ರಹಸ್ಯ ವರದಿಯಲ್ಲಿ ಹೀಗೆ ಬರೆದ:

"ತಿಲಕ್, ಶ್ರೀಮತಿ ಬೆಸೆಂಟ್ ಮತ್ತು ಇತರರು ತಕ್ಷಣದ ಹೋಂ ರೂಲ್‌ಗಾಗಿ ಚಳವಳಿಯನ್ನು ಉತ್ಸಾಹದಿಂದ ಪ್ರಚೋದಿಸುತ್ತಿದ್ದಾರೆ ಹಾಗೂ ಈ ಬಗ್ಗೆ ಭಾರತ ಸರ್ಕಾರದ ಧೋರಣೆಯ ಬಗ್ಗೆ ಯಾವುದೇ ನಿರ್ದಿಷ್ಟ ಪ್ರಕಟಣೆ ಇಲ್ಲದಿರುವುದರಿಂದ, ಇದುವರೆಗೆ ಕಡಿಮೆ ಪ್ರಗತಿಪರ ಅಭಿಪ್ರಾಯಗಳನ್ನು ಹೊಂದಿದ್ದವರಲ್ಲಿ ಅನೇಕರನ್ನೂ ಸಹ ಚಳವಳಿ ಆಕರ್ಷಿಸುತ್ತದೆ. ಚಳವಳಿ ದೇಶದಾದ್ಯಂತ ಜನರ ಮೇಲೆ ಕೇಡಿನ ಪರಿಣಾಮ ಉಂಟುಮಾಡುತ್ತಿದೆ. ಪ್ರಸಕ್ತ ಆಡಳಿತದ ವ್ಯವಸ್ಥೆ ಮತ್ತು ವಿಧಾನದ ಮೇಲೆ ಅವಿರತವಾದ ಹಾಗೂ ದುರುದ್ದೇಶಪೂರಿತವಾದ ದಾಳಿಗಳು ನಡೆಯುತ್ತಿದ್ದು, ಅವು ಅಪಾಯವನ್ನು ಹೆಚ್ಚಿಸುತ್ತಿವೆ."

ಯುದ್ಧ ಮುಗಿದ ನಂತರ ಜಾರಿಗೆ ತರಲು ಉದ್ದೇಶಿಸಿರುವ ಸಂವಿಧಾನಿಕ ಬದಲಾವಣೆಗಳ ಬಗ್ಗೆ ಬೇಗ ಘೋಷಣೆ ಹೊರಡಿಸಬೇಕೆಂದು ವೈಸ್‌ರಾಯ್ ಒತ್ತಾಯ ಪಡಿಸಿದ ಈ ಮನವಿಗೆ ಉತ್ತರವಾಗಿ ಭಾರತಕ್ಕಾಗಿದ್ದ ವಿದೇಶಾಂಗ ಕಾರ್ಯದರ್ಶಿ ಎಡ್ವಿನ್ ಮಾಂಟೆಗ್ಯು ಆಗಸ್ಟ್ 20,1917ರಂದು ಪಾರ್ಲಿಮೆಂಟಿನಲ್ಲಿ ಐತಿಹಾಸಿಕ ಪ್ರಕಟಣೆಯನ್ನೂ ಮಾಡಿದ. "ಬ್ರಿಟಿಷ್ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿ ಭಾರತದಲ್ಲಿ ಜವಾಬ್ದಾರಿಯುತ ಸರ್ಕಾರ ಹಂತಹಂತವಾಗಿ ಉಂಟಾಗಬೇಕೆಂಬ ದೃಷ್ಟಿಯಿಂದ

ಆಡಳಿತದ ಪ್ರತಿಯೊಂದು ಶಾಖೆಯಲ್ಲೂ ಭಾರತೀಯರನ್ನು ಹೆಚ್ಚು ಹೆಚ್ಚಾಗಿ ಹೊಂದುವುದು ಹಾಗೂ ಸ್ವಯಮಾಡಳಿತದ ಸಂಸ್ಥೆಗಳನ್ನು ಕಾಲಕ್ರಮೇಣ ಅಭಿವೃದ್ಧಿಪಡಿಸುವುದು ಬ್ರಿಟಿಷ್ ಸರ್ಕಾರದ ಧೋರಣೆಯಾಗಿದೆ" ಎಂದು ಆತ ಘೋಷಿಸಿದ. "ಆ ದಿಕ್ಕಿನಲ್ಲಿ ಪ್ರಗತಿಯನ್ನು ಹಂತಹಂತವಾಗಿ ಮಾತ್ರ ಸಾಧಿಸಲು ಸಾಧ್ಯ ಹಾಗೂ ಪ್ರತಿಯೊಂದು ಹೆಜ್ಜೆ ಇಡಬೇಕಾದ ಕಾಲ ಮತ್ತು ಅಳತೆಯನ್ನೂ ಸರ್ಕಾರ ತೀರ್ಮಾನಿಸಬೇಕು" ಎಂದೂ ಹೇಳಲಾಯಿತು.

"ಭಾಷೆ ಹಾಗೂ ವಸ್ತು ಇವೆರಡರಲ್ಲೂ ಅತೃಪ್ತಿಕರವಾಗಿದ್ದರೂ" ಸರಿಯಾದ ದಿಕ್ಕಿನಲ್ಲಿ ಇಟ್ಟ ಹೆಜ್ಜೆ ಎಂದು ತಿಲಕರು ಪ್ರಕಟಣೆಯನ್ನು ಸ್ವಾಗತಿಸಿದರು. ಧೋರಣೆ ತಿಳಿಸಿದ ಪ್ರಕಟಣೆಯ ಭಾವನೆಯನ್ನು ಅಂಗೀಕರಿಸಬೇಕೆಂದೂ ಅವರು ಜನರಿಗೆ ಸಲಹೆ ಮಾಡಿದರು. ಭಾರತಕ್ಕೆ ಮೊಂಟೆಗ್ಯು ನೀಡಲಿದ್ದ ಭೇಟಿಯ ಬಗ್ಗೆ ಇತರರಂತೆ ಬಹುಶಃ ತಿಲಕರೂ ಹೆಚ್ಚಿನ ಆಸೆಯನ್ನೇ ಇಟ್ಟುಕೊಂಡಿದ್ದರು. ಆದರೆ "ಪಾರ್ಲಿಮೆಂಟರಿ ಪ್ರಕಟಣೆಯಿಂದ ಉಂಟಾಗಿರುವ ಚಿನ್ನದಂಥ ಭವಿಷ್ಯದ" ಬಗ್ಗೆ ಸೌಮ್ಯವಾದಿಗಳು ತೋರಿದ ಉತ್ಸಾಹವನ್ನು ತಿಲಕರು ಹೊಂದಿರಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ, ಈ ಭೇಟಿಯಿಂದ ಭಾರತೀಯ ಅಭಿಪ್ರಾಯದಲ್ಲಿ ಭೇದ ಉಂಟಾಗಬಾರದೆಂದು ಅವರು ಕಾತುರರಾಗಿದ್ದರು. ಆದರೆ ಮಾಂಟ್‌ಫರ್ಡ್ ಸುಧಾರಣೆಗಳ ಬಗ್ಗೆ ಸೌಮ್ಯವಾದಿಗಳು ತೋರಿದ ಅತಿಶಯ ಉತ್ಸಾಹದಿಂದ ಅಂತಿಮವಾಗಿ ಅವರುಗಳು ಕಾಂಗ್ರೆಸ್ಸನ್ನು ಬಿಡಬೇಕಾಯಿತು.

1918ರ ಶರತ್ಕಾಲದಲ್ಲಿ ಮಾಂಟೆಗ್ಯು ಭಾರತಕ್ಕೆ ಭೇಟಿ ನೀಡಿ, ರಾಜಕಾರಣಿಗಳು, ಅಧಿಕಾರಿಗಳು ಮತ್ತು ರಾಜಕುಮಾರರೂ ಸೇರಿದಂತೆ ಅನೇಕ ಜನರನ್ನು ಸಂದರ್ಶಿಸಿದ ಆತ ಬರೆದ 'ಇಂಡಿಯನ್ ಡಯರಿ'ಯಲ್ಲಿ ತಾನು ಭೇಟಿ ಮಾಡಿದ ವ್ಯಕ್ತಿಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಬೆರಗುಗೊಳಿಸುವಷ್ಟು ಮುಚ್ಚುಮರೆಯಿಲ್ಲದೆ ಹೇಳಿದ್ದಾನೆ. ಆತ ತಿಲಕರನ್ನು ಕಾಂಗ್ರೆಸ್ ನಿಯೋಗದ ಸದಸ್ಯರಾಗಿಯೂ, ವೈಯಕ್ತಿಕವಾಗಿಯೂ ಭೇಟಿಯಾಗಿದ್ದ: "ಭಾರತದಲ್ಲಿ ಯಾವುದೇ ವ್ಯಕ್ತಿ ಹೊಂದಿರಬಹುದಾದ ಪ್ರಭಾವವನ್ನು ಬಹುಶಃ ಹೊಂದಿದ ರಾಜಕಾರಣಿಯಾದ ಹಾಗೂ ಅತಿಗಾಮಿಯಾದ ತಿಲಕರನ್ನು ನಾವು ನೋಡಿದೆವು......ಕಾಂಗ್ರೆಸ್ ಕೋರಿದ್ದರ ಹೊರತಾಗಿ ಬೇರೆ ಯಾವುದರಿಂದಲೂ ಅವರಿಗೆ ತೃಪ್ತಿಯಾಗುವುದಿಲ್ಲ ಎಂಬುದು ಸ್ಪಷ್ಟವಾಗಿತ್ತು. 'ಸರ್ಕಾರ ನಮಗೇನು ಕೊಡುತ್ತದೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಆದರೆ ಕಾಂಗ್ರೆಸ್ ಏನು ಕೇಳುತ್ತದೋ ಕನಿಷ್ಠ ಅದನ್ನು ಕೊಡದೆ ಹೋದರೆ ನಮಗೆ ತೃಪ್ತಿಯಾಗುವುದಿಲ್ಲ' ಎಂದು ಅವರು ಹೇಳಿದರು."

ಏಪ್ರಿಲ್ 27, 1918ರಂದು ವೈಸ್‌ರಾಯ್ ಕರೆದ ಯುದ್ಧ ಸಮ್ಮೇಳನಕ್ಕೆ ತಿಲಕರನ್ನು ಆಹ್ವಾನಿಸದೆ ಇದ್ದ ಬಗ್ಗೆ ಪ್ರಸ್ತಾಪಿಸಿ, ಮಾಂಟೆಗ್ಯು ಹೀಗೆ ಬರೆದಿದ್ದಾನೆ:

"ತಿಲಕರ ಬಗ್ಗೆ ಹೇಳುವುದಾದರೆ, ನಾನು ವೈಸ್‌ರಾಯ್ ಆಗಿದ್ದರೆ ಹೇಗೂ ಅವರೂ ಅವರನ್ನು ದಿಲ್ಲಿಗೆ ಕರೆಸುತ್ತಿದ್ದೆ. ಸದ್ಯಕ್ಕೆ ಅವರು ಬಹುಶಃ ಭಾರತದಲ್ಲೇ ಅತ್ಯಂತ ಪ್ರಬಲ ವ್ಯಕ್ತಿ ಹಾಗೂ ಅವರು ಇಷ್ಟಪಟ್ಟರೆ ಯುದ್ಧ ನಡೆಸುವುದಕ್ಕೆ ಸಹಾಯವಾಗಿ

ಸಹಾಯ ಮಾಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಅವರನ್ನು ಸಮ್ಮೇಳನಕ್ಕೆ ಕರೆಸದೆ ಇದ್ದರೆ, ಅತ್ಯಂತ ಪ್ರಬಲ ವ್ಯಕ್ತಿಗಳನ್ನು ಆರಿಸಲು ನಾವು ನಿರಾಕರಿಸಿದೆವು ಎಂದು ಯಾವಾಗಲೂ ಹೇಳಲಾಗುತ್ತದೆ."

ಯುದ್ಧ ಘೋಷಣೆಯ ಮರುದಿನ ಹೇಗೆ ತಿಲಕರು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ತಮ್ಮ ನಿಷ್ಠೆಯ ವಚನ ಕೊಟ್ಟು ಅದರ ಪರೀಕ್ಷಾ ಕಾಲದಲ್ಲಿ ಸಂಪೂರ್ಣ ಬೆಂಬಲ ನೀಡುವ ಆಶ್ವಾಸನೆಯನ್ನು ಕೊಟ್ಟರೆಂಬುದನ್ನು ಹಿಂದೆ ಗಮನಿಸಲಾಗಿದೆ. ಆದರೆ ಸರ್ಕಾರ ಅವರ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುವ ಮಟ್ಟಿಗೂ ಅನ್ಯೋನ್ಯತೆ ತೋರ ಲಿಲ್ಲ. ಯುದ್ಧದ ಮೊದಲೆರಡು ವರ್ಷಗಳಲ್ಲಿ ಅದು ರಾಷ್ಟ್ರೀಯವಾದಿಗಳ ಬೆಂಬಲ ವನ್ನೂ ಕೋರಲಿಲ್ಲ. ಆದರೆ 1917ರಲ್ಲಿ ಬ್ರಿಟನ್‌ನ ಶತ್ರು ಮೇಲುಗೈ ಪಡೆದಾಗ ಈ ದೇಶದಲ್ಲಿ ಸೈನಿಕರನ್ನೂ, ಸಂಪನ್ಮೂಲಗಳನ್ನೂ ಕಲೆ ಹಾಕುವ ಅಗತ್ಯ ತೀವ್ರವಾಗಿ ಉಂಟಾಯಿತು. ಇಷ್ಟಾದರೂ, ರಾಷ್ಟ್ರೀಯವಾದಿ ನಾಯಕರಿಗೆ ಎಲ್ಲ ರೀತಿಯ ಕಿರುಕುಳ ಕೊಡುವುದನ್ನು ಸರ್ಕಾರ ಮುಂದುವರಿಸಿತು. 'ಕಮಿಶನ್ಡ್' ಹುದ್ದೆಗಳಿಗೆ ಭಾರತೀಯ ರನ್ನು ಸೇರಿಸಿಕೊಳ್ಳಬೇಕೆಂಬ ರಾಷ್ಟ್ರೀಯವಾದಿಗಳ ಬೇಡಿಕೆಯನ್ನೂ ಸಹ ನಿರಾಕರಿಸ ಲಾಯಿತು.

ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳುವ ಬಗ್ಗೆ ತಿಲಕರ ನಿಲುವು ಸಹಜವಾಗಿ ಬದಲಾಯಿತು. ಅವರು ಹಿಂದೆ ಹೀಗೆ ಹೇಳಿದ್ದರು : "ವಯಸ್ಸು ಮತ್ತು ನರೆಗೂದಲು ಅನರ್ಹತೆಗಳಲ್ಲ ವಾದರೆ, ಯುದ್ಧರಂಗದಲ್ಲಿ ಮುಂದೆ ನಿಲ್ಲಲು ನಾನು ತಯಾರಿದ್ದೇನೆ." ಆದರೆ ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳುವ ಬಗ್ಗೆ ಗಾಂಧೀಜಿ ಹೊಂದಿದ್ದ ಕೇವಲ ನೈತಿಕವಾದ ಧೋರಣೆಯನ್ನು ಅನುಸರಿಸುವುದು ವಾಸ್ತವವಾದಿಯಾದ ಅವರಿಗೆ ಸಾಧ್ಯವಿರಲಿಲ್ಲ. ಫೆಬ್ರವರಿ 20, 1917 ರಂದು ತಿಲಕರು' ಕೇಸರಿ'ಯಲ್ಲಿ ಹೀಗೆ ಬರೆದರು : "ಮಿಲಿಟರಿ ಸೇವೆಗೆ ಭಾರತೀಯ ರನ್ನು ಸೇರಿಸಿಕೊಳ್ಳುವ ಅವಕಾಶವನ್ನು ಸರ್ಕಾರ ನೀಡಿರುವುದರ ಪ್ರಾಮುಖ್ಯತೆ ಏನು? ಈ ಕ್ರಮದ ಪ್ರಾಮುಖ್ಯತೆಯನ್ನು ವ್ಯಾಖ್ಯಾನಿಸುವುದರಲ್ಲಿ ನಾವು ಸ್ವಲ್ಪ ಇದ್ದದ್ದು ಇದ್ದಂತೆ ಮಾತನಾಡೋಣ. ಇಂದು ಸರ್ಕಾರ ನಮ್ಮ ನೆರವಿಲ್ಲದೆ ಏನೂ ಮಾಡುವಂತಿಲ್ಲ ಎಂದಷ್ಟೇ ಅದರ ಅರ್ಥ."

ದಿಲ್ಲಿ ಸಭೆಗೆ ಲಾರ್ಡ್ ಶೆಲ್ಮ್ಸ್‌ಫೋರ್ಡ್ ತಿಲಕರನ್ನು ಆಹ್ವಾನಿಸದೆ ಇದ್ದದ್ದನ್ನು ಸರಿ ಪಡಿಸಲೋಸುಗ ಬಾಂಬೆಯ ಗವರ್ನರ್ ಲಾರ್ಡ್ ವಿಲ್ಲಿಂಗ್‌ಡನ್ ಬಾಂಬೆಯಲ್ಲಿ ಜೂನ್ 10, 1918ರಂದು ತಾನು ಕರೆದ ಯುದ್ಧ ಸಮ್ಮೇಳನಕ್ಕೆ ಅವರನ್ನು ಆಹ್ವಾನಿಸಿದ. ಆದರೆ ಆತ ತನ್ನ ಭಾಷಣದ ಪ್ರಾರಂಭದಲ್ಲಿ ನಿರ್ನಿಮಿತ್ತನಾಗಿ ಹೋಂ ರೂಲ್ ಲೀಗ್‌ನವರ ವಿರುದ್ಧ ಅಪಮಾನಕರವಾದ ಮಾತುಗಳನ್ನಾಡಿದ್ದೇ ಅಲ್ಲದೆ ತಿಲಕರು ಭಾಷಣ ಮಾಡುತ್ತಿ ದ್ದಾಗ ಎರಡು ಬಾರಿ ಮಧ್ಯೆ ಅಡ್ಡ ಮಾತನಾಡಿದ. ಆಗ ತಿಲಕರು ಪ್ರತಿಭಟಿಸಿ ಸಭೆಯನ್ನು ತ್ಯಜಿಸಿದರು. ಅವರ ಹಿಂದೆ ಅನೇಕ ಇತರ ನಾಯಕರೂ ಸಭಾತ್ಯಾಗ ಮಾಡಿದರು. ಈ ಅಪಮಾನಕರ ವರ್ತನೆಯಿಂದ ಕೆರಳಿದ ತಿಲಕರು ಪೂನಾದಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಖಂಡತುಂಡವಾಗಿ ಸಾರಿದರು :

"ಯುದ್ಧಕ್ಕೆ ಸೈನಿಕರನ್ನು ನೀವು ಸರಬರಾಜು ಮಾಡಬೇಕೆಂದು ಮಾತ್ರ ಬ್ರಿಟಿಷರು

ಇಚ್ಛಿಸುತ್ತಾರೆ. 'ಭಾರತದ ಮೇಲೆ ವಿಪತ್ತು ತೂಗಾಡುತ್ತಿದೆ' ಎಂದು ಅವರು ನಮಗೆ ಹೇಳುತ್ತಾರೆ. ನಮಗೆ ಅದೇನು ವಿಪತ್ತು? ಯಾವ ಭಾರತದಲ್ಲಿ ನಮಗೆ ಯಾವ ಹಕ್ಕುಗಳು ಇಲ್ಲವ್ರೋ, ಎಲ್ಲಿ ನಮ್ಮನ್ನು ಗುಲಾಮರಂತೆ ಕಾಣಲಾಗುತ್ತಿದೆಯೋ ಆ ಭಾರತವನ್ನು ರಕ್ಷಿಸಲು ನಾವೇಕೆ ಮುಂದಾಗಬೇಕು?... ಸರ್ಕಾರ ವಾಸ್ತವವಾದ ಕ್ರಮಗಳನ್ನು ಕೈಗೊಂಡು ಭಾರತೀಯರಲ್ಲಿ ಎಂತಹ ಭಾವನೆ ಮೂಡಿಸಬೇಕೆಂದರೆ ಅವರು ತಮ್ಮ ದೇಶದ ಬಗ್ಗೆ ಸ್ಫೂರ್ತಿಗೊಂಡು ಅದಕ್ಕಾಗಿ ನಾವು ಸಾಯುತ್ತೇವೆ ಎಂದು ಹೇಳಬೇಕು. ಆಗ ಒಂದು ಕೋಟಿ ಜನರ ಸೈನ್ಯವನ್ನು ತಯಾರಿಸಲು ನಮಗೆ ಸಾಧ್ಯವಾಗುತ್ತದೆ ಎಂದು ನಾನು ಖಚಿತವಾಗಿ ತಿಳಿದಿದ್ದೇನೆ. ಆದರೆ ಭಾರತದ ಬೇಡಿಕೆಯನ್ನು ಒಪ್ಪದಿರುವ ಮೂಲಕ ಬ್ರಿಟಿಷ್ ಸರ್ಕಾರ ತಪ್ಪು ಧೋರಣೆಯನ್ನು ಅನುಸರಿಸುತ್ತಿದೆ. ನಾವು ನಮ್ಮ ತರುಣರಿಗೆ ಏನು ಹೇಳಬೇಕು? ಈ ಇಂಗ್ಲಿಷ್ ಜನರ ಜುಲುಂ ಬಲಗೊಳಿಸಲು ಸೈನ್ಯಕ್ಕೆ ಸೇರಿ ಎಂದು ಹೇಳಬೇಕೇ?"

ಈ ಕಹಿ ದೂಷಣೆ ಕೆಲಸ ಮಾಡಿತು ಹಾಗೂ ಭಾರತದ ರಕ್ಷಣಾ ಕಾಯಿದೆಯ ಮೇರೆಗೆ ತಿಲಕರ ಬಾಯಿ ಮುಚ್ಚುವ ಆಜ್ಞೆ ವಿಧಿಸಲಾಯಿತು. ಶಿರೋಲ್ ಪ್ರಕರಣದಲ್ಲಿ ಹೋರಾಡಲು ತಿಲಕರು ಇಂಗ್ಲೆಂಡ್‌ಗೆ ಶೀಘ್ರದಲ್ಲೇ ಪ್ರಯಾಣ ಮಾಡಬೇಕಾಗಿದ್ದರಿಂದ ಬಾಂಬೆ ಸರ್ಕಾರ ಅವರ ಮೇಲೆ ಇನ್ನೂ ತೀವ್ರ ಕ್ರಮವನ್ನು ಬಹುಶಃ ತೆಗೆದುಕೊಳ್ಳಲಿಲ್ಲ.

ಶ್ರೀಮತಿ ಬೆಸೆಂಟ್ ಅವರ ಅಧ್ಯಕ್ಷತೆಯಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್‌ನ ಅಧಿವೇಶನ ಮಾಂಟೆಗ್ಯೂ ಪ್ರಕಟಣೆಯ ಬಗ್ಗೆ ತನ್ನ "ಕೃತಜ್ಞಾಪೂರ್ವಕ ತೃಪ್ತಿ"ಯನ್ನು ವ್ಯಕ್ತಪಡಿಸಿತು. "ಭಾರತದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಅವಕಾಶ ಕೊಡುವ ಪಾರ್ಲಿಮೆಂಟರಿ ಕಾಯಿದೆಯನ್ನು ತಕ್ಷಣ ಅನುಮೋದಿಸಬೇಕಾದ ಅಗತ್ಯವನ್ನು" ಅದು ಒತ್ತಿ ಹೇಳಿತು. "ಶೀಘ್ರವಾಗಿ ಕಾಯಿದೆಯಲ್ಲಿಯೇ ಗೊತ್ತುಪಡಿಸುವ ಕಾಲಮಿತಿಯಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಹೊಂದಬೇಕು" ಎಂದೂ ಸಹ ಅಧಿವೇಶನ ಒತ್ತಾಯಪಡಿಸಿತು.

ಮಾಂಟ್‌ಫೋರ್ಡ್ ವರದಿ ಜುಲೈ 1918ರಲ್ಲಿ ಪ್ರಕಟಗೊಂಡಾಗ ಈ ಆಶಯ ಭಂಗವಾಯಿತು. ಕೆನಡಾದ ಡರ್‌ಹ್ಯಾಮ್ ವರದಿ ಸೂಚಿಸಿದಂತಹ ಡೊಮಿನಿಯನ್ ಸ್ಥಾನಮಾನದ ಸಮೀಪಕ್ಕೆ ಬರುವುದಿರಲಿ ಅಥವಾ ಅದನ್ನು ಪ್ರತೀಕ್ಷಿಸುವುದಿರಲಿ, ಮಾಂಟ್‌ಫೋರ್ಡ್ ವರದಿ ಕೇವಲ ಪ್ರಾಂತೀಯ ಸರ್ಕಾರಗಳಲ್ಲಿ ದ್ವಿಪ್ರಭುತ್ವವನ್ನು (ಡೈಆರ್ಕಿ) ಜಾರಿಗೆ ತಂದಿತು ಹಾಗೂ ಕೇಂದ್ರ ಸರ್ಕಾರವನ್ನು ಮೊದಲಿನಷ್ಟೇ ಬೇಜವಾಬ್ದಾರಿಯುತವಾಗಿ ಹಾಗೂ ನಿರಂಕುಶವಾಗಿ ಬಿಡಲಾಯಿತು. ಪ್ರಾಂತ್ಯಗಳಲ್ಲಿಯೂ ಸಹ ಗವರ್ನರುಗಳಿಗೆ ಮೀಸಲು ಅಧಿಕಾರಗಳನ್ನು ಕೊಡಲಾಯಿತು ಹಾಗೂ ಇವು ಜನಪ್ರಿಯ ಸರ್ಕಾರಗಳ ಮೇಲೆ ತೂಗುಗತ್ತಿಗಳಂತಿದ್ದವು.

ಮಾಂಟ್‌ಫೋರ್ಡ್ ವರದಿಯ ಬಗ್ಗೆ ತಿಲಕರ ಪ್ರತಿಕ್ರಿಯೆ 'ಕೇಸರಿ'ಯಲ್ಲಿ ಅವರು ಬರೆದ ಅಗ್ರ ಲೇಖನದ ಶೀರ್ಷಿಕೆಯಲ್ಲಿ ಮನಸ್ಸಿಗೆ ನಾಟುವಂತೆ ವ್ಯಕ್ತವಾಯಿತು: "ಬೆಳಗಾಗಿದೆ, ಆದರೆ ಸೂರ್ಯ ಎಲ್ಲಿ?" ಮಾಂಟ್‌ಫೋರ್ಡ್ ವರದಿಯನ್ನು ಪರಿಗಣಿಸಲು ಆಗಸ್ಟ್ 1918ರಲ್ಲಿ ಬಾಂಬೆಯಲ್ಲಿ ನಡೆದ ಕಾಂಗ್ರೆಸ್‌ನ ವಿಶೇಷ ಅಧಿವೇಶನ, "ಅವರ

ಸಲಹೆಗಳು ಒಟ್ಟಾರೆ ನಿರಾಶಾದಾಯಕವೂ ಅತೃಪ್ತಿಕರವೂ ಆಗಿವೆ" ಎಂದು ಸಾರಿತು. "ಭಾರತದ ಜನತೆ ಜವಾಬ್ದಾರಿ ಸರ್ಕಾರಕ್ಕೆ ಸಮರ್ಥರಾಗಿದ್ದಾರೆ ಹಾಗೂ ವರದಿಯಲ್ಲಿ ಅದಕ್ಕೆ ವಿರುದ್ಧ ಇರುವ ಊಹೆಗಳನ್ನು ನಿರಾಕರಿಸುತ್ತಾರೆ" ಎಂದು ಸ್ಪಷ್ಟೀಕರಿಸಿದ ಮುಖ್ಯ ಗೊತ್ತುವಳಿಯ ಬಗ್ಗೆ ಮಾತನಾಡುತ್ತಾ, ತಿಲಕರು ಹೀಗೆ ನುಡಿದರು :

"ಮಾಂಟ್‌ಫೋರ್ಡ್ ವರದಿ ಸುಂದರವಾದ, ಬಹಳ ಚತುರತೆಯ, ರಾಜತಾಂತ್ರಿಕ ನೈಪುಣ್ಯದ ದಾಖಲೆಯಾಗಿದೆ. ನಾವು ಎಂಟಾಣೆಯ ಸ್ವ-ಸರ್ಕಾರವನ್ನು ಕೇಳಿದೆವು. ಆ ವರದಿ ನಮಗೆ ಒಂದಾಣೆಯ ಸ್ವ-ಸರ್ಕಾರವನ್ನು ಕೊಟ್ಟಿದೆ ಹಾಗೂ ಎಂಟಾಣೆಯ ಸ್ವ-ಸರ್ಕಾರಕ್ಕಿಂತಲೂ ಅದು ಹೆಚ್ಚು ಅಮೂಲ್ಯವಾಗಿದೆ ಎಂದು ನಮಗೆ ಹೇಳಲು ಪ್ರಯತ್ನಿಸುತ್ತಿದೆ. ಜವಾಬ್ದಾರಿ ಸರ್ಕಾರದ ಒಂದು ಅಗುಳು ಪೂರ್ಣ ಸ್ವ-ಸರ್ಕಾರದ ನಮ್ಮ ಹಸಿವನ್ನು ನೀಗಿಸಲು ಬೇಕಾದ್ದಕ್ಕಿಂತಲೂ ಹೆಚ್ಚು ಎಂದು ನಾವು ನಂಬುವಂತೆ ಮಾಡುವುದರಲ್ಲಿ ವರದಿಯ ಸಾಹಿತ್ಯಿಕ ಕೌಶಲ್ಯ ಅಡಗಿದೆ. ಒಂದಾಣೆಯ ಜವಾಬ್ದಾರಿ ಸರ್ಕಾರಕ್ಕೆ ಧನ್ಯವಾದಗಳನ್ನು ತಿಳಿಸಿ, ಕಾಂಗ್ರೆಸ್-ಲೀಗ್ ಯೋಜನೆಯಲ್ಲಿರುವುದನ್ನೆಲ್ಲಾ ಯೋಜನೆಯಲ್ಲಿ ಸೇರಬೇಕೆಂದು ನಾವು ಇಚ್ಛಿಸುತ್ತೇವೆ ಎಂದು ಸರ್ಕಾರಕ್ಕೆ ನಾವು ಸ್ಪಷ್ಟವಾಗಿ ತಿಳಿಸಬೇಕು."

ಮಾಂಟ್‌ಫೋರ್ಡ್ ವರದಿಯ ಕುಂದುಕೊರತೆಗಳಿಂದಾಗಿ ಭಾರತದ ನ್ಯಾಯಯುತವಾದ ಆಶೋತ್ತರಗಳ ಬಗ್ಗೆ ಬ್ರಿಟಿಷ್ ಜನರಿಗೆ ತಿಳಿವಳಿಕೆ ಉಂಟುಮಾಡಲು ಕಾಂಗ್ರೆಸ್ ಇಂಗ್ಲೆಂಡಿಗೆ ನಿಯೋಗವನ್ನು ಕಳಿಸಬೇಕೆಂದು ಹಿಂದೆಂದಿಗಿಂತಲೂ ಹೆಚ್ಚಾಗಿ ತಿಲಕರು ಮನದಟ್ಟು ಮಾಡಿಕೊಂಡರು. 1917ರಲ್ಲಿ ಅವರು ಈ ವಿಚಾರವನ್ನು ಮುಂದಿಟ್ಟಿದ್ದರು. ಆದರೆ ಯುದ್ಧ ನಡೆಯುತ್ತಿರುವಾಗ ಬ್ರಿಟಿಷರು ಕಾಂಗ್ರೆಸ್ ನಿಯೋಗವನ್ನು ಹೇಗೆ ಬರಮಾಡಿಕೊಳ್ಳುತ್ತಾರೋ ಎಂಬ ಅನುಮಾನದಿಂದ ಆ ವಿಚಾರವನ್ನು ಕೈಬಿಡಲಾಗಿತ್ತು. ಆದರೆ 1918ರಲ್ಲಿ ಯುದ್ಧದ ಸ್ವರೂಪ ಬದಲಾಗಿತ್ತು ಹಾಗೂ ಸರ್ ವ್ಯಾಲೆಂಟೈನ್ ಶಿರೋಲ್‌ನ ವಿರುದ್ಧ ತಿಲಕರು ಹಾಕಿದ್ದ ಮಾನನಷ್ಟ ಮೊಕದ್ದಮೆಯ ಪ್ರಕರಣದಲ್ಲಿ ಅವರು ಲಂಡನ್‌ನಲ್ಲಿ ಹಾಜರಿರಬೇಕಾಗಿತ್ತು.ಏಪ್ರಿಲ್ 1918ರಲ್ಲಿ ಕೊಲಂಬೊದಿಂದ ಹಡಗಿನಲ್ಲಿ ಪ್ರಯಾಣ ಮಾಡುವ ಅವರ ಪ್ರಯತ್ನ ವಿಫಲವಾಯಿತು. ಏಕೆಂದರೆ ಯುದ್ಧ ಸಂಪುಟದ ಆಜ್ಞೆಯ ಮೇರೆಗೆ ಭಾರತೀಯ ನಿಯೋಗದ ಸದಸ್ಯರ ಪಾಸ್‌ಪೋರ್ಟ್‌ಗಳನ್ನು ಕೊನೆಯ ಗಳಿಗೆಯಲ್ಲಿ ರದ್ದುಮಾಡಲಾಯಿತು.

ವಿಚಿತ್ರವೆನಿಸಿದರೂ ಭಾರತ ಸರ್ಕಾರ ತಿಲಕರ ಪರವಾಗಿ ಮಧ್ಯಪ್ರವೇಶಿಸಿ, ಅವರು ಬ್ರಿಟನ್‌ಗೆ ಭೇಟಿ ಕೊಡುವುದಕ್ಕೆ, "ಅವರು ವಿದೇಶದಲ್ಲಿದ್ದಾಗ ರಾಜಕೀಯ ಚಳವಳಿಯಿಂದ ದೂರವಿರಬೇಕು ಮತ್ತು ಹೋಂ ರೂಲ್ ಅಥವಾ ಕಾಂಗ್ರೆಸ್‌ನ ಪ್ರತಿನಿಧಿಯಾಗಲೀ ಅಥವಾ ಇತರ ರಾಜಕೀಯ ಬೆಂಬಲಿಗರಾಗಲೀ ಅವರ ಜೊತೆ ಪ್ರಯಾಣ ಮಾಡಬಾರದು" ಎಂಬ ಷರತ್ತಿನ ಮೇರೆಗೆ ಅನುಮತಿ ಒದಗಿಸಿತು. ತಿಲಕರು ಬ್ರಿಟನ್‌ನಲ್ಲಿರುವುದಕ್ಕಿಂತಲೂ ಭಾರತದಲ್ಲಿದ್ದರೆ ಹೆಚ್ಚು ಅಪಾಯಕರ ಎಂದು ಸರ್ಕಾರ ಪರಿಗಣಿಸಿದ್ದು ಈ ಸಹಾಯದ ಒಳ ಇಂಗಿತವಾಗಿತ್ತು.

ಆರ್.ಪಿ. ಕರಂದೀಕರ್, ವಿ.ಜಿ. ಜೋಶಿ ಮತ್ತು ಜಿ. ಎಂ. ನಾಮ್‌ಜೋಶಿ ಅವರೊಂದಿಗೆ ತಿಲಕರು ಸೆಪ್ಟೆಂಬರ್ 24, 1918ರಂದು ಬ್ರಿಟನ್‌ಗೆ ಹಡಗಿನಲ್ಲಿ ಪ್ರಯಾಣ ಮಾಡಿದರು.

ಅಧ್ಯಾಯ 17

ಬ್ರಿಟನ್‌ನಲ್ಲಿ

ತಿಲಕರ ಪ್ರಾಯದಲ್ಲಿ ತಾಯ್ ಮಹಾರಾಜ್ ಪ್ರಕರಣ ಕಿರುಕುಳದ ಕೋರ್ಟು ವ್ಯವಹಾರಕ್ಕೆ ಅವರನ್ನು ಸಿಕ್ಕಿಸಿದಂತೆ, ಸರ್ ವ್ಯಾಲೆಂಟೈನ್ ಶಿರೋಲ್‌ನ ವಿರುದ್ಧ ತಿಲಕರು ಹಾಕಿದ ಮಾನನಷ್ಟ ಮೊಕದ್ದಮೆ ಅವರ ಜೀವನದ ಕೊನೆಯಲ್ಲಿ ಅಂತಹುದೇ ಕಿರುಕುಳಕ್ಕೆ ಅವರನ್ನು ಗುರಿಮಾಡಿತು. ಆರೋಪಿತ ಮಾನನಷ್ಟದ ವಿಷಯ 1910ರಲ್ಲಿ ಪ್ರಕಟವಾದ ಶಿರೋಲ್‌ನ ಪುಸ್ತಕ 'ಇಂಡಿಯನ್ ಅನ್‌ರೆಸ್ಟ್'ನಲ್ಲಿ ಕಾಣಿಸಿಕೊಂಡಿತು. ಆದರೆ ಆತ 'ದಿ ಟೈಮ್ಸ್' ಪತ್ರಿಕೆಯ ವಿಶೇಷ ವಾರ್ತಾದಾರನಾಗಿ ಭಾರತದಲ್ಲಿ ಪ್ರವಾಸ ಮಾಡಿದಾಗ ತನ್ನ ಪತ್ರಿಕೆಗೆ ಕಳಿಸಿದ ವರದಿಗಳಲ್ಲಿ ಮೊದಲಿಗೆ ಮಾನಹಾನಿಕರವಾದ ಸುಳ್ಳು ಮಾತುಗಳನ್ನು ಬರೆದಿದ್ದ. ಆತ ಬರೆದ ಪುಸ್ತಕ ಈ ವರದಿಗಳ ವಿಸ್ತೃತ ರೂಪವಾಗಿತ್ತಷ್ಟೆ. ತಿಲಕರು ಮಾಂಡಲೇಯಿಂದ ಹಿಂತಿರುಗಿದಾಗ ಈ ಪುಸ್ತಕದ ಬಗ್ಗೆ ಅವರ ಗಮನವನ್ನು ಸೆಳೆಯಲಾಯಿತು. ಹಾಗೂ ಅವರು ಬಿಡುಗಡೆಯಾದ ನಂತರ ನೀಡಿದ ತಮ್ಮ ಪ್ರಥಮ ಸಾರ್ವಜನಿಕ ಹೇಳಿಕೆಯಲ್ಲೇ ಅದರ ಬಗ್ಗೆ ಪ್ರಸ್ತಾಪಿಸಿದರು. ಲಾಭಕರವಾದ ಹೊಲಸೆಬ್ಬಿಸುವ ಕೆಲಸಕ್ಕಾಗಿ ಭಾರತಕ್ಕೆ ಭೇಟಿ ನೀಡುವ ವಿದೇಶಿ ಪತ್ರಿಕೋದ್ಯಮಿಗಳ ತಂಡದಲ್ಲಿ ಶಿರೋಲ್ ಮೊದಲಿಗನಾಗಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ಸರ್ಕಾರ ಅವರನ್ನು ಆತ್ಮೀಯತೆಯಿಂದ ಸ್ವಾಗತಿಸಿ ನೆರವು ನೀಡುತ್ತಿತ್ತು. ಆದರೆ ಶಿರೋಲ್‌ಗೆ ಅಧಿಕೃತ ಅನುಗ್ರಹ ಧಾರಾಳವಾಗಿ ದೊರೆತಂತೆ ಕಾಣುತ್ತದೆ. ಏಕೆಂದರೆ, "ಭಾರತಕ್ಕೆ ಸ್ವ-ಸರ್ಕಾರದ ಹಕ್ಕುಗಳನ್ನು ನಾವು ಬಿಟ್ಟುಕೊಡುವುದು ಎಂದಿಗಾದರೂ ಅಸಾಧ್ಯ" ಎಂಬುದನ್ನು ಸಾಬೀತು ಮಾಡಿ ತೋರಿಸುವುದು ಆತನೇ ಹೇಳಿಕೊಂಡಂತಹ ಕಾರ್ಯವಾಗಿತ್ತು. ಆ ಸಾಮ್ರಾಜ್ಯಶಾಹಿ ವಿಚಾರಕ್ಕೆ ಇಂಬು ಕೊಡಲು ಆತ ಭಾರತೀಯ ನಾಯಕರನ್ನು, ಅದರಲ್ಲೂ ತಿಲಕರನ್ನು, ಅವಹೇಳನ ಮಾಡುತ್ತಿದ್ದ. ತಿಲಕರನ್ನು ಅವನು "ಭಾರತೀಯ ಅಶಾಂತಿಯ ತಂದೆ" ಎಂದು ವರ್ಣಿಸಿದ.

ಈ ವಿಶೇಷಣ ತಿಲಕರಿಗೆ ಅತ್ಯಂತ ಸೂಕ್ತವಾದ ಶ್ಲಾಘನೆಯಾಗಿದೆ ಎಂದು ಅಲ್ಲಿಂದೀಚೆಗೆ ಭಾವಿಸಲಾಗಿದೆ. ಪ್ರಸಕ್ತ ಪೀಳಿಗೆಗೆ ಸೇರಿದ ನಾವು, ತಿಲಕರು ತಮ್ಮ ಜೀವನದ ಸಂಜೆಯಲ್ಲಿ ಶಿರೋಲ್‌ನ ಹೊಗಳಿಕೆಯನ್ನು ಏಕೆ ಗಂಭೀರವಾಗಿ ಪರಿಗಣಿಸಿದರು ಮತ್ತು ಬ್ರಿಟನ್‌ನ ನ್ಯಾಯಾಲಯದಲ್ಲಿ ಈ ಅನ್ಯಾಯಕ್ಕೆ ಪರಿಹಾರವನ್ನು ಏಕೆ ಕೋರಿದರು ಎಂದು ಸಹಜವಾಗಿ ಆಶ್ಚರ್ಯಪಡಬಹುದು. ಪ್ರತಿವಾದಿಯಾದ ಶಿರೋಲ್‌ನೊಡನೆ ಸರ್ಕಾರವೇ ಸೇರಿಕೊಂಡಾಗ ನ್ಯಾಯದ ತಕ್ಕಡಿಯನ್ನು ಸಮನಾಗಿ ಹಿಡಿಯಲಾಗುತ್ತದೆ ಎಂದು ಅವರು ನಿರೀಕ್ಷಿಸಿರಲಾರರು. ಅನೇಕ ವರ್ಷಗಳ ನಂತರ, ಕ್ಯಾಥರೀನ್ ಮೇಯೋಳ 'ಮದರ್ ಇಂಡಿಯಾ' ಪುಸ್ತಕದಲ್ಲಿ ತಮ್ಮ ಬಗ್ಗೆ ನೀಚವಾದ, ವೈಯಕ್ತಿಕ ನಿಂದನೆಗಳಿದ್ದರೂ ಗಾಂಧೀಜಿ

ಆ ಪುಸ್ತಕವನ್ನು "ಚರಂಡಿ ಇನ್ಸ್‌ಪೆಕ್ಟರಳ ವರದಿ" ಎಂದು ಲೆಕ್ಕಕ್ಕೆ ತೆಗೆದುಕೊಳ್ಳದೆ ಇದ್ದದ್ದನ್ನು ಇಲ್ಲಿ ಸ್ಮರಿಸಬಹುದು.

ತಮ್ಮ ನಡತೆಯನ್ನೇ ಅಲ್ಲದೆ ಭಾರತೀಯ ಸ್ವಾತಂತ್ರ್ಯದ ಧ್ಯೇಯವನ್ನೂ ಸಹ ಸಮರ್ಥಿಸಲು ತಿಲಕರು ಕಾತುರರಾಗಿದ್ದರು. ತಿಲಕರ ಲೇಖನಗಳು ಮತ್ತು ಭಾಷಣಗಳನ್ನು ಅವು ರಾಜಕೀಯ ಕೊಲೆಗಳಿಗೆ ಪ್ರಚೋದನೆ ಒದಗಿಸುತ್ತವೆ ಎಂದು ಶಿರೋಲ್ ವ್ಯಾಖ್ಯಾನಿಸಿದ್ದರ ಬಗ್ಗೆ ಅವರು ವಿಶೇಷವಾಗಿ ಆಕ್ಷೇಪಿಸಿದರು. 1897ರಲ್ಲಿ ಪೂನಾದಲ್ಲಿ ಆದ ರ್‍ಯಾಂಡ್ ಮತ್ತು ಅಯರ್ಸ್ಟ್‌ನ ಕೊಲೆಗಳಿಗೇ ಅಲ್ಲದೆ, ತಿಲಕರು ಮಾಂಡಲೇಯಲ್ಲಿದ್ದಾಗ 1910ರಲ್ಲಿ ನಾಸಿಕ್‌ನಲ್ಲಿ ಆದ ಜಾಕ್‌ಸನ್‌ನ ಕೊಲೆಗೂ ಶಿರೋಲ್ ಒಂದಲ್ಲ ಒಂದು ರೀತಿಯಲ್ಲಿ ತಿಲಕರನ್ನೇ ಜವಾಬ್ದಾರರನ್ನಾಗಿ ಮಾಡಿದ್ದ. ತಿಲಕರು ಪ್ರಾರಂಭಿಸಿದ ವ್ಯಾಯಾಮ ಶಾಲೆಗಳನ್ನು ಆತ "ಸ್ವರಾಜ್ಯದ ಬೊಕ್ಕಸ ತುಂಬುವ ಪರೆಯುದ ಡಕಾಯಿತರ ತಂಡಗಳು" ಎಂದು ವರ್ಣಿಸಿದ. ಅವರ ಗೋರಕ್ಷಕ ಚಟುವಟಿಕೆಗಳು ಮುಸಲ್ಮಾನರನ್ನು ನೇರವಾಗಿ ಕೆರಳಿಸುವ ಚಟುವಟಿಕೆಗಳು ಎಂದೆಣಿಸಿದ್ದ.

ಮಾನನಷ್ಟಕರವಾದ ಹೇಳಿಕೆಗಳನ್ನು ಹಿಂದೆಗೆದುಕೊಳ್ಳುವಂತೆ ಶಿರೋಲ್‌ಗೆ ವಿಧ್ಯುಕ್ತವಾದ ನೋಟೀಸನ್ನು ಅಕ್ಟೋಬರ್ 1,1915ರಂದು ನೀಡಲಾಯಿತು. ತೃಪ್ತಿಕರವಾದ ಉತ್ತರ ಬರದೆ ಇದ್ದುದ್ದರಿಂದ ಲಂಡನ್‌ನ ಕಿಂಗ್ಸ್ ಬೆಂಚ್ ಡಿವಿಶನ್‌ಗೆ ದೂರು ನೀಡಲಾಯಿತು. ಜನವರಿ 29,1919ರಂದು ಅದು ವಿಚಾರಣೆಗೆ ಬಂದಿತು. ಈ ಮಧ್ಯೆ, ಶಿರೋಲ್‌ಗೆ ನೆರವಾಗಲು ಸರ್ಕಾರದ ಯಂತ್ರವನ್ನೂ ಸಿದ್ಧಗೊಳಿಸಲಾಯಿತು. ಪ್ರತಿವಾದಿಯ ರಕ್ಷಣೆಗೆ ಬೇಕಾದ ಸಾಮಗ್ರಿ ಸಂಗ್ರಹಿಸಲು ಐ.ಸಿ.ಎಸ್. ಅಧಿಕಾರಿಯೊಬ್ಬನನ್ನು ವಿಶೇಷವಾಗಿ ನೇಮಿಸಲಾಯಿತು. ಸರ್ಕಾರ ಈ ಪ್ರಕರಣದಲ್ಲಿ ಎಷ್ಟು ಆಳವಾಗಿ ತಲೆ ಹಾಕಿತ್ತು ಎಂಬುದು ಭಾರತಕ್ಕಾಗಿದ್ದ ವಿದೇಶಾಂಗ ಕಾರ್ಯದರ್ಶಿಯ ಸಲಹೆಗಾರರು ಸಿದ್ಧಪಡಿಸಿದ ಕೆಳಗಿನ ಮಾರ್ಗದರ್ಶಕ ಕಾಗದದಿಂದ ಸ್ಪಷ್ಟವಾಗುತ್ತದೆ:

"ಮಾನನಷ್ಟ ಮೊಕದ್ದಮೆಯೊಂದರಲ್ಲಿ ಸರ್ ವ್ಯಾಲೆಂಟೈನ್ ಶಿರೋಲ್ ಈಗ ಪ್ರತಿವಾದಿಯಾಗಿದ್ದಾರೆ. ಈ ಮೊಕದ್ದಮೆ ಯಶಸ್ವಿಯಾಗಿಬಿಟ್ಟರೆ ಅವರು ಮಾಡಿದ ಸಾರ್ವಜನಿಕ ಸೇವೆಗೆ, ನಷ್ಟ ಪರಿಹಾರ ರೂಪದಲ್ಲಿ ಜುಲ್ಮಾನೆ ತೆರಬೇಕಾಗುವುದಲ್ಲದೆ ತಿಲಕರ ರಾಜಕೀಯ ವ್ಯಕ್ತಿತ್ವಕ್ಕೆ ಮರ್ಯಾದೆ ಕೊಡುವಂತಹ ಪರಿಣಾಮವೂ ಆಗುತ್ತದೆ. ಈ ಪರಿಣಾಮ ಅತ್ಯಂತ ತೀವ್ರವಾದ ರಾಜಕೀಯ ಕೇಡಾಗುತ್ತದೆ. ಆದ್ದರಿಂದ ಶಿರೋಲ್‌ರನ್ನು ಕೈಬಿಡದಿರುವ ಕರ್ತವ್ಯಕ್ಕೆ ನಾವು ಕಟ್ಟುಬಿದ್ದಿರುವುದನ್ನೇ ಅಲ್ಲದೆ, ತಿಲಕರು ತಮ್ಮ ಮೊಕದ್ದಮೆಯನ್ನು ಗೆದ್ದರೆ ಉಂಟಾಗಬಹುದಾದ ತೀವ್ರ ರಾಜಕೀಯ ಅನಾನುಕೂಲವನ್ನೂ ನಾವು ಗಮನಿಸಬೇಕಾಗಿದೆ. ಈ ಎರಡೂ ಕಾರಣಗಳು ತೂಕವಾಗಿಯೇ ಇವೆಯಾದರೂ, ಇನ್ನೂ ಬಲವಾದ ಮೂರನೆಯ ಕಾರಣವೊಂದಿದೆ. ಶಿರೋಲ್ ಯಾವ ಮಾಹಿತಿಯ ಆಧಾರದ ಮೇಲೆ ಪುಸ್ತಕ ಬರೆದಿದ್ದಾರೋ ಆ ಮಾಹಿತಿಯನ್ನು ಸರ್ಕಾರಿ ಮೂಲಗಳಿಂದ ಪಡೆದರು ಎಂಬ ಅಂಶ ವಿಚಾರಣೆಯಲ್ಲಿ ಹೊರಬೀಳುವುದು ಅನಿವಾರ್ಯ. ಆದ್ದರಿಂದ ಅವರ ವಿರುದ್ಧ ತಿಲಕರ ಮೊಕದ್ಧಮೆ ಯಶಸ್ವಿಯಾದರೆ, ಮಾನನಷ್ಟಕರ

ವಿಷಯದ ಪ್ರಕಟಣೆಯ ಆಪಾದನೆ ಹೊರಿಸಿ ಸರ್ಕಾರದ ವಿರುದ್ಧ ಮತ್ತೊಂದು ಮೊಕದ್ದಮೆ ಹೂಡುವುದಕ್ಕೆ ಅದು ಟೀಕಿಕೆಯಾಗುವುದೂ ಸಾಧ್ಯ."

ವೈಸ್‌ರಾಯ್‌ನ ಕಾರ್ಯಕಾರಿ ಮಂಡಳಿಯ ಸದಸ್ಯನೊಬ್ಬನೂ ಇಂತಹುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ:

"ಪ್ರತಿವಾದಿ ಮೊಕದ್ದಮೆಯಲ್ಲಿ ಗೆಲ್ಲುವುದು ಖಡಾಖಂಡಿತವಾಗದೆ ಇದ್ದಲ್ಲಿ, 'ಇಂಡಿಯನ್ ಅನ್‌ರೆಸ್ಟ್' ಪುಸ್ತಕವನ್ನು ಬಾಂಬೆ ಸರ್ಕಾರದ ಆಶ್ರಯದಲ್ಲಿ ಬರೆಯಲಾಯಿತು ಎಂಬ ವಿಷಯ ವಿಚಾರಣೆಯಲ್ಲಿ ಬಯಲಿಗೆ ಬರುವುದು ಬಹಳ ಅನಪೇಕ್ಷಣೀಯವಾಗಬಹುದು. ತೀರ್ಪು ಮುಖ್ಯವಾಗಿ ತಿಲಕರ ಪರವಾಗಿಯೇ ಆದರೆ ಈ ಅಂಶ ಇನ್ನೂ ಹೆಚ್ಚಿನ ತೊಡಕುಗಳನ್ನು ಉಂಟುಮಾಡಬಹುದು. ಈ ಪರಿಸ್ಥಿತಿಗಳಲ್ಲಿ, ನಮ್ಮಿಂದ ಸಾಧ್ಯವಿದ್ದ ಎಲ್ಲ ನ್ಯಾಯಯುತವಾದ ನೆರವನ್ನು, ಚಿರೋಲ್‌ರ ರಕ್ಷಣೆ ಯಶಸ್ವಿಯಾಗಬಹುದು ಎಂಬ ಗಾಢ ಆಶಯದಿಂದ ನೀಡುವುದಕ್ಕೆ ನಾವು ಕಟ್ಟುಬಿದ್ದಿರುವುದೇ ಅಲ್ಲದೆ ಹಾಗೆ ಮಾಡುವುದು ವಿವೇಕಯುತವೂ ಆಗಿದೆ ಎಂದು ನಾನು ಭಾವಿಸುತ್ತೇನೆ."

ತಾಯ್ ಮಹಾರಾಜ್ ಪ್ರಕರಣದಲ್ಲಿ ನಡೆದಂತೆ, ತಿಲಕರ ವಿರುದ್ಧ ಸರ್ಕಾರದ ಸಂಪನ್ಮೂಲಗಳನ್ನು ಒಗ್ಗೂಡಿಸಲಾಯಿತು. ಹೀಗಾಗಿ ಅವರು ತೀವ್ರ ಪ್ರತಿಕೂಲದ ವಿರುದ್ಧ ಹೋರಾಡಬೇಕಾಯಿತು. ನ್ಯಾಯಾಧೀಶ ಡಾರ್ಲಿಂಗ್ ಹಾಗೂ ವಿಶೇಷ ನ್ಯಾಯದರ್ಶಿಗಳ ಮಂಡಳಿ ಪ್ರಕರಣವನ್ನು ಆಲಿಸಿತು.ತಿಲಕರ ಪರವಾಗಿ ಸರ್ ಜಾನ್ ಸೈಮನ್ ವಕಾಲತ್ತು ವಹಿಸಿದ್ದರು ಹಾಗೂ ಸರ್ ಎಡ್ವರ್ಡ್ ಕಾರ್ಸನ್ ಚಿರೋಲ್‌ನ ವಕೀಲರಾಗಿದ್ದರು. ಚಿರೋಲ್‌ನ ವಿರುದ್ಧ ಮಾನನಷ್ಟದ ಆರು ಅಂಶಗಳನ್ನು ನಮೂದಿಸಲಾಗಿತ್ತು. ಸರ್ ಜಾನ್ ಸೈಮನ್‌ರ ಪ್ರಾರಂಭದ ಭಾಷಣ ಏಳು ಗಂಟೆಗಳ ಕಾಲ ನಡೆಯಿತು. ಅದರ ನಂತರ ಅವರ ಕಿರಿಯ ವಕೀಲರು ತಿಲಕರನ್ನು ಪ್ರಶ್ನಿಸಿದರು. ಕಾರ್ಸನ್ ತಿಲಕರಿಗೆ ಮಾಡಿದ ಪಾಟೀ ಸವಾಲು ಪ್ರಕರಣದ ಮುಖ್ಯ ತಿರುಳಾಗಿತ್ತು. ಕಾರ್ಸನ್ "ಇಂಗ್ಲಿಷ್ ನ್ಯಾಯಾಲಯದ ಭೀತಿ" ಎಂದು ಹೆಸರು ಗಳಿಸಿದ್ದ. ಆತ ಸುಮಾರು ಹದಿನೈದು ಗಂಟೆಗಳ ಕಾಲ ಒಂದೇ ಸಮನೆ ಪ್ರಶ್ನೆಗಳನ್ನು ಕೇಳಿ ಫಿರ್ಯಾದಿಯ ಜೀವ ಹಿಂಡಿದ. ಈ ಸಮಯದಲ್ಲಿ ಅನೇಕ ವಾಗ್ಯುದ್ಧಗಳೂ ನಡೆದವು. ಒಂದಕ್ಕಿಂತ ಹೆಚ್ಚು ಸಲ ಕಾರ್ಸನ್ ತನ್ನ ಬುದ್ಧಿಯ ಸ್ಥಿಮಿತವನ್ನು ಕಳೆದುಕೊಂಡ. "ತಿಲಕನ ಗುಣದ ಬೆಲೆ! ಆತನ ಗುಣದ ಬೆಲೆಯ ಒಂದು ನಾಣ್ಯ ಅಸ್ತಿತ್ವದಲ್ಲಿರುವುದಿಲ್ಲ" ಎಂದು ಆತ ಗುಟುರು ಹಾಕಿದ.

ಆತನಾಡಿದ ಕೆಲವು ಅತಿರೇಕದ ಮಾತುಗಳನ್ನು ವಕಾಲತ್ತು ವಹಿಸಿದವನ ಮಾತುಗಳು ಎಂದು ಹೇಳಬಹುದು. ಆದರೆ ನ್ಯಾಯಾಧೀಶ ಪಕ್ಷಪಾತರಹಿತ ನಿಲುವನ್ನು ತಳೆಯುತ್ತಾನೆ ಎಂದು ಎಲ್ಲರೂ ನಿರೀಕ್ಷಿಸುತ್ತಾರೆ. ಆದರೆ ನ್ಯಾಯಾಧೀಶ ಡಾರ್ಲಿಂಗ್‌ನಾದರೋ, ವೈಯಕ್ತಿಕ ಮಾನನಷ್ಟಕ್ಕಿಂತ ಅದರ ರಾಜಕೀಯ ಇಂಗಿತಗಳಿಗೆ ಪ್ರಾಧಾನ್ಯತೆ ಕೊಟ್ಟ ಹಾಗೂ ಆತ ನ್ಯಾಯದರ್ಶಿಗಳಿಗೆ ನೀಡಿದ ಸಂಗ್ರಹ ಸ್ಪಷ್ಟವಾಗಿ ಪಕ್ಷಪಾತ ಭಾವನೆಯಿಂದ ಕೂಡಿತ್ತು. ಸೈನಿಕನಿಗೆ ಸಿಕ್ಕಿದ ಕಪಳೆಯವನು ತಾನು ಯೋಧನಲ್ಲವೆಂದೂ, ಆದರಿಂದಾಗಿ ತನ್ನನ್ನು ಕೊಲ್ಲಬಾರದೆಂದೂ ಸೈನಿಕನನ್ನು ಬೇಡಿಕೊಂಡ ಈಸೋಪನ ಕತೆಯನ್ನು ನ್ಯಾಯಾಧೀಶ ಹೇಳಿ ನ್ಯಾಯದರ್ಶಿಗಳನ್ನು ನಗಿಸಿದ. ಕಹಳೆಯವನು ಶಸ್ತ್ರವಹಿಸದೆ ಇದ್ದನಾದರೆ

ಶತ್ರು ಸೈನಿಕರು ಮುಂದೆ ಬರುತ್ತಿರಲಿಲ್ಲವಾದ್ದರಿಂದ ಕೊಲ್ಲದೆ ಇರಲು ಸಾಧ್ಯವಿಲ್ಲ ಎಂದು ಸೈನಿಕ ಕಹಳೆಯುವನ ಬೇಡಿಕೆಯನ್ನು ನಿರಾಕರಿಸಿದ.

"ತಿಲಕ್, ತೆಗಳಿಕೆಗೆ ರ್‍ಯಾಂಡ್‌ನನ್ನು ಆಯ್ಕೆ ಮಾಡಿದಂತೆ ಜಾಕ್‌ಸನ್‌ನನ್ನು ಆಯ್ಕೆ ಮಾಡಲಿಲ್ಲ ಎಂಬುದು ನಿಜ. ಆದರೆ ಸಾಮಾನ್ಯವಾಗಿ ಅಧಿಕಾರಿಗಳ ವಿರುದ್ಧ ದ್ವೇಷವನ್ನು ಹೊಮ್ಮಿಸಿ ಅಪರಾಧಕ್ಕೆ ವಾತಾವರಣವನ್ನು ಆತ ಸೃಷ್ಟಿಮಾಡಿದ್ದು ಸಾಕಾಗಿತ್ತು. ಫಾಗಿನ್‌ನ ವಿದ್ಯಾರ್ಥಿಗಳು ಮಾಡಿದ ಅಪರಾಧಗಳ ನಿಜವಾದ ಕರ್ತೃ ಫಾಗಿನ್ ಆಗಿರುವಂತೆ ಆತನೂ ಅಪರಾಧದ ನಿಜವಾದ ಕರ್ತೃ ಎಂದು ಹೇಳುವುದು ಅನ್ಯಾಯವೇ?"

ಇಂತಹ ಆಪಾದನೆಯ ನಂತರ, ಪ್ರತಿವಾದಿಯ ಪರವಾಗಿ ತೀರ್ಪು ನೀಡಲು ನ್ಯಾಯದರ್ಶಿಗಳ ಮಂಡಳಿ ಇಪ್ಪತ್ತೈದು ನಿಮಿಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಯಾವ ಪ್ರಕರಣವನ್ನು ತಿಲಕರು ಬಹಳವಾಗಿ ನೆಚ್ಚಿಕೊಂಡಿದ್ದರೋ, ಆ ಪ್ರಕರಣದಲ್ಲಿ ಅವರು ಸೋತರು. ಪ್ರಿವಿ ಕೌನ್ಸಿಲ್‌ಗೆ ಮನವಿ ಮಾಡಿಕೊಳ್ಳುವ ವಿಚಾರವನ್ನು ಸರ್ ಜಾನ್ ಸೈಮನ್‌ರ ಸಲಹೆಯ ಮೇರೆಗೆ ಕೈಬಿಡಲಾಯಿತು. ಬ್ರಿಟನ್‌ನ ನ್ಯಾಯಾಲಯದಲ್ಲಿ ತಮ್ಮ ನಡತೆಯನ್ನು ಸಮರ್ಥಿಸಿಕೊಳ್ಳಲು ತಿಲಕರು ಮಾಡಿದ ಪ್ರಯತ್ನದಿಂದ ಅವರಿಗೆ ಹೊರಲಾರದ ಖರ್ಚಿನ ಭಾರವೂ ಬಿತ್ತು. ಏಕೆಂದರೆ ಪ್ರತಿವಾದಿಯ ಖರ್ಚುಗಳನ್ನೂ ಅವರು ಕೊಡಬೇಕಾಯಿತು. ಸ್ವಲ್ಪ ಕಡಿಮೆ ಧೈರ್ಯವಾಗಿದ್ದರೆ ಈ ವಿಪತ್ತಿನಿಂದ ಕುಸಿದೇ ಬಿಡುತ್ತಿದ್ದರು. ಆದರೆ ತಿಲಕರಿಗೆ ಹೆಚ್ಚಿನ ಚಿಂತೆ ಆಗಲಿಲ್ಲ. ಮಾರ್ಚ್ 27ರಂದು ಖಾಪರ್ಡೆಯವರಿಗೆ ಹೀಗೆ ಬರೆದರು:

"ನಮ್ಮ ದುರಾದೃಷ್ಟಗಳನ್ನು ನಾವು ಸಮಾಧಾನದಿಂದ ಸಹಿಸಬೇಕು. ಬೇರೆ ಮಾರ್ಗವಿಲ್ಲ. ಅದೊಂದು ಆಟವಾಗಿತ್ತು. ನಾವು ಯಶಸ್ವಿಯಾಗಿದ್ದರೆ, ಅದರಿಂದ ನಮಗೆ ಖಾಸಗಿ ಜೀವನದಲ್ಲಲ್ಲ, ಆದರೆ ಅಧಿಕಾರಶಾಹಿಯೊಡನೆ ನಡೆದಿರುವ ನಮ್ಮ ಸಾರ್ವಜನಿಕ ಹೋರಾಟದಲ್ಲಿ ಸ್ವಲ್ಪ ಅನುಕೂಲ ದೊರೆಯುತ್ತಿತ್ತು. ನಮ್ಮ ಯಾವುದೇ ದೋಷ ಅಥವಾ ತಪ್ಪಿನಿಂದಲ್ಲ, ಆದರೆ ಒಬ್ಬ ಮನುಷ್ಯನ ವೈಯಕ್ತಿಕ ನಡತೆ ಮತ್ತು ರಾಜಕೀಯ ಅಭಿಪ್ರಾಯಗಳ ನಡುವಣ ವ್ಯತ್ಯಾಸವನ್ನು ತಿಳಿಯಲು ಅಸಮರ್ಥರಾದ ಬ್ರಿಟಿಷ್ ನ್ಯಾಯಾಧೀಶ ಮತ್ತು ನ್ಯಾಯದರ್ಶಿಗಳ ಮಂಡಳಿಯ ಅಸಮರ್ಥತೆಯಿಂದಾಗಿ ನಾವು ವಿಫಲಗೊಂಡೆವು. ಆದರೆ, ಇದು ನಮ್ಮ ಜನರ ಕಣ್ಣು ತೆರೆಸುವಂತಹ ಘಟನೆ, ಆದ್ದರಿಂದ ಇದನ್ನು ಅದಕ್ಕಾಗಿಯೇ ಉಪಯೋಗ ಮಾಡಿಕೊಳ್ಳೋಣ. ನಾವು ನಿರುತ್ಸಾಹಗೊಳ್ಳದೆ ಹೋದರೆ ಯಾವ ಮಾರ್ಗದಲ್ಲಾದರೂ ಪ್ರಯೋಜನ ಪಡೆಯುತ್ತೇವೆ ಎಂಬುದನ್ನು ನೋಡಿ."

ತಮ್ಮ ಸೋದರಿಯ ಮಗ ಧೊಂಡೋಪಂತ್ ವಿದ್ವಾಂಸನಿಗೂ ಇಂತಹುದೇ ಧಾಟಿಯಲ್ಲಿ ತಿಲಕರು ಪತ್ರ ಬರೆದರು : "ನನ್ನ ಬಗ್ಗೆ ಚಿಂತಿಸಬೇಡ. ಇದಕ್ಕಿಂತ ಕೆಟ್ಟ ವಿಪತ್ತುಗಳನ್ನು ನಾನೆದುರಿಸಿದ್ದೇನೆ. ಅವುಗಳಿಗೆ ನಾನು ಸೋತಿದ್ದರೆ ನಾನಿಂದು ಬದುಕಿಯೇ ಇರುತ್ತಿರಲಿಲ್ಲ. ಇತರ ವಿಪತ್ತುಗಳನ್ನು ಎದುರಿಸಿದಂತೆ ಇದನ್ನೂ ನಾನು ಎದುರಿಸುತ್ತೇನೆ. ನ್ಯಾಯಾಲಯದ ತೀರ್ಪಿನಿಂದ ನನ್ನ ಆರೋಗ್ಯಕ್ಕಾಗಲಿ, ನನ್ನ ಕೆಲಸಕ್ಕಾಗಲಿ ಯಾವುದೇ ರೀತಿಯಲ್ಲಿ ಬಾಧಕವಾಗಿಲ್ಲ ಎಂದು ನನ್ನ ಜನರಿಗೆಲ್ಲಾ ಹೇಳು. ಹಾಗೆ ನೋಡಿದರೆ, ಈ

ದೇಶದಲ್ಲಿ ನಮ್ಮ ಪ್ರಚಾರ ಪ್ರಾರಂಭಿಸಲು ಹೋಂ ರೂಲ್ ಲೀಗ್ ನಿಯೋಗ ಇಲ್ಲಿಗೆ ಬರುವುದನ್ನೇ ನಾನು ಕಾಯುತ್ತಿದ್ದೇನೆ."

ಶಿಕ್ಷೆಯಿಂದ ಭಾರತದ ಜನರಿಗೆ ತಿಲಕರ ಬಗ್ಗೆ ಇರುವ ಗೌರವ ಮತ್ತು ಜನಪ್ರಿಯತೆಗೆ ಬಾಧಕವಾಗುತ್ತದೆಂದು ಸರ್ಕಾರ ಎಣಿಸಿದ್ದರೆ, ಅದಕ್ಕೆ ಬೇಗ ಆಶಾಭಂಗವಾಯಿತು. "ಯಾಗದ ಬೆಂಕಿಯನ್ನು ಅಥವಾ ಗಂಗೆಯ ಪವಿತ್ರ ನೀರನ್ನು ನೀವು ಶುದ್ಧಗೊಳಿಸುವುದಿಲ್ಲ" ಎಂದು ರವೀಂದ್ರನಾಥ್ ಟಾಗೋರರು ಹೇಳಿದ ಮಾತು ಪ್ರಕರಣದ ಸಾರವನ್ನು ಇಳಿಸಿ ಹೇಳಿದ ಮಾತಾಗಿತ್ತು.

ತಿಲಕರ ಖರ್ಚುವೆಚ್ಚಗಳನ್ನು ಭರಿಸಲು ನಿಧಿ ಸಂಗ್ರಹಣೆಗೆ ಬಾಂಬೆಯಲ್ಲಿ ನಡೆದ ಸಭೆಯೊಂದರ ಅಧ್ಯಕ್ಷತೆಯನ್ನು ವಹಿಸಿದ್ದ ಗಾಂಧೀಜಿ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು : "ಹಾಗೆ ನೋಡಿದರೆ, ವ್ಯತಿರಿಕ್ತವಾದ ತೀರ್ಪಿನಿಂದ ತಿಲಕರು ಜನತೆಯ ದೃಷ್ಟಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಸ್ಥಾನಕ್ಕೆ ಏರಿದ್ದಾರೆ. ನಿಜವಾಗಿ ಆದದ್ದೆಂದರೆ, ದೊಡ್ಡ ಹಣದ ಚೀಲ ಗೆದ್ದಿದೆ. ಲೋಕಮಾನ್ಯರ ಹಿಡಿದ ಪಟ್ಟು, ಬಿಡದ ಹಟ ಮತ್ತು ಕೆಚ್ಚನ್ನು ಮೆಚ್ಚಲೇಬೇಕು. ಕಾನೂನು ಕ್ರಮದಲ್ಲಿ ಆದ ಸೋಲಿನಿಂದ ಎದೆಗುಂದದೆ ಅವರು ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಕಾರ್ಯ ಮುಂದುವರಿಸಿದ್ದಾರೆ. ನಮ್ಮ ಯುದ್ಧಗಳನ್ನು ಅವರು ಅಲ್ಲಿ ಮಾಡಲು ತೊಡಗಿರುವಾಗ ಹಣಕಾಸಿನ ಚಿಂತೆಯಿಂದ ಅವರನ್ನು ಮುಕ್ತಗೊಳಿಸಲು ನಿಧಿ ಸಂಗ್ರಹಿಸುವುದು ಇಲ್ಲಿ ನಮ್ಮ ಕರ್ತವ್ಯವಾಗಿದೆ."

ನ್ಯಾಯಾಲಯದ ಪ್ರಕರಣದಲ್ಲಿ ಸೋತ ನಂತರ ತಿಲಕರು ಇಂಗ್ಲೆಂಡ್‌ನಲ್ಲಿ ಎಂಟು ತಿಂಗಳು ಇದ್ದರೆಂಬ ಅಂಶ ಹಿರಿಯ ಕಾರ್ಯಭಾರ ಅವರ ದೃಷ್ಟಿಯಲ್ಲಿತ್ತೆಂದು ತೋರಿಸುತ್ತದೆ. ಸ್ನೇಹಿತರನ್ನು ಗಳಿಸುವುದೂ, ಭಾರತದ ಪರವಾಗಿ ಅಭಿಪ್ರಾಯವನ್ನು ಮೂಡಿಸುವುದೂ ಈ ಕಾರ್ಯವಾಗಿತ್ತು. ರಾಜಕೀಯ ಪ್ರಗತಿಗೆ ಅಂತರರಾಷ್ಟ್ರೀಯ ಪ್ರಚಾರ ಸನ್ನೆಗೋಲಿನಂತೆ ಅಮೂಲ್ಯವಾದದ್ದು ಎಂದು ಅವರು ದೃಢವಾಗಿ ನಂಬಿದ್ದರು. ಅವರು ವಿಠಲ್‌ಭಾಯ್ ಪಟೇಲರಿಗೆ ಹೀಗೆ ಹೇಳಿದರು :

"ಹೊರಗಡೆಯಿಂದ ನಮಗೆ ಮುಕ್ತಿ ದೊರೆಯುವುದಿಲ್ಲ. ಆ ಬಗ್ಗೆ ನನಗೆ ಯಾವುದೇ ಭ್ರಾಂತಿಯಿಲ್ಲ. ಆದರೆ ಭಾರತೀಯ ಆಶೋತ್ತರಗಳ ಬಗ್ಗೆ ನಾಗರೀಕ ಜಗತ್ತಿನಲ್ಲಿ ಅನುಕೂಲ ಅಭಿಪ್ರಾಯ ಉಂಟಾಗುವುದು ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಅಮೂಲ್ಯವಾದ ಅಸ್ತ್ರವಾಗುತ್ತದೆ ಎಂದು ನಾನು ನಂಬಿದ್ದೇನೆ. ನಾವು ವಿಶ್ವದ ಅಭಿಪ್ರಾಯವನ್ನು ಕಡೆಗಣಿಸಿದ್ದೇ ಆದರೆ ನಮಗೆ ಗಂಡಾಂತರ ಉಂಟಾಗುತ್ತದೆ. ಪ್ರತಿಯೊಂದು ಮುಖ್ಯ ದೇಶವೂ ತನ್ನ ರಾಷ್ಟ್ರೀಯ ಸಂಸ್ಥೆಯನ್ನು ಹೊಂದಿದೆ. ಹಾಗೂ ವಿಶ್ವದ ಪ್ರಮುಖ ಕೇಂದ್ರಗಳಲ್ಲಿ ಅದರ ಶಾಖೆಗಳನ್ನು ಹೊಂದಿದೆ. ಪ್ರಬಲ ಸರ್ಕಾರಗಳು ಈ ಕ್ರಮ ಕೈಗೊಂಡಿರುವಾಗ ನಮ್ಮಂತಹ ದೇಶಕ್ಕೆ ಅದು ಇನ್ನೂ ಹೆಚ್ಚಿನ ಅಗತ್ಯವಾಗಿದೆ."

ತಮ್ಮ ಸಾರ್ವಜನಿಕ ಚಟುವಟಿಕೆಗಳ ಮೇಲಿನ ನಿರ್ಬಂಧಗಳನ್ನು ನಿವಾರಿಸಿಕೊಂಡ ನಂತರ, ಭಾಷಣಗಳನ್ನು ಮಾಡುವುದು, ಸಮ್ಮೇಳನಗಳಲ್ಲಿ ಭಾಗವಹಿಸುವುದು, ಕರಪತ್ರಗಳನ್ನು ಪ್ರಕಟಿಸುವುದು ('ಸೆಲ್ಫ್-ಡಿಟರ್ಮಿನೇಷನ್ ಫಾರ್ ಇಂಡಿಯಾ' ಎಂಬುದು ಇವುಗಳಲ್ಲಿ ಅತ್ಯಂತ ಮುಖ್ಯವಾಗಿತ್ತು) ಮತ್ತು ಸಂಪರ್ಕಗಳನ್ನು ಸ್ಥಾಪಿಸುವುದು, ಅದ

ರಲ್ಲೂ ಲೇಬರ್ ಪಕ್ಷದಲ್ಲಿ ವಿಶೇಷವಾಗಿ ಸಂಪರ್ಕಗಳನ್ನು ಹೊಂದುವುದು – ಇವುಗಳಲ್ಲಿ ತಿಲಕರು ಮಗ್ನರಾದರು. ಮೊಕದ್ದಮೆಯಲ್ಲಿ ಸೋತ ನಾಲ್ಕೇ ದಿನಗಳೊಳಗಾಗಿ ತಿಲಕರು ಕ್ಯಾಕ್ಸಟನ್ ಹಾಲ್‌ನಲ್ಲಿ ಸಭೆಯೊಂದನ್ನುದ್ದೇಶಿಸಿ ಮಾತನಾಡಿದರು :

"ಸ್ವಾತಂತ್ರ್ಯ ಮತ್ತು ವಿಮೋಚನೆಯ ಸೌಲಭ್ಯಗಳನ್ನು ಅನುಭವಿಸುವ ಕಾಲ ಈಗ ಭಾರತಕ್ಕೆ ಬಂದಿದೆ. ಸ್ವಯಂ – ನಿರ್ಧಾರ ಮತ್ತು ಪ್ರಜಾಪ್ರಭುತ್ವದ ತತ್ತ್ವಗಳನ್ನು ಮಿತ್ರರಾಷ್ಟ್ರಗಳು ಜಗತ್ತಿನಾದ್ಯಂತ ಪ್ರಚುರಪಡಿಸುತ್ತಿದ್ದಾರೆ. ಗ್ರೇಟ್ ಬ್ರಿಟನ್ ತನ್ನದೇ ಸಾಮ್ರಾಜ್ಯದಲ್ಲಿ ಈ ಬಗ್ಗೆ ಕ್ರಮ ಪ್ರಾರಂಭ ಮಾಡಲಿ ಎಂದು ನಾನು ಹೇಳುತ್ತೇನೆ. ನನ್ನನ್ನು ಬ್ರಿಟಿಷ್ ವಿರೋಧಿ ಹಾಗೂ ರಾಜದ್ರೋಹಿ ಎಂದು ಕರೆಯುತ್ತಾರೆ. ಇದು ನಿಜವಲ್ಲ. ನಿರಂಕುಶಾಧಿಕಾರ ಮತ್ತು ದಬ್ಬಾಳಿಕೆಗೆ ನನ್ನದು ವಿರೋಧ. ಆದರೆ ಬ್ರಿಟನ್ ಮತ್ತು ಬ್ರಿಟಿಷ್ ಜನತೆಯಲ್ಲಿ ನನಗೆ ವೈರವಿಲ್ಲ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಲ್ಲಿರುವವರು ಎಷ್ಟು ನಿಷ್ಠಾವಂತ ಬ್ರಿಟಿಷರೋ ನಾನು ಅಷ್ಟೇ ನಿಷ್ಠಾವಂತ ಬ್ರಿಟಿಷರ್ ಆಗಿದ್ದೇನೆ ಎಂದು ಹೇಳುತ್ತೇನೆ – ಕೆಲವು ದೃಷ್ಟಿಗಳಲ್ಲಿ ಮತ್ತಷ್ಟು ಉತ್ತಮ ಬ್ರಿಟಿಷರ್ ಆಗಿದ್ದೇನೆ – ಏಕೆಂದರೆ ಬ್ರಿಟಿಷ್ ಪ್ರಜಾಪ್ರಭುತ್ವದ ಮತ್ತು ಸ್ವಾತಂತ್ರ್ಯದ ಬೋಧನೆಯನ್ನು ನಾನು ಆಚರಣೆಗೆ ತರುತ್ತಿದ್ದೇನೆ. ಜಗತ್ತಿನಲ್ಲಿ ಯಾವುದೇ ಸ್ಥಳದಲ್ಲಿರುವ ಎಲ್ಲ ರೀತಿಯ ನಿರಂಕುಶಾಧಿಕಾರದ ವಿರುದ್ಧ ನಾನು ಸೆಟೆದು ನಿಂತಿದ್ದೇನೆ ಹಾಗೂ ಎಲ್ಲ ವಿವೇಕಯುತ ಬ್ರಿಟನ್ನರು ಹಾಗೂ ಬ್ರಿಟಿಷ್ ಪ್ರಜಾಸತ್ತೆ ನನ್ನ ಮನವಿಯನ್ನು ಕೇಳಿ ನನ್ನ ದೇಶದ ಉದ್ಧಾರ ಮತ್ತು ಬಿಡುಗಡೆಯನ್ನು ಸಾಧಿಸಲು ನನಗೆ ನೆರವಾಗುತ್ತಾರೆಂದು ನಾನು ಆಶಿಸುತ್ತೇನೆ."

ಮುಂದಿನ ಎಂಟು ತಿಂಗಳು ಬ್ರಿಟನ್‌ನಲ್ಲಿ ತಿಲಕರು ಮಾಡಿದ ಭಾಷಣಗಳ ವಿಷಯ ಇದೇ ಆಗಿತ್ತು. ಸಾರ್ವಜನಿಕ ಅಭಿಪ್ರಾಯವನ್ನು ಒಲಿಸಿಕೊಳ್ಳುವ ಯಾವ ಅವಕಾಶವನ್ನೂ ಅವರು ಕಳೆದುಕೊಳ್ಳಲಿಲ್ಲ. ಲೇಬರ್ ಪಕ್ಷದ ನಾಯಕರೊಂದಿಗೆ ಅವರು ಒಂದೇ ವೇದಿಕೆಯ ಮೇಲೆ ಆಗಾಗ ಕಾಣಿಸಿಕೊಂಡರು ಹಾಗೂ ಆ ಪಕ್ಷದ ವಾರಪತ್ರಿಕೆಯಾದ 'ಹೆರಾಲ್ಡ್' ಅನ್ನು ದಿನಪತ್ರಿಕೆಯಾಗಿ ಪರಿವರ್ತಿಸಲು ಪ್ರಾರಂಭಿಸಿದ ನಿಧಿಗೆ ಅವರು ದೊಡ್ಡ ಮೊತ್ತದ ಕೊಡುಗೆಯನ್ನು ನೀಡಿದರು. ರ್‍ಯಾಂಸೆ ಮ್ಯಾಕ್‌ಡೊನಾಲ್ಡ್, ಸಿಡ್ನಿ ವೆಬ್ ಮತ್ತು ಜಾರ್ಜ್ ಲ್ಯಾನ್ಸ್‌ಬರಿ ಅವರೊಂದಿಗೆ ತಿಲಕರು ಸದಾ ಸಂಪರ್ಕ ಹೊಂದಿದ್ದರು. ತಿಲಕರ "ಪಾರದರ್ಶಕ ಪ್ರಾಮಾಣಿಕತೆಯ" ಬಗ್ಗೆ ಲ್ಯಾನ್ಸ್‌ಬರಿ ಬಹಳ ಪ್ರಭಾವಿತರಾಗಿದ್ದರು. ಮೊದಲನೆಯ ವಿಶ್ವ ಯುದ್ಧದ ಕೊನೆಯಲ್ಲಿ ತಿಲಕರು ಲೇಬರ್ ಪಕ್ಷದೊಡನೆ ಸ್ಥಾಪಿಸಿದ ನಿಕಟ ಸಂಪರ್ಕಗಳು ಈ ದೇಶದೊಡನೆ ಆ ಪಕ್ಷ ನಂತರ ತಾಳಿದ ನಿಲುವಿನ ಮೇಲೆ ಬೀರಿದ ಪ್ರಭಾವ ಕಡಿಮೆಯೇನಾಗಿರಲಿಲ್ಲ ಎಂದು ಹೇಳಿದರೆ ಅದು ದೂರದ ಮಾತಾಗುವುದಿಲ್ಲ.

ಬ್ರಿಟಿಷ್ ಇಂಡಿಯ ಸಮಿತಿ ಮತ್ತು 'ಇಂಡಿಯ' ಪತ್ರಿಕೆಯನ್ನು ಪುನರ್‌ಸಂಘಟಿಸುವುದು ತಿಲಕರು ಕೈಗೊಂಡ ಮತ್ತೊಂದು ಕಾರ್ಯವಾಗಿತ್ತು. 'ಇಂಡಿಯ' ಪತ್ರಿಕೆ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಚಾರಪತ್ರಿಕೆ ಎಂದು ಹೇಳಲಾಗುತ್ತಿದ್ದರೂ, ಅದು ತನ್ನದೇ ಸ್ವಂತ, ಸ್ವತಂತ್ರ ಅಭಿಪ್ರಾಯಗಳನ್ನು ಪ್ರಕಟಿಸುತ್ತಿತ್ತು ಹಾಗೂ ಕೆಲವೊಮ್ಮೆ ಕಾಂಗ್ರೆಸ್‌ನ ಅಭಿಪ್ರಾಯಗಳಿಗೆ ನೇರವಾಗಿ ವಿರುದ್ಧವಾದ ಅಭಿಪ್ರಾಯಗಳು ಅದರಲ್ಲಿ ಪ್ರಕಟವಾಗು

ತ್ತಿದ್ದವು. ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಸೆಣಸಿ ಈ ಪುನರ್‌ಸಂಘಟನೆಯ ಕಾರ್ಯವನ್ನು ಮಾಡಲಾಯಿತು. ಎನ್.ಸಿ. ಕೇಳ್ಕರ್ "ಇಂಡಿಯ" ಪತ್ರಿಕೆಯ ಸಂಪಾದಕರಾಗಿ ಕೆಲಕಾಲ ಕೆಲಸ ಮಾಡಿದರು ಎಂಬುದನ್ನು ನೆನಪಿಗೆ ತಂದುಕೊಳ್ಳಬಹುದು. 'ಕೇಸರಿ' ಪತ್ರಿಕೆಗೆ 'ಲಂಡನ್ ನ್ಯೂಸ್‌ಲೆಟರ್' ಎಂಬ ಕಾಲಂ ಬರೆಯುತ್ತಿದ್ದ ಕೇಳ್ಕರರು ತಿಲಕರ ಲಂಡನ್ ಜೀವನದ ಬಗ್ಗೆ ಸ್ವಾರಸ್ಯವಾಗಿ ವರ್ಣಿಸಿದ್ದಾರೆ:-

"ಅನೇಕ ರೀತಿಗಳಲ್ಲಿ ಅವರ ಜೀವನ ವಿಶಿಷ್ಟವಾಗಿತ್ತು. ಅವರು ಅಲ್ಲಿ ಸುಮಾರು ಹದಿಮೂರು ತಿಂಗಳಿದ್ದರು. ಆದರೆ ಚಿತ್ರಗಳ ಗ್ಯಾಲರಿಗಳಿಗಾಗಲಿ, ಮೃಗಾಲಯಕ್ಕಾಗಲಿ ಅಥವಾ ಖ್ಯಾತ ಕಟ್ಟಡಗಳು ಅಥವಾ ಸ್ಮಾರಕ ಭವನಗಳಿಗಾಗಲಿ ಅವರು ಹೋದದ್ದು ಕಡಿಮೆ. ಬ್ರಿಟಿಷ್ ಮ್ಯೂಸಿಯಂ, ಇಂಡಿಯ ಆಫೀಸ್ ಲೈಬ್ರರಿ ಮತ್ತು ಕಾಮನ್ಸ್ ಸಭೆಗೆ ಅವರು ಭೇಟಿ ಕೊಟ್ಟರು. ಅವರು ಅಪರೂಪದ ಪ್ರವಾಸಿಯಾಗಿದ್ದರು. ಏಕೆಂದರೆ ಪ್ರವಾಸಿಯ ದೃಷ್ಟಿಯಿಂದ ಅವರು ಲಂಡನ್ ನೋಡಲೇ ಇಲ್ಲ".

ಬ್ರಿಟನ್‌ನ ಜೀವನಕ್ಕೆ ಅವರು ಹೊಂದುಕೊಳ್ಳುವ ಬಗ್ಗೆ ಶಂಕೆ ಇತ್ತು. ಆದರೆ ಒಟ್ಟಾರೆ ಮೆಚ್ಚಿಕೊಳ್ಳುವ ರೀತಿಯಲ್ಲಿ ಅವರು ಒಗ್ಗಿಕೊಂಡರು. ಅವರು ಲಂಡನ್‌ನಲ್ಲಿದ್ದ ಮೊದಲ ಹತ್ತು ತಿಂಗಳು ನಂಬರ್ 10, ಹೌಲಿ ಪ್ಲೇಸ್, ಮೈಡಾ ವೇಲ್‌ನಲ್ಲಿದ್ದರು ಹಾಗೂ ನಂತರ 60, ಟಾಲ್ಬಾಟ್ ರೋಡ್, ಪ್ಯಾಡಿಂಗ್‌ಟನ್‌ನಲ್ಲಿದ್ದರು. ಈ ಎರಡನೆಯ ಮನೆಯ ಮಾಲೀಕನಾಗಿದ್ದ ಭಾರತೀಯ ತಿಲಕರಿಗಾಗಿ ಮನೆಯನ್ನು ಬಿಟ್ಟು ಕೊಟ್ಟಿದ್ದ. ಈ ಮನೆಯನ್ನು ಈಗ ತಿಲಕರ ಸ್ಮಾರಕ ಭವನವಾಗಿ ಪರಿವರ್ತಿಸಲಾಗಿದೆ. ಹಾಗೂ ಇದನ್ನು ಭಾರತೀಯ ವಿದ್ಯಾರ್ಥಿಗಳ ಹಾಸ್ಟೆಲ್ ಮತ್ತು ಸಭಾಂಗಣವಾಗಿ ಉಪಯೋಗಿಸಲಾಗುತ್ತಿದೆ. ಉಡುಪಿನ ಬದಲಾವಣೆಯ ಹೊರತಾಗಿ ತಿಲಕರು ತಮ್ಮ ಎಂದಿನ ಅಭ್ಯಾಸಗಳು ಮತ್ತು ದಿನಚರಿಯನ್ನು ಅನುಸರಿಸಿದರು. ಮಧ್ಯಾಹ್ನದ ಊಟದ ನಂತರ ಅವರು ಮನೆಯಿಂದ ಹೊರಟು ತಮ್ಮ ಕೆಲಸಕಾರ್ಯಗಳನ್ನು ಮುಗಿಸಿಕೊಂಡು ಸಂಜೆ 5ರ ಹೊತ್ತಿಗೆ ವಾಪಸಾಗುತ್ತಿದ್ದರು. ಸಂಜೆ ಮನೆಗೆ ಬಂದವರನ್ನು ಭೇಟಿಯಾಗುತ್ತಿದ್ದರು. ಅವರು ಬೇಗ ಮಲಗುತ್ತಿದ್ದರು. ವಯಸ್ಸು ಮತ್ತು ಆರೋಗ್ಯದಿಂದಾಗಿ ಲಂಡನ್‌ನ ರಭಸದ ವಾಹನಗಳ ಗಡಿಬಿಡಿಯಲ್ಲಿ ಓಡಾಡುವುದು ಅವರಿಗೆ ಪ್ರಯಾಸಕರವಾಗಿತ್ತು. ಆದರೂ ಅವರು ತಮ್ಮ ಭೇಟಿಗಳನ್ನು ಎಂದೂ ತಪ್ಪಿಸಿಕೊಳ್ಳಲಿಲ್ಲ. ಲಂಡನ್‌ನಲ್ಲಿದ್ದ ಹದಿಮೂರು ತಿಂಗಳು ಅವರು ಅನೇಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದರು. ಅವರು ಹೊಂದಿದ ಅನೇಕ ಸಂಪರ್ಕಗಳಿಂದ ಬ್ರಿಟಿಷ್ ರಾಜಕೀಯ ಜೀವನದ ಬಗ್ಗೆ ಅವರು ಚೆನ್ನಾಗಿ ತಿಳಿದುಕೊಂಡರು ಹಾಗೂ ಸಮಗ್ರ ಅಂತರ್‌ರಾಷ್ಟ್ರೀಯ ದೃಷ್ಟಿಯನ್ನು ಗಳಿಸಿದರು.

ಗವರ್ನ್‌ಮೆಂಟ್ ಆಫ್ ಇಂಡಿಯ ಮಸೂದೆಯನ್ನು ಪರಿಶೀಲಿಸಲು ನೇಮಿಸಿದ್ದ ಪಾರ್ಲಿಮೆಂಟರಿ ಸಂಯುಕ್ತ ಆಯ್ಕೆ ಸಮಿತಿಯ ಮುಂದೆ ಭಾರತದ ಹೋಂ ರೂಲ್ ಲೀಗ್‌ನ ಪರವಾಗಿ ಹಾಜರಾಗಿದ್ದು ತಿಲಕರು ವಹಿಸಿದ್ದ ಪ್ರಮುಖ ಕಾರ್ಯಭಾರವಾಗಿತ್ತು. ಪ್ಯಾರಿಸ್‌ನ ಶಾಂತಿ ಸಮ್ಮೇಳನಕ್ಕೆ ನಿಯೋಗವನ್ನು ಒಯ್ಯಲು, ಕಾಂಗ್ರೆಸ್ ಅವರನ್ನು ನಿಯೋಗದ ನಾಯಕರನ್ನಾಗಿ ನೇಮಿಸಿತು. ಆದರೆ ಫ್ರಾನ್ಸ್‌ಗೆ ಹೋಗಲು ಅವರಿಗೆ ಪಾಸ್

ಪೋರ್ಟ್ ನಿರಾಕರಿಸಲಾಯಿತು. ಶಾಂತಿ ಸಮ್ಮೇಳನದ ಅಧ್ಯಕ್ಷರಿಗೆ ಮನವಿ ಪತ್ರವನ್ನು ಕಳಿಸುವುದಷ್ಟನ್ನೆ ತಿಲಕರು ಮಾಡಬಹುದಾಗಿತ್ತು:–

"ಮೊದಲನೆಯದಾಗಿ, ಬ್ರಿಟಿಷ್ ಡೊಮಿನಿಯನ್‌ಗಳಿಗೆ ಲೀಗ್ ಆಫ್ ನೇಶನ್ಸ್‌ನಲ್ಲಿ ಕೊಟ್ಟಿರುವ ಪ್ರಾತಿನಿಧ್ಯದ ಹಕ್ಕನ್ನು ಭಾರತಕ್ಕೂ ಕೊಡಬೇಕು. ಎರಡನೆಯದಾಗಿ ಭಾರತೀಯರು ತಮ್ಮನ್ನು ತಾವೇ ಆಳುವುದಕ್ಕೆ ಸಮರ್ಥರು, ಪ್ರಗತಿಪರವಾದ ರಾಷ್ಟ್ರದ ಜನತೆಗಾಗಿ ಅವರು ಸ್ವಯಂ–ನಿರ್ಧಾರದ ತತ್ತ್ವದ ಅನ್ವಯಕ್ಕೆ ಅರ್ಹರು ಹಾಗೂ ಈ ತತ್ತ್ವದ ಆಚರಣೆಯಲ್ಲಿ ಜನತೆಯ ಬುದ್ಧಿಮತ್ತೆಗೆ ತಕ್ಕಂತೆ ಸ್ವ – ಅಭಿವೃದ್ಧಿಗೆ ಅತ್ಯಂತ ಸೂಕ್ತ ಎಂದು ಅವರು ಪರಿಗಣಿಸುವ, ಅಂಗೀಕೃತ ಪ್ರಜಾಸತ್ತಾತ್ಮಕ ವಿಧಿಗಳ ಆಧಾರದ ಮೇಲೆ ನಿರ್ಮಿತವಾದ, ಸರ್ಕಾರದ ಮಾದರಿಯನ್ನು ತೀರ್ಮಾನಿಸುವುದಕ್ಕೂ ಅವರು ಅರ್ಹರು ಎಂದು ಘೋಷಿಸಬೇಕು".

ಈ ಎಲ್ಲ ಚಟುವಟಿಕೆಗಳ ಹುಚ್ಚು ರಭಸದಲ್ಲಿ ತಿಲಕರು ಸಿಕ್ಕಿದ್ದರು. ನವೆಂಬರ್ 6, 1919ರಂದು ಸ್ವದೇಶಕ್ಕೆ ಮರಳಲು ಹಡಗು ಹತ್ತಿದಾಗ ಅವರಿಗೆ ಸಂತೋಷ ವಾಗಿರಬೇಕು. ಬ್ರಿಟನ್‌ನ ಆದರದ ದಂಡೆಗೆ ಎಂದಾದರೊಂದು ದಿನ ಹಿಂತಿರುಗುವ ಯೋಚನೆ ಅವರಿಗೆ ಹೊಳೆಯದೆ ಇದ್ದಿರಲಾರದು.

ಅಧ್ಯಾಯ 18

ಕೊನೆಯ ದಿನಗಳು

ತಿಲಕರ ಹದಿನಾಲ್ಕು ತಿಂಗಳ ಗೈರುಹಾಜರಿಯಲ್ಲಿ ಭಾರತದಲ್ಲಿ ಅತ್ಯಂತ ಪ್ರಮುಖ ಘಟನೆಗಳು ನಡೆದಿದ್ದವು. 1857ರಲ್ಲಿ ದೇಶ ಪಟ್ಟ ಪೆಟ್ಟಿನ ಅನುಭವದಷ್ಟೇ ತೀವ್ರವಾದ ಅನುಭವವನ್ನು ಪಡೆದಿತ್ತು. ಆದರೆ ಆಗಿನ ಮಹಾನ್ ಬಂಡಾಯದಿಂದ ಭಾರತದ ಮೇಲೆ ಬ್ರಿಟಿಷ್ ಆಡಳಿತ ಬಲಗೊಂಡಿತ್ತು. ಪಂಜಾಬ್‌ನಲ್ಲಿ 1919ರಲ್ಲಿ ನಡೆದ ಕ್ರೂರ ಆಡಳಿತದಿಂದ ಬ್ರಿಟಿಷ್ ಅಸ್ತಿತ್ವಕ್ಕೇ ಮಾರಕ ಆಘಾತ ಉಂಟಾಯಿತು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ಕೊನೆಗೊಂಡ ಪಂಜಾಬ್‌ನ ಅಮಾನುಷ ಕೃತ್ಯಗಳು ಭಾರತ – ಬ್ರಿಟಿಷ್ ಸಂಬಂಧಗಳಲ್ಲಿ ಆದ ತಿರುವನ್ನು ಸೂಚಿಸುತ್ತವೆ.

ಈ ಅವಧಿಯಲ್ಲಿ ಮಹಾತ್ಮ ಗಾಂಧಿಯವರು ರಾಜಕೀಯ ಬಾಂದಳದಲ್ಲಿ ಪ್ರಧಾನವಾಗಿ ಕಾಣಿಸಿಕೊಂಡರು. ಆ ವೇಳೆಗಾಗಲೇ ಸತ್ಯಾಗ್ರಹದ ಕಾರ್ಯಸಾಧ್ಯತೆಯನ್ನು ಅವರು ಚಂಪಾರಣ್ ಮತ್ತು ಖೇಡದಲ್ಲಿ ಸಾಬೀತು ಮಾಡಿ ತೋರಿಸಿದ್ದರು. ಆದರೆ ಅಲ್ಲಿಯ ಕುಂದುಕೊರತೆಗಳು ಕೇವಲ ಸ್ಥಳೀಯವಾಗಿದ್ದವು ಹಾಗೂ ಅವುಗಳ ಪರಿಹಾರ ದಿಂದ ಸರ್ಕಾರಕ್ಕೆ ಮುಖಭಂಗವೇನಾಗಲಿಲ್ಲ. ರೌಲಟ್ ಮಸೂದೆಗಳ ವಿರುದ್ಧ ಪ್ರತಿಭಟಿಸಲು ಮಾರ್ಚ್ 30, 1919ರಂದು ಇದನ್ನು ನಂತರ ಏಪ್ರಿಲ್ 6ಕ್ಕೆ ಬದಲಾಯಿಸಲಾಯಿತು- ಹರತಾಳವನ್ನು ನಡೆಸಲು ಗಾಂಧೀಜಿಯವರು ನಿರ್ಧರಿಸಿದಾಗ, ಸತ್ಯಾಗ್ರಹವನ್ನು ಮೊದಲು ಬಾರಿಗೆ ರಾಷ್ಟ್ರ ಮಟ್ಟದಲ್ಲಿ ನಡೆಸಲಾಯಿತು. "ಆಡಳಿತಾಂಗದಲ್ಲಿ ಆಳವಾಗಿ ಸೇರಿರುವ ರೋಗದ ಸುಸ್ಪಷ್ಟ ಸೂಚನೆ" ಎಂದು ಗಾಂಧೀಜಿಯವರು ಈ ಮಸೂದೆಗಳನ್ನು ವರ್ಣಿಸಿದರು. ಇವುಗಳ ವಿರುದ್ಧ ಈ ರೀತಿ ಪ್ರತಿಭಟಿಸುವ ವಿಚಾರ ಅವರಿಗೆ ಮದ್ರಾಸಿ ನಲ್ಲಿದ್ದಾಗ ಬಿದ್ದ ಕನಸಿನಲ್ಲಿ ಉಂಟಾಯಿತು. ಈ ವಿಚಾರವನ್ನು ಕ್ಷಿಪ್ರವಾಗಿ ಕಾರ್ಯರೂಪಕ್ಕೆ ತರಲಾಯಿತು ಹಾಗೂ ಸತ್ಯಾಗ್ರಹ ಚಳವಳಿಯ ಪೂರ್ವಸೂಚನೆಯಾಗಿ ದೇಶಾದ್ಯಂತ ಏಪ್ರಿಲ್ 6ರಂದು ಹರತಾಳ ಆಚರಿಸಿದಾಗ ಇತಿಹಾಸ ಸೃಷ್ಟಿಯಾಯಿತು. ದುರದೃಷ್ಟ ವಶಾತ್, ಅಹಿಂಸೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಗಾಂಧೀಜಿಯವರ ಕಟ್ಟಳೆಯನ್ನು ಎಲ್ಲ ಕಡೆ ಪಾಲಿಸಲಿಲ್ಲ ಹಾಗೂ ಜನರ ತೀವ್ರ ಉತ್ಸಾಹ ಅನೇಕ ಕಡೆ ಪುಂಡತನಕ್ಕೆ ಎಡೆ ಕೊಟ್ಟಿತು.

ಮೊದಲು ನಿರ್ದೇಶಿಸಿದಂತೆ ದಿಲ್ಲಿಯಲ್ಲಿ ಮಾರ್ಚ್ 30ರಂದು ಹರತಾಳವನ್ನು ಆಚರಿಸ ಲಾಯಿತು. ಸ್ವಾಮಿ ಶ್ರದ್ಧಾನಂದರ ನಾಯಕತ್ವದಲ್ಲಿ ಅಲ್ಲಿ ನಡೆದ ಭಾರಿ ಮೆರವಣಿಗೆಯನ್ನು ಚದುರಿಸಲು ಪೋಲಿಸರು ಮತ್ತು ಸೈನಿಕರು ಗುಂಡು ಹಾರಿಸಿದಾಗ ಜನರು ಸತ್ತು ಪಂಜಾಬ್‌ನಲ್ಲಿ ಭೀಕರ ಘಟನೆಗಳು ನಡೆಯುವುದಕ್ಕೆ ಮುದುಕಿನ ಪ್ರೇರಣೆ ಒದಗಿತು. ಅತ್ಯಂತ ಭೀಕರವಾದ ದುರಂತ ಅಮೃತಸರದ ಜಲಿಯನ್‌ವಾಲಾ ಬಾಗ್‌ನಲ್ಲಿ ಏಪ್ರಿಲ್ 13ರಂದು ನಡೆಯಿತು. ಅಲ್ಲಿ ನಡೆದ ಗೋಳೀಬಾರ್‌ನಲ್ಲಿ 379 ಜನರು ಸತ್ತರು, 1200

ಮುಂದಿಗೆ ಗಾಯಗಳಾದವು. ಸತ್ತವರ, ಗಾಯಗೊಂಡವರ ಸಂಖ್ಯೆ ಅನಧಿಕೃತ ಅಂದಾಜಿನ ಪ್ರಕಾರ ಇನ್ನೂ ಹೆಚ್ಚು. ಈ ದುರಂತದ ನಂತರ ಲಷ್ಕರಿ ಶಾಸನವನ್ನು ವಿಧಿಸಲಾಯಿತು ಹಾಗೂ ಕ್ರೌರ್ಯದಿಂದ ತೃಪ್ತಿ ಪಡುವ ಭಾವನೆ ಸಂಪೂರ್ಣವಾಗಿ ಪ್ರಕಟವಾಗುವುದಕ್ಕೆ ಅವಕಾಶ ದೊರೆಯಿತು.

ಪಂಜಾಬ್‌ನ ಅಮಾನುಷ ಕೃತ್ಯಗಳ ಸುದ್ದಿ ಕಟ್ಟುನಿಟ್ಟಿನ ಪತ್ರಿಕಾಪೂರ್ವ ಪರಿಶೀಲನೆಯ ನಡುವೆ ನುಸುಳಿ ಹೊರಬಿದ್ದಾಗ ದೇಶದ ಉದ್ದಗಲಕ್ಕೂ ಜನರು ಭಯಭ್ರಾಂತರಾದರು, ಅಸಮಾಧಾನದಿಂದ ಉರಿದರು. ಈ ಭೀಭತ್ಸ ಘಟನೆಗಳಿಗೂ, ಸತ್ಯಾಗ್ರಹ ಚಳವಳಿಗೂ ಸಂಬಂಧವಿರಲಿಲ್ಲವಾದರೂ, ಬೇರೆಡೆಗಳಲ್ಲಿ ಜನರು ನಡೆಸಿದ ಹಿಂಸೆಯಿಂದ ಗಾಂಧೀಜಿ ಚಳವಳಿಯನ್ನು ಏಪ್ರಿಲ್ 18ರಂದು ನಿಲ್ಲಿಸುವಂತಾಯಿತು. "ಭಯಭ್ರಾಂತರೂ ಮೂಕ ನೋವಿನಿಂದ ಚಕಿತರೂ ಆಗಿರುವ ನನ್ನ ಲಕ್ಷಾಂತರ ದೇಶವಾಸಿಗಳ ಪ್ರತಿಭಟನೆಗೆ ಧ್ವನಿ ಕೊಡಲು" ರಬೀಂದ್ರನಾಥ ಟಾಗೋರರು ನೈಟ್ ಪದವಿಯನ್ನು ತ್ಯಜಿಸಿದರು. ಇಂತಹುದೇ ಅಸಂಖ್ಯಾತ ಪ್ರತಿಭಟನೆಗಳನ್ನು ಮಾಡಲಾಯಿತು. ಸ್ವೇಚ್ಛಾನುಸಾರ ಹಂಟರ್ ವಿಚಾರಣಾ ಸಮಿತಿಯನ್ನು ನೇಮಿಸಿದ್ದರಿಂದಲೂ ಪರಿಸ್ಥಿತಿ ಏನೂ ಸುಧಾರಿಸಲಿಲ್ಲ. ಈ ವಿಚಾರಣಾ ಸಮಿತಿಯನ್ನು ಮುಖ್ಯವಾಗಿ ತಿಪ್ಪೆ ಸಾರಿಸಲು ನೇಮಿಸಲಾಗಿತ್ತು ಎಂಬುದು ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಯಿಂದ ಕಾಪಾಡಲು ಅವಸರವಾಗಿ ಜಾರಿಗೆ ತಂದ 'ರಕ್ಷಣಾ ಕಾಯಿದೆ'ಯಿಂದ ವೇದ್ಯವಾಗುತ್ತದೆ.

ತಿಲಕರು ನವೆಂಬರ್ 27, 1919ರಂದು ಬಾಂಬೆಯಲ್ಲಿ ಇಳಿದಾಗ ಇಡೀ ದೇಶ ಅಸಮಾಧಾನ, ಸಿಟ್ಟಿನಿಂದ ಉರಿಯುತ್ತಿತ್ತು. ತಾವು ಹದಿನಾಲ್ಕು ತಿಂಗಳು ಇಲ್ಲದೆ ಇದ್ದ ಸಮಯದಲ್ಲಿ ದೇಶದಲ್ಲಿ ಉಂಟಾಗಿದ್ದ ಬದಲಾವಣೆಯನ್ನು ತಿಲಕರು ಮನಗಂಡರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಇಂಗ್ಲೆಂಡ್‌ಗೆ ಮತ್ತು ಕಾಂಗ್ರೆಸ್‌ನ ಬ್ರಿಟಿಷ್ ಸಮಿತಿಗೆ ಕಳಿಸಿದ್ದ ನಿಯೋಗದ ಸದಸ್ಯರು ಲಂಡನ್‌ನಲ್ಲಿ, ಭಾರತೀಯ ಪರಿಸ್ಥಿತಿಯ ಬಗ್ಗೆ ಹೊರಡಿಸಿದ್ದ ಪ್ರಣಾಳಿಕೆ ತಿಲಕರು ದೇಶದಲ್ಲಿ ಆಗುತ್ತಿದ್ದ ಬೆಳವಣಿಗೆಗಳ ಬಗ್ಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು ಎಂಬುದನ್ನು ತೋರಿಸುತ್ತದೆ. "ಗಾಂಧಿ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ ನಾನು ಬಾಂಬೆಯಲ್ಲಿರಬೇಕಾಗಿತ್ತು ಎನಿಸುತ್ತದೆ. ಅವರೊಂದಿಗೆ ನಾನು ಕಷ್ಟಗಳನ್ನೂ ತೊಂದರೆಗಳನ್ನೂ ಅನುಭವಿಸುತ್ತಿದ್ದೆ" ಎಂದು ತಿಲಕರು ಬಾಂಬೆ ತಲುಪಿದಾಗ ಹೇಳಿದರು. ತಿಲಕರಿಗೆ ಬಾಂಬೆ, ಪೂನಾ ಮತ್ತು ಇತರೆಡೆಗಳಲ್ಲಿ ದೊರೆತ ಸಂಭ್ರಮದ ಸ್ವಾಗತ, ಶಿರೋಲ್ ಪ್ರಕರಣದ ಸೋಲು ಅವರ ಜನಪ್ರಿಯತೆಯನ್ನು ಎಷ್ಟೂ ಕಡಿಮೆ ಮಾಡಲಿಲ್ಲ ಎಂಬುದನ್ನು ತೋರಿಸಿತು. "ನಮ್ಮ ಪ್ರೀತಿಪಾತ್ರ ಲೋಕಮಾನ್ಯರ ಬಗ್ಗೆ ಬ್ರಿಟಿಷ್ ನ್ಯಾಯದರ್ಶಿಗಳೂ, ನ್ಯಾಯಾಧೀಶರೂ ಏನು ಹೇಳಿದರು ಎಂಬ ಬಗ್ಗೆ ಯಾರು ಲೆಕ್ಕಿಸುತ್ತಾರೆ?' ಅವರ ತೀರ್ಪುಗಳು ಜನತೆಯ ಪ್ರೀತಿಯ ಹೃದಯ ಸಿಂಹಾಸನದಿಂದ ತಿಲಕರನ್ನಿಳಿಸುವುದಕ್ಕೆ ಅಶಕ್ತವಾಗಿವೆ" ಎಂದು 'ದಿ ಬಾಂಬೆ ಕ್ರಾನಿಕಲ್' ಪತ್ರಿಕೆ ಬರೆಯಿತು. ಸ್ವದೇಶಕ್ಕೆ ಹಿಂತಿರುಗಿದ ನಂತರ ತಿಲಕರಿಗೆ ಕಾದಿದ್ದ ಅತ್ಯಂತ ಪ್ರಮುಖ ಕಾರ್ಯಕ್ರಮವೆಂದರೆ ಕಾಗ್ರೆಸ್‌ನ ಅಮೃತಸರ ಅಧಿವೇಶನದಲ್ಲಿ ಭಾಗವಹಿಸಬೇಕಾದ್ದು. ಈ ಅಧಿವೇಶನದಲ್ಲಿ ಮಾಂಟ್‌ಫೋರ್ಡ್ ಸುಧಾರಣೆಗಳ

ಬಗ್ಗೆ ಕಾಂಗ್ರೆಸ್ ತನ್ನ ನಿಲುವನ್ನು ರೂಪಿಸಬೇಕಾಗಿತ್ತು. ಅಮೃತಸರಕ್ಕೆ ಹೋಗುವ ಮೊದಲು ತಿಲಕರು ಮದ್ರಾಸ್‌ಗೆ ಭೇಟಿ ನೀಡಿದರು. ಹೋಂ ರೂಲ್ ಲೀಗ್‌ಗೆ ಪ್ರತಿಯಾಗಿ ಅಧಿಕೃತ ಆಶ್ರಯದಲ್ಲಿ ಎರಡು ವರ್ಷಗಳಿಗೆ ಹಿಂದೆ ಸ್ಥಾಪಿಸಲಾದ ಬ್ರಾಹ್ಮಣೇತರರೇ ಹೆಚ್ಚಾಗಿದ್ದ ಪಕ್ಷವಾದ ಮದ್ರಾಸ್ ಪ್ರೆಸಿಡೆನ್ಸಿ ಅಸೋಸಿಯೇಷನ್‌ನಿಂದ ತಿಲಕರು ಪಡೆದ ಬಿನ್ನವತ್ತಳೆ ಅವರು ಮದ್ರಾಸ್‌ನಲ್ಲಿ ಪಡೆದ ಬಿನ್ನವತ್ತಳೆಗಳಲ್ಲಿ ಮುಖ್ಯವಾಗಿತ್ತು. ತಿಲಕರನ್ನು ಪ್ರಧಾನ ರಾಷ್ಟ್ರೀಯ ನಾಯಕರೆಂದು ಕರೆದ ಈ ಸಂಘ, "ನಮ್ಮ ದೇಶದ ವಿಮೋಚನೆಯ ಹಾದಿಗೆ ಅಡ್ಡವಾಗಿರುವ ಹೆಚ್ಚುತ್ತಿರುವ ಕೋಮುವಾರು ಸ್ಪರ್ಧೆಗಳು ಮತ್ತು ರಾಜಕೀಯ ವೈಮನಸ್ಯಗಳಂತಹ ಅನೇಕ ಪ್ರತ್ಯೇಕತಾ ಪ್ರವೃತ್ತಿಗಳ" ಬಗ್ಗೆ ವಿಷಾದ ಸೂಚಿಸಿದ್ದು ಗಮನಾರ್ಹವಾಗಿತ್ತು.

ತಿಲಕರು ಮದ್ರಾಸ್‌ನಿಂದ ಅಮೃತಸರಕ್ಕೆ ಪ್ರಯಾಣ ಮಾಡುತ್ತಿದ್ದಾಗ, ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಸುಧಾರಣೆಗಳ ಮಸೂದೆಯನ್ನು ಅಂಗೀಕರಿಸಿದ ಹಾಗೂ ರಾಜಕೀಯ ಅಪರಾಧಿಗಳಿಗೆ ಕ್ಷಮಾದಾನ ನೀಡಿದ ಮತ್ತು ಸುಧಾರಣೆಗಳ ಕಾರ್ಯಾಚರಣೆಯಲ್ಲಿ ಸಹಕರಿಸಬೇಕೆಂದು ಭಾರತದ ಜನರಿಗೆ ಕರೆಕೊಟ್ಟ ಘೋಷಣೆಯ ಸುದ್ದಿ ತಲುಪಿತು. "ಕ್ಷಮಾದಾನ ಮತ್ತು ಘೋಷಣೆಗಾಗಿ ಭಾರತದ ಹೋಂ ರೂಲ್ ಲೀಗ್‌ನ ಮತ್ತು ಭಾರತದ ಜನತೆಯ ಕೃತಜ್ಞ ಹಾಗೂ ನಿಷ್ಠಾವಂತ ವಂದನೆಗಳನ್ನು ಬ್ರಿಟನ್‌ನ ದೊರೆಗೆ ತಿಳಿಸಿ ಅವರಿಗೆ ಪ್ರತಿವರ್ತನೆಯ ಸಹಕಾರದ ಆಶ್ವಾಸನೆಯನ್ನು" ತಿಳಿಸಬೇಕೆಂದು ಕೋರಿ ಮಾರ್ಗಮಧ್ಯದ ನಿಲ್ದಾಣದಿಂದ ತಿಲಕರು ವೈಸ್‌ರಾಯ್‌ಗೆ ತಂತಿಯನ್ನೂ ಕಳಿಸಿದರು. ಪ್ರತಿವರ್ತನೆಯ ಸಹಕಾರ ಎಂಬ ಪದಗಳು ಒಂದು ರೀತಿಯ ಕೋಲಾಹಲವನ್ನೆಬ್ಬಿಸಿದವು. ಸುಧಾರಣೆಗಳನ್ನು ಕೆಡವಲು ತಿಲಕರು ಉದ್ದೇಶಿಸಿದ್ದಾರೆ ಎಂದು ಅವರನ್ನು ಟೀಕಿಸುತ್ತಿದ್ದವರು ಆಪಾದಿಸಿದರು.

ಆ ಗಳಿಗೆಯ ಪ್ರೇರಣೆಯಿಂದ ಈ ಪದಗಳನ್ನೂ ತಿಲಕರು ನುಡಿದಿದ್ದರೂ, "ಪ್ರತಿವರ್ತನೆಯ ಸಹಕಾರ"ದ ಭಾವನೆ ತಿಲಕರ ನಡೆವಳಿಕೆಯನ್ನು ಯಾವಾಗಲೂ ನಿರ್ದೇಶಿಸಿತ್ತು. "ಕೊಟ್ಟಿದ್ದನ್ನೆಲ್ಲಾ ಸ್ವೀಕರಿಸಿ. ಇನ್ನೂ ಹೆಚ್ಚಿನದಕ್ಕೆ ಚಳವಳಿಯನ್ನು ಮುಂದುವರಿಸಬೇಕು" ಎಂಬುದು ಜೀವನದುದ್ದಕ್ಕೂ ರಾಜಕೀಯ ವಾಸ್ತವತಾವಾದಿಯಾಗಿದ್ದ ಅವರ ಸೂತ್ರವಾಗಿತ್ತು. ಪ್ರತಿವರ್ತನೆಯ ಸಹಕಾರದ ಅರ್ಥವನ್ನು ಅವರು ಅಮೃತಸರದಲ್ಲಿ ವಿಶದೀಕರಿಸಿದರು: "ನಾವು ಸಹಕರಿಸಬೇಕೆಂದು ನಿರೀಕ್ಷಿಸಲಾಗುತ್ತದೆ; ಆದರೆ ಸಹಕರಿಸಲು ಮೊದಲಿಗೆ ಏನಾದರೂ ಇರಬೇಕು. ಅಧಿಕಾರಿಗಳು ನಮ್ಮೊಂದಿಗೆ ಯಾವ ರೀತಿ ಸಹಕರಿಸಲು ಸಿದ್ಧವಾಗಿದ್ದಾರೆ ಎಂಬುದನ್ನು ಅವರು ತಿಳಿಸಲಿ ಮತ್ತು ಅವರು ಸಹಕರಿಸಿದರೆ ನಾವು ಖಂಡಿತವಾಗಿ ಪ್ರತಿಯಾಗಿ ಸಹಕರಿಸುತ್ತೇವೆ ಎಂದು ನಾವು ಅವರಿಗೆ ಭರವಸೆ ಕೊಡುತ್ತೇವೆ. ಸಹಕಾರ ಒಂದೇ ದಿಕ್ಕಿನಲ್ಲಿ ನಡೆಯುವ ಸಂಚಾರವಲ್ಲ; ಅದು ಪರಸ್ಪರ ಆಗಬೇಕು, ಅದನ್ನೇ ನಾನು ಪ್ರತಿವರ್ತನೆ ಎಂದು ಕರೆಯುವುದು."

ಸುಧಾರಣೆಗಳ ಬಗ್ಗೆ ಕಾಂಗ್ರೆಸ್ ಗೊತ್ತುವಳಿಯೂ ಕೊನೆಗೆ ಇದೇ ರೂಪಕ್ಕೆ ಇಳಿಯಿತು. ಸುಧಾರಣೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕೆಂದು ಸಿ.ಆರ್.ದಾಸ್ ವಾದಿಸಿದರೆ, ಅವುಗಳನ್ನು ಜೇಷರತ್ತಾಗಿ ಒಪ್ಪಿಕೊಳ್ಳಬೇಕೆಂದು ಗಾಂಧೀಜಿ ಹೇಳಿದರು.

ಇವರಿಬ್ಬರ ನಡುವೆ ತಿಲಕರು ನಿಂತಿದ್ದರು. ತಮ್ಮ ನಿರೀಕ್ಷೆಗಳ ಮಟ್ಟಕ್ಕೆ ಸುಧಾರಣೆಗಳು ಬರಲಿಲ್ಲ ಎಂದು ತಿಲಕರು ಒಪ್ಪಿಕೊಂಡರಾದರೂ, ಅವುಗಳಿಂದ ಆಗುವ ಉಪಯೋಗ ವನ್ನು ಪಡೆದುಕೊಳ್ಳಬೇಕೆಂದು ಇಚ್ಛಿಸಿದರು. ಅಂತಿಮವಾಗಿ ಅಂಗೀಕರಿಸಲಾದ ಕಾಂಗ್ರೆಸ್ ಗೊತ್ತುವಳಿ, ಸುಧಾರಣೆಗಳ ಕಾಯಿದೆ "ಸಾಲದು, ಅತೃಪ್ತಿಕರ, ನಿರಾಶಾದಾಯಕ" ಎಂದು ಸಾರಿತು; ಸ್ವಯಂ – ನಿರ್ಧಾರ ತತ್ತ್ವಕ್ಕೆ ಅನುಗುಣವಾಗಿ ಭಾರತದಲ್ಲಿ ಸಂಪೂರ್ಣವಾದ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಶೀಘ್ರವಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಬ್ರಿಟಿಷ್ ಪಾರ್ಲಿಮೆಂಟನ್ನು ಒತ್ತಾಯಪಡಿಸಿತು. "ಸಂಪೂರ್ಣವಾದ ಜವಾಬ್ದಾರಿ ಸರ್ಕಾರ ಬೇಗ ಸ್ಥಾಪನೆಯಾಗುವಂತೆ ಮಾಡುವ ರೀತಿಯಲ್ಲಿ ಸುಧಾರಣೆಗಳ ಆಚರಣೆ ನಿರ್ವಹಿಸಬೇಕು" ಎಂದು ಗೊತ್ತುವಳಿ ಜನರನ್ನು ಕೇಳಿಕೊಂಡಿತು.

ತಿಲಕರ ಬಲವಾದ ಸಾಮಾನ್ಯ ಜ್ಞಾನ ಮತ್ತು ವ್ಯವಹಾರ ಬುದ್ಧಿಗೆ ಅಮೃತಸರ ಕಾಂಗ್ರೆಸ್‌ನಲ್ಲಿ ಜಯ ದೊರಕಿತು.ಗಾಂಧೀಜಿಯವರ ನೈತಿಕ ನಿಲುವನ್ನೂ, ಸಿ.ಆರ್.ದಾಸ್ ಅವರ ಸಿಟ್ಟಿನ ವಿರೋಧವನ್ನೂ ತಿಲಕರು ಮನವರಿಕೆ ಮಾಡಿಕೊಂಡರು, ಅವರಿಬ್ಬರ ನಿಲುವುಗಳು ಸಂಪೂರ್ಣವಾಗಿ ಅಸಂಗತವಲ್ಲ ಎಂಬುದನ್ನು ಅವರು ತೋರಿಸಿಕೊಟ್ಟರು. ಅಂತಿಮವಾಗಿ ಅನುಮೋದಿಸಿದ ಗೊತ್ತುವಳಿ ಎರಡೂ ಅಭಿಪ್ರಾಯಗಳ ಸಮತೋಲ ವನ್ನು ಪ್ರತಿಬಿಂಬಿಸಿತು.

ಅಮೃತಸರದಿಂದ ಹಿಂದಿರುಗಿದ ನಂತರ ಈ ಗೊತ್ತುವಳಿಯ ಅನುಷ್ಠಾನದ ಕಾರ್ಯದಲ್ಲಿ ತಿಲಕರು ತೊಡಗಿದರು. ಜುನ್ನಾರ್ ಮತ್ತು ಬೆಳಗಾಂವ್‌ನಲ್ಲಿ ನಡೆದ ಜಿಲ್ಲಾ ಸಮ್ಮೇಳನಗಳಲ್ಲಿ ಹಾಗೂ ಶೋಲಾಪುರದಲ್ಲಿ ನಡೆದ ಪ್ರಾಂತೀಯ ಸಮ್ಮೇಳನದಲ್ಲಿ, ಚುನಾವಣೆಗಳನ್ನು ಎದುರಿಸಲು ದೇಶವನ್ನು ಸಿದ್ಧಗೊಳಿಸುವ ದೃಷ್ಟಿಯಿಂದ ಅವರು ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಿದರು. ಶೋಲಾಪುರದಲ್ಲಿ ನಡೆದ ಸಮ್ಮೇಳನ ದಲ್ಲಿ ಸೂರತ್ ಸಮ್ಮೇಳನದ ಗಲಭೆಯನ್ನು ನೆನಪಿಗೆ ತರುವಂತಹ ದೊಂಬಿಯ ದೃಶ್ಯಗಳು ಉಂಟಾದವು. ಅಮೃತಸರ್ ಕಾಂಗ್ರೆಸ್‌ನ ಗೊತ್ತುವಳಿಯ ಆಗುಹೋಗುಗಳನ್ನು ವಿವರಿಸಲು ಅವರು ಸಿಂಧ್‌ನಲ್ಲಿ ವ್ಯಾಪಕವಾಗಿ ಸಂಚಾರ ಕೈಗೊಂಡರು.

ಸುಧಾರಣೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರತಿವರ್ತನೆಯ ಸಹಕಾರಕ್ಕೆ ದೇಶ ವನ್ನು ಸಿದ್ಧಗೊಳಿಸಲು ತಿಲಕರು ತೊಡಗಿದ್ದಾಗ ಬೇಷರತ್ತಿನ ಸಹಕಾರ ನೀಡಬೇಕೆಂದು ಅಮೃತಸರದಲ್ಲಿ ಮನವಿ ಮಾಡಿಕೊಂಡಿದ್ದ ಗಾಂಧೀಜಿಯವರಲ್ಲಿ ಸಂಪೂರ್ಣವಾದ ಬದಲಾವಣೆ ಉಂಟಾಗಿತ್ತು. ವಿಧಿಪೂರ್ವಕವಾದ ವಾಗ್ದಾನಗಳನ್ನು ಧಿಕ್ಕರಿಸಿ, ಖಿಲಾಫತ್ ಅನ್ನು ನಿರ್ಮೂಲಮಾಡಿದ ತುರ್ಕಿ ಒಪ್ಪಂದದ ಷರತ್ತುಗಳ ಪ್ರಕಟಣೆ ಈ ಪರಿವರ್ತನೆಗೆ ಪ್ರಮುಖ ಕಾರಣವಾಗಿತ್ತು. ಈ ಒಪ್ಪಂದ ಮುಸಲ್ಮಾನರಲ್ಲಿ ದಿಗ್ಭ್ರಮೆಯನ್ನೂ, ರೋಷ ವನ್ನೂ ಉಂಟುಮಾಡಿತು. ಬೇಕೆಂದೇ ಮಾಡಿದ ಕೊಲೆಗಳನ್ನು "ನ್ಯಾಯ ತೀರ್ಮಾನದ ತಪ್ಪುಗಳು" ಎಂದು ಪರಿಗಣಿಸಿದ ಹಾಗೂ ಅಪರಾಧಗಳನ್ನು ಮಾಡಿದವರನ್ನು ದೋಷ ಮುಕ್ತರನ್ನಾಗಿ ಮಾಡಿದ ಹಂಟರ್ ವಿಚಾರಣಾ ಸಮಿತಿಯ ವರದಿಯ ಪ್ರಕಟಣೆಯೂ ಸಹ ಗಾಂಧೀಜಿಯವರ ಅಭಿಪ್ರಾಯಗಳ ಬದಲಾವಣೆಯ ಮೇಲೆ ಪ್ರಭಾವ ಬೀರಿತು. ಖಿಲಾಫತ್ ಪ್ರಕರಣದಲ್ಲಿ ಆದಂತೆ ವಿಧಿಪೂರ್ವಕವಾದ ವಾಗ್ದಾನಗಳನ್ನು ಧಿಕ್ಕರಿಸಿದ

ಹಾಗೂ ಪಂಜಾಬ್‌ನಲ್ಲಿ ನಡೆದ ಅಮಾನುಷ ಕೃತ್ಯಗಳನ್ನು ಲಘುವಾಗಿ ಕಂಡ ಸರ್ಕಾರದ ವ್ಯವಸ್ಥೆಯನ್ನು ಇನ್ನು ಸಹಿಸಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಗಾಂಧೀಜಿ ಬಂದರು.

ಏಪ್ರಿಲ್‌ನಲ್ಲಿ ಅಖಿಲ ಭಾರತ ಹೋಂ ರೂಲ್ ಲೀಗ್‌ನ ಅಧ್ಯಕ್ಷತೆಯನ್ನು ವಹಿಸಿ ಹೇಳಿಕೆಯಲ್ಲಿ ಗಾಂಧೀಜಿ ರಾಷ್ಟ್ರೀಯ ಪುನರ್‌ಸಂಘಟನೆಯ ತಮ್ಮ ಯೋಜನೆಯಲ್ಲಿ ಸುಧಾರಣೆಗಳು ಎರಡನೆಯ ಸ್ಥಾನವನ್ನು ಹೊಂದಿವೆ ಎಂದು ಒಪ್ಪಿಕೊಂಡರು. ಮಿತ್ರ ರಾಷ್ಟ್ರಗಳು ತುರ್ಕಿಯ ಮುಂದಿಟ್ಟ ಶಾಂತಿ ಒಪ್ಪಂದವನ್ನು ಮೇ 14, 1920ರಂದು ಪ್ರಕಟಿಸಿದಾಗ, "ಈ ಸೈತಾನ ಸರ್ಕಾರದೊಂದಿಗೆ ಯಾವುದೇ ರೂಪ ಅಥವಾ ರೀತಿಯಲ್ಲಿ ಸಹಕರಿಸುವುದು ಪಾಪ" ಎಂದು ಗಾಂಧೀಜಿ ಸಾರಿದರು. ಕೇಂದ್ರ ಖಿಲಾಫತ್ ಸಮಿತಿ ಮೇ 28ರಂದು ಅಸಹಕಾರ ಗೊತ್ತುವಳಿಯನ್ನು ಅಂಗೀಕರಿಸಿತು. ಎರಡು ದಿನಗಳ ನಂತರ ಬನಾರಸ್‌ನಲ್ಲಿ ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಖಿಲಾಫತ್ ಸಮಿತಿ ಮಾಡಿದಂತೆಯೇ ಮಾಡಬೇಕೆಂದು ಗಾಂಧೀಜಿ ಮಾಡಿದ ಮನವಿಯನ್ನು ಪರಿಗಣಿಸಿ, ಅಮೃತಸರದಲ್ಲಿ ಅಂಗೀಕರಿಸಿದ ಸುಧಾರಣೆಗಳ ಗೊತ್ತುವಳಿಗೆ ಈ ಸಲಹೆ ವಿರುದ್ಧವಾಗಿರುವುದರಿಂದ ಹಾಗೆ ಮಾಡುವ ಅಧಿಕಾರ ತನಗೆ ಇಲ್ಲವೆಂದು ಅಭಿಪ್ರಾಯ ಪಟ್ಟಿತು. ಮುಂದೆ ಕಲ್ಕತ್ತೆಯಲ್ಲಿ ನಡೆಸಲಾಗುವ ವಿಶೇಷ ಅಧಿವೇಶನದ ಪರಾಮರ್ಶೆಗೆ ಈ ಸಲಹೆಯನ್ನು ಒಪ್ಪಿಸಬೇಕೆಂಬ ತೀರ್ಮಾನ ಆಯಿತು.

ತಿಲಕರು ಬನಾರಸ್‌ನಲ್ಲಿ ಹಾಜರಿದ್ದರು. ಆದರೆ ಎಐಸಿಸಿಯ ಕಾರ್ಯಕಲಾಪಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದಂತೆ ತೋರಲಿಲ್ಲ. ಖಿಲಾಫತ್ ಕುರಿತ ಮುಸಲ್ಮಾನರ ಭಾವನೆಗಳ ಬಗ್ಗೆ ಅವರು ಸಹಾನುಭೂತಿ ವ್ಯಕ್ತಪಡಿಸಿದರೂ,ಧಾರ್ಮಿಕವಾದ ಹಾಗೂ ಗಡಿಗಳಾಚೆಯ ವಿಷಯವನ್ನು ಸ್ವಾತಂತ್ರ್ಯದ ಹೋರಾಟದ ಅಂಗವಾಗಿ ಮಾಡಿಕೊಳ್ಳುವ ಬಗ್ಗೆ ಅವರು ತೀವ್ರ ಸಂಶಯಗಳನ್ನು ಹೊಂದಿದ್ದರೆಂದು ತೋರುತ್ತದೆ. ಕೆಮಾಲ್ ಪಾಷನ ನಾಯಕತ್ವದಲ್ಲಿ ತುರ್ಕರೇ ಖಿಲಾಫತ್ ಅನ್ನು ರದ್ದು ಮಾಡಿ ತಮ್ಮ ದೇಶವನ್ನು ಜಾತ್ಯತೀತ ರಾಷ್ಟ್ರ ಎಂದು ಘೋಷಿಸಿದಾಗ ತಿಲಕರ ಜಾಣ್ಮೆಗೆ ಸಮರ್ಥನೆ ದೊರಕಿತು. ಅಸಹಕಾರದ ಕಾರ್ಯಕ್ರಮದ ಬಗ್ಗೆ ಅವರು ಗಾಂಧೀಜಿಗೆ ಹೀಗೆ ಹೇಳಿದರೆಂದು ವರದಿಯಾಗಿದೆ:

ಈ ಕಾರ್ಯಕ್ರಮವನ್ನು ನಾನು ಸಾಕಷ್ಟು ಮೆಚ್ಚಿದ್ದೇನೆ. ಆದರೆ ಅಸಹಕಾರ ಜನರಿಗೊಡ್ಡುವ ಸ್ವಾರ್ಥತ್ಯಾಗದ ಕಷ್ಟಗಳನ್ನು ನಮ್ಮೊಂದಿಗೆ ದೇಶ ಅನುಭವಿಸುವ ಬಗ್ಗೆ ನನಗೆ ಅನುಮಾನಗಳಿವೆ. ಈ ಚಳವಳಿಯ ಮುನ್ನಡೆಗೆ ನಾನೇನೂ ಅಡ್ಡಿ ಮಾಡುವುದಿಲ್ಲ. ನಿಮಗೆ ಎಲ್ಲ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ. ನಿಮ್ಮ ಮಾತು ಜನರು ಕೇಳುವಂತಾದರೆ ನೀವು ನನ್ನಲ್ಲಿ ಒಬ್ಬ ಉತ್ಸಾಹಿ ಬೆಂಬಲಿಗರನ್ನು ಕಾಣುತ್ತೀರಿ."

ಸುಧಾರಣೆಗಳ ಬಗ್ಗೆ ಅಮೃತಸರದಲ್ಲಿ ಅಂಗೀಕರಿಸಿದ ಗೊತ್ತುವಳಿಯನ್ನು ಜಾರಿಗೆ ತರಲು ಸ್ಥಾಪಿಸಲಾದ ಕಾಂಗ್ರೆಸ್ ಡೆಮೊಕ್ರಾಟಿಕ್ ಪಕ್ಷದ ಪ್ರಣಾಳಿಕೆಯಲ್ಲಿ ತಿಲಕರ ಬುದ್ಧಿ ಹೇಗೆ ವಿಚಾರ ಮಾಡುತ್ತಿತ್ತು ಎಂಬುದಕ್ಕೆ ಹೆಚ್ಚು ವಿಶ್ವಾಸಾರ್ಹವಾದ ಸೂಚನೆ ಸಿಗುತ್ತದೆ. ಏಪ್ರಿಲ್ ಮೂರನೆಯ ವಾರದಲ್ಲಿ ಹೊರಡಿಸಿದ ಪ್ರಣಾಳಿಕೆ ಪ್ರಮುಖವಾದದ್ದು. ಏಕೆಂದರೆ ಅದು ತಿಲಕರ ಕೊನೆಯ ರಾಜಕೀಯ ಉಯಿಲಾಗಿತ್ತು. ಮರಣ ಶಾಸನವಾಗಿತ್ತು.

ಗೋಖಲೆಯವರು ಹೀಗೆಯೆ ಬಿಟ್ಟು ಹೋದ ಇಂತಹುದೇ ಪತ್ರಕ್ಕೆ ಅದು ಹೋಲಿಕೆಯನ್ನು ಹೊಂದಿದೆ. ಪ್ರಣಾಳಿಕೆ ಹೀಗೆ ತಿಳಿಸಿತು:

"ಕಾಂಗ್ರೆಸ್ ಡೆಮೊಕ್ರಾಟಿಕ್ ಪಕ್ಷ, ಹೆಸರೇ ಸೂಚಿಸುವಂತೆ, ಕಾಂಗ್ರೆಸ್‌ಗೆ ಅಚಲವಾದ ನಿಷ್ಠೆಯನ್ನೂ, ಪ್ರಜಾಸತ್ತೆಯಲ್ಲಿ ವಿಶ್ವಾಸವನ್ನೂ ಹೊಂದಿದ ಭಾವನೆಗಳಿಂದ ಚೈತನ್ಯ ಪಡೆದ ಪಕ್ಷ. ಭಾರತದ ಸಮಸ್ಯೆಗಳ ಪರಿಹಾರಕ್ಕೆ ಪ್ರಜಾಸತ್ತಾತ್ಮಕ ಸಿದ್ಧಾಂತಗಳು ಶಕ್ತವಾಗಿವೆ ಎಂದು ಪಕ್ಷ ನಂಬುತ್ತದೆ ಹಾಗೂ ಶಿಕ್ಷಣದ ವಿಸ್ತರಣೆಗೆ ಮತ್ತು ರಾಜಕೀಯ ಚುನಾವಣೆಯನ್ನು ತನ್ನ ಎರಡು ಅತ್ಯುತ್ತಮ ಆಯುಧಗಳನ್ನಾಗಿ ಪರಿಗಣಿಸಿದೆ. ಜಾತಿ ಅಥವಾ ಸಂಪ್ರದಾಯದ ಆಧಾರದ ಮೇಲೆ ಇರುವ ಎಲ್ಲ ಪೌರ, ಜಾತೀಯ ಅಥವಾ ಸಾಮಾಜಿಕ ಊನಗಳನ್ನು ನಿವಾರಿಸಬೇಕೆಂದು ಪಕ್ಷ ವಾದಿಸುತ್ತದೆ. ಧಾರ್ಮಿಕ ಸಹನೆಯಲ್ಲಿ, ಅವರವರ ಧರ್ಮ ಅವರವರಿಗೆ ಪವಿತ್ರವಾಗಿರುವುದರಲ್ಲಿ ಮತ್ತು ರಾಷ್ಟ್ರ ಧರ್ಮದ ವಿರುದ್ಧ ನಡೆಯುವ ದಾಳಿಯಿಂದ, ಅದನ್ನು ರಕ್ಷಿಸುವ ಹಕ್ಕು ಮತ್ತು ಕರ್ತವ್ಯವನ್ನು ಹೊಂದಿದೆ ಎಂಬುದರಲ್ಲಿ ಪಕ್ಷ ವಿಶ್ವಾಸವಿಟ್ಟಿದೆ. ಮುಸಲ್ಮಾನ್ ಶಾಸ್ತ್ರಗಳು ಮತ್ತು ನಂಬಿಕೆಗಳು ಹಾಗೂ ಕೊರಾನ್‌ನ ತತ್ತ್ವಗಳಿಗೆ ಅನುಗುಣವಾಗಿ ಖಿಲಾಫತ್ ಪ್ರಶ್ನೆಯನ್ನು ಪರಿಹರಿಸಬೇಕೆಂಬ ಮುಸಲ್ಮಾನರ ಕೋರಿಕೆಗೆ ಈ ಪಕ್ಷ ಬೆಂಬಲ ನೀಡುತ್ತದೆ.

"ಮಾನವೀಯತೆಯ ಧ್ಯೇಯೋದ್ದೇಶಗಳ ಪ್ರಗತಿಗೆ ಮತ್ತು ಮಾನವಕುಲದ ಭ್ರಾತೃತ್ವಕ್ಕೆ ಭಾರತ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ವಿಲೀನವಾಗಬೇಕು ಅಥವಾ ಸಂಯುಕ್ತ ರಾಷ್ಟ್ರವಾಗಬೇಕು ಎಂದು ಕಾಂಗ್ರೆಸ್ ಡೆಮೋಕ್ರಾಟಿಕ್ ಪಕ್ಷ ನಂಬುತ್ತದೆ; ಆದರೆ ಭಾರತಕ್ಕೆ ಸ್ವಯಮಾಡಳಿತವನ್ನೂ, ಗ್ರೇಟ್ ಬ್ರಿಟನ್ ಸೇರಿದಂತೆ ಬ್ರಿಟಿಷ್ ಕಾಮನ್‌ವೆಲ್ತ್‌ನ ಪ್ರತಿ ಸಹರಾಷ್ಟ್ರದೊಂದಿಗೆ ಸೋದರ ದೇಶವಾಗಿ ಸಮಾನ ಸ್ಥಾನಮಾನವನ್ನೂ ನೀಡಬೇಕೆಂದು ಕೋರುತ್ತದೆ. ಕಾಮನ್‌ವೆಲ್ತ್‌ನ ಎಲ್ಲ ದೇಶಗಳಲ್ಲಿ ಭಾರತೀಯರಿಗೆ ಸಮಾನ ಪೌರತ್ವ ನೀಡಬೇಕೆಂದೂ, ಹಾಗೆ ನೀಡದೆ ಇದ್ದಾಗಲೆಲ್ಲಾ ಪರಿಣಾಮಕಾರಿ ಪ್ರತಿಕ್ರಮಗಳನ್ನು ಕೈಗೊಳ್ಳಬೇಕೆಂದೂ ಪಕ್ಷ ಒತ್ತಾಯಪಡಿಸುತ್ತದೆ. ಲೀಗ್ ಆಫ್ ನೇಶನ್ಸ್ ಸಂಸ್ಥೆಯನ್ನು, ವಿಶ್ವದಲ್ಲಿ ಶಾಂತಿಯನ್ನು ಜಾರಿಗೆ ತರುವ, ರಾಷ್ಟ್ರಗಳ ಸಮಗ್ರತೆಯನ್ನು ಕಾಪಾಡುವ, ರಾಷ್ಟ್ರಗಳು ಮತ್ತು ರಾಷ್ಟ್ರೀಯತೆಗಳ ಸ್ವಾತಂತ್ರ್ಯ ಮತ್ತು ಗೌರವವನ್ನು ಕಾಪಾಡುವ ಹಾಗೂ ಒಂದು ದೇಶ ಮತ್ತೊಂದು ದೇಶವನ್ನು ಶೋಷಿಸುವುದನ್ನು ಕೊನೆಗೊಳಿಸುವ ಸಾಧನವನ್ನಾಗಿ ಪಕ್ಷ ಸ್ವಾಗತಿಸುತ್ತದೆ.

"ಮಾಂಟೆಗ್ಯು ಸುಧಾರಣೆಗಳ ಕಾಯಿದೆಯ ಉಪಯುಕ್ತತೆ ಎಷ್ಟೇ ಇರಲಿ, ಆ ಕಾಯಿದೆಯನ್ನು ಕಾರ್ಯರೂಪಕ್ಕೆ ತರಲೂ, ಸಂಪೂರ್ಣವಾದ ಜವಾಬ್ದಾರಿ ಸರ್ಕಾರವನ್ನು ಬೇಗ ಪಡೆಯುವುದಕ್ಕೂ ಕಾಂಗ್ರೆಸ್ ಡೆಮೋಕ್ರಾಟಿಕ್ ಪಕ್ಷ ಕೆಲಸ ಮಾಡಲು ಉದ್ದೇಶಿಸಿದೆ. ಇದಕ್ಕಾಗಿ ಸಹಕಾರ ನೀಡಲು ಅಥವಾ ಸಂವಿಧಾನಿಕ ವಿರೋಧ ತೋರಲು, ಇವೆರಡರಲ್ಲಿ ಜನತೆಯ ಸಂಕಲ್ಪವನ್ನು ಆಚರಣೆಗೆ ತರುವುದಕ್ಕೆ ಯಾವುದು ಅನುಕೂಲವೆಂದು ಚನ್ನಾಗಿ ಪರಿಗಣಿಸಲಾಗುತ್ತದೆಯೋ ಅದನ್ನು ಸ್ವಲ್ಪವೂ ಹಿಂಜರಿಯದೆ ಮಾಡಲು ಪಕ್ಷ ಸಿದ್ಧವಾಗಿದೆ.

ಚುನಾವಣೆಗೆ ನಿಲ್ಲುವ ಉದ್ದೇಶ ತಿಲಕರಿಗಿರಲಿಲ್ಲ. ಇಂಗ್ಲೆಂಡ್‌ನಿಂದ ಹಿಂತಿರುಗಿದ ನಂತರ ಎಡೆಬಿಡದೆ ಕಾರ್ಯನಿರತರಾಗಿದ್ದರಿಂದ ವಿಪರೀತ ಬಳಲಿದ್ದರು. ತಮ್ಮ ಆರೋಗ್ಯದ ಬಗ್ಗೆ ಅವರು ಹೀಗೆ ಹೇಳಿದರು; "ನನ್ನ ದೈಹಿಕ ಶಕ್ತಿ ಸಾಮರ್ಥ್ಯ ಬೇಗ ಕುಗ್ಗುತ್ತಿದೆ ಎಂದು ನಿಜವಾಗಿ ನನಗೆನಿಸುತ್ತಿದೆ ಹಾಗೂ ದೈಹಿಕ ಶ್ರಮ ಉಂಟು ಮಾಡುವ ಮತ್ತು ನನ್ನ ಆರೋಗ್ಯಕ್ಕೆ ಬಾಧಕವಾದ ಯಾವ ಹೊಸ ಕೆಲಸವನ್ನೇ ಕೈಗೆತ್ತಿಕೊಳ್ಳುವ ವಿಶ್ವಾಸ ನನಗಿಲ್ಲ." ತಮ್ಮ ಕೊನೆಗಾಲ ಸಮೀಪಿಸಿದೆ ಎಂಬ ಅತೀಂದ್ರಿಯ ಇಂಗಿತ ಅವರಿಗೆ ಹೊಳೆದಿತ್ತೇನೋ ಎಂದು ಈ ಮಾತಿನಿಂದ ತಿಳಿಯುತ್ತದೆ. ತಿಲಕರ ರಾಜಕೀಯ ಚಟುವಟಿಕೆಗಳ ನಡುವೆ ಮೇ 22ರಂದು ಸಂತಸದ ಸಂಗತಿಯೊಂದು ನಡೆಯಿತು. ಶಿರೋಲ್ ಪ್ರಕರಣದಲ್ಲಿ ಆದ ಖರ್ಚುವೆಚ್ಚಗಳನ್ನು ಭರಿಸಲು ಅಂದು ಪೂನಾದಲ್ಲಿ ಅವರಿಗೆ 3,25,000 ರೂಪಾಯಿಗಳ ನಿಧಿಯನ್ನು ಅರ್ಪಿಸಲಾಯಿತು. ಜನರ ಪ್ರೀತಿಯ ಕಾಣಿಕೆಗೆ ವಂದನೆ ಸಲ್ಲಿಸಲು ಅವರು ಸಭೆಯಲ್ಲಿ ಎದ್ದು ನಿಂತಾಗ ಅವರ ಹೃದಯ ಅಂದು ತುಂಬಿಬಂದಂತೆ ಅವರ ಸಾರ್ವಜನಿಕ ಜೀವನದಲ್ಲಿ ಹಿಂದೆಂದೂ ಅಷ್ಟು ಭಾವಪರವಶರಾಗಿರಲಿಲ್ಲ. "ನಿಮ್ಮ ಔದಾರ್ಯದಿಂದ ನೀವು ನನ್ನ ದೇಹ, ಆತ್ಮ ಎರಡನ್ನೂ ಕೊಂಡುಬಿಟ್ಟಿರಿ" ಎಂದು ಅವರು ಗದ್ಗದ ಧ್ವನಿಯಲ್ಲಿ ಹೇಳಿದರು. "ನಾನು ನಿಮಗಾಗಿ ಕೆಲಸ ಮಾಡುತ್ತಲೇ ಇರಬೇಕೆಂದು ನೀವು ಬಯಸುತ್ತೀರಿ ಹಾಗೂ ನನಗೆ ಈಗ ಅನ್ಯ ಮಾರ್ಗವೂ ಇಲ್ಲ."

ಅಸಹಕಾರದ ಕಾರ್ಯಕ್ರಮವನ್ನು ಎ.ಐ.ಸಿ.ಸಿ., ಕಲ್ಕತ್ತೆಯಲ್ಲಿ ನಡೆಯಲಿದ್ದ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದ ಪರಾಮರ್ಶೆಗೆ ಒಪ್ಪಿಸಿದ್ದರೂ,ಗಾಂಧೀಜಿ ಅದರ ಅನುಷ್ಠಾನವನ್ನು ಪ್ರಾರಂಭಿಸಿದರು. ಪ್ರೀತಿ ಮತ್ತು ಕಷ್ಟ ಸಹಿಷ್ಣುತೆಯ ತಮ್ಮ ತತ್ವವನ್ನು ಬೋಧಿಸಲು ಅವರು 'ಯಂಗ್ ಇಂಡಿಯಾ'ದಲ್ಲಿ ಅನೇಕ ಲೇಖನಗಳನ್ನು ಬರೆದರು ಹಾಗೂ ಅವು ದೇಶವಲ್ಲಿ ಅದ್ಭುತ ಉತ್ಸಾಹವನ್ನು ಸೃಷ್ಟಿಸಿದವು. ಮುಸಲ್ಮಾನರಂತೂ ಚಡಪಡಿಸುತ್ತಿದ್ದರು. ಆಗಸ್ಟ್ ಒಂದರಂದು ಅಸಹಕಾರ ಚಳವಳಿಯನ್ನು ಪ್ರಾರಂಭಿಸುವುದಾಗಿ ಗಾಂಧೀಜಿ ಜುಲೈ 28ರಂದು ಪ್ರಕಟಿಸಿದರು.

ಅಸಹಕಾರ ಚಳವಳಿಯ ಬಗ್ಗೆ ತಿಲಕರು ಯಾವ ನಿಲುವನ್ನು ಅನುಸರಿಸುತ್ತಿದ್ದರು ಎಂಬುದು ಊಹೆಗೆ ಬಿಟ್ಟ ವಿಷಯವಾಗಿದೆ. ಒಂದು ಕಡೆ ಗಾಂಧೀಜಿಗೆ ಅವರು ಕೊಟ್ಟಿದ್ದ ಭರವಸೆಯ ವರದಿ ಇದೆ. ಇನ್ನೊಂದು ಕಡೆ, ಸುಧಾರಣೆಯ ಕಾಯಿದೆಗಳ ಉಪಯುಕ್ತತೆ ಏನೇ ಇರಲಿ ಅದನ್ನು ಪಡೆಯಲು ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಕಾಂಗ್ರೆಸ್ ಡೆಮೊಕ್ರಾಟಿಕ್ ಪಕ್ಷದ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಆಗಸ್ಟ್ 1ರಂದು ಅಸಹಕಾರ ಚಳವಳಿ ಪ್ರಾರಂಭವಾಗಬೇಕೆಂದು ಗಾಂಧೀಜಿ ಕರೆ ಕೊಟ್ಟಿದ್ದರೂ, ಅದಕ್ಕೆ ಕಾಂಗ್ರೆಸ್‌ನ ಅನುಮತಿ ಇನ್ನೂ ದೊರೆಯಬೇಕಾಗಿತ್ತು ಎಂಬುದನ್ನು ನೆನಪಿನಲ್ಲಿಡಬೇಕು. ಕಲ್ಕತ್ತೆಯಲ್ಲಿ ಕಾಂಗ್ರೆಸ್‌ನ ವಿಶೇಷ ಅಧಿವೇಶನ ಅದರ ಬಗ್ಗೆ ತೀರ್ಮಾನ ಮಾಡುವವರೆಗೆ ತಿಲಕರು ಗಾಂಧೀಜಿಯ ಕಾರ್ಯಕ್ರಮಕ್ಕೆ ಬೆಂಬಲವನ್ನೂ ನೀಡುತ್ತಿರಲಿಲ್ಲ, ವಿರೋಧವನ್ನೂ ಮಾಡುತ್ತಿರಲಿಲ್ಲ ಎಂದು ಭಾವಿಸುವುದು ಉಚಿತವಾಗುತ್ತದೆ. ಗಾಂಧೀ

ಜಿಯವರು ತಮ್ಮ ಜೀವನ ಚರಿತ್ರೆಯಲ್ಲಿ ಈ ಬಗ್ಗೆ ಹೇಳಿರುವ ಮಾತುಗಳು ಈ ಅಭಿಪ್ರಾಯವನ್ನು ಬೆಂಬಲಿಸಿವೆ.

ಕಾಂಗ್ರೆಸ್‌ನ ವಿಶೇಷ ಅಧಿವೇಶನದಲ್ಲಿ ಭಾಗವಹಿಸುವುದು ತಿಲಕರ ಅದೃಷ್ಟದಲ್ಲಿರಲಿಲ್ಲ. ಜುಲೈ ತಿಂಗಳ ಪ್ರಾರಂಭದಲ್ಲಿ ಅವರಿಗೆ ಮಲೇರಿಯಾ ಆಯಿತು. ಅದರಿಂದ ಚೇತರಿಸಿಕೊಳ್ಳುತ್ತಿದ್ದಂತೆ, ತಾಯ್ ಮಹಾರಾಜ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಮುಂಬೈಗೆ ಹೋಗಬೇಕಾಗಿ ಬಂದಿತು. ಆ ಪ್ರಕರಣ ಅಂತಿಮವಾಗಿ ಅವರ ಪರವಾಗಿ ತೀರ್ಮಾನವಾಯಿತು. ಜುಲೈ 21ರಂದು ಕಾರಿನಲ್ಲಿ ಹೊರಗಡೆ ಹೋಗಿದ್ದಾಗ ಅವರಿಗೆ ಶೀತವಾಯಿತು. ನಂತರ ಅದು ಜ್ವರಕ್ಕೆ ತಿರುಗಿತು. ಎರಡು ದಿನಗಳ ನಂತರ ಅವರು ತಮ್ಮ ಅರುವತ್ನಾಲ್ಕನೆಯ ಜನ್ಮದಿನವನ್ನು ಹಾಸಿಗೆಯಲ್ಲಿ ಆಚರಿಸಿದರು. ಅಂದು ಅವರಿಗೆ ಸ್ವಲ್ಪ ವಾಸಿ ಎನಿಸಿತು ಹಾಗೂ ಇನ್ನೂ ಐದು ವರ್ಷಗಳು ಬದುಕಿರುವುದಾಗಿ ನಗುನಗುತ್ತಲೇ ಹೇಳಿದರು. ಜುಲೈ 26ರಂದು ಜ್ವರ ತೀವ್ರವಾಗಿ ಉಲ್ಬಣಗೊಂಡು ಪರಿಸ್ಥಿತಿ ವಿಕೋಪಕ್ಕೆ ಹೋಯಿತು.

ಅವರ ಹಾಸಿಗೆಯ ಬಳಿ ಬಂಧುಗಳು, ಸ್ನೇಹಿತರು ಸೇರಿದರು. ಅವರು ಹೀಗೆ ಮಲಗಿದ್ದ ಹೋಟೆಲಿಗೆ ಕಾತುರರಾದ ಜನರ ಭಾರೀ ಗುಂಪುಗಳು ಮುತ್ತಿಗೆ ಹಾಕಿದವು. ಜುಲೈ 29ರಿಂದ ತಿಲಕರಿಗೆ ಎದೆಸೆಳೆವು ಬರಲು ಪ್ರಾರಂಭವಾಯಿತು. ಅವರು ಚಿತ್ತಭ್ರಮೆಯ ಸ್ಥಿತಿಯನ್ನು ತಲುಪಿದರು. ಅವರ ಕೊನೆಯ ಅಸಂಬದ್ಧ ಮಾತುಗಳೂ ಸಹ ಅವರ ರಾಜಕೀಯ ಚಟುವಟಿಕೆಗಳು ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ್ದೇ ಆಗಿದ್ದವು. ಬಾಂಬೆಯ ಅತ್ಯಂತ ಖ್ಯಾತ ವೈದ್ಯರ ತಂಡ ಅವರನ್ನು ಸದಾ ಗಮನಿಸುತ್ತಿದ್ದರೂ, ಇಡೀ ತಂಡ ಶ್ರಮಿಸಿದರೂ, ತಿಲಕರು ಉಳಿಯಲಿಲ್ಲ. ಅವರು ಭಾನುವಾರ ಆಗಸ್ಟ್ 1, 1920 ರಂದು ಬೆಳಗಿನ ಜಾವ 12.40ಕ್ಕೆ ಕೊನೆಯುಸಿರೆಳೆದರು.

ಆಗ ಮುಂಬೈಯಲ್ಲಿದ್ದ ನೆಹರೂ ಅವರ ಮಾತುಗಳಲ್ಲಿ "ಮುಂಬೈನ ಎಲ್ಲ ಹತ್ತು ಲಕ್ಷ ಜನರು ತಾವು ಅಷ್ಟು ಆಳವಾಗಿ ಪ್ರೀತಿಸಿದ್ದ ಮಹಾನ್ ನಾಯಕರಿಗೆ ಗೌರವ ಅರ್ಪಿಸಲು ಬೀದಿಗಳಿಗೆ ಇಳಿದಿದ್ದಂತೆ ಕಂಡುಬಂದಿತು." ಅರಬ್ಬಿ ಸಮುದ್ರದ ತೀರದ ಚೌಪಾತಿಯನ್ನು ತಲುಪಲು ಅಂತಿಮ ಯಾತ್ರೆಗೆ ಐದು ಗಂಟೆಗಳು ಹಿಡಿಯಿತು. ಅವರ ಅಂತಿಮ ಸಂಸ್ಕಾರವನ್ನು ಅಲ್ಲಿ ಮಾಡಲು ವಿಶೇಷ ಅನುಮತಿಯನ್ನು ಪಡೆಯಲಾಗಿತ್ತು. ಈ ಗೌರವ ಬೇರೆ ಯಾವ ವ್ಯಕ್ತಿಗೂ ದೊರೆತಿಲ್ಲ. ಮುಂದಿನ ಪೀಳಿಗೆಗಳು ಮಾತೃಭೂಮಿಗೆ ಸಲ್ಲಿಸಬೇಕಾದ ಕರ್ತವ್ಯವನ್ನು ನೆನಪು ಮಾಡಿಕೊಡಲು ತಿಲಕರ ಪ್ರತಿಮೆ ಅಲ್ಲಿ ನಿಂತಿದೆ.

ತಿಲಕರ ನಿಧನದ ನಂತರ ಗಾಂಧೀಜಿ ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿಗಿಂತ ಉತ್ತಮವಾಗಿ ಅವರ ಜೀವನವನ್ನು ಸಂಕ್ಷಿಪ್ತವಾಗಿ ತಿಳಿಸುವುದು ಸಾಧ್ಯವಿಲ್ಲ:

"ಲೋಕಮಾನ್ಯ ಬಾಲ ಗಂಗಾಧರ ತಿಲಕರು ನಿಧನರಾಗಿದ್ದಾರೆ ಎಂದು ನಂಬಲು ಕಷ್ಟ. ಅವರು ಜನತೆಯ ಒಂದು ಭಾಗವಾಗಿ ಬಿಟ್ಟಿದ್ದರು. ಜನಸಾಮಾನ್ಯರ ಮೇಲೆ ಅವರಿಗಿದ್ದ ಪ್ರಭಾವ ನಮ್ಮ ಕಾಲದಲ್ಲಿ ಬೇರೆ ಯಾರಿಗೂ ಇರಲಿಲ್ಲ. ಸಾವಿರಾರು ದೇಶಬಂಧುಗಳು ಅವರ ಬಗ್ಗೆ ಹೊಂದಿದ್ದ ನಿಷ್ಠೆ ಅಸಾಧಾರಣ. ಅವರು ನಿರ್ವಿವಾದವಾಗಿ ಜನತೆಯ ಆರಾಧ್ಯ ದೈವವಾಗಿದ್ದರು. ಸಾವಿರಾರು ಜನರಿಗೆ ಅವರ ಮಾತು ವೇದವಾಕ್ಯವಾಗಿತ್ತು. ಮನುಷ್ಯರಲ್ಲಿ ಪ್ರಚಂಡರಾಗಿದ್ದವರು ಇನ್ನಿಲ್ಲ. ಸಿಂಹದ ಧ್ವನಿ ಅಡಗಿದೆ. ತಮ್ಮ ದೇಶ ಬಂಧುಗಳ ಮೇಲೆ

ಅವರು ಹೊಂದಿದ್ದ ಪ್ರಭಾವಕ್ಕೆ ಕಾರಣವೇನು? ಇದಕ್ಕೆ ಉತ್ತರ ಬಹಳ ಸರಳ ಎಂದು ನಾನು ಭಾವಿಸಿದ್ದೇನೆ. ರಾಷ್ಟ್ರಪ್ರೇಮ ಅವರಿಗೆ ಅನುರಕ್ತತೆಯಾಗಿತ್ತು. ತಮ್ಮ ದೇಶದ ಬಗ್ಗೆ ಪ್ರೇಮದ ಹೊರತಾಗಿ ಅವರಿಗೆ ಯಾವ ಧರ್ಮವೂ ತಿಳಿದಿರಲಿಲ್ಲ. ಅವರು ಹುಟ್ಟಾ ಪ್ರಜಾಪ್ರಭುತ್ವವಾದಿಯಾಗಿದ್ದರು.

ಬಹುಸಂಖ್ಯಾತರ ಆಡಳಿತದಲ್ಲಿ ಅವರ ನಂಬಿಕೆ ಎಷ್ಟು ತೀವ್ರವಾಗಿತ್ತೆಂದರೆ, ಅದರಿಂದ ನಾನು ಬೆದರಿದ್ದೆ. ಆದರೆ ಅದೇ ಅವರಿಗೆ ಪ್ರಭಾವವನ್ನು ಕೊಟ್ಟಿತು. ಅವರದು ಕಬ್ಬಿಣದಂತಹ ಸಂಕಲ್ಪ, ಅದನ್ನವರು ತಮ್ಮ ದೇಶಕ್ಕಾಗಿ ಬಳಸಿದರು. ಅವರ ಜೀವನ ತೆರೆದ ಪುಸ್ತಕ. ಅವರ ರುಚಿಗಳು ಸರಳವಾಗಿದ್ದವು. ಅವರ ಖಾಸಗಿ ಜೀವನ ಶುಭ್ರವಾಗಿತ್ತು. ಅವರು ತಮ್ಮ ಅದ್ಭುತ ಕೌಶಲ್ಯಗಳನ್ನು ದೇಶಕ್ಕಾಗಿ ಅರ್ಪಿಸಿದರು. ಸ್ವರಾಜ್ಯದ ತತ್ತ್ವವನ್ನು ಲೋಕಮಾನ್ಯರಷ್ಟು ಅವಿರತನಾಗಿ ಮತ್ತು ಪಟ್ಟು ಹಿಡಿದು ಬೇರೆ ಯಾರೂ ಬೋಧಿಸಲಿಲ್ಲ.

ಅದರಿಂದಾಗಿ ಅವರ ದೇಶಬಂಧುಗಳು ಅವರನ್ನು ಸಂಪೂರ್ಣವಾಗಿ ನಂಬಿದರು. ಇನ್ನೂ ಹುಟ್ಟದಿರುವ ಪೀಳಿಗೆಗಳಿಗೆ ಅವರು ಆಧುನಿಕ ಭಾರತದ ಒಬ್ಬ ನಿರ್ಮಾಪಕರಾಗಿ ಉಳಿಯುತ್ತಾರೆ. ನಮಗಾಗಿ ಬದುಕಿ ನಮಗಾಗಿ ಮಡಿದ ಮನುಷ್ಯ ಎಂದು ಆ ಪೀಳಿಗೆಗಳ ಜನರು ಅವರ ನೆನಪನ್ನು ಪವಿತ್ರವಾಗಿ ಕಾಣುತ್ತಾರೆ."

ಅಧ್ಯಾಯ 19

ಕಣ್ಣಿಗೆ ಕಟ್ಟುವ ಮೂರ್ತಿ

ಸಾವಿರದ ಎಂಟುನೂರತೊಂಬತ್ತರ ದಶಕದ್ದಾಗಲಿ, ಅಲ್ಲಿಂದ ಇಪ್ಪತ್ತೈದು ವರ್ಷಗಳ ನಂತರದ್ದಾಗಲಿ, ತಿಲಕರ ಫೋಟೋಗಳು ಮತ್ತು ಭಾವಚಿತ್ರಗಳು ಆಶ್ಚರ್ಯಕರವಾಗಿ ಒಂದೇ ರೀತಿ ಕಾಣುತ್ತವೆ. ಅವರು ಸದಾ ಮಹರಾಷ್ಟ್ರದ ಉಡುಪನ್ನೇ ಧರಿಸುತ್ತಿದ್ದರು. ಮೊನಚಾದ ಪಗಡಿ (ರುಮಾಲು), ಉತ್ತರೀಯದಂತಹ ಅಂಗರಖ, ಹೆಗಲ ಮೇಲೆ ವಸ್ತ್ರ, ಧೋತ್ರ ಮತ್ತು ಪೂನಾದ ಪಾದರಕ್ಷೆಗಳು. ರುಮಾಲು ಮತ್ತು ಪಾದರಕ್ಷೆಗಳ ಹೊರತಾಗಿ ಉಳಿದೆಲ್ಲದರ ಬಣ್ಣ ಸದಾ ಬಿಳಿಯದಾಗಿರುತ್ತಿತ್ತು. ಇಂಗ್ಲೆಂಡ್‌ನಲ್ಲಿದ್ದಾಗ ಅವರು ಕತ್ತಿನವರೆಗೆ ಗುಂಡಿ ಹಾಕಿದ ಉದ್ದನೆಯ ಕೋಟು ಮತ್ತು ಪ್ಯಾಂಟ್ ಧರಿಸುತ್ತಿದ್ದರು. ಆದರೆ ಅಲ್ಲೂ ಸಹ ಅವರು ತಮ್ಮ ರುಮಾಲನ್ನು ಧರಿಸಿಯೇ ಇರುತ್ತಿದ್ದರು.

ರತ್ನಾಗಿರಿಯಲ್ಲಿ ಹುಟ್ಟಿದ್ದರೂ, ತಿಲಕರು ಕಪ್ಪಾಗಿಯೇ ಇದ್ದರು. ಆದರೆ ಅವರ ಆಕೃತಿ ರತ್ನಾಗಿರಿಯ ಜನರ ಸಾಮಾನ್ಯ ಆಕೃತಿಯಂತೆಯೇ ಇತ್ತು. ಅವರ ಎತ್ತರ ಮತ್ತು ಮೈಕಟ್ಟು ಮಧ್ಯಮವಾಗಿತ್ತು ಹಾಗೂ ಅವರ ತೂಕ ಎಂದೂ 140 ಪೌಂಡ್ ಗಳನ್ನು ಮೀರಿರಲಿಲ್ಲ. ಅವರ ವಿಶಾಲವಾದ ಎದೆ ಮತ್ತು ಹೊಳೆಯುವ ಕಣ್ಣುಗಳು ಎದ್ದು ಕಾಣುತ್ತಿದ್ದವು. ಅವರ ಕಣ್ಣುಗಳು ಆಯಸ್ಕಾಂತದ ಗುಣವನ್ನು ಅವರಿಗೆ ಕೊಟ್ಟಿದ್ದವು. "ಅವರು ಕೋಣೆಯನ್ನು ಪ್ರವೇಶಿಸಿದಾಗ, ನಾನು ಅವರನ್ನು ನೋಡದೆ ಇದ್ದರೂ, ಅವರ ಇರುವಿಕೆ ತಕ್ಷಣ ಗಮನಕ್ಕೆ ಬರುತ್ತಿತ್ತು" ಎಂದು ಮುಂಬೈ ಸರ್ಕಾರದ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ ಡಾ. ಹೆರಾಲ್ಡ್ ಹೆಚ್. ಮ್ಯಾನ್ ಬರೆದಿರುತ್ತಾರೆ.

ಉಡುಪು ಮನುಷ್ಯನ ಯೋಗ್ಯತೆಯನ್ನು ಸೂಚಿಸುತ್ತದೆ ಹಾಗೂ ತಿಲಕರ ಜೀವನ ವಿಧಾನ ಅವರ ಉಡುಪಿನಷ್ಟೆ ಸರಳವಾಗಿತ್ತು. ತಿಂಡಿ, ಊಟದ ವಿಷಯದಲ್ಲಿ ಅವರಿಗೆ ವಿಶೇಷವಾಗಿ ಸೇರುವ ಅಥವಾ ಸೇರದೇ ಇರುವಂತಹುದೇನೂ ಇರಲಿಲ್ಲ. ಹಾಗೆ ನೋಡಿದರೆ, ಬಡಿಸಿದ ಪದಾರ್ಥಗಳ ರುಚಿಯ ಬಗ್ಗೆ ಸಾಮಾನ್ಯವಾಗಿ ಅವರಿಗೆ ಅರಿವೇ ಇರುತ್ತಿರಲಿಲ್ಲ. "ನಾನು ಬದುಕುವುದಕ್ಕೆ ತಿನ್ನುತ್ತೇನೆ" ಎಂದು ಅವರು ಹೇಳುತ್ತಿದ್ದರು. ಮಧುಮೇಹರೋಗದಿಂದಾಗಿ ಅವರು ಪಥ್ಯವಿರಬೇಕಾಗಿ ಬಂದಾಗ ಈ ಮಾತು ಅಕ್ಷರಶಃ ನಿಜವಾಯಿತು. ಆದರೆ ಅವರಿಗೆ ಚಹಾ, ಐಸ್ ಹಾಕಿದ ಸೋಡ ಮತ್ತು ಅಡಿಕೆ ಪ್ರಿಯ ವಾಗಿತ್ತು. ಅವರಿಗೆ ಅಡಿಕೆ ಸದಾ ಬೇಕಾಗಿತ್ತು.

ಅವರ ಮನೆಯಲ್ಲಿದ್ದ ಸಾಮಾನುಸರಂಜಾಮುಗಳೂ ಅಷ್ಟಕ್ಕಷ್ಟೆ. ಒಂದು ಬರೆಯುವ ಡೆಸ್ಕ್, ಪುಸ್ತಕಗಳಿಂದ ತುಂಬಿದ ಕಪಾಟುಗಳು ಮತ್ತು ತಿಲಕರಿಗೆ ಪ್ರಿಯವಾದ ಆರಾಮ ಕುರ್ಚಿ–ಇಷ್ಟನ್ನು ಬಿಟ್ಟರೆ ಮನೆಯಲ್ಲಿ ಹೇಳಿಕೊಳ್ಳುವಂತಹ ಪೀಠೋಪಕರಣಗಳಿರಲಿಲ್ಲ. ಷರಟು ಧರಿಸದೆ ಆರಾಮಕುರ್ಚಿಯಲ್ಲೇ ಕುಳಿತು ತಿಲಕರು ತಮ್ಮ ಹೆಚ್ಚಿನ ಸಮಯವನ್ನು ಓದುತ್ತಾ, ಬರೆಸುತ್ತಾ, ಅಸಂಖ್ಯಾತ ಜನರನ್ನು ಬರಮಾಡಿಕೊಳ್ಳುತ್ತಾ ಕಳೆಯುತ್ತಿದ್ದರು.

ಅವರು ಮಿತ್ರರು, ಬಂಧುಗಳ ಮನೆಗೆ ಹೋಗುತ್ತಿದ್ದುದೇ ಅಪರೂಪ. ತಿರುಗಾಟಕ್ಕೆ ಹೋಗುತ್ತಿದ್ದುದೂ ಅಪರೂಪವೇ. ತಿಲಕರು ಹೊಂದಿದ್ದ ಒಂದೇ ಐಷಾರಾಮದ ವಸ್ತುವೆಂದರೆ ಅವರು ಸಿಂಹಗಢದಲ್ಲಿ ಕಟ್ಟಿದ್ದ ಹುಲ್ಲು ಛಾವಣಿಯ ಗುಡಿಸಲು. ವಿಶ್ರಾಂತಿ, ಆಯಾಸ ಪರಿಹಾರಕ್ಕೆ ಮತ್ತು ಏಕಾಂತದ ನೆಮ್ಮದಿಗೆ ಅವರು ಆಗಾಗ ಅಲ್ಲಿಗೆ ಹೋಗುತ್ತಿದ್ದರು. ಡಾ. ಜಾನ್‌ಸನ್‌ರಂತೆ ಅವರಿಗೆ ಗೆಳೆಯರ ಸಹವಾಸ ಪ್ರಿಯವಾಗಿದ್ದರೂ, ತಮ್ಮ ದೊಡ್ಡ ಧ್ವನಿ ಮತ್ತು ನಗುವಿನಿಂದ ಸ್ನೇಹಿತರನ್ನು ಆನಂದಪಡಿಸುತ್ತಿದ್ದರೂ, "ಹುಚ್ಚು ಮಂದಿಯ ಕೀಳು ಕಲಹದಿಂದ ದೂರ" ಹೋಗುವುದು ಅವರಿಗೆ ಆಗಾಗ ಅಗತ್ಯವೆನಿಸುತ್ತಿತ್ತು. ಸಿಂಹಗಢದ ಬೆರಗುಗೊಳಿಸುವ ಐತಿಹಾಸಿಕ ಪ್ರಾಮುಖ್ಯತೆಯೂ ಅವರಿಗೆ ಮತ್ತೊಂದು ಆಕರ್ಷಣೆಯಾಗಿರಬೇಕು. ಅವರು ತಮ್ಮ ಅತಿಥಿಗಳಿಗೆ ಶಿವಾಜಿಯ ಸೈನಿಕರು ನಡುರಾತ್ರಿ ಕೋಟೆಯ ಕಡಿದಾದ ಗೋಡೆಯನ್ನು ಹತ್ತಿದ ಸ್ಥಳ, ಅವನ ಸೇನಾನಿಯಾಗಿದ್ದ ಕೆಚ್ಚಿನ ತಾನಾಜಿ ಯುದ್ಧ ಮಾಡುತ್ತಾ ಮಡಿದ ಸ್ಥಳವನ್ನು ಹೆಮ್ಮೆಯಿಂದ ತೋರಿಸುತ್ತಿದ್ದರು.

ಅವರ ಕೌಟುಂಬಿಕ ಜೀವನ ಸರಳವಾಗಿತ್ತು. ಎಲ್ಲ ಸಾಮಾನ್ಯ ಬ್ರಾಹ್ಮಣರ ಮನೆಗಳಂತೆ ಅವರ ಮನೆಯಲ್ಲೂ ಗೃಹಿಣಿ ಎಲ್ಲ ಮನೆಗೆಲಸಗಳನ್ನೂ ತಾವೇ ಮಾಡುತ್ತಿದ್ದರು ಹಾಗೂ ಹಿನ್ನೆಲೆಯಲ್ಲೇ ಇರುತ್ತಿದ್ದರು. ತಿಲಕರೊಂದಿಗೆ ವಿವಾಹವಾದಾಗ ಸತ್ಯಭಾಮಾಬಾಯಿಗೆ ಕೇವಲ ಹತ್ತು ವರ್ಷಗಳಾಗಿದ್ದವು. ಅವರಿಗೆ ಮೂರು ಗಂಡು, ಮೂರು ಹೆಣ್ಣು ಮಕ್ಕಳಾದವು. ಆಕೆಗೆ ಮನೆಯೇ ಜಗತ್ತಾಗಿತ್ತು, ಗಂಡನೇ ದೇವರಾಗಿದ್ದ. ಕುಟುಂಬದಲ್ಲಿ ಎಲ್ಲರೂ ಒಬ್ಬರಿಗೊಬ್ಬರು ಪ್ರೀತಿಯಿಂದ ಇದ್ದರೂ, ಅವರ ಸಂಬಂಧಗಳಲ್ಲಿ ಬಹಿರಂಗ ಪ್ರೀತಿಗಿಂತಲೂ ಶಿಸ್ತಿಗೆ ಪ್ರಾಧಾನ್ಯತೆ ಇತ್ತು. ಮನೆಯ ವ್ಯವಹಾರಗಳ ಬಗ್ಗೆ ತಿಲಕರು ಎಂದೂ ಗಮನಕೊಟ್ಟವರಲ್ಲ. ಅವರೇ ಸಾಕಿದ ಸೋದರಿಯ ಮಗ ಧೋಂಡೋ ಪಂತ್ ವಿದ್ವಾಂಸ ಮನೆ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ತಿಲಕರ ಸಾರ್ವಜನಿಕ ಚಟುವಟಿಕೆಗಳು ಹೆಚ್ಚಾದಂತೆ, ಅವರ ಖಾಸಗಿ ಜೀವನ ಅಷ್ಟರ ಮಟ್ಟಿಗೆ ಕ್ಷೀಣಿಸುತ್ತಾ ಹೋಯಿತು.

ತಿಲಕರ ವೈಯಕ್ತಿಕ ಜೀವನ ಎಷ್ಟು ನಿಷ್ಕಳಂಕವಾಗಿ ಶುಭ್ರವಾಗಿತ್ತೆಂದರೆ ಅವರ ಶತ್ರುಗಳೂ ಸಹ ಅವರನ್ನು ಮೆಚ್ಚಿದ್ದರು. ಅವರ ವೈಯಕ್ತಿಕ ಜೀವನ ಸಾರ್ವಜನಿಕ ಜೀವನದೊಂದಿಗೆ ವಿಲೀನವಾಗಿತ್ತು. ನನ್ನ ಸಾರ್ವಜನಿಕ ಜೀವನ ದೇಶಕ್ಕೆ ಸೇರಿದ್ದು, ನನ್ನ ಖಾಸಗಿ ಜೀವನ ನನಗೇ ಸೇರಿದ್ದು ಎಂದು ಪಾರ್ನೆಲ್ ಹೇಳಿದಂತೆ ಅವರು ಹೇಳುತ್ತಿರಲಿಲ್ಲ. ಈ ವಿಲೀನಕ್ಕೆ ನಿಜವಾಗಿ ದಂಡ ತೆತ್ತವರೆಂದರೆ ಸತ್ಯಭಾಮಾಬಾಯಿ. ಆದರೆ ಒಮ್ಮೆಯೂ ಅವರು ಗೊಣಗಿದ್ದಿಲ್ಲ. ತಿಲಕರು "ಲೋಕಮಾನ್ಯ"ರಾದಾಗ ಅವರ ಕೌಟುಂಬಿಕ ಜೀವನದಲ್ಲಿ ಉಂಟಾದ ಪರಿವರ್ತನೆಯಿಂದ ಅನಕ್ಷರಸ್ಥಳಾದ ಹಾಗೂ ನಯನಾಜೋಕಿಲ್ಲದ ಆಕೆಗೆ ಸಂಭ್ರಮಕ್ಕಿಂತಲೂ ಹೆಚ್ಚಾಗಿ ಕಕ್ಕಾಬಿಕ್ಕಿಯಾಗಿರಬೇಕು. ಅಲ್ಲಿಂದಾಚೆಗೆ ತಿಲಕರು ರಾಜಕೀಯ ಪ್ರವಾಸಗಳು ಮತ್ತು ಸಮ್ಮೇಳನಗಳಿಂದ ಆಗಾಗ ಮನೆಯಿಂದ ದೂರವಿರಬೇಕಾಗಿತ್ತು. ಆರು ವರ್ಷದ ಗಡೀಪಾರು ಶಿಕ್ಷೆಯಾಗಿ ಮಾಂಡಲೇಗೆ ಅವರನ್ನು ಕಳಿಸಿದಾಗ ಆ ಆಘಾತದಿಂದ ಆಕೆ ಚೇತರಿಸಿಕೊಳ್ಳಲೇ ಇಲ್ಲ.

ಗೆಳೆಯರು ಮತ್ತು ಸಹಚರರ ಬಗ್ಗೆ ಅವರು ಹೊಂದಿದ್ದ ಆದರ, ವಿಶ್ವಾಸಗಳು ತಿಲಕರ ವಿಶೇಷ ಲಕ್ಷಣವಾಗಿತ್ತು. ಅವರು ಬಹಳ ಕಠಿಣವಾಗಿ ಶ್ರಮಿಸಿದರೂ, ತಮ್ಮ ಸುತ್ತಲಿನವರು ಹಾಗೇ ದುಡಿಯಬೇಕೆಂದು ಎಂದೂ ನಿರೀಕ್ಷಿಸುತ್ತಿರಲಿಲ್ಲ. ಅವರ ನ್ಯೂನತೆಗಳನ್ನೂ, ವಿಫಲತೆಗಳನ್ನೂ ತಿಲಕರು ಉದಾರತೆಯಿಂದ ಕಾಣುತ್ತಿದ್ದರು. ರಾಜದ್ರೋಹದ ಎರಡೂ ಪ್ರಕರಣಗಳಲ್ಲಿ ಯಾವ ಲೇಖನಗಳನ್ನು ಕುರಿತು ಅವರು ಶಿಕ್ಷೆಗೊಳಗಾಗಿದ್ದರೋ, ಅವುಗಳಲ್ಲಿ ಕೆಲವನ್ನು ಅವರ ಸಹೋದ್ಯೋಗಿಗಳು ಬರೆದಿದ್ದರು ಎಂಬುದು ಬಹಿರಂಗ ರಹಸ್ಯ. ಅವುಗಳ ಕಾನೂನು ಪರಿಣಾಮಗಳನ್ನು ಅನುಭವಿಸಬೇಕಾದ್ದು ಅವರ ಸಂಪಾದಕೀಯ ಹೊಣೆಯಾಗಿದ್ದರೂ, ಅವರು ಅದಕ್ಕಾಗಿ ತಮ್ಮ ಸಹಾಯಕ ಲೇಖಕರನ್ನು ಕುರಿತು ಅಸಮಾಧಾನ ತಳೆಯುವುದಿರಲಿ, ಎಂದೂ ಗೊಣಗಿದ್ದೂ ಇಲ್ಲ.

ತಾಯ್ ಮಹಾರಾಜ್ ಪ್ರಕರಣ ತಿಲಕರು ತಮ್ಮ ಸ್ನೇಹಿತರ ಬಗ್ಗೆ ಎಷ್ಟು ನಿಷ್ಠಾವಂತರಾಗಿದ್ದರು ಎಂಬುದಕ್ಕೆ ಉಜ್ವಲ ಉದಾಹರಣೆಯಾಗಿದೆ. ಈ ಪ್ರಕರಣಕ್ಕೆ ಅವರು ಕೈಹಾಕುವ ಕೆಲವು ವರ್ಷಗಳಿಗೆ ಮುನ್ನ ತಮ್ಮ ಕಾಲೇಜು ದಿನಗಳ ಮತ್ತೊಬ್ಬ ಸ್ನೇಹಿತರಿಗೆ ಅಂತಹುದೇ ಸೇವೆಯನ್ನು ಮಾಡಿದರು. ೧೮೯೫ರಲ್ಲಿ ಬರೋಡ ಸಂಸ್ಥಾನದ ಸರ್ವೆ ಸೆಟಲ್‌ಮೆಂಟಿನ ಅಸಿಸ್ಟೆಂಟ್ ಕಮಿಶನರ್ ವಾಸುದೇವ ಸದಾಶಿವ ಬಾಪಟ್‌ನ ಮೇಲೆ ಭ್ರಷ್ಟಾಚಾರದ ಆಪಾದನೆ ಹೊರಿಸಲಾಗಿತ್ತು. ವಿಶೇಷ ಆಯೋಗವೊಂದು ಆತನ ವಿಚಾರಣೆ ನಡೆಸಿತು. ಅದು ನಿಜಕ್ಕೂ ಮಹಾರಾಜನ ಆಡಳಿತಕ್ಕೆ ಮಸಿಬಳೆಯಲು ಬ್ರಿಟಿಷ್ ರೆಸಿಡೆಂಟ್ ಚಿತಾವಣೆ ಮಾಡಿದ ರಾಜಕೀಯ ಪ್ರಕರಣವಾಗಿತ್ತು. ಬಾಪಟ್‌ಗೆ ವಕೀಲರನ್ನು ಗೊತ್ತುಮಾಡುವುದು, ಸಾಕ್ಷ್ಯ ಸಂಗ್ರಹಿಸುವುದು ಹಾಗೂ ಮತ್ಸರಪೂರಿತವಾದ ಮೇಲಧಿಕಾರಿಗಳಿಂದ ಆತನನ್ನು ರಕ್ಷಿಸುವುದು–ಹೀಗೆ ತಿಲಕರು ಸುಮಾರು ಒಂದು ವರ್ಷ ಸಹಾಯ ಮಾಡುವುದರಲ್ಲಿ ಕಳೆದರು. ಹೀಗೆ ಸಹಾಯದ ಅಗತ್ಯವಿದ್ದ ಅನೇಕ ಗೆಳೆಯರಿಗೆ ತಿಲಕರು ಸಾಕಷ್ಟು ವೈಯಕ್ತಿಕ ತ್ಯಾಗ ಮಾಡಿ ನೆರವಾದರು.

ತಮ್ಮ ಉಪಾಧ್ಯಾಯರಲ್ಲಿ ಒಬ್ಬರಾಗಿದ್ದ ಶಂಕರ ಮೋರೊ ರಾನಡೆಯವರಿಗೆ ಅವರ ಕುಟುಂಬವನ್ನು ನೋಡಿಕೊಳ್ಳುವುದಾಗಿ ನೀಡಿದ ಭರವಸೆ ಅವರ ಗುಣವನ್ನು ಎತ್ತಿ ತೋರಿಸುವ ಉದಾಹರಣೆಯಾಗಿದೆ. ರಾನಡೆ ಕಾದಂಬರಿಯೊಂದನ್ನು ಅರ್ಧ ಬರೆದು ತೀರಿಕೊಂಡಿದ್ದರು. ಅದರ ಗೌರವಧನ ಅವರ ಹೆಂಡತಿ, ಮಕ್ಕಳಿಗೆ ಸ್ವಲ್ಪ ವರಮಾನ ಕೊಡಬಹುದೆಂದು ಕಾದಂಬರಿಯ ಪ್ರಕಾಶಕರು ಭಾವಿಸಿದ್ದರು. ಬೇಹುಷಾರಿನ ಗಳಿಗೆಯಲ್ಲಿ ಕಾದಂಬರಿಯನ್ನು ಪೂರ್ತಿ ಮಾಡುವುದಾಗಿ ತಿಲಕರು ಒಪ್ಪಿಕೊಂಡಂತೆ ತೋರುತ್ತದೆ. ಒರೈಅನ್ ಮತ್ತು ಕ್ಯಾಲ್ಡಿಯದ ವೇದಗಳಂತಹ ಗಹನವಾದ ಮತ್ತು ತತ್ತ್ವಜ್ಞಾನದ ವಿಷಯಗಳ ಬಗ್ಗೆ ತಮ್ಮ ಬಿಡುವಿನ ವೇಳೆಯನ್ನು ಕಳೆಯುತ್ತಿದ್ದ ವಿದ್ವಾಂಸರೂ, ತತ್ತ್ವಜ್ಞಾನಿಗಳೂ ಆಗಿದ್ದ ತಿಲಕರು ಬೇರೊಬ್ಬರು ಅರ್ಧ ಬರೆದ ಕಾದಂಬರಿಯನ್ನು ಮುಗಿಸುವ ವಿಚಾರವನ್ನು ಮಾಡಿದ್ದರು. ಮಾಂಡಲೇಯಲ್ಲಿದ್ದಾಗಲೂ ಅವರು ಅದನ್ನು ನೆನಪಿಸಿಕೊಂಡರು ಹಾಗೂ ಪತ್ರವೊಂದರಲ್ಲಿ ಅದನ್ನು ಪ್ರಸ್ತಾಪಿಸಿದ್ದರು. ಆದರೆ ಈ ಭರವಸೆಯನ್ನು ಈಡೇರಿಸಲಾಗದ ಬಗ್ಗೆ ತಿಲಕರು ಕೊನೆಯವರೆಗೂ ವಿಷಾದಪಟ್ಟುಕೊಂಡರು.

ತಿಲಕರು ತಮ್ಮ ರಾಜಕೀಯ ಎದುರಾಳಿಗಳ ಬಗ್ಗೆ ತೋರಿದ ಉಗ್ರ ವಿರೋಧ ತಮ್ಮ ಗೆಳೆಯರಿಗೆ ತೋರಿದ ಆದರ, ವಿಶ್ವಾಸಗಳಿಗೆ ವಿರುದ್ಧವಾಗಿತ್ತು. ಹೆಚ್ಚು ಕಡಿಮೆ ತಮ್ಮ ರಾಜಕೀಯ ಜೀವನದ ಪ್ರಾರಂಭದಿಂದಲೇ ತಿಲಕರು ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ತೀವ್ರ ವಿವಾದಕ್ಕೆ ಬೀಳುತ್ತಿದ್ದರು. ಎಷ್ಟು ಸೈದ್ಧಾಂತಿಕ ಭಾವಾತಿರೇಕ ಮತ್ತು ತಾರ್ಕಿಕ ಉಗ್ರತೆಯಿಂದ ಅವರು ವಿವಾದಗಳಲ್ಲಿ ತೊಡಗುತ್ತಿದ್ದ ರೆಂದರೆ, ಅಂತಹ ವಿವಾದಗಳನ್ನು ಹಿಂದೆ ನೋಡಿಲ್ಲ ಹಾಗೂ ಅಲ್ಲಿಂದೀಚೆಗೆ ವಿವಾದಗಳು ಅವುಗಳ ಮಟ್ಟಕ್ಕೆ ಬಂದಿರುವುದು ಅಪರೂಪವೇ. ನಾವು ಮೊದಲೇ ನೋಡಿರುವಂತೆ ಸಾಮಾಜಿಕ ವಿಷಯಗಳ ಬಗ್ಗೆ ತಿಲಕರಿಗಿಂತ ಭಿನ್ನವಾದ ಅಭಿಪ್ರಾಯಗಳನ್ನು ಅವರ ನಿಕಟ ಗೆಳೆಯ ಮತ್ತು ಸಹೋದ್ಯೋಗಿಯಾಗಿದ್ದ ಆಗರ್ಕರರು ಹೊಂದಿದ್ದರು. ತಿಲಕರ ವಾದ ವೈಖರಿ ಮತ್ತು ಪಾಂಡಿತ್ಯದ ಹೊಡೆತಕ್ಕೆ ಮೊದಲು ತುತ್ತಾದವರೆಂದರೆ ಆಗರ್ಕರರೇ.

ಆಗರ್ಕರರು ತಮ್ಮ 'ಸುಧಾರಕ್' ಪತ್ರಿಕೆಯನ್ನು ಪ್ರಾರಂಭಿಸಿದಾಗ, ಯಾರೂ ಏನನ್ನೂ ಬಿಟ್ಟುಕೊಡದ ಈ ವಾಗ್ಯುದ್ಧ ಉಗ್ರತೆಯ ತುತ್ತತುದಿಯನ್ನು ಮುಟ್ಟಿತು. ಚತುರೋಕ್ತಿಯ ಚುಚ್ಚುಗತ್ತಿ, ಅಧಿಕಾರವಾಣಿಯ ದೊಣ್ಣೆ, ಅಲಂಕಾರಿಕ ಭಾಷೆಯ ಸಿಡಿಲು – ಇವೆಲ್ಲವನ್ನೂ ಸ್ವೇಚ್ಛೆಯಿಂದ ಬಳಸಲಾಯಿತು ಹಾಗೂ ಕೆಲವೊಮ್ಮೆ ವಿವಾದ ವೈಯುಕ್ತಿಕ ನಿಂದನೆಯ ಮಟ್ಟಕ್ಕೆ ಇಳಿಯುತ್ತಿತ್ತು. ತಿಲಕರು ಈ ಯುದ್ಧದಲ್ಲಿ ನಲಿಯು ತ್ತಿದ್ದರು, ಒಮ್ಮೊಮ್ಮೆ ಉನ್ಮತ್ತರಾಗುತ್ತಿದ್ದರು. ಈ ಯುದ್ಧದಲ್ಲಿ ಪೆಟ್ಟು ಕೊಡಲು, ಪೆಟ್ಟಿನಿಂದ ತಪ್ಪಿಸಿಕೊಳ್ಳಲು, ಪುನಃ ಪೆಟ್ಟು ಕೊಡಲು ಅವರು ತಮ್ಮ ಅಪಾರ ಬುದ್ಧಿ ಶಕ್ತಿ ಮತ್ತು ವಾದ ಶಕ್ತಿಯನ್ನು ಬಳಸುತ್ತಿದ್ದರು.

ಯುದ್ಧರಂಗದ ವಾಸನೆ ಮೂಗಿಗೆ ಬಿದ್ದಾಗ ತಿಲಕರು ತಮ್ಮ ದಾರಿಯಲ್ಲಿ ಅಡ್ಡ ವಾಗಿ ನಿಂತ ಯಾರನ್ನೂ ಬಿಡುತ್ತಿರಲಿಲ್ಲ. ಪೂಜ್ಯರಾದ ದ್ರೋಣ ಮತ್ತು ಭೀಷ್ಮರ ಮೇಲೆ ಬಾಣಗಳನ್ನು ಸುರಿಸಿದ ಅರ್ಜುನನಂತೆ, ಅವರು "ಒಪ್ಪಿಗೆಯ ವಯಸ್ಸು ಮಸೂದೆ" ಮತ್ತು ಇತರ ಸಾಮಾಜಿಕ ವಿಷಯಗಳ ಬಗ್ಗೆ ರಾನಡೆ ಮತ್ತು ಭಂಡಾರ್ಕರರೊಡನೆ ಸೆಣಸಿದರು. ಈ ಹಿರಿಯರು ಹೋರಾಟದಲ್ಲಿ ತತ್ತರಿಸಿದರು. ತಿಲಕರ ಹೋರಾಟದ ಔದ್ಧತ್ಯ ಅವರನ್ನು ಹಿಮ್ಮೆಟ್ಟಿಸಿದಂತೆ ಅದರ ಶಕ್ತಿಯೂ ಅವರನ್ನು ಹಿಮ್ಮೆಟ್ಟಿಸಿತು. ಹೋರಾಟದ ತೀಕ್ಷ್ಣತೆ ಪ್ರೇಕ್ಷಕರನ್ನು ಮೂಕರನ್ನಾಗಿಸಿತು. ಯುದ್ಧದ ಆವೇಶದಲ್ಲಿ ಕೆಲವೊಮ್ಮೆ ತಿಲಕರು ಚರ್ಚೆಯ ನ್ಯಾಯವಾದ ಚೌಕಟ್ಟನ್ನು ಮೀರುತ್ತಿದ್ದರು ಹಾಗೂ ಅನ್ಯಾಯವಾಗಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಒಪ್ಪಿಕೊಳ್ಳಬೇಕು. ತಿಲಕರು ಸಾರ್ವಜನಿಕ ಸಭಾ ವಶಪಡಿಸಿಕೊಂಡಾಗ, ರಾನಡೆಯವರು ಅದಕ್ಕೆ ಪ್ರತಿಯಾಗಿ ಡೆಕ್ಕನ್ ಸಭಾ ಸ್ಥಾಪಿಸಿದರು. ಅದರಿಂದ ಪ್ರಚೋದಿತರಾದ ತಿಲಕರು "ಇದು ಮುಕ್ಕಳಾಟವ್ರೋ ಅಥವಾ ಅರುಳುಮರುಳೋ" ಎಂಬ ಶೀರ್ಷಿಕೆಯಲ್ಲಿ ರಾನಡೆಯವರ ವಿರುದ್ಧ ನವೆಂಬರ್ ೧೦, ೧೮೯೭ರಂದು 'ಕೇಸರಿ'ಯಲ್ಲಿ ಉಗ್ರ ಲೇಖನವನ್ನು ಬರೆದಾಗ, ತಿಲಕರ ನಿಷ್ಠಾವಂತ ಸಹಚರ ಹಾಗೂ ಅವರ ಜೀವನಚರಿತ್ರೆಯನ್ನು ಬರೆದಿರುವ ಎನ್. ಸಿ. ಕೇಳ್ಕರರೇ ದಂಗಾದರು.

ತಮ್ಮ ಪ್ರಾರಂಭದ ಜೀವನದಲ್ಲಿ ತಿಲಕರು ಸಾಮಾಜಿಕ ವಿಷಯಗಳ ಬಗ್ಗೆ ಚರ್ಚೆ

ಸುವಾಗ ಕಾಣುತ್ತಿದ್ದ ಅದೇ ಹುರುಪು, ಹುಮ್ಮಸ್ಸು ಮುಂದೆ ರಾಜಕೀಯ ವಿವಾದಗಳ ಚರ್ಚೆಯಲ್ಲಿ ಇನ್ನಷ್ಟು ಬಲವಾಗಿ ಕಾಣಿಸಿಕೊಂಡವು. ಬ್ರಿಟಿಷ್ ಆಡಳಿತಗಾರರು ಸಹಜವಾಗಿ ಇವುಗಳಿಗೆ ಸಂಪೂರ್ಣವಾಗಿ ಗುರಿಯಾದರು. ಮೆಹ್ತಾ, ಗೋಖಲೆ ಮತ್ತು ಬ್ಯಾನರ್ಜಿಯವರಂತಹ ಸೌಮ್ಯವಾದಿಗಳೂ, ಅನ್ನಿಬೆಸೆಂಟ್‌ರಂತಹ ಉಗ್ರವಾದಿಗಳೂ ಸಹ ತಿಲಕರ ಮಾತಿನ ಹೊಡೆತಕ್ಕೆ ಸಿಗದೆ ಇರಲಿಲ್ಲ. ಕಾಂಗ್ರೆಸ್ ಏಕತೆಯ ಬಗ್ಗೆ ಅವರು ಬರೆದ ಲೇಖನದಿಂದ ಗೋಖಲೆಯವರು ಬೇಗ ಸಾಯಬೇಕಾಯಿತೆಂದು ತಿಲಕರ ಶತ್ರುಗಳು ಆಪಾದಿಸಿದ್ದೂ ಉಂಟು. ಈ ಆಪಾದನೆ ಆಧಾರ ರಹಿತವಾಗಿತ್ತು. ಹುಡುಗಾಟಿಕೆಯದಾಗಿತ್ತು. ಆದರೂ ತಮ್ಮ ಎದುರಾಳಿಗಳಲ್ಲಿ ತಿಲಕರು ಭಯ ಹುಟ್ಟಿಸಬಹುದಾಗಿದ್ದನ್ನು ಇದು ಸೂಚಿಸುತ್ತದೆ. ಜನಸಾಮಾನ್ಯರ ಭಕ್ತಿ, ವಿಶ್ವಾಸಗಳನ್ನು ಗಳಿಸಿದ್ದ ಮನುಷ್ಯ ಹೇಗೆ ಅನೇಕ ವೈಯುಕ್ತಿಕ ಶತ್ರುಗಳನ್ನು ಹೊಂದಿದ ಎಂಬುದರ ವಿಪರ್ಯಾಸವನ್ನು ಸದಾ ವಿವಾದದಲ್ಲಿ ಮುಳುಗುವ ತಿಲಕರ ಪ್ರವೃತ್ತಿಯಲ್ಲಿ ಕಾಣಬಹುದು. ತಿಲಕರ ವಿರೋಧಿಗಳ ದ್ವೇಷ ಎಷ್ಟಿತ್ತೆಂದರೆ, ಪೂನಾ ಕಾಂಗ್ರೆಸ್ ಅಧಿವೇಶನದ ಬಗ್ಗೆ ಉಂಟಾಗಿದ್ದ ವಿವಾದದ ಸಮಯದಲ್ಲಿ ರಾನಡೆಯುವರ ಅನುಯಾಯಿಯಾಗಿದ್ದ ರಾವ್ ಬಹದ್ದೂರ್ ಎಂಬಾತ ತಿಲಕರು ಸಾಯುವವರೆಗೆ ಕೆಲಸಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲ ಎಂದು ಬಹಿರಂಗವಾಗಿ ಘೋಷಿಸಿದ!

ಈ ವಿವಾದಗಳು ಕೇವಲ ಚರ್ಚೆಗಳಲ್ಲಿ ಗೆಲ್ಲುವ ಉದ್ದೇಶ ಹೊಂದಿರಲಿಲ್ಲ. ಅವು ಸಾಮೂಹಿಕ ಪ್ರಚಾರದ ಪ್ರಬಲ ಸಾಧನಗಳಾಗಿ ಕೆಲಸ ಮಾಡಿದವು. ಅಂತಹ ಸಾರ್ವಜನಿಕ ಚರ್ಚೆ ಹಾಗೂ ಎರಡೂ ಪಕ್ಷಗಳ ಪ್ರಮುಖರ ನಡುವಣ ಘರ್ಷಣೆಯಿಂದ ಮಾತ್ರವೆ ಜನರ ಆಸಕ್ತಿಯನ್ನು ಕೆರಳಿಸಬಹುದು. ಭಾರತದ ರಾಜಕೀಯದಲ್ಲಿ ಈ ರೀತಿ ಪತ್ರಿಕೆಗಳನ್ನೂ, ವೇದಿಕೆಗಳನ್ನೂ ಬಳಸಿದವರಲ್ಲಿ ತಿಲಕರು ಮೊದಲಿಗರು. ಅವರ ಜೀವನದಲ್ಲಿ ಅಲ್ಲಲ್ಲಿ ಸಂಭವಿಸಿದ ವಿವಾದಗಳ ಈ ಅಂಶವನ್ನು ಕಡೆಗಣಿಸಬಾರದು. ಈ ವಿವಾದಗಳಿಂದ ಸಾಕಷ್ಟು ಕಾವು ಉಂಟಾದರೂ ಅವು ಜನರಲ್ಲಿ ತಿಳುವಳಿಕೆಯನ್ನೂ ಮೂಡಿಸಿದವು.

ಒರಟು ಸ್ವಭಾವದ, ನಿಷ್ಠುರದ, ಮುನ್ನುಗ್ಗುವ ಸ್ವಭಾವದ ತಿಲಕರ ಸಮಷ್ಟಿ ಲಕ್ಷಣ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು ಎಂದು ನಿಜವಾಗಿ ಹೇಳಬಹುದು. ಸೊಗಸುಗಾರಿಕೆಯ ಬಿಂಕ ಬಿನ್ನಾಣಕ್ಕೆ ಅಥವಾ ಭಾವನಾತ್ಮಕ ಮೊರೆಗಳಿಗೆ ಅವರು ದೂರವಾಗಿದ್ದರು. ವಿವರಗಳ ಮೇಲೆ ಪ್ರಭುತ್ವ, ಹರಿತವಾದ ತರ್ಕ ಮತ್ತು ಸಾಚಾ ಪ್ರಾಮಾಣಿಕತೆಯಿಂದ ಕೂಡಿದ ಅವರ ಲೇಖನಗಳು ಬುದ್ಧಿಗೆ ನೇರವಾಗಿತಲುಪುತ್ತಿದ್ದವು. ಪ್ರತಿಯೊಂದು ವಾಕ್ಯವೂ ಸುತ್ತಿಗೆಯಿಂದ ಹೊಡೆದ ಏಟಿನಂತಿತ್ತು, ಪ್ರತಿಯೊಂದು ಪ್ಯಾರ ವಾದವನ್ನು ಮುಂದಿಡುತ್ತಿತ್ತು, ಹಾಗೂ ಒಟ್ಟಾರೆ ಲೇಖನಗಳು ಓದುಗನ ಮೇಲೆ ಅದ್ಭುತ ಪರಿಣಾಮವನ್ನುಂಟುಮಾಡುತ್ತಿದ್ದವು. ಅವರಿಗೆ ಪ್ರಿಯವಾದ ಭರ್ತೃಹರಿ ಅಥವಾ ಮಹಾಭಾರತದಿಂದ ಹೆಕ್ಕಿ ತೆಗೆದು ಬಳಸಿದ ಶೀರ್ಷಿಕೆಗಳೇ ಲೇಖನಗಳ ವಸ್ತುವಿನ ಬಗ್ಗೆ ಸೂಚನೆಯನ್ನು ಕೊಡುತ್ತಿದ್ದವು.

"ನೀವು ಒಬ್ಬ ಹಳ್ಳಿಗನೊಂದಿಗೆ ಮಾತನಾಡುತ್ತಿದ್ದೀರಿ ಎಂದು ಊಹಿಸಿ, ವಿಶ್ವ

ವಿದ್ಯಾಲಯದ ಜನರೊಂದಿಗಲ್ಲ" ಎಂದು ತಿಲಕರು ತಮ್ಮ ಸಂಪಾದಕೀಯ ಸಿಬ್ಬಂದಿಗೆ ತಿಳಿಸುತ್ತಿದ್ದರು. "ಸಂಸ್ಕೃತದ ಶ್ಲೋಕಗಳನ್ನು ಉದ್ಧರಿಸಬೇಡಿ. ವಿವರಿಸುವ ಅಂಕಿ ಅಂಶಗಳನ್ನು ಕೊಡಬೇಡಿ. ಅಂಕಿಗಳನ್ನು ಉದ್ಧರಿಸಿ ಓದುಗನನ್ನು ಹೆದರಿಸಿ ಓಡಿಸಬೇಡಿ. ಅವುಗಳನ್ನು ನೀವೇ ಇಟ್ಟುಕೊಳ್ಳಿ. ನಿಮ್ಮ ನಿಜಾಂಶಗಳು ಸರಿಯಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ನೀವು ಏನು ಹೇಳುತ್ತೀರಿ ಅದು ಹಗಲಿನ ಬೆಳಕಿನಷ್ಟು ಸ್ಪಷ್ಟವಾಗಿರಬೇಕು ಹಾಗೂ ಅರ್ಥ ಎಂದಿಗೂ ಅಸ್ಪಷ್ಟವಾಗಬಾರದು." ಅವರೇ ಬರೆದ ಲೇಖನಗಳು ಈ ವಿಚಾರಕ್ಕೆ ಅತ್ಯುತ್ತಮ ದೃಷ್ಟಾಂತವಾಗಿದ್ದವು ಹಾಗೂ ಅದರ ಜೊತೆಗೆ ಅನುಕರಿಸಲಾಗದ ವಿಶೇಷತೆಯೂ ಇತ್ತು. ತಮ್ಮ ಕೈಯಿಂದಲೇ ಬರೆಯುವುದು ತಿಲಕರಿಗೆ ಆಗುತ್ತಿರಲಿಲ್ಲ. ಹಾಗೂ ಅವರು ತಮ್ಮ ಲೇಖನಗಳನ್ನು ಯಾವಾಗಲೂ ಹೇಳಿ ಬರೆಸುತ್ತಿದ್ದರು.

ತಮ್ಮ ಲೇಖನಗಳಲ್ಲಿ ಹೇಗೋ ಹಾಗೆ ತಿಲಕರು ತಮ್ಮ ಭಾಷಣಗಳಲ್ಲಿ ಸರಳವಾಗಿ ನೇರವಾಗಿ ಮಾತನಾಡುತ್ತಿದ್ದರು. ಅವರು ವಾಗ್ಮಿಯಾಗಿರಲಿಲ್ಲ ಅಥವಾ ಜನಸಾಮಾನ್ಯರನ್ನು ಉದ್ರೇಕಗೊಳಿಸಿ ಮಾತನಾಡುವಂತಹ ಭಾಷಣಕಾರರಾಗಿರಲಿಲ್ಲ. ಅವರ ಭಾಷಣಗಳಲ್ಲಿ ದೊಡ್ಡದಾಗಿ ಕಾಣುವ ಮಾತುಗಳಿರುತ್ತಿರಲಿಲ್ಲ, ಕೆರಳಿಸುವಂತಹ ಮನವಿಗಳಿರುತ್ತಿರಲಿಲ್ಲ, ಅಲಂಕಾರಿಕ ಭಾಷೆಯ ಬಳಕೆ ಇರುತ್ತಿರಲಿಲ್ಲ. ಇದರಲ್ಲಿ ಅವರು, ನಯವಾಗಿ, ಪರಿಣಾಮಕ್ಕಾಗಿ ಮಧ್ಯೆಮಧ್ಯೆ ತಡೆದು. ಕಳಕಳಿಯಾಗಿ ಮಾತನಾಡುವ ಗೋಖಲೆಯವರಿಗೆ ತದ್ವಿರುದ್ಧವಾಗಿದ್ದರು. "ಆದರೆ" ಅಥವಾ "ಒಂದು ಪಕ್ಷ" ಮುಂತಾದ ಪದಗಳನ್ನು ಬಳಸದೆ ಪ್ರತಿಯೊಂದು ವಿಷಯವನ್ನು ಸರಳವಾಗಿ ಮತ್ತು ಮುಲಾಜಿಲ್ಲದೆ ಅವರು ಮುಂದಿಡುತ್ತಿದ್ದರು. ತಮ್ಮ ಎದುರಾಳಿಗಳ ವಿಚಾರವನ್ನು ಕೆಡವಿ ತಮ್ಮ ವಿಚಾರವನ್ನು ವಿವೇಕದ ಬೆಳಕಿನಲ್ಲಿ, ತರ್ಕದ ಬಲದಿಂದ ಸ್ಥಾಪಿಸುತ್ತಿದ್ದರು. ಅವರ ಭಾಷಣದ ವಿಷಯಕ್ಕೆ ಪ್ರಾಧಾನ್ಯ, ಭಾಷಣ ಹೇಗೆ ಮಾಡಲಾಯಿತು ಎಂಬುದಕ್ಕಲ್ಲ. "ರಾಜಕೀಯ ವಾಗ್ಮಿತೆ ಎಂದರೆ ಕ್ರಿಯೆ, ಪದಗಳಲ್ಲ; ಕ್ರಿಯೆ, ನಡತೆ, ಸಂಕಲ್ಪ, ಉದ್ದೇಶ ಮತ್ತು ವ್ಯಕ್ತಿತ್ವ" ಎಂದು ಲಾರ್ಡ್ ಮಾರ್ಲೆ ಹೇಳಿದ್ದನ್ನು ತಿಲಕರು ನಂಬಿದ್ದರು.

ತಿಲಕರು ತಮ್ಮ ಜೀವನದಾದ್ಯಂತ ನಡೆಸಿದ ಸಾಮಾಜಿಕ ಮತ್ತು ರಾಜಕೀಯ ಚರ್ಚೆಗಳು ಉಗ್ರವಾಗಿದ್ದರೂ, ಅವರೆಂದೂ ತಮ್ಮ ವಿರೋಧಿಗಳನ್ನು ಗೋರಿಯಾಚೆಗೆ ಎಳೆಯಲಿಲ್ಲ. "ಸತ್ತವರ ಬಗ್ಗೆ ಕೆಟ್ಟ ಮಾತು ಆಡಬೇಡಿ" ಎಂಬುದು ಅವರ ಸೂಕ್ತಿಯಾಗಿತ್ತು. ಸಾವಿನ ಮುಂದೆ ಎಲ್ಲ ವಿವಾದಗಳೂ ಸ್ತಬ್ಧವಾಗುತ್ತಿದ್ದವು. ಆಗರ್ಕರರ ಸಾವಿನಿಂದ ಅವರೆಷ್ಟು ಭಾವನಾವಶರಾಗಿದ್ದರೆಂದರೆ, ಮೃತರ ಬಗ್ಗೆ ಲೇಖನ ಬರೆಯುವಾಗ ಅವರು ಅನೇಕ ಸಲ ಕಣ್ಣೀರು ಸುರಿಸಿದರು. ಇಂತಹ ದೌರ್ಬಲ್ಯಕ್ಕೆ ಅವರು ಒಳಗಾಗಿದ್ದು ಅವರ ಜೀವನದಲ್ಲಿ ಅದೇ ಮೊದಲ ಸಲವಾಗಿತ್ತು. ರಾನಡೆಯವರು ನಿಧನರಾದಾಗ ತಿಲಕರು ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿ ಕಾರ್ಪಣ್ಯರಹಿತವಾಗಿತ್ತು. ಅತ್ಯಂತ ಔದಾರ್ಯದಿಂದ ಕೂಡಿತ್ತು. ಗೋಖಲೆಯವರು ತೀರಿಕೊಂಡಾಗ ಅವರ ಬಗ್ಗೆ ತಿಲಕರು ಮಾಡಿದ ಭಾಷಣವೂ ಅಷ್ಟೇ ತೆರೆದ ಮನಸ್ಸಿನಿಂದ ಮೃತರಿಗೆ ಸಲ್ಲಿಸಿದ ಗೌರವವಾಗಿತ್ತು. ಅಂತಹ ಸಂದರ್ಭಗಳಲ್ಲಿ ಮಾತ್ರ ಅವರ ನಿಷ್ಠುರ ಹೊರಮೈಯಿಂದ ಭಾವೋ

ದ್ವೇಗ ಕಾಣಿಸಿಕೊಳ್ಳುತ್ತಿತ್ತು. ಉನ್ನತ ಪೋಲೀಸ್ ಅಧಿಕಾರಿಯಾಗಿದ್ದ ಬ್ರೆವಿನ್ ಭಯ ಅಥವಾ ಪಕ್ಷಪಾತವಿಲ್ಲದೆ ತನ್ನ ಕರ್ತವ್ಯಗಳನ್ನು ಮಾಡುತ್ತಿದ್ದ ಎಂದು ತಿಳಿದಿತ್ತು. ಆತ ಮಡಿದಾಗ 'ಕೇಸರಿ'ಯಲ್ಲಿ ಅವನಿಗೆ ಶ್ರದ್ಧಾಂಜಲಿ ಸೂಚಿಸುವ ಲೇಖನ ಓದಿದ 'ಕೇಸರಿ'ಯ ಓದುಗರು ಚಕಿತರಾದರು.

ತಿಲಕರ ಜೀವನ ಸಿವಿಲ್ ಮೊಕದ್ದಮೆಗಳು ಮತ್ತು ಕ್ರಿಮಿನಲ್ ವಿಚಾರಣೆಗಳ ಉದ್ದದ ಮೆರವಣಿಗೆಯಾಗಿತ್ತು. ತಮ್ಮ ವಿರುದ್ಧ ಬರ್ವೆ ಹಾಕಿದ ಮಾನನಷ್ಟ ಮೊಕದ್ದಮೆಯಿಂದ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದ ತಿಲಕರು ಶಿರೋಲ್ ಪ್ರಕರಣದೊಡನೆ ಅದನ್ನು ಮುಕ್ತಾಯಗೊಳಿಸಿದರು. ಇವೆರಡರ ನಡುವೆ ರಾಜದ್ರೋಹದ ಅಪರಾಧಕ್ಕೆ ಮೂರು ಸಲ ವಿಚಾರಣೆಗೊಳಗಾಗಿದ್ದರು; ಈ ಪೈಕಿ ಒಂದರಲ್ಲಿ ಅವರಿಗೆ ಬಿಡುಗಡೆಯಾಗಿತ್ತು; ಅವರ ಜೀವನದ ಒಂದು ಎಳೆಯಂತೆ ಕಾಣುವ ತಾಯ್ ಮಹಾರಾಜ್ ಪ್ರಕರಣ ಮತ್ತು ಅವರು ವಕೀಲರಿಗೆ ಮಾಹಿತಿ, ಸಾಕ್ಷ್ಯ ಒದಗಿಸಿದ ಬಾಪಟ್ ಪ್ರಕರಣ ನಡೆದವು. ಇವೂ ಅಲ್ಲದೆ, 'ದಿ ಹಿಂದು', 'ದಿ ಟೈಮ್ಸ್ ಆಫ್ ಇಂಡಿಯ' ಮತ್ತು 'ಗ್ಲೋಬ್' ಪತ್ರಿಕೆಗಳ ವಿರುದ್ಧ ಅವರು ಹೂಡಿದ ಮೊಕದ್ದಮೆಗಳೂ ಇವೆ. ಈ ಮೂರು ಮೊಕದ್ದಮೆಗಳ ಮೂಲಕ ಆ ಪತ್ರಿಕೆಗಳು ತಿಲಕರ ಕ್ಷಮೆ ಕೋರುವಂತೆ ಮಾಡಲಾಗಿತ್ತು. ನ್ಯಾಯಾಲಯದ ಪ್ರಕರಣಗಳಲ್ಲಿ ಹೀಗೆ ಸದಾ ಒಳಗಾಗಿದ್ದುದರಿಂದ ತಮ್ಮ ಕಾನೂನಿನ ಜ್ಞಾನವನ್ನು ಪ್ರದರ್ಶಿಸಲು ಹಾಗೂ ಮೊಂಡುತನಕ್ಕೆ ಸಮೀಪವಾದ ಹಟವನ್ನು ಪ್ರದರ್ಶಿಸಲೂ ತಿಲಕರಿಗೆ ಸಂಪೂರ್ಣ ಅವಕಾಶ ದೊರೆಯಿತು. ಹಟ ಅವರ ಅಸಾಧಾರಣ ಲಕ್ಷಣವಾಗಿತ್ತು. ಅವರು ಕಾನೂನಿನ ಪದವೀಧರರಾಗಿದ್ದರು. ಸುಮಾರು ಹತ್ತು ವರ್ಷಗಳು ಕಾನೂನು ತರಗತಿಯನ್ನು ನಡೆಸಿದರು. ಆದರೆ ಅವರೆಂದೂ ವಕೀಲಿ ಮಾಡಲಿಲ್ಲ.

ಅವರು ವಕೀಲಿ ಮಾಡಲು ಬಯಸಿದ್ದರೆ ತಮ್ಮ ಉದ್ಯೋಗದಲ್ಲಿ ಅದ್ಭುತ ಯಶಸ್ಸು ಗಳಿಸುತ್ತಿದ್ದರೆಂಬುದು ರಾಜದ್ರೋಹದ ಎರಡನೆಯ ಪ್ರಕರಣದಲ್ಲಿ ಅವರು ಅತಿಶಯವಾದ ನೈಪುಣ್ಯದಿಂದ ಮಾಡಿದ ಪ್ರತಿವಾದ ತೋರಿಸುತ್ತದೆ. ಪ್ರಿವಿ ಕೌನ್ಸಿಲ್‌ಗೆ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ಜೈಲು ಕೋಣೆಯಿಂದ ತಿಲಕರು ಎಷ್ಟು ಶೀಘ್ರವಾಗಿ ಮತ್ತು ಎಷ್ಟು ಕುಶಲತೆಯಿಂದ ಅರ್ಜಿ ಬರೆದಿದ್ದರೆಂದರೆ, ಮೊದಲ ರಾಜದ್ರೋಹದ ಪ್ರಕರಣದಲ್ಲಿ ಅವರ ಪರವಾಗಿ ವಕಾಲತ್ತು ವಹಿಸಿದ್ದ ಕಲ್ಕತ್ತೆಯ ಬ್ಯಾರಿಸ್ಟರುಗಳಾದ ಪಫ್ ಮತ್ತು ಗಾರ್ಥ್ ಆಶ್ಚರ್ಯಗೊಂಡರು. "ತಿಲಕರ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯ ಬಗ್ಗೆ ಅವರು ಉನ್ನತ ಅಭಿಪ್ರಾಯವನ್ನೇ ಹೊಂದಿದ್ದರು. ಈ ಅಭಿಪ್ರಾಯ ಅಪಾರ ಮೆಚ್ಚುಗೆಯಾಗಿ ಪರಿಣಮಿಸಿತು. ನ್ಯಾಯಾಲಯದಲ್ಲಿ ಮಾಡಿದ ಆಪಾದನೆ ಅಥವಾ ಕೊಟ್ಟ ತೀರ್ಪನ್ನು ಕೇಳಿದ್ದಷ್ಟರಿಂದಲೇ ಯಾವುದೇ ಒಕ್ಕಣೆಗಳನ್ನು ಪರಾಮರ್ಶಿಸದೆ ಮನವಿ ಅರ್ಜಿಯೊಂದನ್ನು ಅಷ್ಟು ಕರಾರುವಾಕ್ಕಾಗಿ ಮತ್ತು ಸಮಗ್ರವಾಗಿ ಬರೆಯಬಲ್ಲಂಥ ಯಾರೇ ಸಾಮಾನ್ಯ ವ್ಯಕ್ತಿಯನ್ನಾಗಲಿ ಅಥವಾ ವಕೀಲರನ್ನಾಗಲಿ ತಮ್ಮ ವೃತ್ತಿ ಅನುಭವದ ಅವಧಿಯಲ್ಲಿ ತಾವು ಕಂಡಿಲ್ಲವೆಂದು ಅವರು ಹೇಳಿದರು" ಎಂಬುದಾಗಿ ಈ ಬ್ಯಾರಿಸ್ಟರ್‌ಗಳ ಕಿರಿಯ ವಕೀಲನಾಗಿದ್ದ ಜೆ. ಚೌಧರಿ ಹೇಳಿದ್ದಾನೆ. ಮಾಂಡಲೇಯಲ್ಲೂ ಸಹ, ತಿಲಕರು ತಮ್ಮ ಬಳಿ ಯಾವುದೇ ಕಾನೂನಿನ ಪುಸ್ತಕವಿಲ್ಲ

ದಿದ್ದರೂ, ತಾಯ್ ಮಹಾರಾಜ್ ಪ್ರಕರಣದಲ್ಲಿ ಬಾಂಬೆ ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಪಿಗೆ ವಿವರವಾಗಿ ಉತ್ತರವನ್ನು ಸಿದ್ಧಪಡಿಸಿದರು. ಈ ಉತ್ತರಕ್ಕೂ ಆ ಪ್ರಕರಣದ ಪ್ರಿವಿ ಕೌನ್ಸಿಲ್‌ನ ಅಂತಿಮ ತೀರ್ಪಿಗೂ ಇರುವ ಸಾದೃಶ್ಯ ಎದ್ದು ಕಾಣುತ್ತದೆ.

ಜೀವನದುದ್ದಕ್ಕೂ ರಾಜಕೀಯ ಮತ್ತು ಕಾನೂನಿನಲ್ಲಿ ಮುಳುಗಿದ್ದರೂ ತಿಲಕರ ಸ್ವಾಭಾವಿಕ ಪ್ರವೃತ್ತಿ ಪಾಂಡಿತ್ಯ ಗಳಿಕೆ. ವೇದಗಳ ಬಗ್ಗೆ ಸಂಶೋಧನೆ ಮತ್ತು ತತ್ತ್ವ ಜ್ಞಾನದ ಚಿಂತನದ ಬಗೆಗಿತ್ತು. ಅವರು ಬಹಳ ಧಾರ್ಮಿಕವಾಗಿದ್ದರು ಹಾಗೂ ಗೀತೆಯ ಉಪದೇಶದಲ್ಲಿ ಅವರು ಗಾಢವಾದ ವಿಶ್ವಾಸ ಹೊಂದಿದ್ದರು. ಅವರ ಆಧ್ಯಾತ್ಮಿಕ ಸಂಶಯಗಳು ಮತ್ತು ಸಂಶೋಧನೆಗಳನ್ನು ಅದು ಕೊನೆಗೊಳಿಸಿತ್ತು. ಡಾ॥ ರಾಧಾ ಕೃಷ್ಣನ್ ಹೇಳಿದಂತೆ, "ತಮ್ಮ ಜೀವನದ ಅತ್ಯುತ್ತಮ ವರ್ಷಗಳನ್ನು ತಿಲಕರು ರಾಜಕೀಯ ಕ್ಷೇತ್ರದಲ್ಲಿ ಕಳೆದರು. ಅವರು ಅದಕ್ಕೆ ಹೇಳಿ ಮಾಡಿಸಿದ ವ್ಯಕ್ತಿಯಾಗಿರಲಿಲ್ಲ. ಅವರು ಸ್ವಭಾವತಃ ವಿದ್ವಾಂಸರಾಗಿದ್ದರು. ಹಾಗೂ ಆವಶ್ಯಕತೆ ಬಿದ್ದುದ್ದರಿಂದ ರಾಜಕಾರಣಿ ಯಾದರು."

ಈ ಆವಶ್ಯಕತೆ ಎಷ್ಟು ತೀವ್ರವಾಗಿತ್ತೆಂದರೆ, ರಾಷ್ಟ್ರೀಯತೆ ಅವರ ಜೀವನದ ಉಸಿರಾಗಿಬಿಟ್ಟಿತು. ಉಳಿದೆಲ್ಲ ಆಸೆಗಳು. ಆಸಕ್ತಿಗಳು, ಆಕಾಂಕ್ಷೆಗಳು ಗೌಣವಾಗಿ ಬಿಟ್ಟವು ಹಾಗೂ ಸ್ವಾತಂತ್ರ್ಯ ಸಾಧಿಸಲು ಅವರು ಸರ್ವಶಕ್ತಿಯಿಂದ ಶ್ರಮಿಸಿದರು. ಕ್ಷುದ್ರ ವಾದ ವಿಷಯಗಳನ್ನು ಬೃಹತ್ ರಾಷ್ಟ್ರೀಯ ಆಂದೋಳನಗಳನ್ನಾಗಿ ಮಾಡುವ ನೈಪುಣ್ಯ ವನ್ನು ಹೊಂದಿದ್ದರು. ಉದಾಹರಣೆಗೆ. ಪೂನಾದಲ್ಲಿ ೧೯೦೭ರಲ್ಲಿ ಮದ್ಯನಿರೋಧ ಚಳವಳಿ ನಡೆಯುತ್ತಿದ್ದಾಗ ಪೋಲೀಸ್ ವರದಿಯಲ್ಲಿ ಈ ಮಾತು ದಾಖಲಾಯಿತು: "ಪೂನಾದಲ್ಲಿ ಬ್ರಿಟಿಷ್ ಆಡಳಿತ ಸ್ಥಗಿತವಾಗಿದೆ. ಈ ಜಿಲ್ಲೆಯಲ್ಲಿ ಯಾರ ಅಧಿಕಾರ ನಡೆಯು ತ್ತದೆಂದರೆ ತಿಲಕರದು."

ಹಿಂಸೆಯ ಬಗ್ಗೆ ತಿಲಕರದು ಯಾವ ನಿಲುವಾಗಿತ್ತು? ಅವರ ನಿಧನಾನಂತರದ ಹತ್ತು ವರ್ಷಗಳಲ್ಲಿ ಈ ಪ್ರಶ್ನೆಯನ್ನು ಬಹಳ ಚರ್ಚಿಸಲಾಯಿತು. ಒಂದು ಕಡೆ, ತಿಲಕರು ತಮ್ಮ ರಾಜಕೀಯ ಚಳವಳಿಯಿಂದ ಹಿಂಸೆಯನ್ನು ಕಟ್ಟುನಿಟ್ಟಾಗಿ ದೂರವಿಟ್ಟಿದ್ದರು. ಬಂಡಾಯದ ವಿಧಾನಗಳನ್ನು ಅನುಸರಿಸಬಾರದೆಂದು ತಮ್ಮ ಎಲ್ಲ ಸಾರ್ವಜನಿಕ ಭಾಷಣ ಗಳಲ್ಲಿ ಅವರು ಸಲಹೆ ಮಾಡುತ್ತಿದ್ದರು. ಎಷ್ಟೇ ತೀವ್ರವಾಗಿ ತನಿಖೆ ಮಾಡಿದರೂ, ತಿಲಕರು ಮತ್ತು ಕ್ರಾಂತಿಕಾರಿಗಳ ಅಥವಾ ಬಾಂಬ್‌ನಲ್ಲಿ ನಂಬಿಕೆ ಇಟ್ಟವರ ನಡುವೆ ಯಾವುದೇ ಸಂಬಂಧವನ್ನು ತೋರಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಮತ್ತೊಂದು ಕಡೆ, ಕ್ರಾಂತಿಕಾರಿಗಳು ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗದಿರುವಂತೆ ಮಾಡಲು ತಿಲಕರು ಪ್ರಯತ್ನಿಸಿದರಾದರೂ, ಅವರಿಗೆ ಉಪಕಾರ ಮಾಡುವಷ್ಟು ಆಸಕ್ತಿ ಯನ್ನು ತಿಲಕರು ಹೊಂದಿದ್ದರೆಂದು ಸೂಚಿಸುವ ಸಾಕ್ಷ್ಯ ಸಾಕಷ್ಟಿದೆ. ಇಕ್ಕಟ್ಟಿನಲ್ಲಿ ಸಿಕ್ಕಿದ್ದ, ನಿಶ್ಶಸ್ತ್ರವಾಗಿದ್ದ ಭಾರತದಲ್ಲಿ, ಹಿಂಸೆ ತಿರುಗಿ ಬಿದ್ದು, ನಗ್ನ ಭಯೋತ್ಪಾದನೆಯ ಆಡಳಿತಕ್ಕೆ ದಾರಿಯಾಗುತ್ತದೆಂದು ಅವರು ತಿಳಿದಿದ್ದರು. ಗಾಂಧಿಯಂತೆ ತಿಲಕರು ಅಹಿಂಸಾವಾದಿ ಯಾಗಿರಲಿಲ್ಲ. ಆದರೆ ಆಗಿದ್ದ ಪರಿಸ್ಥಿತಿಗಳಲ್ಲಿ ಹಿಂಸೆ ಅಪರಾಧಕ್ಕಿಂತಲೂ ಕೆಟ್ಟದ್ದಾಗು ವುದು ಎಂದು ಅವರು ಮನಗಂಡಿದ್ದರು. ಅದು ಪ್ರಮಾದವಾಗುತ್ತದೆ ಎಂದು ಅವರು

ತಿಳಿದಿದ್ದರು. ಆದ್ದರಿಂದ, ವ್ಯವಹಾರ ಜ್ಞಾನ ಹೊಂದಿದ್ದ ರಾಜಕಾರಣಿಯಾಗಿದ್ದ ತಿಲಕರು ಯಾವುದೇ ಅತಿ ಸೂಕ್ಷ್ಮ ನೈತಿಕ ತರ್ಕದ ಮಾತನ್ನಾಡದೆ, ಹಿಂಸೆಯನ್ನು ವಿರೋಧಿಸಿದರು. ಎಲ್ಲ ಸಾಧ್ಯ ಮಾರ್ಗಗಳಿಂದ ಸ್ವಾತಂತ್ರ್ಯಗಳಿಸುವ ಅಂತರ್ಗತ ಹಕ್ಕನ್ನು ಒಂದು ದೇಶ ಹೊಂದಿರುವುದು ಸರಿಯಷ್ಟೆ.

ಅಧ್ಯಾಯ 20

ತಿಲಕ್, ಗೋಖಲೆ ಮತ್ತು ಗಾಂಧಿ

ತಿಲಕ್ ಮತ್ತು ಗೋಖಲೆಯವರ ಜೀವನಗಳಲ್ಲಿ ಎದ್ದು ಕಾಣುವ ಸಾದೃಶ್ಯತೆ ಇದೆ. ಇಬ್ಬರೂ ಕೊಂಕಣದಲ್ಲಿ ಜನಿಸಿದರು. ಆದರೆ ತಮ್ಮ ಜೀವನದ ಬಹುಭಾಗವನ್ನು ಪೂನಾದಲ್ಲಿ ಕಳೆದರು. ಇಬ್ಬರೂ ಉಪಾಧ್ಯಾಯರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ತಮಗಿಂತ ಹತ್ತು ವರ್ಷ ಹಿರಿಯರಾದ ತಿಲಕರ ಉದಾಹರಣೆಯಿಂದ ಸ್ಫೂರ್ತಿಗೊಂಡ ಗೋಖಲೆಯವರು ಡೆಕ್ಕನ್ ಎಜುಕೇಶನ್ ಸೊಸೈಟಿಯ ಆಜೀವ ಸದಸ್ಯರಾದರು. ಇಬ್ಬರೂ ಒಂದೇ ವೇದಿಕೆಯ ಮೇಲೆ ಮೊದಲಬಾರಿಗೆ ಸಾರ್ವಜನಿಕ ವಾಗಿ ಕಾಣಿಸಿಕೊಂಡರು. ಇಬ್ಬರೂ ದೇಶಸೇವೆಗೆ ತಮ್ಮನ್ನು ತಾವೇ ಮುಡುಪಾಗಿಟ್ಟರು. ಇಬ್ಬರೂ ಆಜೀವಪರ್ಯಂತ ಕಾಂಗ್ರೆಸ್ಸಿಗರಾಗಿದ್ದರು. ಗೋಖಲೆಯವರು ೧೯೦೫ರಲ್ಲಿ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಒಂದಕ್ಕಿಂತ ಹೆಚ್ಚು ಸಲ ತಿಲಕರಿಗೆ ಈ ಗೌರವವನ್ನು ಕೊಡುವ ಪ್ರಸ್ತಾಪವಿತ್ತು. ಆದರೆ ಅವರೆಂದೂ ಕಾಂಗ್ರೆಸ್ ಕುರ್ಚಿಯನ್ನು ಅಲಂಕರಿಸಲಿಲ್ಲ. ಇಬ್ಬರೂ ಅಪಾರ ಕೀರ್ತಿಯನ್ನೂ ಜನಪ್ರಿಯತೆಯನ್ನೂ ಗಳಿಸಿದರು. ಹಾಗೂ ಇಬ್ಬರ ಹೆಸರುಗಳೂ ರಾಷ್ಟ್ರೀಯ ಮನದಲ್ಲಿ ಅಚ್ಚಳಿಯದಂತೆ ಮೂಡಿವೆ.

ಮೇಲ್ನೋಟದ ಈ ಸಾದೃಶ್ಯ ಇವರಿಬ್ಬರನ್ನೂ ಪ್ರತ್ಯೇಕಿಸಿದ ಮೂಲಭೂತ ವ್ಯತ್ಯಾಸ ಗಳನ್ನು ಎತ್ತಿ ತೋರಿಸುತ್ತದೆ. ಈ ವ್ಯತ್ಯಾಸಗಳು ವೈಯಕ್ತಿಕ ಸ್ವಭಾವ, ದೃಷ್ಟಿಯಿಂದ ಮೊದಲುಗೊಂಡು ರಾಜಕೀಯ ವಿಧಾನಗಳು ಮತ್ತು ಆದರ್ಶಗಳವರೆಗೆ ಆಮೂಲಾಗ್ರ ವಾಗಿ ಹರಡಿದ್ದವು. ಗೋಖಲೆಯವರು ಮೃದುವಾಗಿದ್ದರು. ಸೂಕ್ಷ್ಮವಾಗಿದ್ದರು; ತಿಲಕರು ಹಠಮಾರಿಯಾಗಿದ್ದರು. ತಮ್ಮ ಸಿದ್ಧಾಂತಕ್ಕೆ ಅಂಟಿಕೊಂಡವರಾಗಿದ್ದರು. ಗೋಖಲೆ ಯವರು "ಆಹ್ಲಾದ ಸ್ನಾನ ಮಾಡಬಹುದಾದ" ಗಂಗೆಯಂತಿದ್ದರು. ತಿಲಕರು, ಹತ್ತಿರ ಹೋಗಲು ಧೈರ್ಯವಾಗದ, ಆಳ ತಿಳಿಯಲಾಗದ ಸಾಗರದಂತಿದ್ದರು. ರಾನಡೆಯವರ ಶಿಷ್ಯತ್ವದಲ್ಲಿ ಗೋಖಲೆಯವರು ಆನಂದತುಂದಿಲರಾಗಿದ್ದರು; ತಿಲಕರು ಯಾರನ್ನೂ ಗುರು ಎಂದು ಕರೆಯಲಿಲ್ಲ. ಗೋಖಲೆಯವರು ತಮ್ಮ ಅಭಿಪ್ರಾಯ ಸರಿ ಎನ್ನುವುದ ಕ್ಕಿಂತಲೂ, ಫಿರೋಜ್ ಶಾ ಮೆಹ್ತಾ ಅವರ ಅಭಿಪ್ರಾಯ ತಪ್ಪು ಎಂದಾರು; ಯಾವುದು ತಾವು ಭಾವಿಸುತ್ತಾರೋ ಅದನ್ನು ಸರಿ ಎನ್ನುವವರು ತಿಲಕರು. ಗೋಖಲೆಯವರು ಶ್ಲಾಘನೆಯನ್ನು ಬಯಸುತ್ತಿದ್ದರು; ತಿಲಕರಿಗೆ ಕರ್ತವ್ಯವೇ ಪ್ರತಿಫಲವಾಗಿತ್ತು. ಗೋಖಲೆ ಯವರು (ಶ್ರೀನಿವಾಸ ಶಾಸ್ತ್ರಿಯವರ ಮಾತುಗಳಲ್ಲಿ) ಯಾವುದಾದರೂ ಕಾಂಡದ ಸುತ್ತಲೂ ಸುತ್ತಿಕೊಳ್ಳಲೇಬೇಕಾದ ಕೋಮಲವಾದ ಬಳ್ಳಿಯಂತೆ: ತಿಲಕರು ಅನೇಕ ರೆಂಬೆಗಳನ್ನು ಹೊಂದಿದ್ದ ದೊಡ್ಡ ಆಲದ ಮರದಂತೆ.

ರಾಜಕೀಯದಲ್ಲಿ ಗೋಖಲೆಯವರು ಸೌಮ್ಯವಾದಿಯಾಗಿದ್ದರು. ಆದರೆ ಅವರು ಗುಟ್ಟಾಗಿ ಈ ವಿಶೇಷಣವನ್ನು ದ್ವೇಷಿಸಿದರು. ತಿಲಕರು ಉಗ್ರವಾದಿಯಾಗಿದ್ದರು ಹಾಗೂ

ಆ ಬಗ್ಗೆ ಹೆಮ್ಮೆ ಪಟ್ಟಿದ್ದರು. ರಾಜಕೀಯ ಲೌಕಿಕರ ಆಟವೆಂದು ತಿಲಕರು ಪರಿಗಣಿಸಿದ್ದರು. ಬ್ರಿಟಿಷ್ ಸಂಬಂಧ ಭಾರತದ ಒಳಿತಿಗೆ "ದೈವ ನಿಗೂಢವಾಗಿ ನಿಯಾಮಕ" ಮಾಡಿದ್ದು ಎಂಬುದು ಗೋಖಲೆಯವರ ರಾಜಕೀಯ ಮತದ ಮೊದಲ ಕಟ್ಟಳೆಯಾಗಿತ್ತು. ಬ್ರಿಟಿಷರು ಭಾರತವನ್ನು ಗೆದ್ದಿದ್ದನ್ನು ಸಮರ್ಥಿಸಿಕೊಳ್ಳಲು ದೈವವನ್ನು ಎಳೆದಿದ್ದಕ್ಕಾಗಿ ತಿಲಕರು ಸೌಮ್ಯವಾದಿಗಳನ್ನು ನಿರ್ದಯೆಯಿಂದ ನಗೆಪಾಟಲಿಗೆ ಗುರಿ ಮಾಡಿದರು. ಮನವೊಲಿಸು ವುದು, ಮನವಿ ಮಾಡಿಕೊಳ್ಳುವುದು, ಪ್ರತಿಭಟಿಸುವುದರಲ್ಲಿ ಗೋಖಲೆಯವರು ನಂಬಿದ್ದರು. ಆತ್ಮ ಗೌರವ, ಸ್ವಾವಲಂಬತನ ಮತ್ತು ಶಕ್ತಿ ಬೆಳೆಸಲು ತಿಲಕರು ಪ್ರಯತ್ನಿಸಿದರು.

ಹೀಗೆ, ತಮ್ಮ ಸಾರ್ವಜನಿಕ ಜೀವನದ ಪ್ರಾರಂಭದಿಂದಲೇ, ತಿಲಕ್ ಮತ್ತು ಗೋಖಲೆಯವರು ವಿರುದ್ಧ ಶಿಬಿರಗಳನ್ನು ಸೇರಿದ್ದರಲ್ಲಿ ಆಶ್ಚರ್ಯವಿಲ್ಲ. ಇಬ್ಬರೂ ಡೆಕ್ಕನ್ ಎಜುಕೇಶನ್ ಸೊಸೈಟಿಯ ಸದಸ್ಯರಾಗಿದ್ದಾಗ ಅವರ ಭಿನ್ನಾಭಿಪ್ರಾಯಗಳು ಉತ್ಕಟ ಸ್ಥಿತಿಗೆ ಬಂದವು. ಸಾರ್ವಜನಿಕ ಸಭಾದ ಕಾರ್ಯದರ್ಶಿಯಾಗಲು ಗೋಖಲೆಯವರಿಗೆ ಅನುಮತಿ ಕೊಟ್ಟಾಗ, ಸೊಸೈಟಿಗೆ ರಾಜಿನಾಮೆ ಕೊಡುವುದಕ್ಕೆ ತಿಲಕರಿಗೆ ತಕ್ಷಣ ಪ್ರಚೋದನೆ ದೊರಕಿತು. ನಂತರ, ಸಮಾಜ ಸುಧಾರಣೆಯ ವಿಷಯದ ಬಗ್ಗೆ ಅವರಿಬ್ಬರಲ್ಲೂ ಪುನಃ ಭೇದ ಉಂಟಾಯಿತು. ಗೋಖಲೆಯವರು ಸಾರ್ವಜನಿಕ ಸಭಾ ಬಿಟ್ಟು (ಅದನ್ನು ತಿಲಕರು ವಶಪಡಿಸಿಕೊಂಡರು) ಡೆಕ್ಕನ್ ಸಭಾ (ರಾನಡೆಯವರು ಸ್ಥಾಪಿಸಿದ ಪ್ರತಿಸ್ಪರ್ಧಿ ಸಂಸ್ಥೆ) ಸೇರಿದಾಗ ಅವರ, ತಿಲಕರ ನಡುವಣ ಸಂಬಂಧ ಅಂತಿಮವಾಗಿ ಮುರಿದು ಬಿತ್ತು.

ಅಲ್ಲಿಂದ ಪ್ರಾರಂಭವಾಗಿ ತಮ್ಮ ಜೀವನದ ಕೊನೆಯವರೆಗೂ ಅವರಿಬ್ಬರೂ ಪರಸ್ಪರ ವಿರುದ್ಧವಾಗಿಯೆ ಇದ್ದರು. ತಿಲಕರ ರಾಜಕೀಯ ಪ್ರಖರವಾದಂತೆಲ್ಲಾ, ಗೋಖಲೆಯವರು ತಮ್ಮ ಸೌಮ್ಯವಾದದ ಚಿಪ್ಪಿನಲ್ಲಿ ಹಿಂದೆ ಸರಿಯುತ್ತಾ ಹೋದರು. ಪಾರ್ಲಿಮೆಂಟರಿ ಚರ್ಚೆಗಳಲ್ಲಿ ಮರ್ಮಭೇದಕವಾಗಿ, ಮುನ್ನುಗ್ಗಿ, ಮಾತನಾಡುವ, ತಮ್ಮತ್ತ ಬರುವ ಮಾತಿನ ಪ್ರಹಾರವನ್ನು ತಪ್ಪಿಸಿಕೊಳ್ಳುವ ಕಲೆಯನ್ನು ಗೋಖಲೆ ಸಾಧಿಸಿದ್ದರು. ಸುಪ್ರೀಂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಅವರು ಮಾಡಿದ ತೀಕ್ಷ್ಣ ಭಾಷಣಗಳನ್ನು ಈಗಲೂ ಓದಿ ಸಂತೋಷಿಸಬಹುದು. ತಿಲಕರಾದರೋ, ದೇಶದ ಉದ್ಧಾರ ಸಾಮೂಹಿಕ ಕ್ರಿಯೆಯಿಂದ ಮಾತ್ರ ಸಾಧ್ಯ ಎಂದು ಮನಗಂಡಿದ್ದರು. "ಕಲಿಸಿ, ಚಳವಳಿ ಮಾಡಿ, ಸಂಘಟಿಸಿ" ಎಂಬುದು ಅವರ ಸೂತ್ರವಾಗಿತ್ತು.

ಗೋಖಲೆಯವರು ಸೌಮ್ಯವಾದಿಗಳಲ್ಲಿ ಒಂದು ರೀತಿಯ ಉಗ್ರವಾದಿಯಾಗಿದ್ದರು. ಹಾಗೂ ಅವರನ್ನು ಅವರ ಪಾಡಿಗೆ ಬಿಟ್ಟಿದ್ದರೆ ಅವರು ಕಾಲಕ್ರಮೇಣ ತಿಲಕರ ನಿಲುವಿಗೆ ಸಮೀಪವಾಗುತ್ತಿದ್ದರು ಎಂದು ನಂಬುವುದಕ್ಕೆ ಕಾರಣವಿದೆ. ಉದಾಹರಣೆಗೆ, ಲಾರ್ಡ್ ಕರ್ಜನ್‌ನನ್ನು ಔರಂಗಜೇಬ್ ಎಂದು ಗೋಖಲೆಯವರು ನಿರ್ದಾಕ್ಷಿಣ್ಯವಾಗಿ ಹಳಿದಿದ್ದರು. ಬನಾರಸ್ ಕಾಂಗ್ರೆಸ್‌ನಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಬಹಿಷ್ಕಾರವನ್ನು ಅವರು ಬಲವಾಗಿ ಸಮರ್ಥಿಸಿದ್ದರು. ಸರ್ ವ್ಯಾಲೆಂಟೈನ್ ಶಿರೋಲ್ ಗೋಖಲೆಯವರ ಈ ಭಾಷಣವನ್ನು ಕಟುವಾಗಿ ಟೀಕಿಸಿದ: "ಡೆಕ್ಕನ್‌ನಲ್ಲಿ ತಮ್ಮ ಉದ್ರೇಕಗೊಳಿಸುವ ವಿಧಾನಗಳು ಮತ್ತು ಪ್ರಗತಿ ವಿರೋಧಿ ಪ್ರವೃತ್ತಿಗಳ ವಿರುದ್ಧ ಸಾಹಸದಿಂದ ಆಗಾಗ ಹೋರಾಡಿದ ವ್ಯಕ್ತಿಯೇ – ಶ್ರೀ ಗೋಖಲೆ – ತಮ್ಮ ಅನುಕೂಲಕ್ಕೆ ತಕ್ಕಂತೆ ವರ್ತಿಸಿದಾಗ ಹಾಗೂ

ಬಹಿಷ್ಕಾರವನ್ನು ನಿರ್ದಿಷ್ಟ ರಾಜಕೀಯ ಉದ್ದೇಶಕ್ಕೆ ಬಳಸದ ರಾಜಕೀಯ ಆಯುಧವೆಂದು ಬನಾರಸ್‌ನಲ್ಲಿ ಅಧ್ಯಕ್ಷೀಯ ಸ್ಥಾನದಿಂದ ಶಿಫಾರ್ಸು ಮಾಡಿದಾಗ ತಿಲಕರು ಹೆಮ್ಮೆ ಪಟ್ಟುಕೊಂಡಿರಬೇಕು."

ಇಂತಹ ಟೀಕೆಗಳನ್ನು ಗೋಖಲೆಯವರು ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದರು. ಇಂತಹ ಅಡ್ಡದಾರಿಗೆಳಸುವ ಮಾತುಗಳನ್ನು ಸ್ವಲ್ಪವೂ ಸಹಿಸದಿದ್ದ ಫಿರೋಜ್‌ಶಾ ಮೆಹ್ತಾರ ಪ್ರತಿಕ್ರಿಯೆಗಳನ್ನು ಅವರು ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದರು. ಆದ್ದರಿಂದ ತಮ್ಮ ಸೌಮ್ಯವಾದಿ ಲಂಗರಿಗೆ ಹಿಂತಿರುಗಲು ಅವರಿಗೆ ಬಹಳ ಸಮಯ ಹಿಡಿಯಲಿಲ್ಲ. ಬನಾರಸ್ ಕಾಂಗ್ರೆಸ್‌ನ ನಂತರ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಹೊತ್ತಿಗೆ ಸ್ವದೇಶಿ ಮತ್ತು ಬಹಿಷ್ಕಾರದ ಬಗ್ಗೆ ಅವರ ಅಭಿಪ್ರಾಯಗಳು ಗಮನಕ್ಕೆ ಬೀಳುವಷ್ಟು ಬದಲಾಯಿಸಿದ್ದವು. ಇದರಿಂದ ಪ್ರಚೋದಿತಗೊಂಡ ತಿಲಕರು 'ಕೇಸರಿ'ಯಲ್ಲಿ ಹೀಗೆ ಬರೆದರು:

"ತಾವು ಹೊಸ ಪಕ್ಷಕ್ಕೆ ಸೇರಿಲ್ಲವೆಂದು ಗೋಖಲೆಯವರು ಹೇಳುತ್ತಾರೆ. ಕಳೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರ ಪಕ್ಷ ಒಂದು ರೀತಿಯ ರಾಜಿ ಮಾಡಿಕೊಂಡು ಮನಸ್ಸಿಲ್ಲದ ಮನಸ್ಸಿನಿಂದ ಸ್ವದೇಶಿ ಮತ್ತು ಬಹಿಷ್ಕಾರದ ಮೇಲಿನ ಗೊತ್ತುವಳಿಯನ್ನು ಅಂಗೀಕರಿಸಿತು ಎಂಬುದು ಚೆನ್ನಾಗಿ ತಿಳಿದಿರುವ ವಿಷಯವಾಗಿದೆ. ಅವರ ಪಕ್ಷದ ಸ್ವಾಭಾವಿಕ ಒಲವು ಬ್ರಿಟಿಷರೊಂದಿಗೆ ಒಳ್ಳೆಯ ಸಂಬಂಧಗಳನ್ನು ಕಾಪಾಡಿಕೊಂಡು ಬರುವ ಕಡೆಗಿದೆ ಹಾಗೂ ಮನವೊಲಿಸುವ ಕೋರಿಕೆಗಳ ವಿಧಾನದ ಮೂಲಕ ಅಧಿಕಾರ ಶಾಹಿಯಿಂದ ಕೆಲವು ವಸ್ತುಗಳನ್ನು ಪಡೆಯುವ ಕಡೆಗಿದೆ. ಕಳೆದ ಕಾಂಗ್ರೆಸ್ ಅಧಿವೇಶನದ ನಂತರ ಅವರು ಈ ಕೋಮಲ ನಿಲುವನ್ನು ಹೊಂದಿರುವುದು ಸಾಧ್ಯವಿಲ್ಲ. ಕಾಂಗ್ರೆಸ್‌ನ ಆದರ್ಶಗಳು ಮತ್ತು ಸ್ವದೇಶಿಯ ಬಗ್ಗೆ ಸಂದಿಗ್ಧತೆಯನ್ನು ಬಿಟ್ಟುಕೊಡಬೇಕು ಹಾಗೂ ಸ್ಪಷ್ಟವಾದ ನಿಲುವನ್ನು ತಾಳಬೇಕು......ನಿಜವಾಗಿಯೂ ಇದೊಂದು ಇಕ್ಕಟ್ಟಿನ ಪರಿಸ್ಥಿತಿ ಹಾಗೂ ಇದರಿಂದ ಹೊರಗಡೆ ಬರುವ ಸಾಹಸ ಕೃತ್ಯವನ್ನು ಗೋಖಲೆಯವರು ಹೇಗೆ ಸಾಧಿಸುತ್ತಾರೆ ಎಂದು ನೋಡಲು ನಾವು ಕುತೂಹಲದಿಂದಿದ್ದೆವು. ಅವರ ಭಾಷಣಗಳನ್ನು ಓದಿದಾಗ ಈ ಕುತೂಹಲಗಳು ತಣಿದವು ಹಾಗೂ ನಮಗೆ ಸಂಪೂರ್ಣವಾಗಿ ಭ್ರಮನಿರಸನವಾಗಿದೆ.

ಗೋಖಲೆಯವರು ಪಕ್ಷದ ಅಭಿಪ್ರಾಯಗಳು ಪರಸ್ಪರ ವಿರೋಧವಾಗಿರುವುದಕ್ಕೆ ಅವರನ್ನು ದೂಷಿಸಲಾಗದು. ಆ ಪಕ್ಷ ತೋರ್ಪಡಿಸಿಕೊಳ್ಳುವ ವಿಚಾರವಾದದಲ್ಲೇ ಈ ವಿರೋಧ ಅಂತರ್ಗತವಾಗಿದೆ. ತಮ್ಮ ಪಕ್ಷದ ಪರ ವಾದಿಸಲು ಅವರು ಪ್ರಯತ್ನಿಸಿದಂತೆಲ್ಲಾ, ಅವರಿಗೆ ಅದರ ದೌರ್ಬಲ್ಯದ ಬಗ್ಗೆ ಹೆಚ್ಚು ಅರಿವು ಉಂಟಾಗುತ್ತದೆ. ಅವರು ಆ ದೌರ್ಬಲ್ಯವನ್ನು ನಿವಾರಿಸಲು ಪ್ರಯತ್ನಿಸಿದರೆ. ಅವರ ವಿಚಾರವಾದ – ಅವರ ಕೃತ್ಯಗಳೊಂದಿಗೆ ಅಲ್ಲದೆ ಹೋದರೂ – ಹೊಸ ಪಕ್ಷದ ವಿಚಾರದೊಂದಿಗೆ ಹೊಂದಿಕೊಳ್ಳುತ್ತದೆ."

ಸೂರತ್ ಕಾಂಗ್ರೆಸ್‌ನ ಗೊತ್ತುವಳಿಗಳ ಕರಡನ್ನು ಸಿದ್ಧಪಡಿಸುವಲ್ಲಿ ಗೋಖಲೆಯವರು ವಹಿಸಿದ್ದ ಸಂದಿಗ್ಧ ಪಾತ್ರವನ್ನು, ಅವುಗಳಲ್ಲಿ ಪ್ರಾಮುಖ್ಯವಾದ ಬದಲಾವಣೆ

ಗಳನ್ನು ಮಾಡಿದ್ದಕ್ಕೆ ಅವರು ಕೊಟ್ಟ ಒಪ್ಪಲಾಗದ ಕಾರಣಗಳನ್ನು ಈಗಾಗಲೇ ಗಮನಿಸಲಾಗಿದೆ. ಮೆಹ್ತಾ, ಬ್ಯಾನರ್ಜಿ ಮತ್ತು ಘೋಷ್‌ರ ಆಣತಿಯ ಮೇರೆಗೆ ಹೀಗೆ ಮಾಡಲಾಯಿತೆಂದೂ, ಅನಧಿಕೃತ ಮಾರ್ಪಾಡುಗಳಿಂದ ಉಂಟಾದ ಕೋಲಾಹಲವನ್ನು ನೋಡಿದ ಮೇಲೆ ಗೋಖಲೆಯವರು ಕಲ್ಕತ್ತೆಯ ಗೊತ್ತುವಳಿಗಳಿಗೆ ಹಿಂತಿರುಗಲು ಸಮ್ಮತಿಸಿದರೆಂಬುದೂ ನಿಜವೇ. ಆದರೆ ಆ ವೇಳೆಗೆ ಅನಾಹುತ ಆಗಿಹೋಗಿತ್ತು, ಕಾಂಗ್ರೆಸ್ ಒಡೆದಿತ್ತು. ಸೌಮ್ಯವಾದಿಗಳ ಶಿಬಿರದಲ್ಲಿ, ಈ ದುಃಖಕರ ಬೆಳವಣಿಗೆಯ ಬಗ್ಗೆ ವಿಷಾದಪಟ್ಟವರೆಂದರೆ ಗೋಖಲೆಯವರು.

ಸೂರತ್ ಕಾಂಗ್ರೆಸ್ ನಡೆದ ಏಳು ತಿಂಗಳೊಳಗಾಗಿ ತಿಲಕರು ರಾಜದ್ರೋಹದ ಅಪರಾಧಕ್ಕೆ ಶಿಕ್ಷೆಗೊಳಗಾದರು. ಆಗ ಇಂಗ್ಲೆಂಡ್‌ನಲ್ಲಿದ್ದ ಗೋಖಲೆಯವರಿಗೆ ಈ ಶಿಕ್ಷೆಯ ವಿಚಾರ ತಿಳಿದು ದಿಗ್ಭ್ರಾಂತಿಯಾಯಿತು. "ಅಪರಾಧ ನಿರ್ಣಯ ಮತ್ತು ಶಿಕ್ಷೆಯಿಂದ ನಮ್ಮ ಪಕ್ಷಕ್ಕೆ ದೊಡ್ಡ ಪೆಟ್ಟಾಗುತ್ತದೆ, ಏಕೆಂದರೆ ಸರ್ಕಾರದ ವಿರುದ್ಧ ಇರುವ ಅಸಮಾಧಾನದ ಒಂದು ಭಾಗ ನಮ್ಮ ವಿರುದ್ಧ ಪ್ರಯೋಗವಾಗುತ್ತದೆ" ಎಂದು ಮನಗಾಣುವಷ್ಟು ಅವರು ಸೂಕ್ಷ್ಮಗ್ರಾಹಿಯಾಗಿದ್ದರು. ಗೋಖಲೆಯವರ ಕಾತುರ ಸಮರ್ಥನೀಯವಾಗಿತ್ತು. ಏಕೆಂದರೆ ತಿಲಕರ ಜೈಲುವಾಸಕ್ಕೆ ಗೋಖಲೆಯವರು ಕಾರಣರು ಎಂಬ ಅಭಿಪ್ರಾಯ ಹೇಗೋ ಮೂಡಿಬಿಟ್ಟಿತ್ತು. ತಿಲಕರನ್ನು ಜೈಲಿಗೆ ಹಾಕಿದ್ದರ ವಿರುದ್ಧ ಪ್ರತಿಭಟಿಸಲು ಲಂಡನ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಲು ಗೋಖಲೆಯವರು ನಿರಾಕರಿಸಿದ್ದರಿಂದ ಪರಿಸ್ಥಿತಿ ಏನೂ ಸುಧಾರಿಸಲಿಲ್ಲ. ಗೋಖಲೆಯವರ "ವಿಶ್ವಾಸಘಾತುಕತೆ"ಗಾಗಿ ಕೆಲವು ಉದ್ರಿಕ್ತ ಜನರು ಅವರನ್ನು ಕೊಲ್ಲುವ ಸಂಚನ್ನು ಹೂಡಿದರು. ಕೆಲವು ಭಾರತೀಯ ವೃತ್ತಪತ್ರಿಕೆಗಳೂ ಸಹ ಗೋಖಲೆಯವರ ವಿರುದ್ಧ ದುರ್ಭಾವನೆಯ ಲೇಖನಗಳನ್ನು ಬರೆದವು. ಇದರಿಂದ ನೊಂದ ಗೋಖಲೆಯವರು ಡಿಸೆಂಬರ್ ೨, ೧೯೦೮ರಂದು ತಮ್ಮ ಸಹೋದ್ಯೋಗಿ ಎ. ವಿ. ಪಟವರ್ಧನ್‌ರಿಗೆ ಹೀಗೆ ಬರೆದರು:

"ಸ್ಥಳದಲ್ಲಿಲ್ಲದ ಒಬ್ಬ ಮನುಷ್ಯನ ಮೇಲೆ ಹೀಗೆ ಬೀಳುವುದು ಈ ಪ್ರಕರಣದಲ್ಲಿ ಹೇಡಿತನದ ಹಾಗೂ ಅಸಹ್ಯಕರವಾದ ವರ್ತನೆ ಮತ್ತು ಭಾರತದಲ್ಲಿ ಈಗ ಇರುವ ಉದ್ರಿಕ್ತ ವಾತಾವರಣದಲ್ಲಿ ಇದು ಕೇಡಿಗತನವನ್ನು ಸೂಚಿಸುತ್ತದೆ. ಆದರೆ ಆ ಜನರ ಕೇಡೆಣಿಸುವ ಬುದ್ಧಿ ಹೊಸದೇನಲ್ಲ. ಕಳೆದ ಅನೇಕ ವರ್ಷಗಳಿಂದ ಅದು ನನ್ನ ಬೆಂಬತ್ತಿದೆ. ನನಗೆ ಮಾತ್ರ ತಿಳಿದಿರುವ ರೀತಿಯಲ್ಲಿ ವಿಷಪೂರಿತವಾಗಿ ಇದು ನನ್ನನ್ನು ಬೆಂಬತ್ತಿದೆ. ಒಂದು ಕಾಲದಲ್ಲಿ ನನಗೆ ಇದರಿಂದ ತೀವ್ರ ಮಾನಸಿಕ ಚಿಂತೆ ಆಗುತ್ತಿತ್ತು. ಆದರೆ ಈಗ ನನಗೆ ಅಷ್ಟು ತೊಂದರೆಯಾಗುತ್ತಿಲ್ಲ."

ಏನೇ ಆದರೂ ಗೋಖಲೆಯವರು ಕೆಲವು ಪತ್ರಿಕೆಗಳ ವಿರುದ್ಧ ಮಾನನಷ್ಟದ ಮೊಕದ್ದಮೆ ಹೂಡಿ, ಪರಿಹಾರಧನವನ್ನು ಪಡೆದರು. ಹೀಗೆ ಬಂದ ಹಣವನ್ನು ಅವರು ಧರ್ಮಾರ್ಥಕ್ಕೆ ಕೊಟ್ಟರು. ಪರಿಸ್ಥಿತಿ ತಣ್ಣಗಾದ ಮೇಲೆ ತಿಲಕರನ್ನು ಭಾರತಕ್ಕೆ ತಂದು ಬಿಡುಗಡೆ ಮಾಡಲಾಗುವುದೆಂದು ಅವರು ನಂಬಿದ್ದಂತೆ ತೋರುತ್ತದೆ. ಗೋಖಲೆಯವರು ಲಾರ್ಡ್ ಮಾರ್ಲೆ ಮತ್ತು ಮುಂಬೈಯ ಗವರ್ನರನಿಗೆ ವೈಯುಕ್ತಿಕವಾಗಿ ಮನವಿ ಮಾಡಿ

ಕೊಂಡರೂ ಈ ನಿರೀಕ್ಷೆ ಹುಸಿಯಾಯಿತು. ಶಿಕ್ಷೆಯ ಅವಧಿ ಪೂರ್ಣವಾದ ನಂತರವೇ ತಿಲಕರನ್ನು ಜೂನ್ ೧೯೧೪ರಲ್ಲಿ ಬಿಡುಗಡೆ ಮಾಡಲಾಯಿತು. ಆ ವೇಳೆಗೆ ಗೋಖಲೆಯವರ ಕೊನೆಗಾಲ ಸಮೀಪಿಸಿತ್ತು. ಅದು ಅವರಿಗೆ ತಿಳಿದೂ ಇತ್ತು. ಹಿಂದಿನ ಅಧ್ಯಾಯವೊಂದರಲ್ಲಿ ಗಮನಿಸಲಾಗಿರುವಂತೆ. ಕಾಂಗ್ರೆಸ್ ಏಕತೆಗೆ ತಿಲಕರು ನಡೆಸಿದ ಪ್ರಯತ್ನಗಳ ಮೇಲೆ ಫಿರೋಜ್‌ಶಾ ಮೆಹ್ತಾ ತಣ್ಣೀರೆರಚಿದರೂ ಗೋಖಲೆಯವರು ಅವುಗಳ ಬಗ್ಗೆ ಆಸ್ಥೆಯ ಪ್ರತಿಕ್ರಿಯೆ ತೋರಿದ್ದರು. ಸಾಯುವುದಕ್ಕೆ ಕೇವಲ ಹದಿನೈದು ದಿನಗಳ ಮುನ್ನ, ಶ್ರೀಮತಿ ಬೆಸೆಂಟ್ ರೂಪಿಸಿದ ಮಾರ್ಗದಲ್ಲಿ ತಿಲಕರೊಂದಿಗೆ ರಾಜಿ ಮಾಡಿಕೊಳ್ಳಲು ಪ್ರಯತ್ನಿಸಬೇಕೆಂದು ಗೋಖಲೆಯವರು ಎಸ್. ಎಸ್. ಸೆಟ್ಲೂರ್‌ರನ್ನು ಕೋರಿದರು:

"ಅವರು (ತಿಲಕ್) ಬೇಗ ಅಥವಾ ತಡವಾಗಿಯಾದರೂ ಕಾಂಗ್ರೆಸ್ಸನ್ನು ವಶಪಡಿಸಿಕೊಳ್ಳುತ್ತಾರೆ ಎಂಬುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ ಎಂದು ನನಗೆ ಗೊತ್ತು. ಅದನ್ನು ತಡೆಯುವುದು ಸಾಧ್ಯವಿಲ್ಲ. ಅವರ ಪಕ್ಷದ ಹೆಚ್ಚು ವಿವೇಕಯುತ ಜನರ ಮುಂದೆ ನನ್ನ ಸಲಹೆಯನ್ನಿಡಿ ಹಾಗೂ ತಿಲಕರು ಅದನ್ನು ಒಪ್ಪಿಕೊಳ್ಳುವಂತೆ ಮಾಡಿ. ಭವಿಷ್ಯದಲ್ಲಿ ಏನೇ ಆದರೂ, ಕಾಂಗ್ರೆಸ್‌ನ ಬಿರುಕು ಕೊನೆಗೊಂಡಿತು ಎಂಬ ಸಮಾಧಾನದಿಂದ ನಾನು ಹೋಗುತ್ತೇನೆ."

ಅವರಿಗೆ ಆ ಸಮಾಧಾನ ದೊರೆಯಲಿಲ್ಲ. ಗೋಖಲೆ ಫೆಬ್ರವರಿ ೧೯. ೧೯೧೫ರಂದು ನಿಧನರಾದರು. ಗೋಖಲೆ ಮತ್ತು ತಿಲಕರಿಬ್ಬರೂ ತಮ್ಮ ಪಾತ್ರಗಳನ್ನು ನಿಷ್ಠೆಯಿಂದ ಮತ್ತು ಚೆನ್ನಾಗಿ ವಹಿಸಿದರು. ಹಾಗೂ ಅವರಿಬ್ಬರೂ ಕೂಡಿ ಏನು ಸಾಧಿಸಬಹುದಾಗಿತ್ತು ಎಂದು ಯೋಚಿಸುವುದು ವ್ಯರ್ಥ. ಜೀವನದುದ್ದಕ್ಕೂ ಇಬ್ಬರೂ ಘರ್ಷಣೆಯಲ್ಲೇ ತೊಡಗಿದ್ದರೂ. ಇಬ್ಬರಿಗೂ ಪರಸ್ಪರ ಅಪ್ಪಟ ರಾಷ್ಟ್ರಪ್ರೇಮ ಮತ್ತು ಉನ್ನತ ಸಾಮರ್ಥ್ಯಗಳ ಬಗ್ಗೆ ಗೌರವವಿತ್ತು. ಕಾಂಗ್ರೆಸ್ ನಿಯೋಗದ ಸದಸ್ಯರಾಗಿ ಇಂಗ್ಲೆಂಡ್‌ನಲ್ಲಿ ಭಾರತದ ಆಶೋತ್ತರಗಳ ಬಗ್ಗೆ ದಕ್ಷತೆಯಿಂದ ವಾದಿಸಿ ೧೯೦೫ರಲ್ಲಿ ಗೋಖಲೆಯವರು ಹಿಂದಿರುಗಿದಾಗ, ಅವರಿಗೆ ಪೂನಾದಲ್ಲಿ ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಲು ತಿಲಕರು ಪ್ರಧಾನ ಪಾತ್ರ ವಹಿಸಿದ್ದರು. ಗೋಖಲೆಯವರ ಸಾವಿನ ಸುದ್ದಿ ತಿಳಿದಾಗ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಿಂಹಗಢದಿಂದ ಅವರು ಪೂನಾಗೆ ಧಾವಿಸಿದರು. ಅವರು 'ಕೇಸರಿ'ಯಲ್ಲಿ ಗೋಖಲೆಯವರ ಬಗ್ಗೆ ಹೀಗೆ ಬರೆದರು:

"ಗೋಖಲೆಯವರ ಬುದ್ಧಿಮತ್ತೆ. ಕಾರ್ಯತತ್ಪರತೆ. ಅಥವಾ ಅವರ ಸೌಜನ್ಯದಂತಹ ಅನೇಕ ಗುಣಗಳಿಗಾಗಿ ಜನರು ಅವರನ್ನು ಪ್ರಶಂಸಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಇವು ಕೇವಲ ಬಾಹ್ಯ ವಸ್ತುಗಳು ಹಾಗೂ ಇವುಗಳ ಬಗ್ಗೆ ಅಭಿಪ್ರಾಯ ಭೇದ ಇರಬಹುದು. ಅವರಿಗೆ ಈ ಗುಣಗಳ ಬೆಳವಣಿಗೆಗೆ ಸಹಾಯವಾದ ಆಂತರಿಕ ಚಿಲುಮೆಯ ಬಗ್ಗೆ ಯಾವುದೇ ಅಭಿಪ್ರಾಯ ಭೇದ ಇರುವುದು ಸಾಧ್ಯವಿಲ್ಲ. ದೇಶದ ಧ್ಯೇಯೋದ್ದೇಶಕ್ಕಾಗಿ ನಿಸ್ವಾರ್ಥದಿಂದ ತಮ್ಮನ್ನು ತಾವೇ ಮುಡುಪಾಗಿಟ್ಟಿದ್ದು ಅವರ ಜೀವನದ ಕರ್ತೃತ್ವವಾಗಿತ್ತು. ಜೀವನದ ಸುಖಸಂತೋಷಗಳನ್ನು ಅನುಭವಿಸಿ, ಅಪಾರ ಹಣ ಗಳಿಸಿದ ನಂತರ ಸಾರ್ವಜನಿಕ ಸೇವೆಗೆ ಸೇರುವವರ ಬಗ್ಗೆ ಯಾರೂ ಅಷ್ಟು ಗಮನಿಸುವುದಿಲ್ಲ. ಆದರೆ ಅಂತಹ ಮರುಳುಗೊಳಿಸುವ ಲೌಕಿಕ ಲಾಭಗಳಿಗೆ ಜೀವನದ ಹೊಸ್ತಿಲಲ್ಲಿ

ದ್ದಾಗಲೇ ಉದ್ದೇಶಪೂರ್ವಕವಾಗಿ ಬೆನ್ನು ಮಾಡಿದ ಒಬ್ಬ ಮನುಷ್ಯನಿಗೆ ನಮ್ಮ ಗೌರವ ಸಲ್ಲಬೇಕು. ಅಂತಹ ಮನುಷ್ಯ ನಿಜವಾಗಿಯೂ ಧನ್ಯ. ಗೋಖಲೆಯವರು ಅಂತಹ ಮನುಷ್ಯರಾಗಿದ್ದರು."

ಗೋಖಲೆಯವರಿಗೂ ತಿಲಕರ ಬಗ್ಗೆ ಆಳವಾದ ಮತ್ತು ನೈಜವಾದ ಗೌರವವಿತ್ತು. ತಮ್ಮ ಮುಂದೆ ತಿಲಕರನ್ನು ಯಾರೂ ವೈಯಕ್ತಿಕವಾಗಿ ಟೀಕಿಸುವುದಕ್ಕೆ ಗೋಖಲೆ ಯವರು ಹೇಗೆ ಅವಕಾಶ ಕೊಡುತ್ತಿರಲಿಲ್ಲ ಎಂದು ಶ್ರೀನಿವಾಸ ಶಾಸ್ತ್ರಿಯವರು ಹೇಳಿದ್ದಾರೆ; ಗೋಖಲೆಯವರು ಹೀಗೆನ್ನುತ್ತಿದ್ದರು: "ತಿಲಕರ ತಪ್ಪುಗಳು ಅನೇಕ ಇರಬಹುದು. ನಾನು ಅವರೊಂದಿಗೆ ಅನೇಕ ಮುಯ್ಯಿಗಳನ್ನು ತೀರಿಸಿಕೊಳ್ಳಬೇಕಾಗಿದೆ. ಆದರೆ ನೀವು ಯಾರು? ನೀವು ಅವರಿಗೆ ಎಲ್ಲೂ ಸಮೀಪದಲ್ಲಿಲ್ಲ. ಅವರೊಬ್ಬ ಮಹಾನ್ ಪುರುಷ. ಅವರ ದೈವದತ್ತ ಯೋಗ್ಯತೆಗಳು ಪ್ರಥಮ ದರ್ಜೆಯವು. ದೇಶದ ಸೇವೆಗಾಗಿ ಅವರು ತಮ್ಮ ಯೋಗ್ಯತೆಗಳನ್ನು ಬೆಳೆಸಿದ್ದಾರೆ. ಅವರ ವಿಧಾನಗಳನ್ನು ನಾನು ಒಪ್ಪುವುದಿಲ್ಲವಾದರೂ ಅವರ ಉದ್ದೇಶಗಳನ್ನು ನಾನೆಂದೂ ಪ್ರಶ್ನಿಸುವುದಿಲ್ಲ. ದೇಶ ಕ್ಕಾಗಿ ಅಷ್ಟೊಂದು ತ್ಯಾಗ ಮಾಡಿದವರು ಇನ್ಯಾರೂ ಇಲ್ಲ; ತಿಲಕರು ಎದುರಿಸಿದಂತಹ ಸರ್ಕಾರದ ಪ್ರಬಲ ವಿರೋಧವನ್ನು ಬೇರೆ ಯಾರೂ ತಮ್ಮ ಜೀವನದಲ್ಲಿ ಎದುರಿಸಿಲ್ಲ; ಯಾವ ಮನುಷ್ಯನೂ ತೋರಿಸಿಲ್ಲದಂತಹ ಎಷ್ಟು ಅಪರೂಪವಾದ ಛಾತಿ, ತಾಳ್ಮೆ ಮತ್ತು ಕೆಚ್ಚನ್ನು ಅವರು ತೋರಿದರೆಂದರೆ, ತಮ್ಮ ಹೋರಾಟದ ಕಾಲದಲ್ಲಿ ಅನೇಕ ಸಲ ಅವರು ತಮ್ಮಲ್ಲಿದ್ದುದನ್ನೆಲ್ಲಾ ಕಳೆದುಕೊಂಡಿದ್ದರೂ, ತಮ್ಮ ಅದಮ್ಯ ಸಂಕಲ್ಪದಿಂದ ಮತ್ತೆ ಅದನ್ನು ಒಗ್ಗೂಡಿಸಿದರು."

ರಾಜಕೀಯ ಆವಶ್ಯಕತೆಗಳಿಗಿಂತಲೂ ಹೆಚ್ಚಾಗಿ ವಿಚಾರವಾದಗಳ ಭೇದದಿಂದಾಗಿ ತಿಲಕ್ ಮತ್ತು ಗೋಖಲೆಯವರು ಬೇರೆಬೇರೆಯಾಗಿದ್ದರು. ಅವರು ಬೇರೆಬೇರೆ ಕಕ್ಷೆಗಳಲ್ಲಿ ತಿರುಗುತ್ತಿದ್ದಂತೆ ತೋರುತ್ತಿತ್ತು. ಆದರೆ ಸಾರಭೂತವಾಗಿ ಅವರ ಪಾತ್ರಗಳು ಒಂದಕ್ಕೊಂದು ಪೂರಕವಾಗಿದ್ದವು. ಅವರು ಪರಸ್ಪರ ಕೈಗಳನ್ನು ಬಲಪಡಿಸಿದರು. ಆ ದಿನಗಳಲ್ಲಿ ದೇಶದ ಧ್ಯೇಯೋದ್ದೇಶಗಳ ಸಾಧನೆಯಲ್ಲಿ ನೆರವಾಗುವುದಕ್ಕೆ ರಾಜಕೀಯ ಚಳವಳಿಯಷ್ಟೇ ಸಂವಿಧಾನಿಕ ಪ್ರಯತ್ನಗಳೂ ಸಹ ಆವಶ್ಯಕವಾಗಿದ್ದವು. ಭಾರತದಲ್ಲಿ ಮಾಡಿದ ತಪ್ಪುಗಳ ಬಗ್ಗೆ ಬ್ರಿಟನ್‌ನ ಮನಸಾಕ್ಷಿಯನ್ನು ಎಚ್ಚರಿಸುವುದಕ್ಕೆ ದಾದಾಬಾಯಿ ನವರೋಜಿಯವರಂತೆ ಗೋಖಲೆಯವರೂ ಕಾರಣರಾಗಿದ್ದರು. ಅವರ ಸ್ವಭಾವ ಸಹಜ ವಾದ ಸುಸಂಸ್ಕೃತಿ ಮತ್ತು ನಯವಾದ ವಿವೇಚನೆ ಬ್ರಿಟಿಷ್ ಅಭಿಪ್ರಾಯದ ಎಲ್ಲ ವರ್ಗಗಳ ಮನಸ್ಸನ್ನು ಗೆದ್ದಿತ್ತು ಹಾಗೂ ಲಾರ್ಡ್ ಕರ್ಜನ್ ಮತ್ತು ಲಾರ್ಡ್ ಮಾರ್ಲೆ ಅವರಂತಹ ಭಿನ್ನಭಿನ್ನ ವ್ಯಕ್ತಿಗಳ ಗೌರವವನ್ನೂ ತಿಲಕರು ಗೆದ್ದಿದ್ದರು. ಅವರು ಬ್ರಿಟನ್‌ಗೆ ಏಳು ಸಲ ಭೇಟಿ ನೀಡಿದಾಗಲೂ ಭಾರತದ ಬಗ್ಗೆ ಅನುಕೂಲ ವಾತಾವರಣ ವನ್ನು ಸೃಷ್ಟಿಸಲು ತೀವ್ರವಾಗಿ ಶ್ರಮಿಸಿದರು. ದೇಶದ ಸೇವೆಗೆ ಅವರು ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಅವರು ಜೈಲುವಾಸವನ್ನು ಅನುಭವಿಸಿರಲಿಕ್ಕಿಲ್ಲ. ಆದರೆ ಅಪಮಾನ ಮತ್ತು ಅವಮರ್ಯಾದೆಯನ್ನು ಅವರು ಒಂದಕ್ಕಿಂತ ಹೆಚ್ಚು ಸಲ

ಅನುಭವಿಸಬೇಕಾಯಿತು. ಗೋಖಲೆಯವರು ಭಾರತದ ನಿಜವಾದ ಸೇವಕರಾಗಿದ್ದರು. ರಾಷ್ಟ್ರ ನಿರ್ಮಾಪಕರಾಗಿದ್ದರು.

II

"ಒಬ್ಬ ರಾಜಕೀಯ ಕಾರ್ಯಕರ್ತ ಹೇಗಿರಬೇಕು ಎಂದು ನಾನಿಚ್ಛಿಸಿದ್ದೇನೋ. ಹಾಗೆ ಗೋಖಲೆಯವರು ನನಗೆ ಕಂಡರು – ಸ್ಫಟಿಕದಂತೆ ಶುಭ್ರ. ಕುರಿಮರಿಯಂತೆ ಕೋಮಲ, ಸಿಂಹದಂತೆ ಸಾಹಸಿ ಮತ್ತು ಮೇರೆ ಮೀರಿದ ಉದಾರಿ" ಎಂದು ಗಾಂಧೀಜಿ ಗೋಖಲೆಯವರ ಬಗ್ಗೆ ಹೇಳಿದರು. ಡಿಸೆಂಬರ್ ೧೯೧೪ರಲ್ಲಿ ದಕ್ಷಿಣ ಆಫ್ರಿಕದಿಂದ ಅಂತಿಮವಾಗಿ ಹಿಂತಿರುಗಿದಾಗ ಗಾಂಧೀಜಿ ತಕ್ಷಣ ಅವರತ್ತ ತಿರುಗಿದ್ದರು. ಗಾಂಧೀಜಿ ಹಿಂತಿರುಗಿದ ಎರಡೇ ತಿಂಗಳಲ್ಲಿ ಗೋಖಲೆಯವರು ನಿಧನರಾಗದೆ ಇದ್ದಿದ್ದರೆ ಅವರ ಜೀವನ ಯಾವ ದಿಕ್ಕನ್ನು ಅನುಸರಿಸುತ್ತಿತ್ತು ಎಂಬುದು ಭಾರತೀಯ ಇತಿಹಾಸದ ಊಹೆಗೆ ನಿಲುಕದ ಪ್ರಶ್ನೆ. ಕಲ್ಕತ್ತ ಅಧಿವೇಶನ ನಡೆಯುವುದಕ್ಕೆ ಒಂದು ತಿಂಗಳ ಮೊದಲು ತಿಲಕರು ನಿಧನರಾಗದೆ ಇದ್ದಿದ್ದರೆ ಆ ಅಧಿವೇಶನದಲ್ಲಿ ಅಸಹಕಾರದ ಮೇಲಿನ ವಿಧಿನಿಶ್ಚಿತ ಗೊತ್ತುವಳಿಯ ಬಗ್ಗೆ – ಈ ಗೊತ್ತುವಳಿ ಗಾಂಧಿಯುಗದ ಪ್ರಾರಂಭವನ್ನು ಸಾರಿತು – ಅವರು ಯಾವ ನಿಲುವು ತಾಳುತ್ತಿದ್ದರು ಎಂಬುದೂ ಇಂತಹುದೇ ಪ್ರಶ್ನೆಯಾಗಿದೆ.

ಗಾಂಧೀಜಿಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಸೇರಲು ಉತ್ಸುಕರಾಗಿದ್ದರು ಎಂಬುದು ಗೋಖಲೆಯವರು ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಕಂಡಿರಬಹುದು ಎಂಬುದು ಚೆನ್ನಾಗಿ ತಿಳಿದಿರುವ ವಿಷಯವಾಗಿದೆ. ಗಾಂಧೀಜಿಯವರನ್ನು ಸೊಸೈಟಿಗೆ ಸೇರಿಸಿಕೊಳ್ಳುವ ಬಗ್ಗೆ ಸದಸ್ಯರು ಅನುಮಾನ ವ್ಯಕ್ತಪಡಿಸಿದ್ದರಿಂದ ಅವರ ಆ ಇಚ್ಛೆ ಪೂರ್ತಿಯಾಗಲಿಲ್ಲ. ಹಾಗೂ ಅವರು ತಮ್ಮದೇ ಮಾರ್ಗವನ್ನು ರೂಪಿಸಿಕೊಳ್ಳಲು ಅವರಿಗೆ ಸ್ವಾತಂತ್ರ್ಯ ದೊರೆಯಿತು. ಮುಂದಿನ ಹನ್ನೆರಡು ತಿಂಗಳಲ್ಲಿ ಗಾಂಧೀಜಿ ದೇಶದಲ್ಲೆಲ್ಲಾ ಸುತ್ತಾಡಿ. ಅನೇಕ ಜನರನ್ನು ಸಂಧಿಸಿದರೂ. ಗೋಖಲೆಯವರ ಆಣತಿಯಂತೆ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲಿಲ್ಲ. ಅಲ್ಲಿಂದಾಚೆಗೆ ಅವರು ತಮ್ಮ ಸ್ವಂತ ಅರಿವು ಮತ್ತು ಅಂತರ್ದೃಷ್ಟಿ ಸೂಚಿಸಿದಂತೆ ನಡೆದುಕೊಂಡರು.

ಗೋಖಲೆಯವರನ್ನು ಗಾಂಧೀಜಿ ತಮ್ಮ ರಾಜಕೀಯ ಗುರು ಎಂದು ಹೇಳಿಕೊಂಡರೂ. ಆ ಸಂಬಂಧ ಕೇವಲ "ವೈಯಕ್ತಿಕ ವಿಷಯ"ವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತದ ಸ್ಥಾನ ಏನಿರಬೇಕೆಂಬ ಬಗ್ಗೆ ಗೋಖಲೆಯವರ ಅಭಿಪ್ರಾಯಗಳನ್ನೇ ಗಾಂಧೀಜಿ ಹೊಂದಿದ್ದರೂ ಅವರ ರಾಜಕೀಯ ಬೆಳವಣಿಗೆಗೂ ಅದಕ್ಕೂ ಏನೂ ಸಂಬಂಧವಿರಲಿಲ್ಲ. ಜೂನ್ ೧೯೧೫ರಲ್ಲಿ ಬ್ರಿಟಿಷ್ ದೊರೆ ಪ್ರಕಟಿಸಿದ ಗೌರವಗಳ ಪಟ್ಟಿಯಲ್ಲಿ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಗಾಂಧೀಜಿ ಕೈಸರ್-ಇ-ಹಿಂದ್ ಪದಕವನ್ನು ಗಳಿಸಿದರು. ಅವರು ತಮ್ಮ ಗುರುಗಳ ನೆನಪಿಗೆ ಶ್ರದ್ಧಾವಂತರಾಗಿ ಉಳಿದರು. ತಿಲಕರ ಬಗ್ಗೆ ಪೂಜ್ಯಭಾವನೆಯ ಮಟ್ಟಿಗೆ ಗೌರವವನ್ನು ಹೊಂದಿದ್ದರೂ ಅವರ ಆಕರ್ಷಣೆಗೆ ಒಳಗಾಗಲಿಲ್ಲ.

ಗಾಂಧೀಜಿಯುವರು ತಾವು ಗೋಖಲೆಯುವರ ಶಿಷ್ಯ ಎಂದು ಹೇಳಿಕೊಂಡರು, ೧೯೨೧ರಲ್ಲಿ ತಿಲಕರಿಗೆ ಅತ್ಯಂತ ಪ್ರಿಯುವಾಗಿದ್ದ ಧ್ಯೇಯಸಾಧನೆಗೆ ಅವರು ತೊಡಗಿದ್ದಾರೆ ಎಂಬ ಸಣ್ಣ ಆಕ್ಷೇಪವನ್ನು ಅವರು ಅಲ್ಲಗೆಳೆದರು. "ತಿಲಕರ ಅನುಯಾಯಿಯಾಗಿರುವ ಗೌರವವನ್ನು ನಾನು ಪಡೆದಿದ್ದೇನೆ ಎಂದು ಹೇಳಿಕೊಳ್ಳಲಾರೆ. ಅವರ ಅತ್ಯುತ್ತಮ ಶಿಷ್ಯರು ಎಷ್ಟು ನೈಜವಾಗಿ ಅವರ ಸಂದೇಶವನ್ನು ಸಾರಿದ್ದಾರೊ ಅಷ್ಟೇ ನೈಜವಾಗಿ ನಾನೂ ಸಾರುತ್ತೇನೆ ಎಂದು ಅತ್ಯಂತ ನಮ್ರತೆಯಿಂದ ನಾನು ಹೇಳಿಕೊಳ್ಳುತ್ತೇನೆ. ಆದರೆ ನನ್ನ ವಿಧಾನ ತಿಲಕರ ವಿಧಾನ ಅಲ್ಲ ಎಂಬ ಅರಿವು ನನಗಿದೆ" ಎಂದು ಗಾಂಧೀಜಿ ಬರೆದರು.

ಹೀಗೆ ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದರೂ, ಗೋಖಲೆಯುವರದ್ದಲ್ಲ. ತಿಲಕರ ಅಧಿಕಾರವಸ್ತ್ರ ಗಾಂಧೀಜಿಯುವರ ಮೇಲೆ ಬಿತ್ತು ಎಂದು ಕೆಲವು ರಾಜಕೀಯ ವ್ಯಾಖ್ಯಾನ ಕಾರರು ಹೇಳಿರುವುದು ಮಿಥ್ಯೆಯ ಮಾತನ್ನಾಡಿದಂತೆ. ತಿಲಕರಾಗಲಿ ಗಾಂಧೀಜಿಯಾಗಲಿ ಯಾರು ಬಿಟ್ಟ ಸ್ಥಾನವನ್ನೂ ಗಳಿಸಲಿಲ್ಲ. ನೆಪೋಲಿಯನ್ ತನ್ನ ಖಡ್ಗದಿಂದ ಕಿರೀಟವನ್ನು ಎತ್ತಿಕೊಂಡಂತೆ, ಅವರು ತಮ್ಮ ಸ್ವಂತ ಉತ್ಸಾಹ ಮತ್ತು ಶ್ರಮದಿಂದ ರಾಷ್ಟ್ರೀಯ ನಾಯಕತ್ವ ಗಳಿಸಿದರು. ತಿಲಕ್ ಮತ್ತು ಗಾಂಧೀಜಿಯುವರ ರಾಜಕೀಯದ ನಡುವೆ ಸಾದೃಶ್ಯ ಮತ್ತು ಅವಿಚ್ಛಿನ್ನತೆಯುನ್ನು ಹುಡುಕುವುದು ಕೇವಲ ಪಂಡಿತರು ನಡೆಸುವ ಕಾರ್ಯ. ಇಬ್ಬರೂ ತಮ್ಮತಮ್ಮ ದೃಷ್ಟಿಗೆ ತಕ್ಕಂತೆ ನಡೆದುಕೊಂಡರು.

ಗೋಖಲೆ ಮತ್ತು ತಿಲಕರ ಜೀವನಗಳು ಸುಮಾರು ಮೂವತ್ತು ವರ್ಷಗಳು ಸಮಾನಾಂತರವಾಗಿ ನಡೆದವು. ಆದರೆ ತಿಲಕ್ ಮತ್ತು ಗಾಂಧೀಜಿ ಒಟ್ಟಿಗೆ ಐದೂವರೆ ವರ್ಷ ದುಡಿದರು. ಈ ಪೈಕಿ ಹದಿಮೂರು ತಿಂಗಳು ತಿಲಕರು ಶಿರೋಲ್ ಪ್ರಕರಣಕ್ಕಾಗಿ ಇಂಗ್ಲೆಂಡ್‌ನಲ್ಲಿದ್ದರು. ಈ ನಾಲ್ಕೂವರೆ ವರ್ಷಗಳಲ್ಲೂ ಅವರು ಲಕ್ನೊದಲ್ಲಿ (೧೯೧೬) ಮತ್ತು ಅಮೃತಸರದಲ್ಲಿ (೧೯೧೭) ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಮಾತ್ರ ಮತ್ತು ಇನ್ನು ಕೆಲವು ವೇದಿಕೆಗಳಲ್ಲಿ ಒಟ್ಟಿಗೆ ಸೇರಿದ್ದರು. ಲಕ್ನೊ ಕಾಂಗ್ರೆಸ್‌ನಲ್ಲಿ ತಿಲಕರು ಅತ್ಯಂತ ಪ್ರಧಾನ ವ್ಯಕ್ತಿಯಾಗಿದ್ದರು ಹಾಗೂ ಅಲ್ಲಿ ವಿಷಯುಗಳ ಸಮಿತಿಯುಲ್ಲಿ ಗಾಂಧೀಜಿ ಯುವರಿಗೆ ಸ್ಥಾನ ದೊರಕಿಸಲು ವಿಶೇಷ ಮುತುವರ್ಜಿ ವಹಿಸಿದರು. ಕಲ್ಕತ್ತೆ ಮತ್ತು ಅಮೃತಸರದ ಅಧಿವೇಶನಗಳಲ್ಲೂ ಸಹ ತಿಲಕರು ಸಾರ್ವಜನಿಕ ಕಣ್ಣಿನಲ್ಲಿ ಅತ್ಯಂತ ಪ್ರಮುಖ ವ್ಯಕ್ತಿಯಾಗಿದ್ದರು. ಆದರೆ ಮಹಾತ್ಮ ಗಾಂಧಿ ಕಿ ಜೈ ಎಂಬ ಕೂಗು ಅಮೃತ ಸರದಲ್ಲಿ ಕೇಳಲು ಪ್ರಾರಂಭವಾಗಿತ್ತು.

ಗಾಂಧೀಜಿ ಕಾಂಗ್ರೆಸ್ ಸಂಸ್ಥೆಯ ಮೂಲಕ ಭಾರತದ ರಾಜಕೀಯ ದೃಶ್ಯದಲ್ಲಿ ಮೂಡಲಿಲ್ಲ. ಸತ್ಯಾಗ್ರಹದ ಹೊಸ ಆಯುಧದಿಂದ ಅವರು ವಿರಂಗಾಂ. ಚಂಪಾರಣ್, ಖೇಡ ಮತ್ತು ಅಹಮದಾಬಾದ್‌ಗಳಲ್ಲಿ ಒಂದಾದ ಮೇಲೊಂದು ಗಳಿಸಿದ ವಿಜಯುಗಳಿಂದ ಅವರು ಈ ಸ್ಥಾನ ಮುಟ್ಟಿದರು. ರೌಲಟ್ ಕಾಯಿದೆಗಳ ವಿರುದ್ಧ ಪ್ರತಿಭಟಿಸಲು ಅವರು ಕೊಟ್ಟ ಕರೆಗೆ ದೊರೆತ ಅದ್ಭುತ ಪ್ರತಿಕ್ರಿಯೆ ಅವರಿಗೆ ರಾಷ್ಟ್ರೀಯ ನಾಯಕತ್ವವನ್ನು ಕೊಟ್ಟಿತು. ಸತ್ಯ, ಪ್ರೇಮ, ಅಹಿಂಸೆ, ಕಷ್ಟಸಹಿಷ್ಣುತೆ ಮತ್ತು ಆತ್ಮಬಲ ಮುಂತಾದ ವಿಚಿತ್ರ ಭಾಷೆಯಲ್ಲಿ ಮಾತನಾಡುವ ಪ್ರವಾದಿಯಾಗಿದ್ದರು ಅವರು. ಸಮಾನ ಸ್ಥಾನ ದವರಿಗೆ ಪತ್ರ ಬರೆದಂತೆ ವೈಸ್‌ರಾಯ್‌ಗೆ ಪತ್ರ ಬರೆದರು, ಜನರನ್ನು ಅವರ ತಪ್ಪು

ವರ್ತನೆಗೆ ಛೀಮಾರಿ ಹಾಕಿದರು. "ಹಿಮಾಲಯದಷ್ಟು ಪ್ರಮಾದ"ಗಳನ್ನು ಮಾಡಿದ್ದನ್ನು ಒಪ್ಪಿಕೊಂಡರು. ಹಾಗೂ ಇವೆಲ್ಲವುಗಳಲ್ಲಿ ಅವರು ಸಫಲತೆಯನ್ನು ಪಡೆದರು. ಭಾರತದ ರಾಜಕೀಯದಲ್ಲಿ ಹಿಂದೆಂದೂ ಇಂಥದ್ದು ಕಂಡಿರಲಿಲ್ಲ. ಕೇಳಿರಲಿಲ್ಲ.

ಬ್ರಿಟಿಷ್ ಸರ್ಕಾರದೊಡನೆ ತಮ್ಮ ಮೊದಲ ಅಹಿಂಸಾತ್ಮಕ ಕಲಹಗಳಲ್ಲಿ ಗಾಂಧೀಜಿ ತೊಡಗಿದ್ದ ಸಮಯದಲ್ಲೇ ಆ ಸರ್ಕಾರದ ಸೇನೆಗೆ ಭರ್ತಿ ಮಾಡಿಕೊಳ್ಳುವ ಸಾರ್ಜಂಟರಂತೆಯೂ ನಡೆದುಕೊಳ್ಳುತ್ತಿದ್ದರು! ತಿಲಕರನ್ನು ಆಹ್ವಾನಿಸದಿದ್ದ ದಿಲ್ಲಿ ಯುದ್ಧ ಸಮ್ಮೇಳನ ಮುಗಿದ ನಂತರ ಗಾಂಧೀಜಿ ವೈಸರಾಯ್ ಲಾರ್ಡ್ ಶೆಮ್ಸ್‌ಫೋರ್ಡ್‌ರಿಗೆ ಮೇ ೧೯೧೮ರಲ್ಲಿ ಹೀಗೆ ಪತ್ರ ಬರೆದರು: "ನನ್ನ ದೇಶದ ಜನರು ಇಟ್ಟ ಹೆಜ್ಜೆಗಳನ್ನು ಹಿಂದಕ್ಕೆ ಇಡುವಂತೆ ಮಾಡುವುದು ನನಗೆ ಸಾಧ್ಯವಿದ್ದಿದ್ದರೆ, ಕಾಂಗ್ರೆಸ್‌ನ ಎಲ್ಲ ಗೊತ್ತುವಳಿಗಳನ್ನು ಅವರು ಹಿಂದೆಗೆದುಕೊಳ್ಳುವಂತೆ ಮಾಡುತ್ತಿದ್ದೆ ಹಾಗೂ ಯುದ್ಧ ನಿಲ್ಲುವವರೆಗೂ "ಹೋಂ ರೂಲ್" ಅಥವಾ "ಜವಾಬ್ದಾರಿಯುತ ಸರ್ಕಾರ" ಎಂಬ ಪದಗಳನ್ನು ಪಿಸುಮಾತಿನಲ್ಲೂ ಆಡದಂತೆ ಮಾಡುತ್ತಿದ್ದೆ. ಬ್ರಿಟಿಷ್ ಸಾಮ್ರಾಜ್ಯದ ಗಂಡಾಂತರದ ಸಮಯದಲ್ಲಿ ಭಾರತ ತನ್ನ ಎಲ್ಲ ಶಕ್ತ ಜನರನ್ನು ಬಲಿದಾನ ಮಾಡುವಂತೆ ಮಾಡುತ್ತಿದ್ದೆ... ನಾನು ಇಂಗ್ಲಿಷ್ ದೇಶವನ್ನು ಪ್ರೀತಿಸುವುದರಿಂದ ಹಾಗೂ ಇಂಗ್ಲಿಷ್‌ನವರ ನಿಷ್ಠೆಯನ್ನು ಪ್ರತಿಯೊಬ್ಬ ಭಾರತೀಯನಲ್ಲಿ ಮೂಡಿಸಲು ನಾನು ಇಚ್ಛಿಸುವುದರಿಂದ ಹೀಗೆ ಬರೆಯುತ್ತಿದ್ದೇನೆ."

ಈ ನಿಷ್ಠೆಯ ಪ್ರವಾಹದಿಂದ ತಿಲಕರಿಗೆ ತಬ್ಬಿಬ್ಬಾಗಿರಬೇಕು. ಅವರೂ ಸಹ ಸೇನಾ ಭರ್ತಿಯ ಕಾರ್ಯಕ್ರಮಕ್ಕೆ ಸಹಾಯ ಮಾಡಲು ಮುಂದಾಗಿದ್ದರು. ಆದರೆ ಸಹಾಯಕ್ಕೆ ಪ್ರತಿ ಸಹಾಯ ಎಂಬ ಆಧಾರದ ಮೇಲೆ ಮಾತ್ರ ಸಹಾಯ ಮಾಡಲು ಅವರು ಸಿದ್ಧವಿದ್ದರು. ಸೌಮ್ಯವಾದಿಗಳ ಇಂತಹುದೇ ಮಾತುಗಳ ಪರಿಚಯ ಅವರಿಗಿತ್ತು. ಆದರೆ ಗಾಂಧೀಜಿಯವರ ಕಾಗದದಲ್ಲಿ ಹೊಸ ಧ್ವನಿ ಇತ್ತು. ಗಾಢ ಶ್ರದ್ಧೆ ಇತ್ತು. ಅದರ ಪ್ರಾಮುಖ್ಯತೆಯನ್ನು ಅಲ್ಲಗಳೆಯುವಂತಿರಲಿಲ್ಲ. ಅದೇ ಕಾಗದದಲ್ಲಿ ಗಾಂಧೀಜಿ ಹೀಗೂ ಬರೆದಿದ್ದರು: "ಆಂತರಿಕ ಭಿನ್ನಾಭಿಪ್ರಾಯಗಳನ್ನು ಮರೆಯುವಂತೆ ನೀವು ನಮಗೆ ಮನವಿ ಮಾಡಿದ್ದೀರಿ. ಅಧಿಕಾರಿಗಳ ವತಿಯಿಂದ ನಿರಂಕುಶಾಧಿಕಾರ ಹಾಗೂ ದುರ್ನಡತೆಯನ್ನು ಸಹಿಸಿಕೊಳ್ಳುವುದು ಈ ಮನವಿಯಲ್ಲಿ ಸೇರಿದ್ದರೆ, ವ್ಯವಸ್ಥಿತ ದಬ್ಬಾಳಿಕೆಯನ್ನು ನಾನು ಅತ್ಯಂತ ತೀವ್ರವಾಗಿ ವಿರೋಧಿಸುತ್ತೇನೆ. ಒಬ್ಬ ವ್ಯಕ್ತಿಯನ್ನು ಅನುಚಿತವಾಗಿ ನಡೆಸಿಕೊಳ್ಳಬಾರದು ಹಾಗೂ ಹಿಂದೆಂದಿಗಿಂತಲೂ ಹೆಚ್ಚಾಗಿ ಜನಪ್ರಿಯ ಅಭಿಪ್ರಾಯದೊಂದಿಗೆ ಸಮಾಲೋಚಿಸಿ. ಅದಕ್ಕೆ ಗೌರವ ಕೊಡಬೇಕು ಎಂಬ ಮನವಿಯನ್ನು ಅಧಿಕಾರಿಗಳಿಗೆ ಮಾಡಬೇಕು."

ಮಹಾತ್ಮರ ಬಗ್ಗೆ ತಿಲಕರ ಪ್ರತಿಕ್ರಿಯೆ ಏನಿದ್ದಿತು? ತಮ್ಮ ಪ್ರತಿಸ್ಪರ್ಧಿಯಾಗ ಬಹುದೇನೋ ಎಂದು ಗಾಂಧೀಜಿಯವರ ಬಗ್ಗೆ ಅಭಿಪ್ರಾಯ ತಾಳುವಷ್ಟು ಅವರು ಸಣ್ಣವರಾಗಿರಲಿಲ್ಲ: ಗಾಂಧೀಜಿ ರೂಪಿಸಿದ ಹೊಸ ರಾಜಕೀಯ ತಂತ್ರದ ಅಪಾರ ಸಾಮರ್ಥ್ಯವನ್ನು ಮನಗಾಣದೆ ಇರುವಂತಹ ಮಂದ ಬುದ್ಧಿಯವರಾಗಿರಲಿಲ್ಲ: ಆ ತಂತ್ರವನ್ನು ಜಾರಿಗೆ ತರುವ ದಾರಿಯಲ್ಲಿ ಇರುವ ಆಪತ್ತುಗಳನ್ನು ಅಲಕ್ಷ್ಯ ಮಾಡುವಷ್ಟು

ಅಪ್ರಬುದ್ಧರಾಗಿರಲಿಲ್ಲ. ಅದೃಷ್ಟವಶಾತ್, ೧೯೧೮ರಲ್ಲಿ, ಶ್ರೀಮತಿ ಅವಂತಿಕಾಬಾಯಿ ಗೋಖಲೆಯುವರು ಬರೆದ ಗಾಂಧೀಜಿಯ ಜೀವನಚರಿತ್ರೆಗೆ ತಿಲಕರು ಬರೆದ ಮುನ್ನುಡಿಯಲ್ಲಿ, ಗಾಂಧೀಜಿಯುವರ ತತ್ತ್ವಜ್ಞಾನದ ಬಗ್ಗೆ ಅವರ ಅಭಿಪ್ರಾಯಗಳು ಲಭ್ಯವಿವೆ. ಗಾಂಧೀವಾದ ಎಂದು ನಂತರ ಕರೆಯಲ್ಪಟ್ಟ ವಾದ ಇನ್ನೂ ರೂಪುಗೊಳ್ಳುವ ಹಂತದಲ್ಲೇ ಇದ್ದಾಗ ಬರೆದ ಈ ಮುನ್ನುಡಿ ನೈಜ ಶ್ಲಾಘನೆಯನ್ನೇ ಅಲ್ಲದೆ ಆಳವಾದ ಒಳದೃಷ್ಟಿಯನ್ನೂ ತೋರಿಸುತ್ತದೆ. ಮುನ್ನುಡಿಯ ಕೊನೆಯಲ್ಲಿ ತಿಲಕರು ಗಾಂಧೀಜಿಯುವರ ಸಾತ್ತ್ವಿಕ ಪ್ರತಿರೋಧದ ಮಾರ್ಗದ ಬಗ್ಗೆ ಬರೆದರು:

"ಕಾನೂನುಗಳ ವಿರುದ್ಧ ಬಂಡಾಯ ಮಾಡುವುದನ್ನು ಅಥವಾ ಸರ್ಕಾರಿ ಅಧಿಕಾರಿಗಳು ಹೊರಡಿಸಿದ ಆಜ್ಞೆಗಳಿಗೆ ಅವಿಧೇಯರಾಗುವುದನ್ನು ಕಾನೂನು ವಿರೋಧಿ ನಡೆವಳಿಕೆ ಎಂದು ಸಹಜವಾಗಿ ಪರಿಗಣಿಸಲಾಗುತ್ತದೆ. ಏಕೆಂದರೆ ಶಾಂತಿ ಮತ್ತು ಕಾನೂನನ್ನು ಕಾಪಾಡಲು ಕಾಯಿದೆಗಳನ್ನು ಮಾಡಲಾಗಿದೆ. ಅಗತ್ಯವಾದ ಸುಧಾರಣೆಗಳನ್ನು ಉಂಟುಮಾಡಲು ಕಾತುರನಾಗಿರುವ ಒಬ್ಬ ದೇಶಪ್ರೇಮಿ ಅಪಾರವಾದ ತೊಂದರೆಗಳನ್ನೆದುರಿಸಬೇಕಾಗುತ್ತದೆ. ಕಾನೂನುಗಳಿಗೆ ಅವಿಧೇಯನಾಗುವುದು ಸರಿಯಲ್ಲ ಎಂಬುದನ್ನು ಅವನು ಬಲ್ಲ. ಹೀಗೆ ಅವನು ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಾನೆ. ಇಂತಹ ಸ್ಥಿತಿಯಲ್ಲಿ ಸಿಕ್ಕಿದಾಗ ಗಾಂಧಿ ಸಾತ್ತ್ವಿಕ ಪ್ರತಿರೋಧದ ಮಾರ್ಗವನ್ನು ರೂಪಿಸಿದರು. ಹೀಗೆ ಸಾತ್ತ್ವಿಕ ಪ್ರತಿರೋಧ ಅಡಚಣೆ ಅಥವಾ ಅವರು ಹೇಳಿರುವಂತೆ ಸತ್ಯಾಗ್ರಹವನ್ನು ಅವರು ಕಂಡುಹಿಡಿದರು ಹಾಗೂ ತಮ್ಮ ದೇಹದಂಡನೆಯಿಂದ ಅದನ್ನವರು ಪವಿತ್ರಗೊಳಿಸಿದ್ದಾರೆ.

ಸಮರ್ಥನೀಯವಾದರೂ ಅದನ್ನು ಎಲ್ಲ ಸಂದರ್ಭಗಳಲ್ಲೂ ಆಚರಿಸಬಹುದೇ ಅಥವಾ ಎಲ್ಲೆಡೆ ಅದು ಪರಿಣಾಮಕಾರಿಯಾಗುತ್ತದೆಯೇ ಎಂಬುದನ್ನು ಹೇಳುವುದು ಕಠಿಣ. ಆದರೆ ಅದರ ಸಾಧ್ಯತೆಗಳು ಹೇರಳವಾಗಿವೆ ಎಂದು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇಬೇಕು. ಪ್ರತಿಯೊಂದು ಕಾನೂನನ್ನೂ ಪ್ರಜೆಗಳು ಪಾಲಿಸುವಂತೆ ಒತ್ತಾಯ ಮಾಡುವುದಕ್ಕಾಗಿ, ಆ ಕಾನೂನಿನ ಉಲ್ಲಂಘನೆಗೆ ದಂಡವನ್ನು ಯಾವಾಗಲೂ ನಿಗದಿ ಮಾಡಲಾಗಿರುತ್ತದೆ. ಆದರೆ ಕಾನೂನೇ ಅನೈತಿಕವಾಗಿದ್ದು ಸರ್ಕಾರದ ಅಧಿಕಾರ ಪ್ರಯೋಗದಿಂದ ಅದನ್ನು ಹೇರಲು ಪ್ರಯತ್ನಿಸಿದಾಗ, ಸತ್ಯ, ನ್ಯಾಯ ಮತ್ತು ಧರ್ಮದಲ್ಲಿನ ನಮ್ಮ ನಂಬಿಕೆಯನ್ನು ಪರೀಕ್ಷಿಸಬೇಕಾದ ಹಾಗೂ ಅನೈತಿಕ ಕಾನೂನನ್ನು ಧಿಕ್ಕರಿಸಬೇಕಾದ ಅಗತ್ಯ ಉಂಟಾಗುತ್ತದೆ.

ಅಂತಹ ಕಾನೂನುಗಳಿಗೆ ಒಂದು ಕರ್ತವ್ಯವಾಗಿ, ಒಂದು ಧಾರ್ಮಿಕ ಕರ್ತವ್ಯವಾಗಿ ಅವಿಧೇಯರಾಗುವುದು ಸಂಪೂರ್ಣವಾಗಿ ನ್ಯಾಯಯುತವಾಗಿದೆಯೆಂದು ಸತ್ಯ ಮತ್ತು ನ್ಯಾಯಕ್ಕೆ ಕಟ್ಟುಬಿದ್ದ ಜನರು ಹೇಳುತ್ತಾರೆ. ನಂಬಿಕೆ ಮತ್ತು ಭಕ್ತಿ ಎಷ್ಟು ಅಗಾಧವಾಗಿರಬೇಕು ಅಥವಾ ಪ್ರಜ್ವಲಿಸುತ್ತಿರಬೇಕು ಎಂದರೆ, ಕರ್ತವ್ಯಪಾಲನೆಯ ಹೊರತಾಗಿ ಬೇರೆ ಯಾವ ಪರಿಗಣನೆಯೂ ಭಕ್ತನ ಮತ್ತು ನಿಷ್ಠಾವಂತನ ಮನಸ್ಸನ್ನು ಪ್ರವೇಶಿಸಬಾರದು. ಏನೆಲ್ಲ ಕಷ್ಟಗಳಿದ್ದರೂ ಕರ್ತವ್ಯಪಾಲನೆಯ ಭಾವನೆ ಮಾತ್ರ ಅವನ ದೇಹ ಮತ್ತು ಮನಸ್ಸಿನ ತುಂಬ ತುಂಬಿಕೊಂಡಿರಬೇಕು. ಇದನ್ನೇ ನೈತಿಕ ಕೆಚ್ಚು, ಸತ್ಯವಂತಿಕೆ ಮತ್ತು ನಡತೆ ಎಂದು ಕರೆಯುವುದು. ವಿದ್ಯಾಭ್ಯಾಸ ಮತ್ತು ಪಾಂಡಿತ್ಯದಿಂದ ಈ ಗುಣಗಳು

ಬರುವುದಿಲ್ಲ. ಈ ಗುಣಗಳಿರುವುದಕ್ಕೆ ಹುಟ್ಟು ಅಥವಾ ಸಾಮಾಜಿಕ ಸ್ಥಾನವೂ ಒಂದು ಆವಶ್ಯಕತೆ ಏನಲ್ಲ. ಉನ್ನತ ಬುದ್ಧಿಮತ್ತೆಯಿಂದಲೂ ಇದನ್ನು ಗಳಿಸುವುದು ಸಾಧ್ಯವಿಲ್ಲ.

ಇದು ಆಧ್ಯಾತ್ಮಿಕ ಶಕ್ತಿ. ಉಪನಿಷತ್ತುಗಳ ಬೋಧನೆಯೂ ಇದೇ. ಈ ಆಧ್ಯಾತ್ಮಿಕ ಶಕ್ತಿಯನ್ನು ವಿದ್ಯಾಭ್ಯಾಸ ಅಥವಾ ಬುದ್ಧಿಮತ್ತೆಯಿಂದ ಗಳಿಸುವುದು ಸಾಧ್ಯವಿಲ್ಲ ವಾದರೂ. ಗೀತೆಯ ಪ್ರಕಾರ, ದೃಢ ಸಂಕಲ್ಪ ಮಾಡಿದ ಒಬ್ಬ ಮನುಷ್ಯ ದೇಹದಂಡನೆಯನ್ನು ಅಭ್ಯಾಸ ಮಾಡಿ ಅದನ್ನು ಗಳಿಸಬಹುದು. ಮಹಾಪುರುಷರು ಮತ್ತು ಶ್ರೇಷ್ಠ ವ್ಯಕ್ತಿಗಳ ಜೀವನಗಳಿಂದ ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಇದರಿಂದಲೇ. ಗಾಂಧಿಯವರ ಜೀವನ ಅಂತಹ ಜೀವನವಾಗಿದೆ. ಹಾಗೂ ನೈತಿಕ ಬಲ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಇದನ್ನು ಅಧ್ಯಯನ ಮಾಡಬೇಕು ಎಂದು ನಾನು ಸಂತೋಷದಿಂದ ಶಿಫಾರ್ಸು ಮಾಡುತ್ತೇನೆ."

ಬಂಗಾಲದ ವಿಭಜನೆಯ ಸಮಯದಲ್ಲಿ ೧೯೦೫ರಷ್ಟು ಹಿಂದೆಯೇ ಸಾತ್ವಿಕ ಪ್ರತಿರೋಧವನ್ನು ತೋರಬೇಕೆಂದು ತಿಲಕರು ವಾದಿಸಿದ್ದನ್ನು ನೆನಪುಮಾಡಿಕೊಳ್ಳಬಹುದು. ಆದರೆ ಅದನ್ನು ಕಂಡುಹಿಡಿದ ಗೌರವವನ್ನು ಗಾಂಧೀಜಿಗೆ ಕೊಟ್ಟರು. ತಿಲಕರ ಮನಸ್ಸಿನಲ್ಲಿದ್ದದ್ದು ಕೇವಲ ಒಂದು ರಾಜಕೀಯ ಆಯುಧ. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ರೂಪಿಸಿದ ಮತ್ತು ಆಚರಿಸಿದ ಪ್ರತಿರೋಧ ಇನ್ನೂ ಆಳವಾದ ಪ್ರಾಮುಖ್ಯತೆಯನ್ನು ಹೊಂದಿತ್ತು. ಅದೇ ರೀತಿಯಲ್ಲಿ. "ರಾಜಕೀಯವನ್ನು ಆಧ್ಯಾತ್ಮಿಕಗೊಳಿಸಬೇಕೆಂದು" ಮಾತನಾಡಿದವರಲ್ಲಿ ಗೋಖಲೆಯವರು ಮೊದಲಿಗರಾದರೂ, ಅದನ್ನು ಆಚರಣೆಗೆ ತಂದು ತಮ್ಮ ಜೀವನವನ್ನೇ ಅದರ ದೃಷ್ಟಾಂತವನ್ನಾಗಿ ಮಾಡಿದವರು ಗಾಂಧೀಜಿ.

ತಿಲಕರು ಮಾಡಿದ "ಗಾಂಧಿಯವರ ಸಾತ್ವಿಕ ಪ್ರತಿರೋಧದ ರೀತಿ"ಯ ವ್ಯಾಖ್ಯೆಯ ಸಾರಾಂಶ ಇದಾಗಿತ್ತು. ತಿಲಕರೇ ಹೇಳಿದಂತೆ ಉಪನಿಷತ್ತುಗಳ ಬೋಧನೆಯಿಂದ ಇದು ರೂಪುಗೊಂಡಿತು. ಇದಕ್ಕಿಂತಲೂ ಸೂಕ್ಷ್ಮವಾದ ವಿಶ್ಲೇಷಣೆ ಆಗಿಲ್ಲ. ಸತ್ಯಾಗ್ರಹದ ಕಾರ್ಯಸಾಧ್ಯ ಉಪಯುಕ್ತತೆಯ ಬಗ್ಗೆ ತಿಲಕರಿಗೆ ಸಂಶಯವಿತ್ತು ಎಂಬುದನ್ನು ಹೇಳಬಹುದು. ಆಧ್ಯಾತ್ಮಿಕ ದೃಷ್ಟಿಯಿಂದ ಅವರು ಇದನ್ನು ಎಷ್ಟೇ ಮೆಚ್ಚಿಕೊಂಡಿದ್ದರೂ, ರಾಜಕಾರಣಿಯಾಗಿ ಅವರು ಅದನ್ನು ಸ್ವೀಕರಿಸುವುದು ಸಾಧ್ಯವಿರಲಿಲ್ಲ. ಕ್ಲಾಸ್‌ವಿಟ್ಸ್‌ಗೆ ಯುದ್ಧ ಹೇಗೆ ರಾಜಕೀಯದ ವಿಸ್ತರಣೆಯಾಗಿತ್ತೊ ಹಾಗೆ ತಿಲಕರಿಗೆ ರಾಜಕೀಯ ಸಾರಭೂತವಾಗಿ ಯುದ್ಧವೇ ಆಗಿತ್ತು. ಒಂದೇ ಕಡೆ ನಿಂತು ಯುದ್ಧವನ್ನು ಮಾಡಲು ಸಾಧ್ಯವಿಲ್ಲ. ಇರುವ ಸಾಧನಸಂಪನ್ಮೂಲಗಳ ಆಧಾರದಿಂದ ಯುದ್ಧತಂತ್ರವನ್ನು ರೂಪಿಸಬೇಕು ಹಾಗೂ ಬದಲಾಗುವ ಪರಿಸ್ಥಿತಿಗಳಿಗೆ ತಕ್ಕಂತೆ ಯುಕ್ತಿಯನ್ನು ಹೊಂದಿಸಬೇಕು. ಯುದ್ಧದಲ್ಲಿ ಜಯಗಳಿಸಬೇಕಾದರೆ ಹಿಂದೆ ಸರಿಯುವುದೂ. ನಂತರ ಮುನ್ನುಗ್ಗುವುದಕ್ಕೆ ಪೂರ್ವಭಾವಿ ಕ್ರಮವಾಗಬೇಕು.

ರಾಜಕೀಯದ ಈ ಲೌಕಿಕ ಮತ್ತು ವ್ಯವಹಾರ ದೃಷ್ಟಿಗೆ ಮೂಲಭೂತವಾಗಿ ಭಿನ್ನವಾದ ದೃಷ್ಟಿಯನ್ನು ಗಾಂಧೀಜಿ ಹೊಂದಿದ್ದರು. ಅವರ ರಾಜಕೀಯ ಅವರ ಧರ್ಮಕ್ಕೆ ಅಧೀನವಾಗಿತ್ತು. "ನನ್ನ ಜೀವನದ ಅಂತರಂಗದ ವಿಷಯಗಳಿಂದಲೂ ನಾನು ರಾಜಕೀಯವನ್ನು ಪ್ರತ್ಯೇಕಿಸಲಾರೆ ಎಂಬುದನ್ನು ನೀವು ತಿಳಿಯಬೇಕು; ಅವು ಬಿಡಿಸಿಕೊಳ್ಳಲಾಗದಂತೆ

ಅಹಿಂಸೆ ಮತ್ತು ಸತ್ಯದೊಂದಿಗೆ ಕೂಡಿಕೊಂಡಿದೆ" ಎಂದು ಅವರು ಹೇಳಿದರು. ಅವರ ದೇಶಪ್ರೇಮವೂ ಸಹ ಮಾನವೀಯತೆಯನ್ನೇ ಹೋಲುತ್ತಿತ್ತು: "ನಾನು ಮನುಷ್ಯನಾಗಿರುವುದರಿಂದ ಹಾಗೂ ಮನುಷ್ಯತ್ವ ಹೊಂದಿದವನಾದ್ದರಿಂದ ನಾನು ದೇಶಪ್ರೇಮಿಯಾಗಿದ್ದೇನೆ." ತಿಲಕರಿಗೆ ಈ ಅಭಿಪ್ರಾಯಗಳು ಸಮ್ಮತವಿರಲಿಲ್ಲ ಎಂದು ಗಾಂಧೀಜಿಗೆ ತಿಳಿದಿತ್ತು. ಆದರೆ ಗಾಂಧೀಜಿ 'ಯಂಗ್ ಇಂಡಿಯಾ'ದಲ್ಲಿ ಅಮೃತಸರ ಕಾಂಗ್ರೆಸ್ ಸುಧಾರಣೆಗಳ ಕಾಯಿದೆಯ ಮೇಲೆ ಅಂಗೀಕರಿಸಿದ ರಾಜೀ ಗೊತ್ತುವಳಿಯ ಬಗ್ಗೆ ಟೀಕೆ ಮಾಡುತ್ತಾ, ಪ್ರೇಮ ಮತ್ತು ಯುದ್ಧದಲ್ಲಿ ಪ್ರತಿಯೊಂದು ನ್ಯಾಯವೇ ಎಂದು ತಿಲಕರು ತಿಳಿದಿದ್ದಾರೆ ಎಂಬುದಾಗಿ ಬರೆದಾಗ ಅರಿಯದೆ ಅವರಿಗೆ ಅನ್ಯಾಯ ಮಾಡಿದರು.

ತಮ್ಮ ಅಭಿಪ್ರಾಯಗಳನ್ನು ತಪ್ಪಾಗಿ ಪ್ರಕಟಿಸಿದ್ದಕ್ಕೆ ತಿಲಕರು ತೀವ್ರ ಪ್ರತಿಕ್ರಿಯೆ ತೋರಿದರು. ಅವರು ಜನವರಿ ೨೮, ೧೯೨೦ ರಂದು ಗಾಂಧೀಜಿಗೆ ಹೀಗೆ ಉತ್ತರ ಬರೆದರು:

"ಸುಧಾರಣೆಗಳ ಗೊತ್ತುವಳಿಯ ಬಗ್ಗೆ 'ಯಂಗ್ ಇಂಡಿಯಾ'ದಲ್ಲಿ ನೀವು ಬರೆದ ಲೇಖನದಲ್ಲಿ ನಾನು ರಾಜಕೀಯದಲ್ಲಿ ಎಲ್ಲವೂ ನ್ಯಾಯವೇ ಎಂದು ತಿಳಿದಿದ್ದೇನೆ ಎಂಬುದಾಗಿ ಬರೆದಿದ್ದೀರಿ. ನನ್ನ ಅಭಿಪ್ರಾಯವನ್ನು ಅಲ್ಲಿ ಸರಿಯಾಗಿ ಸೂಚಿಸಿಲ್ಲ ಎಂದು ತಿಳಿಸಲು ಇದನ್ನು ಬರೆಯುತ್ತಿದ್ದೇನೆ. ರಾಜಕೀಯ ಲೌಕಿಕ ಜನರ ಆಟ. ಬುದ್ಧ ಹೇಳಿದಂತೆ 'ಅಕ್ರೋಧೇನ ಜಿನೆ ಕೋಧಂ' (ಕೋಪವನ್ನು ಕೋಪವಲ್ಲದ್ದರಿಂದ ಗೆಲ್ಲು) ಎಂಬ ಸೂತ್ರಕ್ಕೆ ಬದಲಾಗಿ, 'ಯೆ ಯಥಾ ಮಾಮ್ ಪ್ರಪದ್ಯಂತೆ ತಾಂತ್ಸಥೈವ ಭಜಾಮ್ಯಹಂ' (ಅವರು ನನ್ನನ್ನು ಪೂಜಿಸುವ ರೀತಿ ಮತ್ತು ವ್ಯಾಪ್ತಿಗೆ ಸಮನಾಗಿ ನಾನು ಅವರಿಗೆ ಪ್ರತಿಫಲ ಕೊಡುತ್ತೇನೆ) ಎಂಬ ಶ್ರೀಕೃಷ್ಣನ ಸೂತ್ರವನ್ನು ಅವಲಂಬಿಸಲು ನಾನು ಬಯಸುತ್ತೇನೆ. ಇದು ಇಡೀ ವ್ಯತ್ಯಾಸವನ್ನು ಹಾಗೂ 'ಪ್ರತಿ-ವರ್ತನೆಯ ಸಹಕಾರ' ಎಂಬ ನನ್ನ ಪದ ಸಮುಚ್ಚಯದ ಅರ್ಥವನ್ನೂ ವಿವರಿಸುತ್ತದೆ. ಎರಡೂ ವಿಧಾನಗಳು ಸಮಾನವಾಗಿ ಪ್ರಾಮಾಣಿಕವಾಗಿವೆ ಹಾಗೂ ಸರಿಯಾಗಿವೆ. ಆದರೆ ಒಂದು ಇನ್ನೊಂದಕ್ಕಿಂತ ಹೆಚ್ಚಾಗಿ ಈ ಜಗತ್ತಿಗೆ ಸೂಕ್ತವಾಗಿದೆ. ಈ ವ್ಯತ್ಯಾಸದ ಬಗ್ಗೆ ಹೆಚ್ಚಿನ ವಿವರಣೆಯನ್ನು ನನ್ನ 'ಗೀತಾ ರಹಸ್ಯ'ದಲ್ಲಿ ನೋಡಬಹುದು."

ರಾಜಕೀಯದ ಬಗ್ಗೆ ಇದು ತಿಲಕರ ಸ್ಥಿರವಾದ ನಿಲುವಾಗಿತ್ತು. ತಿಲಕರ ಈ ಕಾಗದ ಬಹಳ ಮುಖ್ಯವಾದದ್ದು. ಏಕೆಂದರೆ ಈ ವಿಷಯದ ಬಗ್ಗೆ ಇದೇ ಅವರ ಕೊನೆಯ ಮತ್ತು ನಿರ್ಣಾಯಕ ಹೇಳಿಕೆ. ಆದ್ದರಿಂದ ತಿಲಕರು ತಮ್ಮ ಜೀವನದ ಸಂಜೆಯಲ್ಲಿ, ಜೀವನದುದ್ದಕ್ಕೂ ಅಂಟಿಕೊಂಡು ಬಂದಿದ್ದ ಈ ತತ್ತ್ವ ಮತ್ತು ಆಚರಣೆಯಿಂದ ವಿಮುಖರಾಗುತ್ತಿರಲಿಲ್ಲ ಎಂದು ಹೇಳಬಹುದು. ಆದರೆ ಗಾಂಧೀಜಿಯ ಧೋರಣೆ ಮತ್ತು ಕಾರ್ಯಕ್ರಮವನ್ನು ಅವರು ವಿರೋಧಿಸುತ್ತಿದ್ದರು ಎಂದು ಇದರ ಇಂಗಿತವಲ್ಲ. ಗಾಂಧೀಜಿಯ ಬಗ್ಗೆ ತಿಲಕರು ಅತ್ಯಂತ ಗೌರವವನ್ನು ಹೊಂದಿದ್ದರು ಹಾಗೂ ಅವರ ವಿಧಾನಗಳಿಂದ ಸ್ವರಾಜ್ಯವನ್ನು ಗಳಿಸುವುದು ಸಾಧ್ಯವಾಗಿದ್ದರೆ ತಿಲಕರು ಅದಕ್ಕಾಗಿ ಕಡಿಮೆ ಸಂತೋಷವನ್ನೇನೂ ಪಡುತ್ತಿರಲಿಲ್ಲ. ಆದರೆ ಕಲ್ಕತ್ತಾ ಕಾಂಗ್ರೆಸ್‌ನಲ್ಲಿ ಗಾಂಧೀಜಿ ಮಂಡಿಸಿದ ಅಸಹಕಾರ ಕಾರ್ಯಕ್ರಮದ ತತ್ತ್ವಗಳು ಮತ್ತು ಆಧಾರಗಳನ್ನು ಅವರು

ಹಿಂದೆ ಮುಂದೆ ನೋಡದೆ ಒಪ್ಪಿಕೊಳ್ಳುತ್ತಿದ್ದಾರೆ ಎಂಬುದು ವಾದಿಸಬಹುದಾದ ವಿಷಯ. ತಿಲಕರಿಂದ ಪ್ರೋತ್ಸಾಹ ಮತ್ತು ಸ್ಫೂರ್ತಿ ಪಡೆಯುವ ಆಶಯವನ್ನು ಗಾಂಧೀಜಿ ಹೊಂದಿದ್ದರೂ. ತಮ್ಮ ಜೀವನಚರಿತ್ರೆಯಲ್ಲಿ ಅವರು ಹೇಳಿದಂತೆ. "ಅಸಹಕಾರ ಚಳವಳಿಯ ಅಂತಿಮ ಹಂತದ ಬಗ್ಗೆ ತಿಲಕರ ನಿಲುವು ಏನಾಗಿರುತ್ತಿತ್ತು ಎಂಬುದು ಯಾವಾಗಲೂ ಊಹೆಗೆ ಸೇರಿದ ವಿಷಯವೇ ಆಗುತ್ತದೆ."

ತಾವೇ ಹದಿನೈದು ವರ್ಷಗಳಿಗೆ ಹಿಂದೆ ದೇಶದ ಮುಂದಿಟ್ಟ ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣದಂತಹ ಕರ್ತೃತ್ವಶಾಲಿ ಅಂಶಗಳನ್ನು ತಿಲಕರು ತಕ್ಷಣ ಒಪ್ಪಿಕೊಳ್ಳುತ್ತಿದ್ದರು. ಆದರೆ ಶಾಸನ ಸಭೆಗಳ ಬಹಿಷ್ಕಾರದ ಬಗ್ಗೆ ಅವರು ಬಲವಾಗಿ ಆಕ್ಷೇಪಿಸುತ್ತಿದ್ದರು. ಅವರು ಸ್ಥಾಪಿಸಿದ ಕಾಂಗ್ರೆಸ್ ಡೆಮೊಕ್ರಾಟಿಕ್ ಪಕ್ಷದ ಪ್ರನಾಳಿಕೆಯಲ್ಲಿ ತಿಳಿಸಿದಂತೆ "ಸುಧಾರಣೆಗಳ ಕಾಯಿದೆಯ ಉಪಯುಕ್ತತೆ ಎಷ್ಟೇ ಇರಲಿ. ಅದನ್ನು ಕಾರ್ಯ ರೂಪಕ್ಕೆ ತರಲು" ಅವರು ಬದ್ಧರಾಗಿದ್ದರು. ಮೂರೇ ವರ್ಷಗಳಲ್ಲಿ, ಈ ವಿಷಯದ ಬಗ್ಗೆ ಗಾಂಧೀಜಿಯವರ ಪರಿಸ್ಥಿತಿ ಎಷ್ಟು ಛೇದ್ಯವಾಗಿತ್ತೆಂಬುದು. ಸಿ. ಆರ್. ದಾಸ್ ಮತ್ತು ಮೋತಿಲಾಲ್ ನೆಹರು ಅವರ ಸೂಚನೆಯ ಮೇರೆಗೆ ಶಾಸನ ಸಭೆಗಳನ್ನು ವಶಪಡಿಸಿಕೊಳ್ಳಲು ಸ್ವರಾಜ್ ಪಕ್ಷವನ್ನು ಸ್ಥಾಪಿಸಿದಾಗ ಸ್ಪಷ್ಟವಾಯಿತು. ಆದರೆ ಇದೆಲ್ಲ ಒಣ ಊಹಾಪೋಹವಷ್ಟೆ. ವ್ಯಕ್ತಿಗಳ ವಿಧಿಯನ್ನು ನಡೆಸುವಂತೆ ದೇಶಗಳ ವಿಧಿಯನ್ನೂ ನಡೆಸುವ ದೈವ ತಿಲಕರನ್ನು ಆಗಸ್ಟ್ ೧, ೧೯೨೦ ರಂದು ನಶ್ವರ ಜಗತ್ತಿನಿಂದ ದೂರ ಮಾಡಿತು. ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಶಕೆ ಕೊನೆಗೊಂಡಿತು.

III

"ಸ್ವಾತಂತ್ರ್ಯ ಯುದ್ಧ" ನಡೆದ ಹಿಂದಿನ ವರ್ಷ ಹುಟ್ಟಿದ ತಿಲಕರು ಭಾರತ ಸ್ವತಂತ್ರವಾಗುವುದಕ್ಕೆ ಇಪ್ಪತ್ತೇಳು ವರ್ಷಗಳಿಗೆ ಮುನ್ನ ನಿಧನರಾದರು. ಹೀಗೆ ಅವರ ಜೀವನ ನಮ್ಮ ಸ್ವಾತಂತ್ರ್ಯ ಹೋರಾಟದ ಹೆಚ್ಚಿನ ಭಾಗದಲ್ಲಿ ಕಳೆಯಿತು. ಈ ಭಾಗ, ನೀರ್ಗಲ್ಲು ಗುಡ್ಡದಂತೆ ಜನರ ಕಣ್ಣಿನಿಂದ ಮರೆಯಾಗಿದೆ. ತಮ್ಮ ದೇಶದ ಜನರಿಗೆ ಅವರ ಗುಲಾಮಗಿರಿಯ ಬಗ್ಗೆ ಅರಿವು ಮೂಡಿಸಿ, ಸ್ವಾತಂತ್ರ್ಯದ ಪ್ರೇರಣೆಯನ್ನು ಅವರಲ್ಲಿ ಮೊದಲಿಗೆ ಉಂಟುಮಾಡಿದವರು ತಿಲಕರು. ಶಿರೋಲ್ ತಿಲಕರನ್ನು ಭಾರತೀಯ ಅಶಾಂತಿಯ ತಂದೆ ಎಂದು ಕರೆದ. ತಮ್ಮ ದೇಶದ ಜನರಲ್ಲಿ ಅಶಾಂತಿಯ ಬೀಜವನ್ನು ಬಿತ್ತಿದ್ದಕ್ಕಿಂತಲೂ ಬಹಳ ಹೆಚ್ಚಿನ ಕಾರ್ಯವನ್ನು ತಿಲಕರು ಮಾಡಿದರು. ಆ ಅಶಾಂತಿಗೆ ಅವರು ಧ್ವನಿ ಕೊಟ್ಟರು: ಅದಕ್ಕೊಂದು ಆಕಾರ ಕೊಟ್ಟರು; ಅದನ್ನು ರಚನಾತ್ಮಕ ಮಾರ್ಗಗಳಲ್ಲಿ ಹರಿಸಿದರು.

ತಿಲಕರು ರಾಜಕೀಯ ದೃಶ್ಯದಲ್ಲಿ ಕಾಣಿಸಿಕೊಂಡಾಗ. ಭಾರತದ ರಾಜಕೀಯ ವಿಶ್ರಾಂತಿ ವರ್ಗ ಹೊತ್ತು ಕಳೆಯುವುದಕ್ಕೆ ತೊಡಗಿದ ಹವ್ಯಾಸವಾಗಿತ್ತು. ಅವರು ಅಲ್ಲಿಂದ ಮರೆಯಾದಾಗ. ರಾಜಕೀಯ ಜನಸಾಮಾನ್ಯರ ಸಹಭಾಗಿತ್ವದ ವಿಶಾಲ ತಳಹದಿಯನ್ನು ಹೊಂದಿತ್ತು. ೧೮೯೬ರಷ್ಟು ಹಿಂದೆಯೇ ತಿಲಕರು ಹೀಗೆ ಬರೆದಿದ್ದರು: "ವಿದ್ಯಾವಂತ ವರ್ಗಗಳಿಗೆ ಸೇರಿದ ಜನರು ತಾವು ಜನಸಾಮಾನ್ಯರಿಗಿಂತ ಬೇರೆಯವರು ಎಂದು

ಭಾವಿಸುವುದಕ್ಕಿಂತಲೂ ಹೆಚ್ಚಿನ ಮೌಢ್ಯವಿಲ್ಲ. ಅವರು ಭಾರತೀಯ ಜನಸಾಮಾನ್ಯರ ಅವಿಭಾಜ್ಯ ಅಂಗ ಎಂಬುದನ್ನು ಅವರು ಮನಗಾಣಬೇಕು. ಅವರ ಸ್ವಂತ ಉದ್ಧಾರ ಜನತೆಯ ಉದ್ಧಾರವನ್ನವಲಂಬಿಸಿದೆ."

ಶಿಸ್ತು, ಏಕತೆ ಮತ್ತು ಸತತ ಶ್ರಮದ ಪ್ರಯತ್ನಗಳಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಜನರು ಅರಿತುಕೊಳ್ಳುವಂತೆ ತಿಲಕರು ಮಾಡಿದರು. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಹಾಗೂ ನಾನು ಅದನ್ನು ಪಡೆದೇ ತೀರುತ್ತೇನೆ" ಎಂಬ ಘೋಷಣೆಯನ್ನು ಮಾತ್ರ ಹೇಳಿ ಅವರು ಸುಮ್ಮನಾಗಲಿಲ್ಲ. ಜೀವನದುದ್ದಕ್ಕೂ ಹೋರಾಡಿ, ತ್ಯಾಗ ಮಾಡಿ, ಹಿಂಸೆ, ಶಿಕ್ಷೆ ಅನುಭವಿಸಿ, ಹುರುಪಿನಿಂದ, ಅನೇಕ ರೀತಿಗಳ ಚಟುವಟಿಕೆಗಳಲ್ಲಿ ತೊಡಗಿ ಅವರು ಸ್ವರಾಜ್ಯದ ಜಾಡನ್ನು ಮಾಡಿದರು. ರಾಷ್ಟ್ರೀಯ ಗುರಿಗಳಿಗೆ ಸಾರ್ವಜನಿಕ ಅಭಿಪ್ರಾಯವನ್ನು ಎಚ್ಚರಿಸಿ, ಸಂಘಟಿಸಿದವರಲ್ಲಿ ಅವರು ಮೊದಲಿಗರು.

ಇಷ್ಟಾದರೂ, ಗಾಂಧೀಜಿಯಂತೆ ತಿಲಕರು ಜನರ ಕಲ್ಪನೆಯ ರಾಜಕಾರಣಿಗಿಂತ ಭಿನ್ನವಾಗಿದ್ದರು. ಅವರ ಪ್ರಥಮ ಪ್ರೀತಿ ಶಿಕ್ಷಣವಾಗಿತ್ತು. ಸ್ವತಂತ್ರ ಭಾರತದಲ್ಲಿ ತಾವು ಗಣಿತದ ಪ್ರೊಫೆಸರರಾಗುವುದಾಗಿ ಅವರು ಹೇಳುತ್ತಿದ್ದರು. ಅವರು ವಿದ್ವಾಂಸರಾಗಿದ್ದರು, ವಿಚಾರಿಯಾಗಿದ್ದರು, ವಿಷಯಗಳ ಅಸ್ತಿತ್ವದ ಬಗ್ಗೆ ಆಳವಾದ ಶೋಧನೆ ಮಾಡಿದ ತತ್ತ್ವಜ್ಞಾನಿಯಾಗಿದ್ದರು. 'ಗೀತಾ–ರಹಸ್ಯ' ಅವರ ಪಾಂಡಿತ್ಯಕ್ಕೆ ಒಂದು ಶಾಶ್ವತ ಸ್ಮಾರಕವಾಗಿದೆ. ಅವರು ಗೀತೆಯ ಬಗ್ಗೆ ಕೇವಲ ವ್ಯಾಖ್ಯಾನಿಸಲಿಲ್ಲ. ಅವರು ಅದರ ಉಪದೇಶಕ್ಕೆ ಅನುಗುಣವಾಗಿ ಬಾಳಿದರು. ಅವರು ಸ್ಥಿತಪ್ರಜ್ಞರಾಗಿದ್ದರು.

ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯ ಗಳಿಸಬೇಕೆಂಬುದು ಅವರ ಜೀವನದ ಉಸಿರಾಗಿತ್ತು. ಅದಕ್ಕಾಗಿ ಅವರು ದೈವದತ್ತವಾದ ತಮ್ಮ ಅಸಮಾನ ಶಕ್ತಿಯನ್ನೂ, ಸಾಮರ್ಥ್ಯವನ್ನೂ, ತಾವು ಎಚ್ಚರವಾಗಿದ್ದ ಎಲ್ಲ ಸಮಯದ ಆಲೋಚನೆಯನ್ನೂ, ಮುಡುಪಿಟ್ಟರು. ಅತ್ಯುನ್ನತ ಶ್ರದ್ಧೆ ಮತ್ತು ಮಣಿಯದ ಸಂಕಲ್ಪದಿಂದ ಅವರು ಭಾರತದ ಸ್ವಾತಂತ್ರ್ಯಕ್ಕೆ ಬುನಾದಿಯನ್ನು ಹಾಕಿದರು. ಅದಿಲ್ಲದೆ ಗಾಂಧೀಜಿ ಕಟ್ಟಡವನ್ನು ಎಬ್ಬಿಸಲು ಆಗುತ್ತಿರಲಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರಪಿತನಾಗಿರುವಂತೆ ಲೋಕಮಾನ್ಯ ತಿಲಕರು ಭಾರತದ ರಾಷ್ಟ್ರೀಯವಾದದ ತಂದೆಯಾಗಿದ್ದಾರೆ.

ಅನುಬಂಧ

'ಎಮಿನೆಂಟ್ ಓರಿಯಂಟಲಿಸ್ಟ್ಸ್'ನಲ್ಲಿ ಡಾ. ಎಸ್. ರಾಧಾಕೃಷ್ಣನ್ ಹೀಗೆ ಬರೆದಿದ್ದಾರೆ: "ತಿಲಕರ ಸಾಹಿತ್ಯಕ ಕೃತಿಗಳು ನಿರುದ್ಯೋಗಿ ರಾಜನೀತಿಜ್ಞನ ಸಾಂಪ್ರದಾಯಿಕವಾದ ಹವ್ಯಾಸದ ಫಲವಲ್ಲ. ಅವರ ಸಹಜವಾದ ಒಲವು ಪೌರಸ್ತ್ಯ ಅಧ್ಯಯನದ ಕಡೆಗಿತ್ತು; ಆದ್ದರಿಂದ ಅವರ ಕೃತಿಗಳಲ್ಲಿ ನಾವು ವಿಷಯದಿಂದ ವಿಷಯಕ್ಕೆ ಹಾರುವ ಅಪ್ರಬುದ್ಧನೊಬ್ಬನ ವ್ಯಾಖ್ಯಾನಗಳಿಗೆ ಬದಲಾಗಿ, ಆಳವಾಗಿ ಅಧ್ಯಯನ ಮಾಡಿದ ವಿದ್ವಾಂಸರೊಬ್ಬರ ಪಾಂಡಿತ್ಯ ಮತ್ತು ಚುರುಕಾದ ಒಳದೃಷ್ಟಿಯನ್ನು ನೋಡುತ್ತೇವೆ." ವೇದಗಳ ಸಂಶೋಧನೆ ಮತ್ತು ಹಿಂದೂ ತತ್ತ್ವಜ್ಞಾನ ತಿಲಕರ ಪಾಂಡಿತ್ಯದ ಕ್ಷೇತ್ರವಾಗಿತ್ತು. ಕೆಲವು ಅಲ್ಲೊಂದು ಇಲ್ಲೊಂದು ಬರವಣಿಗೆಗಳನ್ನು ಬಿಟ್ಟರೆ. 'ದಿ ಒರೈಅನ್' (೧೮೯೩ ರಲ್ಲಿ ಪ್ರಕಟವಾಯಿತು), 'ದಿ ಆರ್ಕ್ಟಿಕ್ ಹೋಮ್ ಇನ್ ದಿ ವೇದಾಸ್' (೧೯೦೩) ಮತ್ತು 'ಗೀತಾ – ರಹಸ್ಯ' (1905) ತಿಲಕರ ಮುಖ್ಯ ಕೃತಿಗಳಾಗಿದ್ದವು. ಈ ಪುಸ್ತಕಗಳ ಬಗ್ಗೆ ಹಿಂದಿನ ಪುಟಗಳಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಇವುಗಳಲ್ಲಿ ಪ್ರತಿಯೊಂದೂ ಹೊಸ ಮಾರ್ಗವನ್ನು ಉಂಟುಮಾಡಿತು. ಈ ಪುಸ್ತಕಗಳ ವಿಷಯದ ಬಗ್ಗೆ ಆಸಕ್ತಿ ಇರುವವರು ಮೂಲ ಕೃತಿಗಳನ್ನು ಓದುವುದೇ ಉತ್ತಮ. ಸಾಮಾನ್ಯ ಓದುಗರಿಗಾಗಿ ಅವುಗಳ ವಾದಗಳನ್ನು ತಿಲಕರ ಮಾತುಗಳಲ್ಲಿಯೇ ಇಲ್ಲಿ ಕೊಡಲಾಗಿದೆ.

ದಿ ಒರೈಅನ್

ಭಗವದ್ಗೀತೆಯನ್ನು ನಾನು ಓದುತ್ತಿದ್ದಂತೆ ಅವನು (ಭಗವಂತ) ತಿಂಗಳುಗಳಲ್ಲಿ 'ಮಾರ್ಗಶೀರ್ಷ'ನಾಗಿದ್ದನೆಂಬ ಹೇಳಿಕೆಯಿಂದ ಪ್ರಮುಖವಾದ ತೀರ್ಮಾನಗಳಿಗೆ ನಾವು ಬರಬಹುದು ಎಂದು ನನಗನಿಸಿತು. ಇದರಿಂದ ವೇದಗಳ ಪುರಾತನ ಪಂಚಾಂಗದ ಬಗ್ಗೆ ವಿಚಾರ ಮಾಡುವುದಕ್ಕೆ ನಾನು ತೊಡಗಿದೆ...... ಈಜಿಪ್ಟಿನ ನಾಗರಿಕತೆಯ ಪ್ರಾಚೀನತೆಯನ್ನು ಈಗ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಆದರೆ ವೇದಗಳ ನಾಗರೀಕತೆಯ ಪ್ರಾರಂಭವನ್ನು ಕ್ರಿ.ಪೂ. ೨೦೦೦ ಕ್ಕೂ ಮೊದಲಿಗೆ ಗುರುತಿಸಲು ವಿದ್ವಾಂಸರು ಇನ್ನೂ ಹಿಂಜರಿಯುತ್ತಾರೆ. ಋಗ್ವೇದದಲ್ಲಿ ಹೇಳಿರುವ ಸಂಪ್ರದಾಯಗಳು ಕ್ರಿ.ಪೂ. ೪೦೦೦ ಕ್ಕೆ ಈಚೆನದಲ್ಲದ ಅವಧಿಯನ್ನು ಸೂಚಿಸುತ್ತವೆ ಎಂಬುದನ್ನು ತೋರಿಸಲು ನಾನು ಪ್ರಯತ್ನಿಸಿದ್ದೇನೆ. ಆಗ ಮೇಷ ಸಂಕ್ರಾಂತಿ ಒರೈಅನ್ ನಕ್ಷತ್ರಪುಂಜದಲ್ಲಿತ್ತು, ಅಥವಾ ಲುಬ್ಧಕ ವಿಷುವತ್ಸರ್ಷವನ್ನು ಪ್ರಾರಂಭಿಸಿತ್ತು. ಈ ಸಂಬಂಧವಾಗಿ ಅನೇಕ ವೇದ ಶಾಸ್ತ್ರಗಳು ಮತ್ತು ಪುರಾಣಗಳನ್ನು ಉಲ್ಲೇಖಿಸಲಾಗಿದೆ ಹಾಗೂ ಮೊದಲ ಬಾರಿಗೆ ಅರಿವು ಉಂಟಾಗುವಂತೆ ವಿವರಿಸಲಾಗಿದೆ. ಹಾಗೂ ನಂತರದ ಸಂಸ್ಕೃತ ಕೃತಿಗಳ ಐತಿಹ್ಯಗಳು ಮತ್ತು ಆಚರಣೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಬೀರಲಾಗಿದೆ. ಈ ಐತಿಹ್ಯಗಳನ್ನು

ಇರಾನ್ ಮತ್ತು ಗ್ರೀಸ್‌ನ ಐತಿಹ್ಯಗಳು ಮತ್ತು ಸಂಪ್ರದಾಯಗಳು ಹೇಗೆ ಎದ್ದು ಕಾಣು ವಂತೆ ದೃಢೀಕರಿಸುತ್ತವೆ ಎಂಬುದನ್ನು ತೋರಿಸಲೂ ನಾನು ಪ್ರಯತ್ನಿಸಿದ್ದೇನೆ.

ಆರ್ಯ ನಾಗರೀಕತೆಯ ಅತ್ಯಂತ ಹಳೆಯ ಕಾಲವನ್ನು ಅದಿತಿ ಅಥವಾ ಒರೈಅನ್ ಪೂರ್ವ ಕಾಲ ಎಂದು ಕರೆಯಬಹುದು ಹಾಗೂ ಅದರ ಮಿತಿಗಳನ್ನು ಸುಮಾರು ಕ್ರಿ. ಪೂ. ೬೦೦೦ – ೪೦೦೦ ಎಂದು ಸೂಚಿಸಬಹುದು. ಒರೈಅನ್ ಅವಧಿ, ಸುಮಾರಾಗಿ ಹೇಳು ವುದಾದರೆ, ಮೇಷ ಸಂಕ್ರಾಂತಿ ಆರಿದ್ರಾ ನಕ್ಷತ್ರ ಪುಂಜದಿಂದ ಇದ್ದ ಕಾಲದಿಂದ ಪ್ರಾರಂಭ ವಾಗಿ ಕೃತ್ತಿಕೆಯ ನಕ್ಷತ್ರ ಪುಂಜಕ್ಕೆ ಹಿಂದೆ ಸರಿಯುವ ಕಾಲದವರೆಗೆ, ಕ್ರಿ.ಪೂ. ೪೦೦೦ ದಿಂದ ಕ್ರಿ.ಪೂ. ೨,೫೦೦ ರವರೆಗೆ ಇತ್ತು. ಆರ್ಯ ನಾಗರಿಕತೆಯ ಇತಿಹಾಸದಲ್ಲಿ ಇದು ಅತ್ಯಂತ ಪ್ರಮುಖವಾದ ಅವಧಿ.

ಮೂರನೆಯ ಅಥವಾ ಕೃತ್ತಿಕ ಅವಧಿ ಮೇಷ ಸಂಕ್ರಾಂತಿ ಕೃತ್ತಿಕಾ ನಕ್ಷತ್ರಪುಂಜ ದಲ್ಲಿದ್ದಾಗ ಪ್ರಾರಂಭವಾಗುತ್ತದೆ ಹಾಗೂ 'ವೇದಾಂತ ಜ್ಯೋತಿಷ'ದಲ್ಲಿ ಹೇಳಿರುವ ಅವಧಿಯವರೆಗೆ ವಿಸ್ತರಿಸಿದೆ ಅಂದರೆ ಕ್ರಿ. ಪೂ. ೨೫೦೦ ರಿಂದ ಕ್ರಿ. ಪೂ. ೧೪೦೦ ವರೆಗೆ. ಅದು ತೈತ್ರೀಯ ಸಂಹಿತೆಯ ಹಾಗೂ ಅನೇಕ ಬ್ರಾಹ್ಮಣಗಳ ಅವಧಿಯಾಗಿತ್ತು. ಹಳೆಯ ಸಂಸ್ಕೃತ ಸಾಹಿತ್ಯದ ನಾಲ್ಕನೆಯ ಮತ್ತು ಕೊನೆಯ ಅವಧಿ ಕ್ರಿ. ಪೂ. ೧೪೦೦ರಿಂದ ಕ್ರಿ.ಪೂ. ೫೦೦ ರ ವರೆಗೆ ಅಥವಾ ಬೌದ್ಧ ಧರ್ಮದ ಹುಟ್ಟು ಮತ್ತು ಬೆಳವಣಿಗೆಯ ವರೆಗೆ ವಿಸ್ತರಿಸಿದೆ. ಅದು ಸೂತ್ರಗಳು ಮತ್ತು ತತ್ತ್ವಜ್ಞಾನಗಳ ಅವಧಿಯಾಗಿತ್ತು. ಅದನ್ನು ನಿಜವಾದ ಬೌದ್ಧಧರ್ಮ ಪೂರ್ವದ ಅವಧಿ ಎಂದು ಕರೆಯಬಹುದು."

(ಮುನ್ನುಡಿಯಿಂದ)

ದಿ ಆರ್ಕ್ಟಿಕ್ ಹೋಮ್ ಇನ್ ದಿ ವೇದಾಸ್

"ಈ ಪ್ರಸಕ್ತ ಗ್ರಂಥ 'ದಿ ಒರೈಅನ್' ಅಥವಾ 'ರಿಸರ್ಚೆಸ್ ಇನ್‌ಟು ದಿ ಆಂಟಿಕ್ವಿಟಿ ಆಫ್ ದಿ ವೇದಾಸ್' ಎಂಬ ಗ್ರಂಥದ ಮುಂದಿನ ಪ್ರಸಂಗವಾಗಿದೆ.

"ಆರ್ಯ ನಾಗರಿಕತೆಯ ಪ್ರಾರಂಭ ಅತ್ಯಂತ ಪ್ರಾಚೀನ ವೇದಕಾಲಕ್ಕೂ ಸಾವಿರಾರು ವರ್ಷಗಳಿಗೆ ಮೊದಲೇ ಆಗಿರಬೇಕೆಂದು ಎಣಿಸಬೇಕು; ಉತ್ತರಾರ್ಧ ಭೂಗೋಳದ ಮೇಲೆ ನೀರ್ಗಲ್ಲಿನ ಪದರ ಹರಡಿಕೊಂಡಿದ್ದ ಕಾಲವನ್ನು ಕ್ರಿ.ಪೂ. ೮,೦೦೦ ಕ್ಕೆ ಇಳಿಸಿದಾಗ ಪ್ರಾಚೀನ ಆರ್ಯಜೀವನದ ಕಾಲ ಕ್ರಿ. ಪೂ. ೪೫೦೦ ರಿಂದ ಅಂದರೆ ಅತ್ಯಂತ ಪ್ರಾಚೀನ ವೇದಕಾಲದಿಂದ ಅಲ್ಲಿಗೆ ಹೋಗಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಈ ಗ್ರಂಥದಲ್ಲಿ ದೃಢಪಡಿಸಲಾಗುವ ಮುಖ್ಯ ಅಂಶ ಇದೇ ಆಗಿದೆ. ಇದುವರೆಗೆ ಅಸ್ಪಷ್ಟ ಹಾಗೂ ತಿಳಿಯಲಾಗದ್ದು ಎಂದು ಪರಿಗಣಿಸಿದ್ದ ಅನೇಕ ಭಾಗಗಳು ಋಗ್ವೇದದಲ್ಲಿವೆ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಬೆಳಕಿನಲ್ಲಿ ಅವುಗಳನ್ನೆ ವ್ಯಾಖ್ಯಾನಿಸಿದಾಗ, ವೇದಗಳ ದೇವತೆಗಳಿಗೂ ಅಥವಾ ಪ್ರಾಚೀನ ಉತ್ತರಧ್ರುವ ಪಂಚಾಂಗಕ್ಕೂ ಧ್ರುವ ಪ್ರದೇಶಕ್ಕೂ ಇರುವ ಸಂಬಂಧ ಸ್ಪಷ್ಟವಾಗಿ ತಿಳಿಯುತ್ತದೆ: ಐರ್ಯಾನವಾಜೋ ಅಥವಾ

ಆರ್ಯರ ಸ್ವರ್ಗದ ಸುಖಿ ನಾಡು. ಸೂರ್ಯ ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುವ ಪ್ರಾಂತ್ಯದಲ್ಲಿತ್ತೆಂದೂ. ಹಿಮ ಮತ್ತು ಮಂಜಿನಿಂದ ಅದು ನಾಶವಾಯಿತೆಂದೂ, ಅದರಿಂದ ಆ ನಾಡಿನ ವಾತಾವರಣ ಜೀವಿಸುವುದಕ್ಕೆ ಅನರ್ಹವಾಯಿತೆಂದೂ, ದಕ್ಷಿಣದ ಕಡೆಗೆ ವಲಸೆ ಹೋಗುವ ಅಗತ್ಯ ಬಿತ್ತೆಂದೂ ಅವೆಸ್ತಾ ಸ್ಪಷ್ಟವಾಗಿ ತಿಳಿಸುತ್ತದೆ. ಇವು ಸರಳವಾದ, ಸ್ಪಷ್ಟವಾದ ಹೇಳಿಕೆಗಳು ಹಾಗೂ ಇತ್ತೀಚಿನ ಭೂಗರ್ಭ ಶಾಸ್ತ್ರದ ಸಂಶೋಧನೆಗಳಿಂದ ನೀರ್ಗಲ್ಲ ಕಾಲ ಮತ್ತು ಅದರ ನಂತರದ ಕಾಲದ ಬಗ್ಗೆ ನಮಗೆ ಗೊತ್ತಿರುವ ವಿಷಯಗಳೊಂದಿಗೆ ಇವುಗಳನ್ನು ಇಟ್ಟು ನೋಡಿದಾಗ, ಪ್ರಾಚೀನ ಆರ್ಯರ ವಸತಿ ಉತ್ತರ ಧ್ರುವ ಪ್ರದೇಶದಲ್ಲೂ ಇತ್ತು, ಅಂತರ ನೀರ್ಗಲ್ಲ ಪ್ರದೇಶದಲ್ಲೂ ಇತ್ತು ಎಂಬ ತೀರ್ಮಾನಕ್ಕೆ ಬರದೆ ಇರಲು ಸಾಧ್ಯವಿಲ್ಲ.

ಮನುಷ್ಯನ ಮೂಲ ವಸತಿಯನ್ನು ಉತ್ತರ ಧ್ರುವ ಪ್ರದೇಶದಲ್ಲಿ ಶೋಧಿಸಬೇಕೆಂಬ ತಮ್ಮ ನಂಬಿಕೆಯನ್ನು ಅನೇಕ ವೈಜ್ಞಾನಿಕ ಜನರು ಈಗಾಗಲೇ ಘೋಷಿಸಿದ್ದಾರೆ. ಶುದ್ಧವಾಗಿ ಭಾಷಾಶಾಸ್ತ್ರದ ದೃಷ್ಟಿಯಿಂದ ನೋಡಿದರೂ, ಪ್ರಾಚೀನ ಆರ್ಯವಸತಿ ಮಧ್ಯೆ ಏಷ್ಯದಲ್ಲಿ ಇತ್ತೆಂಬ ಸಿದ್ಧಾಂತವನ್ನು ಈಗ ಹೆಚ್ಚು ಕಡಿಮೆ ಕೈಬಿಡಲಾಗಿದೆ ಹಾಗೂ ಮಧ್ಯ ಏಷ್ಯಾದ ಬದಲಿಗೆ ಉತ್ತರ ಜರ್ಮನಿ ಅಥವಾ ಸ್ಕಾಂಡಿನೇವಿಯ ಆರ್ಯ ವಸತಿಯಾಗಿದ್ದಿರಬೇಕೆಂಬ ಅಭಿಪ್ರಾಯ ಬಲವಾಗಿದೆ. ಕೇವಲ ಪುರಾಣಗಳ ಆಧಾರದ ಮೇಲೆ "ಉತ್ತರ ಧ್ರುವ ವೃತ್ತದೊಳಗಡೆಯೇ ಒಂದು ಕಡೆ" ಆರ್ಯರ ಮೂಲ ವಸತಿ ಇದ್ದಿರಬೇಕೆಂಬ ತೀರ್ಮಾನಕ್ಕೆ ಪ್ರೊ. ರ್‍ಹಿಸ್ ಬಂದಿದ್ದಾರೆ. ನಾನು ಒಂದು ಹೆಜ್ಜೆಯಷ್ಟೆ ಮುಂದೆ ಹೋಗಿ, ಪ್ರಾಚೀನ ಆರ್ಯ ವಸತಿಗೆ ಸಂಬಂಧಿಸಿದ ಮಟ್ಟಕ್ಕೆ ಮಾತ್ರ ಈ ವಿಚಾರಸರಣಿಗೆ ವೇದಗಳ ಮತ್ತು ಅವೆಸ್ತೀಯ ಸಂಪ್ರದಾಯಗಳು ಸಂಪೂರ್ಣ ಸಮರ್ಥನೆ ಒದಗಿಸುತ್ತವೆ ಎಂದು ತೋರಿಸಿದ್ದೇನೆ. ಇದಕ್ಕಿಂತಲೂ ಮುಖ್ಯವಾದದ್ದೆಂದರೆ, ಇತ್ತೀಚಿನ ಭೂಗರ್ಭಜ್ಞಾನದ ಸಂಶೋಧನೆಗಳು ಆರ್ಯಸ್ವರ್ಗದ ವಿನಾಶದ ಬಗ್ಗೆ ಅವೆಸ್ತಾದಲ್ಲಿನ ವರ್ಣನೆಯನ್ನು ಸಮರ್ಥಿಸುವುದೇ ಅಲ್ಲದೆ, ಅದರ ಅಸ್ತಿತ್ವವನ್ನು ಕಡೆಯ ನೀರ್ಗಲ್ಲ ಕಾಲದ ಹಿಂದಕ್ಕೆ ಸೂಚಿಸುತ್ತವೆ."

(ಮುನ್ನುಡಿ ಮತ್ತು ಕೊನೆಯ ಅಧ್ಯಾಯದಿಂದ)

ಗೀತಾ – ರಹಸ್ಯ

ನಾನು ಸಣ್ಣ ಹುಡುಗನಾಗಿದ್ದಾಗ. ಶುದ್ಧ ಧಾರ್ಮಿಕ ಮತ್ತು ತತ್ತ್ವಜ್ಞಾನಿಕವಾದ ಜೀವನಕ್ಕೂ ದೈನಂದಿನ ಜಂಜಡದ ಜೀವನಕ್ಕೂ ಹೊಂದಿಕೆಯಾಗುವುದಿಲ್ಲವೆಂದು ಆಗಾಗ ನನ್ನ ಹಿರಿಯರು ಹೇಳುತ್ತಿದ್ದರು. ಒಬ್ಬ ವ್ಯಕ್ತಿ ಸಾಧಿಸಬಹುದಾದ ಪರಮೋನ್ನತ ಗುರಿಯಾದ ಮೋಕ್ಷವನ್ನು ಸಾಧಿಸುವಷ್ಟು ಮಹದಾಕಾಂಕ್ಷೆ ಆ ವ್ಯಕ್ತಿಗಿದ್ದರೆ ಆಗ ಅತ ಎಲ್ಲ ಲೌಕಿಕ ಆಸೆಗಳನ್ನು ತ್ಯಾಗ ಮಾಡಿ ಈ ಜಗತ್ತನ್ನು ಪರಿತ್ಯಜಿಸಬೇಕು. ಒಬ್ಬರು ಇಬ್ಬರು

ಮಾಲಿಕರಿಗೆ – ಜಗತ್ತು ಮತ್ತು ದೇವರು – ಸೇವೆ ಮಾಡುವುದು ಸಾಧ್ಯವಿಲ್ಲ. ಜೀವಿಸುವುದಕ್ಕೆ ಅರ್ಹವಾದ ಜೀವನವನ್ನು ಒಬ್ಬ ವ್ಯಕ್ತಿ ತಾನು ಹುಟ್ಟಿದ ಧರ್ಮಕ್ಕೆ ಅನುಗುಣವಾಗಿ ಬಾಳಿದರೆ, ಆಗ ಎಷ್ಟು ಬೇಗ ಜಗತ್ತನ್ನು ಬಿಟ್ಟರೆ ಅಷ್ಟೂ ಒಳ್ಳೆಯದು ಎಂದು ಇದರ ಅರ್ಥ ಎಂದು ನಾನು ತಿಳಿದುಕೊಂಡಿದ್ದೆ.

ಇದು ನನ್ನನ್ನು ಯೋಚನೆಗೀಡು ಮಾಡಿತು. ನನ್ನಷ್ಟಕ್ಕೆ ನಾನು ಕೇಳಿಕೊಂಡ ಪ್ರಶ್ನೆಯೆಂದರೆ: ಮನುಷ್ಯತ್ವದ ಶ್ರೇಷ್ಠತೆಯನ್ನು ಸಾಧಿಸುವ ಪ್ರಯತ್ನ ಮಾಡುವ ಮೊದಲು ಅಥವಾ ಸಾಧಿಸುವುದಕ್ಕೆ ಸಮರ್ಥನಾಗಲು ನಾನು ಈ ಜಗತ್ತನ್ನು ತ್ಯಜಿಸಬೇಕೆಂದು ನನ್ನ ಧರ್ಮ ಅಪೇಕ್ಷಿಸುತ್ತದೆಯೇ? ಭಗವದ್ಗೀತೆಯನ್ನು ಹಿಂದೂ ಧರ್ಮದ ಎಲ್ಲ ತತ್ತ್ವಗಳೂ, ತತ್ತ್ವಜ್ಞಾನವೂ ಅಡಕವಾಗಿರುವ ಪುಸ್ತಕವೆಂದು ಸಾರ್ವತ್ರಿಕವಾಗಿ ಒಪ್ಪಲಾಗಿರುವ ಪುಸ್ತಕ ಎಂದೂ ಸಹ ಹುಡುನಾಗಿದ್ದಾಗ ನನಗೆ ತಿಳಿಸಲಾಗಿತ್ತು. ನನ್ನ ಪ್ರಶ್ನೆಗೆ ಈ ಪುಸ್ತಕದಲ್ಲಿ ನನಗೆ ಉತ್ತರ ಸಿಗಬಹುದೆಂದು ನಾನೆಣಿಸಿದೆ; ಹೀಗೆ ಭಗವದ್ಗೀತೆಯ ನನ್ನ ಅಧ್ಯಯನ ಪ್ರಾರಂಭವಾಯಿತು. ಯಾವುದೇ ತತ್ತ್ವಜ್ಞಾನದ ಬಗ್ಗೆ ಯಾವ ವಿಚಾರಗಳನ್ನೂ ಹೊಂದಿಲ್ಲದ ಮನಸ್ಸಿನಿಂದ ನಾನು ಗೀತೆಯ ಅಧ್ಯಯನಕ್ಕೆ ತೊಡಗಿದೆ. ಹಾಗೂ ಗೀತೆಯಿಂದ ಯಾವುದೇ ಬೆಂಬಲ ಕೋರಬೇಕಾದ ಸ್ವಂತ ವಿಚಾರಸರಣಿಯೂ ನನ್ನಲ್ಲಿರಲಿಲ್ಲ.

ಕೆಲವು ವಿಚಾರಗಳಿಂದ ಮೊದಲೇ ತುಂಬಿದ್ದ ಮನಸ್ಸಿನ ಒಬ್ಬ ವ್ಯಕ್ತಿ ಪುಸ್ತಕವನ್ನು ಪೂರ್ವಾಗ್ರಹಭಾವನೆಯಿಂದ ಓದುತ್ತಾನೆ; ಉದಾಹರಣೆಗೆ ಕ್ರೈಸ್ತಧರ್ಮೀಯನೊಬ್ಬ ಗೀತೆಯನ್ನು ಓದಿದರೆ, ಗೀತೆಯಲ್ಲೇನಿದೆ ಎಂದು ತಿಳಿಯಲು ಅವನು ಅದನ್ನು ಓದುವುದಿಲ್ಲ, ಆದರೆ ಬೈಬಲ್‌ನಲ್ಲಿ ತಾನು ಈಗಾಗಲೇ ಕಂಡಿರುವ ತತ್ತ್ವಗಳು ಅದರಲ್ಲಿವೆಯೇ ಎಂದು ತಿಳಿಯಲು ಬಯಸುತ್ತಾನೆ ಮತ್ತು ಹಾಗಿದ್ದರೆ ಅವನು ದಿಢೀರನೆ ಗೀತೆಯನ್ನು ಬೈಬಲ್‌ನಿಂದ ನಕಲು ಮಾಡಲಾಗಿದೆ ಎಂಬ ತೀರ್ಮಾನಕ್ಕೆ ಬರುತ್ತಾನೆ. 'ಗೀತಾ-ರಹಸ್ಯ'ದಲ್ಲಿ ಈ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ನೀವು ಒಂದು ಪುಸ್ತಕವನ್ನು ಅದರಲ್ಲೂ ಗೀತೆಯಂತಹ ಶ್ರೇಷ್ಠಕೃತಿಯನ್ನು ಓದಿ, ಅರ್ಥ ಮಾಡಿಕೊಳ್ಳಲು ಬಯಸಿದರೆ, ನೀವು ಅದನ್ನು ಪೂರ್ವಾಗ್ರಹರಹಿತ ಮತ್ತು ಪೂರ್ವವಿಚಾರಗಳಿಂದ ತುಂಬಿರದ ಮನಸ್ಸಿನಿಂದ ಓದಲು ತೊಡಗಬೇಕು. ಇದನ್ನು ಮಾಡುವುದು ಅತ್ಯಂತ ಕಠಿಣವಾದ ವಿಷಯ ಎಂಬುದು ನನಗೆ ತಿಳಿದಿದೆ.

ಹೀಗೆ ಮಾಡುತ್ತೇವೆ ಎಂದು ಹೇಳಿಕೊಳ್ಳುವವರು ತಮ್ಮ ಮನಸ್ಸುಗಳಲ್ಲಿ ಅವಿತುಕೊಂಡಿರುವ ವಿಚಾರವನ್ನೋ ಪೂರ್ವಾಗ್ರಹ ಭಾವನೆಯನ್ನೋ ಹೊಂದಿರಬಹುದು ಇದರಿಂದ ಪುಸ್ತಕವನ್ನು ಓದುವಾಗ ಸ್ವಲ್ಪ ಮಟ್ಟಿಗೆ ಮನಸ್ಸು ಕಲುಷಿತವಾಗಬಹುದು. ಸತ್ಯವನ್ನು ಮುಟ್ಟಲು ಒಬ್ಬ ವ್ಯಕ್ತಿ ಬಯಸಿದರೆ ಎಂತಹ ಮನೋಭಾವನೆಯನ್ನು ಆತ ಹೊಂದಬೇಕು ಎಂಬುದನ್ನು ನಾನು ವಿವರಿಸುತ್ತಿದ್ದೇನೆ; ಅದು ಎಷ್ಟೇ ಕಷ್ಟವಾದರೂ ಅಂತಹ ಮನೋಭಾವನೆಯನ್ನು ಹೊಂದಲೇಬೇಕು. ಪರಿಗಣಿಸಬೇಕಾದ ಮತ್ತೊಂದು ವಿಷಯವೆಂದರೆ ಪುಸ್ತಕ ಬರೆದ ಕಾಲ ಮತ್ತು ಪರಿಸ್ಥಿತಿ ಹಾಗೂ ಪುಸ್ತಕ ಬರೆಯಲಾದ ಉದ್ದೇಶ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪುಸ್ತಕದ ಸನ್ನಿವೇಶದ ತಿಳಿವಳಿಕೆ ಇಲ್ಲದೆ

ಅದನ್ನು ಓದಬಾರದು. ಭಗವದ್ಗೀತೆಯಂತಹ ಪುಸ್ತಕಕ್ಕೆ ಈ ಮಾತು ಇನ್ನಷ್ಟು ನಿಜ.

ಪುಸ್ತಕದ ಬಗ್ಗೆ ಅನೇಕ ವ್ಯಾಖ್ಯಾನಕಾರರು ಅನೇಕ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಲೇಖಕ ಅಥವಾ ರಚನಾಕಾರ ಇಷ್ಟೆಲ್ಲ ವ್ಯಾಖ್ಯಾನಗಳಿಗೊಳಗಾಗುವಂತೆ ಪುಸ್ತಕವನ್ನು ಬರೆದಿರಲಿಕ್ಕಿಲ್ಲ ಅಥವಾ ರಚಿಸಿರಲಿಕ್ಕಿಲ್ಲ. ಅತ ಒಂದು ಅರ್ಥ, ಒಂದು ಉದ್ದೇಶವನ್ನು ಪುಸ್ತಕದುದ್ದಕ್ಕೂ ಹೊಂದಿರಬೇಕು ಹಾಗೂ ಅದನ್ನೇ ಕಂಡು ಹಿಡಿಯುವ ಪ್ರಯತ್ನ ನಾನು ಮಾಡಿದ್ದೇನೆ. ನಾನು ಇದರಲ್ಲಿ ಯಶಸ್ವಿಯಾಗಿದ್ದೇನೆ ಎಂದು ನಂಬಿದ್ದೇನೆ, ಏಕೆಂದರೆ ಸಾರ್ವತ್ರಿಕವಾಗಿ ಗೌರವಿಸಲಾಗುತ್ತಿರುವ ಪುಸ್ತಕದಿಂದ ಯಾವುದೇ ಬೆಂಬಲವನ್ನು ಕೋರಬೇಕಾದ ವಿಚಾರಸರಣಿಯನ್ನು ನಾನು ಹೊಂದಿಲ್ಲವಾದ್ದರಿಂದ ನನ್ನ ವಿಚಾರಸರಣಿಗೆ ಹೊಂದಿಕೊಳ್ಳುವಂತೆ ಪುಸ್ತಕದ ವಿಷಯವನ್ನು ತಿರುಚುವುದಕ್ಕೆ ನನಗೆ ಯಾವ ಕಾರಣವೂ ಇರಲಿಲ್ಲ. ತನಗೆ ಪ್ರಿಯವಾದ ತನ್ನದೇ ವಿಚಾರಸರಣಿಯನ್ನು ಮುಂದಿಡದೆ ಇದ್ದ ಹಾಗೂ ಭಗವದ್ಗೀತೆ ತನಗೆ ಬೆಂಬಲ ನೀಡಿದೆ ಎಂದು ತೋರಿಸುವ ಮೂಲಕ ಅದನ್ನು ಬೆಂಬಲಿಸದೆ ಇದ್ದ ಗೀತೆಯ ಒಬ್ಬ ವ್ಯಾಖ್ಯಾನಕಾರನೂ ಇಲ್ಲ.

ಕರ್ತೃ, ಜ್ಞಾನ ಅಥವಾ ಭಕ್ತಿಯಿಂದ ಭಗವಂತನೊಂದಿಗೆ ಸಂಯೋಗ ಸಾಧಿಸಿದ ನಂತರವೂ ಕರ್ಮ ಮಾಡಬೇಕೆಂದು ಗೀತೆ ಹೇಳುತ್ತದೆ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಸೃಷ್ಟಿಕರ್ತ ಜಗತ್ತಿಗೆ ಹಾಕಿಕೊಟ್ಟಿರುವ ವಿಕಾಸದ ಸರಿಯಾದ ಪಥದಲ್ಲಿ ಜಗತ್ತು ಹೋಗುವಂತೆ ಮಾಡಲು ಈ ಕರ್ಮ ಮಾಡಲೇಬೇಕು. ಈ ಕರ್ಮ ಕರ್ತೃವನ್ನು ಬಂಧಿಸದೆ ಇರುವುದಕ್ಕಾಗಿ, ಆ ಸೃಷ್ಟಿಕರ್ತನ ಉದ್ದೇಶಕ್ಕೆ ನೆರವಾಗುವ ಗುರಿಯಿಂದ ಹಾಗೂ ಮುಂದೆ ಆಗುವ ಫಲಕ್ಕೆ ಯಾವ ಆಸಕ್ತಿಯನ್ನೂ ತೋರಿಸದೆ ಅದನ್ನು ಮಾಡಬೇಕು. ಇದು ಗೀತೆಯ ಉಪದೇಶ ಎಂದು ನಾನು ತಿಳಿದಿದ್ದೇನೆ.

ಜ್ಞಾನಯೋಗ ಇದೆ, ಹೌದು. ಭಕ್ತಿಯೋಗ ಇದೆ, ಹೌದು. ಯಾರು ಇಲ್ಲ ಎಂದವರು? ಆದರೆ ಇವೆರಡೂ ಗೀತೆಯಲ್ಲಿ ಉಪದೇಶಿಸಿದ ಕರ್ಮಯೋಗಕ್ಕೆ ಅಧೀನವಾಗಿವೆ. ವಿಷಣ್ಣನಾದ ಅರ್ಜುನನನ್ನು ಯುದ್ಧಕ್ಕೆ – ಕರ್ಮಕ್ಕೆ – ಸಿದ್ಧವಾಗಲು ಗೀತೆ ಉಪದೇಶಿಸಿದ್ದೇ ಆದರೆ ಈ ಮಹಾನ್ ಕೃತಿಯು ಅಂತಿಮ ಪಾಠ ಭಕ್ತಿ ಅಥವಾ ಜ್ಞಾನ ಮಾತ್ರ ಎಂದು ಹೇಗೆ ಹೇಳುವುದು? ಹಾಗೆ ನೋಡಿದರೆ, ಗೀತೆಯಲ್ಲಿ ಈ ಎಲ್ಲ ಯೋಗಗಳ ಸಂಯೋಗವಿದೆ. ಗಾಳಿ ಕೇವಲ ಆಮ್ಲಜನಕವಲ್ಲ ಅಥವಾ ಜಲಜನಕವಲ್ಲ ಅಥವಾ ಇನ್ನಾವ ಒಂದೇ ಧಾತುವಲ್ಲ. ಆದರೆ ಇವೆಲ್ಲವುಗಳನ್ನೂ ಒಂದು ಪ್ರಮಾಣದಲ್ಲಿ ಪ್ರಮಾಣದಲ್ಲಿ ಬೆರೆಸಿದ ವಸ್ತುವಾಗಿದೆ. ಹಾಗೆಯೇ ಗೀತೆಯಲ್ಲಿ ಈ ಎಲ್ಲ ಯೋಗಗಳನ್ನೂ ಒಂದಾಗಿ ಸಂಯೋಜಿಸಲಾಗಿದೆ.

ಜ್ಞಾನ ಮತ್ತು ಭಕ್ತಿಯಲ್ಲಿ ಶ್ರೇಷ್ಠತೆಯನ್ನು ಗಳಿಸಿದ ನಂತರವೂ, ಇವುಗಳ ಮೂಲಕ ಭಗವಂತನನ್ನು ತಲುಪಿದ ನಂತರವೂ, ಕರ್ಮದಲ್ಲಿ ತೊಡಗುವಂತೆ ಗೀತೆ ಉಪದೇಶಿಸುತ್ತದೆ ಎಂದು ನಾನು ಹೇಳುವಾಗ ಹೆಚ್ಚುಕಡಿಮೆ ಎಲ್ಲ ವ್ಯಾಖ್ಯಾನಕಾರರು ಹೇಳಿದ್ದಕ್ಕಿಂತ ನನ್ನ ಮಾತು ಭಿನ್ನವಾಗಿದೆ. ಈಶ್ವರ, ಮನುಷ್ಯ ಮತ್ತು ಜಗತ್ತು ಇವುಗಳಿಗೆ ಆಧಾರವಾಗಿ ಒಂದು ಮೂಲಭೂತ ಏಕತೆ ಇದೆ. ಈಶ್ವರನ ಸಂಕಲ್ಪದಂತೆ ಜಗತ್ತು ಅಸ್ತಿತ್ವದಲ್ಲಿದೆ. ಅವನ ಸಂಕಲ್ಪದಿಂದ ಜಗತ್ತು ನಿಂತಿದೆ. ಮನುಷ್ಯ ದೇವರೊಂದಿಗೆ

ಸೇರಲು ಶ್ರಮಿಸುತ್ತಾನೆ; ಹಾಗೂ ಈ ಸಂಯೋಗ ಸಾಧನೆಯಾದಾಗ ಈ ಆತ್ಮ ಸರ್ವಶಕ್ತನಾದ ಪರಮಾತ್ಮನಲ್ಲಿ ವಿಲೀನಗೊಳ್ಳುತ್ತದೆ. ಇದನ್ನು ಸಾಧಿಸಿದ ನಂತರ ವ್ಯಕ್ತಿ ಹೀಗೆ ಹೇಳುತ್ತಾನೆಯೇ: 'ನಾನು ಯಾವ ಕರ್ಮವನ್ನೂ ಮಾಡುವುದಿಲ್ಲ ಹಾಗೂ ನಾನು ಜಗತ್ತಿಗೆ ಸಹಾಯ ಮಾಡುವುದಿಲ್ಲ' – ಅಸ್ತಿತ್ವದಲ್ಲಿರುವ ಜಗತ್ತಿಗೆ,ಏಕೆಂದರೆ ಯಾವ ಸಂಕಲ್ಪದೊಂದಿಗೆ ಸಂಯೋಗವನ್ನು ಅವನು ಕೋರಿದ್ದಾನೋ ಆ ಸಂಕಲ್ಪ ಹೀಗೆ ಅದನ್ನು ಸಂಕಲ್ಪಿಸಿದೆಯೆಂದೋ?' ಇದು ವಿವೇಚನೆಗೆ ಸಮ್ಮತವಾದದ್ದಲ್ಲ. ಹೀಗೆ ಹೇಳುವವನು ನಾನಲ್ಲ; ಗೀತೆ ಹೀಗೆ ಹೇಳುತ್ತದೆ.

ಮೂರು ಲೋಕಗಳಲ್ಲೂ ಅವನು ಪಡೆಯಬೇಕಾದ್ದು ಏನೂ ಇಲ್ಲವೆಂದು ಶ್ರೀ ಕೃಷ್ಣನೇ ಹೇಳುತ್ತಾನೆ, ಆದರೂ ಅವನು ಕರ್ಮ ಮಾಡುತ್ತಾನೆ. ಅವನು ಕರ್ಮ ಮಾಡುತ್ತಾನೆ, ಏಕೆಂದರೆ ಅವನು ಮಾಡದಿದ್ದರೆ ವಿಶ್ವ ನಾಶವಾಗುತ್ತದೆ. ಮನುಷ್ಯ ದೇವರೊಂದಿಗೆ ಸೇರಬೇಕೆಂದು ಇಚ್ಛಿಸಿದರೆ, ಅವನು ವಿಶ್ವದ ಆಸಕ್ತಿಗಳೊಂದಿಗೆ ವಿಲೀನತೆಯನ್ನು ಇಚ್ಛಿಸಬೇಕು ಹಾಗೂ ಅದಕ್ಕಾಗಿ ದುಡಿಯಬೇಕು. ಅವನು ಹೀಗೆ ಮಾಡದೆ ಹೋದರೆ, ವಿಲೀನ ಶ್ರೇಷ್ಠವಾಗುವುದಿಲ್ಲ, ಏಕೆಂದರೆ ವಿಲೀನ ಮೂರರ ಪೈಕಿ ಎರಡು ಧಾತುಗಳೊಂದಿಗೆ ಮಾತ್ರ ಆಗುತ್ತದೆ (ಮನುಷ್ಯ ಮತ್ತು ದೇವರು) ಹಾಗೂ ಮೂರನೆಯದು (ವಿಶ್ವ) ಉಳಿದು ಬಿಡುತ್ತದೆ. ಹೀಗೆ ನನ್ನ ಪ್ರಶ್ನೆಯನ್ನು ನಾನೇ ಬಗೆಹರಿಸಿದ್ದೇನೆ ಮತ್ತು ವಿಶ್ವಕ್ಕೆ ಸೇವೆ ಮಾಡುವ ಮೂಲಕ, ಹಾಗೂ ಅದರಿಂದ ಅವನ ಸೇವೆ ಮಾಡುವುದು ಮೋಕ್ಷ ಗಳಿಸಲು ಖಂಡಿತವಾದ ಮಾರ್ಗ; ಈ ಮಾರ್ಗವನ್ನು ವಿಶ್ವದಲ್ಲಿರುವುದರಿಂದ, ಅದನ್ನು ಬಿಟ್ಟು ಹೋಗುವುದರಿಂದಲ್ಲ, ಅನುಸರಿಸಬಹುದು."

(ಭಾಷಣವೊಂದರ ಸಾರಾಂಶ)

ಆಧುನಿಕ ಭಾರತದ ನಿರ್ಮಾಪಕರು

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ
ಭಾರತ ಸರ್ಕಾರ